Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ (B)
(ಇಲಾಖಾ ಗ್ರಂಥಾಲಯ)
ಪ್ರವಿಷ್ಟಿ ಕ್ರಮಾಂಕ Accession No. 4707
ದಿನಾಂಕ Date..............................

THE MYSORE LEGISLATIVE ASSEMBLY DEBATES

Official Report

Volume IV—Part II

(28th MAY TO 2nd JUNE 1951)

FOURTH SESSION

OF THE

FIRST LEGISLATIVE ASSEMBLY

1951

V-31'N51
N51-A-2
(S) 4707

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. (S) 4707
ದಿನಾಂಕ Date.................................

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1951

GOVERNMENT OF MYSORE.

Ministers

THE HON'BLE SRI K. CHENGALARAYA REDDY, B.A., B.L.
(Chief Minister)

THE HON'BLE SRI H. C. DASAPPA, B.A., LL.B.
(Minister for Finance and Industries)

THE HON'BLE SRI K. T. BHASHYAM, B.A., B.L.
(Minister for Law and Labour)

THE HON'BLE SRI H. SIDDAIYA, B.A., LL.B.
(Minister for Revenue and Excise)

THE HON'BLE SRI T. MARIAPPA, B.A., LL.B.
(Home Minister)

THE HON'BLE SRI R. CHENNIGARAMIAH
(Minister for Local Self-Government)

MYSORE LEGISLATIVE ASSEMBLY

OFFICERS

Speaker

THE HON'BLE SRI V. VENKATAPPA

Deputy Speaker

SRI L. H. THIMMA BOI

Secretary

SRI G. S. VENKATARAMANA IYER, B.SC., M.L.

MYSORE LEGISLATIVE ASSEMBLY

1. Panel of Chairmen.

Sri A. G. Bandi Gowda, B.A., B.L.
Sri M. N. Mahantadevaru, M.A., LL.B.
Sri Kadidal Manjappa, B.A., LL.B.
Sri M. C. Venkateshan.

2. House Committee.

The Deputy Speaker (Sri L. H. Thimma Boi)—*Chairman*.

Members—Elected.

Sri Mudduramiah.
Sri T. C. Honnappa.
Sri D. Gangya Naika.
Srimathi M. Ratnamma Isaac.

Members—Nominated.

Sri K. Subba Rao, B.A., LL.B.
Sri D. M. Siddiah, M.A.

3. Committee of Privileges.

The Speaker (The Hon'ble Sri V. Venkatappa)—*Chairman*

Members—Elected.

Sri K. Puttaswamy, B.A. (Hons.), LL.B.
Sri K. Sampangi Ramaiah, B.A., B.L.
Sri M. Madiah.
Sri B. Hutche Gowda.

Members—Nominated.

Sri A. G. Bandi Gowda, B.A., B.L.
Janab Mohamed Hanief, B.A., B.L.

4. Library Committee.

The Speaker (The Hon'ble Sri V. Venkatappa)—*Chairman.*

Members.

Sri M. N. Jois.

Janab Syed Abdur Rahman, B.A., LL.B.

Sri G. Veerappa, B.Sc., LL.B.

Sri H. K. Veeranna Gowdh.

Sri D. Govinda Das.

Sri K. R. Madhava Rao, B.A., LL.B.

5. Committee on Public Accounts.

The Hon'ble Sri H. C. Dasappa, B.A., LL.B. (Minister for Finance and Industries)—*Chairman.*

Members—Elected.

Rajamantrapravina H. B. Gundappa Gowda, B.A., B.L.*

Sri M. C. Venkateshan.

Sri G. A. Acharya.

Sri H. Siddaveerappa, B.A., LL.B.

Members—Nominated.

Sri V. M. Mascarenhas.

Sri D. M. Siddiah, M.A.

6. Estimates Committee.

The Hon'ble Sri H. C. Dasappa, B.A., LL.B. (Minister for Finance and Industries)—*Chairman.*

Members.

Sri L. Siddappa, B.A., LL.B.

Mushir-ul-Mulk J. Mohamed Imam, B.A., B.L.

Sri G. A. Acharya.

Sri S. Rangaramaiya, B.A., LL.B.

Sri B. C. Nanjundaiya.

Sri H. K. Veeranna Gowdh.

Sri T. Hanumiah.

Sri B. N. Boranna Gowda.

Sri M. Govinda Reddy, M.A., B.T., LL.B.

Sri Kadidal Manjappa, B.A., LL.B.

Sri K. H. Mudiyappa.

Sri G. Narayana Gowda, B.A.

---

* Ceased to be member from 19th May 1951.

THE MYSORE LEGISLATIVE ASSEMBLY.

SPEAKER

THE HON'BLE SRI V. VENKATAPPA.

Alphabetical List of Members.

Name of Member	*Constituency*
Acharya, Sri G. A. ...	Bangalore District—General.
Bandi Gowda, B.A., B.L., Sri A. G. ...	Mandya District—General.
Basappa, B.A., B.T., LL.B., Sri C. R. ...	Tumkur District—General.
Bhashyam, B.A., B.L., The Hon'ble Sri K. T.	Bangalore City—General (Minister for Law and Labour).
Bheemappa Naik, B.A., Sri A. ...	Chitaldrug District—General.
Boranna Gowda, Sri B. N. ...	Hassan District—General.
Chandrasekharaiya, B.A., LL.B., Sri D. H.	Chitaldrug District—General.
Channabasappa, B.Sc., Sri H. M. ...	Mysore District—General.
Channabyre Gowda, Sri B. ...	Bangalore District—General.
Chengalaraya Reddy, B.A., B.L., The Hon'ble Sri K.	Kolar District—General (Chief Minister).
Chennigaramiah, The Hon'ble Sri R....	Tumkur District—Depressed Class (Minister for Local Self-Government).
Dasappa, B.A., LL.B., The Hon'ble Sri H. C.	Mysore City—General (Minister for Finance and Industries).
Gangya Naik, Sri D. ...	Shimoga District—Depressed Class.
Govinda Das, Sri D. ...	Hassan District—Depressed Class.
Govinda Reddy, M.A., B.T., LL.B., Sri M.	Chitaldrug District—General.
Gundappa Gowda, B.A., B.L., *Rajamantrapravina* H. B. (*a*)	Hassan District—General.
Guru, B.A., Sri S. R. ...	Bangalore District—General.
Hanumiah, Sri T. ...	Chitaldrug District—Depressed Class.
Hanumanthaiya, *Lokasevaniratha* M....	Bangalore District—Depressed Class.
Hanumanthappa, Sri W. H. ...	Bangalore District—General.
Honnappa, Sri T. C. ...	Mysore District—General.
Huchamasti Gowda, B.A., Sri N. ...	Tumkur District—General.
Hutche Gowda, Sri B. ...	Tumkur District—General.
Huche Gowda, Sri M. ...	Chikmagalur District—General.
Jois, B.A., Sri M. N. ...	Mysore District—General.
Kariappa, B.A., Sri S. ...	Bangalore District—General.
Krishnappa, B.A., Sri M. V. ...	Kolar District—General.
Linga Devaru, Sri C. H. ...	Tumkur District—General.

(*a*) Ceased to be member from 19th May 1951.

Name of Member	*Constituency*
Linga Reddy, B.A., LL.B., Sri H. C. ...	Kolar District—General.
Madhava Rao, B.A., LL.B., Sri K. R. ...	Shimoga District—General.
Madiah, Sri M. ...	Mysore District—Depressed Class.
Madiah Gowda, B.A., LL.B., Sri T. ...	Bangalore District—General.
Mahanta Devaru, M.A., LL.B., Sri M. N.	Mysore District—General.
Mahmood Shariff, B.A., LL.B., Janab ...	Mysore *cum* Mandya *cum* Hassan—Muslim.
Mallikarjunappa, B.A., LL.B., Sri H. M. (b)	Chikmagalur District—General.
Manjappa, B.A., LL.B., Sri Kadidal ...	Shimoga District—General.
Mariappa, B.A., B.L., Sri Mali ...	Tumkur District—General.
Mariappa, B.A., LL.B., The Hon'ble Sri T.	Mysore City—General (Home Minister)
Mascarenhas, Sri V. M. ...	Bangalore Retroceded Area—General.
Mohamed Hanief, B.A., B.L., Janab ...	Bangalore—Muslim.
Mohamed Imam, B.A., B.L., *Mushir-ul-Mulk* J.	Chitaldrug *cum* Tumkur—Muslim.
Mohamed Valiulla, B.A., LL.B., Janab.	Kolar—Muslim.
Mudiyappa, Sri K. H. ...	Chikmagalur District—General.
Mudduramiah, Sri ...	Tumkur District—General.
Muniswamy, Sri M. ...	Kolar District—Depressed Class.
Nanjaraja Urs, B.A., LL.B., Sri M. L.	Mysore District—General.
Nanjundaiya, Sri B. C. ...	Tumkur District—General.
Narayana Gowda, B.A., Sri G. ...	Kolar District—General.
Narayana Rao, Sri V. S. (c) ...	Bangalore City—General.
Puttaswamy, B.A. (Hons.), LL.B., Sri K.	Mandya District—General.
Ramachandra Rao, B.A., LL.B., Sri A. G.	Hassan District—General
Ramachar, B.A., LL.B., Sri T. ...	Kolar District—General.
Rangaramiah, B.A., LL.B., Sri S. ...	Mysore District—General.
Ranga Rao, Sri S. ...	Chitaldrug District—General.
Ratnamma Isaac, Srimathi ...	Kolar District—General.
Sampangi Ramaiah, B.A., B.L., Sri K....	Kolar District—General.
Shamanna Gowda, Sri B. M. ...	Bangalore Retroceded Area—General.
Shankar Gowda, B.Sc., LL.B., Sri K. V.	Mandya District—General.
Siddaiah, M.A., Sri D. M. ...	Mysore District—General.
Siddaiya, B.A., LL.B., The Hon'ble Sri H.	Shimoga District—General (Minister for Revenue and Excise).
Siddalingiah, B.A., B.L., Sri T. ...	Bangalore District—General.
Siddananjappa, B.A., LL.B., Sri H. ...	Hassan District—General.
Siddappa, B.A., LL.B., Sri L. ...	Shimoga District—General.
Siddaveerappa, B.A., LL.B., Sri H. ...	Chitaldrug District—General.
Singari Gowda, B.A., LL.B., Sri K. ...	Mandya District—General.
Sivananda Sarma, Sri M. C. ...	Bangalore District—General.
Sooryanarayana Chetty, Sri S. C. ...	Hassan District—General.
Subba Rao, B.A., LL.B., Sri K. ...	Bangalore District—General.
Subbaraya Setty, Sri A. ...	Kolar District—General.
Subramanya, B.A., LL.B., Sri T. ...	Tumkur District—General.
Syed Abdur Rahman, B.A., LL.B., Janab.	Chikmagalur *cum* Shimoga—Muslim.
Thimma Boi, Sri L. H. ...	Chikmagalur District—Depressed Class. (Deputy Speaker).
Veeranna Gowdh, Sri H. K. ...	Mandya District—General.
Veerappa, B.Sc., LL.B., Sri G. ...	Chitaldrug District—General.
Venkateshan, Sri M. C. ...	Mandya District—Depressed Class.

(b) Ceased to be member from 23rd May 1951.
(c) Ceased to be member from 28th May 1951.

CONTENTS.

Vol. IV, Part 2—28th May 1951 to 2nd June 1951.

TWENTIETH DAY—MONDAY, 28TH MAY 1951. Pages

Starred Questions and Answers ... ... 1013—1034
Short Notice Questions and Answers ... ... 1034—1038
Adjournment Motion *re*
Alleged arrests of raiyats attempting to cultivate their lands in Kagodu and other villages, Sagar Taluk.—Disallowed ... 1038—1039
Leave of absence to Sri A. G. Bandi Gowda from the House.—Leave granted under Article 190 (4) of the Constitution of India ... 1040
The Mysore Legislative Assembly (Prevention of Disqualification) Bill, 1951.—Postponed for consideration on 30th May 1951 ... 1040
Presentation of the Report of the Special Committee on Rules of Procedure in the Legislative Assembly 1040
The Mysore District Boards (Amendment) Bill, 1951.—Introduced ... 1040
The Mysore Town Municipalities (Amendment) Bill, 1951.—Introduced 1040
The Mysore University (Amendment) Bill, 1951.—Select Committee Report presented 1040
The City of Bangalore Municipal Corporation (Amendment) Bill, 1951.—Select Committee Report presented 1040
The Mysore District Boards (Amendment) Bill, 1951.—Passed ... 1040—1041
The Mysore Town Municipalities (Amendment) Bill, 1951.—Passed as amended ... ... 1041—1043
The Mysore Village Panchayets and District Boards Bill, 1951.—Consideration deferred for the next day ... ... 1043—1044
The Mysore University (Amendment) Bill, 1951.—Passed as amended 1044
The City of Bangalore Municipal Corporation (Amendment) Bill, 1951.—Discussion on motion to consider not concluded ... 1045—1046

TWENTY-FIRST DAY—TUESDAY, 29TH MAY 1951.

Starred Questions and Answers ... ... 1047—1069
Short Notice Question and Answer ... ... 1069—1070
Unstarred Questions and Answers ... ... 1070—1074
The Mysore Civil Courts (Amendment) Bill, 1951.—Time for presentation of the Select Committee Report extended ... 1074
The Mysore Suits Valuation Bill, 1951.—Time for presentation of the Select Committee Report extended 1074
The City of Bangalore Municipal Corporation (Amendment) Bill, 1951.—Discussion on motion to consider further deferred to next day ... ... 1074—1075
The Mysore Village Panchayets and District Boards Bill, 1951.—Discussion on consideration of clauses not concluded ... 1075—1089

Pages

TWENTY-SECOND DAY—WEDNESDAY, 30TH MAY 1951

Starred Questions and Answers ... ... 1091—1114
Unstarred Questions and Answers ... ... 1114—1115
Statement laid on the Table *re*: Working of the Elementary Education Act, 1941, for 1950-51 1115
The Mysore Village Panchayets and District Boards Bill, 1951.—Consideration of clauses not concluded ... ... 1115—1149

TWENTY-THIRD DAY—THURSDAY, 31ST MAY 1951

Starred Questions and Answers ... ... 1151—1173
Unstarred Questions and Answers ... ... 1173—1176
Request for Food Debate during the Session 1176
Draft Rules of Procedure in the Legislative Assembly, as reported by the Special Committee.—Passed as amended ... 1176—1195
The Mysore Legislative Assembly (Prevention of Disqualification Bill, 1951.—Passed as reported by the Select Committee ... 1195—1202
The City of Bangalore Municipal Corporation (Amendment) Bill, 1951.—Passed, as amended ... ... 1202—1204
The Mysore Village Panchayets and District Boards Bill, 1951. Consideration of clauses of the Bill not concluded ... 1204—1284

TWENTY-FOURTH DAY—FRIDAY, 1ST JUNE 1951.

Starred Questions and Answers ... ... 1285—1238
Short Notice Questions and Answers ... ... 1238—1247
Unstarred Questions and Answers ... ... 1247—1241
Resolution(s).
No. 15. Improving the condition of Rural Primary Schools withdrawn ... 1248—1254
No. 16. Kannada to be the medium of instruction in the Primary and Middle Schools—Withdrawn ... 1254—1256
No. 17. Appointment of a committee to suggest measures for the speedy upliftment of the depressed classes—Withdrawn ... 1256—1266
No. 18. Kannada to be the medium of instruction in all High Schools.—Withdrawn ... ... 1266—1270

TWENTY-FIFTH—DAY—SATURDAY, 2ND JUNE 1951.

Starred Questions and Answers ... ... 1271—1291
Short Notice Questions and Answers ... ... 1291—1299
Unstarred Questions and Answers ... ... 1299—1310
The Mysore Village Panchayets and District Boards Bill, 1951.—All clauses considered, except Clause 55 which was held over ... 1389—1348
Prorogation of the Session 1349
Index ... ...

CORRIGENDA.

In the Legislative Assembly Debates, Budget Session— May–June 1951.

In pages Nos.—

1017 right half, line 23, omit 'ಇೀ'.
1024 left half, line 44, insert 'of' between 'restoration' and 'all'.
1038 left half, line 14, omit '.—' after 'ಶ್ರೀ ಸಿದ್ದಪ್ಪನವರು'.
1038 left half, line 53, omit 'in'.
1055 right half, line 13, insert 'ಶ್ರೀ' between 'ಪ್ರಶ್ನೆ 241.—' and 'ಎಣ'.
1072 right half, line 43, *for* 'S.C.V.L.' *read* 'S.C.V.D.'
1077 right half, line 30, *for* 'ಒಪ್ಪಿಸಿಕೊಳ್ಳಬಹುದೆಂದು' *read* 'ಒಪ್ಪಿಕೊಳ್ಳ ಬಹುದೆಂದು'.
1078 right half, line 31, *for* 'ಪ್ರಾಂತಳ' *read* 'ಪ್ರಾಂತ್ಯಗಳ'.
1086 left half, line 28, *for* 'ಗ್ರಮದ' *read* 'ಗ್ರಾಮದ'.
1088 left half, line 22, *for* 'If' *read* 'It'.
1097 left half, line 56, *for* 'want' *read* 'what'.
1117 left half, line 47, *for* 'ಅವಕಾತವಾಗುತ್ತೆ' *read* 'ಅವಕಾಶವಾಗುತ್ತೆ'.
1118 right half, lines 3, 21 and 32, *for* 'for' *read* 'in'.
1118 right half, lines 4, 22 and 33, insert the words 'after the second sentence' after 'substituted'.
1122 right half, lines 5 and 22, insert "and in sub-clause (6) the words 'or Vice Chairman" after the word 'absent'.
1122 right half, lines 17 and 18, *for* 'amendment' *read* 'amendments'.
1135 right half, line 10, insert 'to' between 'here' and 'control'.
1141 right half, lines 28, 37 and 44, omit 'to'.
1141 left half, lines 14 and 32, insert 'as' after 'No. 9'.
1144 right half, lines 27 and 51, omit 'supra'.
1145 left half, line 7, omit 'supra'.
1161 left half, line 8, delete 'permanent'.
1181 left half, line 22, *for* 'its' *read* 'it'.
1182 left half, line 19, add 'about' before 'prorogation'.
1206 left half, line 47, *for* 'for word inserting the' *read* 'for inserting the word'.
1212 right half, lines 51 and 52, delete 'by amendment'.
1216 right half, line 10, insert 'H' between 'Sri' and 'C'.
1228 left half, line 26, insert 'I.' before 'cannot'.
1242 left half, line 45, *for* 'with the question to' *read* 'the question with'.
1246 right half, line 14, *for* 'go' *read* 'to'.
1253 left half, line 31, *for* 'ರೀ ಅವಿಂಗ್' *read* 'ರಿಲೀವಿಂಗ್'.
1281 left half, line 28, *for* 'it is' *read* 'is it'.
1284 left half, last but one line, *for* 'ಯುರವಲಾಗಿ' *read* 'ಎರವಲಾಗಿ'.
1288 right half, line 61, *for* 'implementin' *read* 'implementing it'.
1291 left half, line 44, *for* 'competions' *read* 'competitions'.
1322 left half, line 26, *for* 'ರೀಲೆಯಲ್ಲೀ' *read* 'ರೀತಿಯಲ್ಲೀ'.
1346 left half, line 20, *for* 'ಹಂಬೆಯಾಗಿ' *read* 'ಹಾಬಿಯಾಗಿ'.

LEGISLATIVE ASSEMBLY.

TWENTIETH DAY.

Monday, 28th May 1951.

The adjourned session of the Legislative Assembly met in the Assembly Hall, Old Public Offices, Bangalore, at Five Minutes past One of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS

(to which oral answers were given)

Mr. SPEAKER (The Hon'ble Sri V. Venkatappa).–Questions. Part VIII. Question No. 64.

Procurement and Supply of Foodgrains to the Statutory Rationed Areas.

*ಪ್ರಶ್ನೆ 64.—ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಈ ವರ್ಷದಲ್ಲಿ, ಸಂಸ್ಥಾನದಲ್ಲಿ ಎಷ್ಟು ಪಲ್ಲಾಗಳಷ್ಟು ಆಹಾರಧಾನ್ಯಗಳನ್ನು ಸಂಗ್ರಹಿಸಲಾಗುವುದೆಂದು ಅಂದಾಜುಮಾಡಲಾಗಿದೆ ;

(b) ಸಂಸ್ಥಾನದಲ್ಲಿ ಕಾನೂನಿನ ಮೇರೆಗೆ ಪಡಿತರ ಪದ್ಧತಿಯನ್ನು (ಎಂದರೆ "ರೇಷನ್" ಪದ್ಧತಿಯನ್ನು) ಜಾರಿಗೆ ತಂದಿರುವ ಪ್ರದೇಶಗಳಿಗೆ ಸರಬರಾಯಿ ಮಾಡಬೇಕಾಗಿರುವ ಆಹಾರ ಧಾನ್ಯಗಳ ಪರಿಮಾಣವೆಷ್ಟು ?

ಉತ್ತರ :—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) 13,55,000 ಪಲ್ಲಾಗಳು.

(b) 13,50,000 ಪಲ್ಲಾಗಳು.

ಸೂಚನೆ :—(1) ನಮೂದಿಸಿರುವ ಪರಿಮಾಣಗಳು ಕೇವಲ ಅಂದಾಜುಗಳು.

(2) ಬತ್ತವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುವುದೇ ಹೊರತು ಅಕ್ಕಿಯನ್ನಲ್ಲ. ಹಾಗಿದ್ದಾಗ್ಯೂ (a) ಭಾಗಕ್ಕೆ ಕೊಟ್ಟಿರುವ ಉತ್ತರದ ಸಂಬಂಧದಲ್ಲಿ ಪರಿಮಾಣವನ್ನು ಅಂದಾಜುಮಾಡುವಾಗ ಬತ್ತಕ್ಕೆ ಸರಿಸಮನಾದ ಅಕ್ಕಿಯನ್ನೇ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಶ್ರೀ ಜಿ. ನಾರಾಯಣಗೌಡರು.—(a) ಪ್ರಶ್ನೆಗೆ ಉತ್ತರವಾಗಿ 13,55,000 ಪಲ್ಲ ನಮ್ಮ ದೇಶದಲ್ಲಿ ಧಾನ್ಯಸಂಗ್ರಹಣ ಮಾಡುವ ಅಂದಾಜು ಮಾಡಿದ್ದೇವೆಂದು ಹೇಳಿದ್ದೀರಿ. ಈಗ ನಿಖರವಾಗಿ ಎಷ್ಟಾಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ 16 ಲಕ್ಷ ಚಿಲ್ಲರೆ ಪಲ್ಲ ಬತ್ತ ಆಗಿದೆ. ರಾಗಿ ಮತ್ತು ಜೋಳ ಎರಡೂ ಸೇರಿ 3 ಲಕ್ಷ ಚಿಲ್ಲರೆ ಪಲ್ಲ ಆಗಿದೆ.

ಶ್ರೀ ಜಿ. ನಾರಾಯಣಗೌಡರು.—ಧಾನ್ಯ ಸಂಗ್ರಹಣ ಮಾಡುವುದು ಎಚ್. ಎಸ್. ಲೆಕ್ಕದ ಪ್ರಕಾರ ತಾನೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಜಿ. ನಾರಾಯಣಗೌಡರು.—ಈಗ ತಾವು ಕೊಟ್ಟಿರುವ ಅಂದಾಜಿನ ಅಂಕಿಗಳಲ್ಲಿ ಬೇಸಿಗೆ ಬತ್ತ ಬೆಳೆದಿರುವುದೂ ಸೇರಿಕೊಂಡಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಜಿ. ನಾರಾಯಣಗೌಡರು.—ಹಾಗಾದರೆ ಕೆಲವುಕಡೆ ಬೇಸಿಗೆ ಬತ್ತ ಬೆಳೆದಿರುವುದೆಲ್ಲವನ್ನೂ ಸರ್ಕಾರಕ್ಕೆ ಕೊಡಬೇಕೆಂದು ಅಧಿಕಾರಿಗಳು ಒತ್ತಾಯ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಅವರಿಗೆ ಬೇಕಾಗುವಷ್ಟು ಬಿಟ್ಟು ಬಿಟ್ಟು ಎಚ್. ಎಸ್. ಫಾರಂ ಪ್ರಕಾರ ಬಾಕಿ ವಸೂಲು ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು.—ರೈತರು ಕಟಾವು ಮಾಡಬೇಕಾದರೆ ಲೈಸೆನ್ಸ್ ಪಡೆದು ಕಟಾವು ಮಾಡಬೇಕೆಂದು ರೈತರಿಗೆ ತಿಳಿವಳಿಕೆ ಮೂಲಕ ತಿಳಿಸಿರುವುದು ಗೊತ್ತೆ ?

Mr. SPEAKER.—That supplementary does not arise.

ಶ್ರೀ ಜಿ. ನಾರಾಯಣಗೌಡರು.—(b) ಪ್ರಶ್ನೆಗೆ ಉತ್ತರವಾಗಿ 13,50,000 ಪಲ್ಲ ಸ್ಟ್ಯಾಟ್ಯುಟರಿ ರೇಷನ್ ಪ್ರದೇಶಕ್ಕೆ ಸರಬರಾಯಿ ಮಾಡಬೇಕೆಂದು ಹೇಳಿದ್ದೀರಿ. ಯಾವ್ಯಾವ ಸ್ಟ್ಯಾಟ್ಯುಟರಿ ರೇಷನ್ ಪ್ರದೇಶಕ್ಕೆ ಎಷ್ಟೆಷ್ಟು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—

ಬೆಂಗಳೂರು ಸಿಟಿ ಮತ್ತು ಸಿವಿಲ್ ಪ್ರದೇಶಕ್ಕೆ.

ಅಕ್ಕಿ ...	... 4 ಲಕ್ಷ 20 ಸಾವಿರ ಪಲ್ಲ
ಗೋಧಿ ...	... 3 ಲಕ್ಷ ಪಲ್ಲ
ಮಿಲೆಟ್ಸ್	... 1 ಲಕ್ಷ 80 ಸಾವಿರ ಪಲ್ಲ
ಒಟ್ಟು	... 9 ಲಕ್ಷ ಪಲ್ಲ

ಮೈಸೂರು ಸಿಟಿಗೆ.

ಅಕ್ಕಿ ...	... 1 ಲಕ್ಷ 20 ಸಾವಿರ ಪಲ್ಲ.
ಮಿಲೆಟ್ಸ್	... 60 ಸಾವಿರ ಪಲ್ಲ

ಕೆ. ಜಿ. ಎಫ್‌ಗೆ.

ಅಕ್ಕಿ ...	... 48 ಸಾವಿರ ಪಲ್ಲ
ಗೋಧಿ ...	... 48 ಸಾವಿರ ಪಲ್ಲ
ಮಿಲೆಟ್ಸ್	... 1 ಲಕ್ಷ 44 ಸಾವಿರ ಪಲ್ಲ

ದಾವಣಗೆರೆಗೆ.

ಅಕ್ಕಿ ...	...	24 ಸಾವಿರ ಪಲ್ಲ
ಗೋಧಿ ...	...	18 ಸಾವಿರ ಪಲ್ಲ
ಮಿಲೆಟ್ಸ್	...	24 ಸಾವಿರ ಪಲ್ಲ
ಒಟ್ಟು	...	66 ಸಾವಿರ ಪಲ್ಲ

ಈ ರೀತಿ ಒಟ್ಟು ಮೈಸೂರು ದೇಶದ ಸ್ಟ್ಯಾಟ್ಯುಟರಿ ಪ್ರದೇಶಕ್ಕೆ 13 ಲಕ್ಷ 50 ಸಾವಿರ ಪಲ್ಲ ಆಗುತ್ತದೆ.

ಶ್ರೀ ಜಿ. ನಾರಾಯಣಗೌಡರು.—ಸ್ಟ್ಯಾಟ್ಯುಟರಿ ರೇಷನ್ ಪ್ರದೇಶದಲ್ಲಿರುವ ಜನಸಂಖ್ಯೆ ಎಷ್ಟು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 12 ಲಕ್ಷ.

ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು (ಮೈಸೂರು ಜಿಲ್ಲೆ).—ಸ್ಟ್ಯಾಟ್ಯುಟರಿ ರೇಷನ್ ಪ್ರದೇಶಕ್ಕೆ ಸರಬರಾಯಿ ಮಾಡಬೇಕೆಂದು ಅಂದಾಜು ಮಾಡಿರುವುದು 13 ಲಕ್ಷ 50 ಸಾವಿರ ಪಲ್ಲ ಎಂದು ತಿಳಿಸಿದ್ದೀರಿ. ಈಗ ಶೇಖರಣೆ ಮಾಡಿರುವುದು ತಾವು ಹೇಳಿದ್ದರ ಪ್ರಕಾರ 16 ಲಕ್ಷ ಚಿಲ್ಲರೆ ಪಲ್ಲ ಬತ್ತ ರಾಗಿ ಮತ್ತು ಜೋಳ 3 ಲಕ್ಷ ಪಲ್ಲ. ಎಂದಮೇಲೆ ಹೆಚ್ಚು ದವಸ ಉಳಿಯುತ್ತದೆ ತಾನೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—16ಲಕ್ಷ ಪಲ್ಲ ಬತ್ತ ಎಂದರೆ ಅಕ್ಕಿ ಅದರಲ್ಲಿ ಅರ್ಧಭಾಗದಷ್ಟು ಆಗುತ್ತದೆ. The quantities expressed are mere estimates. Rice equivalent of paddy has been included. ಆದ್ದರಿಂದ ಅಕ್ಕಿ ಮತ್ತು ರಾಗಿ ಜೋಳ ಸೇರಿ 8+3=11 ಲಕ್ಷಪಲ್ಲ ಆಗುತ್ತದೆ.

ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು.—ಹಾಗಾದರೆ ರಾಗಿ ಡಬ್ಬಲ್ ಮಾಡಬೇಕಾಗುತ್ತದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಆಗುವುದಿಲ್ಲ. ಅದು ಅನಾವಶ್ಯಕ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ನಿಗದಿಮಾಡಿರುವ ಪ್ರಮಾಣಕ್ಕಿಂತ ಹೆಚ್ಚಾಗಿ ಶೇಖರಣೆ ಮಾಡಿರುವ ಡಿಸ್ಟ್ರಿಕ್ಟ್‌ಗಳು ಯಾವುವು; ಕಡಿಮೆಯಾಗಿ ಶೇಖರಣೆ ಮಾಡಿರುವ ಡಿಸ್ಟ್ರಿಕ್ಟ್‌ಗಳು ಯಾವುವು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಟಾರ್ಜೆಟ್ ನಿಗದಿ ಮಾಡಿರುವುದನ್ನು ಯಾವ ಡಿಸ್ಟ್ರಿಕ್ಟ್‌ನವರೂ ಮುಟ್ಟಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಶಿವಮೊಗ್ಗ ಜಿಲ್ಲೆಯಲ್ಲಿ ಹೋದವರ್ಷ ಟಾರ್ಜೆಟ್ ನಿಗದಿಮಾಡಿದ್ದ ಪ್ರಕಾರ ಎಷ್ಟು ಪಲ್ಲ ಬತ್ತ ಬಂದಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೋದ ವರ್ಷದ್ದು I do not exactly remember. I want notice.

ಶ್ರೀ ಎ. ಭೀಮಪ್ಪನಾಯಕರು.—ಶಿವಮೊಗ್ಗಾ ಜಿಲ್ಲೆಯಲ್ಲಿ ಈ ವರ್ಷ ಎಷ್ಟು ಪ್ರೊಕ್ಯೂರ್‌ಮೆಂಟ್ ಆಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದುವರೆಗೂ 6 ಲಕ್ಷ ಚಿಲ್ಲರೆ ಪಲ್ಲ ಪ್ರೊಕ್ಯೂರ್‌ಮೆಂಟ್ ಆಗಿದೆ.

Sri A. BHEEMAPPA NAIK.—Is that the maximum procured so far ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು 7 ಲಕ್ಷ ಪಲ್ಲ ಟಾರ್ಜೆಟ್ ನಿಗದಿ ಮಾಡಿದ್ದೆವು. ಈಗ 6 ಲಕ್ಷ 5 ಸಾವಿರ ಪಲ್ಲದವರೆಗೂ ಬಂದಿದೆ.

Sri A. BHEEMAPPA NAIK.—If the target is reached in other areas, then the quantity procured will be sufficient for us, is that so ?

The Hon'ble Sri T. MARIAPPA.—It is not at all sufficient. Still we have to depend upon the allotment by the Centre.

Sri A. BHEEMAPPA NAIK.—To what extent; is it 10 per cent, 20 per cent or what ?

The Hon'ble Sri T. MARIAPPA.—We have requested the Centre to give us 15,41,000 pallas, which is our deficit on the existing scale of rations.

Sri A. BHEEMAPPA NAIK.—What percentage will that be to the procurement that we need to be self-sufficient ?

The Hon'ble Sri T. MARIAPPA.—We procured 13,55,000 pallas. We have asked the Centre to give us 15,41,000 pallas. Our requirement will be about 27 or 28 lakhs of pallas on the existing scale of rations.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ಪಂಗಡ).—ಈ ಸಾರಿ ಬತ್ತದ ಎಚ್. ಎಸ್. ಅಂದಾಜನ್ನು ಹಿಂದಿನ ವರ್ಷಗಳಿಗಿಂತ ಹೆಚ್ಚು ಮಾಡಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ; ಎಲ್ಲಿ ಚೆನ್ನಾಗಿ ಬೆಳೆಯಾಗಿದೆಯೋ ಅಲ್ಲಿ ಹೆಚ್ಚು ಮಾಡಿದ್ದಾರೆ. ಎಲ್ಲಿ ಕಡಿಮೆ ಬೆಳೆಯಾಗಿದೆಯೋ ಅಲ್ಲಿ ಕಡಮೆ ಮಾಡಿದ್ದಾರೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈಗ ನಮ್ಮ ದೇಶದಲ್ಲಿ ಅಂದಾಜು ಮಾಡಿದ್ದಷ್ಟು ವಸೂಲಾಗಿರುವುದರಿಂದ ವಸೂಲು ಮಾಡುವುದನ್ನು ನಿಲ್ಲಿಸಬಹುದಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಷ್ಟು ವಸೂಲಾಗಬೇಕೋ ಅಷ್ಟು ಇನ್ನೂ ಪೂರ್ತಿಯಾಗಿ ವಸೂಲಾಗಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—1,355,000 ಪಲ್ಲ ಅಂದಾಜಾಗಿರುವುದರಲ್ಲಿ 1,350,000 ಪಲ್ಲ ವಸೂಲಾಗಿದೆಯೆಂದು ತಿಳಿಸಲಾಗಿದೆ.........

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ, ಐದು ಪಟ್ಟಣಗಳಿಗೆ ಎಷ್ಟು ಬೇಕಾಗುತ್ತದೆಂದು ಕೇಳಿದ್ದರು. ಅದಕ್ಕೆ ಅಷ್ಟು ಬೇಕಾಗುತ್ತದೆಂದು ತಿಳಿಸಿದೆ. ಇನ್ನೂ ನಮ್ಮ ಅಂದಾಜಿನಷ್ಟು ವಸೂಲಾಗಿಲ್ಲವೆಂದು ಶ್ರೀ ಭೀಮಪ್ಪನಾಯಕರ ಪ್ರಶ್ನೆಗೆ ಉತ್ತರ ಹೇಳಿದ್ದೇನೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ನಮ್ಮ ಜಿಲ್ಲೆಯಲ್ಲಿ ಇನ್ನೂ ಒಂದೂವರೆ ಲಕ್ಷ ಪಲ್ಲ ಬರಬೇಕೆಂದು ಹೇಳಿ ರೈತರಿಗೆ ತೊಂದರೆ ಕೊಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಜಿಲ್ಲೆಯಲ್ಲಿ ಕಡಿಮೆಯಾಗಿಯೇ ಅಂದಾಜುಮಾಡಿದೆ; ಅದೇ ಕಾರಣ ಅಲ್ಲಿ ತೊಂದರೆಗೆ ಅವಕಾಶವೇ ಇಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ತರೀಕೆರೆ ತಾಲ್ಲೂಕಿನಲ್ಲಿ 12 ಸಾವಿರ ಪಲ್ಲ ವಸೂಲಾಗಬೇಕೆಂದು ಮಾಡಿದೆ, ಅಷ್ಟನ್ನೂ ಈಗಾಗಲೇ ವಸೂಲು ಮಾಡಿರುವುದು ಸರ್ಕಾರದವರಿಗೆ ಗೊತ್ತಿದೆಯೆ ?

The Hon'ble Sri T. MARIAPPA.—This question does not arise. After all these are details of particular Taluk. It is not possible to carry the figure of every taluk with me.

Sri M. GOVINDA REDDY (Chitaldrug District—General).—How does the procurement figure of the current year compare with that of the last year?

The Hon'ble Sri T. MARIAPPA.—So far as paddy is concerned, on this date last year we procured less than what we have procured this year. So far as ragi and jola are concerned, we are unfortunately behind by about 30,000 pallas than what we had procured last year.

Sri M. GOVINDA REDDY.—On the whole, have we fallen short of last year's procurement?

The Hon'ble Sri T. MARIAPPA.—It is due to seasonal conditions. Paddy procurement began late this year. Still we are proceeding with procurement and we hope to exceed last year's figures because this year's seasonal conditions are much better than last year. Last year our target was only 17 lakhs, while for the current year our target is 18 lakhs.

Short term and Long term Irrigation Projects connected with Grow More Food Scheme.

* ಪ್ರಶ್ನೆ 236.—ಶ್ರೀ ಎಡ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ.)

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಆಹಾರ ಸರಬರಾಯಿಯ ಸಂಬಂಧದಲ್ಲಿ ಮೈಸೂರು ಸಂಸ್ಥಾನವು ಸ್ವಪರಿಪೂರ್ಣತೆಯುಳ್ಳದ್ದಾಗಬೇಕಾಗಿದ್ದರೆ, ಆಹಾರ ಧಾನ್ಯಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯುವ ಯೋಜನೆಯು, ಇನ್ನೂ ಎಷ್ಟು ವರ್ಷಗಳ ಕಾಲ ಸಂಸ್ಥಾನದಲ್ಲಿ ಜಾರಿಯಲ್ಲಿರಬೇಕಾಗಿದೆ ?

(b) ಈ ಅವಧಿಯಲ್ಲಿ ಕೈಕೊಳ್ಳಬೇಕಾಗಿರುವ ನೀರಾವರಿ ಕಾಮಗಾರಿಗಳ ಯೋಜನೆಗಳ ಪಟ್ಟಿಯೊಂದನ್ನು ತಯಾರಿಸಲಾಗಿದೆಯೆ ;

(c) ಪ್ರತಿವರ್ಷದಲ್ಲಿಯೂ, ಕೈಕೊಳ್ಳಬೇಕೆಂದು ನಿರ್ಧರಿಸಿರುವ, ಅಲ್ಪಾವಧಿಕಾಲದ ಮತ್ತು ದೀರ್ಘಾವಧಿ ಕಾಲದ ಯೋಜನೆಗಳಾವುವು ;

(d) ಈ ಯೋಜನೆಯ ಪ್ರಕಾರ, ಇಲ್ಲಿಯವರೆಗೂ ಆ ಕಾಮಗಾರಿಗಳ ಕೆಲಸಗಳು ವರ್ಷಂಪ್ರತಿ ನಡೆಯುತ್ತಿವೆಯೆ ;

(e) ವಿಧಾಯಕವಾಗಿರುವ ಅವಧಿಯೊಳಗಾಗಿ ಈ ಯೋಜನೆಗಳ ಕೆಲಸಗಳು ಪೂರೈಸುವುದಕ್ಕಾಗಿ, ಅವಶ್ಯವಾದ ಸಿಬ್ಬಂದಿಯನ್ನು ಒದಗಿಸಲಾಗಿದೆಯೆ ;

(f) ಆಹಾರಧಾನ್ಯಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯುವ ಯೋಜನೆಯ ಮೇರೆಗೆ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕೈಕೊಂಡಿರುವ ನೀರಾವರಿ ಕಾಮಗಾರಿಗಳು ಎಂದರೆ ...

(i) ದೊಡ್ಡ ಕೆರೆಗಳು, (ii) ನದಿಗಳ ನಾಲಾ ಬಷಾವಣೆ, (iii) ಮೈನರ್ ಕೆರೆಗಳ ಜೀರ್ಣೋದ್ಧಾರ, (iv) ಈಡುಕಟ್ಟೆ ಕೋಡಿಗಳು "ಪಿಕ್ ಅಪ್" ಕೋಡಿಗಳು ಮತ್ತು ನಾಲೆಗಳು, ಯಾವುವು ;

(g) ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕೈಕೊಂಡಿರುವ ಈ ಕಾಮಗಾರಿಗಳು ಎಷ್ಟರಮಟ್ಟಿಗೆ ನಡೆದುಕೊಂಡು ಬಂದಿವೆ; ಮತ್ತು ಹೊಸದಾಗಿ ಎಷ್ಟು ಕೆರೆಗಳ ಜಮೀನು ಸಾಗುವಳಿಯಾಗಿದೆ ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—

(a) ಈಗ ನಿರೀಕ್ಷಿಸಿರುವ ಪ್ರಕಾರ ಮೂರು ವರ್ಷಗಳವರೆಗೆ (1949-50ನೆಯ ಸಾಲಿನಿಂದ 1-4-1952ರ ವರೆಗೆ)

(b) ತಯಾರಿಸಲಾಗಿದೆ.

(c) ದೀರ್ಘಾವಧಿಕಾಲದ ಎಲ್ಲ ಯೋಜನೆಗಳನ್ನೂ ಐದು ವರ್ಷಗಳ ಮತ್ತು ಹದಿನೈದು ವರ್ಷಗಳ ಯೋಜನೆಯ ಮೇರೆಗೆ ಗುಂಪುಮಾಡಿಸಿ ಏರ್ಪಡಿಸಲಾಗಿದೆ. ಈಗ ಹದಿನೈದು ವರ್ಷಗಳ ಯೋಜನೆಯಲ್ಲಿ ಸೇರಿಸಲ್ಪಟ್ಟಿರುವ ಈ ಕೆಳಗೆ ನಮೂದಿಸಿರತಕ್ಕ ಮೂರು ಪ್ರಾಜೆಕ್ಟುಗಳ ಸಂಬಂಧದಲ್ಲಿ ಕೆಲಸ ನಡೆಯುತ್ತಿದೆ. ಆದರೆ, ಹಣಕಾಸಿನ ಬಿಕ್ಕಟ್ಟಿನಿಂದ ಕೆಲಸವು ಸ್ವಲ್ಪ ನಿಧಾನವಾಗಿ ಸಾಗುತ್ತಿದೆ. ಆ ಮೂರು ಕಾಮಗಾರಿಗಳು ಯಾವುವೆಂದರೆ —

(1) ಸಕ್ರೆಬೈಲಿನ ಹತ್ತಿರ ತುಂಗಾ ನದಿಗೆ ಅಣೆಕಟ್ಟನ್ನು ಕಟ್ಟುವುದು.

(2) ಲಕ್ಕವಳ್ಳಿ ಬಳಿಯಲ್ಲಿ ಭದ್ರಾನದಿಗೆ ಅಣೆಯನ್ನು ಕಟ್ಟಿಸಿ ಜಲಾಶಯವನ್ನು ಏರ್ಪಡಿಸುವುದು.

(3) ಬೀರವಾಳು ಸಮೀಪದಲ್ಲಿ ನುಗು ನದಿಗೆ ಅಣೆಯನ್ನು ಕಟ್ಟಿಸಿ ಜಲಾಶಯವನ್ನು ಏರ್ಪಡಿಸುವುದು.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ಕಂಡ ಕೆರೆಗಳಿಗೆ ಸಂಬಂಧಪಟ್ಟ ಪ್ರಾಜೆಕ್ಟುಗಳು ಐದು ವರ್ಷದ ಯೋಜನೆಯ ಪ್ರಕಾರ ಪೂರ್ತಿಮಾಡಲ್ಪಡುವ ನಿರೀಕ್ಷೆಯಿದೆ. ಅವು ಯಾವುವೆಂದರೆ.—

1 ಸಂಗನಹಳ್ಳಿ ಕೆರೆ
2 ಪರಶುರಾಮಪುರ ಕೆರೆ
3 ತುಪ್ಪದಹಳ್ಳಿ ಕೆರೆ
4 ಗಡಿಮಾಕುಂಟೆ ಕೆರೆ
5 ಮುತ್ತುಗದೂರು ಕೆರೆ

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

ಈ ಕೆಳಗೆ ಕಂಡ ಕಾಮಗಾರಿಗಳನ್ನು ಅಲ್ಪಾವಧಿ ಯೋಜನೆಯ ಮೇರೆಗೆ ಕೈಕೊಳ್ಳಲಾಗಿದೆ.—

ಅವು ಯಾವುವೆಂದರೆ.—

(i) ಮೈನರ್ ಕೆರೆಗಳ ಜೀರ್ಣೋದ್ಧಾರ
(ii) ಕೆರೆಗಳಲ್ಲಿ ಹೂಳು ತೆಗೆಯುವುದು
(iii) ನದೀ ನಾಲೆಗಳನ್ನೂ ಕೆರೆ ನಾಲೆಗಳನ್ನೂ ಮತ್ತು ಕಟ್ಟು ಕಾಲುವೆಗಳನ್ನೂ (ಎಂದರೆ "ಫೀಡರ್" ಕಾಲುವೆಗಳನ್ನೂ) ಉತ್ತಮಗೊಳಿಸುವುದು.
(iv) ಜಮೀನು ಆಬಾದಿಗೆ ಸಂಬಂಧಪಟ್ಟ ಯೋಜನೆಗಳು
(v) "ಲಿಫ್ಟ್" ನೀರಾವರಿ ಯೋಜನೆಗಳು.

(d) ಮೇಲೆ (c) ಕ್ಲಾಜಿನಲ್ಲಿ ನಮೂದಾಗಿರತಕ್ಕ ಕಾಮಗಾರಿಗಳು, ಬೇರೆ ಬೇರೆ ಹಂತಗಳಲ್ಲಿ ಮುಂದುವರಿಯುತ್ತಿವೆ.

(e) ಹೌದು ; ಒದಗಿಸಲಾಗಿದೆ

(f) ಸಭೆಯ ಮುಂದೆ ಇಟ್ಟಿರತಕ್ಕ ತಖ್ತೆಗಳನ್ನು ದಯೆಯಿಟ್ಟು ನೋಡಿ

(g) ದೊಡ್ಡ ಕೆರೆಗಳು.—

ಇರಕಸಂದ್ರ	...	200 ಎಕರೆಗಳು.
ಹೊನ್ನಮಾಚನಹಳ್ಳಿ		435 ,,

ಮಾರ್ಕೋನಹಳ್ಳಿ ಜಲಾಶಯದಿಂದ ಬಲದಡದ ನಾಲೆಯನ್ನು ("ರೈಟ್ ಬ್ಯಾಂಕ್ ಚಾನಲ್") ಏರ್ಪಡಿಸುವುದು. ಈ ಕೆಲಸವು ಇನ್ನೂ ನಡೆಯುತ್ತಿದೆ, 5ನೆಯ ಮೈಲಿಯಲ್ಲಿ ಈ ನಾಲೆಯನ್ನು ತೋಡುವುದಕ್ಕೆ ಸಂಬಂಧಪಟ್ಟ ಕೆಲಸವು ಈಗ ನಡೆಯುತ್ತಿದೆ.

ಮೈನರ್ ಕೆರೆಗಳ ಜೀರ್ಣೋದ್ಧಾರ.—

ಈ ಸಾಲಿನಲ್ಲಿ ಎಪ್ಪತ್ತೆರಡು ಕಾಮಗಾರಿಗಳನ್ನು ಕೈಕೊಳ್ಳಲು ನಿರ್ಧರಿಸಲಾಗಿದೆ, ಇವುಗಳ ಪೈಕಿ, ಐದು ಕಾಮಗಾರಿಗಳು ಪೂರ್ತಿಯಾಗಿವೆ ಮತ್ತು ಐದು ಕಾಮಗಾರಿಗಳು ಪೂರ್ತಿಯಾಗುವುದರಲ್ಲಿವೆ. ಇದರಿಂದ ನೀರಾವರಿ ಪ್ರಯೋಜನವನ್ನು ಪಡೆದ ಹಳೆಯ ಅಚ್ಚುಕಟ್ಟಿನ ವಿಸ್ತೀರ್ಣ 210 ಎಕರೆಗಳು ಮತ್ತು 25 ಗುಂಟೆಗಳು. ನಾನಾ ಹಂತಗಳಲ್ಲಿ ನಲವತ್ತು ಕೆರೆಗಳಿಗೆ ಸಂಬಂಧಪಟ್ಟ ಕಾಮಗಾರಿಗಳು ಮುಂದುವರಿಯುತ್ತಿವೆ.

ನದಿಗಳ ನಾಲೆಗಳು.—

ಈ ಸಾಲಿನಲ್ಲಿ ಮೂರು ಕಾಮಗಾರಿಗಳನ್ನು ಕೈಕೊಳ್ಳಲು ನಿಶ್ಚಯಿಸಲಾಗಿದೆ ; ಅವುಗಳ ಪೈಕಿ ಒಂದನ್ನು ತೆಗೆದುಕೊಳ್ಳಲಾಗಿದೆ.

ಕೆರೆ ನಾಲೆಗಳು.—

ಇಪ್ಪತ್ತೊಂಬತ್ತು ಕಾಮಗಾರಿಗಳನ್ನು ಕೈಕೊಳ್ಳಲು ನಿರ್ಧರಿಸಲಾಗಿದೆ ; ಅವುಗಳ ಪೈಕಿ ಒಂದು ಕಾಮಗಾರಿಯು ಪೂರ್ತಿಯಾಗಿದೆ ಮತ್ತು ಎರಡು ಕಾಮಗಾರಿಗಳು ಪೂರ್ತಿಯಾಗುವುದರಲ್ಲಿವೆ. ಇದರಿಂದ ನೀರಾವರಿ ಪ್ರಯೋಜನವನ್ನು ಪಡೆದ ಅಚ್ಚುಕಟ್ಟು 40 ಎಕರೆಗಳು. ಉಳಿದ ಕಾಮಗಾರಿಗಳು ಮುಂದುವರಿಯುತ್ತಿವೆ.

ಕಟ್ಟುಕಾಲುವೆಗಳು ("ಫೀಡರ್" ಕಾಲುವೆಗಳು).—

ಇಪ್ಪತ್ತಮೂರು ಕಾಮಗಾರಿಗಳನ್ನು ಕೈಕೊಳ್ಳಲು ನಿಶ್ಚಯಿಸಲಾಗಿದೆ. ಹದಿನೆಂಟು ಕಾಮಗಾರಿಗಳ ಸಂಬಂಧದಲ್ಲಿ ಸರ್ವೇ ಕೆಲಸ ನಡೆದಿದೆ ಮತ್ತು ಪ್ರಾಜೆಕ್ಟುಗಳನ್ನು ತಯಾರಿಸಬೇಕಾಗಿದೆ. ಮೂರು ಕಾಮಗಾರಿಗಳು ಮುಂದುವರಿಯುತ್ತಿವೆ.

ಜಮೀನುಗಳ ಆಬಾದು ಯೋಜನೆಗಳು.—

ಹದಿಮೂರು ಕಾಮಗಾರಿಗಳನ್ನು ಕೈಕೊಳ್ಳಲು ನಿರ್ಧರಿಸಲಾಗಿದೆ. ಈ ಎಲ್ಲ ಕಾಮಗಾರಿಗಳ ಸಂಬಂಧದಲ್ಲಿಯೂ ಅಂದಾಜುಗಳು ತಯಾರಾಗುತ್ತಿದೆ.

ಶ್ರೀ ಎಚ್. ಹುಚ್ಚುಮಾಸ್ತಿಗೌಡರು.—ಪ್ರಶ್ನೆಯ (ಬಿ) ಭಾಗಕ್ಕೆ ಉತ್ತರವಾಗಿ ಒಂದು ಪಟ್ಟಿಯನ್ನು ತಯಾರು ಮಾಡಿದೆಯೆಂದು ತಿಳಿಸಲಾಗಿದೆ ; ಆ ಪಟ್ಟಿಯನ್ನು ಈ ಸಭೆಯ ಅವಗಾಹನೆಗೆ ಇಡುವುದಕ್ಕಾಗುತ್ತದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗುತ್ತದೆ ; ಅಗತ್ಯವಾಗಿ ಇಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅಲ್ಪಕಾಲಾವಧಿ ಮತ್ತು ದೀರ್ಘಕಾಲಾವಧಿ ಯೋಜನೆಗಳನ್ನು ಡಿಸ್ಟ್ರಿಕ್ಟ್‌ವಾರು ತಯಾರಿಸಿದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—(ಸಿ) ಪ್ರಶ್ನೆಗೆ ಉತ್ತರವಾಗಿ ಐದು ಮತ್ತು ಹದಿನೈದು ವರ್ಷಗಳ ದೀರ್ಘಕಾಲಾವಧಿಯ ಯೋಜನೆಗಳ ಪಟ್ಟಿಯನ್ನು ಕೊಡೋಣವಾಗಿದೆ. (ಎ) ಪ್ರಶ್ನೆಗೆ ಉತ್ತರವಾಗಿ ಮೂರು ವರ್ಷಗಳಲ್ಲಿ ಮೈಸೂರು ದೇಶ ಸ್ವಪರಿಪೂರ್ಣವಾಗುತ್ತದೆಂದು ಹೇಳಿದ ಮೇಲೆ, ಹಾಗಾಗಬೇಕಾದರೆ ಅಲ್ಪಕಾಲಾವಧಿ ಯೋಜನೆಗಳನ್ನು ಪೂರ್ಣ ಮಾಡುವುದರಿಂದ ಸಾಧ್ಯವಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಅಲ್ಪಕಾಲಾವಧಿ ಯೋಜನೆಗಳಿಂದ ಫಲ ಬೇಗಬರುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅಲ್ಪಕಾಲಾವಧಿ ಕಾಮಗಾರಿಗಳನ್ನು ಐದು ಭಾಗಗಳಾಗಿ ವಿಂಗಡಿಸಿ ಕೈಗೊಳ್ಳಲಾಗುವುದೆಂದು ತಿಳಿಸಿದೆ. ಇವು ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಭಾಗದಲ್ಲಿವೆ ಎಂಬ ಬಗ್ಗೆ ವಿವರಗಳಿವೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇವೆ, ಬೇಕಾದರೆ ಆ ಪಟ್ಟಿಯನ್ನು ಕೊಡುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಮೂರು ವರ್ಷದ ಯೋಜನೆಯಲ್ಲಿ ಅಲ್ಪಕಾಲಾವಧಿ ಕಾಮಗಾರಿಗಳಲ್ಲಿ ಯಾವ ಯಾವ ವರ್ಷ ಯಾವ ಯಾವುದನ್ನು ತೆಗೆದುಕೊಳ್ಳುತ್ತೀರೆಂದು ನಾನು ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ, ಐದು ಭಾಗವಾಗಿ ವಿಂಗಡಿಸಿ ಸ್ಥೂಲವಾಗಿ ತಿಳಿಸಲಾಗಿದೆ. ಈ ಬಗ್ಗೆ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಧ್ಯ. ನೋಟೀಸ್ ಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ತುಮಕೂರು ಜಿಲ್ಲೆಯಲ್ಲಿ ಇರಕಸಂದ್ರ ಮತ್ತು ಹೊನ್ನಮಾಚನಹಳ್ಳಿ ಎಂಬ ಎರಡು ದೊಡ್ಡಕೆರೆಗಳನ್ನು ತೆಗೆದು ಕೊಳ್ಳಲಾಗಿದೆಯೆಂದು ತಿಳಿಸಿದೆ, ಇವು ಬಹಳ ಹಿಂದೆಯೇ ಕೈಕೊಂಡ ಕಾಮಗಾರಿಗಳಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಹೆಚ್ಚು ಬೆಳೆ ಬೆಳೆಯುವಯೋಜನೆಯ ಸಂಬಂಧವಾಗಿ ಗ್ರಾಂಟು ಬರಲೆಂದು ನಾವು ಇಂಡಿಯಾ ಸರ್ಕಾರಕ್ಕೆ ತಿಳಿಸಿದೆವು. ಮೊದಲೇ ಪ್ರಾರಂಭ ಮಾಡಿರುವ ಕಾಮಗಾರಿಗಳನ್ನು ನಿಲ್ಲಿಸಿ ಬಿಡುವುದು ಕಷ್ಟವಾದ್ದರಿಂದ ನೀವು ಗ್ರಾಂಟು ಕೊಟ್ಟರೆ ಅವುಗಳನ್ನು ಜಾಗ್ರತೆ

ಮುಗಿಸಿಬಿಡುತ್ತೇವೆಂದು ಹೇಳಿ ಈ ಕೆಲಸಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಇದರ ಮೇಲೆ ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ಬೇರೆ ಕಾಮಗಾರಿಗಳನ್ನು ತೆಗೆದು ಕೊಂಡಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು. ತಾವುಕೇಳಿರುವ ಪ್ರತಿಯೊಂದು ಪ್ರಶ್ನೆಗೂ ತಕ್ಕಉತ್ತರ ಕೊಟ್ಟಿದೆ. ಐದುವರ್ಷ ಮತ್ತು ಹದಿನೈದು ವರ್ಷದ ಯೋಜನೆಗೂ ಹೆಚ್ಚುಬೆಳೆ ಬೆಳೆಯುವ ಯೋಜನೆಗೂ ಸಂಬಂಧವನ್ನು ಕಲ್ಪಿಸಬೇಡಿ. ಹೆಚ್ಚುಬೆಳೆ ಬೆಳೆಯುವ ಯೋಜನೆಯ ಸಂಬಂಧವಾಗಿರುವುದೆಲ್ಲವೂ, 18 ದೊಡ್ಡ ಕೆರೆಗಳು ವಿನಾ, ಅಲ್ಪಕಾಲಾವಧಿ ಕಾಮಗಾರಿಗಳು. They are in various stages of completion.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಐದು ವರ್ಷ ಮತ್ತು 15 ವರ್ಷ ಕಾಲಾವಧಿಯ ದೀರ್ಘಕಾಲಾವಧಿ ಕಾಮಗಾರಿಗಳು ಹೆಚ್ಚು ಬೆಳೆಬೆಳೆಯುವ ಯೋಜನೆಯಲ್ಲಿ ಸೇರುವುದಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊನ್ನೆತಾನೆ ಮೈಸೂರು ಡೆಲಿಗೇಷನ್ ದೆಹಲಿಗೆಹೋಗಿದ್ದುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಹೆಚ್ಚುಬೆಳೆ ಬೆಳೆಯುವ ಯೋಜನೆ 1952ನೆಯ, ಮಾರ್ಚಿಗೆ ಸಂಪೂರ್ಣವಾಗುತ್ತದೆ. It may get merged in the five year programme. ದೆಹಲಿಗೆ ಹೋದವಿಚಾರದಲ್ಲಿ ಇನ್ನೂ ಮಾತುಕತೆಗಳು ಅಖೈರಾಗಿ ಮುಗಿದಿಲ್ಲ. ಐದುವರ್ಷದ ಯೋಜನೆಯನ್ನು ಹೊಸದಾಗಿ ತಯಾರಿಸಿದೆವು. ಅಷ್ಟೆ ಐದು ವರ್ಷ ಮತ್ತು ಹದಿನೈದುವರ್ಷದ ಯೋಜನೆಗಳನ್ನು ಪರಿಶೀಲನೆ ಮಾಡಿದೆವು. ಆದರೆ ಅವರು ಐದುವರ್ಷದ ಯೋಜನೆಯಲ್ಲಿ ಎರಡು ಮತ್ತು ಮೂರು ವರ್ಷದ ಯೋಜನೆಗಳನ್ನು ಮಾತ್ರ ಅಂಗೀಕರಿಸಿದ್ದಾರೆ. ಸಂಗನಹಳ್ಳಿ, ಪರಶುರಾಮಪುರ, ತುಪ್ಪದಹಳ್ಳಿ, ಗಡಿಪಾಕುಂಟೆ ಮತ್ತು ಮುತ್ತಗದೂರು ಕೆರೆಗಳು ಹೆಚ್ಚುಬೆಳೆ ಬೆಳೆಯುವ ಯೋಜನೆಯಲ್ಲಿ ಸೇರಿಲ್ಲ. 1955ನೆಯ ವರ್ಷದಲ್ಲಿ ಇವು ಒಂದು ಸ್ಟೇಜಿನಲ್ಲಿ ನಿಲ್ಲುತ್ತವೆ. ಆದಕಾರಣ ಐದುವರ್ಷದ ಯೋಜನೆಯಲ್ಲಿ ಇವನ್ನು ಸೇರಿಸಿದೆವು. ಆದುದರಿಂದ ಹೆಚ್ಚು ಬೆಳೆ ಬೆಳೆಯುವ ಯೋಜನೆಗೂ ಇವಕ್ಕೂ ಸಂಬಂಧವಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಜಿಲ್ಲಾವಾರು ಇಂತಿಂಥಾ ಕೆಲಸ ತೆಗೆದುಕೊಳ್ಳಬೇಕು, ಇಷ್ಟು ಕೆಲಸ ನಡೆಯಬೇಕೆಂದು ಗೊತ್ತು ಮಾಡಿ ಅದಕ್ಕೆ ತಕ್ಕಂತೆ ಸಿಬ್ಬಂದಿ ಒದಗಿಸಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗಾಗಲೇ ಅಂದಾಜಾಗಿ ಮಂಜೂರಾಗಿರುವ ಕಾಮಗಾರಿಗಳೆಷ್ಟಿವೆಯೋ ಅವಕ್ಕೆ ತಕ್ಕಂತೆ ಸಿಬ್ಬಂದಿಯನ್ನು ಒದಗಿಸಲಾಗಿದೆ. ವಿಶೇಷ ಸಬ್ ಡಿವಿಜನ್‌ಗಳನ್ನು ಕೂಡ ಒದಗಿಸಲಾಗಿದೆ, ಕ್ರಮೇಣ ಟೆಕ್ನಿಕಲ್ ಸಿಬ್ಬಂದಿ ಸಿಕ್ಕಿದ ಹಾಗೆ ಹೆಚ್ಚಿಸುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಾಗಾದರೆ ಎಲ್ಲೆಲ್ಲಿ ಕಡಿಮೆ ಸಿಬ್ಬಂದಿಯಿದೆಯೋ ಅಲ್ಲಿ ಹೆಚ್ಚು ಕೆಲಸಗಳನ್ನು ತೆಗೆದುಕೊಂಡಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಪ್ರೋಗ್ರಾಂ ಹಾಕಿಕೊಂಡು ಅದರ ಪ್ರಕಾರ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆ. ಮೊದಲೇ ಸಿಬ್ಬಂದಿಯನ್ನು ಕೊಟ್ಟರೆ ವ್ಯರ್ಥವಾಗುತ್ತದೆ. ಆದುದರಿಂದ ಕಾಮಗಾರಿ ಮಂಜೂರಾಗಿ ಸರ್ಕಾರಿ ಆಜ್ಞೆ ಆಗುವಾಗ ಸಿಬ್ಬಂದಿಯನ್ನೊದಗಿಸುತ್ತೇವೆ. By the time the project is actually taken up for execution, the staff will be ready.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ತುಮಕೂರಲ್ಲದೆ ಬೇರೆ ಜಿಲ್ಲೆಗಳಲ್ಲಿ ಹೆಚ್ಚು ಸಿಬ್ಬಂದಿ ಒದಗಿಸಿ, ಹೆಚ್ಚು ಯೋಜನೆಗಳನ್ನು ತಯಾರಿಸಿ ಕೆಲಸಗಳನ್ನು ತಗೆದು ಕೊಂಡಿರುವುದು, ತುಮಕೂರಿನಲ್ಲಿ ಕಡಿಮೆ ಮಾಡಿರುವುದು, ಈ ವ್ಯತ್ಯಾಸಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಕಡೆಯೂ ಹೆಚ್ಚು ಸಿಬ್ಬಂಧಿಯನ್ನೊದಗಿಸಿ ಆ ಮೇಲೆ ಯೋಜನೆಯನ್ನು ತಯಾರಿಸುವುದಿಲ್ಲ. ಎಲ್ಲಿಗೇ ಆಗಲಿ ಸುಮ್ಮನೆ ಹೆಚ್ಚು ಸಿಬ್ಬಂದಿಯನ್ನು ಕೊಡಬೇಕೆಂಬ ಉದ್ದೇಶವಿಲ್ಲ. ಮೊದಲೇ ಒಂದೊಂದು ತಾಲ್ಲೂಕಿಗೂ ಒಬ್ಬೊಬ್ಬರು ಅಸಿಸ್ಟೆಂಟ್ ಇಂಜಿನಿಯರಿರುವುದರಿಂದ ಹೆಚ್ಚು ಸಿಬ್ಬಂದಿ ಕೊಡುವ ಪ್ರಮೇಯವಿಲ್ಲ ಮತ್ತು ಹಾಗೆ ಕೊಟ್ಟಿಲ್ಲ.

ಶ್ರೀ ಎಚ್. ಹುಚ್ಚ ಮಾಸ್ತಿಗೌಡರು.—ತುಮಕೂರು ಜಿಲ್ಲೆಯಲ್ಲಿ 72 ಮೈನರ್ ಕೆರೆಗಳ ಜೀರ್ಣೋದ್ಧಾರದ ಕಾಮಗಾರಿಯಲ್ಲದೆ ರಿವರ್ ಚಾನಲ್ಸ್ ಮತ್ತು ಫೀಡರ್ ಚಾನಲ್ಸ್ ಕಾಮಗಾರಿಗಳನ್ನೂ ತೆಗೆದುಕೊಳ್ಳುವುದಾಗಿ ತಿಳಿಸಲಾಗಿದೆ. ಈ ಕೆಲಸಗಳನ್ನೆಲ್ಲಾ ತೆಗೆದುಕೊಂಡರೆ ಈಗಿರುವ ಸಿಬ್ಬಂದಿ ಸಾಕಾಗುತ್ತದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ಆ ಕಾಮಗಾರಿಗಳನ್ನೆಲ್ಲಾ ತೆಗೆದುಕೊಂಡರೆ ಸಿಬ್ಬಂದಿಯನ್ನು ಹೆಚ್ಚು ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಬೇರೆ ಜಿಲ್ಲೆಗಳಿಗಿಂತ ತುಮಕೂರು ಜಿಲ್ಲೆಗೆ priority ಕೊಡುವ ಅಗತ್ಯವಿಲ್ಲವೆಂದು ಸರ್ಕಾರದವರ ಅಭಿಪ್ರಾಯವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ. ಇಂಡಿಯಾ ಸರ್ಕಾರದವರೂ ಒಂದು ಭಾಗ ಹಣವನ್ನು ಕೊಡುತ್ತಾರೆ. ಎಲ್ಲೆಲ್ಲಿ ನೀರು ಸುಲಭವಾಗಿ ಒದಗುತ್ತದೆಯೋ ಅಲ್ಲಿ ಮೊದಲು ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದಾರೆ. ಮೈಸೂರು, ಮಂಡ್ಯ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಾತ್ರ concentrate ಮಾಡಬೇಕೆಂದು ಅವರು ಹೇಳಿದರು. ಆದರೂ ನಾವು ಬೇರೆ ಕಡೆ ಮೈನರ್ ಕೆರೆಗಳ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದೆವು.

ಶ್ರೀ ಎಚ್. ಹುಚ್ಚ ಮಾಸ್ತಿಗೌಡರು.—ಮಾರ್ಕೋನಹಳ್ಳಿಗೆ ಸಂಬಂಧಪಟ್ಟ ಕೆಲಸಗಳನ್ನು ತೆಗೆದುಕೊಂಡು ಬೇಗ ಮಾಡಿ ಮುಗಿಸುವುದಕ್ಕೆ ಸಾಧ್ಯವಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಆಲೋಚನೆ ಮಾಡಬೇಕಾದ ವಿಷಯ. ಈಗಾಗಲೇ ಅದಕ್ಕೆ ಸಿಬ್ಬಂದಿಯನ್ನು ಕಳುಹಿಸಿರಬೇಕೆಂದು ಕಾಣುತ್ತದೆ. ನಾಲೆಯ ಕೆಲಸ ತೀವ್ರವಾಗಿ ನಡೆಯುತ್ತಿದೆ.

ಶ್ರೀ ಎಚ್. ಹುಚ್ಚ ಮಾಸ್ತಿಗೌಡರು.—ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಯೋಜನೆಯಲ್ಲಿದ್ದರೂ ಕೂಡ ಹಾಸನ ಮತ್ತು ತುಮಕೂರು ಈ ಎರಡು ಡಿವಿಜನ್ನುಗಳನ್ನೂ ಒಬ್ಬರೇ ಎಗ್ಸಿಕ್ಯುಟಿವ್ ಇಂಜಿನಿಯರು ನೋಡಿಕೊಳ್ಳುವ ಹಾಗೆ ಏರ್ಪಾಡು ಮಾಡಲು ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಹಂಗಾಮಿ ಏರ್ಪಾಡು. ಒಬ್ಬರು ಅವರ ಮನೆಯಲ್ಲಿ ಮದುವೆಯೆಂದು ರಜಾ ತೆಗೆದುಕೊಂಡರು, ಅದಕ್ಕಾಗಿ ಹಾಗೆ ಮಾಡಿದ್ದೇವೆ, ಅಷ್ಟೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸಿಬ್ಬಂದಿ ವಿಚಾರವಾಗಿ ಹೇಳುತ್ತಾ, ಎಗ್ಸಿಕ್ಯುಟಿವ್ ಎಂಜಿನಿಯರನ್ನು ಹಂಗಾಮಿಯಾಗಿ ಹಾಕಿದೆಯೆಂದು ಹೇಳಿದಿರಿ! ಇವರನ್ನು ಅಲ್ಲಿಗೆ ನೇಮಿಸಿ ಎಷ್ಟು ತಿಂಗಳಾಯಿತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಿಂಗಳಲ್ಲ, ಎಷ್ಟು ದಿವಸವೆಂದು ಕೇಳಿ.

ಶ್ರೀ ಬಿ. ಹುಚ್ಚೇಗೌಡರು.—ಅವರನ್ನು ಕಳುಹಿಸಿ 2½ ತಿಂಗಳಾಗಲಿಲ್ಲವೇ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ಪ್ರಾಯಶಃ ಒಂದು ತಿಂಗಳ ಮೇಲೆ 2–3 ದಿವಸವಾಗಿರ ಬಹುದು.

ಶ್ರೀ ಬಿ. ಹುಚ್ಚೇಗೌಡರು.—ಆದರೂ ಇದರಿಂದ ಕೆಲಸ ಎಷ್ಟು dislocation ಆಗಿದೆಯೆಂಬುದು ತಮಗೆ ಗೊತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಆ ಇಂಜಿನಿಯರ ಮನೆಯಲ್ಲಿ ಮದುವೆಯಾದ್ದರಿಂದ ರಜಾ ಹೋಗ ಬೇಕಾಯಿತು. ಇನೊಬ್ಬರನ್ನು ಖಾಯಮ್ಮಾಗಿ ಅಲ್ಲಿಗೆ ನೇಮಿಸಬೇಕೆಂದರೆ ತಡವಾಗುತ್ತದೆಂದು ತಿಳಿದು ಈ ಇಂಜಿನಿಯರನ್ನೇ ಹಂಗಾಮಿಯಾಗಿ ನೋಡಿಕೊಳ್ಳಿ ಎಂದು ಹೇಳಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಸಂಸ್ಥಾನದಲ್ಲಿ 32 ಜನ ಎಗ್ಸಿಕ್ಯುಟಿವ್ ಇಂಜಿನಿಯರುಗಳು ಇದ್ದಾರೆ, ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಒಂದು ಡಿಸ್ಟ್ರಿಕ್ಟಿಗೆ ಒಬ್ಬ ಎಗ್ಸಿಕ್ಯೂಟಿವ್ ಇಂಜಿನಿಯರೇ ಸಾಲದೆಂದು ಹೇಳಿ ಇನ್ನೊಬ್ಬರನ್ನು ಕಳುಹಿಸಿಕೊಡಬೇಕೆಂದು ಕೇಳುತ್ತಿರು ವಾಗ, ಹೀಗೆ ನೀವು ಎರಡು ಡಿಸ್ಟ್ರಿಕ್ಟಿಗೆ ಒಬ್ಬರನ್ನು ಹಾಕುವುದು ಸರಿಯೇ?

The Hon'ble Sri T. MARIAPPA.—If the works necessitate, we are going to have not only two Engineers but four Engineers. In fact in Shimoga, Mandya and Mysore, there are two Engineers. We wanted to expedite work but the question was when transfers were effected, the man who was transferred took leave on account of marriage in his house. We cannot refuse leave to any particular individual.

ಶ್ರೀ ಬಿ. ಹುಚ್ಚೇಗೌಡರು.—ಬೇರೆ ಯಾರೂ ಎಗ್ಸಿಕ್ಯೂಟಿವ್ ಇಂಜಿನಿಯರು ಇರಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದ್ದಾರೆ, ಸದ್ಯದಲ್ಲೇ ಅವರೇ ಹೋಗಿ ಛಾರ್ಜ್ ತೆಗೆದುಕೊಳ್ಳು ತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಒಬ್ಬ ಎಗ್ಸಿಕ್ಯೂಟಿವ್ ಇಂಜಿನಿಯರು ಇಬ್ಬರು ಸೂಪರಿಂಟೆಂಡಿಂಗ್ ಇಂಜಿನಿಯರ ಕೈಕೆಳಗೆ ಕೆಲಸ ಮಾಡುವುದಕ್ಕೆ ಸಾಧ್ಯವೇ? ಈ ರೀತಿ ಏರ್ಪಾಡು ಮಾಡಿದರೆ ಕೆಲಸ ಸುಸೂತ್ರವಾಗಿ ನಡೆಯುತ್ತದೆಯೇ? ಕೆಲಸವನ್ನು dislocate ಮಾಡ ಬೇಕೆಂದೇನಾದರೂ ನಿಮ್ಮ ಅಭಿಪ್ರಾಯವೇ?

The Hon'ble Sri T. MARIAPPA.—I repudiate the insinuation made by the Hon'ble Member. It is only a temporary arrangement because one Executive Engineer went on leave on account of marriage in his house. There is no idea to dislocate work at all. There is a Superintending Engineer stationed at Tumkur.

Sri M. GOVINDA REDDY (Chitaldrug District—General).—With reference to the answer to (*a*), may I know on what basis the Government have arrived at the figure "three years"?

The Hon'ble Sri T. MARIAPPA.—Not on any basis. The Government of India wanted a three-year plan to be drawn up for stepping up food production. Therefore we drew up a plan for three years. The target date when we should be self-sufficient as far as possible is by the end of 1951. We planned for 82·5 lakhs of population but it is 90 lakhs to-day.

Sri M. GOVINDA REDDY.—May I know whether the acreage that would be brought under cultivation by the completion or part completion of these projects is one of the bases for arriving at this figure?

The Hon'ble Sri T. MARIAPPA.—I have already given copies of the three-year plan even at the last session. Therefore it is not merely the new land that is going to be brought under intensive cultivation, but assuring water supply to the existing area, restoration of minor tanks and varied other factors are involved. Our idea is that we would reach very near self-sufficiency in our plan and wipe off deficiency. If you will kindly see, Mysore is still deficient.

Sri M. GOVINDA REDDY.—May I know whether the Hon'ble Minister is sure of getting increased production of food grains this year over the previous year?

The Hon'ble Sri T. MARIAPPA.—I am pretty certain. We can have increased production. But it is a different matter whether we are going to have increased procurement.

Sri M. GOVINDA REDDY.—Would that make up the deficiency so as to reach self-sufficiency ?

The Hon'ble Sri T. MARIAPPA.—It is going to make up the deficiency to some extent. But the population also has overstepped the limit.

Sri M. GOVINDA REDDY.—May I know whether the Government have calculated the cost of restoration of minor tanks ?

The Hon'ble Sri T. MARIAPPA.—Yes. We are on an average spending Rs. 5,000 per minor tank.

Sri M. GOVINDA REDDY.—Is the acreage that would be brought under cultivation after the restoration of minor tanks taken into consideration ?

The Hon'ble Sri T. MARIAPPA.—Yes, we have taken into consideration the acreage that is going to be irrigated after restoration. Many a time without rains, the minor tanks do not receive sufficient water supply.

Sri M. GOVINDA REDDY.—May I know the acreage that would be brought under cultivation if those tanks are restored ?

The Hon'ble Sri T. MARIAPPA.—I want notice.

Mr. SPEAKER.—Next question. Sri B. Hutche Gowda.

Restoration of tanks in Turuvekere Taluk.

*ಪ್ರಶ್ನೆ 55.—ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ತುರುವೇಕೆರೆ ತಾಲ್ಲೂಕಿನಲ್ಲಿರತಕ್ಕ ಕೆರೆಗಳ ಮೇಜರ್ ಮತ್ತು (ಮೈನರ್ ಕೆರೆಗಳ)ಮತ್ತು ಅವುಗಳ ಅಚ್ಚುಕಟ್ಟು ಪ್ರದೇಶದ ಪಟ್ಟಿಯನ್ನು ಒದಗಿಸಬೇಕೆಂದು ಪ್ರಾರ್ಥನೆ,

(b) ಈ ತಾಲ್ಲೂಕಿನಲ್ಲಿ, ಮಂಜೂರ್ಮಾಡಲಾಗಿರತಕ್ಕ ಕೆರೆಗಳ ಮತ್ತು ಅವುಗಳ ಪೈಕಿ ಕಾಮಗಾರಿ ನಡೆಯುತ್ತಿರುವ ಕೆರೆಗಳ ಪಟ್ಟಿಯನ್ನು ಒದಗಿಸಬೇಕೆಂದು ಪ್ರಾರ್ಥನೆ.

(c) ಈಗ ಜೀರ್ಣೋದ್ಧಾರವಾಗದೇ ಉಳಿದಿರತಕ್ಕ ಕೆರೆಗಳ ಪಟ್ಟಿಯನ್ನು ಒದಗಿಸಬೇಕೆಂದು ಪ್ರಾರ್ಥನೆ.

(d) ಈ ಕೆರೆಗಳನ್ನು ಶೀಘ್ರದಲ್ಲಿಯೇ ಜೀರ್ಣೋದ್ಧಾರಮಾಡಲು ಯಾವುದಾದರೂ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆಯೇ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳನಾಡಳಿತ ಸಚಿವರು).—

(a) ಪಟ್ಟಿಯನ್ನು ಪರಿಶಿಷ್ಟದಲ್ಲಿ ಒದಗಿಸಲಾಗಿದೆ.

(b) ಪಟ್ಟಿಯನ್ನು ಪರಿಶಿಷ್ಟದಲ್ಲಿ ಒದಗಿಸಲಾಗಿದೆ.

(c) ಪಟ್ಟಿಯನ್ನು ಪರಿಶಿಷ್ಟದಲ್ಲಿ ಒದಗಿಸಲಾಗಿದೆ.

(d) ಜೀರ್ಣೋದ್ಧಾರವಾಗದೆ ಇರತಕ್ಕ ಕೆರೆಗಳ ಪೈಕಿ, ಅನೇಕ ಕೆರೆಗಳು ಒಡೆದುಹೋಗಿವೆ. ಕೆರೆ ಅಂಗಳಗಳು ಹೂಳಿನಿಂದ ತುಂಬಿವೆ ಅಥವಾ ಸಾಗುವಳಿಮಾಡುವುದಕ್ಕಾಗಿ ಬೇರೆ ವಿಧವಾಗಿ ಏರೇ ಮಾಡಲ್ಪಟ್ಟಿವೆ. ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಸಾಧ್ಯಾಸಾಧ್ಯತೆಗಳನ್ನು ಮತ್ತು ಅವುಗಳ ಜೀರ್ಣೋದ್ಧಾರ ಮಾಡಿದ ಪಕ್ಷದಲ್ಲಿ ಅವುಗಳಿಂದ ಎಷ್ಟರ ಮಟ್ಟಿನ ಲಾಭವನ್ನು ಪಡೆಯಬಹುದಾಗಿದೆಯೆಂಬ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು ಎಲ್ಲಾ ಕೆರೆಗಳ ಜೀರ್ಣೋದ್ಧಾರದ ಸಂಬಂಧವಾಗಿಯೂ ಪರಿಶೀಲನೆಗಳು ನಡೆಯುತ್ತಿವೆ.

(ಮಾನ್ಯ ಶ್ರೀ ಟಿ. ಮರಿಯಪ್ಪನವರು)

(a) ತುರುವೆಕೆರೆ ತಾಲ್ಲೂಕಿನಲ್ಲಿರುವ ಕೆರೆಗಳ ಮತ್ತು ಅವುಗಳ ಅಚ್ಚುಕಟ್ಟು ಪ್ರದೇಶಗಳ ಪಟ್ಟಿ.

ತುಮಕೂರು ಡಿಸ್ಟ್ರಿಕ್ಟು

ಕ್ರಮ ಸಂಖ್ಯೆ	ರಿಜಿಸ್ಟರು ನಂಬರು	ಗ್ರಾಮದ ಹೆಸರು	ಕೆರೆ ಹೆಸರು	ಜೀರ್ಣೋದ್ಧಾರ ವಾಗಿದೆಯೇ ಇಲ್ಲವೆ	ಮೇಜರ್ ಅಥವಾ ಮೈನರ್	ಅಚ್ಚುಕಟ್ಟು ಎ.	ಅಚ್ಚುಕಟ್ಟು ಗುಂ.	ಷರಾ
1	262	ತುರುವೇಕೆರೆ ...	ಕೆರೆ ...	ಜೀರ್ಣೋದ್ಧಾರವಾಗಿದೆ ...	ಮೇಜರ್ ...	1548	0	
2	284	ದೊಡ್ಡಘಟ್ಟ ...	ಈರನಕಟ್ಟೆ ಅಥವಾ ಹುಚ್ಚ ಗೌಡನ ಕಟ್ಟೆ.	ಜೀರ್ಣೋದ್ಧಾರವಾಗಿಲ್ಲ ...	ಮೈನರ್ ...	3	0	
3	287	ಮಲ್ಲಘಟ್ಟ ಅಮಾನಿಕೆರೆ	ಕೆರೆ ...	ಜೀರ್ಣೋದ್ಧಾರವಾಗಿದೆ ...	ಮೇಜರ್ ...	652	35	
4	288	ಸೂಳೆಕೆರೆ ...	ಕೆರೆ ...	ಡಿಟ್ಟೋ ...	ಡಿಟ್ಟೋ ...	395	0	
5	285	ನೀರಗುಂದ ...	ಅಮಾನಿಕೆರೆ ...	ಡಿಟ್ಟೋ ...	ಡಿಟ್ಟೋ ...	93	0	
6	281	ಡಿಟ್ಟೋ ಗಂಗೇನಹಳ್ಳಿ ...	ಸಾತನಕೆರೆ ...	ಜೀರ್ಣೋದ್ಧಾರವಾಗಿಲ್ಲ ...	ಮೈನರ್ ...	11	0	
7	...	ಹುಲಸಂದ್ರ (ಜೋಡಿ) ...	ಕೆರೆ ...	ಡಿಟ್ಟೋ ...	...	...		(a)
8	...	ಸೋಮಲಾಪುರ ...	ಜವರನಕಟ್ಟೆ ...	ಡಿಟ್ಟೋ ...	ಮೈನರ್ ...	7	0	
9	283	ತಾಳೆಕೆರೆ ...	ಕೆರೆ ...	ಜೀರ್ಣೋದ್ಧಾರವಾಗಿದೆ ...	ಡಿಟ್ಟೋ ...	19	0	
10	319	ಬಡಗರಹಳ್ಳಿ ...	...	ಡಿಟ್ಟೋ ...	ಡಿಟ್ಟೋ ...	44	0	
11	339	ತುಮಕೂರು ...	ತನಕೆರೆ ...	ಡಿಟ್ಟೋ ...	...			(a)
12	318	ಡಿಟ್ಟೋ ...	ಊರಮುಂದಿನ ಕೆರೆ ...	ಡಿಟ್ಟೋ ...	ಮೈನರ್ ...	23	0	
13	296	ಕೋಳಾಲ ...	...	ಜೀರ್ಣೋದ್ಧಾರವಾಗಿಲ್ಲ ...	...	100	0	(b)
14	325	ಕಣತೂರು ...	ಕೆರೆ ...	ಜೀರ್ಣೋದ್ಧಾರವಾಗಿದೆ ...	ಮೇಜರ್ ...	131	30	
15	326	ತಂಡಗ ...	ಕೆರೆ ...	ಡಿಟ್ಟೋ ...	ಡಿಟ್ಟೋ ...	217	0	
16	332	ಬೆನಕನಕೆರೆ ...	ಊರಮುಂದಿನ ಕೆರೆ ...	ಜೀರ್ಣೋದ್ಧಾರವಾಗಿಲ್ಲ ...	...	...		(a)
17	344	ಗೊಟ್ಟಿಕೆರೆ ...	ಕೆರೆ ...	ಜೀರ್ಣೋದ್ಧಾರವಾಗಿದೆ ...	ಮೇಜರ್ ...	291	10	
18	316	ದಬ್ಬೆಘಟ್ಟ ...	ಹೊಸಕೆರೆ ...	ಡಿಟ್ಟೋ ...	ಮೈನರ್ ...	82	37	
19	333	ಡಿಟ್ಟೋ ...	ಆವೆಕಟ್ಟೆ ...	ಜೀರ್ಣೋದ್ಧಾರವಾಗಿಲ್ಲ ...	...	...		(a)
20	324	ಮುದ್ದನಹಳ್ಳಿ ...	ಅಯ್ಯನಕಟ್ಟೆ ಅಥವಾ ಚಿಕ್ಕೆರೆ ...	ಜೀರ್ಣೋದ್ಧಾರವಾಗಿದೆ ...	ಮೈನರ್ ...	44	0	
21	323	ಡಿಟ್ಟೋ ...	ನತ್ತಿಕಟ್ಟೆ ಅಥವಾ ಚಿಕ್ಕೆರೆ ...	ಡಿಟ್ಟೋ ...	ಮೇಜರ್ ...	301	13	
22	106	ಮಾಯಸಂದ್ರ ...	ಕೆರೆ ...	ಡಿಟ್ಟೋ ...	ಡಿಟ್ಟೋ ...	720	36	
23	196	ಹಂಚಿಹಳ್ಳಿ ...	ಕೆರೆ ...	ಡಿಟ್ಟೋ ...	ಮೈನರ್ ...	19	24	

24	168	ತರಮಾನಕೋಟೆ	ಕೆರೆ	ಡಿಟೋ	ಮೈನರ್	25	23	
25	198	ಕೊಪ್ಪ	ಕೆರೆ	ಡಿಟೋ	ಡಿಟೋ	30	0	
26	156	ವಿಟ್ಟಲಪುರ	ನಾಯಕನ ಕೆರೆ	ಡಿಟೋ	ಡಿಟೋ	62	31	
27	197	ಡಿಟೋ	ಹೊಸಕೆರೆ	ಡಿಟೋ	ಡಿಟೋ	3	0	
28	200	ಕಾಮಾನಹಳ್ಳಿ	ಕೆರೆ	ಡಿಟೋ	ಡಿಟೋ	25	4	
29	193	ಬೈತರ ಹೊಸಹಳ್ಳಿ	ಕಣಿವೆ ಕಟ್ಟೆ	ಡಿಟೋ	ಡಿಟೋ	31	20	
30	165	ಡಿಟೋ	ಹೊರಗೆ ಕಟ್ಟೆ	ಡಿಟೋ	ಡಿಟೋ	20	0	
31	195	ಡಿಟೋ	ಆಲದ ಕಟ್ಟೆ	ಜೀರ್ಣೋದ್ಧಾರವಾಗಿಲ್ಲ	ಡಿಟೋ	4	0	
32	164	ಅಂಬಲದೇವರಹಳ್ಳಿ	ಕೆರೆ	ಜೀರ್ಣೋದ್ಧಾರವಾಗಿದೆ	ಡಿಟೋ	12	0	
33	162	ವರಾಹಾಸಂದ್ರ	ಕೆರೆ	ಡಿಟೋ	ಡಿಟೋ	58	30	
34	170	ಮಲ್ಲೇರಹಳ್ಳಿ	ಕೆರೆ	ಜೀರ್ಣೋದ್ಧಾರವಾಗಿದೆ	ಮೇಜರ್	74	24	
35	192	ದೊಡ್ಡಬೀರನಕೆರೆ	ಕೆರೆ ಅಥವಾ ಅಯ್ಯನಕೆರೆ	ಡಿಟೋ	ಮೈನರ್	66	34	
36	152	ಕಾಲ್ನಗಟಹಳ್ಳಿ	ಕೆರೆ	ಡಿಟೋ	ಡಿಟೋ	23	37	
37	191	ದೊಡ್ಡಬೀರನಕೆರೆ	ವಡ್ಡರಕಟ್ಟೆ	ಡಿಟೋ	ಡಿಟೋ	35	0	
38	171	ರಾಮಸಾಗರ	ಕೆರೆ	ಡಿಟೋ	ಮೇಜರ್	77	22	
39	169	ಜಡಿಯ	ಕೆರೆ	ಡಿಟೋ	ಡಿಟೋ	117	13	
40	163	ದಾಸಿಹಳ್ಳಿ	ಕೆರೆ	ಡಿಟೋ	ಮೈಜರ್	37	10	
41	171	ದೊಡ್ಡಬೀರನಕೆರೆ	ನಾಯಕನಕೆರೆ	ಜೀಣೋದ್ಧಾರವಾಗಿಲ್ಲ	ಡಿಟೋ	3	0	
42	153	ದೊಡ್ಡಸೆಟ್ಟಿಕೆರೆ	ಕೆರೆ	ಜೀರ್ಣೋದ್ಧಾರವಾಗಿದೆ	ಡಿಟೋ	33	31	
43	154	ಚಿಕ್ಕಸೆಟ್ಟಿಕರೆ	ಕೆರೆ	ಡಿಟೋ	ಡಿಟೋ	39	23	
44	151	ಆನದಗೆರೆ	ಕೆರೆ	ಡಿಟೋ	ಡಿಟೋ	19	33	
45	...	ಇಲ್ಲೇನಹಳ್ಳಿ	ಕಾವಲಗೆರೆ	ಜೀರ್ಣೋದ್ಧಾರವಾಗಿಲ್ಲ	ಡಿಟೋ	4	0	
46	150	ಮಾವಿನಕೆರೆ	ಕೆರೆ	ಜೀರ್ಣೋದ್ಧಾರವಾಗಿದೆ	ಡಿಟೋ	51	21	
47	155	ನಾಗಲಾಪುರ	ದ್ಯಾವಲಿಕೆರೆ	ಡಿಟೋ	ಮೇಜರ್	230	25	(c)
48	156	ಡಿಟೋ	ಚಿಕ್ಕೆರೆ	ಡಿಟೋ	ಮೈನರ್	14	24	
49	167	ಹೊನಕೆರೆ	ಕೆರೆ	ಡಿಟೋ	ಡಿಟೋ	17	21	
50	186	ಬೊಮ್ಮನಹಳ್ಳಿ	ಕೆರೆ	ಡಿಟೋ	ಡಿಟೋ	36	36	
51	158	ಮುಗುಳೂರು	ಕೆರೆ	ಡಿಟೋ	ಡಿಟೋ	72	0	
52	159	ವೊಡ್ಡರಘಟ್ಟ	ಕೆರೆ	ಡಿಟೋ	ಮೇಜರ್	136	11	

ಷರಾ :—(a) ಒಡೆದಿದೆ

(b) ಜೀರ್ಣೋದ್ಧಾರಮಾಡಲು ಉದ್ದೇಶಿಸಲಾಗಿದೆ, ಅಂದಾಜಾವನ್ನು ಕಳುಹಿಸಲಾಗಿದೆ.

(c) ಕಾಲುವೆಗಳನ್ನು ಉತ್ತಮಪಡಿಸಲುದ್ದೇಶಿಸಲಾಗಿದೆ.

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಕ್ರಮ ಸಂಖ್ಯೆ	ರಿಜಿಸ್ಟರು ನಂಬರು	ಗ್ರಾಮದ ಹೆಸರು	ಕೆರೆ ಹೆಸರು	ಜೀರ್ಣೋದ್ಧಾರವಾಗಿದೆಯೇ ಇಲ್ಲವೆ	ಮೇಜರ್ ಅಥವಾ ಮೈನರ್	ಅಚ್ಚುಕಟ್ಟು ಎ.	ಗುಂ.	ಷರಾ
53	150	ಹಿತ್ತಲಕೊಪ್ಪ ...	ಕೆರೆ ...	ಜೀರ್ಣೋದ್ಧಾರವಾಗಿದೆ ...	ಮೇಜರ್ ...	98	0	(c)
54	101—209	ಸೀಗೆಹಳ್ಳಿ ...	ಕೆರೆ ...	ಡಿಟೋ ...	ಮೈನರ್ ...	68	6	
55	102—210	ಹರಳಕೆರೆ ...	ಕೆರೆ ...	ಡಿಟೋ ...	ಡಿಟೋ ...	21	19	
56	104—212	ಗಾಳಿಮತಪುರ ...	ಕೆರೆ ...	ಜೀರ್ಣೋದ್ಧಾರವಾಗಿಲ್ಲ ...	...			(a)
57	124—232	ಯರದಹಳ್ಳಿ ...	ಕೆರೆ ...	ಡಿಟೋ ...	...	...		(b)
58	119—227	ತುಯಿಲಹಳ್ಳಿ ಅಮಾನಿಕೆರೆ ...	ಕೆರೆ ...	ಜೀರ್ಣೋದ್ಧಾರವಾಗಿದೆ ...	ಮೇಜರ್ ...	119	38	
59	160—113	ವಡೇರಹಳ್ಳಿ ಅಮಾನಿಕೆರೆ ...	ಅಮಾನಿಕೆರೆ ...	ಜೀರ್ಣೋದ್ಧಾರವಾಗಿಲ್ಲ ...	ಮೈನರ್ ...	2	0	
60	155—108	ದಂಡಿನಶಿವರ ...	ಅಮ್ಮಸಂದ್ರಕೆರೆ	ಜೀರ್ಣೋದ್ಧಾರವಾಗಿದೆ	ಮೇಜರ್ ...	102	0	
61	...	ಚಿಕ್ಕನಹಳ್ಳಿ ...	ಪಾಳಯದಕೆರೆ ...	ಜೀರ್ಣೋದ್ಧಾರವಾಗಿಲ್ಲ ...	ಮೈನರ್ ...	8	34	
62	158—111	ನರಿಗೆಹಳ್ಳಿ ಅಮಾನಿಕೆರೆ ...	ಅಮಾನಿಕೆರೆ ...	ಜೀರ್ಣೋದ್ಧಾರವಾಗಿದೆ ...	ಮೇಜರ್	669	0	
63	161—114	ಕೊಡಗಿಕೆರೆ ಜೋಡಿ ...	...	ಡಿಟೋ ...	ಡಿಟೋ ...	120	0	
64	131	ಕಲ್ಲಣಿ ...	ಕಲ್ಲಣಿ ...	ಡಿಟೋ ...	ಡಿಟೋ ...	545	12	
65	164—117	ಶೆಟ್ಟಿಹಳ್ಳಿ ...	ಕೆರೆ ...	ಡಿಟೋ ...	ಮೈನರ್ ...	24	0	
66	126	ವೀರಸಾಗರ	ಕೆರೆ ...	ಡಿಟೋ ...	ಮೇಜರ್	293	7	
67	30	ಬೊಮ್ಮೇನಹಳ್ಳಿಕೆರೆ ...	ಕೆರೆ ...	ಡಿಟೋ ...	ಡಿಟೋ ...	236	4	
68	85	ಕಲ್ಲಕೆರೆ ...	ಹೊಸಕೆರೆ ...	... ...	ಮೈನರ್ ...	35	0	

ಷರಾ :—(a) ಒಡೆದಿದೆ.
(b) ಡಿಟೋ ಜೀರ್ಣೋದ್ಧಾರ ಮಾಡಲುದ್ದೇಶಿಸಲಾಗಿದೆ.
(c) ಕೆಲಸ ಪೂರ್ತಿಯಾಗುತ್ತಿದೆ.

		ಮೇಜರ್	ಮೈನರ್
ಜೀರ್ಣೋದ್ಧಾರವಾದ ಕೆರೆಗಳು	...	22	32
ಜೀರ್ಣೋದ್ಧಾರವಾಗಿಲ್ಲದ ಕೆರೆಗಳು	...		14
ಒಟ್ಟು	...	22	46

(b) ತುರುವೇಕೆರೆ ತಾಲ್ಲೂಕಿನಲ್ಲಿ ಮಂಜೂರಾಗಿ ಈಗ ಕೆಲಸ ನಡೆಯುತ್ತಿರುವ ಕೆರೆಗಳನ್ನು ತೋರಿಸುವ ಪಟ್ಟಿ.

1 ವೀರಸಾಗರ ಕೆರೆಯ ಒಳಾಯವನ್ನು ಹೆಚ್ಚಿಸುವುದು ...	1 ಕೆಲಸ ನಡೆಯುತ್ತಿದೆ. ತಿದ್ದುಪಾಟಾದ ಅಂದಾಜನ್ನು ಮಂಜೂರಾತಿಗಾಗಿ ಕಳುಹಿಸಲಾಗಿದೆ.
2 ಒಡೆದುಹೋಗಿರತಕ್ಕ ಹಿತ್ತಲಕೊಪ್ಪ ಕೆರೆಯನ್ನು ಜೀರ್ಣೋದ್ಧಾರ ಮಾಡುವುದು	2 ಕೆಲಸ ನಡೆಯುತ್ತಿದೆ
3 ಚಿಕ್ಕಸೆಟ್ಟಿ ಕೆರೆಯ ಒಳಾಯವನ್ನು ಹೆಚ್ಚಿಸುವುದು ...	3 ಡಿಟೋ
4 ಕಲ್ಲೇನಕೆರೆ ಬಳಿ ಹೊಸ ಕೆರೆಯನ್ನು ಕಟ್ಟುವುದು ...	4 ಕೆಲಸ ಇನ್ನೇನು ಪೂರೈಸುವುದರಲ್ಲಿದೆ.
5 ಚೊಮ್ಮೇನಹಳ್ಳಿ ಕೆರೆಯ ಹಳ್ಳದ ಕೋಡಿಗೆ ಅಡ್ಡಲಾಗಿ ಈಡುಕಟ್ಟೆ ಕೋಡಿಯನ್ನು (ಎಂದರೆ "ಪಿಕ್-ಅಪ್"— ಕೋಡಿಯನ್ನು) ಕಟ್ಟುವುದು.	5 ಮಂಜೂರಾಗಿದೆ
6 ಪುರದ ಅಣೆಯನ್ನು ಮತ್ತು ಕಾಲುವೆಗಳನ್ನು ಉತ್ತಮಗೊಳಿಸುವುದು	6 ಮಂಜೂರಾಗಿದೆ
7 ದೊಡ್ಡನೇಟಿಗುಂಟೆ ಹಳ್ಳದ ಕೋಡಿಗೆ ಅಡ್ಡಲಾಗಿ ಈಡುಕಟ್ಟೆಯನ್ನು (ಎಂದರೆ "ಪಿಕ್-ಅಪ್" ಕೋಡಿಯನ್ನು) ಕಟ್ಟುವುದು	7 ಕೆಲಸ ನಡೆಯುತ್ತಿದೆ

(c) ತುರುವೇಕೆರೆ ತಾಲ್ಲೂಕಿನಲ್ಲಿ ಹಾಲಿ ಜೀರ್ಣೋದ್ಧಾರವಾಗದೆ ಇರುವ ಕೆರೆಗಳನ್ನು ತೋರಿಸುವ ಪಟ್ಟಿ.

				ರಿಜಿಸ್ಟರು ನಂಬರು	ಅಚ್ಚುಕಟ್ಟು ಎಕರೆ ಗುಂಟೆ
1	ದೊಡ್ಡಘಟ್ಟ ಯರ್ರನಕೆರೆ	...	...	284	3—0
2	ನೀರುಗುಂದ ಗಂಗನಹಳ್ಳಿ ಸಾತನಕೆರೆ	...	...	281	11—0 ಒಡೆದಿದೆ
3	ಜೋಡಿ ಹುಲಿಸಂದ್ರಕೆರೆ	...	...	...	
4	ಸೋಮಲಾಪುರ ಜವರನಕಟ್ಟೆ	...	...	...	7—0
5	ಕೊಳಾಲಕೆರೆ	...	...	296	ಒಡೆದಿದೆ. ಜೀರ್ಣೋದ್ಧಾರ ಮಾಡಬೇಕೆಂದು ಉದ್ದೇಶಿಸಲಾಗಿದೆ. ಅಂದಾಜನ್ನು ಒಪ್ಪಿಸಲಾಗಿದೆ.
6	ಬೆನಕನಕೆರೆ ಊರುಮುಂದಿನಕೆರೆ	...	...	332	ಒಡೆದಿದೆ
7	ದಬ್ಬೆಘಟ್ಟ ಅವ್ವೇಕಟ್ಟೆ	...	...	333	ಡಿಟೋ
8	ಬೈತರ ಹೊಸಹಳ್ಳಿ ಆಲದಕಟ್ಟೆ	...	...	195	4—0
9	ದೊಡ್ಡಬೈರನಕೆರೆ ನಾಯಕನಕೆರೆ	...	...	...	3—0
10	ಇಳ್ಳೇನಹಳ್ಳಿ ಕಾವಲುಕೆರೆ	...	...	...	4—0
11	ವಡೇರಹಳ್ಳಿಕೆರೆ	...	...	160/113	2—0
12	ಚಿಕ್ಕಮಾತಿಪಾಳ್ಯದಕೆರೆ	...	...	...	8—34
13	ಗವಿನಾಥಪುರಕೆರೆ	...	...	104/212	ಒಡೆದಿದೆ
14	ಯರದಹಳ್ಳಿಕೆರೆ	...	...	124/232	ಒಡೆದಿದೆ

ಶ್ರೀ ಬಿ. ಹುಚ್ಚೇಗೌಡರು.—(ಸಿ) ಪರಿಶಿಷ್ಟದಲ್ಲಿ 14 ಮೈನರ್ ಕೆರೆಗಳು ಜೀರ್ಣೋದ್ಧಾರವಾಗದೆ ಉಳಿದಿವೆಯೆಂದು ಹೇಳಿದ್ದೀರಿ. ಇವುಗಳಲ್ಲಿ ಎಷ್ಟು ಕೆರೆಗಳನ್ನು ಜೀರ್ಣೋದ್ಧಾರಮಾಡಬೇಕೆಂದು ಸೂಚನೆಗಳು ಬಂದಿವೆಯೆಂಬುದನ್ನು ತಿಳಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು. ನನ್ನಲ್ಲೀಗ ಆ ಅಂಕಿ ಅಂಶಗಳಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇವುಗಳನ್ನೆಲ್ಲಾ 5 ವರ್ಷದ ಯೋಜನೆಯ ಪ್ರಕಾರ ರಿಪೇರಿಗಾಗಿ ತೆಗೆದುಕೊಂಡಿದ್ದೇವೆಂದು ಹೇಳಿದಿರಿ. ಅದರಂತೆ ವರ್ಷಕ್ಕೆ ಎಷ್ಟು ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಪಟ್ಟಿ ಹಾಕಿಕೊಂಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಈಗ ನಮ್ಮ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ಮಂಜೂರಾಗುವ ಸ್ಥಿತಿಯಲ್ಲಿವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮ ಆತಂಕಗಳೇನಿವೆಯೆಂಬುದನ್ನು ತಾವುಗಳು ನೋಡಬೇಕು. ಈ ಕೆರೆಗಳ ವಿಷಯದಲ್ಲಿ ಆಖೈರಾಗಿ ಮುಚ್ಚಳಿಕೆಯಾಗಿ ಡೆಪ್ಯುಟಿ ಕಮಿಷನರಿಂದ ಬಂದ ಹೊರತು ಎಷ್ಟು ಮಂಜೂರುಮಾಡಬಹುದೆಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ನೀವೇ ಇಲ್ಲಿ ಹೇಳಿರುವ ಪ್ರಕಾರ ಅಂದಾಜು ಆಗಿ ಬಂದಿದೆಯೆಂದು ತಿಳಿಸಿದ್ದೀರಿ; ಮುಚ್ಚಳಿಕೆ ಪೂರ್ತಿಯಾಗಿ ಕೆಲವು ಬಂದಿರಬೇಕು. ಏಕೆಂದರೆ, 13ನೆಯ ನಂಬರಿನದನ್ನು ತಾವು ನೋಡುವುದಾದರೆ, ನಿಮ್ಮ ಮೂಲ ಯೋಜನೆಯಂತೆ ಅದನ್ನು ಜೀರ್ಣೋದ್ಧಾರ ಮಾಡಲು ಉದ್ದೇಶಿಸಲಾಗಿದೆಯೆಂದು ಹೇಳಿದ್ದೀರಿ! ಆದ್ದರಿಂದ ಈ ಕೆರೆಗಳ ಪೈಕಿ ಎಷ್ಟು ಕೆರೆಗಳ ವಿಷಯದಲ್ಲಿ ಮುಚ್ಚಳಿಕೆಗಳು ಬಂದಿವೆಯೆಂದು ಹೇಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಬಿ. ಹುಚ್ಚೇಗೌಡರು.—ಪರಿಶಿಷ್ಟದಲ್ಲಿ 16ನೆಯ ಪುಟದಲ್ಲಿ 53ನೆಯ ಸಂಖ್ಯೆಯದರ ಬಗ್ಗೆ "ಕೆಲಸ ಪೂರ್ತಿಯಾಗುತ್ತಿದೆ" ಯೆಂದು ತಿಳಿಸಿದ್ದೀರಿ. ಈ ಕೆರೆಯ ಒಡಕನ್ನೇ ಇನ್ನೂ ಮುಚ್ಚಿಲ್ಲ!! ಹಾಗಿರುವಾಗ ಕೆಲಸ ಪೂರ್ತಿಯಾಗುತ್ತಿದೆಯೆಂದರೆ ಅರ್ಥವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮಗೆ ಬಂದಿರುವ ವರದಿಯ ಪ್ರಕಾರ ಹೀಗೆ ತಿಳಿದುಬಂದಿದೆ. ನೀವು ಇನ್ನೂ ಒಡಕನ್ನೇ ಮುಚ್ಚಿಲ್ಲವೆಂದು ತಿಳಿಸುವುದಾದರೆ ಪುನಃ ವಿಚಾರಣೆ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ನಾನು ನೋಡಿರುವ ಮಟ್ಟಿಗೆ ಈಗಿನ್ನೂ ಒಡಕನ್ನು ಮುಚ್ಚುವ ಪ್ರಯತ್ನದಲ್ಲಿದ್ದಾರೆ. ಇನ್ನೂ ಅದು ಪೂರ್ತಿಯಾಗಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮಗೆ ವರದಿಯಾಗಿರುವ ಪ್ರಕಾರ 'Work nearing completion' ಎಂದರೆ ಒಡಕನ್ನು ಮುಚ್ಚಿರಬೇಕು. ಈಗ ತಾವು ಅದನ್ನು ಮುಚ್ಚಿಲ್ಲವೆಂದು ಹೇಳಿದ್ದೀರಿ. ಬಹುಶಃ ಗಟ್ಟಿ ತಳಹದಿ ಸಿಕ್ಕದೆ ಒಡಕನ್ನು ಮುಚ್ಚುವುದಕ್ಕಾಗದಿರಬಹುದು. ನೀವು ಖಚಿತವಾಗಿ ತಿಳಿಸುವುದಾದರೆ ವಿಚಾರಣೆಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಈ ಕೆರೆಗಳ ಪೈಕಿ ಈ 14 ಕೆರೆಗಳನ್ನಾದರೂ ತೆಗೆದುಕೊಂಡು ಇನ್ನು 2–3 ವರ್ಷಗಳಲ್ಲಾದರೂ ದುರಸ್ತುಮಾಡುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ 14 ಕೆರೆಗಳ ವಿಷಯದಲ್ಲಿ ಒಂದು ಮಾತು ಹೇಳಬೇಕು. ಇವುಗಳಲ್ಲಿ ಕೆಲವು ಕೆರೆಗಳ ಕೆಳಗೆ ಕೇವಲ 2-3 ಎಕರೆ ಮಾತ್ರ ಇರುತ್ತದೆ. ಅಂಥ ಸಂದರ್ಭಗಳಲ್ಲಿ ಕೆರೆಗಳು ತೀರಾ ಹೂಳು ಮುಚ್ಚಿಕೊಂಡುಹೋಗಿದ್ದರೆ ಹೇಗೆ ಮಾಡುವುದು? If the cost of restoration does not exceed Rs. 600, and that is the maximum we place because the Government of India will not give any grant if it exceeds Rs. 600, we are prepared to undertake the restoration all these 14 tanks. But it depends upon various factors;—the extent, whether the land has been given out for permanent cultivation; whether the feeder is all rights, whether the catchment is sufficient etc., ಇವುಗಳನ್ನೆಲ್ಲಾ ಪರ್ಯಾಲೋಚನೆಮಾಡಿ ಇದು ಸಾಧ್ಯವೆಂದು ತಜ್ಞರು ಅಭಿಪ್ರಾಯಕೊಟ್ಟರೆ ನಾವು ಕೈಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ತೆಗೆದುಕೊಳ್ಳುವುವಂಥವನ್ನು ಏಕೆ ಬೇಗ ತೆಗೆದುಕೊಳ್ಳಕೂಡದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತೆಗೆದುಕೊಳ್ಳುವುದು ನ್ಯಾಯ; ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಪೂರ್ತಿಯಾಗಿ ಒಂದು ವರದಿ ತರಿಸಿಕೊಂಡು, ಇಷ್ಟು ಕೆರೆಗಳನ್ನು ದುರಸ್ತುಮಾಡಬೇಕಾಗುತ್ತದೆ, ಇಷ್ಟು ಕೆರೆಗಳನ್ನು ವಜಾಮಾಡಿಬಿಡಬೇಕಾಗುತ್ತದೆ ಎಂಬುದನ್ನು ಹೇಳಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರದವರು ಅದನ್ನು ತೀವ್ರವಾಗಿ ಪರ್ಯಾಲೋಚನೆಮಾಡಿದ ಮೇಲೆಯೇ, ಇದಕ್ಕಾಗಿ ಒಂದು ಪುಟ್ಟ ಸಮಿತಿಯನ್ನು ಏರ್ಪಾಡುಮಾಡಿ ಮೈಸೂರು ದೇಶದ ಸ್ಥಿತಿಯನ್ನು ಪರಿಶೀಲನೆ ಮಾಡಿ ಯಾವ ಯಾವ ಕೆರೆಗಳನ್ನು ವಜಾಮಾಡಬೇಕೆಂಬುದನ್ನು ನಿರ್ಧರಮಾಡಬೇಕೆಂದು ತಿಳಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ತಾವು ತಿಳಿಸುವುದಾದರೆ ರೈತರೂ ಮುಂದೆ ಯಾವ ಯಾವ ಕೆರೆಗಳನ್ನು ಕೇಳಬೇಕು, ಯಾವುದಕ್ಕೆ ಪ್ರಯತ್ನಪಡಬೇಕು ಎಂಬುದನ್ನು ಗೊತ್ತುಮಾಡಿಕೊಳ್ಳುತ್ತಾರೆ.

The Hon'ble Sri T. MARIAPPA.—In fact, Government have already thought of this proposal and it is being examined.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—ಈ ಪಟ್ಟಿಯಲ್ಲಿ 42 ಕೆರೆಗಳನ್ನು ದುರಸ್ತುಮಾಡಿವೆಯೆಂದು ಹೇಳಿದ್ದೀರಿ. ಹಾಗೆ ದುರಸ್ತಿಮಾಡಿಸಿರುವುದು ಎಷ್ಟು ವರುಷಗಳ ಹಿಂದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು. ಕೆರೆಗಳು ಸರಿಯಾಗಿ ಕೆಲಸಮಾಡುತ್ತಿದ್ದರೆ ಅವುಗಳೆಲ್ಲಾ ಸಾಮಾನ್ಯವಾಗಿ ದುರಸ್ತಾದ ಕೆರೆಗಳೇ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಾಗಾದರೆ ಈಗ ಈ ಕೆರೆಗಳಲ್ಲೆಲ್ಲಾ ಬೆಳೆಗೆ ಸಾಕಾಗುವಷ್ಟು ನೀರನ್ನು ಇಟ್ಟುಕೊಳ್ಳತಕ್ಕ ಚೈತನ್ಯ ಅವುಗಳಿಗಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪೈಕಿ ಅನೇಕ ಕೆರೆಗಳಿಗೆ ಕೃಪಾಸಿಟಿ ಬಹಳ ಕಮ್ಮಿಯಾಗಿರುತ್ತೆಂದು ಇತ್ತೀಚೆಗೆ ತಿಳಿದುಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ 68 ಕೆರೆಗಳ ಪೈಕಿ ಯಾವು ಯಾವುವು ಮೈನರ್ ಕೆರೆಗಳಿವೆಯೋ ಅವುಗಳನ್ನು ನೋಡಿ, ಆ ಪೈಕಿ ಫಲದಾಯಕವಾಗಿರತಕ್ಕಂಥ ಕೆರೆಗಳನ್ನು ರಿಪೇರಿಮಾಡತಕ್ಕ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಂಡು ಅದರ ಪ್ರಕಾರ ಆ ಕೆರೆಗಳಲ್ಲೆಲ್ಲಾ ಸಾಕಾದಷ್ಟು ನೀರು ನಿಲ್ಲುವಂತೆ ಪ್ರಯತ್ನಮಾಡಲು ಏರ್ಪಾಡುಮಾಡುತ್ತೀರಾ?

The Hon'ble Sri T. MARIAPPA.—In fact Sir, in all cases where the capacity is less than what it ought to be, we are getting them examined, if the raiyats are prepared to pay necessary contribution and water charges. But the difficulty is this. Most of the tanks are fairly all right provided the seasonal conditions are good and rainfall is sufficient. But unfortunately, the seasonal conditions are very uncertain. Even in respect of the tanks which were restored five years ago, their capacity has again to be increased.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ ಕೆರೆಗಳಗೆ ಇರತಕ್ಕ ಅಚ್ಚುಕಟ್ಟಿಗೆ ಸಾಕಾಗುವಷ್ಟು ನೀರು

ಆ ಕೆರೆಗಳಲ್ಲಿ ನಿಲ್ಲದೆ ಇರುವುದಕ್ಕೆ, ಆ ಪ್ರದೇಶದಲ್ಲಿ ಸಾಕಷ್ಟು ಮಳೆ ಇಲ್ಲದಿರುವುದರ ಜೊತೆಗೆ ಮತ್ತೇನಾದರೂ ಕಾರಣವಿದೆಯೇ, ಎಂಬುದನ್ನು ತಾವು ಕಂಡು ಹಿಡಿದಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಇಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಕೆರೆಗೆ ಬರತಕ್ಕ ನೀರನ್ನು ಸರಿಯಾಗಿ ಬಿಡದೆ ತಡೆಯತಕ್ಕ ತೆಂಗಿನತೋಟಗಳು ಆ ಪ್ರದೇಶದಲ್ಲಿ ವಿಶೇಷವಾಗಿರುವುದರಿಂದ, ಆ ಕೆರೆಗಳಿಗೆ ಸರಿಯಾಗಿ ನೀರು ಸರಬರಾಯಿಯಾಗುತ್ತಿಲ್ಲವೆಂಬುದಾಗಿ, ಈ ಅಂಶವನ್ನು ರೈತರ ಪ್ರತಿನಿಧಿಗಳು ತಮ್ಮ ಗಮನಕ್ಕೆ ತಂದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಂದಿದ್ದಾರೆ. ನಾನೂ ಸಹ, ಚಿಕ್ಕನಾಯಕನಹಳ್ಳಿ, ತುರುವೇಕೆರೆ ಪ್ರಾಂತ್ಯ ಪ್ರವಾಸ ಹೋಗಿದ್ದಾಗ್ಯೆ ಈ ಅಂಶವನ್ನು ಕೇಳಿದಹಾಗೆ ಜ್ಞಾಪಕವಿದೆ. ಇದರಲ್ಲಿ ಬಂದಿರತಕ್ಕ ಒಂದು ಮುಖ್ಯ ತೊಡಕೇನೆಂದರೆ ಆ ತೆಂಗಿನ ತೋಟಗಳನ್ನು ಅಲ್ಲಿ ಹಾಗೆ ಬೆಳೆಸಿ ಅನೇಕ ವರ್ಷಗಳಾಗಿದೆ. ಅವುಗಳನ್ನು ಈಗ ತಪ್ಪಿಸುವುದು ಬಹಳ ಕಠಿಣವಾದ ವಿಷಯ. ಅದನ್ನು ಬಹಳ ಎಚ್ಚರಿಕೆಯಿಂದ ನಡೆಸಬೇಕಾಗಿದೆ. ಇದು ಬಹಳ ಕ್ಲಿಷ್ಟಕರವಾದ ಸಮಸ್ಯೆ ಹೀಗೇನೇ ಅನೇಕ ಕಡೆ ನೀರು ಬರುತ್ತಿದ್ದ ವ್ಯಾಲಿಗಳೇ ಇದರಿಂದ ಬದಲಾಗಿಹೋಗಿವೆ. ಈ ಎಲ್ಲ ಕಾರಣಗಳಿಂದ ಸರ್ಕಾರದವರು ಈ ಅಂಶಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ, ಒಂದು ಸಲಹೆಯನ್ನು ಸರ್ಕಾರಕ್ಕೆ ನೀಡಲು ಒಂದು ಸಮಿತಿಯನ್ನು ನೇಮಕಮಾಡಬೇಕೆಂದಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ ಕೆರೆಗಳ ಪೈಕಿ ಯಾವುದು ಬಹಳ ತ್ವರಿತದಿಂದ ಆಗಬೇಕು, ಆ ಬಗ್ಗೆ ಆ ಕೆಲಸಗಳನ್ನು ಕೈಗೊಳ್ಳಲು ಎಷ್ಟು ಶಿಬ್ಬಂದಿ ಬೇಕಾಗುತ್ತದೆ ಎಂಬ ಇತ್ಯಾದಿ ಅಂಶಗಳನ್ನೆಲ್ಲಾ ನಿರ್ಧರಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಯಾಯ ಸಂದರ್ಭಗಳಿಗನುಸಾರವಾಗಿ ನೋಡಿ ನಡೆಸಲಾಗುತ್ತದೆ.

"I am proceeding to United Kingdom, U.S.A. and Continental countries in Europe on business tour for about 3½ months and hence will be unable to attend the meeting of the Legislative Assembly during that period. I request that the permission of the House may kindly be obtained for my absence as required by Clause 4 of article 190 of the Constitution of India."

Is it the pleasure of the House to grant him leave?

HONOURABLE MEMBERS.—Yes.

Leave was granted.

The Mysore Legislative Assembly (Prevention of Disqualification) Bill, 1951.

MR. SPEAKER (The Hon'ble Sri V. Venkatappa).—Hon'ble Members will have noticed from Circular No. 6 that the Mysore Legislative Assembly (Prevention of Disqualification) Bill, 1951, as reported by the Select Committee would be taken up for consideration during the meetings of this Session. The Bill will be taken up for consideration on the 30th May 1951 and such of the Hon'ble Members who are desirous of tabling amendments may do so till 3 P.M. tomorrow.

Presentation of the Report of the Special Committee on Rules of Procedure.

MR. SPEAKER (The Hon'ble Sri V. Venkatappa).—Presentation of the Report of the Special Committee on Rules of Procedure.

THE HON'BLE SRI K. T. BHASHYAM (Minister for Law and Labour).—Sir, I beg to present the Report of the Special Committee on Rules of Procedure. Copies of the report were distributed to Hon'ble Members during the January 1951 Session of the Legislative Assembly.

LEGISLATIVE BUSINESS.

Introduction of Bills.

MR. SPEAKER (The Hon'ble Sri V. Venkatappa).—The Hon'ble Minister for Local Self-Government will introduce the Bills.

THE HON'BLE SRI R. CHENNIGARAMIAH (Minister for Local Self-Government).—Sir, I beg to introduce:—

1. The Mysore District Boards (Amendment Bill, 1951.
2. The Mysore Town Municipalities (Amendment) Bill, 1951.

which were published in the Mysore Gazette Extraordinary dated 17th May 1951 under Rule 36 of the Mysore Legislative Rules.

Copies of the Bills have already been distributed to Hon'ble Members.

Presentation of Reports of Select Committees.

MR. SPEAKER (The Hon'ble Sri V. Venkatappa).—Presentation of the Reports of the Select Committees.

THE HON'BLE SRI R. CHENNIGARAMIAH (Minister for Local Self-Government).—Sir, I beg to present the Reports of the Select Committees on the Mysore University (Amendment) Bill, 1951 and the City of Bangalore Municipal Corporation (Amendment) Bill, 1951.

Copies of the Reports have already been distributed to Hon'ble Members.

MR. SPEAKER (The Hon'ble Sri V. Venkatappa).—The Mysore District Boards (Amendment) Bill, 1951, will now be taken up for consideration.

The Mysore District Boards (Amendment) Bill, 1951.

Motion to consider.

*THE HON'BLE SRI R. CHENNIGARAMIAH (Minister for Local Self-Government).— Sir, I beg to move:

"That the Mysore District Boards (Amendment) Bill, 1951, be taken into consideration."

* Speeches asterisked indicate that they have not been revised by Hon'ble Members concerned.

ಈ ಡಿಸ್ಟ್ರಿಕ್ಟ್ ಬೋರ್ಡ್ ತಿದ್ದುಪಡಿ ಮಸೂದೆಯನ್ನು ತಂದಿರುವುದರ ಉದ್ದೇಶ ಇಷ್ಟು. ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡು ಮಸೂದೆಗೆ ಸಂಬಂಧಪಟ್ಟ ಸೆಲೆಕ್ಟ್ ಸಮಿತಿಯ ವರದಿಯನ್ನು ಹಿಂದಿನ ಅಧಿವೇಶನದಲ್ಲಿಯೇ ಸಭೆಯ ಮುಂದೆ ಪರಿಶೀಲನೆಗೆ ಇಡಲಾಗಿತ್ತು. ಅದರ ಮೇಲಿನ ಚರ್ಚೆಯು ಈಗ ನಡೆದು ಅದಕ್ಕೆ ಈ ಸಭೆಯ ಅಂಗೀಕಾರ ಈಗ ದೊರೆಯುತ್ತದೆ. ಅದರ ಪ್ರಕಾರ ಚುನಾವಣೆಯಾಗಬೇಕಾದರೆ ಕೆಲವು ದಿನಗಳು ಬೇಕಾಗುತ್ತದೆ. ಈಗಿರುವ ಜಿಲ್ಲಾ ಬೋರ್ಡಿನ ಕಾಲಾವಧಿಯು ಈ ತಿಂಗಳು 31ನೆಯ ತಾರೀಖಿಗೆ ಮುಗಿಯುತ್ತದೆ. ಆದ್ದರಿಂದ ಹೊಸ ಮಸೂದೆ ಪ್ರಕಾರ ಹೊಸದಾಗಿ ಚುನಾವಣೆ ನಡೆಯುವವರೆಗೆ ಈಗಿರುವ ಜಿಲ್ಲಾ ಬೋರ್ಡನ್ನೇ ಮುಂದುವರಿಸುವುದು ಅವಶ್ಯಕವಾಗಿದೆ. ಆದರೆ ಈಗಿರುವ ಆಕ್ಟ್ ಪ್ರಕಾರ ಸರ್ಕಾರಕ್ಕೆ ಹೆಚ್ಚು ಅಧಿಕಾರವಿಲ್ಲ. ಆದುದರಿಂದ ಈ ಸಭೆಯು ಅನುಮತಿಕೊಟ್ಟರೆ ಇನ್ನೂ ಕೆಲವು ದಿನಗಳವರೆಗೆ ಈಗಿರುವ ಜಿಲ್ಲಾ ಬೋರ್ಡನ್ನೇ ಮುಂದುವರಿಸಿದರೆ ಹೊಸ ಆಕ್ಟ್ ಪ್ರಕಾರ ಚುನಾವಣೆ ನಡೆಸಲು ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಈಗ ಅಧಿಕಾರವನ್ನು ಪಡೆಯಲು ಸರ್ಕಾರದವರು ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ತಂದಿದ್ದಾರೆ.

Mr. SPEAKER.—Motion moved:

"That the Mysore District Boards (Amendment) Bill, 1951, be taken into consideration.",

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—On a point of information, Sir. ಹೊಸದಾಗಿ ಚುನಾವಣೆಯು ಜಿಲ್ಲಾ ಬೋರ್ಡಿಗೆ ಯಾವಾಗ ಆಗಬೇಕು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಹುಶಃ ಹೊಸ ಕಾನೂನು ಪ್ರಕಾರ ಆರು ತಿಂಗಳು ಅಥವಾ ಒಂದು ವರ್ಷ ಆಗಬಹುದು. ಜಾಗ್ರತೆಯಾಗಿ ಮಾಡಬೇಕೆಂಬುದೇ ನಮ್ಮ ಉದ್ದೇಶ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಮದ್ರಾಸಿನವರು ಜನರಲ್ ಎಲೆಕ್ಷನ್ ಆದ ಮೇಲೆ ಎಂದು ಖಚಿತವಾಗಿ ಹೇಳಿದ್ದಾರೆ. ಅದೇ ರೀತಿ ತಾವೂ ಕೂಡ ಜನರಲ್ ಎಲೆಕ್ಷನ್ ಆದ ಮೇಲೆ ಅಥವಾ ಅದಕ್ಕೆ ಮುಂಚೆ ಮಾಡುತ್ತೀರಾ ಎಂಬುದನ್ನು ಖಚಿತವಾಗಿ ಹೇಳಬೇಕು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಜನರಲ್ ಎಲೆಕ್ಷನ್ ಆದ ಮೇಲೆ ಮಾಡಬೇಕಾಗುತ್ತದೆ. ಸಾಧ್ಯವಾದರೆ ಅದಕ್ಕೆ ಮೊದಲೇ ಮಾಡಬಹುದು.

Mr. SPEAKER.—The question is :

"That the Mysore District Boards (Amendment) Bill, 1951, be taken into consideration".

The motion was adopted.

Mr. SPEAKER.—The clauses of the Bill will now be taken up Clause 2. The question is :

"That clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 1. The question is :

"That clause 1 stand part of the Bill".

The motion was adopted.

Clause 1 was added to the Bill.

Mr. SPEAKER.—Title and Preamble, The question is :

"That the Title and the Preamble stand part of the Bill".

The motion was adopted.

The Title and the Preamble were added to the Bill.

Motion to pass.

The Hon'ble Sri R. CHENNIGARAMIAH.—Sir, I beg to move :

"That the Mysore District Boards (Amendment) Bill, 1951, be passed."

Mr. SPEAKER.—The question is :

"That the Mysore District Boards (Amendment) Bill, 1951, be passed."

The motion was adopted.

The Mysore Town Municipalities (Amendment) Bill, 1951.

Motion to consider.

***The Hon'ble Sri R. CHENNIGARAMIAH** (Minister for Local Self-Government).—Sir, I beg to move :

"That the Mysore Town Municipalities (Amendment) Bill, 1951, be taken into consideration."

ಹಿಂದಿನ ಸಭೆಯಲ್ಲಿ ಮೈಸೂರು ಟೌನ್ ಮುನಿಸಿಪಾಲಿಟಿಗಳ ಒಂದು ಕಾನೂನನ್ನು ಈ ಸಭೆಯವರು ಅಂಗೀಕಾರ ಮಾಡಿದ್ದಾರೆ. ಅದರ ಪ್ರಕಾರ ಚುನಾವಣೆ ನಡೆಯಬೇಕಾದರೆ ಸುಮಾರು 3-4 ತಿಂಗಳಾಗಬೇಕು. ಈಗ ಸರಿಯಾದ ಕಾನೂನು ತಯಾರಾಗಿದೆ. ಹೊಸ ಕಾನೂನು ಪ್ರಕಾರ ಚುನಾವಣೆ ನಡೆಯುವುದಕ್ಕೆ ಈಗ ಅವಕಾಶವಿಲ್ಲ. ಆದ್ದರಿಂದ ಕೆಲವು ಮುನಿಸಿಪಾಲಿಟಿಗಳಿರುವ ಕಾಲಾವಧಿಯನ್ನು ಮುಂದುವರಿಸುವುದು ಬಹಳ ಆವಶ್ಯಕವಾಗಿದೆ. ಅದಕ್ಕೆ ಈಗ ಇರುವ ಕಾನೂನು ಪ್ರಕಾರ ಸರ್ಕಾರಕ್ಕೆ ಅಧಿಕಾರವಿಲ್ಲ. ಆ ಅಧಿಕಾರವನ್ನು ತೆಗೆದುಕೊಳ್ಳಲು ಈ ಬಿಲ್ಲನ್ನು ತಂದಿದೆ. ಇದಕ್ಕೆ ಮಾನ್ಯ ಸಭಿಕರು ದಯವಿಟ್ಟು ಅವಕಾಶ ಕಲ್ಪಿಸಿಕೊಡಬೇಕೆಂದು ಈ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದ್ದೇನೆ.

Mr. SPEAKER.—Motion moved:—

"That the Mysore Town Municipalities (Amendment) Bill, 1951, be taken into consideration."

---

* Speeches asterisked indicate than they have not been revised by Hon'ble Members concerned.

V-31'N51
N51-4-2

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ಈ ಮಸೂದೆಯನ್ನು ನಾನು ವಿರೋಧಿಸುತ್ತಿಲ್ಲ. ಆದರೆ ಈ ವಿಚಾರದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ ಅದು ಅಷ್ಟು ಸಮರ್ಪಕವಾಗಿಲ್ಲ ಎಂದು ಹೇಳಬೇಕಾಗಿದೆ. ಈ ಹೊಸ ಮಸೂದೆಯನ್ನು ಈಗಾಗಲೇ ಸರ್ಕಾರದವರು ಹಿಂದಿನ ಅಧಿವೇಶನದಲ್ಲಿ ಆಕ್ಟಾಗಿ ತಂದಿದ್ದರು. ಅದರಲ್ಲಿ ಕೆಲವು ಅಂಶಗಳ ಬಗ್ಗೆ ವರದಿ ಸಲ್ಲಿಸಬೇಕೆಂದು ಒಂದು ಸಮಿತಿಯನ್ನು ಮಾಡಿ ಅದಕ್ಕೆ ಆ ಮಸೂದೆಯನ್ನು ಕಳುಹಿಸಿದ್ದರು. ಶ್ರೀ ಭೀಮಪ್ಪನಾಯಕರೇ ಅದಕ್ಕೆ ಅಧ್ಯಕ್ಷರಾಗಿದ್ದರು. ಈಗ ಸಮಿತಿಯ ವರದಿಯು ಬಂದಿದೆ. ಹೊಸ ಆಕ್ಟ್ ಬರುತ್ತದೆ. ಅದರ ಪ್ರಕಾರ ಚುನಾವಣೆ ಯಾಗಬೇಕೆಂದು ಹೇಳುತ್ತಿದ್ದಾರೆ. ಆದರೆ ಕಳೆದ ವರ್ಷ ಕೆಲವು ಕಡೆ ಚುನಾವಣೆ ನಡೆದು ಹೋಗಿದೆ. ಆ ರೀತಿ ನಡೆಯುವುದಕ್ಕೆ ಬಿಡಬಾರದಾಗಿತ್ತು. ಇದರ ಮೇಲೆ 1950ನೇ ಸೆಪ್ಟೆಂಬರಿನಲ್ಲಿ ನಡೆದ ಅಧಿವೇಶನದಲ್ಲಿ ಒಂದು ಪ್ರಶ್ನೆ ಕೂಡ ಬಂದಿದೆ. ಹಿಂದೆ ಅನುಸರಿಸಿರುವ ನೀತಿಯಿಂದ ಬಹಳ ತೊಂದರೆ ಆಗಿದೆ. ಕೆಲವು ಕಡೆ ಟೌನ್ ಮುನಿಸಿಪಾಲಿಟಿಗಳಲ್ಲಿ ಚುನಾವಣೆಗೆ ಜನರು ತಯಾರಾಗಿದ್ದರೆ, ಅಂಥ ಕಾಲದಲ್ಲಿ ಅರ್ಜಿ ಬಂದಿದೆ ಯೆಂದೋ ಅಥವಾ ಬೇರೊಂದು ಕಾರಣದಿಂದಲೋ ಒಂದು ನೆಪ ಹೇಳಿ ಎರಡು ಮೂರು ಸಾರಿ ಚುನಾವಣೆಯನ್ನು ನಿಲ್ಲಿಸಿದ್ದರಿಂದ ಜನರಿಗೆ ತೊಂದರೆಯಾಗಿದೆ. 1950ನೆಯ ಇಸವಿ ಸೆಪ್ಟೆಂಬರಿನಲ್ಲಿ ನಡೆದ ಅಧಿವೇಶನದಲ್ಲಿ ಈ ಸಂಬಂಧದಲ್ಲಿ ಒಂದು ಪ್ರಶ್ನೆಯು ಬಂದು ಅದು 177ನೆಯ ಪುಟದಲ್ಲಿ ಮುದ್ರಣವಾಗಿದೆ. ಅದರ ಪ್ರಕಾರ ಈ ಕೆಳಗೆ ಕಂಡಂತೆ ಹನ್ನೊಂದು ಮುನಿಸಿಪಾಲಿಟಿಗಳ ಕಾಲಾವಧಿಯನ್ನು ಹೆಚ್ಚಿಸಲಾಗಿದೆ:—

	ಮುನಿಸಿಪಾಲಿಟಿಯ ಹೆಸರು			ಹೆಚ್ಚಿಸಿದ ಕಾಲಾವಧಿ
1.	ಹರಿಹರ ಟೌನ್ ಮುನಿಸಿಪಾಲಿಟಿ		...	1-1-1950ರಿಂದ 30-6-50ರವರೆಗೆ
2.	ಚಳ್ಳಕೆರೆ	ಡಿಟೋ	...	1-1-1950ರಿಂದ 30-6-50ರವರೆಗೆ
3.	ಚಿತ್ರದುರ್ಗ	ಡಿಟೋ	...	1-7-50ರಿಂದ 1951ನೆಯ ಮಾರ್ಚಿ ಅಖೈರುವರೆಗೆ.
4.	ಹಿರಿಯೂರು ಮೈನರ್ ಮುನಿಸಿಪಾಲಿಟಿ			1950ನೆಯ ಜೂನ್ ಅಖೈರುವರೆಗೆ
5.	ಹೊಸದುರ್ಗ	ಡಿಟೋ	...	1950ನೆಯ ಡಿಸೆಂಬರ್ ಅಖೈರುವರೆಗೆ
6.	ಮಾಯಕೊಂಡ	ಡಿಟೋ	...	ಡಿಟೋ
7.	ನ್ಯಾಮತಿ	ಡಿಟೋ	...	15-7-1950ರವರೆಗೆ
8.	ಚನ್ನಗಿರಿ	ಡಿಟೋ	...	ಎರಡು ತಿಂಗಳು
9.	ಶಿರಾಳಕೊಪ್ಪ	ಡಿಟೋ	...	ಐದು ತಿಂಗಳು
10.	ಬಾಣಾವರ	ಡಿಟೋ	...	1-7-50ರಿಂದ 1950ನೆಯ ಡಿಸೆಂಬರ್ ಅಖೈರುವರೆಗೆ.
11.	ತುಮಕೂರು ಟೌನ್ ಮುನಿಸಿಪಾಲಿಟಿ			1950ನೆಯ ಜನವರಿ ಒಂದು ತಿಂಗಳು.

ಇದನ್ನು ನೋಡಿದರೆ ಒಂದು ವರ್ಷದಲ್ಲಿ ಎರಡು ಮೂರು ಸಾರಿ ಚುನಾವಣೆಗೆ ತಯಾರಾಗಿದ್ದರೆಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಕಳೆದ ವರ್ಷ ಚುನಾವಣೆಯಾಗಿದ್ದರೆ ಪುನಃ ಮುಂದುವರಿಸುತ್ತಿರಲಿಲ್ಲ. ಆಗಲೇ ಯೋಚನೆ ಮಾಡಿ ಇಂಥ ಒಂದು ಮಸೂದೆಯನ್ನು ಹಿಂದೆಯೇ ತಂದು ಕಾಲಾವಧಿಯನ್ನು ಹೆಚ್ಚಿಸಲು ಅವಕಾಶವಿದ್ದರೆ ಹಾಗೆ ಮಾಡಿದ್ದರೆ ಚೆನ್ನಾಗಿತ್ತು. ಅದು ಬಿಟ್ಟು ಈ ರೀತಿ ಯಾಗಿ ಮುಂದುವರಿಸುವುದರಿಂದ ಕಷ್ಟ. ಸರ್ಕಾರದವರು ಸಾಧಕಬಾಧಕಗಳನ್ನು ಮೊದಲೇ ಯೋಚಿಸಿ ಸರಿಯಾದ ಕಾರ್ಯಕ್ರಮ ಮುಂಚೆಯೇ ಕೈಕೊಳ್ಳಬೇಕಾಗಿತ್ತು. ಇಷ್ಟು ಹೇಳಿ ಈ ಮಸೂದೆಗೆ ಸಮ್ಮತಿ ಕೊಡುತ್ತೇನೆ

*ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಮಾನ್ಯ ಸಿದ್ದಪ್ಪನವರು ಹೇಳಿದ ವಿಚಾರ ವಾಸ್ತವವಾಗಿದೆ. ಅನೇಕ ಮುನಿಸಿಪಾಲಿಟಿಗಳಲ್ಲಿ ಹಿಂದಿನ ಕಾನೂನು ಪ್ರಕಾರ ಚುನಾವಣೆಯು ಬೇರೆ ಬೇರೆ ಕಾಲದಲ್ಲಿ ನಡೆಯುತ್ತಿತ್ತು. ಅದು ಸರಿಯಲ್ಲ, ಮೈಸೂರು ದೇಶದಲ್ಲೆಲ್ಲಾ ಒಂದೇ ರೀತಿಯಾಗಿರಬೇಕು ಎಂದು ಯೋಚನೆ ಮಾಡಿ ಏರ್ಪಾಡು ಮಾಡಲಾಗಿದೆ. ಹಾಗೆ ಮಾಡುವುದಕ್ಕಾಗಿಯೇ ಕೆಲವು ಮುನಿಸಿಪಾಲಿಟಿಗಳ ಕಾಲಾವಧಿಯನ್ನು ಹೆಚ್ಚಿಸಲಾಯ್ತು. ಹೊಸ ಕಾನೂನು ಪ್ರಕಾರ ಮೈಸೂರು ಸಂಸ್ಥಾನದಲ್ಲೆಲ್ಲಾ ಒಂದೇ ಕಾಲದಲ್ಲಿ ಚುನಾವಣೆಯಾಗುತ್ತದೆ. ಮುಂದೆ ತೊಂದರೆಗೆ ಅವಕಾಶವಿರುವುದಿಲ್ಲ. ಇದಕ್ಕಾಗಿ ರಚಿಸಿದ ಕಾನೂನಿನಲ್ಲಿದ್ದ ಲೋಪ ದೋಷಗಳನ್ನು ಸರಿಪಡಿಸುವುದಕ್ಕಾಗಿ ಶ್ರೀ ಭೀಮಪ್ಪನಾಯಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಅವರು ಎಲ್ಲವನ್ನೂ ಪರಿಶೀಲಿಸಿದ್ದಾರೆ. ಈಗ ಈ ಕಾನೂನನ್ನು ಜಾರಿಗೆ ತರುವುದರಿಂದ ಇನ್ನು ಮುಂದೆ ತೊಂದರೆಯಾಗುವುದಿಲ್ಲ. ಆ ಕಾರಣದಿಂದ ಈ ತಿದ್ದುಪಡಿ ಮಸೂದೆಗೆ ದಯವಿಟ್ಟು ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕು.

Mr. SPEAKER.—The question is:

"That the Mysore Town Municipalities (Amendment) Bill, 1951, be taken into consideration."

The motion was adopted.

Mr. SPEAKER.—The clauses of the Bill will now be submitted to the Assembly. Clause 2. There is an amendment in the name of Sri A. Bheemappa Naik.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—Sir, I beg to move:

"That in clause 2, for the words 'five years,' the words 'four years and six months' shall be substituted."

ಸ್ವಾಮಿ, ಈಗ ಮಾನ್ಯ ಮಂತ್ರಿಗಳವರು "4" ಎಂಬ ಪದವನ್ನು 5 ಎಂಬುದಾಗಿ ಹಾಕಿ 5 ವರ್ಷಕಾಲ ಹೆಚ್ಚಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರವಿರಬೇಕೆಂದು ಕೇಳಿದ್ದಾರೆ. ಈ ಮುನಿಸಿಪಾಲಿಟಿಗಳು ಈಗಾಗಲೇ ಮೂರು ವರ್ಷ ಆಗಿ 4ನೇ ವರ್ಷದಲ್ಲಿ ಕಾಲಿಟ್ಟಿವೆ. ನಾಲ್ಕನೇ

* Speeches asterisked indicate that they have not been revised by Hon'ble Members concerned.

ವರ್ಷ ಪೂರೈಸುತ್ತಾ ಇದೆ. ಈಗ ವಿಲೇಜ್ ಪಂಚಾಯಿತಿ ಚುನಾವಣೆ ಆಗಿ ವಿಲೇಜ್ ಪಂಚಾಯಿತಿ ಪ್ರತಿನಿಧಿಗಳು ಮತ್ತೆ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಓಟು ಮಾಡುವುದು ಇವೆ. ಈ ಎಲ್ಲಾ ಕಾರಣದಿಂದ ಇದು ಒಂದು ವರ್ಷ ಆದರೂ ಆಗಬಹುದು. ಅದೂ ಅಲ್ಲದೆ ಮುನಿಸಿಪಾಲಿಟಿಗೆ ಸಂಬಂಧಪಟ್ಟಂತೆ ಮಸೂದೆಯೂ ಕೂಡ ಅಂಗೀಕಾರವಾಗಿ ಇದಕ್ಕೆ ಸಂಬಂಧಪಟ್ಟ ರೂಲ್ಸ್ ಸಹ ಆಗುತ್ತಾ ಇದೆ ಎಂದು ಕೇಳಿದ್ದೇನೆ. ಮುನಿಸಿಪಾಲಿಟಿಯವರು ತಮ್ಮ ತಮ್ಮ ಕಾನ್‌ಸ್ಟಿಟ್ಯುಯನ್‌ಸಿಯಿಂದ ಒಬ್ಬೊಬ್ಬ ಸದಸ್ಯರನ್ನೂ ಸೂಚಿಸಬೇಕೆಂದು ಸರ್ಕಾರದಿಂದ ಆಗಲೆ ಅಪ್ಪಣೆ ಕೂಡ ಅನೇಕ ಮುನಿಸಿಪಾಲಿಟಿಗಳಿಗೆ ಬಂದಿದೆ. ಎಲ್ಲಾ ಮುನಿಸಿಪಾಲಿಟಿಗಳವರೂ ತಯಾರು ಮಾಡುತ್ತಾ ಇದ್ದಾರೆ. ಆದ್ದರಿಂದ ಒಂದು ವರ್ಷ ಬೇಡ. 6 ತಿಂಗಳು, ಎಂದರೆ $4\frac{1}{2}$ ವರ್ಷ ಎಂದು ಇದ್ದರೆ ಸಾಕು. ಡಿಸೆಂಬರ್ ಆಖೈರಿನ ವರೆಗೆ ಮಾಡಬಹುದು. ಅಷ್ಟು ಕಾಲ ಏಕೆ ತೆಗೆದುಕೊಳ್ಳುತ್ತೀರಿ?

ಶ್ರೀ ಎಲ್. ಸಿದ್ದಪ್ಪನವರು.—ಒಂದು ವರ್ಷ ಟೈಂ ತೆಗೆದುಕೊಂಡರೆ ಮತ್ತೊಂದು ಸ್ಪೆಷಲ್‌ನೋಟಿಫಿಕೇಷನ್ ಹೊರಡಿಸಬಹುದು, ನಂತರ 3 ತಿಂಗಳು 6 ತಿಂಗಳು ಬೇಕಾದರೂ ತೆಗೆದುಕೊಳ್ಳಬಹುದು.

ಶ್ರೀ ಎ. ಭೀಮಪ್ಪನಾಯಕರು.—ಆದಷ್ಟು ಜಾಗ್ರತೆ ಹೊಸ ಚುನಾವಣೆ ಆಗಲಿ, ಬಹಳ ದಿನ ಮುಂದೆ ಹೋಗಬಾರದು ಎಂಬ ಉದ್ದೇಶದಿಂದ 6 ತಿಂಗಳು ಸಾಕೆಂದು ಸೂಚಿಸಿದ್ದೇನೆ. ವಿಧಿ ಇಲ್ಲದೆ ಮುಂದುವರಿಸಬೇಕೆಂದರೆ ಮುಂದುವರಿಸುತ್ತಾರೆ. ಮಾನ್ಯ ಮಂತ್ರಿಗಳೂ ಸಹ ಇದನ್ನು ಜಾಗ್ರತೆ ಮಾಡಬೇಕೆಂದು ಬಹಳ ಉಮೇದಿನಿಂದ ಇದ್ದಾರೆ. ಆದ್ದರಿಂದ ಇದನ್ನು ದಯವಿಟ್ಟು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved:

"That in Clause 2 for the words 'five years' the words 'four years and six months' shall be substituted."

ಶ್ರೀ ಎಲ್. ಸಿದ್ದಪ್ಪನವರು.—ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಏಕೆಂದರೆ ಆಗಲೇ ನಾನು ಸೂಚನೆ ಕೊಟ್ಟೆ, ಜನರಲ್ ಎಲೆಕ್ಷನ್ ಇನ್ನು 6 ತಿಂಗಳ ಒಳಗೇ ಬರುವುದರಿಂದ ಈ ಚುನಾವಣೆಯನ್ನು ಅಷ್ಟರೊಳಗೇ ಮಾಡುವುದು ಸೂಕ್ತವಲ್ಲ. ಒಂದು ವರ್ಷಕ್ಕೆ ಅಧಿಕಾರ ತೆಗೆದುಕೊಂಡು ಜನರಲ್ ಎಲೆಕ್ಷನ್ ಎಲ್ಲಾ ಆದಮೇಲೆ ನಮ್ಮ ನೆರೆ ಪ್ರಾಂತ್ಯವಾದ ಮದರಾಸಿನವರು ಯಾವ ರೀತಿ ಮಾಡಬೇಕೆಂದಿದ್ದಾರೋ ಆ ರೀತಿ ಮಾಡುವುದು ಒಳ್ಳೆಯದು. ಅವರು ಜನರಲ್ ಎಲೆಕ್ಷನ್ ಆದಮೇಲೆ ಲೋಕಲ್ ಬೋರ್ಡ್, ವಿಲೇಜ್ ಪಂಚಾಯಿತಿ ಡಿಸ್ಟ್ರಿಕ್ಟ್ ಬೋರ್ಡ್ ಇವುಗಳ ಚುನಾವಣೆ ಇಟ್ಟುಕೊಳ್ಳಬೇಕೆಂದಿದ್ದಾರೆ. ಮೈಸೂರು ಸರ್ಕಾರದವರೂ ಅದೇ ರೀತಿ ಒಂದು ನಿರ್ಧಾರಕ್ಕೆ ಬರಲೆಂಬುದು ನನ್ನ ಅಭಿಲಾಷೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳುವ ಹಾಗೆ ಮಾಡುವುದಾದರೆ ಈ ತಿದ್ದುಪಡಿ ಬೇಕಾಗುವುದಿಲ್ಲ. 6 ತಿಂಗಳ ಒಳಗೇ ಚುನಾವಣೆ ನಡೆಸುವುದು ಸೂಕ್ತ ಎಂದು ಕಂಡುಬಂದರೆ ಆ ರೀತಿ ಮಾಡುವುದಕ್ಕೆ ಬಾಧಕವೇನೂ ಇಲ್ಲ. ಆದ್ದರಿಂದ ಒಂದು ವರ್ಷ ಅಧಿಕಾರ ಕೇಳಿರುವುದು ಸೂಕ್ತವೆಂದು ತೋರುತ್ತದೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾನ್ಯ ಸದಸ್ಯರಿಬ್ಬರು ಹೇಳುವುದಕ್ಕೂ ನನಗೆ ಒಪ್ಪಿಗೆ ಇದೆ. ಅವರು 6 ತಿಂಗಳು ಮಾಡಬೇಕೆಂದರೆ ನಾವಂತೂ ತಯಾರಾಗಿದ್ದೇವೆ. ರೂಲ್ಸ್ ತಯಾರಾಗಿದೆ. 6 ತಿಂಗಳ ಒಳಗೆ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಹೆಚ್ಚಾಗಿ ಅವಕಾಶವಿರಲಿ ಎಂಬ ಉದ್ದೇಶದಿಂದ ಒಂದು ವರ್ಷವಾದರೂ ಇರಲೆಂದು ಶ್ರೀ ಸಿದ್ದಪ್ಪನವರು ಹೇಳುತ್ತಾರೆ. ಆದ್ದರಿಂದ ಶ್ರೀ ಭೀಮಪ್ಪನಾಯಕರು ಇದನ್ನು ವಾಪಸು ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಬಹುದು. I accept his amendment.

Mr. SPEAKER.—The question is:

"That in Clause 2 for the words 'five years' the words 'four years and six months' shall be substituted."

The motion was adopted.

Mr. SPEAKER.—The question is:

"That Clause 2, as amended, stand part of the Bill."

The motion was adopted.

Clause 2, as amended, was added to the Bill.

Mr. SPEAKER.—Clause 1.

The question is:

"That Clause 1 stand part of the Bill."

The motion was adopted.

Clause 1 was added to the Bill

Mr. SPEAKER.—Title and Preamble.

The question is:

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri R. CHENNIGARAMIAH.—Sir, I beg to move:

"That the Mysore Town Municipalities (Amendment) Bill, 1951, as amended, be passed."

Mr. SPEAKER.—The question is:

'That the Mysore Town Municipalities (Amendment) Bill, 1951, as amended, be passed."

The motion was adopted.

Mr. SPEAKER.—In respect of the next Bill, *viz.*, the Mysore Village Panchayets and District Boards Bill, 1951, there are some amendments tabled by Sri L. Siddappa. They have

(MR. SPEAKER.)

not yet been printed. They will be got printed tomorrow. So this Bill may be taken up tomorrow for consideration.

The Hon'ble Minister for Local Self-Government may now move the Mysore University (Amendment) Bill, 1951.

The Mysore University (Amendment) Bill, 1951.

Motion to consider.

*The Hon'ble Sri R. CHENNIGARAMIAH (Minister for Local Self-Government).—Sir, I beg to move:

"That the Mysore University (Amendment) Bill, 1951, as reported by the Select Committee be taken into consideration."

ಈ ವಿಷಯದಲ್ಲಿ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಿ ವರದಿ ಒಪ್ಪಿಸಿದ್ದಾರೆ. ಒಂದಂಶವನ್ನು ಮಾತ್ರ ಸ್ವಲ್ಪ ಬದಲಾವಣೆ ಮಾಡಿದ್ದಾರೆ. ಈ ಸಭೆಯಿಂದ 8 ಜನರನ್ನು ಕಳುಹಿಸಬೇಕೆಂದು ಮಸೂದೆಯಲ್ಲಿ ಇತ್ತು. ಅದನ್ನು 12 ಜನಕ್ಕೆ ಹೆಚ್ಚಿಸಬೇಕೆಂದು ಸೆಲೆಕ್ಟ್ ಸಮಿತಿಯವರು ಶಿಫಾರಸು ಮಾಡಿದ್ದಾರೆ. ಅದಕ್ಕೆ ಸಭೆಯವರು ಒಪ್ಪಿಗೆ ಕೊಟ್ಟು ಈ ಮಸೂದೆಯನ್ನು ಅಂಗೀಕಾರ ಮಾಡಬೇಕೆಂದು ಹೇಳಿ ಸಭೆಯ ಮುಂದಿಟ್ಟಿದ್ದೇನೆ.

Mr. SPEAKER.—The question is:

"That the Mysore University (Amendment) Bill, 1951, as reported by the Select Committee, be taken into consideration."

The motion was adopted.

Mr. SPEAKER.—The clauses of the Bill will now be taken up. Clause 3.

The question is:

"That clause 3 stand part of the Bill."

The motion was adopted.

Clause 3 was added to the Bill.

Mr. SPEAKER.—Clause 2. There is an amendment in respect of this Clause by Sri L. Siddappa.

Sri L. SIDDAPPA (Shimoga District-General).—I beg to move:

"That the following words shall be added at the end of clause (h):

'by the system of the single transferable vote'."

It is said that twelve members are to be elected by the Legislative Assembly. I have said that these twelve members have to be elected by adopting the system of single transferable vote by means of proportional representation.

Mr. SPEAKER.—Amendment moved:

"That the following words shall be added at the end of clause (h):

'by the system of the single transferable vote'."

The Hon'ble Sri R. CHENNIGARAMIAH.—I accept the amendment.

Mr. SPEAKER.—The question is:

"That the following words shall be added at the end of clause (h):

'by the system of the single transferable vote'."

The motion was adopted.

Mr. SPEAKER.—The question is:

"That clause 2, as amended, stand part of the Bill."

The motion was adopted.

Clause 2, as amended, was added to the Bill.

Mr. SPEAKER.—Clause 1.

The question is:

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble.

The question is:

"That the Title and the Preamble stand part of the Bill."

The Title and the Preamble were added to the Bill.

Motion to pass.

The Hon'ble Sri R. CHENNIGARAMIAH.—Sir, I beg to move:

"That the Mysore University (Amendment Bill, 1951, as amended, be passed."

Mr. SPEAKER.—The question is:

"That the Mysore University (Amendment) Bill, 1951, as amended, be passed."

The motion was adopted.

---

* Speech not revised by the Hon'ble Member concerned.

The City of Bangalore Municipal Corporation (Amendment) Bill, 1951.

Motion to consider.

*The Hon'ble Sri R. CHENNIGARAMIAH (Minister for Local Self-Government).—I beg to move :

"That the City of Bangalore Municipal Corporation (Amendment) Bill, 1951, as reported by the Select Committee, be taken into consideration."

ಈ ಕಾರ್ಪೊರೇಷನ್ ಬಿಲ್ಲು ಹಿಂದಿನಸಾರಿ ಈ ಸಭೆಯ ಮುಂದೆ ಬಂದಿದ್ದು ಸಭೆಯವರು ಇದನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸಿಕೊಟ್ಟಿದ್ದರು. ಸೆಲೆಕ್ಟ್ ಸಮಿತಿಯವರು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಇದರಲ್ಲಿ ಬಹಳ ಮುಖ್ಯವಾದ ಕೆಲವು ಅಂಶಗಳನ್ನು ಬದಲಾವಣೆ ಮಾಡಿದ್ದಾರೆ. ಈಗಿರತಕ್ಕ ಕಾರ್ಪೊರೇಷನ್ ಕೌನ್ಸಿಲ್‌ನವರು ಕೆಲವು ಅಭಿಪ್ರಾಯಗಳನ್ನು ಅವರಿಗೆ ಸಂಬಂಧವಿಲ್ಲದಿದ್ದರೂ ಸಹ, ಕಾರ್ಪೊರೇಷನ್ ಕೌನ್ಸಿಲ್‌ಗೆ ಸಂಬಂಧಪಟ್ಟಿರುವುದರಿಂದ ಕೊಟ್ಟರು. ಹಿಂದಿನ ಸಾರಿಯೇ ಸೆಲೆಕ್ಟ್ ಸಮಿತಿಯ ವರದಿ ಸಭೆಯ ಮುಂದೆ ಬರಬೇಕಾಗಿತ್ತು. ಆದರೆ ಕೆಲವು ಕಾರ್ಪೊರೇಷನ್ ಸದಸ್ಯರು ಮತ್ತು ಮೇಯರು ಇವರ ಅಭಿಪ್ರಾಯದ ಮೇಲೆ ನಾವು ಇನ್ನೂ ಹೆಚ್ಚಾಗಿ ಅವರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಕಾರ್ಪೊರೇಷನ್ ಪ್ರತಿನಿಧಿಗಳನ್ನು ಸೆಲೆಕ್ಟ್ ಸಮಿತಿಯ ಮುಂದೆ ಬರಮಾಡಿಕೊಂಡು ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಕೆಲವು ಬದಲಾವಣೆಗಳನ್ನು ಮಾಡಲಾಯಿತು. ಸೆಲೆಕ್ಟ್ ಸಮಿತಿಯವರೆಲ್ಲರೂ ಒಂದೇ ಮನಸ್ಸಿನಿಂದ ಈ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಯಾವ ಡಿಸೆಂಟಿಂಗ್ ನೋಟೂ ಇಲ್ಲ. ಬಹುಮಟ್ಟಿಗೆ ಕಾರ್ಪೊರೇಷನ್ ಕೌನ್ಸಿಲ್‌ನವರ ಅಭಿಪ್ರಾಯವನ್ನು ತೆಗೆದುಕೊಂಡು ಅವರು ಹೇಳಿದ ಅನೇಕ ಅಂಶಗಳನ್ನು ಸೆಲೆಕ್ಟ್ ಸಮಿತಿಯವರು ಒಪ್ಪಿಕೊಂಡು ಬದಲಾವಣೆ ಮಾಡಿದ್ದಾರೆ.

ಆದುದರಿಂದ ಈಗ ಸೆಲೆಕ್ಟ್ ಸಮಿತಿಯ ವರದಿಯ ಪ್ರಕಾರ ಮಸೂದೆ ಬಹುಮಟ್ಟಿಗೆ ಉತ್ತಮಗೊಂಡು ಸಮರ್ಪಕವಾಗಿದೆ. ಇದನ್ನು ಸಭೆ ಒಪ್ಪುವುದರಲ್ಲಿ ತೊಂದರೆಯಿಲ್ಲ. ಈಗ ಬದಲಾವಣೆಯಾಗಿರತಕ್ಕ ಅಂಶಗಳು ಅಗತ್ಯವೆಂದು ಅಭಿಪ್ರಾಯಪಟ್ಟು ಸಮಿತಿಯ ಸದಸ್ಯರೆಲ್ಲರೂ ಒಂದೇ ಮನಸ್ಸಿನಿಂದ ತಮ್ಮ ವರದಿಯನ್ನು ಕಳುಹಿಸಿದ್ದಾರೆ. ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ ಸಭೆಯ ಮುಂದಿಟ್ಟಿದ್ದೇನೆ.

Mr. SPEAKER.—Motion moved :

"That the City of Bangalore Municipal Corporation (Amendment) Bill, 1951, as reported by the Select Committee, be taken into consideration."

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಮೇಯರ್ ಮತ್ತು ಕಾರ್ಪೊರೇಟರುಗಳ ಅಭಿಪ್ರಾಯವನ್ನು ಯಾವಾಗ ತೆಗೆದುಕೊಂಡದ್ದು ? ಪತ್ರಿಕೆಗಳಲ್ಲಿ ಇತ್ತೀಚೆಗೆ ನಾನು ಓದಿದುದರಲ್ಲಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಲಿಲ್ಲವೆಂದು ವ್ಯಕ್ತವಾಯಿತು. ಇತ್ತೀಚೆಗೆ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗಿದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನನಗೂ ಆಶ್ಚರ್ಯವಾಯಿತು! ಅವರ ಅಭಿಪ್ರಾಯಗಳಿಗೆ ಕೊನೆಯೇ ಇಲ್ಲವೆಂದು ಕಾಣುತ್ತದೆ, ಹಿಂದೆಯೇ ಈ ಸಭೆ ನಡೆಯುತ್ತಿರುವಾಗ ಕೆಲವು ಕಾರ್ಪೊರೇಟರುಗಳೂ ಮೇಯರ್‌ರೂ ಬಂದು ತಮ್ಮ ಅಭಿಪ್ರಾಯ ಕೊಟ್ಟರು.........

ಅಧ್ಯಕ್ಷರು.—ಅವರ ಅಭಿಪ್ರಾಯವನ್ನು ತೆಗೆದುಕೊಂಡದ್ದರಲ್ಲಿ, Corporation as such ಅವರು ಅಭಿಪ್ರಾಯಕೊಟ್ಟರೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು.

ಶ್ರೀ ಎಲ್. ಸಿದ್ದಪ್ಪನವರು.—ಇಂತಹ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಮುನಿಸಿಪಾಲಿಟಿಗಳಿಗೆ ಮಸೂದೆಯ ಒಂದು ಪ್ರತಿಯನ್ನು ಕಳುಹಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ರೂಢಿ. ಡೆಪ್ಯುಟಿ ಕಮೀಷನರ ಅಭಿಪ್ರಾಯವನ್ನು ಅಫಿಷಿಯಲ್ ಆಗಿ ತೆಗೆದುಕೊಳ್ಳುವುದೂ ಉಂಟು. ಈ ಪದ್ಧತಿಯನ್ನು ಸರ್ಕಾರದವರು ಅನುಸರಿಸಿದ್ದಾರೆಯೆ ? ಕಾರ್ಪೊರೇಷನ್‌ನವರು ಮಸೂದೆಯನ್ನು ಅವರ ಪರಿಶೀಲನೆಗೆ ಇಟ್ಟುಕೊಂಡು ನಂತರ ಅವರ ಅಭಿಪ್ರಾಯವನ್ನು ಕಳುಹಿಸಿದರೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಂತಹ ಮಸೂದೆಯನ್ನು ಸಭೆಯ ಮುಂದೆ ತರಬೇಕಾಗಿದ್ದರೆ ಅವರನ್ನು ಕೇಳಬೇಕೆಂದು ವಿಧಿಯೇನೂ ಇಲ್ಲ. ಉದಾಹರಣೆಗೆ ಡಿಸ್ಟ್ರಿಕ್ಟ್ ಬೋರ್ಡ್ ಸಂಬಂಧವಾಗಿ ಒಂದು ಮಸೂದೆಯನ್ನು ತರಬೇಕಾದರೆ ಆ ಡಿಸ್ಟ್ರಿಕ್ಟ್ ಬೋರ್ಡ್‌ನವರನ್ನು ಕೇಳಿ ನಂತರ ತರಬೇಕೆಂಬ ನಿರ್ಬಂಧವೇನೂ ಇಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ಹಾಗೆ ಅವರ ಅಭಿಪ್ರಾಯವನ್ನು ತಿಳಿಯುವುದು ಸಾಧುವಾದ ಮಾರ್ಗವೆಂದು ಹೇಳುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕಾರ್ಪೊರೇಷನ್‌ನವರು ಒಂದು ನಿರ್ಣಯ ಮಾಡಿ ಅದರಂತೆ ಒಂದು ಸಮಿತಿಯನ್ನು ನೇಮಕಮಾಡಿ ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಏರ್ಪಾಡುಮಾಡಿದರು. ಹೋದಸಾರಿ ಈ ಸಭೆ ನಡೆಯುತ್ತಿರುವಾಗ ಸೆಲೆಕ್ಟ್ ಸಮಿತಿಯವರು ಈ ಮಸೂದೆಯನ್ನು ಪರಿಶೀಲಿಸಿ ವರದಿಯನ್ನು ತಯಾರಿಸಿದ್ದರು. ಆ ಸಂದರ್ಭದಲ್ಲಿ ಮೇಯರ್‌ರವರು ಮತ್ತು ಕಾರ್ಪೊರೇಷನ್ನಿನ ಕೆಲವು ಸದಸ್ಯರು ಈ ಮಸೂದೆಯ ಕೆಲವು ಭಾಗಗಳನ್ನು ಪುನರ್ವಿಮರ್ಶೆಮಾಡಬೇಕೆಂದು ಅಭಿಪ್ರಾಯವನ್ನು ಕೊಟ್ಟರು. ಕಾನೂನು ಪ್ರಕಾರ ನಾವು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂಬ ಕಡ್ಡಾಯ ಅಥವ ನಿಯಮವಿಲ್ಲದಿದ್ದರೂ ಸೆಲೆಕ್ಟ್ ಸಮಿತಿಯ ಮುಂದೆ ಕಾರ್ಪೊರೇಷನ್ ಸದಸ್ಯರನ್ನು ಕರೆಸಿ ಎವಿಡೆನ್ಸ್ ತೆಗೆದುಕೊಳ್ಳಲು ಅವಕಾಶವಿದೆ. ಇದರ ಪ್ರಕಾರ ನಾವು ಅವರನ್ನು ಕರೆಸಿದೆವು. ಮೇಯರ್ ಮತ್ತು ಕೆಲವು ಸದಸ್ಯರು ಬಂದು ಅಭಿಪ್ರಾಯ ಕೊಟ್ಟರು. ಅವರು ಸೂಚಿಸಿದ ಕೆಲವು ಅಭಿಪ್ರಾಯಗಳನ್ನು ಒಪ್ಪಿಕೊಳ್ಳಲಾಗಿದೆ. ಎಲ್ಲೆಲ್ಲಿ ಸಾಧ್ಯವೋ ಅಂತಹ ಸಂದರ್ಭಗಳಲ್ಲಿ ಅವರ ಅಭಿಪ್ರಾಯಗಳನ್ನು ತೆಗೆದುಕೊಳ್ಳುವುದರಲ್ಲಿ ದೋಷವೇನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಅವರ ಅಭಿಪ್ರಾಯಗಳನ್ನು ಒಪ್ಪಬಹುದು ಮತ್ತೆ ಕೆಲವು ಸಂದರ್ಭಗಳಲ್ಲಿ ಒಪ್ಪದೇಯಿರಬಹುದು.. ಈ ರೀತಿ ಮಾಡುವುದು ಕಾನೂನಿಗೆ ವಿರುದ್ಧವೇನೂ ಅಲ್ಲ. ಇಷ್ಟೆಲ್ಲ ನಡೆದ ಮೇಲೆ, ಸೆಲೆಕ್ಟ್ ಸಮಿತಿಯವರು ತಮ್ಮ ವರದಿಯನ್ನು ಸಭೆಗೆ ಕಳುಹಿಸಿದ ಮೇಲೆ ಕಾರ್ಪೊರೇಷನ ಮ

* Speech not revised by the Hon'ble Member concerned.

ಮೊನ್ನೆ ಇನ್ನೊಂದು ನಿರ್ಣಯವನ್ನು ಮಾಡಿದ್ದಾರೆ. ಅಷ್ಟರಲ್ಲಾಗಲೇ ಸೆಲೆಕ್ಟ್ ಸಮಿತಿಯ ವರದಿ ಮಾನ್ಯ ಸದಸ್ಯರಿಗೆ ಹಂಚಿಕೆಯಾಗಿತ್ತು. ಸೆಲೆಕ್ಟ್ ಸಮಿತಿ ಬಹುಮಟ್ಟಿಗೆ ಕಾರ್ಪೊರೇಷನವರು ಕೊಟ್ಟಿದ್ದ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟಿದೆ. ಹಾಗಿದ್ದರೂ ಮೊನ್ನೆ ಎರಡನೆಯ ಸಾರಿ ಅವರು ಬೇರೆ ನಿರ್ಣಯಮಾಡಿದ್ದಾರೆ. ಹಿಂದೆ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಸೆಲೆಕ್ಟ್ ಸಮಿತಿಯವರು ಸರ್ವಾನುಮತದಿಂದ ಅಭಿಪ್ರಾಯ ಕೊಟ್ಟಿದ್ದಾರೆ........

Janab SYED ABDUR RAHMAN (Chikmagalur *cum* Shimoga-Muslim).—There is one point. It is stated that some of the members of the Corporation had interviewed the Select Committee and that those members of the Corporation had the authority from the Corporation. Is that so?

The Hon'ble Sri R. CHENNIGARAMIAH.—Yes.

Janab SYED ABDUR RAHMAN.—Were those members present before the Select Committee?

The Hon'ble Sri R. CHENNIGARAMIAH.—They were not present at the time of discussing the Bill. They were present to give the required information and their evidence was recorded. They were not a party to the discussion in the Select Committee.

Janab SYED ABDUR RAHMAN.—Were they present during the proceedings of the Select Committee?

The Hon'ble Sri R. CHENNIGARAMIAH.—Yes.

Janab SYED ABDUR RAHMAN.—Were all the suggestions given by the Corporation accepted by the Select Committee?

The Hon'ble Sri R. CHENNIGARAMIAH.—Most of them.

Janab SYED ABDUR RAHMAN.—Was the Select Committee in any way influenced by the members of the Corporation?

The Hon'ble Sri R. CHENNIGARAMIAH.—The members were convinced.

Janab SYED ABDUR RAHMAN.—On grounds of merit did the members accept the suggestions?

The Hon'ble Sri R. CHENNIGARAMIAH.—Yes.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಒಂದು ವಿಷಯವನ್ನು ತಿಳಿದುಕೊಳ್ಳಬೇಕಾಗಿದೆ. ಸೆಲೆಕ್ಟ್ ಸಮಿತಿಯ ಮುಂದೆ ಬಂದು ಎವಿಡೆನ್ಸ್ ಕೊಟ್ಟವರು ಮುನಿಸಿಪಲ್ ಕಾರ್ಪೊರೇಷನ್ ಪ್ರತಿನಿಧಿಗಳಾಗಿ ಬಂದಿದ್ದರೋ ಅಥವ ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ವೈಯಕ್ತಿಕವಾಗಿ ಬಂದಿದ್ದರೊ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ವೈಯಕ್ತಿಕವಾಗಿ ಅಲ್ಲವೆಂದು ಕಾಣುತ್ತದೆ. ಸರ್ಕಾರದವರು ತಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಹಿಂದೆ ಕಾರ್ಪೊರೇಷನ್ನಿನವರು ಒಂದು ನಿರ್ಣಯವನ್ನು ಮಾಡಿ ಕಳುಹಿಸಿದ್ದರು. ಆದರ ಮೇಲೆ ಸೆಲೆಕ್ಟ್ ಸಮಿತಿಯ ಮುಂದೆ ಕಾರ್ಪೊರೇಷನ್ನಿನ ಕೆಲವು ಮುಖಂಡರನ್ನು ಕರೆಯಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಭಾವಿಸಿ, ಸೆಲೆಕ್ಟ್ ಕಮಿಟಿ ಇಂತಹ ತಾರೀಖು ಸೇರುತ್ತದೆ, ನಿಮ್ಮ ಪರವಾಗಿ ಐದು ಜನರನ್ನು ಕರೆದುಕೊಂಡು ಬರಬಹುದೆಂದೂ ಅಭಿಪ್ರಾಯವನ್ನು ಕೊಡಬಹುದೆಂದೂ ಮೇಯರ್‌ರವರಿಗೆ ಬರೆಯಲಾಯಿತು. ಅದರ ಪ್ರಕಾರ ಮೇಯರ್‌ರವರು ಕಾರ್ಪೊರೇಷನ್ನಿನ ಆರು ಸಮಿತಿಗಳಿಗೆ ಛೇರ್ಮನ್ನರಾಗಿದ್ದವರನ್ನು ಕರೆದುಕೊಂಡು ಬಂದಿದ್ದರು. ಅವರು ಕಾರ್ಪೊರೇಷನ್ನಿನ ಪರವಾಗಿ ಅಭಿಪ್ರಾಯ ಕೊಟ್ಟಿದ್ದಾರೆಯೇ ವಿನಾ ವೈಯಕ್ತಿಕಾಭಿಪ್ರಾಯವನ್ನು ಕೊಟ್ಟಿಲ್ಲ.

Sri K. SAMPANGIRAMIAH.—Was there any resolution by the Corporation selecting these members to represent the Corporation?

The Hon'ble Sri R. CHENNIGARAMIAH.—That was not our concern. The Government were requested by the Corporation to invite some of those members and they accordingly invited the Mayor and we requested him to bring some other members also to attend the Select Committee meeting.

Sri H. K. VEERANNA GOWDA (Mandya District—General).—I propose that further discussion on this Bill may be continued tomorrow because we have got to study it in more detail.

The Hon'ble Sri R. CHENNIGARAMIAH.—I have no objection.

Mr. SPEAKER.—As there is no more work to be transacted now according to the business set down for the day, the House will adjourn and meet tomorrow at One of the Clock.

The Assembly adjourned at Two Minutes past Three of the Clock to meet again at One of the Clock on Tuesday, 29th May 1951.

WD 3189—GPB—500—30-6-51

LEGISLATIVE ASSEMBLY.

TWENTY-FIRST DAY.

Tuesday, 29th May 1951.

The Assembly met in the Assembly Hall, Old Public Offices, Bangalore, at Five Minutes past One of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS.

(To which oral answers were given)

Mr. SPEAKER (The Hon'ble Sri V. Venkatappa).—Questions. Question No. 128. Sri M. C. Sivananda Sharma. The Hon'ble Member is not present. The question will be treated as unstarred.

Question No. 196. Sri T. Madiah Gowda. The Hon'ble Member is not present. This question also will be treated as unstarred.

Superintendents and Assistant Superintendents of Police and their Promotions.

*ಪ್ರಶ್ನೆ 199.—ಶ್ರೀ ಬಿ. ಎಚ್. ಬೋರಣ್ಣಗೌಡರು (ಹಾಸನ ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಸಂಸ್ಥಾನದಲ್ಲಿ ಪೋಲೀಸ್ ಇಲಾಖೆಯಲ್ಲಿರುವ ಸೂಪರಿಂಟೆಂಡೆಂಟರುಗಳ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟರುಗಳ ಸಂಖ್ಯೆಯೆಷ್ಟು ;

(b) ಅವರು ಯಾವ ಯಾವ ಕೋಮಿಗೆ ಸೇರಿದವರು ;

(c) ಅವರು ಈಗಿನ ಹುದ್ದೆಗಳಿಗೆ ಬರುವ ಮೊದಲು ಯಾವ ಯಾವ ಹುದ್ದೆಗಳಲ್ಲಿದ್ದರು ;

(d) ಅವರನ್ನು ಮೇಲಿನ ದರ್ಜೆಗೆ ಬಡ್ತಿಮಾಡಲಾದ ತಾರೀಖುಗಳು ಯಾವುವು ;

(e) ಆ ರೀತಿ ಬಡ್ತಿ ಮಾಡುವ ಸಂದರ್ಭಗಳಲ್ಲಿ ಗಮನಕ್ಕೆ ತೆಗೆದುಕೊಳ್ಳುವ ವಿಷಯಗಳಾವುವು ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) ಪೋಲೀಸ್ ಸೂಪರಿಂಟೆಂಡೆಂಟರುಗಳು 19. ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರುಗಳು 21.

(b), (c), (d) ಇದರೊಂದಿಗೆ ಒದಗಿಸಿರುವ ಪರಿಶಿಷ್ಟದಲ್ಲಿ ವಿವರಗಳನ್ನು ಕೊಡಲಾಗಿದೆ. (ಪರಿಶಿಷ್ಟವನ್ನು ದಯೆಯಿಟ್ಟು ನೋಡಿ).

(e) "ಸೀನಿಯಾರಿಟಿ", ದಕ್ಷತೆ ಮತ್ತು ಅರ್ಹತೆ.—

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

	ಆಫೀಸರ ಹೆಸರು	ಅವರ ಕೋಮು	ಯಾವ ದರ್ಜೆಯಲ್ಲಿದ್ದರು	ಈಗಿನ ದರ್ಜೆಗೆ ಬಡ್ತಿ ಮಾಡಲಾದ ತಾರೀಖು
	ಪೋಲೀಸು ಸೂಪರಿಂಟೆಂಡೆಂಟರುಗಳು.			
	ಶ್ರೀಯುತರುಗಳಾದ.—			
1	ಬಿ. ತಿಮ್ಮರಾಜ ಅರಸಿನವರು, ಬಿ.ಎ., ಎಲ್.ಎಲ್.ಬಿ. ...	ಕ್ಷತ್ರಿಯರು ...	ಪೋಲೀಸ್ ಸೂಪರಿಂಟೆಂಡೆಂಟರು ...	15-11-1946ನೆಯ ತಾರೀಖಿನ ಲಾಗಾಯಿತು ಸೀನಿಯರ್ ಡಿಸ್ಟ್ರಿಕ್ಟು ಪೋಲೀಸು ಸೂಪರಿಂಟೆಂಡೆಂಟರು.
2	ಸಿ. ಚಾಂಡಿ, ಅವರು, ಎಂ.ಎ., ಬಿ.ಎಲ್.	ಕ್ರೈಸ್ತರು ...	ಡಿಟ್ಟೋ ...	20-10-1947ನೆಯ ತಾರೀಖಿನ ಲಾಗಾಯಿತು ಸೀನಿಯರ್ ಡಿಸ್ಟ್ರಿಕ್ಟು ಪೋಲೀಸ್ ಸೂಪರಿಂಟೆಂಡೆಂಟರು.
3	ಡಿ. ವಿಶ್ವೇಶ್ವರಯ್ಯರ್ ಅವರು, ಬಿ.ಎ., ಎಲ್‌ಎಲ್.ಬಿ. ...	ಬ್ರಾಹ್ಮಣರು ...	ಡಿಸ್ಟ್ರಿಕ್ಟು ಪೋಲೀಸ್ ಸೂಪರಿಂಟೆಂಡೆಂಟರು.	21—8—1941
4	ಕೆ. ಎಸ್. ಕೃಷ್ಣಮೂರ್ತಿ ಅವರು, ಎಂ.ಎ., ಎಲ್‌ಎಲ್.ಬಿ. ...	ಡಿಟ್ಟೋ ...	ಡಿಟ್ಟೋ ...	2—1—1942
5	ಎಸ್. ಸಿ. ಮಲ್ಲಪ್ಪ ಅವರು, ಬಿ.ಎ.	ಲಿಂಗಾಯಿತರು ...	ಡಿಟ್ಟೋ ...	2—9—1942
6	ಜನಾಬ್ ಎಂ. ಕ್ವಾದಿರಾಲಿ ಅವರು, ಬಿ.ಎ.	ಮುಸಲ್ಮಾನರು ...	ಡಿಟ್ಟೋ ...	10—9—1943
7	ಆರ್. ಡಿ. ಆಂಡರ್‌ಸನ್ ಅವರು, ಬಿ.ಎಸ್‌ಸಿ.	ಕ್ರೈಸ್ತರು ...	ಡಿಟ್ಟೋ ...	10—9—1943
8	ಎಂ. ಜೈಸಿಂಗ್ ಅವರು, ಬಿ.ಎಸ್‌ಸಿ.	ಕ್ಷತ್ರಿಯರು ...	ಡಿಟ್ಟೋ ...	8-11—1945
9	ಎ. ಡಿ. ಆನಂದನ್ ಅವರು, ಬಿ.ಎ.	ಮೊದಲಿಯಾರರು ...	ಡಿಟ್ಟೋ ...	17—3—1947
10	ಇ. ವಿ. ಪಟ್ಟಾಭಿರಾಮ ಅಯ್ಯರ್ ಅವರು, ಬಿ.ಎ. ಎಲ್‌ಎಲ್.ಬಿ. ...	ಬ್ರಾಹ್ಮಣರು ...	ಡಿಟ್ಟೋ ...	4—9—1947
11	ಟಿ. ಎಸ್. ನಂಜುಂಡಯ್ಯ ಅವರು, ಎಂ.ಎ., ಬಿ.ಎಲ್. ...	ಡಿಟ್ಟೋ ...	ಡಿಟ್ಟೋ ...	21-12-1944 (ರಜದ ಮೇಲೆ ಇರುವರು)
12	ಎಲ್. ಸುಬ್ರಹ್ಮಣ್ಯರಾಯರು, ಬಿ.ಎ., (ಬದಲಿ ತರೀಖು) ...	ಮರಾಠೆಯವರು ...	ಡಿಟ್ಟೋ ...	5-12—1947
13	ಆಲ್ಬರ್ಟ್ ಮನೋರಾಜ್ ಅವರು, ಬಿ.ಎ., ಬಿ.ಎಲ್. (ಸಬ್–ಪ್ರೊ–ಟಂ). ...	ಕ್ರೈಸ್ತರು ...	ಡಿಟ್ಟೋ ...	21-12—1947
14	ಎ. ಪಿ. ರತ್ನರಾಜಯ್ಯನವರು, ಬಿ.ಎ., ಎಲ್‌ಎಲ್.ಬಿ. (ಸಬ್–ಪ್ರೊ–ಟಂ) ...	ಜೈನರು ...	ಡಿಟ್ಟೋ ...	26—4—1648
15	ಜನಾಬ್ ಮಹಮುದ್ ದಸ್ತಗೀರ್ ಅವರು (ಸಬ್–ಪ್ರೊ–ಟಂ) ...	ಮುಸಲ್ಮಾನರು ...	ಡಿಟ್ಟೋ ...	1—7—1948
16	ಪಿ. ಎಸ್. ನರಸಿಂಹಚಾರ್ ಅವರು, ಬಿ.ಎ. (ಬದಲಿ ತರೀಖು) ...	ಬ್ರಾಹ್ಮಣರು ...	ಡಿಟ್ಟೋ ...	27-10—1949
17	ಇ. ದೇವರಾಜರಾಯರು, ಬಿ.ಎ., ಎಲ್‌ಎಲ್.ಬಿ. (ಬದಲಿ ತರೀಖು) ...	ಡಿಟ್ಟೋ ...	ಡಿಟ್ಟೋ ...	8—8—1950
18	ಎಂ. ನರಸಿಂಹಯ್ಯನವರು, ಬಿ.ಎ., (ಬದಲಿ ತರೀಖು) ...	ಒಕ್ಕಲಿಗರು ...	ಡಿಟ್ಟೋ ...	8—8—1950
19	ಜನಾಬ್ ಎಚ್. ಸೈಯದ್ ಜಹಿರುದ್ದೀನ್ ಅವರು, ಬಿ.ಎ., (ಬದಲಿ ತರೀಖು) ...	ಮುಸಲ್ಮಾನರು ...	ಡಿಟ್ಟೋ ...	18—2—1951

ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರುಗಳು.

1	ಡಿ. ಇ. ಡಬ್ಲ್ಯು. ಬಾರ್‍ಡ್ರೇ ಅವರು	ಕ್ರೈಸ್ತರು ...	ಕಮ್ಯಾಂಡೆಂಟರು ಎಂ.ಎ.ಆರ್.ಪಿ., ಹೈದರಾಬಾದ್ (ಬೇರೆ ಕೆಲಸದ ಮೇಲಿರುವವರು).	12—4—1946*
2	ಎಚ್. ಕೆ. ರಾಜಶೇಖರಯ್ಯ ಅವರು, ಬಿ.ಎ.	ಲಿಂಗಾಯಿತರು ...	ಪೋಲೀಸು ಇನ್ಸ್‌ಪೆಕ್ಟರು ...	9—9—1946
3	ಎ. ಎಸ್. ರಾಮಣ್ಣ ಅವರು, ಬಿ.ಎ.	ಬ್ರಾಹ್ಮಣರು ...	ಡಿಟೋ ...	4—1—1944
4	ಜನಾಬ್ ಕೆ. ಜಿ. ಅಬ್ದುಲ್ ಸಮದ್‌ಖಾನ್ ಅವರು	ಮುಸಲ್ಮಾನರು ...	ಡಿಟೋ ...	12–1—1944
5	ಎಂ. ಮಹದೇವಪ್ಪನವರು, ಬಿ.ಎ., ಬಿ.ಎಲ್	ಲಿಂಗಾಯಿತರು ...	ಡಿಟೋ ...	20—2—1945
6	ಎಚ್. ವೀರಭದ್ರಯ್ಯನವರು, ಎಂ.ಎ.	ಡಿಟೋ ...	ತುಮಕೂರು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಅರ್ಥ ಶಾಸ್ತ್ರದ ಲೆಕ್ಚರರು.	15—8—1946
7	ಡಿ. ವಿಜಯದೇವರಾಜ ಅರಸಿನವರು, ಬಿ.ಎ.	ಕ್ಷತ್ರಿಯರು ...	ಪ್ರೊಬೇಷನರು ...	10—8—1946
8	ಎಂ. ಎಲ್. ಚಂದ್ರಶೇಖರ್ ಅವರು, ಬಿ.ಎ.	ವಕ್ಕಲಿಗರು ...	ಡಿಟೋ ...	9—8—1946
9	ಕೆ. ವಿ. ಕುಮಾರಸ್ವಾಮಿ ಅವರು, ಬಿ.ಎ.	ಲಿಂಗಾಯಿತರು ...	ಡಿಟೋ ...	25—2—1947
10	ಬಿ. ಪಿ. ರೇವಣ್ಣ ಅವರು, ಬಿ.ಎ. (ಸಬ್-ಪ್ರೊ-ಟಂ) ...	ಕುರುಬರು ...	ಪೋಲೀಸು ಇನ್ಸ್‌ಪೆಕ್ಟರು ...	13—3—1947
11	ಟಿ. ಎ. ಮೋಹನ್ ಅವರು, ಬಿ.ಎ. (ಸಬ್-ಪ್ರೊ-ಟಂ) ...	ನಾಯ್ಡು ...	ಡಿಟೋ ...	26—8—1947
12	ಎಸ್. ಎಲ್. ವೈದ್ಯನಾಥನ್ ಅವರು (ಸಬ್-ಪ್ರೊ-ಟಂ) ...	ಮೊದಲಿಯಾರರು ...	ಡಿಟೋ ...	26—8—1947
13	ಬಿ. ಎಸ್. ಸದಾಶಿವರಾಯರು (ಸಬ್-ಪ್ರೊ-ಟಂ)	ಬ್ರಾಹ್ಮಣರು ...	ಡಿಟೋ ...	28—8—1947
14	ಬಿ. ಪುಟ್ಟವೀರಯ್ಯನವರು (ಸಬ್-ಪ್ರೊ-ಟಂ)	ಲಿಂಗಾಯಿತರು ...	ಡಿಟೋ ...	12—9—1947
15	ಎ. ವೆಂಕೋಬರಾಯರು (ಸಬ್-ಪ್ರೊ-ಟಂ)	ಮರಾಠೆಯವರು ...	ಡಿಟೋ ...	12—9—1947
16	ಸಿ. ಡಿ. ಆದಿನಾರಾಯಣ ಅವರು, (ಸಬ್-ಪ್ರೊ-ಟಂ) ...	ಆದಿಕರ್ನಾಟಕ ...	ಡಿಟೋ ...	12—9—1947
17	ಎಸ್. ಜಿ. ಷೆಲ್ಕಿ ಅವರು, ಬಿ.ಎಸ್‌ಸಿ., (ಬದಲಿ ತರೀಖು) ...	ಮರಾಠೆಯ ವರು ...	ಪ್ರೊಬೇಷನರು ...	27-10—1947
18	ಎ. ಕೆಂಪರಾಮಯ್ಯನವರು, ಬಿ.ಎ., ಬಿ.ಎಲ್., (ಬದಲಿ ತರೀಖು) ...	ಕುರುಬರು ...	ಡಿಟೋ ...	7—2—1948
19	ಬಿ. ಹನುಮಂತಯ್ಯನವರು (ಬದಲಿ ತರೀಖು)	ಡಿಟೋ ...	ಪೋಲೀಸು ಇನ್ಸ್‌ಪೆಕ್ಟರು ...	26-11—1949
20	ಎಲ್. ಎಚ್. ಸ್ಮಾಲಿ ಅವರು (ಸಬ್-ಪ್ರೊ-ಟಂ)	ಕ್ರೈಸ್ತರು ...	ಡಿಟೋ ...	10-12—1948
21	ಎಸ್. ಬಿ. ಬಸಪ್ಪನವರು	ಲಿಂಗಾಯಿತರು ...	ಮೈಸೂರು ಜೈಲಿನ ಸೂಪರಿಂಟೆಂಡೆಂಟರು.	1-10—1950

* ಮಿ॥ ಬಾರ್‍ಡ್ರೇಯವರು ಯುದ್ಧದ ಸರ್ವಿಸಿನಲ್ಲಿದ್ದರು. ಆದುದರಿಂದ 12–4–1946ನೆಯ ತಾರೀಖಿನ ಲಾಗಾಯಿತು ಅವರನ್ನು ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಬಡ್ತಿ ಮಾಡಿದ್ದಾಗ್ಗೂ ಸಹ, ಅವರು ಇಲಾಖೆಯಲ್ಲಿಯೇ ಇದ್ದಿದ್ದರೆ ಯಾವ ಸ್ಥಾನವನ್ನು ಪಡೆಯುತ್ತಿದ್ದರೋ ಅದೇ ಸ್ಥಾನವನ್ನೇ ಅವರು ಪಡೆಯಲು ಅವಕಾಶ ಕೊಡಲಾಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈಗ ತಾವು ಕೊಡಲಾಗಿರುವ ಬಡ್ತಿಗಳೆಲ್ಲಾ ದಕ್ಷತೆ ಮತ್ತು ಸೀನಿಯಾರ್ಟಿಗಳ ಮೇಲೆಯೇ ಕೊಟ್ಟಿರತಕ್ಕದ್ದಾಗಿವೆಯೆಂದು ಹೇಳೋಣವಾಗಿದೆ. ಅಂದ ಮೇಲೆ ಹಾಗೆ ಬಡ್ತಿ ಪಡೆದಿರತಕ್ಕವರೆಲ್ಲರೂ ದಕ್ಷರಾಗಿದ್ದಾರೆಂದು ತಾವು ಭಾವಿಸಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಈ ಬಡ್ತಿಗಳನ್ನೆಲ್ಲಾ ಸೀನಿಯಾರ್ಟಿ, ದಕ್ಷತೆ ಮತ್ತು ಅರ್ಹತೆಗಳನ್ನು ನೋಡಿಕೊಂಡೇ ಕೊಡಲಾಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈಗ ಬಡ್ತಿ ಹೊಂದಿರುವವರ ಪೈಕಿ ಕೆಲವರು ಕೆಲಸಕಾರ್ಯಗಳನ್ನು ದಕ್ಷತೆಯಿಂದ ಮಾಡಲು ಅರ್ಹರಾಗಿಲ್ಲವೆಂದು ಕೆಲವರು ದೂರುಗಳನ್ನು ತಂದಿರತಕ್ಕದ್ದು ತಮ್ಮ ಗಮನಕ್ಕೆ ಬಂದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಹಾಗೆ ಬಡ್ತಿ ಹೊಂದಿರತಕ್ಕವರ ಪೈಕಿ, ಕೆಲವರು ಪೋಲೀಸ್ ಇನ್ಸ್‌ಪೆಕ್ಟರುಗಳು ಮೇಲಿನ ದರ್ಜೆಗೆ ಅರ್ಹರಾಗಿಲ್ಲವೆಂಬುದಾಗಿ ಯಾರಿಗಾದರೂ ಒಂದೆರಡು ವರ್ಷಗಳ ರಜವನ್ನು ಕೊಡಲಾಗಿತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಈ ಬಡ್ತಿ ಕೊಡತಕ್ಕ ವಿಚಾರದಲ್ಲಿ ಇಲಾಖಾ ಮೊಖ್ತೇಸರರುಗಳ ಒಂದು ಸಮಿತಿಯನ್ನು ಮಾಡಿ, ಅಂಥಾ ಸಮಿತಿಯವರು ಸರ್ಕಾರಕ್ಕೆ ಮಾಡಿದ ಶಿಫಾರ್ಸುಗಳ ಮೇಲೆ ಅವರಿಗೆ ಹಾಗೆ ಬಡ್ತಿ ಕೊಡಲಾಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ನಾನು ಕೇಳುತ್ತಿರುವುದು ಆ ವಿಷಯವಲ್ಲ, ಈಗ ಹಾಲಿ ಬಡ್ತಿ ಪಡೆದಿರುವವರ ಪೈಕಿ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರವರು ಕೆಲಸಮಾಡಲು ಸಾಕಷ್ಟು ಶಕ್ತಿ ಇಲ್ಲದೆ ಕೃಶರಾಗಿದ್ದು, ಅವರಿಗೆ ದಕ್ಷತೆ ಇಲ್ಲವೆಂಬುದಾಗಿ ಅವರ ಪೈಕಿ ಯಾರಿಗು ಒಂದೆರಡು ವರ್ಷಗಳ ರಜವನ್ನು ಕೊಟ್ಟಿರಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮ್ಮ ಪ್ರಶ್ನೆ ಬಹಳ ವೇಗ್ ಆಗಿದೆ. ತಾವು ಖಚಿತವಾಗಿ ಇಂಥಾ ಸಂದರ್ಭದಲ್ಲೇ ಹೀಗಾಗಿದೆಯೆಂದು ತಿಳಿಸಿದರೆ, ಅದಕ್ಕೆ ಉತ್ತರ ಕೊಡಬಹುದು.

ಶ್ರೀ ಬಿ. ಎನ್. ಬೋರಣ್ಣಗೌಡರು.— ಈ ಬಡ್ತಿ ಕೊಡುವಾಗ ಯಾವ ಕೋಮಿನವರಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆತಿಲ್ಲವೆಂಬುದನ್ನು ನೋಡಿಕೊಂಡು, ರಿಕ್ರೂಟ್‌ಮೆಂಟ್ ರೂಲ್ಸುಗಳ ಪ್ರಕಾರ ಏಕೆ ಕೊಡಬಾರದಾಗಿತ್ತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಈ ಬಡ್ತಿ ವಿಚಾರದಲ್ಲಿ ರಿಕ್ರೂಟ್‌ಮೆಂಟ್ ರೂಲ್ಸುಗಳನ್ನು ಅನುಸರಿಸಲಾಗುತ್ತಿಲ್ಲ. ಹೊಸದಾಗಿ ಕೆಲಸಕ್ಕೆ ತೆಗೆದುಕೊಳ್ಳುವಾಗ ಮಾತ್ರ ಆ ಕಾನೂನುಗಳನ್ನು ಅನುಸರಿಸಲಾಗುತ್ತೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಹೀಗೆ ಬಡ್ತಿ ಕೊಡತಕ್ಕ ಸಂದರ್ಭದಲ್ಲಿ ಕೆಲವರಿಗೆ ಅವರ ಸೀನಿಯಾರಿಟಿಯನ್ನು overlook ಮಾಡಿ, ಬೇರೆಯವರಿಗೆ ಬಡ್ತಿ ಕೊಟ್ಟಿರತಕ್ಕ ಅಂಶ ತಮ್ಮ ತಿಳುವಳಿಕೆಗೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ overlook ಮಾಡಿಕೊಟ್ಟಿರತಕ್ಕ ಸಂದರ್ಭಗಳೇ ಇಲ್ಲ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಹಾಗೆ ಬಡ್ತಿ ಕೊಡತಕ್ಕ ಕಾಲದಲ್ಲಿ ಅವರ ಸರ್ವಿಸ್ ರಿಜಿಸ್ಟ್ರುಗಳನ್ನು ತೆಗೆದು ನೋಡಿ, ಅವರಿಗೆ ಏನೇನು ಬ್ಲಾಕ್ ಮಾರ್ಕುಗಳಿವೆ ಎಂಬುದನ್ನು ವಿಮರ್ಶೆ ಮಾಡಿ ನೋಡಿ, ಬಡ್ತಿ ಕೊಡಲಾಗಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಆಗಲೇ ನಾನು ತಿಳಿಸಿದಂತೆ, ಸಮಿತಿಯವರು ಸರ್ಕಾರಕ್ಕೆ ಒಪ್ಪಿಸಿದಂಥ ವರದಿಯ ಪ್ರಕಾರ ಮತ್ತು ಇಲಾಖಾ ಮುಖ್ಯಾಧಿಕಾರಿಗಳ ಅಭಿಪ್ರಾಯಕ್ಕನುಗುಣವಾಗಿ ಆ ಬಡ್ತಿಗಳನ್ನು ಕೊಡಲಾಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈಗ ತಾವು ಬಡ್ತಿ ಕೊಡಲಾಗಿರತಕ್ಕವರ ಪೈಕಿ ಕೆಲವು ಕೋಮಿನವರ ಪ್ರಾತಿನಿಧ್ಯ ಅದರಲ್ಲಿ ಸಾಕಷ್ಟು ಇಲ್ಲದೇ ಇರುವುದರಿಂದ ಹಾಗೆ ಕಮ್ಮಿ ಪ್ರಾತಿನಿಧ್ಯವಿರತಕ್ಕವರಿಗೆ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಆ ತಾರತಮ್ಯವನ್ನು ತಪ್ಪಿಸಬೇಡವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಧ್ಯವಾದ ಮಟ್ಟಿಗೂ ಆ ವ್ಯತ್ಯಾಸಗಳನ್ನು ತಪ್ಪಿಸಬೇಕೆಂಬುದೇ ಸರ್ಕಾರದವರ ಉದ್ದೇಶವೂ ಆಗಿದೆ. ಹಾಗೆ ಎಲ್ಲೆಲ್ಲಿ ಅನ್ಯಾಯವಾಗಿದೆಯೆಂಬ ಬಗ್ಗೆ ತಾವು ನಿರ್ದಿಷ್ಟವಾದ ವಿಷಯಗಳನ್ನು ತಿಳಿಸಿದರೆ ಸಾಧ್ಯವಾದಮಟ್ಟಿಗೂ ಅದನ್ನು ಸರಿಪಡಿಸಬಹುದು.

ಶ್ರೀ ಬಿ. ಎನ್. ಬೋರಣ್ಣಗೌಡರು.—ದಕ್ಷರಾಗಿದ್ದು, ಹೆಚ್ಚಿನ ಜವಾಬ್ದಾರಿ ಹೊತ್ತು, ಕಷ್ಟಪಟ್ಟು ಕೆಲಸ ಮಾಡುವ ಮತ್ತು ಸಾಕಷ್ಟು ಪ್ರಾತಿನಿಧ್ಯವಿಲ್ಲದಂಥ ಸಂದರ್ಭದಲ್ಲಿ ತಾವು ಅವರಿಗೆ ಒಂದು ಸಹಾಯ ಮಾಡಲು ಏರ್ಪಾಡು ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪರಿಶೀಲನೆ ಮಾಡಲಾಗುತ್ತೆ.

Sri A. BHEEMAPPA NAIK (Chitaldrug District—General).—Are the remarks of the Magistrates or the investigating officers taken into consideration in making recommendations for promotion ?

The Hon'ble Sri T. MARIAPPA.—All relevant matters will be certainly taken into consideration at the time of making recommendation for promotion.

Sri A. BHEEMAPPA NAIK.—I am definitely asking whether the remarks of the Magistrates about the character of these Superintendents and Assistant Superintendents of Police and their efficiency or inefficiency in conducting the criminal cases entrusted to them during investigation are taken into consideration ?

The Hon'ble Sri T. MARIAPPA.—Yes.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ತಾವು ಇಲ್ಲಿ ತೋರಿಸಿರತಕ್ಕ ತಃಖ್ತೆಯಲ್ಲಿ ಪ್ರೊಬೇಷನರ್ಸ್ ಎಂದು ತಿಳಿಸಿದ್ದೀರಿ ಅಂದರೆ ಪ್ರೊಬೇಷನರ್ಸ್‌ಗಳನ್ನು ತೆಗೆದುಕೊಳ್ಳುವಾಗ ಸಾಕಷ್ಟು ಪ್ರಾತಿನಿಧ್ಯವಿಲ್ಲದ ಜನಾಂಗಕ್ಕೆ ಹೆಚ್ಚಿನ ಅವಕಾಶಕೊಡಲು ಏರ್ಪಾಡು ಮಾಡುತ್ತೀರಾ ?

ಅಧ್ಯಕ್ಷರು.—ಆ ಉಪಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ತಮ್ಮ ಉತ್ತರದಲ್ಲೇ ಪ್ರೊಬೇಷನರ್ಸ್ ಎಂದು ಹೇಳಿದ್ದೀರಲ್ಲಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ 199ನೆಯ ಪ್ರಶ್ನೆ ಕೇವಲ ಬಡ್ತಿ ವಿಚಾರಕ್ಕೆ ಸಂಬಂಧಪಟ್ಟಿದೆಯೇ ಶಿವಾಯಿ ಮತ್ತೇನೂ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಸಾಕಷ್ಟು ಪ್ರಾತಿನಿಧ್ಯವಿಲ್ಲದೆ ಇರುವ ಕೋಮಿನವರಿಗೂ ಸಹ ಕೇವಲ 2 ಸ್ಥಾನಗಳನ್ನು ಮಾತ್ರ ಕೊಟ್ಟು 'ಪ್ರೊಬೇಷನರ್ಸ್' ಎಂದು ನಮೂದಿಸಿದ್ದೀರಿ?

ಅಧ್ಯಕ್ಷರು.—ಪ್ರೊಬೇಷನರ್ಸ್ ಎಂದಲ್ಲ. ಪ್ರಮೋಷನ್ ಮೇಲೆ ಎಂಬುದಾಗಿ ತಿಳಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಬಾಕಿಯವರಿಗೆ ಪ್ರಾತಿನಿಧ್ಯ ಸಿಕ್ಕಿರಲಿಲ್ಲವೆ?

Mr. SPEAKER.—That supplementary does not arise out of this question.

ಶ್ರೀ ಬಿ. ಹುಚ್ಚೇಗೌಡರು.—ಕೋಮುವಾರು ಪ್ರಾತಿನಿಧ್ಯದ ಮೇಲೆ ತೆಗೆದುಕೊಂಡಿದ್ದೀರೋ ಅಥವಾ ಸೀನಿಯಾರಿಟಿ ಮೇಲೆ ತೆಗೆದುಕೊಂಡಿದ್ದೀರೋ?

ಅಧ್ಯಕ್ಷರು.—ಅದಕ್ಕೆ ಉತ್ತರ ಆಗಲೇ ಹೇಳಿದ್ದಾರೆ. ಕೋಮುವಾರು ಆಧಾರದ ಮೇಲೆ ತೆಗೆದುಕೊಂಡಿಲ್ಲ, ದಕ್ಷತೆ, ಅರ್ಹತೆ, ಮುಂತಾದ್ದನ್ನೆಲ್ಲಾ ಯೋಚನೆಮಾಡಿ ತೆಗೆದುಕೊಂಡಿದೆಯೆಂದು ಹೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಎಲ್ಲಾ ಕೋಮಿನವರಿಗೂ ಸ್ವಲ್ಪ ಅವಕಾಶ ಕೊಡಬೇಕಾದ್ದು ಧರ್ಮವಲ್ಲವೇ? ಉದಾಹರಣೆಗೆ ವಿಶ್ವವರ್ಗದವರು ಮತ್ತು ಒಕ್ಕಲಿಗರು—ಈ ಪಂಗಡದವರಿಗೆ ಪ್ರಾತಿನಿಧ್ಯವಿಲ್ಲವಲ್ಲವೆ?

ಅಧ್ಯಕ್ಷರು.—ಬಡ್ತಿ ಕೊಡುವ ಸಂದರ್ಭದಲ್ಲಿ ಕೋಮುವಾರು ಪ್ರಾತಿನಿಧ್ಯಕ್ಕೆ ಅಷ್ಟಾಗಿ ಗಣನೆ ಕೊಡುವುದಕ್ಕಾಗುವುದಿಲ್ಲವೆಂದು ಆಗಲೇ ಹೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಪ್ರಾತಿನಿಧ್ಯ ದೊರೆಯದಿರುವ ಪಂಗಡಗಳಲ್ಲಿ ದಕ್ಷತೆ ಮತ್ತು ಅರ್ಹತೆ ಉಳ್ಳವರು ಸಾಕಷ್ಟಿಲ್ಲವೆಂದು ಹೇಳಬಹುದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸೀನಿಯರ್ ಇನ್ಸ್‌ಪೆಕ್ಟರುಗಳಲ್ಲಿ ದಕ್ಷತೆ ಮತ್ತು ಅರ್ಹತೆ ಪಡೆದಿರುವವರು ಯಾರು, ಅವರ ಮೇಲೆ ಏನಾದರೂ ಆರೋಪಣೆಯಿದೆಯೆ ಎಂಬುದನ್ನು ನೋಡಿ ಇಲಾಖೆಯವರು ಮತ್ತು ಅದಕ್ಕೆ ಸಂಬಂಧಪಟ್ಟ ಸಮಿತಿಯವರು ಒಂದು ಪಟ್ಟಿ ತಯಾರಿಸಿ ಕಳುಹಿಸುತ್ತಾರೆ. ಅದರ ಪ್ರಕಾರ ಪ್ರಮೋಷನ್ ಕೊಡಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಪ್ರೊಬೇಷನರುಗಳಲ್ಲಿ ಕೆಲವರನ್ನು ತೆಗೆದುಕೊಂಡಿರುವುದಾಗಿ ಹೇಳಿದೆ. ಹಾಗೆ ಮಾಡುವಾಗ ಸೀನಿಯರ್ ಆಗಿದ್ದವರ ಪೈಕಿ ಯಾರನ್ನಾದರೂ ಗಣನೆಗೆ ತೆಗೆದುಕೊಳ್ಳದೆ ಕೈಬಿಟ್ಟಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೇನೂ ಮಾಡಿರುವುದಿಲ್ಲ. ಸಾಮಾನ್ಯವಾಗಿ ಸಮಿತಿಯವರು ಮತ್ತು ಇಲಾಖೆಯವರು ಶಿಫಾರಸುಮಾಡುತ್ತಾರೆ. ಅದನ್ನು ನೋಡಿ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಅರ್ಥಶಾಸ್ತ್ರದ ಲೆಕ್ಚರರ್ ಆಗಿರುವುದು ಪೋಲೀಸ್ ಸೂಪರಿಂಟೆಂಡೆಂಟರಾಗುವುದಕ್ಕೆ ಒಂದು ದೊಡ್ಡ ಅರ್ಹತೆಯೆ?

The Hon'ble Sri T. MARIAPPA.—That does not arise out of this question.

Sri M. GOVINDA REDDY.—No. 6 has been appointed as Assistant Superintendent of Police. His previous post was Lecturer in Economics. Was that a consideration for appointment as Probationer in the Police Department?

The Hon'ble Sri T. MARIAPPA.—Sir, it was done on 15-8-1946. He might have been a Lecturer in the University. They might have called for applications and he must have been selected.

Sri L. SIDDAPPA.—Information furnished is not correct. He is one of the persons recruited along with the other three that were appointed at that time.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—(e) ಪ್ರಶ್ನೆಗೆ ಉತ್ತರವಾಗಿ "ಸೀನಿಯಾರಿಟಿ" ದಕ್ಷತೆ ಮತ್ತು ಅರ್ಹತೆಗಳನ್ನು ಬಡ್ತಿಮಾಡುವ ಸಂದರ್ಭಗಳಲ್ಲಿ ಗಮನಕ್ಕೆ ತೆಗೆದುಕೊಳ್ಳಲಾಗುವುದೆಂದು ಹೇಳಿದೆ. ಹಾಗಾದರೆ ಈಗ ಪೋಲೀಸ್ ಇಲಾಖೆಯ ಆಡಳಿತ ಯಾವ ಮಟ್ಟದಲ್ಲಿದೆ?

The Hon'ble Sri T. MARIAPPA.—That does not arise at all.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈಗ ಸೀನಿಯಾರಿಟಿ overlook ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಕಾರಣಗಳಿದ್ದರೆ overlook ಮಾಡಬಹುದು; ಸಾಧಾರಣವಾಗಿ ಹಾಗೆ ಮಾಡುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ದಕ್ಷರು ಮತ್ತು ಅರ್ಹರಾದವರನ್ನು ತೆಗೆದುಕೊಂಡರೂ ಕೂಡ ಈಗ ಕಾಳಸಂತೆ, ಕಳ್ಳತನ ಮುಂತಾದ್ದು ಹೆಚ್ಚಿರುವುದಕ್ಕೆ ಕಾರಣವೇನು?

The Hon'ble Sri T. MARIAPPA.—That does not arise.

ಶ್ರೀ ಎ. ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ದಕ್ಷತೆ ನೋಡಿ ಪ್ರಮೋಷನ್ ಕೊಡುವುದಾಗಿ ಹೇಳುತ್ತೀರಿ, ಹಾಗಾದರೆ ದಕ್ಷರು ಎಂಬುದನ್ನು ತಿಳಿಯುವ ಬಗೆ ಹೇಗೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಚೆನ್ನಾಗಿ ಕೆಲಸ ಮಾಡಿರುವವರಿಗೆ ಕೆಲವು ಸಂದರ್ಭಗಳಲ್ಲಿ ಬಹುಮಾನ ಕೊಡಲಾಗುತ್ತದೆ. ಹಿಂದೆ ಅವರು ಮಾಡಿರುವ ಕೆಲಸದ ರಿಕಾರ್ಡಿರುತ್ತದೆ. ಯಾರ್ಯಾರು ಮೇಲಿನ ದರ್ಜೆಯ ಕೆಲಸಗಳಿಗೆ ಅರ್ಹರೆಂದು ಸಮಿತಿಯವರು ಮತ್ತು ಇಲಾಖೆಯ ಮುಖ್ಯಾಧಿಕಾರಿಗಳು ಶಿಫಾರಸು ಮಾಡುತ್ತಾರೋ ಅದನ್ನು ನೋಡಿ ಮುಂದಿನ ಕಾರ್ಯಕ್ರಮ ಕೈಕೊಳ್ಳಲಾಗುತ್ತದೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಬಹುಮಾನ ಕೊಡುತ್ತಿದ್ದರೆ ಮುಂದೆಯೂ ಆ ಪದ್ಧತಿಯನ್ನು ಮುಂದುವರಿಸಲಾಗುವುದೇ?

The Hon'ble Sri T. MARIAPPA.—That does not arise.

Karnataka State Archives (Departmental Library)
ಕರ್ನಾಟಕ ರಾಜ್ಯ ಪತ್ರಾಗಾರ (ಇಲಾಖಾ ಗ್ರಂಥಾಲಯ) (B)
ಕ್ರಮಾಂಕ Accession No. (B) 4707
ದಿನಾಂಕ Date..........
V-31 N51
N51

Hand and Power Looms and Supply of Yarn to them.

ಪ್ರಶ್ನೆ 240.—ಶ್ರೀ ಎಚ್. ಹುಚ್ಚಮಾಸ್ತಿಗೌಡರು (ತುಮಕೂರು ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಸಂಸ್ಥಾನದಲ್ಲಿರುವ ಒಟ್ಟು ಕೈಮಗ್ಗಗಳು ಎಷ್ಟು;

(b) ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಎಷ್ಟೆಷ್ಟಿವೆ;

(c) ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ವಿದ್ಯುಚ್ಛಕ್ತಿಯಿಂದ ನಡೆಯಿಸಲ್ಪಡುವ ಮಗ್ಗಗಳು ಎಷ್ಟೆಷ್ಟಿವೆ;

(d) (i) ಈ ಏಳು ತಿಂಗಳುಗಳ ಅವಧಿಯಲ್ಲಿ ಪ್ರತಿ ತಿಂಗಳಿನಲ್ಲಿಯೂ ಕೈಮಗ್ಗಗಳಿಗೆ ಎಷ್ಟು ಬೇಲುಗಳ ನೂಲನ್ನು ಕೊಡಲಾಯಿತು;

(ii) ವಿದ್ಯುಚ್ಛಕ್ತಿಯಿಂದ ನಡೆಯಿಸಲ್ಪಡುವಮಗ್ಗಗಳಿಗೆ ಪ್ರತಿ ತಿಂಗಳಿನಲ್ಲಿಯೂ ಎಷ್ಟು ಬೇಲುಗಳ ನೂಲನ್ನು ಕೊಡಲಾಯಿತು?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳನಾಡಳಿತ ಶಾಖೆಯ ಸಚಿವರು).—

(a) 26,983 (ಮೊನ್ನೆ ತಾನೆ ನಡೆದ "ಸರ್ವೆ" ಪರಿಶೀಲನೆಯಿಂದ ಕಂಡುಬಂದ ಅಂಕಿಗಳಿವು).

(b)

		ಸಂಖ್ಯೆ	
ಬೆಂಗಳೂರು	... ...	4,333	ಮೊನ್ನೆ ತಾನೆ ನಡೆದ 'ಸರ್ವೆ' ಪರಿಶೀಲನೆಯಿಂದ ಕಂಡುಬಂದ ಅಂಕಿಗಳು.
ಮಂಡ್ಯ	... ...	4,596	
ಮೈಸೂರು	... ...	1,834	
ಹಾಸನ	... ...	1,748	
ಶಿವಮೊಗ್ಗ	... ...	565	
ಚಿಕ್ಕಮಗಳೂರು	... ...	301	
ಚಿತ್ರದುರ್ಗ	... ...	5,441	
ತುಮಕೂರು	... ...	4,920	
ಕೋಲಾರ	... ...	3,245	
ಒಟ್ಟು	...	26,983	

(c) ನೂಲಿನ 'ಕೋಟಾ' ಪರಿಮಾಣವನ್ನು ಪಡೆಯುತ್ತಿರುವುವುಗಳ ಸಂಖ್ಯೆ

		ಸಂಖ್ಯೆ
ಬೆಂಗಳೂರು	... ...	1,010
ಮಂಡ್ಯ	... ...	43
ಮೈಸೂರು	... ...	169
ಚಿತ್ರದುರ್ಗ	... ...	31
ತುಮಕೂರು	... ...	7
ಕೋಲಾರ	... ...	45
ಒಟ್ಟು	...	1,305

(d) (i) ಹಿಂದಿನ ಸಾರಿ ಹತೋಟಿ ವಿಧಿಸಿದ್ದ ಕಾಲದಲ್ಲಿ ಚಿಲ್ಲರೆ ವ್ಯಾಪಾರಗಾರರಿಗೆ ಗೊತ್ತುಮಾಡಲಾಗಿದ್ದ 'ಬೇಸಿಕ್ ಕೋಟಾ' ಪರಿಮಾಣದ ಆಧಾರದ ಮೇಲೆ ಡಿಸ್ಟ್ರಿಕ್ಟುಗಳಿಗೆ ಮಾಡಿರುವ ನೂಲಿನ ಹಂಚಿಕೆಯು ಈ ಕೆಳಗೆ ಕಂಡಂತೆ ಇರುತ್ತದೆ:—

		ಜುಲೈ	ಆಗಸ್ಟ್	ಸೆಪ್ಟೆಂಬರ್	ಅಕ್ಟೋಬರ್	ನವೆಂಬರ್	ಡಿಸೆಂಬರ್	ಜನವರಿ
ಬೆಂಗಳೂರು	...	123	123	90	76	70	60	60
ಮೈಸೂರು	...	120	90	78	57	50	40	40
ಮಂಡ್ಯ	...	147	101	84	75	60	50	50
ಚಿಕ್ಕಮಗಳೂರು	...	16	8	11	6	6	7	7
ಹಾಸನ	...	104	78	67	30	37	33	33
ಶಿವಮೊಗ್ಗ	...	22	10	10	9	6	8	8
ತುಮಕೂರು	...	86	54	63	39	44	47	47
ಚಿತ್ರದುರ್ಗ	...	111	81	61	51	52	40	40
ಕೋಲಾರ	...	102	79	75	36	50	40	40
ಒಟ್ಟು	...	831	624	539	379	375	325	525

(ii)	ಜುಲೈ	1950	...	809
	ಆಗಸ್ಟ್	1950	...	468
	ಸೆಪ್ಟೆಂಬರ್	1950	...	307
	ಅಕ್ಟೋಬರ್	1950	...	307
	ನವೆಂಬರ್	1950	...	307
	ಡಿಸೆಂಬರ್	1950	...	270
	ಜನವರಿ	1951	...	325 (ಬೆಂಗಳೂರಿನಲ್ಲಿರುವ "ಶ್ರೀಕೃಷ್ಣ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್" ಎಂಬ ನೂಲನ್ನು ತೆಗೆಯುವ ಮತ್ತು ನೇಯುವ ಗಿರಣಿಗೆ ನೇರವಾಗಿ ಹಂಚಿಕೊಟ್ಟಿರುವ ಕೋಟಾ ಪರಿಮಾಣವೂ ಇದರಲ್ಲಿ ಸೇರಿರುತ್ತದೆ).

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—26,983 ಕೈ ಮಗ್ಗಗಳಿವೆಯೆಂದು ಹೇಳಿದ್ದೀರಿ. ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಮಗ್ಗಗಳೂ ಇದರಲ್ಲಿ ಸೇರಿವೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು 35 ಸಾವಿರ ಇದ್ದುದು tentative figure. ಪುನಃ ಸರ್ವೆ ಮಾಡಿದ ಮೇಲೆ 26,983 ಇವೆಯೆಂದು ಗೊತ್ತಾಯಿತು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಇವಿಷ್ಟೂ ಕೆಲಸ ಮಾಡುತ್ತಿರುವ ಮಗ್ಗಗಳು ತಾನೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲಸ ಮಾಡುವುದಕ್ಕೆ ಲಾಯಖ್ಖಾದ ಮಗ್ಗಗಳ ಸಂಖ್ಯೆ ಎಂದು ಹೇಳಿದೆ. ಅದರಲ್ಲಿ ಕೆಲವು ಕೆಲಸ ಮಾಡುತ್ತಿರಬಹುದು ಮತ್ತೆ ಕೆಲವು ಮಾಡದೇ ಇರಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಪವರ್ ಲೂಮುಗಳ ಸಂಖ್ಯೆಯೆಷ್ಟು ಎಂದು ಕೇಳಿರುವುದಕ್ಕೆ ಅದನ್ನು ಕೊಡದೆ ನೂಲಿನ ಕೋಟಾ ಪಡೆಯುತ್ತಿರುವವುಗಳ ಸಂಖ್ಯೆ ಕೊಟ್ಟಿದೆ. ಅದನ್ನು ಏಕೆ ಕೊಟ್ಟಿಲ್ಲ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮ ಲೆಕ್ಕಕ್ಕೆ ಬಂದಿರುವುದು ನೂಲು ತೆಗೆದುಕೊಳ್ಳುವುದು ಮಾತ್ರ. ಇತ್ತೀಚೆಗೆ ಕೆಲವು ಮಗ್ಗಗಳನ್ನು ಹೊಸದಾಗಿ ಹಾಕಿದ್ದಾರೆ. ಅದರ ಅಂಕಿ ಅಂಶ ನಮ್ಮಲ್ಲಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅಂತೂ ಅಂಥ ಪವರ್ ಲೂಮುಗಳು ಇವೆ ತಾನೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವಿವೆ, ಬಹಳವಾಗಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಆ ಮಗ್ಗಗಳು ಕೆಲಸ ಮಾಡುತ್ತಿವೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಅಂಥ ಮಗ್ಗಗಳಿಗೆ ಹೆಚ್ಚಿಗೆ ನೂಲಿದ್ದಾಗ ಸ್ವಲ್ಪ ಕೊಡುತ್ತಿದ್ದೆವು. ಆದರೆ ಅವು ರೆಕಗ್ನೈಜ್ ಆಗಿರಲಿಲ್ಲ. ಈಚೆಗೆ ಇದಕ್ಕೆ ಸಂಬಂಧಪಟ್ಟಂತೆ ಬೊಂಬಾಯಿನಲ್ಲಿರುವ ಕಮಿಷನರು ಹೇಳಿದ ಪ್ರಕಾರ ಆ ಮಗ್ಗಗಳಿಗೆ ನಾರ್ಮಲ್ ಕೋಟಾ ಕೊಡುತ್ತಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅಂಥ ಮಗ್ಗಗಳಿಗೆ ಕೆಲವು ವೇಳೆ ಹಿಂದೆ ನೂಲು ಕೊಡುತ್ತಿದ್ದಿರಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು !

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಕೈ ಮಗ್ಗಗಳಿಗೆ ಕೊಡುತ್ತಿರುವ ನೂಲು ಅವುಗಳ ಸಂಖ್ಯೆಗನುಗುಣವಾಗಿದೆಯೆ ? ಯಾವ ಆಧಾರದ ಮೇಲೆ ಜಿಲ್ಲಾವಾರು ವಿಂಗಡಿಸಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದಿನ ಸರ್ಕಾರದವರು ಒಂದು ರೀತಿ ಮಾಡಿದ್ದರು. ಅದನ್ನು ಈಗ ರಿವೈಜ್ ಮಾಡುತ್ತಿದ್ದೇವೆ. ಇತ್ತೀಚೆಗೆ ಡಿಸೆಂಬರು ಮತ್ತು ಜನವರಿ ತಿಂಗಳುಗಳಲ್ಲಿ ಪ್ರತಿಯೊಂದು ಮಗ್ಗಕ್ಕೂ ಒಂದೇ ಸಮವಾಗಿ ಅರ್ಧ ಅಥವಾ ಮುಕ್ಕಾಲು ಕಟ್ಟು ಕೊಡಬೇಕೆಂದು ಮಾಡಿತ್ತು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಾಗೆ ಮಾಡಿದ್ದರೆ ಜನವರಿ ತಿಂಗಳಲ್ಲಿ ಬೆಂಗಳೂರು, ಮೈಸೂರು, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಲ್ಲಿ ಕೊಟ್ಟಿರುವ ಹಾಗೆ ತುಮಕೂರು ಜಿಲ್ಲೆಯಲ್ಲಿ ಏಕೆ ಕೊಡಲಿಲ್ಲ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ವಿಚಾರ ಮಾಡುತ್ತಿದ್ದೇವೆ. ಅದಕ್ಕೆ ವರದಿಯನ್ನು ಕೇಳಿದೆ. ಪ್ರಾಯಃಶಃ ಈ ಅಧಿವೇಶನ ಮುಗಿಯುವುದರೊಳಗೆ ಹೇಳಲು ಅವಕಾಶವಾಗಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ದಾಮಾಷಾ ಪ್ರಕಾರ ಎಲ್ಲಕ್ಕೂ ಒಂದೇ ಸಮನಾಗಿ ಕೊಡಬೇಕೆಂದು ತೀರ್ಮಾನವಾಗಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಅರ್ಧ ಅಥವ ಮುಕ್ಕಾಲು ಕಟ್ಟು ಹೀಗೆ ಎಷ್ಟು ಸಿಕ್ಕಿದರೆ ಅಷ್ಟು ಕೊಡಬೇಕೆಂದು ತೀರ್ಮಾನವಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಆ ರೀತಿಯಾಗಿ ತೀರ್ಮಾನ ಮಾಡಿ ಎಷ್ಟು ದಿವಸಗಳಾಯಿತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಾಯಃಶಃ $1\frac{1}{2}$ ಅಥವಾ 2 ತಿಂಗಳು ಆಗಿರಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಜನವರಿ ಆದ ಮೇಲೆ ಆಯಿತೋ ಅಥವಾ ಅದಕ್ಕೆ ಮೊದಲೇ ಮಾಡಿದರೊ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರೊವಿನ್ಷಿಯಲ್ ಕೋ-ಆಪರೇಟಿವ್ ಸೊಸೈಟಿಯವರು ಹೋಲ್ ಸೇಲ್ ಬಿಜಿನೆಸ್ ತೆಗೆದುಕೊಂಡಾಗ ಅವರ ಮೂಲಕ ಹಂಚಿಕೆ ಮಾಡಿದರೆ ಅನುಕೂಲವೆಂದು ಆಗ ತೀರ್ಮಾನವಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಾಗಾದರೆ ಫೆಬ್ರುವರಿ, ಮಾರ್ಚಿ ತಿಂಗಳುಗಳಲ್ಲಿ ಸ್ಥಾಪಿಸಿರುವ ಮಗ್ಗಗಳಿಗೆಲ್ಲಾ ನೂಲು ಕೊಟ್ಟಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಒಟ್ಟು ಕೈ ಮಗ್ಗಗಳು ಮತ್ತು ಪವರ್ ಲೂಮುಗಳಿಗೆ ಕೊಡಬೇಕಾದ ಕೋಟಾಕ್ಕಿಂತಲೂ ಹೆಚ್ಚು ನೂಲು ಮೈಸೂರು ದೇಶಕ್ಕೆ ಬಂದಿದೆಯಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ, ಮೈನರ್ ಇಂಡಸ್ಟ್ರೀಸ್‌ಗಾಗಿ ಆ ರೀತಿ ಬರುತ್ತಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಮೈನರ್ ಇಂಡಸ್ಟ್ರೀಸ್ ಎಂದರೆ ಯಾವುವು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೈ ಮಗ್ಗ ಮತ್ತು ಪವರ್ ಲೂಂ ಎಂದು ಮೇಜರ್ ಎರಡು ಭಾಗ. ಬಾಕಿಯಾದ್ದು ಅಂದರೆ ಲಾಡಿ ಮಾಡುವುದು, ನಕ್ಕಿ ಕೆಲಸ, durgget ಇಂಡಸ್ಟ್ರಿ, ಹುರಿ ಮಾಡುವುದು—

(ಮಾನ್ಯ ಶ್ರೀ ಟಿ. ಮರಿಯಪ್ಪನವರು)

ಇವು ಮೈನರ್ ಇಂಡಸ್ಟ್ರಿಗಳು. ಬರುವ ಕೋಟಾದಲ್ಲಿ ಇವೆಲ್ಲಾ ಸೇರಿವೆ. ಅದರಲ್ಲಿ ಕೈಮಗ್ಗ ಮತ್ತು ಪವರ್ ಲೂಂಗಳಿಗೆ ಮೊದಲು ಕೊಟ್ಟು ಆಮೇಲೆ ಮೈನರ್ ಇಂಡಸ್ಟ್ರೀಸ್‌ಗೆ ಸ್ವಲ್ಪ ಕೊಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಪವರ್ ಲೂಂಗೆ ಕೊಡುತ್ತಾ ಇರುವ ನೂಲನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿ ಹ್ಯಾಂಡ್ ಲೂಮ್‌ಗೆ ಕೊಡುವುದಕ್ಕೆ ಸಾಧ್ಯವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—2 ಕಟ್ಟಿಗಿಂತ ಕಡಿಮೆ ಕೊಡಕೂಡದು ಎಂಬ ಅಂಶವನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತರುತ್ತೇವೆ. ಅವರ ಜೀವನ ನಡೆಯುವುದಕ್ಕೆ ಬೇಕಾಗುವಷ್ಟು ಕೊಡಬೇಕೆಂದು ತಿಳಿಸಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಪವರ್‌ಲೂಂಗೆ ಕೊಡುವ ನೂಲನ್ನು ಕಡಿಮೆ ಮಾಡಿ ಹ್ಯಾಂಡ್ ಲೂಂಗೆ ಸ್ವಲ್ಪ ಜಾಸ್ತಿ ಕೊಡುವ ಏರ್ಪಾಡನ್ನು ಯೋಚಿಸುವುದು ಉತ್ತಮವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪವರ್ ಲೂಂಗೆ ಕೊಡುವ ಪ್ರಮಾಣ ಸ್ವಲ್ಪ ಜಾಸ್ತಿ ಏಕೆಂದರೆ ಅವರು ಹೆಚ್ಚಿಗೆ ಕನ್ಸ್ಯೂಂ ಮಾಡುತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹ್ಯಾಂಡ್ ಲೂಂನವರಿಗೆ ಶೇಕಡ 25%ರಷ್ಟೂ ಸಹ ಕೊಡುತ್ತಿಲ್ಲ ಎಂಬುದನ್ನು ಲೆಕ್ಕ ತರಿಸಿಕೊಂಡು ನೋಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಬ್ಬರಿಗೆ ಕೊಡುವ ಪ್ರಮಾಣವೂ ಹೆಚ್ಚು ಕಡಿಮೆ ಒಂದೇ ಆಗುತ್ತದೆ. ಅದೇರೀತಿ ಮಾಡಬೇಕೆಂದಿದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಹ್ಯಾಂಡ್ ಲೂಂ ಯಾರನ್ ಎಷ್ಟು ಕೊಡುತ್ತೀರೋ ಅದಕ್ಕೆ ತಕ್ಕಂತೆ ಬಟ್ಟೆ ತಯಾರು ಮಾಡುತ್ತಾರೆಯೇ ಎಂಬುದನ್ನು ತನಿಖೆ ಮಾಡಲು ಏರ್ಪಾಡು ಇದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ನೂಲು ಅಲಾಟ್ ಮಾಡಿದರೆ ನಮ್ಮ ಕರ್ತವ್ಯ ಮುಗಿಯಿತು.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಅದನ್ನು ಬೇರೆ ವಿಧವಾಗಿ ಎಂದರೆ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಿಕೊಳ್ಳಲು ಅವಕಾಶವಿದೆ. ಅದನ್ನು ಪತ್ತೆ ಮಾಡಿ ಕೊಟ್ಟ ಮಾಲು ಸದುಪಯೋಗವಾಗುವಂತೆ ಮಾಡಲು ಅವರ ಮೇಲೆ ಒಂದು ಹತೋಟಿ ಇರುವುದು ಒಳ್ಳೆಯದಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಷಯದಲ್ಲಿ ಅವರಿಗೆ ಸ್ವಾತಂತ್ರ್ಯವಿದೆ. ನಾವು ನೂಲನ್ನು ಅಲಾಟ್ ಮಾಡಬಹುದೇ ಹೊರತು ಅದರ ಹತೋಟಿಯನ್ನು ನೋಡಿಕೊಳ್ಳಬೇಕೆಂದರೆ ನಮ್ಮಲ್ಲಿ ಸಿಬ್ಬಂದಿ ಇಲ್ಲ ಮತ್ತು ಕಂಟ್ರೋಲ್ ಆರ್ಡರಿನಲ್ಲೂ ಸಹ ಅದನ್ನು ಕಾಂಟೆಂಪ್ಲೇಟ್ ಮಾಡಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಹ್ಯಾಂಡ್ ಲೂಂ ಮತ್ತು ಪವರ್ ಲೂಂನವರು ತೆಗೆದುಕೊಂಡ ನೂಲನ್ನು ಸರಿಯಾಗಿ ಉಪಯೋಗಿಸಿಕೊಂಡು ಬಟ್ಟೆ ತಯಾರು ಮಾಡಿ ಜನರಿಗೆ ಹಂಚುತ್ತಾರೆಯೇ ಇಲ್ಲವೇ ಎಂಬುದನ್ನು ತನಿಖೆ ಮಾಡಲು ಏರ್ಪಾಡು ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವೀವರ್ಸ್ ಕೋ-ಅಪರೇಟಿವ್ ಸೊಸೈಟಿ ಇದೆ. ಅವರು ಈ ಎಲ್ಲಾ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು. ಕೆಲವು ಸಂದರ್ಭದಲ್ಲಿ ಖಚಿತವಾಗಿ ಬ್ಲಾಕ್ ಮಾರ್ಕೆಟ್ ಮಾಡಿದ್ದಾರೆ. ಅಂಥ ನಿದರ್ಶನ ಬೇಕಾದರೆ ಹೇಳುತ್ತೇವೆ.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಕೈ ಮಗ್ಗದವರಿಗೆ ನೂಲು ಕೊಡುವುದು ಎಷ್ಟು ದಿನಗಳಿಗೆ ಒಂದು ಸಾರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎರಡು ಕಟ್ಟು ಒಂದು ತಿಂಗಳಿಗೆ, ಒಂದು ಕಟ್ಟು 15 ದಿನಕ್ಕೆ ಅರ್ಧ ಕಟ್ಟು 7½ ದಿನಕ್ಕೆ ಈ ರೀತಿ ಕೊಡಲಾಗುತ್ತಿದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಬಾಕಿಯಂತೆ ಅವರು ಜೀವನಕ್ಕೆ ಏನು ಮಾಡಬೇಕು?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಈ ಅಂಶವನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತಂದಿದ್ದೇವೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಸಾಮಾನ್ಯವಾಗಿ ಹಳ್ಳಿಯವರಿಗೆ ಕೊಟ್ಟಿದನ್ನು ಟೌನಿನವರೇ ತೆಗೆದುಕೊಂಡಿರುವುದು ಗೊತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡಬಾರದು. ಆ ರೀತಿ ಮಾಡಿದ್ದೇ ಆದರೆ ಅವರಿಗೆ ಕೊಟ್ಟ ನೂಲನ್ನು ಕ್ಯಾನ್ಸಲ್ ಮಾಡುತ್ತೇವೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಒಂದು ಸಿಲ್ಕ್ ಮಿಲ್ಸ್‌ಗೆ ನೂಲನ್ನು ಕೊಟ್ಟಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್. ಮೈನರ್ ಇಂಡಸ್ಟ್ರೀಸ್ ಅಂತ ಅಲಾಟ್ ಮಾಡಿರಬಹುದು.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಜನವರಿಯಿಂದ ಈಚೆಗೆ ಸಪ್ಲೈ ಉತ್ತಮಗೊಂಡಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಏಪ್ರಿಲ್‌ನಿಂದ ಉತ್ತಮವಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಒಬ್ಬೊಬ್ಬರಿಗೆ ಒಂದೊಂದು ಕಟ್ಟಾದರೂ ಬರುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜೂನ್ ಕೋಟಾ ಒಂದು ಕಟ್ಟು ಬರಬಹುದೆಂದು ನಂಬಿದ್ದೇವೆ. ನಂತರ ಆಗಾಗ್ಗೆ ಒಂದೊಂದು ಕಟ್ಟು ಸಿಕ್ಕಬಹುದೆಂಬ ನಿರೀಕ್ಷಣೆ ಇದೆ.

ಶ್ರೀ ಬಿ. ಹುಚ್ಚೇಗೌಡರು.—ಕೆಲವು ವೇಳೆ ¼ ಕಟ್ಟು 5 ಲಡಿ ಸಿಕ್ಕುತ್ತದೆ—ಅಂಥ ಸಂದರ್ಭದಲ್ಲಿ ಬೇರೆಯವರಿಗೆ ಮಾರಿಕೊಂಡರೆ ಅದು ತಪ್ಪು ಎಂದು ತೀರ್ಮಾನ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಉದ್ಭವಿಸುವುದಿಲ್ಲ. ಅರ್ಧ ಕಟ್ಟು ಕೊಟ್ಟೇ ಕೊಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಅದಕ್ಕೆ ಕಡಿಮೆ ಕೊಟ್ಟಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಟೌನಿಗೆ ಅಥವಾ ಹಳ್ಳಿಗೆ ತೆಗೆದುಕೊಂಡು ಹೋದ ಮಾಲು ಆ ಊರನ್ನು ತಲುಪಿದೆ ಎಂಬ ಬಗ್ಗೆ ವಿಲೇಜ್ ಪಂಚಾಯಿತಿ ಚೇರ್ಮನ್ ಅಥವಾ ಮುನಿಸಿಪಲ್ ಪ್ರೆಸಿಡೆಂಟರಿಂದ ಸರ್ಟಿಫೈ ಮಾಡಿಸಿದರೇ ಮುಂದಿನ ಕೋಟಾ ಕೊಡುವುದು ಎಂಬುದಾಗಿ ಮಾಡಿದರೆ ಒಳ್ಳೆಯದು. ಆ ರೀತಿ ಮಾಡುತ್ತೀರಾ?

The Hon'ble Sri T. MARIAPPA.—We will try to take all possible precautions to see that the yarn reaches them, but we are dealing with human factors.

Sri A. BHEEMAPPA NAIK.—Cannot those dealers be asked to take a certificate from the Chairman of that Village Panchayet or the President of

that Municipality in order to see that the yarn is brought within its limits and used for weaving purposes ?

The Hon'ble Sri T. MARIAPPA.—That will be looked into. In fact, if a retail dealer for example gets one-third quota and if the hand-loom weaver complains, we are prepared to cancel even that quota; even if the societies complain to us, we will immediately take the precaution.

Sri A. BHEEMAPPA NAIK.—Some certification arrangement would be better to ensure the use of yarn for better purposes.

The Hon'ble Sri T. MARIAPPA.—I will look into that.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಕೇಂದ್ರ ಸರ್ಕಾರವ ಮೇಲೆ ಎಷ್ಟು ಒತ್ತಾಯ ಮಾಡುತ್ತೀರೋ ಅಷ್ಟೂ ಒದಗಿಸುತ್ತಾರೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ಮಾಡುತ್ತಾ ಇದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಮದರಾಸು ಸರ್ಕಾರದವರು ಒತ್ತಾಯಪಡಿಸಿ ಅವರಿಗಿದ್ದ ಕೋಟಾದ ಎರಡರಷ್ಟಕ್ಕಿಂತ ಹೆಚ್ಚಾಗಿ ತೆಗೆದುಕೊಂಡಿದ್ದಾರೆ ಎಂಬುದು ತಮಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಅವರು ಓದಿರುವ ಹಾಗೆಯೇ ನಾನೂ ಪೇಪರ್‌ನಲ್ಲಿ ಓದಿದ್ದೇನೆ. ನೂಲು ಸಾಲದು ಅಂತ ಸತ್ಯಾಗ್ರಹ ನಡೆಯುತ್ತಾ ಇದೆ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ವೀವರ್ಸ್ ಕೋ-ಆಪರೇಟೀವ್ ಸೊಸೈಟಿಯವರು ಹಂಚಿಕೆ ಮಾಡುತ್ತಾರೆ. ಅವರಿಂದತಾನೆ ಬಾಕಿಯವರು ತೆಗೆದುಕೊಳ್ಳುತ್ತಿರುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಮಾಡುವುದಕ್ಕೋಸ್ಕರವೇ ಸೊಸೈಟಿ ಇರುವುದು.

ಶ್ರೀ ಜಿ. ನಾರಾಯಣಗೌಡರು.—ವರ್ತಕರಿಂದ ಹಂಚಿಕೆ ಆಗುವುದುತಾನೆ ಬ್ಲಾಕ್‌ಮಾರ್ಕೆಟ್‌ಗೆ ಹೋಗುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಆಗುವುದನ್ನು ಶ್ರೀ ರಂಗರಾಯರು ಹೇಳಿದ್ದಾರೆ. ಅದನ್ನು ನೋಡಬೇಕು.

Mr. SPEAKER.—Next question Sri N. Hutchamasti Gowda.

Punishment of wholesale dealers in cloth for violating Control Orders.

* ಪ್ರಶ್ನೆ 241.—ಎನ್. ಹುಚ್ಚಮಾಸ್ತಿಗೌಡರು (ತುಮಕೂರು ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) 1950ನೆಯ ಇಸವಿಯ ಸೆಪ್ಟೆಂಬರ್, ಅಕ್ಟೋಬರ್, ನವಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲೂ ಮತ್ತು 1951ನೆಯ ಇಸವಿಯ ಜನವರಿ ತಿಂಗಳಲ್ಲೂ ಸಂಸ್ಥಾನಕ್ಕೆ ಬಂದಿರತಕ್ಕ ಬಟ್ಟೆಗಳ ಬೇಲುಗಳು ಎಷ್ಟೆಷ್ಟು ;

(b) ಮೇಲೆ ಕಂಡ ಐದು ತಿಂಗಳುಗಳಲ್ಲಿ ಪ್ರತಿಯೊಬ್ಬ ಒಟ್ಟು ವ್ಯಾಪಾರಿಗೂ ಒದಗಿಸಿಕೊಟ್ಟ ಬೇಲುಗಳ ಸಂಖ್ಯೆಗಳೆಷ್ಟು ;

(c) ಹತೋಟಿ ("ಕಂಟ್ರೋಲ್") ಹುಕುಮುಗಳನ್ನು ಉಲ್ಲಂಘಿಸಿದುದಕ್ಕಾಗಿ ಈ ಒಟ್ಟು ವ್ಯಾಪಾರಿಗಳ ಪೈಕಿ ಯಾರನ್ನಾಗಲಿ ಶಿಕ್ಷಿಸಲಾಗಿದೆಯೆ ;

(d) ಹತೋಟಿ ("ಕಂಟ್ರೋಲ್") ಹುಕುಮುಗಳನ್ನು ಉಲ್ಲಂಘಿಸಿದದಕ್ಕಾಗಿ ಚಿಲ್ಲರೆ ವ್ಯಾಪಾರಗಾರರಲ್ಲಿ ಯಾರನ್ನಾಗಲಿ ಶಿಕ್ಷಿಸಲಾಗಿದೆಯೆ ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) 1950ನೆಯ ಇಸವಿ ಸೆಪ್ಟೆಂಬರ್ ತಿಂಗಳಿನಲ್ಲಿ	... ...	3,049 ಬೇಲುಗಳು
,, ಅಕ್ಟೋಬರ್ ,,	... ...	2,015½ ,,
,, ನವೆಂಬರ್ ,,	... ...	1,325¼ ,,
,, ಡಿಸೆಂಬರ್ ,,	... ...	1,981 ,,
1951ನೆಯ ಇಸವಿ ಜನವರಿ ,,	... ...	1,890½ ,,
(b) 1950ನೆಯ ಇಸವಿ ಸೆಪ್ಟೆಂಬರ್ ತಿಂಗಳಿನಲ್ಲಿ	...	ಪ್ರತಿಯೊಬ್ಬ ಒಟ್ಟು ವ್ಯಾಪಾರಿಗೂ 8 ಬೇಲುಗಳು.
,, ಅಕ್ಟೋಬರ್ ತಿಂಗಳಿನಲ್ಲಿ	...	ಪ್ರತಿಯೊಬ್ಬ ಒಟ್ಟು ವ್ಯಾಪಾರಿಗೂ 6 ಬೇಲುಗಳು.
,, ನವೆಂಬರ್ ತಿಂಗಳಿನಲ್ಲಿ	...	ಸಿಟಿಗಳಲ್ಲಿ ಮತ್ತು ಕಸಬಾ ಟೌನುಗಳಲ್ಲೂ ಇರುವ ಪ್ರತಿಯೊಬ್ಬ ಒಟ್ಟು ವ್ಯಾಪಾರಿಗೂ 4 ಬೇಲುಗಳು ಗ್ರಾಮಾಂತರ ಪ್ರದೇಶದ ಪ್ರತಿಯೊಬ್ಬ ಒಟ್ಟು ವ್ಯಾಪಾರಿಗೂ 3 ಬೇಲುಗಳು.
,, ಡಿಸೆಂಬರ್ ತಿಂಗಳಿನಲ್ಲಿ	...	ಸಿಟಿಗಳಲ್ಲೂ ಮತ್ತು ಕಸಬಾ ಟೌನುಗಳಲ್ಲೂ ಇರುವ ಪ್ರತಿಯೊಬ್ಬ ಒಟ್ಟು ವ್ಯಾಪಾರಿಗೂ 5 ಬೇಲುಗಳು. ಗ್ರಾಮಾಂತರ ಪ್ರದೇಶಗಳಲ್ಲಿರುವ ಪ್ರತಿಯೊಬ್ಬ ಒಟ್ಟು ವ್ಯಾಪಾರಿಗೂ 6 ಬೇಲುಗಳು.
1951ನೆಯ ಇಸವಿ ಜನವರಿ ತಿಂಗಳಿನಲ್ಲಿ	...	ಪ್ರತಿಯೊಬ್ಬ ಒಟ್ಟು ವ್ಯಾಪಾರಿಗೂ 5 ಬೇಲುಗಳು.

(c) ಹೌದು, ಶಿಕ್ಷಿಸಲಾಗಿದೆ.

(d) ಹೌದು ; ಶಿಕ್ಷಿಸಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಒಟ್ಟು ವ್ಯಾಪಾರಿಗಳಿಗೆ ದಾಮಾಷಾ ಪ್ರಕಾರ ಬಟ್ಟೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಸಿಟಿಗಳಲ್ಲಿ ಅದಕ್ಕಿಂತ ಹೆಚ್ಚಾಗಿ ಕೊಡುತ್ತಾ ಇರತಕ್ಕ ಒಟ್ಟು ವ್ಯಾಪಾರಿಗಳಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Original basic holder ಅಂತ 13 ಜನ ಇದ್ದಾರೆ. ಅವರಿಗೆ ಮಾತ್ರ ಜಾಸ್ತಿ ಕೊಡುತ್ತಾ ಇದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಎಷ್ಟು ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—13 ಜನ ಇದ್ದಾರೆ. ಅವರಿಗೆ ಹೆಚ್ಚು ಕೋಟಾ ಮೊದಲೇ ನಿಗದಿ ಆಗಿತ್ತು. ಅದರಂತೆ ಅವರಿಗೆ ಕೊಡುತ್ತಾ ಇದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅವರು ಯಾರ್ಯಾರು ಎಂಬುದನ್ನು ತಿಳಿಸುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಿಳಿಸುತ್ತೇನೆ—The names of the basic quota holders are as follows :—

1. Girdhar Baldev & Co.
2. H. Misrilal & Co.
3. Kathiawar Trading Agency
4. J. Kishanlal Phoolchand
5. T V. R Gupta & Co.
6. Surajmal Magaraj & Co.
7. Noor Mohamed Tayub Sait & Sons.
8. S. M. Lakshamana Rao, Magadi
9. Abdul Karim Abubaker Sait, Mysore.
10. S. M. Lakshmana Rao, Chamarajnagar.
11. G. Venkatappa B. Ramaswamy & Co.
12. S. R. L. Thallam & Co.
13. Tallam Brothers

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅವರಿಗೆ ನಿಗದಿ ಮಾಡಿರುವ ಕೋಟಾ ಎಷ್ಟೆಷ್ಟು ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅವರು ತೆಗೆದುಕೊಳ್ಳುತ್ತಾ ಇರುವ ಬಟ್ಟೆಯನ್ನು ಹಳ್ಳಿಗಳಲ್ಲಿ ಕೂಡ ಹಂಚುತ್ತಾರೆಯೇ ಅಥವಾ ಸಿಟಿಗಳಲ್ಲಿ ಮಾತ್ರವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಳ್ಳಿಗಳಿಗೂ ಕೂಡ ತಾಲ್ಲೂಕುವಾರ್ ಆಗಿ attach ಮಾಡಿರಬಹುದು ; ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗ ತಾಲ್ಲೂಕುಗಳಿಗೆ ಕೊಡುತ್ತಾ ಇರತಕ್ಕ ಬಟ್ಟೆ ಸಾಕಾಗುವುದಿಲ್ಲವೆಂದು ಆಗಿಂದಾಗ್ಯೆ ತಾಲ್ಲೂಕು ಸಮಗ್ರ ಗ್ರಾಮ ಸೇವಾ ಪರಸ್ಪರ ಸಹಾಯ ಸಂಘದ ಮುಖಾಂತರ ತಮಗೆ ಅಹವಾಲುಗಳನ್ನು ಕೊಟ್ಟಿದ್ದರೂ ಕೂಡ ತಕ್ಕ ಏರ್ಪಾಡು ಮಾಡದೇ ಇರಲು ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1948ರಲ್ಲಿ ಕಂಟ್ರೋಲ್ re-impose ಆದಾಗ್ಗೆ ಒಂದು ಬೇಸಿಸ್ ಮೇಲೆ ಒಟ್ಟು ವ್ಯಾಪಾರಿಗಳನ್ನು ಗೊತ್ತುಮಾಡಿದರು. ಆಗ ಈ ವ್ಯಾಪಾರಿಗಳನ್ನು ಕೆಲವು ತಾಲ್ಲೂಕುಗಳಿಗೂ ಮತ್ತೆ ಕೆಲವರನ್ನು ಇತರ ಕೆಲವು ತಾಲ್ಲೂಕುಗಳಿಗೂ ಗೊತ್ತುಮಾಡಿದರು. ಇತ್ತೀಚೆಗೆ ಇನ್ನು ಕೆಲವು ಲೈಸೆನ್ಸ್‌ಗಳನ್ನು ಕೊಟ್ಟಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಒಂದು ಉದಾಹರಣೆ ಹೇಳುತ್ತೇನೆ. ಕುಣಿಗಲ್ ತಾಲ್ಲೂಕಿಗೆ ಬೇಕಾದ ಬಟ್ಟೆಗೆ ಬೆಂಗಳೂರಿನಲ್ಲಿರತಕ್ಕ ಹೋಲ್‌ಸೇಲರನ್ನು ಗೊತ್ತುಮಾಡಿದರೆ ಇವರು ಅಲ್ಲಿಗೆ ತೆಗೆದುಕೊಂಡು ಹೋಗುವುದಿಲ್ಲ. ಅದ್ದರಿಂದ ರಿಟೇಲರ್ಸ್‌ಗೆ ಅನನುಕೂಲವಾಗುತ್ತದೆ. ಆದಕಾರಣ ಆ ಏರ್ಪಾಡಿಗೆ ಬದಲಾಗಿ ಆಯಾಯ ಹಳ್ಳಿಯವರಿಗೇ ಹೋಲ್‌ಸೇಲ್ ಲೈಸೆನ್ಸ್ ಕೊಡುವುದು ಉತ್ತಮವಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲಿನಿಂದಲೂ ಕೊಟ್ಟಿರುವವರಿಗೆ ಏಕ್‌ದಂ ನಿಲ್ಲಿಸುವುದು ಕಷ್ಟ. ಆದ್ದರಿಂದ ಸಾಧ್ಯವಾದಷ್ಟೂ ಗ್ರಾಮಾಂತರ ಪ್ರದೇಶದಲ್ಲಿ ಕೋ-ಆಪರೇಟೀವ್ ಸೊಸೈಟಿಗಳಿಗೆ ಕೊಡುತ್ತಾ ಇದ್ದಾರೆ. We always prefer societies where there is a vacancy.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗ ಅವರಿಗಿರತಕ್ಕ ಕೋಟಾವನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಿ ಈ ಅಭಾವ ಕಾಲದಲ್ಲಿ ತಾಲ್ಲೂಕು ಮಲ್ಟಿ ಪರ್‌ಪಸ್ ಕೋ ಆಪರೇಟಿವ್ ಸೊಸೈಟಿಯವರು ಮಾರುವಂತೆ ಏರ್ಪಾಡುಮಾಡುವುದು ಉತ್ತಮವಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಯಾವ ತಾಲ್ಲೂಕು ಮಲ್ಟಿ ಪರ್‌ಪಸ್ ಸೊಸೈಟಿಯವರು ಕೇಳಿದ್ದಾರೋ ಅವರಿಗೆ ಕೊಟ್ಟಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ತಪ್ಪುಮಾಡಿದವರಿಗೆ ಶಿಕ್ಷೆ ಮಾಡಿದ್ದೇವೆಂದು ಹೇಳಿದಿರಿ, ಯಾರ್ಯಾರಿಗೆ ಹಾಗೆ ಶಿಕ್ಷೆ ಮಾಡಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಿವರಗಳು ಬೇಕಾದರೆ ನೋಟೀಸ್ ಬೇಕು. ಇಷ್ಟು ಜಿಲ್ಲೆಗಳಲ್ಲಿ ಇಷ್ಟು ಜನರಿಗೆ ಶಿಕ್ಷೆಯಾಗಿದೆ ಎಂಬುದನ್ನು ಬೇಕಾದರೆ ಹೇಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಒಟ್ಟು ವ್ಯಾಪಾರಿಗಳಿಗೆ ಖಾಯಮಾಗಿ ವಜಾಮಾಡಿದ್ದೀರೋ ಅಥವ ಸ್ವಲ್ಪ ಕಡಿಮೆಮಾಡಿದ್ದೀರೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವರಿಗೆ ವಾರ್ನ್ ಮಾಡಿದೆ, ಕೆಲವರಿಗೆ ವಜಾಮಾಡಿದೆ, ಕೆಲವರಿಗೆ ಪ್ರಾಸಿಕ್ಯೂಟ್ ಮಾಡಿದೆ, ಹೀಗೆ ಆಯಾ ತಪ್ಪಿಗನುಸಾರವಾಗಿ ಶಿಕ್ಷೆ ಮಾಡಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹೆಚ್ಚು ಶಿಕ್ಷೆಯಾಗಿರುವವರ ಸಂಖ್ಯೆ ಹೆಚ್ಚಾಗಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಟ್ಟು 175 ಜನರಿಗೆ ಶಿಕ್ಷೆಯಾಗಿದೆಯೆಂದು ಹೇಳಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹೋಲ್‌ಸೇಲರು ಮತ್ತು ರೀಟೇಲರುಗಳಲ್ಲಿ ಹೆಚ್ಚು ಶಿಕ್ಷೆಯಾಗಿರುವವರ ಸಂಖ್ಯೆ ಎಷ್ಟು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಂ. ಎಲ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಶ್ರೀ ಎಸ್. ಎಂ. ಲಕ್ಷ್ಮಣರಾವ್ ಎಂಬುವರು ಚಾಮರಾಜನಗರದಲ್ಲೇ ಇದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಅವರು ಮೊದಲಿನಿಂದಲೂ ಬಟ್ಟೆ ವ್ಯಾಪಾರಿಗಳೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು,

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಎಷ್ಟು ಜನ ಒಟ್ಟು ವ್ಯಾಪಾರಿಗಳ ಮೇಲೆ ದೂರು ಬಂದಿದೆ ಮತ್ತು ಎರಡು ತಿಂಗಳಿಂದೀಚೆಗೆ ಎಷ್ಟು ಒಟ್ಟು ವ್ಯಾಪಾರದ ಲೈಸೆನ್ಸ್ ಕೊಟ್ಟಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ತಾವು original trade channels ಪ್ರಕಾರವೇ ಕೊಡುವುದಾಗಿ ಹೇಳಿದಿರಿ, ಬೇರೆಯವರಿಗೇ ಕೊಡುವುದಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ, ಮೊದಲು original trade channels ಇಟ್ಟುಕೊಳ್ಳಬೇಕು. ಹಿಂದೆ 13 ಜನ ಎಂದು ಗೊತ್ತುಮಾಡಿದ್ದೆವು ಈಚೆಗೆ ದೇಶದಲ್ಲಿ ಬೇಕಾದಷ್ಟು ಜನ ಹೆಚ್ಚಿದ್ದಾರೆ. ಈ ಹೊತ್ತು 357 ಜನರಿದ್ದಾರೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಹೋದ ಅಧಿವೇಶನದಿಂದೀಚೆಗೆ ಇದುವರೆಗೆ ಯಾರಿಗಾದರೂ ಒಟ್ಟು ವ್ಯಾಪಾರದ ಲೈಸೆನ್ಸ್ ಕೊಟ್ಟಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಸಿದ್ಧವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಕೆಲವರು ಒಟ್ಟು ವ್ಯಾಪಾರಿಗಳನ್ನು ಪ್ರಾಸೆಕ್ಯೂಟ್ ಮಾಡಿದ್ದಾರೆಂದು ಹೇಳಿದಿರಿ, ಅವರು ಯಾರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಸಿದ್ಧವೀರಪ್ಪನವರು.—ಇಂತಹ ಕೇಸಸ್ ಯಾವುದಾದರೂ withdraw ಆಗಿವೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಸಿದ್ಧವೀರಪ್ಪನವರು.—ಚಿಲ್ಲರೆ ವ್ಯಾಪಾರಿಗಳು ಕೆಲವರು ಅಂಗಡಿಯಿಟ್ಟುಕೊಂಡಿಲ್ಲವೆಂಬುದನ್ನು ತನಿಖೆಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ದೂರು ಬಂದ ಕಡೆ ತನಿಖೆಮಾಡಿ ರುಜುವಾತಾದ್ದರೆ ಶಿಕ್ಷೆ ಮಾಡಿದ್ದೇವೆ.

ಶ್ರೀ ಎಚ್. ಸಿದ್ಧವೀರಪ್ಪನವರು.—ಚಿಲ್ಲರೆ ವರ್ತಕರು ಅಂಗಡಿಯನ್ನೇ ಇಟ್ಟುಕೊಳ್ಳದೆ ಬಟ್ಟೆಯನ್ನು ತೆಗೆದುಕೊಂಡಿದ್ದರೆ ಅಂಥವರನ್ನು ಪ್ರಾಸೆಕ್ಯೂಟ್ ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್, ಯಾವುದಾದರೂ ನಿರ್ದಿಷ್ಟವಾಗಿ ಹೇಳಿದರೆ ವಿಚಾರಿಸುತ್ತೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ನಿಯಮಗಳಿಗನುಸಾರವಾಗಿ ವ್ಯಾಪಾರಮಾಡುತ್ತಿದ್ದಾರೆಯೆ ಇಲ್ಲವೆ ಎಂಬುದನ್ನು ನೋಡಿಕೊಳ್ಳಲು ಸಿಬ್ಬಂದಿ ಇದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇದನ್ನೆಲ್ಲಾ ಚೆಕ್‌ಮಾಡುವವರು ಯಾರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Enforcement staff ಮಾಡುತ್ತಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹೋಲ್‌ಸೇಲರುಗಳು ಮತ್ತು ರೀಟೇಲರುಗಳು ನಿರ್ದಿಷ್ಟವಾದ ಸ್ಥಳದಲ್ಲಿ ವ್ಯಾಪಾರಮಾಡಬೇಕು, ಬೋರ್ಡುಗಳನ್ನು ಹಾಕಿಕೊಳ್ಳಬೇಕು ಎಂದು ನಿಬಂಧನೆಗಳಲ್ಲದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಬ್ಬೊಬ್ಬ ಪ್ರೊಕ್ಯೂರರು, ಹೋಲ್‌ಸೇಲರು ಮತ್ತು ರೀಟೇಲರು ಇಷ್ಟಿಷ್ಟು ರೂಪಾಯಿನಷ್ಟು ವ್ಯಾಪಾರಮಾಡಬೇಕು, ನಿರ್ದಿಷ್ಟವಾದ ಸ್ಥಳದಲ್ಲಿ ವ್ಯಾಪಾರಮಾಡಬೇಕು, ಬೋರ್ಡ್ ಹಾಕಿಕೊಳ್ಳಬೇಕು ಎಂಬುದಲ್ಲದೆ ಯಾರ್ಯಾರಿಗೆ ಬಟ್ಟೆಯನ್ನು ಕೊಡುತ್ತಾರೆ ಎಂಬ ವಿವರಗಳನ್ನೂ ಕಂಟ್ರೋಲರ್‌ರವರಿಗೆ ಕಳುಹಿಸಬೇಕೆಂದಿದೆ.

Sri M. GOVINDA REDDY.—My question is whether they are obliged to have a known shop at a known address and also whether they are obliged to have boards on their shops?

The Hon'ble Sri T. MARIAPPA.—Yes.

Sri M. GOVINDA REDDY.—Has it come to the notice of the Government that in the City of Bangalore some wholesalers do not have boards ?

The Hon'ble Sri T. MARIAPPA.—It has not come to my notice. If specific instances are brought to my notice, I shall look into it.

Sri M. GOVINDA REDDY.—Misrimal, I believe, is one of the wholesalers in Bangalore City. He has no boards on his shop?

The Hon'ble Sri T. MARIAPPA.—I shall verify that.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಹೋಲ್‌ಸೇಲರುಗಳ ಪೈಕಿ ಶಿಕ್ಷೆ ಮಾಡಲ್ಪಟ್ಟವರ ಸಂಖ್ಯೆಯನ್ನು ಹೇಳಿದಿರಿ, ರೀಟೇಲರ್‌ಗಳಲ್ಲಿ ಶಿಕ್ಷೆ ಮಾಡಲ್ಪಟ್ಟವರ ಸಂಖ್ಯೆ ಎಷ್ಟು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಟ್ಟು 175 ಜನರು, ಇವರಲ್ಲಿ ಕೆಲವರಿಗೆ ಲೈಸೆನ್ಸ್ ವಜಾ ಮಾಡಿದೆ, ಕೆಲವರಿಗೆ ಸಸ್‌ಪೆಂಡ್ ಮಾಡಿದೆ. ಹೀಗೆ ಬೇರೆ ಬೇರೆ ಶಿಕ್ಷೆ ಮಾಡಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ವಜಾಮಾಡಿ ಪುನಃ ಲೈಸೆನ್ಸ್ ಕೊಟ್ಟಿರುವ ಉದಾಹರಣೆ ಇದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹೋಲ್‌ಸೇಲ್ ಮತ್ತು ರೀಟೇಲ್ ವ್ಯಾಪಾರಿಗಳು ಹತೋಟಿ ಆಜ್ಞೆಗೆ ವ್ಯತಿರಿಕ್ತವಾಗಿ ಕೆಲಸ ಮಾಡಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಇಂಥವರಿಗೆ ಹೀಗೆ ರಿಯಾಯಿತಿ ತೋರಿಸಬಹುದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಿ ಯಾರು ಏನು ತಪ್ಪು ಮಾಡಿರುತ್ತಾರೋ ಅದರಮೇಲೆ ಹೋಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಮ್ಮ ದೇಶದಲ್ಲಿ ಬಟ್ಟೆಯ ಉತ್ಪತ್ತಿ ಕಡಮೆಯಾಗಿರುವುದರಿಂದ ತೊಂದರೆಯೋ ಅಥವ ಹಂಚಿಕೆ ಸರಿಯಾಗಿಲ್ಲದೇ ಇರುವುದರಿಂದ ತೊಂದರೆಯಾಗಿದೆಯೊ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮಗೆ ಅಲಾಟ್‌ಮೆಂಟ್ ಕಡಿಮೆಯಾಗಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಳ್ಳಿಗಳಿಗೆ ಸರಿಯಾಗಿ ತಲಪದೇಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಗ್ರಾಮಾಂತರಗಳಿಗೆ ಹೋಗಬೇಕಾದ ಕೋಟಾ ಸರಿಯಾಗಿ ಹೋಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಶ್ರೀಮಾನ್ ಎಸ್. ಎಂ. ಲಕ್ಷ್ಮಣರಾಯರು ಎಂಬುವರು normal trade channelಗೆ ಒಳಪಟ್ಟ 13 ಜನರಲ್ಲಿ ಒಬ್ಬರೆಂದು ಹೇಳಿದಿರಿ, ಅವರು ಯಾವ ಸ್ಥಳದವರು ಮತ್ತು ಅವರ ತಂದೆಯವರ ಹೆಸರೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

Sri H. M. CHANNABASAPPA.—Could Government at least tell me if he is a native of Chamarajanagar?

The Hon'ble Sri T. MARIAPPA.—I gave out the addresses. If my friend puts a question, I shall call for particulars and give him.

Sri H. M. CHANNABASAPPA.—Is he a man from Bangalore?

The Hon'ble Sri T. MARIAPPA.—I am not very certain. He is likely to be a man from Bangalore and he may have a branch at Chamarajanagar.

Sri H. M. CHANNABASAPPA.—At the time you decided to have these 13 normal channel dealers, were there no normal channel dealers in Chamarajanagar except this Bangalore man?

The Hon'ble Sri T. MARIAPPA.—I want notice.

Sri H. M. CHANNABASAPPA.—Will the Government verify the fact that he is not a man from Chamarajanagar?

The Hon'ble Sri T. MARIAPPA.—I have already said I want notice.

Sri H. M. CHANNABASAPPA.—Will the Government take action to verify if he is not a man of Chamarajanagar?

The Hon'ble Sri T. MARIAPPA.—I have already said that if a proper question is put I will call for particulars and furnish the same.

Sri H. M. CHANNABASAPPA.—How many wholesale dealers are there in Krishnarajanagar Taluk?

The Hon'ble Sri T. MARIAPPA.—I want notice.

Sri H. M. CHANNABASAPPA.—Are there any cases of habitual offenders in Krishnarajanagar Taluk?

The Hon'ble Sri T. MARIAPPA.—That does not arise out of this question.

Sri H. M. CHANNABASAPPA.—Have the Government repeatedly punished any wholesale dealer in that Taluk?

The Hon'ble Sri T. MARIAPPA.—The Government have not repeatedly punished any dealer.

Sri H. M. CHANNABASAPPA.—Amongst those who were punished is there one wholesale dealer in that taluk who has been repeatedly punished?

The Hon'ble Sri T. MARIAPPA.—I want notice.

Sri H. M. CHANNABASAPPA.—Have the Government recently excused a person who was recommended against by the Director of Civil Supplies?

The Hon'ble Sri T. MARIAPPA.—I am very sorry. He was not recomended that he was a habitual offender. Let there be no reflection against the Director because he is not here to defend himself.

Sri H. M. CHANNABASAPPA.—It is up to the Minister to say yes or no. I do not want detailed explanation. Have the Government taken action recently to excuse a habitual offender in Krishnarajanagar Taluk who was recommended by the Director of Civil Supplies that he was a black-marketeer?

The Hon'ble Sri T. MARIAPPA.—Government have not excused any habitual offender. There was some irregularity in accounting and he has been warned.

Sri H. M. CHANNABASAPPA.—Was any wholesale dealer recommended by the Director of Civil Supplies as a black-marketeer?

The Hon'ble Sri T. MARIAPPA.—No.

Sri H. M. CHANNABASAPPA.—Has he cancelled the license of that particular person?

The Hon'ble Sri T. MARIAPPA.—No.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸರ್ಕಾರದ ಉದ್ದೇಶದಲ್ಲಿ ಹಿಂದಿದ್ದ ವ್ಯಾಪಾರ ಮಾರ್ಗಗಳನ್ನು ತಪ್ಪಿಸಬಾರದೆಂದು ಹೀಗೆ ಮಾಡಿದೆಯೇ?

ಅಧ್ಯಕ್ಷರು.—ತಾವು ಯಾವುದೋ ಪ್ರಶ್ನೆಯನ್ನು ಕೇಳುತ್ತಿದ್ದೀರಲ್ಲಾ! ಇಲ್ಲಿ ಪ್ರಶ್ನೆಯಿರುವುದೇ ಒಂದು, ನಿಮ್ಮ ಪ್ರಶ್ನೆಯೇ ಒಂದು. ಬಟ್ಟೆ ವ್ಯಾಪಾರಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನೆಲ್ಲಾ ಈಗ ಕೇಳುವುದಕ್ಕಾಗುತ್ತದೆಯೇ!!

ಶ್ರೀ ಬಿ. ಹುಚ್ಚೇಗೌಡರು.—ಅವರು ಹೇಳಿದ ಉತ್ತರದಮೇಲೆ ಉಪ ಪ್ರಶ್ನೆ ಕೇಳುತ್ತಿದ್ದೇನೆ.

ಅಧ್ಯಕ್ಷರು.—ಅವರು ಉತ್ತರ ಹೇಳಿದ್ದೇ ತಪ್ಪೆ!

ಶ್ರೀ ಬಿ. ಹುಚ್ಚೇಗೌಡರು.—ನನ್ನ ಪ್ರಶ್ನೆಯಿಷ್ಟೆ; ಆಹಾರ ಧಾನ್ಯಗಳ ವ್ಯವಹಾರದಲ್ಲಿ ಯಾವ ರೀತಿ ಮಾಡುತ್ತಿದ್ದೀರೋ ಅದೇ ರೀತಿ ಇಲ್ಲಿಯೂ ಏಕೆ ಮಾಡಕೂಡದ?

ಅಧ್ಯಕ್ಷರು.—ತಮ್ಮ ಪ್ರಶ್ನೆ ಸ್ಪಷ್ಟವಾಗಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಆಹಾರದಾನ್ಯಗಳ ವಿಚಾರದಲ್ಲಿ ಸರ್ಕಾರದವರೇ ಹೇಗೆ ತರಿಸಿಕೊಂಡು ಮಾರಾಟಮಾಡಿಸುತ್ತಾರೋ ಹಾಗೆಯೇ ಇಲ್ಲಿಯೂ ಏಕೆ ಮಾಡಕೂಡದು?

Sri H. K. VEERANNA GOWDA (Mandya District-General).— It is a matter of opinion.

ಶ್ರೀ ಬಿ. ಹುಚ್ಚೇಗೌಡರು.—ಅಭಿಪ್ರಾಯವಲ್ಲ, ನೀತಿಗೆ ಸಂಬಂಧಿಸಿದ್ದು.

Mr. SPEAKER.—That is not a proper supplementary.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಪ್ರಶ್ನೆಯಿರುವುದು ಬಟ್ಟೆಯ ಅಲಾಟ್‌ಮೆಂಟ್ ವಿಚಾರದಲ್ಲಿ, ನೀವು ಮೂಲ ನೀತಿಯನ್ನೇ ಪ್ರಶ್ನೆ ಮಾಡುತ್ತಿದ್ದೀರಿ!

ಶ್ರೀ ಬಿ. ಹುಚ್ಚೇಗೌಡರು.—ವರ್ತಕರುಗಳಿಗೇ ಬಿಟ್ಟರೆ ಅವರು ಹೀಗೆಲ್ಲಾ ತಪ್ಪುಮಾಡುತ್ತಾರೆ; ಅನೇಕರು ಬ್ಲಾಕ್‌ಮಾರ್ಕೆಟ್ ಮಾಡುತ್ತಾರೆ. ಆದ್ದರಿಂದ ಸರ್ಕಾರದವರೇ ಏಕೆ ಸ್ವಂತವಾಗಿ ಮಾಡಕೂಡದೆಂದು ನಾನು ಕೇಳುತ್ತಿದ್ದೇನೆ. ಮೊದಲು 13 ಜನರಿಗೆ ಕೊಟ್ಟಾಗ ಹಿಂದಿದ್ದ ವ್ಯಾಪಾರಗಾರರನ್ನು ತಪ್ಪಿಸಕೂಡದೆಂದು ಕೊಟ್ಟರೆಂದು ಹೇಳಿದರು. ಆದರೆ ಈಗ.........

ಅಧ್ಯಕ್ಷರು.—ಈಗ ಬೇಕಾದಷ್ಟು ಎಲ್ಲಾ ಸೊಸೈಟಿಗಳಿಗೂ ಕೊಟ್ಟಿದ್ದಾರಲ್ಲಾ!

ಶ್ರೀ ಬಿ. ಹುಚ್ಚೇಗೌಡರು.—ಆಹಾರಧಾನ್ಯಗಳ ವಿಷಯದಲ್ಲಿ ಅನುಸರಿಸಿರುವ ನೀತಿಯನ್ನೇ ಇಲ್ಲೂ ಏಕೆ ಅನುಸರಿಸಕೂಡದು ?

The Hon'ble Sri T. MARIAPPA.—Does it arise out of this question, Sir? Then I will answer.

Mr. SPEAKER.—It does not arise.

The Hon'ble Sri T. MARIAPPA.—We have enough headaches with food control and we do not want to have too many headaches.

ಶ್ರೀ ಬಿ. ಹುಚ್ಚೇಗೌಡರು.—ಸರ್ಕಾರದವರು ಇದು ಸಾಧ್ಯವಿಲ್ಲವೆಂದು ಬಿಟ್ಟಿದ್ದಾರೆಯೇ ಅಥವಾ ಹಿಂದಿದ್ದ ವ್ಯಾಪಾರ ಮಾರ್ಗಗಳನ್ನು ತಪ್ಪಿಸಕೂಡದೆಂದು ಹೀಗೆ ಮಾಡಿದ್ದಾರೆಯೇ ?

The Hon'ble Sri T. MARIAPPA.—If I understand the Hon'ble Member, we have combined here the trade channels, the Co-operative Societies and also new comers into this field so that there may be a sort of check and counter check.

Sri B. HUTCHE GOWDA.—Co-operative Society is also treated as a business concern. ಇದನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಸರ್ಕಾರದವರೇನಾದರೂ ಇದನ್ನು ಮಾಡುತ್ತಿಲ್ಲವೇ ?

The Hon'ble Sri T. MARIAPPA.—It is a matter of policy. We have thought over the question and we have decided to adopt this course because it was thought to be a better course.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ತಾವು ಲೈಸೆನ್ಸ್‌ಗಳನ್ನು ಕೊಡುವುದರಲ್ಲಿ ಒಟ್ಟು ವ್ಯಾಪಾರದ ಲೈಸೆನ್ಸನ್ನೂ ಚಿಲ್ಲರೆ ವ್ಯಾಪಾರದ ಲೈಸೆನ್ಸನ್ನೂ ಒಬ್ಬರಿಗೇ ಕೊಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಬ್ಬರಿಗೇ ಕೊಡುವುದಿಲ್ಲ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಒಂದೇ ಮನೆಯವರಿಗೆ ಕೊಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಟ್ಟು ಕುಟುಂಬವಾಗಿದ್ದರೆ ಕೊಡುವುದಿಲ್ಲ. ಹಂಚಿಕೆ ಮಾಡಿಕೊಂಡಿದ್ದರೆ ಕೊಡಬಹುದು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಹಾಗೆ ಒಂದೇ ಸಂಸಾರದವರಿಗೆ ಕೊಟ್ಟಿದ್ದರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಚಿತವಾಗಿ ಯಾವುದಾದರೂ ಅಂಥ ಸಂದರ್ಭವಿರುವುದನ್ನು ತಿಳಿಸಿದರೆ ಅದನ್ನು ತಪ್ಪಿಸುತ್ತೇವೆ.

Janab SYED ABDUR RAHMAN (Chikmagalur *cum* Shimoga—Muslim).—What was the reason for the deterioration of the cloth position in the last four or five months?

The Hon'ble Sri T. MARIAPPA.—Less of production and export drive by the Government of India.

Janab SYED ABDUR RAHMAN.—With reference to the answer to (*b*), could the Government let us know the cloth position following the month of January 1951?

The Hon'ble Sri T. MARIAPPA.—The Textile Commissioner to the Government of India allotted less number of bales and that was the reason why the position deteriorated. In September 1950 there was surplus cloth in Mysore and nobody would buy it.

Janab SYED ABDUR RAHMAN.—What is the position now?

The Hon'ble Sri T. MARIAPPA.—There is slight improvement now.

Janab SYED ABDUR RAHMAN.—Is there a steady improvement in the cloth position?

The Hon'ble Sri T. MARIAPPA.—Yes and it is going to be decidedly better in June.

Janab SYED ABDUR RAHMAN.—Could we have some information whether the cloth position has improved since we last met?

The Hon'ble Sri T. MARIAPPA.—Yes. The Hon'ble Member will see that we were allotting 3 bales and it was raised to 5; perhaps it will be 6.

Janab SYED ABDUR RAHMAN.—If the cloth position has improved will the public have facilities of getting more cloth?

Mr. SPEAKER.—Where is the doubt?

Janab SYED ABDUR RAHMAN.—Let the answer come from the Hon'ble Minister, Sir.

Mr. SPEAKER.—Should it require an answer by the Government?

Janab SYED ABDUR RAHMAN.—I want to know what exactly is the position today. If the cloth position has improved we will be able to get more cloth for festivals.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ-ನಿಮ್ನ ಪಂಗಡ).—ಶಿಕ್ಷೆ ಮಾಡಲ್ಪಟ್ಟವರ ಹೆಸರನ್ನು ಸ್ಥಳೀಯ ಪತ್ರಿಕೆಗಳಲ್ಲಿ ಚೆನ್ನಾಗಿ ಪ್ರಕಟಗೊಳಿಸಬೇಕೆಂದೇನಾದರೂ ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಮಾನ್ಯವಾಗಿ ಎಲ್ಲಾ Vernacular ಪತ್ರಿಕೆಗಳಲ್ಲೆಲ್ಲಾ ಪ್ರಕಟಗೊಳಿಸಲಾಗುತ್ತಿದೆ.

ಶ್ರೀ ಟಿ. ಹನುಮಯ್ಯನವರು.—ಇದುವರೆಗೆ ಯಾವ ಪತ್ರಿಕೆಯಲ್ಲೂ ಬಂದಿಲ್ಲವೆಂಬುದು ತಮಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಷ್ಟೋ ಪತ್ರಿಕೆಗಳಲ್ಲಿ ಇಂಥವರ ಸಸ್ಪೆಂಡ್ ಆಗಿದೆ, ಇಂಥವರ ಡಿಸ್‌ಮಿಸ್ ಆಗಿದೆ, ಇಂಥವರನ್ನು ಹಿಡಿದರು, ಎಂದು ಮುಂತಾಗಿ ಬರುತ್ತಿರುವುದನ್ನು ಎಲ್ಲರೂ ನೋಡಿರಬಹುದು.

ಶ್ರೀ ಟಿ. ಹನುಮಯ್ಯನವರು.—ತಪ್ಪು ಅಡ್ರೆಸ್ ಕೊಟ್ಟಿರುವವರಿಗೆ ಏನು ಶಿಕ್ಷೆ ಕೊಡುತ್ತೀರಿ ?

Mr. SPEAKER.—The Hon'ble Minister need not answer this question. Next question.

Tiled Houses for Depressed Classes.

*ಪ್ರಶ್ನೆ 138.—ಶ್ರೀ ಎಂ. ಸಿ. ವೆಂಕಟೇಶ್ವರ ಅವರು (ಮಂಡ್ಯ ಡಿಸ್ಟ್ರಿಕ್ಟು—ನಿಮ್ನ ತರಗತಿಗಳವರ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಈಗ ಪ್ರತಿ ತಾಲ್ಲೂಕಿನಲ್ಲಿಯೂ ನಿಮ್ನ ತರಗತಿಗಳವರಿಗಾಗಿ ಇರತಕ್ಕ ಹುಲ್ಲು ಚಾವಣಿಯ ಗುಡಿಸಲುಗಳ ಸಂಖ್ಯೆ ಎಷ್ಟು :

(b) ನಿಮ್ನ ತರಗತಿಗಳವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕಾಗಿ ಕೊಡುವ ಗ್ರಾಂಟುಗಳ ಮೂಲಕ ಪ್ರತಿ ತಾಲ್ಲೂಕಿನಲ್ಲಿಯೂ 1949-50ನೆಯ ಸಾಲಿನಲ್ಲಿ ಕಟ್ಟಿಸಿದ ಹೆಂಚಿನ ಮನೆಗಳೆಷ್ಟು ?

ಉತ್ತರ.—ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರು).—

(a) ಮತ್ತು (b) ತಾಲ್ಲೂಕುವಾರು ವಿವರಗಳನ್ನು ಒದಗಿಸಿರುವ ಪಟ್ಟಿಯನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ (ಪರಿಶಿಷ್ಟವನ್ನು ದಯೆಯಿಟ್ಟು ನೋಡಿ.) ತುಮಕೂರು ಡಿಸ್ಟ್ರಿಕ್ಟಿನ ಸೀರ್ಯ, ಕೊರಟಗೆರೆ, ಮಧುಗಿರಿ, ಪಾವಗಡ ಮತ್ತು ತುಮಕೂರು ತಾಲ್ಲೂಕುಗಳಲ್ಲಿ ಕಟ್ಟಿಸಿದ ಮನೆಗಳಲ್ಲಿ ಮಣ್ಣುಮಾಳಿಗೆಯ ಮನೆಗಳೂ ಸೇರಿವೆ.

ಸಂಸ್ಥಾನದಲ್ಲಿ ಕಷ್ಟನಿವಾರಣೆಗಾಗಿ ಗ್ರಾಂಟುಗಳನ್ನು ಕೊಡುವುದರ ಮೂಲಕ ನಿಮ್ನ ತರಗತಿಗಳವರಿಗಾಗಿ ಕಟ್ಟಿ. ಪೂರೈಸಿರುವ ಹುಲ್ಲು ಚಾವಣಿಯ ಗುಡಿಸಲುಗಳ ಮತ್ತು ಹೆಂಚಿನ ಮನೆಗಳ ಸಂಖ್ಯೆಯನ್ನು ತೋರಿಸುವ ತಖ್ತೆ.

	ತಾಲ್ಲೂಕಿನ ಹೆಸರು	ನಿಮ್ನ ತರಗತಿಗಳವರ ಗುಡಿಸಲುಗಳ ಸಂಖ್ಯೆ	ಕಷ್ಟನಿವಾರಣೆಗಾಗಿ ಗ್ರಾಂಟುಗಳನ್ನು ಕೊಡುವುದರ ಮೂಲಕ ಕಟ್ಟಿಸಿರುವ ಹೆಂಚಿನ ಮನೆಗಳ ಸಂಖ್ಯೆ
	ಬೆಂಗಳೂರು ಡಿಸ್ಟ್ರಿಕ್ಟು—		
1	ನೆಲಮಂಗಲ	3,679	41
2	ದೊಡ್ಡಬಳ್ಳಾಪುರ	3,500	66
3	ದೇವನಹಳ್ಳಿ	2,956	27
4	ಹೊಸಕೋಟೆ	4,269	36
5	ಆನೇಕಲ	2,705	139
6	ಕಾನಕಾನಹಳ್ಳಿ	3,418	16
7	ಚನ್ನಪಟ್ಟಣ	2,967	31
8	ರಾಮನಗರಂ	2.275	67
9	ಮಾಗಡಿ	3,968	40
10	ಬೆಂಗಳೂರು ದಕ್ಷಿಣ	4,435	49
11	ಬೆಂಗಳೂರು ಉತ್ತರ	4,040	104
	ಒಟ್ಟು	38,212	616

ತಾಲ್ಲೂಕಿನ ಹೆಸರು		ನಿಮ್ನ ತರಗತಿಗಳವರ ಹುಲ್ಲು ಚಾವಣಿಯ ಗುಡಿಸಲುಗಳ ಸಂಖ್ಯೆ	ಕಷ್ಟ ನಿವಾರಣೆಗಾಗಿ ಗ್ರಾಂಟುಗಳನ್ನು ಕೊಡುವುದರ ಮೂಲಕ ಕಟ್ಟಿ ಪೂರೈಸಿರುವ ಹೆಂಚಿನಮನೆಗಳ ಸಂಖ್ಯೆ
ಕೋಲಾರ ಡಿಸ್ಟ್ರಿಕ್ಟು—			
1 ಕೋಲಾರ	... ...	3,111	64
2 ಮಾಲೂರು	... ...	1,500	...
3 ಶ್ರೀನಿವಾಸಪುರ	... ...	2 422	11
4 ಬಂಗಾರಪೇಟೆ	... ...	3,340	70
5 ಮುಳಬಾಗಿಲು	... ...	3,628	54
6 ಚಿಂತಾಮಣಿ	... ...	3,509	19
7 ಶಿಡ್ಲಘಟ್ಟ	... ...	2,315	34
8 ಚಿಕ್ಕಬಳ್ಳಾಪುರ	... ...	1,837	49
9 ಗೌರಿಬಿದನೂರು	... ...	2,082	21
10 ಬಾಗೇಪಲ್ಲಿ	... ...	1,514	14
11 ಗುಡಿಬಂಡೆ	... ...	1,909	16
	ಒಟ್ಟು ...	27,158	352
ಚಿಕ್ಕಮಗಳೂರು ಡಿಸ್ಟ್ರಿಕ್ಟು—			
1 ಚಿಕ್ಕಮಗಳೂರು	... ...	2,722	89
2 ಮೂಡಿಗೆರೆ	... ...	1,837	32
3 ಕೊಪ್ಪ	... ...	1,007	69
4 ಶೃಂಗೇರಿ ಸಬ್ ತಾಲ್ಲೂಕು	... ...	968	7
5 ನರಸಿಂಹರಾಜಪುರ ಸಬ್ ತಾಲ್ಲೂಕು	... ...	398	20
6 ತರೀಕೆರೆ	... ...	1,360	50
7 ಕಡೂರು	... ...	2,746	45
	ಒಟ್ಟು ...	10,338	312
ಮೈಸೂರು ಡಿಸ್ಟ್ರಿಕ್ಟು—			
1 ಮೈಸೂರು	... ...	2,200	89
2 ಕೃಷ್ಣರಾಜನಗರ	... ...	2,690	44
3 ಹುಣಸೂರು	... ...	1,734	68
4 ಪಿರಿಯಾಪಟ್ಟ	... ...	2,809	12
5 ಹೆಗ್ಗಡದೇವನಕೋಟೆ	... ...	1 894	393
6 ನಂಜನಗೂಡು	... ...	1,881	128
7 ಗುಂಡ್ಲುಪೇಟೆ	... ...	1,067	103
8 ಟಿ.-ನರಸೀಪುರ	... ...	2,581	52
9 ಚಾಮರಾಜನಗರ	... ...	1,505	160
10 ಯಳಂದೂರು	... ...	470	112
	ಒಟ್ಟು ...	18,882	1,151
ತುಮಕೂರು ಡಿಸ್ಟ್ರಿಕ್ಟು—			
1 ತುಮಕೂರು	... ...	3,361	63
2 ಗುಬ್ಬಿ	... ...	1,432	33
3 ಕುಣಿಗಲ್	... ...	2,030	19
4 ತುರುವೇಕೆರೆ	... ...	1,613	37
5 ಚಿಕ್ಕನಾಯ್ಕನಹಳ್ಳಿ	... ...	1,676	28
6 ತಿಪಟೂರು	... ...	2,310	71
7 ಸಿರ್ರಾ	... ...	1,260	40
8 ಪಾವಗಡ	... ...	2,236	22
9 ಮಧುಗಿರಿ	... ...	882	47
10 ಕೊರಟಗೆರೆ	... ...	1,052	30
	ಒಟ್ಟು ...	18,092	390

(ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.)

ತಾಲ್ಲೂಕಿನ ಹೆಸರು		ನಿಮ್ನ ತರಗತಿಗಳವರ ಮನೆ ಅಪಾಯಕರ ಗುಡಿಸಲುಗಳ ಸಂಖ್ಯೆ	ಪ್ರೋತ್ಸಾಹಕವಾಗಿ ಗ್ರಾಂಟುಗಳನ್ನು ಕೊಡುವುದರ ಮೂಲಕ ಕಟ್ಟಿ ಪೂರೈಸಿರುವ ಮನೆಗಳ ಸಂಖ್ಯೆ
ಚಿತ್ರದುರ್ಗ ಡಿಸ್ಟ್ರಿಕ್ಟು—			
1 ಚಿತ್ರದುರ್ಗ	... ...	3,991	337
2 ಚೆಳ್ಳಕೆರೆ	... ...	3,312	79
3 ಹಿರಿಯೂರು	... ...	3,359	40
4 ಮೊಳಕಾಲ್ಮುರು	... ...	716	80
5 ದಾವಣಗೆರೆ	... ...	1,570	92
6 ಹೊಳಲ್‌ಕೆರೆ	... ...	2,865	49
7 ಹೊಸದುರ್ಗ	... ...	2,650	28
8 ಜಗಳೂರು	... ...	2,053	38
9 ಹರಿಹರ	... ...	833	43
ಒಟ್ಟು	...	21,349	786
ಶಿವಮೊಗ್ಗ ಡಿಸ್ಟ್ರಿಕ್ಟು—			
1 ಶಿವಮೊಗ್ಗ	.. ...	2,414	25
2 ಭದ್ರಾವತಿ	...	1,267	45
3 ಚೆನ್ನಗಿರಿ	... ...	3,364	54
4 ಹೊನ್ನಾಳಿ	... ...	2,324	106
5 ಶಿಕಾರಿಪುರ	... ...	2,703	55
6 ಸೊರಬ	... ...	1,262	100
7 ಸಾಗರ	.. ...	754	21
8 ನಗರ	... ...	190	...
9 ತೀರ್ಥಹಳ್ಳಿ	... ...	613	
ಒಟ್ಟು	...	14,837	409
ಹಾಸನ ಡಿಸ್ಟ್ರಿಕ್ಟು—			
1 ಹಾಸನ	... ...	2,500	58
2 ಅರಸೀಕೆರೆ	... ...	1 650	72
3 ಬೇಲೂರು	... ...	2,552	79
4 ಸಕಲೇಶಪುರ	... ...	1,891	20
5 ಅರಕಲಗೂಡು	.. ...	2,161	40
6 ಚೆನ್ನರಾಯಪಟ್ಟಣ	... ...	1,228	61
7 ಆಲೂರು	... ...	1,124	8
8 ಹೊಳೇನರಸೀಪುರ	... .	552	56
ಒಟ್ಟು	...	13,638	394
ಮಂಡ್ಯ ಡಿಸ್ಟ್ರಿಕ್ಟು—			
1 ಮಂಡ್ಯ	... ...	823	5
2 ಮದ್ದೂರು	... ...	2,401	24
3 ಮಳವಳ್ಳಿ	... ...	3,337	130
4 ಪಾಂಡವಪುರ	... ...	929	58
5 ಶ್ರೀರಂಗಪಟ್ಟಣ	... ...	819	28
6 ಕೃಷ್ಣರಾಜಪೇಟೆ	... ...	1,502	73
7 ನಾಗಮಂಗಲ	... ...	1,939	33
ಒಟ್ಟು	...	11,750	353

ಮಂಡ್ಯ ತಾಲ್ಲೂಕಿನಲ್ಲಿ ಕಟ್ಟಲಾಗುತ್ತಿರುವ 16 ಮನೆಗಳ ಪೈಕಿ, 5 ಮನೆಗಳನ್ನು ಕಟ್ಟಿ ಪೂರೈಸಲಾಗಿದೆ ಮತ್ತು ಉಳಿದವುಗಳ ಕೆಲಸವು ಮುಂದುವರೆಯುತ್ತಿದೆ.

ಕೋಲಾರ ಡಿಸ್ಟ್ರಿಕ್ಟಿನಲ್ಲಿ ನಿಮ್ನ ತರಗತಿಗಳವರಿಗಾಗಿ ತಲಗವಾರದಲ್ಲಿ 15 ಮನೆಗಳುಳ್ಳ ಮತ್ತು ಮಿಂಡಹಳ್ಳಿಯಲ್ಲಿ 20 ಮನೆಗಳುಳ್ಳ ವಸಾಹತಗಳನ್ನು ('ಕಾಲೊನಿ') ಏರ್ಪಡಿಸಲು, 1949-50ನೆಯ ಸಾಲಿನಲ್ಲಿ 4,500 ರೂಪಾಯಿಗಳ ಮತ್ತು 6,000 ರೂಪಾಯಿಗಳ ಎರಡು ವಿಶೇಷ ರೀತಿಯ ಗ್ರಾಂಟುಗಳನ್ನು ಮಂಜೂರ್ಮಾಡಲಾಗಿದೆ. ಆ ಸಾಲಿನಲ್ಲಿ, ಇವುಗಳ ಪೈಕಿ ಯಾವ ಮನೆಗಳನ್ನೂ ಕಟ್ಟಿ ಪೂರೈಸಿಲ್ಲ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಇಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ತಾಲ್ಲೂಕುವಾರು ಇಷ್ಟಿಷ್ಟು ಮನೆಗಳಿವೆಯೆಂದು ಹೇಳಿದ್ದೀರಿ; ಯಾವ ವರ್ಷಕ್ಕೆ ಸಂಬಂಧಿಸಿದ್ದೆಂದು ತಿಳಿಸಿಲ್ಲ. ಅದನ್ನು ಹೇಳುತ್ತೀರಾ?

*ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೀವು ಯಾವ ವರ್ಷಕ್ಕೆ ಕೇಳಿದ್ದೀರೋ ಅದೇ ವರ್ಷಕ್ಕೆ ಕೊಟ್ಟಿರುವುದು.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಹಾಗಾದರೆ 1949ನೆಯ ಇಸವಿಯ ವರೆಗೆ ಒಟ್ಟು ಎಷ್ಟು ಮನೆಗಳನ್ನು ಕಟ್ಟಿ ಮುಗಿಸಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಂಕಿ ಅಂಶಗಳು ಈಗ ನನ್ನಲ್ಲಿಲ್ಲ, ಆಮೇಲೆ ಬೇಕಾದರೆ ಹೇಳುತ್ತೇನೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಇಷ್ಟೆಲ್ಲಾ ಅಂಕಿ ಅಂಶಗಳ ಪಟ್ಟಿ ಇಲ್ಲಿ ಕೊಟ್ಟಿದ್ದೀರಿ; ಈ ಪಟ್ಟಿಯನ್ನು ತಯಾರಿಸುವವರು ಯಾರು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸ್ಥಳೀಯ ಆಫೀಸರುಗಳು.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಸ್ಥಳೀಯ ಆಫೀಸರುಗಳೆಂದರೆ, ಅಮಲ್ದಾರರೇ? ರೆವಿನ್ಯೂ ಇನ್ಸ್‌ಪೆಕ್ಟರರೇ ಯಾರು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಮಲ್ದಾರರು, ರೆವಿನ್ಯೂ ಇನ್ಸ್‌ಪೆಕ್ಟರು, ಡಿಪ್ರೆಸ್ಡ್ ಕ್ಲಾಸ್ ಸ್ಪೆಷಲ್ ಆಫೀಸರು ಇವರಲ್ಲಿ ಯಾರನ್ನು ಈ ವಿಚಾರ ಕೇಳಿರುತ್ತೇವೆಯೋ ಅವರು ಶೇಖರಿಸಿ ಕಳುಹಿಸುತ್ತಾರೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಈ ರೀತಿಯಾಗಿ ಪಟ್ಟಿ ತಯಾರಿಸಿಟ್ಟಿರಬೇಕೆಂದು ಸರ್ಕಾರದಿಂದ ಹುಕುಂ ಏನಾದರೂ ಮಾಡಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗೇನೂ ಮಾಡಿಲ್ಲ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಹಾಗೆ ಮಾಡದಿದ್ದಮೇಲೆ ನೀವು ಕೇಳಿದ ತಕ್ಷಣ ಹೇಗೆ ತಿಳಿಸುತಾರೆ? ಸರ್ಕಾರದವರೇನಾದರೂ ಇಂಥಾ ಷೆಡ್ಡುಗಳ ವಿಷಯದಲ್ಲಿ ಪಟ್ಟಿ ತಯಾರಿಸಿಡಬೇಕೆಂದು ಹೇಳಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೀವು ಕಳುಹಿಸಿದ ಪ್ರಶ್ನೆಯಮೇಲೆ ಇದನ್ನು ಕೇಳಿ ತರಿಸಿದ್ದೇವೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಹಾಗಾದರೆ ನಾನು ಪ್ರಶ್ನೆ ಕೊಟ್ಟಮೇಲೆ ಇಡಿಷ್ಟು ಅಂಕಿಗಳನ್ನೂ ಸಂಗ್ರಹಿಸಿ ಪಟ್ಟಿ ಮಾಡಿದರೇ? ಅದಕ್ಕೆ ಮುಂಚೆ ಏನೂ ಮಾಡಿರಲಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮುಂಚೆ ಮಾಡಿರಲಿಲ್ಲ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಹಾಗಾದರೆ ಈ ಎರಡು ತಿಂಗಳಲ್ಲಿ ಸಂಸ್ಥಾನಾದ್ಯಂತ ಸಂಚಾರ ಮಾಡಿ ಅಂಕಿಗಳನ್ನು ಶೇಖರಿಸಿದ್ದಾರೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸ್ಥಳೀಯ ಆಫೀಸರುಗಳ ಹತ್ತಿರ, ಸ್ಪೆಷಲ್ ಆಫೀಸರುಗಳ ಹತ್ತಿರ, ಈ ಅಂಕಿ ಅಂಶಗಳೆಲ್ಲಾ ಸಾಮಾನ್ಯವಾಗಿ ಇರುತ್ತವೆ. ಅವರು ಒಟ್ಟು ಸಂಸ್ಥಾನದ್ದನ್ನು ಸೇರಿಸಿ ಕಳುಹಿಸಿಕೊಡುತ್ತಾರೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ನಿರ್ದಿಷ್ಟವಾಗಿ ಈ ರೀತಿ ಪಟ್ಟಿಮಾಡಬೇಕೆಂದು ಹೇಳಿದ್ದರೆ ಇಡುತ್ತಿದ್ದರು. ಇಲ್ಲದಿದ್ದರೆ ಪಟ್ಟಿ ಏಕೆ ಮಾಡಿರುತ್ತಾರೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಂಬಂಧಪಟ್ಟ ಈ ಅಂಕಿ ಅಂಶಗಳನ್ನೆಲ್ಲಾ ಅವರು ಇಟ್ಟುಕೊಂಡೇ ಇರುತ್ತಾರೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಈ ಪ್ರಶ್ನೆ ಕಳುಹಿಸಿದ ಇಷ್ಟು ದಿನಗಳಲ್ಲಿಯೇ ಒಟ್ಟು ಸಂಸ್ಥಾನಾದ್ಯಂತ ಅಂಕಿಗಳನ್ನು ಶೇಖರಿಸಿ ಕೊಡುವುದಕ್ಕಾಗುತ್ತದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಷ್ಟು ಚುರುಕಾಗಿ ಕೆಲಸ ನಡೆದಿದೆ!

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಇಲ್ಲಿ ಕೊಟ್ಟಿರುವ ಪಟ್ಟಿಯ ಪ್ರಕಾರ 4,000 ಮನೆಗಳು ಪೂರ್ತಿಯಾಗಿವೆ. ಒಟ್ಟು ಸಂಸ್ಥಾನದಲ್ಲಿರತಕ್ಕ ಷೆಡ್ಡುಗಳ ಸಂಖ್ಯೆ ಸುಮಾರು ಎರಡು ಲಕ್ಷದಷ್ಟಿದೆ. ನೀವು ಈಗ ಕೊಟ್ಟಿರತಕ್ಕ ದಾವಾಪಾಷಾ ಪ್ರಕಾರ ಹೋದರೆ ಇನ್ನೆಷ್ಟು ವರ್ಷಕ್ಕೆ ಎಲ್ಲವನ್ನೂ ಕಟ್ಟಿ ಮುಗಿಸುತ್ತೀರಿ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ವರ್ಷಕ್ಕೆ 4,000ದಂತೆ ಎಷ್ಟು ವರ್ಷ ಬೇಕಾಗುತ್ತದೋ ಅಷ್ಟು ವರ್ಷ ಬೇಕು.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಅಂದರೆ ಇನ್ನು 50 ವರ್ಷಗಳಾಗುತ್ತದೆ! ಇನ್ನು 10 ವರ್ಷಗಳಲ್ಲಾದರೂ ಕಟ್ಟಿಸಿಕೊಡುವುದಕ್ಕೇನಾದರೂ ಏರ್ಪಾಡು ಮಾಡುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾವು ಕಟ್ಟಿಸಿಕೊಡುವುದೇ ಅಲ್ಲದೆ, ಸ್ವಂತವಾಗಿ ಕೆಲವರು ಕಟ್ಟಿಕೊಳ್ಳಬೇಕು. ಆದ್ದರಿಂದ ಇದೇ ದಾವಾಪಾಷಾದಂತೆ ಲೆಕ್ಕಹಾಕುವುದಕ್ಕಾಗುವುದಿಲ್ಲ. ಕೆಲವರು ಸ್ವಂತವಾಗಿ ಕಟ್ಟಿಕೊಳ್ಳುತ್ತಾರೆ, ಇನ್ನು ಕೆಲವರು ಸರ್ಕಾರಿ ಗ್ರಾಂಟ್ ತೆಗೆದುಕೊಂಡು ಕಟ್ಟಿಕೊಳ್ಳುತ್ತಾರೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಸರ್ಕಾರಿ ಗ್ರಾಂಟಿನಿಂದ ಇಷ್ಟುಮಟ್ಟಿಗೆ ಕೆಲಸ ನಡೆಯುತ್ತಿದ್ದರೆ ಇನ್ನೆಷ್ಟು ವರ್ಷದಲ್ಲಿ ಈ ಕೆಲಸ ಪೂರ್ತಿಯಾದೀತು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಬಡ್ಜೆಟ್ ಗ್ರಾಂಟ್‌ಮೇಲೆಯೂ ಹೋಗುತ್ತದೆ. ನೀವೇ ಲೆಕ್ಕಾಚಾರ ಮಾಡಬಹುದು.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಹಾಗಾದರೆ 10 ವರ್ಷದಲ್ಲಿ ಏನಾದರೂಮಾಡಿ ಮುಗಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬೇಗ ಆಗಬೇಕೆಂದೇ ನಮ್ಮ ಆಸೆ.

Arrangements for Growing Cashewnut Trees.

*ಪ್ರಶ್ನೆ 183.—ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಸಂಸ್ಥಾನದಲ್ಲಿ ಗೇರುಬೀಜದ (ಎಂದರೆ ಗೋಡಂಬಿಯ) ಮರಗಳನ್ನು ಬೆಳೆಯಿಸುವುದಕ್ಕೆ ಸರ್ಕಾರದವರು ಫಾರೆಸ್ಟ್ ಇಲಾಖೆಯವರೊಡನೆ ಯಾವುದಾದರೂ ಏರ್ಪಾಟುಗಳನ್ನು ಮಾಡಿದ್ದಾರೆಯೆ; ಎಲ್ಲಿ ಆ ಮರಗಳನ್ನು ಬೆಳೆಯಿಸಲಾಗುತ್ತಿದೆ; ಮತ್ತು ಎಷ್ಟು ಎಕರೆ ಜಮೀನಿನಲ್ಲಿ ಆ ಮರಗಳನ್ನು ಬೆಳೆಯಿಸಲಾಗುತ್ತದೆ;

*Speeches shown by asterisk indicate that they have not been revised by the Hon'ble Member concerned.

(ಶ್ರೀ ಎಸ್. ರಂಗರಾಮಯ್ಯನವರು)

(b) ಆ ಮರಗಳನ್ನು ಬೆಳೆಯಿಸುವುದಕ್ಕೆ ಸರ್ಕಾರದವರು ಖಾಸಗಿ ಜನರಿಗೆ ಸೌಕರ್ಯಗಳನ್ನು ಒದಗಿಸಿ ಕೊಡುತ್ತಾರೆಯೆ ;

(c) ಗೇರುಬೀಜದ ಮರಗಳನ್ನು ಬೆಳೆಯಿಸುವ ಕೆಲಸವನ್ನು ಚೆನ್ನಾಗಿ ನಡೆಯಿಸುವುದಕ್ಕಾಗಿಯೂ ಮತ್ತು ಗೇರುಬೀಜಗಳನ್ನು ಹದಮಾಡುವುದಕ್ಕಾಗಿಯೂ ಸಿಬ್ಬಂದಿಗಳಿಗೆ ಶಿಕ್ಷಣ ಕೊಡುವುದಕ್ಕಾಗಿ ತಿರುವನಂತಪುರದಲ್ಲಿ ಒಂದು ಸಂಶೋಧನಾಲಯವು ಸ್ಥಾಪಿತವಾಗಿದೆಯೆಂಬ ವಿಚಾರವು ಸರ್ಕಾರದವರಿಗೆ ತಿಳಿದಿವೆಯೆ ; ಸಂಸ್ಥಾನದಲ್ಲಿಯೂ ಆ ಮರಗಳನ್ನು ಬೆಳೆಯಿಸುವ ವಿಚಾರದಲ್ಲಿ ತಿಳಿವಳಿಕೆ ಕೊಡುವುದಕ್ಕಾಗಿಯೂ ಮತ್ತು ಗೇರುಬೀಜಗಳನ್ನು ಹದಮಾಡುವ ವಿಚಾರದಲ್ಲಿ ತಿಳಿವಳಿಕೆ ಕೊಡುವುದಕ್ಕಾಗಿಯೂ ಅದೇ ರೀತಿಯ ಸಂಶೋಧನಾಲಯಗಳನ್ನು ಸರ್ಕಾರದವರು ಸ್ಥಾಪಿಸುವರೆ ?

ಉತ್ತರ.—ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರು)—

(a) ಹೌದು, ಮಾಡಲಾಗಿದೆ. ಅನೇಕ ಪ್ರದೇಶಗಳಲ್ಲಿ ಗೇರುಬೀಜದ ಮರಗಳನ್ನು ಬೆಳೆಯಿಸುವ ಕೆಲಸವನ್ನು ಕೈಕೊಳ್ಳಲಾಗಿದೆ ; ಪ್ರಯತ್ನಗಳು ಯಶಸ್ವಿಯಾಗಿವೆ. ತಲಕಾಡಿನ ಮರಳು ದಿಣ್ಣೆಗಳಲ್ಲಿ ಆ ಮರಗಳನ್ನು ಬೆಳೆಯಿಸುವ ಕೆಲಸವು ಬಹಳ ಚೆನ್ನಾಗಿ ಆಗಿದೆ. ಬೇರೆ ಬೇರೆ ಪ್ರದೇಶಗಳಲ್ಲಿ ಪ್ರತ್ಯೇಕವಾಗಿರತಕ್ಕ ಮರಗಳಲ್ಲದೆ ಕ್ರಮವಾಗಿ 350 ಎಕರೆಗಳ ವಿಸ್ತೀರ್ಣದಲ್ಲಿ ಇವುಗಳ 'ಪ್ಲಾಂಟೇಷನ್' ಗಳ ಕೆಲಸ ನಡೆಯುತ್ತಿದೆ.

(b) ಬಿತ್ತನೆ - ಬೀಜಗಳನ್ನು ಶೇಖರಿಸುವುದಕ್ಕೆ ವಾಸ್ತವವಾಗಿ ತಗಲತಕ್ಕ ವೆಚ್ಚವನ್ನು ಪಡೆದುಕೊಂಡು, ಒಂದು ಪರಿಮಿತ ಪರಿಮಾಣದಲ್ಲಿ ಬಿತ್ತನೆ ಬೀಜಗಳನ್ನು ಒದಗಿಸಬಹುದಾಗಿದೆ.

(c) ಇಲ್ಲ. ಈ ವಿಚಾರವನ್ನು ಪರಿಶೀಲಿಸಲಾಗುವುದು.

ಶ್ರೀ ಎಸ್. ರಂಗರಾಮಯ್ಯನವರು.—ಗೇರುಪಪ್ಪಿನ ವ್ಯವಸಾಯವನ್ನು ಈಗಾಗಲೇ 350 ಎಕರೆಗಳಷ್ಟು ಪ್ರದೇಶದಲ್ಲಿ ಪ್ಲಾಂಟೇಷನ್‌ಗಳಾಗಿ ಮಾಡಿ, ನಡೆಸಲಾಗುತ್ತಿದೆಯೆಂದು ಉತ್ತರದಲ್ಲಿ ತಿಳಿಸಲಾಗಿದೆ. ಹೀಗೆ ಎಲ್ಲೆಲ್ಲಿ ಈ ವ್ಯವಸಾಯವನ್ನು ಈಗ ನಡೆಸಲಾಗುತ್ತಿದೆಯೆಂಬುದನ್ನು ತಿಳಿಸಲಿಕ್ಕಾಗುತ್ತದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೇಳುವುದಕ್ಕಾಗುತ್ತದೆ. ಆ ಪಟ್ಟಿ ಈಗ ಹಾಲಿ ನನ್ನಲ್ಲಿರುವುದಿಲ್ಲ. ತಮಗೆ ಬೇಕಾಗಿದ್ದರೆ ಆ ಮೇಲೆ ತರಿಸಿ ಕೊಡುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಕೇವಲ ಫಾರೆಸ್ಟ್ ಇಲಾಖೆಯವರೊಬ್ಬರೇ ಈ ವ್ಯವಸಾಯವನ್ನು ನಡೆಸುತ್ತಿದ್ದಾರೋ ಅಥವಾ ಬೇರೆ ಇನ್ನಾವುದಾದರೂ ಗ್ರಾಮದ ರೈತರು ನಡೆಸುತ್ತಿದ್ದಾರೋ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗ ಸದ್ಯಕ್ಕೆ ಫಾರೆಸ್ಟ್ ಇಲಾಖೆಯವರಿಂದ ಮಾತ್ರ ನಡೆಸಲ್ಪಡುತ್ತಿದೆ. ಸಂಸ್ಥಾನಾಮಳೆ ಅಲ್ಲಲ್ಲೇ ನಡೆಯುತ್ತದೆ. ಆದರೆ ಈಗ ಚೆನ್ನಾಗಿ ನಡೆಯುತ್ತಿರುವುದು, ದೇವನಹಳ್ಳಿ ಮತ್ತು ದಾವಣಗೆರೆ ಈ ಎರಡು ಸ್ಥಳಗಳಲ್ಲಿ ಮಾತ್ರ.

ಶ್ರೀ ಎಸ್. ರಂಗರಾಮಯ್ಯನವರು.—ಈ 350 ಎಕರೆಗಳಿಗೂ ಸುಮಾರು ಖರ್ಚು ಎಷ್ಟು ಬೀಳುತ್ತಿದೆ

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಸಂಸ್ಥಾನಾಮಳೆ ಎಷ್ಟು ಗೋಡಂಬಿ ಬೀಜವನ್ನು ಉತ್ಪತ್ತಿ ಮಾಡಲಾಗುತ್ತಿದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ತಪಶೀಲುಗಳೆಲ್ಲಾ ಸಧ್ಯಕ್ಕೆ ನನ್ನಲ್ಲಿ ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಈ ಗೋಡಂಬಿ ಗಿಡಗಳನ್ನು ಸಂಸ್ಥಾನಾಮಳೆ ಇನ್ನೂ ಎಲ್ಲೆಲ್ಲಿ ಬೆಳೆಸಬಹುದೆಂಬುದನ್ನು ವಿಚಾರ ಮಾಡಿದ್ದೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಎಲ್ಲೆಲ್ಲಿ ಒಳ್ಳೆಯ ಫಲವತ್ತಾದ ಜಮೀನುಗಳಿರುತ್ತದೆಯೋ ಅಲ್ಲೆಲ್ಲಾ ಬೆಳೆಮಾಡಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಈ ಬೆಳೆಯಿಂದ ಬಹಳ ಉತ್ಪತ್ತಿ ಬರುತ್ತದೆಂಬುದು ತಮಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಗೊತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಈ ಬೀಜಗಳನ್ನು ಹದಮಾಡಿ ತರಿಸಲು ತಾವು ಏನು ಏರ್ಪಾಡುಮಾಡಿದ್ದೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಧ್ಯಕ್ಕೆ ಬೀಜ ಹದಮಾಡತಕ್ಕ ಏರ್ಪಾಡುಗಳನ್ನೇನೂ ಮಾಡಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಹಾಲಿ ನಮ್ಮಲ್ಲಿ ಉತ್ಪನ್ನವಾಗತಕ್ಕ ಗೋಡಂಬಿಯನ್ನು ತಾವು ಎಲ್ಲಿಗೆ ರವಾನೆಮಾಡುತ್ತಿದ್ದೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಂಗಳೂರು ಇತ್ಯಾದಿ ಸ್ಥಳಗಳಿಗೆ ರವಾನೆಯಾಗುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ವ್ಯವಸಾಯವನ್ನು ಅಭಿವೃದ್ಧಿಪಡಿಸಲು ತಕ್ಕ ಏರ್ಪಾಡುಗಳನ್ನು ಮುಂದಕ್ಕಾದರೂ ಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆವಶ್ಯಕತೆ ನೋಡಿಕೊಂಡು ಮಾಡಲಾಗುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ತಿರುವನಂತಪುರದಲ್ಲಿ ಈ ಬಗ್ಗೆ ಯಾವ ರೀತಿ ಏರ್ಪಾಡುಗಳನ್ನು ಮಾಡಲಾಗಿದೆಯೋ ಅದನ್ನು, ತಿಳಿದುಕೊಂಡು ಬಂದು ಇಲ್ಲಿನ ಜನರಿಗೆ ತಕ್ಕ ತಿಳಿವಳಿಕೆಯನ್ನು ಕೊಡಲು ಏರ್ಪಾಡುಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಗಲಿ.

ಶ್ರೀ ಎಸ್. ರಂಗರಾಮಯ್ಯನವರು.—ಈ ಬೆಳೆಯನ್ನು ಸಂಸ್ಥಾನಾಮಳೆ ಬೆಳೆಸಲು ಏನು ಏರ್ಪಾಡು ಮಾಡಿದ್ದೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಧ್ಯಕ್ಕೆ ಅಂಥಾ ಯಾವ ಏರ್ಪಾಡುಗಳನ್ನೂ ಮಾಡಿಲ್ಲ. ಫಾರೆಸ್ಟ್ ಇಲಾಖೆಯವರಿಗೆ ಮಾತ್ರ ತಿಳಿಸಿ, ಇದನ್ನು ಮಾಡಲಾಗಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಈ ವ್ಯವಸಾಯ ಮಾಡತಕ್ಕ ಪ್ರದೇಶದಲ್ಲಿ ಸಾಧಾರಣವಾಗಿ ಎಷ್ಟು ಮಳೆ ಬೀಳಬೇಕೆಂಬುದನ್ನು ಲೆಕ್ಕ ಹಾಕಿದ್ದೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಲೆಕ್ಕ ಮಾಡಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ದೇವನಹಳ್ಳಿಯಲ್ಲಿ ಆವರೇಜ್ ರೈನ್‌ಫಾಲ್ ಎಷ್ಟೆಂಬುದನ್ನು ತಿಳಿಸುವಿರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಕೆ. ಎಚ್. ಮುದಿಯಪ್ಪನವರು.—ಎಲ್ಲೆಲ್ಲಿ ಈ ವ್ಯವಸಾಯಕ್ಕೆ ಅನುಕೂಲವಿದೆಯೋ ಆ ಸ್ಥಳಗಳಲ್ಲೆಲ್ಲಾ ಇದನ್ನು ನಡೆಸಲು ಪ್ರೋತ್ಸಾಹಗಳನ್ನು ನೀಡುತ್ತೀರಾ!

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಪ್ರೋತ್ಸಾಹ ನೀಡುವುದಿಲ್ಲವೆಂದು ಯಾವಾಗ್ಯೂ ಹೇಳಿಲ್ಲ. ಅಗತ್ಯವಿದ್ದಾಗ ಅದನ್ನು ಕೊಟ್ಟೇ ಕೊಡಲಾಗುತ್ತೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈ ಬೀಜಗಳನ್ನು ರೈತರೇ ಕೇಳಿ ತರಿಸಿಕೊಳ್ಳುತ್ತಿದ್ದಾರೋ ಅಥವಾ ತಾವೇ ತರಿಸಿ ಅವರಿಗೆ ಕೊಡುತ್ತಿದ್ದೀರೋ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗ ಸದ್ಯಕ್ಕೆ ಕೇಳಿದವರಿಗೆ ಮಾತ್ರ ತರಿಸಿಕೊಡಲಾಗುತ್ತಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈಗ ಈ ವ್ಯವಸಾಯದ ತಿಳಿವಳಿಕೆ ಈ ಸಭೆಯ ಮಾನ್ಯ ಸದಸ್ಯರುಗಳಿಗೆ ಮಾತ್ರ ಗೊತ್ತಾದ ಹಾಗಾಯಿತು. ಆದರೆ ಇದರ ಮಾಹಿತಿಯನ್ನು ರೈತರುಗಳಾಗಿರತಕ್ಕವರಿಗೆಲ್ಲಾ ತಿಳಿಯುವಂತೆ ತಕ್ಕ ಏರ್ಪಾಡುಗಳನ್ನು ಮಾಡುತ್ತೀರಾ?

ಮಾನ್ಯ ಶ್ರೀ ಆರ್ ಚೆನ್ನಿಗರಾಮಯ್ಯನವರು.—ಪ್ರಯತ್ನಪಡುತ್ತೇವೆ.

ಶ್ರೀ ಎಂ. ಎನ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಈ 350 ಎಕರೆಗಳಲ್ಲಿ ಎಕರೆ ಒಂದಕ್ಕೆ ಎಷ್ಟು ಉತ್ಪತ್ತಿ ಬರುತ್ತಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

Mr. SPEAKER.—Part IX, Question No. 6. Sri M. V. Krishnappa. The Hon'ble Member is not present. The question will be treated as unstarred

Question No. 49. Sri H. M. Mallikarjunappa. The Hon'ble Member is not present. This question also will be treated as unstarred.

Question No. 77.—Sri M. Muniswamy.

More Lady Doctors for the Maternity Hospital, Robertsonpet and Extension of the Building.

*Q.—77. **Sri M. MUNISWAMY** (Kolar District—Depressed Class).—

Will the Government be pleased to state :—

(*a*) whether they propose to increase the number of Lady Doctors in the Maternity Hospital, Robertsonpet, in view of the heavy needs of the lay-public of Kolar Gold Field ;

(*b*) whether it is possible to extend the same hospital building for convenience of the public ?

A.—**The Hon'ble Sri H. SIDDAIYA** (Minister for Revenue and Excise).—

(*a*) There is no such proposal before Government at present.

(*b*) The question of improving the hospital building is under consideration.

Sri M. MUNISWAMY.—Is it not necessary to appoint more Lady Doctors according to the strength of the patients of the hospital ?

The Hon'ble Sri H. SIDDAIYA.—Yes. If there is increase in the number of patients, the necessity of increasing the number of lady doctors may arise.

Sri M. MUNISWAMY.—Is it not necessary to increase the number proportionate to the increase of patients?

The Hon'ble Sri H. SIDDAIYA.—Yes, I have answered.

Sri M. MUNISWAMY.—Are you going to extend the building to meet the present demands of the public ?

The Hon'ble Sri H. SIDDAIYA.—It is under consideration.

Sri M. MUNISWAMY.—Can Government start one more Maternity Hospital in Kolar Gold Fields?

The Hon'ble Sri H. SIDDAIYA.—The question of extending the building and also in case of absolute necessity, giving another lady doctor is under consideration. As such, another hospital itself is not so essential.

Sri H. C. LINGA REDDY (Kolar District—General).—Have not the public of Kolar Gold Fields been agitating for extending the building and starting more hospitals?

The Hon'ble Sri H. SIDDAIYA.—Regarding the former there has been agitation.

Sri H. C. LINGA REDDY.—What is the action taken by Government in regarding to it ?

The Hon'ble Sri H. SIDDAIYA.—Government have taken action ; the acquisition proceedings have taken place and I think improvement and extending the building will take place very early. In fact, estimate and plan are called for and they are awaited.

Sri H. C. LINGA REDDY.—Will the extension be taken up very early ?

The Hon'ble Sri H. SIDDAIYA.—As early as possible.

Sri K. SAMPANGIRAMIAH (Kolar District—General).—How many Maternity hospitals are there now ?

The Hon'ble Sri H. SIDDAIYA.—75, subject to correction.

Srimathi RATNAMMA ISAAC (Kolar District—General).—What is the number of Maternity Homes in Robertsonpet ?

The Hon'ble Sri H. SIDDAIYA.—I do not know. I want notice.

Srimathi RATNAMMA ISAAC.—Will not the congestion in the hospitals be relieved by the Maternity Homes?

The Hon'ble Sri H. SIDDAIYA.—Certainly.

Mr. SPEAKER.—Next question No. 102.

Increase of Dearness Allowance to Teachers.

*ಪ್ರಶ್ನೆ 102—ಶ್ರೀ ಬಿ. ಎಂ. ಶಾಮಣ್ಣಗೌಡರು ("ರೆಪ್ರೋಸೆಷರ್" ಆಗಿರುವ ಬೆಂಗಳೂರು ದಂಡಿನ ಪ್ರದೇಶ—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಯನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

ಸಂಸ್ಥಾನದ ಉಪಾಧ್ಯಾಯರುಗಳಿಗೆ ಮಂಜೂರು ಮಾಡಿರುವ ತುಟ್ಟಿ ಭತ್ಯವನ್ನು ಅಕ್ಕ ಪಕ್ಕದ ಪ್ರಾಂತಗಳಲ್ಲಿ ಕೊಡುತ್ತಿರುವ 24 ರೂಪಾಯಿಗಳ ತುಟ್ಟಿ ಭತ್ಯದ ಮಟ್ಟಕ್ಕಾದರೂ ಹೆಚ್ಚಿಸಬೇಕೆಂಬ ಉದ್ದೇಶವಿದೆಯೇ ?

ಉತ್ತರ.—ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರು).—ಇಲ್ಲ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಈಗ ತಾವು ಸಿಟಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ನೌಕರರಿಗೆಲ್ಲಾ ತುಟ್ಟಿ ಭತ್ಯವನ್ನು ಕೊಡುತ್ತಿದ್ದೀರಾ ?

*ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೊಡಲಾಗುತ್ತಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಎಷ್ಟು ಕೊಡಲಾಗುತ್ತಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಿಟಿಗಳಲ್ಲಿರತಕ್ಕವರಿಗೇ ಒಂದು ರೇಟಿದೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರಿಗೇ ಒಂದು ರೇಟಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಆ ರೇಟುಗಳು ಯಾವುವು? ಮತ್ತು ಎಷ್ಟೆಷ್ಟು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ವಿಷಯ ಅವರವರ ಸಂಬಳದ ಮೇಲೆ ಹೋಗುತ್ತದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಉಪಾಧ್ಯಾಯರಿಗೆ ಎಷ್ಟು ತುಟ್ಟಿ ಭತ್ಯವನ್ನು ಕೊಡುತ್ತಿದ್ದೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—12 ರೂಪಾಯಿಗಳನ್ನು ಕೊಡಲಾಗುತ್ತಿದೆ. ಸಿಟಿಗಳಲ್ಲಿರತಕ್ಕವರಿಗೆ ಕೊಡುತ್ತಿರುವುದಕ್ಕೂ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರಿಗೆ ಕೊಡುತ್ತಿರುವುದಕ್ಕೂ ವ್ಯತ್ಯಾಸವಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಸಿಟಿಗಳಲ್ಲಿರತಕ್ಕವರಿಗೆ ಎಷ್ಟು ಕೊಡಲಾಗುತ್ತಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಅವರವರ ಸಂಬಳದ ಮೇಲೆ ಹೋಗುತ್ತದೆ. ಅವರಲ್ಲಿ ಅನೇಕರಿಗೆ 18 ರೂಪಾಯಿಗಳ ಪ್ರಕಾರ ಕೊಡಲಾಗುತ್ತಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಈ ತುಟ್ಟಿ ಭತ್ಯವನ್ನು ಹೆಚ್ಚಿಗೆ ಕೊಡಲು ಏರ್ಪಾಡು ಮಾಡುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗೆ ಕೊಡತಕ್ಕ ಅವಶ್ಯಕತೆ ಮತ್ತು ಮನಸ್ಸು ಎಲ್ಲಾ ಇದೆ. ಆದರೆ ದುಡ್ಡೊಂದೇ ಇಲ್ಲ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಈ ತುಟ್ಟಿ ಭತ್ಯ ಅವರಿಗೆ ಸಾಕಾಗದೆ ಎಲ್ಲಾ ನೌಕರರೂ ಬಹಳ ಕಷ್ಟಕ್ಕೀಡಾಗಿದ್ದಾರೆಂಬುದು ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಗೊತ್ತಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ನಮ್ಮ ಅಕ್ಕ ಪಕ್ಕದ ಪ್ರಾಂತ್ಯಗಳಲ್ಲಿ ಅಂದರೆ ಮದ್ರಾಸ್ ಇತ್ಯಾದಿ ಪ್ರಾವಿನ್ಸುಗಳಲ್ಲಿ ತುಟ್ಟಿ ಭತ್ಯ ಎಷ್ಟೆಷ್ಟು ಕೊಡುತ್ತಿದ್ದಾರೆಂಬ ಅಂಶ ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಗೊತ್ತಿಲ್ಲದಿದ್ದ ಭಾಗದಲ್ಲಿ ಅದನ್ನು ತರಿಸಿ, ಹೋಲಿಕೆ ಹಾಕಿ, ಅದರ ಪ್ರಕಾರ ಕೊಡಲು ಪ್ರಯತ್ನ ಮಾಡುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೊಡಬೇಕಾಗಿದ್ದಲ್ಲಿ ಹಾಗೆ ಬೇರೆ ಕಡೆಯ ವಿಚಾರ ತರಿಸಿ ಅದನ್ನು ನಮ್ಮ ರೇಟಿಗೆ ಹೋಲಿಕೆ ಹಾಕಿ ನೋಡಬೇಕಾದ ಅಗತ್ಯವೇ ಇರುವುದಿಲ್ಲ. ಆದರೆ ಇದು ಮುಖ್ಯವಾಗಿ ಹಣಕಾಸಿನ ಅನುಕೂಲದ ಮೇಲೆ ಅವಲಂಬಿಸಿರತಕ್ಕ ವಿಚಾರವಾಗಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಹಾಗೊಂದು ವೇಳೆ ತಾವು ಹೆಚ್ಚಿನ ತುಟ್ಟಿ ಭತ್ಯವನ್ನು ಈ ಪಾಠಶಾಲಾ ಉಪಾಧ್ಯಾಯರುಗಳಿಗೆ ಕೊಡದೆ ಹೋದಲ್ಲಿ ಅವರು ಸರಿಯಾಗಿ ಕೆಲಸ ಮಾಡಲು ಅವಕಾಶವಾಗುವುದಿಲ್ಲವೆಂಬ ಅಂಶ ತಮಗೆ ಗೊತ್ತಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ರೀತಿ ಮಾಡುತ್ತಿಲ್ಲ. ಅವರಿಗೆ ಕೊಡುತ್ತಿರುವ ಸಂಬಳ ಮತ್ತು ಭತ್ಯಗಳು ಕಮ್ಮಿಯಿದ್ದಾಗ್ಯೂ ಅವರು ಬಹಳ ಶ್ರದ್ಧೆ ವಹಿಸಿ, ಮಕ್ಕಳಿಗೆ ಮುತವರ್ಜಿಯಿಂದ ವಿದ್ಯೆ ಹೇಳಿ ಕೊಡುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ಉಪಾಧ್ಯಾಯರ ಜೀವನದ ಮಟ್ಟವನ್ನು ಉತ್ತಮಗೊಳಿಸಲಿಕ್ಕಾಗಿ ಏನೇನು ಮಾಡಬೇಕಾಗಿದೆಯೆಂಬ...

ಅಧ್ಯಕ್ಷರು.—ತಮಗೆ ಈಗ ಏನು ವಿಷಯಬೇಕಾಗಿದೆಯೋ ಅದನ್ನು ಮಾತ್ರ ಕೇಳಿ.

ಶ್ರೀ ಬಿ. ಹುಚ್ಚೇಗೌಡರು.—ಇವರುಗಳ ಜೀವನದ ಮಟ್ಟ ಉತ್ತಮಗೊಳಿಸಲು ಮುಂದಿನ ಬಡ್ಜೆಟ್ಟಿನಲ್ಲಾದರೂ ಹೆಚ್ಚು ಹಣ ಒದಗಿಸಲು ಆಲೋಚನೆ ಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಲೋಚನೆಗಳಿದ್ದೇ ಇವೆ. ಆದರೆ ದುಡ್ಡೇ ಇಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಪಟ್ಟಣದಲ್ಲಿ 18 ರೂಪಾಯಿಗಳ ಅಲೋಯನ್ಸ್ ಇದೆ. ಹಳ್ಳಿಗಳ ಕಡೆ ಎಷ್ಟು ಕೊಡುತ್ತಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—15 ರೂಪಾಯಿಗಳು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಏಕೆ ಇಷ್ಟು ವ್ಯತ್ಯಾಸ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಪಟ್ಟಣ ವಾಸದಲ್ಲಿ ಖರ್ಚು ಹೆಚ್ಚು. ಮನೆ ಬಾಡಿಗೆ ವಗೈರೆ ಹೆಚ್ಚು. ಅದೇ ಹಳ್ಳಿಗಳಲ್ಲಿ ಕಡಮೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಉಪಾಧ್ಯಾಯರಿಗೆ ಸಂಬಳ ಕಡಮೆ ಮಾಡಿದರೆ ಕೆಲಸ ಚೆನ್ನಾಗಿ ಮಾಡುತ್ತಾರೆ ಎಂದು ಹೇಳಿದಿರಿ. ಹಾಗೆ ಮಾಡುವುದುಂಟೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಂಬಳ ಕಡಿಮೆ ಮಾಡಬೇಕೆಂಬ ಉದ್ದೇಶವಿಲ್ಲ. ಸಂಬಳ ಕಡಮೆಯಿರುವುದರಿಂದ ಕೆಲಸ ಚೆನ್ನಾಗಿ ಮಾಡುವುದಿಲ್ಲವೆಂದು ಅಭಿಪ್ರಾಯ ಸೂಚಿಸಿದರು. ಆದರೆ ನಮ್ಮ ದೇಶದ ಉಪಾಧ್ಯಾಯರು ಸಂಬಳ ಕಡಮೆಯಾದರೂ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಸಂಬಳ ಜಾಸ್ತಿಯಿರುವುದನ್ನು ಕಡಮೆ ಮಾಡುವುದಕ್ಕೆ ಒಪ್ಪುತ್ತೀರಾ?

Mr. SPEAKER.—That supplementary does not arise. Next question 105. Sri B. M. Shamanna Gowda.

Sri B. M. SHAMANNA GOWDA (Retroceded Area—General).—I am not putting the question.

Sanction of New Primary, Middle and High Schools during 1950-51.

*ಪ್ರಶ್ನೆ 112.—ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಯನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

1950-51ನೆಯ ಸಾಲಿನಲ್ಲಿ ಯಾವುದಾದರೂ ಹೊಸ ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲುಗಳನ್ನು ಮಂಜೂರ್ಮಾಡಲಾಯಿತೆ; ಹಾಗಿದ್ದ ಪಕ್ಷದಲ್ಲಿ ಅವುಗಳಲ್ಲಿ ಪ್ರತಿಯೊಂದಕ್ಕೂ ಮಂಜೂರ್ಮಾಡಲ್ಪಟ್ಟಿರುವ ಮೊಬಲಗೆಷ್ಟು? (ಸ್ಕೂಲುಗಳಿಗೆ ಸಂಬಂಧಪಟ್ಟ ಈ ವಿವರಗಳನ್ನು ಡಿಸ್ಟ್ರಿಕ್ಟುವಾರಾಗಿ ತಿಳಿಸಬೇಕೆಂದು ಪ್ರಾರ್ಥನೆ.)

ಉತ್ತರ.—ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಮುಖ್ಯ ಸಚಿವರು).—

1950-51ನೆಯ ಸಾಲಿನಲ್ಲಿ ಮಂಜೂರ್ಮಾಡಲ್ಪಟ್ಟ ಹೊಸ ಸ್ಕೂಲುಗಳಿಗೆ ಸಂಬಂಧಪಟ್ಟ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ :—

(1) ವರ್ಷ ಒಂದಕ್ಕೆ 44,193¾ ರೂಪಾಯಿಗಳ ಆವೃತ್ತ ವೆಚ್ಚದಲ್ಲೂ ಮತ್ತು 15,000 ರೂಪಾಯಿಗಳ ಅನಾವೃತ್ತ ವೆಚ್ಚದಲ್ಲೂ 98 ಪ್ರೈಮರಿ ಸ್ಕೂಲುಗಳನ್ನು ಏರ್ಪಡಿಸಲಾಯಿತು. ಸ್ಕೂಲುಗಳು, ಡಿಸ್ಟ್ರಿಕ್ಟುವಾರಾಗಿ ಯಾವ ರೀತಿ ಹಂಚಿಕೆಯಾಗಿವೆಯೆಂಬುದನ್ನು ಈ ಕೆಳಗೆ ಕೊಡಲಾಗಿದೆ:—

1	ಸಿವಿಲ್ ಸ್ಟೇಷನ್, ಬೆಂಗಳೂರು	...	2
2	ಸಿಟಿ ಡಿಸ್ಟ್ರಿಕ್ಟು ,,	...	3
3	ಬೆಂಗಳೂರು ಡಿಸ್ಟ್ರಿಕ್ಟು	...	10
4	ಕೋಲಾರ ,,	...	12
5	ಚಿಕ್ಕಮಗಳೂರು ,,	...	8
6	ಶಿವಮೊಗ್ಗ ,,	...	10
7	ಮೈಸೂರು ,,	...	13
8	ಮಂಡ್ಯ ,,	...	9
9	ಹಾಸನ ,,	...	9
10	ತುಮಕೂರು ,,	...	12
11	ಚಿತ್ರದುರ್ಗ ,,	...	10
	ಒಟ್ಟು	...	98

(2) ವರ್ಷ ಒಂದಕ್ಕೆ 39,933⅓ ರೂಪಾಯಿಗಳ ಆವೃತ್ತ ವೆಚ್ಚದಲ್ಲೂ ಮತ್ತು 15,000 ರೂಪಾಯಿಗಳ ಅನಾವೃತ್ತ ವೆಚ್ಚದಲ್ಲೂ 50 ಹೊಸ ಮಾದರಿ ಮಿಡ್ಲ್ ಸ್ಕೂಲುಗಳನ್ನು ಏರ್ಪಡಿಸಲಾಗಿದೆ. ಈ ಸ್ಕೂಲುಗಳ ಡಿಸ್ಟ್ರಿಕ್ಟುವಾರು ಹಂಚಿಕೆಯನ್ನು ಈ ಕೆಳಗೆ ಕೊಡಲಾಗಿದೆ :—

ಸಿಟಿ ಡಿಸ್ಟ್ರಿಕ್ಟು, ಬೆಂಗಳೂರು	...	1
ಬೆಂಗಳೂರು ಡಿಸ್ಟ್ರಿಕ್ಟು	...	7
ಚಿಕ್ಕಮಗಳೂರು ,,	...	5
ಕೋಲಾರ ,,	...	5
ಶಿವಮೊಗ್ಗ ,,	...	6
ಮೈಸೂರು ,,	...	4
ಹಾಸನ ,,	...	6
ಮಂಡ್ಯ ,,	...	4
ತುಮಕೂರು ,,	...	6
ಚಿತ್ರದುರ್ಗ ,,	...	6
ಒಟ್ಟು	...	50

(3) ಈ ಕೆಳಗೆ ಕಂಡಂತೆ 4 ಡಿಸ್ಟ್ರಿಕ್ಟು ಬೋರ್ಡು ಹೈಸ್ಕೂಲುಗಳನ್ನೂ ಮತ್ತು ಒಂದು ಮುನಿಸಿಪಲ್ ಹೈಸ್ಕೂಲನ್ನೂ ಪ್ರಾರಂಭಿಸಲು ಅನುಮತಿಯನ್ನು ಕೊಡಲಾಗಿದೆ:—

1 ಶಿವಮೊಗ್ಗ ಡಿಸ್ಟ್ರಿಕ್ಟು ಮೇಗರವಳ್ಳಿಯಲ್ಲಿ ಡಿಸ್ಟ್ರಿಕ್ಟು ಬೋರ್ಡು ಹೈಸ್ಕೂಲು.

2 ಚಿಕ್ಕಮಗಳೂರು ಡಿಸ್ಟ್ರಿಕ್ಟು ನರಸಿಂಹರಾಜಪುರದಲ್ಲಿ ಡಿಸ್ಟ್ರಿಕ್ಟು ಬೋರ್ಡ್ ಹೈಸ್ಕೂಲು.

3 ಹಾಸನ ಡಿಸ್ಟ್ರಿಕ್ಟು ಎಸಳೂರು ಪೇಟೆಯಲ್ಲಿ ಡಿಸ್ಟ್ರಿಕ್ಟು ಬೋರ್ಡ್ ಹೈಸ್ಕೂಲು.

4 ಚಿತ್ರದುರ್ಗ ಡಿಸ್ಟ್ರಿಕ್ಟು ಶ್ರೀರಾಮಪುರದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲು.

5 ಬೆಂಗಳೂರು ಸಿಟಿಯಲ್ಲಿ ಬಾಲಕಿಯರ ಮುನಿಸಿಪಲ್ ಹೈಸ್ಕೂಲು.

ಸೂಚನೆ.—ಮೇಗರವಳ್ಳಿಯಲ್ಲಿರತಕ್ಕ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲಿನ ಸಂಬಂಧದಲ್ಲಿ ಮಾತ್ರ ಮಂಜೂರು ಮಾಡಲು ನಿಬಂಧನೆಗಳ ಮೇರೆಗೆ ಅವಕಾಶವಿರುವಷ್ಟು ಮೊಬಲಗನ್ನು (ಎಂದರೆ ವರ್ಷಕ್ಕೆ ಆಗತಕ್ಕ ಆವೃತ್ತ ವೆಚ್ಚದ 2,718 ರೂಪಾಯಿಗಳನ್ನೂ ಮತ್ತು ಆರಂಭದಲ್ಲಿ ಒಟ್ಟು ಮೊತ್ತದಲ್ಲಿ ತಗಲುವ ಅನಾವೃತ್ತ ವೆಚ್ಚವಾದ 15,000 ರೂಪಾಯಿಗಳನ್ನು) 1950-51ನೆಯ ಸಾಲಿನಲ್ಲಿ ಮಂಜೂರು ಮಾಡಲಾಯಿತು.

ಶ್ರೀ ಎಚ್. ಸಿದ್ದವೀರಪ್ಪನವರು.—ಯಾವ್ಯಾವ ವರ್ಷ ಎಷ್ಟೆಷ್ಟು ಸ್ಕೂಲುಗಳನ್ನು ತೆರೆಯಬೇಕೆಂದು ಸರ್ಕಾರದವರು ಒಂದು ಯೋಜನೆಯನ್ನು ಹಾಕಿದ್ದಾರೆಯೆ ?

*ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಹಾಕಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪನವರು.—1950–51ನೆಯ ಸಾಲಿನಲ್ಲಿ ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲುಗಳಿಗೆ ಇಷ್ಟಿಷ್ಟು ಎಂದು ಬಡ್ಜೆಟ್ಟಿನಲ್ಲಿ ಅವಕಾಶಮಾಡಿದೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಮಾಡಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—98 ಪ್ರೈಮರಿ ಸ್ಕೂಲುಗಳು 1950–51ಕ್ಕೆ ಮಂಜೂರಾಗಿವೆಯೆಂದು ಹೇಳಿದ್ದೀರಿ. ಇನ್ನೂ ಎಷ್ಟು ಪ್ರೈಮರಿ ಸ್ಕೂಲುಗಳು ನಮ್ಮ ಸಂಸ್ಥಾನಕ್ಕೆ ಬೇಕೆಂಬುದಕ್ಕೆ ಲೆಕ್ಕವಿದೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಬಹಳ ಬೇಕಾಗುತ್ತದೆ, ಲೆಕ್ಕ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—98 ಕೊಟ್ಟಿರುವುದು ಸಾಕು ಎಂಬ ಅಭಿಪ್ರಾಯವಿದೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಅದೇ ಕೊನೆಯೆಂದು ಹೇಳಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—5 ಹೈಸ್ಕೂಲುಗಳನ್ನು ಸ್ಥಾಪನೆ ಮಾಡಿರವುದರಲ್ಲಿ ಸರ್ಕಾರಿ ಸ್ಕೂಲು ಏಕೆ ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಸರ್ಕಾರಿ ಹೈಸ್ಕೂಲುಗಳನ್ನು ಹೆಚ್ಚಾಗಿ ಮಾಡಬೇಕಾದರೆ ಹೆಚ್ಚು ಹಣ ಬೇಕಾಗುತ್ತದೆ. ಪ್ರತಿಯೊಂದು ಕಡೆಯೂ ಆರೀತಿ ಮಾಡುವ ಪದ್ಧತಿಯು ಯಾವ ದೇಶದಲ್ಲೂ ಇಲ್ಲ; ಅದು ಸಾಧ್ಯವೂ ಇಲ್ಲ, ಅದೂ ಅಲ್ಲದೆ ಖಾಸಗೀ ಸ್ಕೂಲುಗಳಿಗೆ ಉತ್ತೇಜನ ಕೊಡಬೇಕೆಂಬುದೇ ಹೀಗೆ ಮಾಡುವುದರ ಮುಖ್ಯ ಉದ್ದೇಶ.

ಶ್ರೀ ಎಚ್. ಸಿದ್ದವೀರಪ್ಪನವರು.—ಇನ್ನು ಮೇಲೆ ಸರ್ಕಾರಿ ಹೈಸ್ಕೂಲುಗಳನ್ನು ಸ್ಥಾಪಿಸಕೂಡದೆಂಬ ನೀತಿಯೇನಾದರೂ ಇದೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಅಂಥ ಕಡ್ಡಾಯವಾದ ತೀರ್ಮಾನವೇನೂ ಇಲ್ಲ. ಮಾಡಕೂಡದೆಂಬ ಉದ್ದೇಶವಿಲ್ಲ. ಹಣ ಸಿಕ್ಕಿದಾಗ ಮಾಡುತ್ತಿದ್ದಾರೆ. ಸರ್ಕಾರದ ಪ್ರೋತ್ಸಾಹ ಇದ್ದೇ ಇದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—1946–47 ರಲ್ಲಿ 412 ಸ್ಕೂಲುಗಳನ್ನು ಮಾಡಬೇಕೆಂಬ ಯೋಜನೆಯಿತ್ತಲ್ಲವೇ ?

ಅಧ್ಯಕ್ಷರು.—ಈ ಪ್ರಶ್ನೆಯಲ್ಲಿ ಕೇಳಿರುವುದು 1950–51ಕ್ಕೆ ಮಾತ್ರ ಸಂಬಂಧಪಟ್ಟದ್ದು.

ಶ್ರೀ ಬಿ. ಹುಚ್ಚೇಗೌಡರು.—ಪ್ರೋಗ್ರಾಂ ಪ್ರಕಾರ ವರ್ಷಕ್ಕೆ 400 ಸ್ಕೂಲುಗಳನ್ನು ತೆರೆಯಬೇಕೆಂದು ಮಾಡಿರಲಿಲ್ಲವೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಎಲ್ಲಾ ವರ್ಷವೂ ಆರೀತಿ ಮಾಡಿರಲಿಲ್ಲ. ಅದು ಹೆಚ್ಚು ಕಡಮೆಯಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಆರನೆಯ ಪ್ರಶ್ನೆಗೆ ಕೊಟ್ಟಿರುವ ಉತ್ತರದ ಪ್ರಕಾರ 1946–47ಕ್ಕೆ 412 ಸ್ಕೂಲುಗಳನ್ನು ಕೊಟ್ಟಿದೆಯೆಂದು ಗೊತ್ತಾಗುತ್ತದೆ. ಹಾಗಿರುವಾಗ ಈಗ 98 ಕೊಟ್ಟಿರುವುದು ಸಾಕೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಸಾಲದು, ಇನ್ನೂ ಆಗಬೇಕು.

ಶ್ರೀ ಬಿ. ಹುಚ್ಚೇಗೌಡರು.—ವರ್ಷಕ್ಕೆ 400 ಸ್ಕೂಲುಗಳನ್ನು ಕೊಡಬೇಕೆಂದಿದ್ದ ಯೋಜನೆಯೇನಾಯಿತು ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಇದೆ. ಅದು ಆಯಾವರ್ಷದ ಬಡ್ಜೆಟ್ ಕಂಡೀಷನ್ ಮೇಲೆ ಹೋಗುತ್ತದೆ. ಸಾಕಾದಷ್ಟು ಹಣವಿದ್ದರೆ ಪೂರ್ಣವಾಗಿ ಸಹಾಯ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ವರ್ಷೇ ವರ್ಷೆ ಹಣದ ಕೊರತೆ ತಮಗೆ ಹೆಚ್ಚುತ್ತಿದೆಯೆಂದು ಭಾವಿಸಬಹುದೇ ? ವಿದ್ಯಾಭ್ಯಾಸಕ್ಕೆ ವರ್ಷೇವರ್ಷೆ ಕಡಮೆ ಖರ್ಚಾಗುತ್ತದೆಯೆಂದು ಹೇಳುತ್ತೀರಾ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಬಡ್ಜೆಟ್ ಅಂಕಿಅಂಶ ನೋಡಿದರೆ ತಮಗೇ ಗೊತ್ತಾಗುತ್ತದೆ. ವರ್ಷೇವರ್ಷೆ ಹೆಚ್ಚು ಸಹಾಯ ದೊರೆಯುತ್ತಿದೆ, ಇಡೀ ಇಂಡಿಯಾದಲ್ಲಿ ಮೈಸೂರು ದೇಶದಲ್ಲಿ ಮಾತ್ರ ಈ ಬಾಬಿಗೆ ಹೆಚ್ಚು ಖರ್ಚುಮಾಡುತ್ತಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಪ್ರೋಗ್ರೆಸ್ ಬಹಳ ಕಡಮೆಯಾಗಲು ಕಾರಣವೇನು ? 1946–47 ರಲ್ಲಿ 412 ಪ್ರೈಮರಿ ಸ್ಕೂಲು, 22 ಹೈಸ್ಕೂಲು ಆಗಿ ಈಗ 5 ಹೈಸ್ಕೂಲು ಮತ್ತು 98 ಪ್ರೈಮರಿ ಸ್ಕೂಲಿಗೆ ಮಾತ್ರ ಅವಕಾಶ ಮಾಡಿದೆ. ಇದರಿಂದ ದೇಶದ ವಿದ್ಯಾಭ್ಯಾಸಕ್ಕೆ ತೊಂದರೆಯಲ್ಲವೆ ? ಪಟ್ಟಣವಾಸಗಳಲ್ಲಿದ್ದು ಗ್ರಾಮಾಂತರಗಳಲ್ಲಿ ಕೊರತೆಯಾಗಿಲ್ಲವೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಕೊರತೆ ಮಾಡುತ್ತಿಲ್ಲ. ಒಂದುವರ್ಷ ಜಾಸ್ತಿ, ಇನ್ನೊಂದುವರ್ಷ ಕಡಮೆ ಆಗಬಹುದು. ಈ ಮೂರು ವರ್ಷಗಳಿಂದ ಹೆಚ್ಚು ಸ್ಕೂಲುಗಳನ್ನು ಕೊಟ್ಟಿರುವುದು ತಮಗೆ ಗೊತ್ತೇ ಇದೆ. ವಿದ್ಯಾಭ್ಯಾಸ ಈಗ ಹೆಚ್ಚಿ ಕಾಲೇಜಿಗೆ ಹೆಚ್ಚು ವಿದ್ಯಾರ್ಥಿಗಳು ಬರುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಹಳ್ಳಿಗಳಕಡೆ ವಿದ್ಯಾಭ್ಯಾಸ ಕಡಮೆಯಾಗಿದೆ. ಅದಕ್ಕೆ ಕಾರಣವೇನು ?

ಅಧ್ಯಕ್ಷರು.—ಪ್ರಶ್ನೋತ್ತರಗಳ ಕಾಲದಲ್ಲಿ ಚರ್ಚೆ ಮಾಡಬಹುದು.

ಶ್ರೀ ಬಿ. ಹುಚ್ಚೇಗೌಡರು.—ತಮ್ಮ ಕಾರ್ಯಕ್ರಮದ ಪ್ರಕಾರ ತಕ್ಕ ಮಾರ್ಗ ಅನುಸರಿಸುತ್ತಿಲ್ಲ ಎಂಬುದನ್ನು ಒಪ್ಪುತ್ತೀರಾ ?

ಅಧ್ಯಕ್ಷರು.—ಹಾಗಿರಲಾರದು.

ಶ್ರೀ ಬಿ. ಹುಚ್ಚೇಗೌಡರು.—ಈಗಲಾದರೂ ಹೆಚ್ಚು ಪ್ರೋತ್ಸಾಹ ಕೊಡುವುದಕ್ಕೆ ಅವಕಾಶವಿದೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಮಾನ್ಯ ಸದಸ್ಯರಿಗೆ ಹಾಗೆ ಕಾಣಬಹುದು. ಆದರೆ ಸರ್ಕಾರದವರು ವರ್ಷೇವರ್ಷೆ ಹೆಚ್ಚು ಉತ್ತೇಜನ ಕೊಡುತ್ತಿದ್ದಾರೆಯೇ ಹೊರತು ಕಡಮೆಮಾಡಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲುಗಳು ಈ ಮೂರೂ ಸಾಕಾದಷ್ಟಿಲ್ಲ.

ಅಧ್ಯಕ್ಷರು.—ಸಮಾಚಾರ ಬೇಕಾದರೆ ಕೇಳಿ. ಪ್ರಶ್ನೋತ್ತರಗಳ ಕಾಲದಲ್ಲಿ ಚರ್ಚೆ ಮಾಡಬೇಡಿ.

Sri D. H. CHANDRASEKHARAIYA (Chitaldrug District—General).—Are the Government aware that the Constitution of India directs that a scheme of compulsory primary education be prepared and brought into effect within ten years ?

Mr. SPEAKER.—I am sure that they are aware of it.

Sri D. H. CHANDRASEKHARAIYA.—Have any steps been taken so far to frame such a scheme?

The Hon'ble Sri R. CHENNIGARAMIAH.—It is being considered.

Sri D. H. CHANDRASEKHARAIYA.—When the scheme is prepared, will it be laid on the table of the House for the information of the Members?

The Hon'ble Sri R. CHENNIGARAMIAH.—After the scheme is completed, if it is considered desirable, it will be placed before the House.

Mr. SPEAKER.—Question hour is over. There is a Short Notice Question, Sri H. C. Linga Reddy.

SHORT NOTICE QUESTION AND ANSWER.

Sanction of Loan by the Government of India for Irrigation and Electric Projects.

Q.—24. **Sri H. C. LINGA REDDY** (Kolar District—General).—

Will the Government be pleased to state:—

(*a*) whether it is a fact that the Government of India have sanctioned a further loan of Rs. 1½ crores for completion of Lakkavalli Project;

(*b*) the total amount of loan sanctioned by the Government of India for the completion of the various Electric Projects in the State so far?

A.—**The Hon'ble Sri H. C. DASAPPA.**—(Minister for Finance and Industries).—

(*a*) and (*b*) The Government of India have sanctioned a loan of Rs. 1½ crores during 1950-51 and an equal sum during 1951-52 for irrigation and electricity. No sum out of this has been specifically indicated by them as being intended for Lakkavalli or for the various electric projects.

Sri H. C. LINGA REDDY.—What is the total amount required for the irrigation and electrical projects in the State?

The Hon'ble Sri H. C. DASAPPA.—That will run into several crores.

Sri H. C. LINGA REDDY.—According to the plans prepared so far, what is the estimate?

The Hon'ble Sri H. C. DASAPPA.—There are several plans. There is a two-year plan; five-year plan; and fifteen year plan. There are so many of these plans on all of which the Government propose to place relevant facts before this Hon'ble House.

Sri H. C. LINGA REDDY.—Did you approach the Central Government without knowing the estimates of the plans prepared by you?

The Hon'ble Sri H. C. DASAPPA.—I have told you. Plans are there—two-year, five-year and fifteen-year plans. All the facts will be placed before the House.

Sri H. C. LINGA REDDY.—Is it possible for you to let us know?

The Hon'ble Sri H. C. DASAPPA.—Yes, we are going to place all the facts before the House. You will know what exactly these projects and plans are and what are the results of the discussions with the Central Planning Commission.

Sri L. SIDDAPPA (Shimoga district—General).—Will they be placed during this Session?

The Hon'ble Sri H. C. DASAPPA.—Yes, tomorrow or the day after.

Sri H. C. LINGA REDDY.—What will be the total amount of loan that the Central Government will be granting to the State?

The Hon'ble Sri H. C. DASAPPA.—All that, I think, may be taken up at the time of furnishing all the other information and statements. Just now I do not think it will help anybody to take up the question regarding the irrigation schemes and how much money will be required and so on.

Sri H. C. LINGA REDDY.—Did the Mysore Government discuss the matter with the Central Government recently?

The Hon'ble Sri H. C. DASAPPA.—Yes, of course on all the points. But that question relates to sanction of a loan from the Centre to the extent of 1½ crores and so the answer furnished confined to the particular question.

Sri H C. LINGA REDDY.—What is the overall amount of loan that the Centre has so far granted for the electrical and irrigation projects?

The Hon'ble Sri H. C. DASAPPA.—I have answered; $1\frac{1}{2}$ crores for 1950-51 and $1\frac{1}{2}$ crores for 1951-52, so far these two works are concerned.

Sri H. C. LINGA REDDY.—Will this amount be utilised for rural electrification?

The Hon'ble Sri H. C. DASAPPA.—Part of this $1\frac{1}{2}$ crores may be used for rural electrification also.

Sri D. H. CHANDRASEKHARAIYA (Chitaldrug District—General).—Has the amount which was sanctioned last year, been distributed amongst the various items?

The Hon'ble Sri H. C. DASAPPA.—The distribution of this amount amongst the various items is a matter on which I want notice.

Sri D. H. CHANDRASEKHARAIYA.—May I take it that the money has been spent?

The Hon'ble Sri H. C. DASAPPA.—Money has been spent. Much more than $1\frac{1}{2}$ crores has been spent.

ಶ್ರೀ ಎಲ್. ಎಚ್. ತಿಮ್ಮಾ ಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ಪಂಗಡ).—$1\frac{1}{2}$ ಕೋಟಿ ರೂಪಾಯಿ ಕೊಟ್ಟಿರುವುದು ಅಲ್ಪಕಾಲಾವಧಿ ಯೋಜನೆಗಳಿಗೋ ಅಥವಾ ಲಕ್ಕವಳ್ಳಿಯಂಥ ದೀರ್ಘಕಾಲಾವಧಿ ಯೋಜನೆಗಳಿಗೋ ?

ಮಾನ್ಯ ಶ್ರೀ ಎಚ್ ಸಿ. ದಾಸಪ್ಪನವರು.—ಅದು ಹೇಳುವುದಕ್ಕೆ ಕಷ್ಟ. ಏಕೆಂದರೆ Lakkavalli is more a long term project than a short term project.

Sri L. H. THIMMA BOI.—So a portion of that amount will be allotted purely for Lakkavalli?

The Hon'ble Sri H. C. DASAPPA.—Yes.

Sri L. H. THIMMA BOI.—Probably the amount so allotted will be some lakhs of rupees?

The Hon'ble Sri H. C. DASAPPA.—Yes.

Sri L. H. THIMMA BOI.—Will it be half the loan amount?

The Hon'ble Sri H. C. DASAPPA.—Not so much.

Sri L. H. THIMMA BOI.—Is there any probability of giving more funds for this year?

The Hon'ble Sri H. C. DASAPPA.—The Budget itself shows how much we are going to spend on Lakkavalli this year.

Sri L. H. THIMMA BOI.—Is there any probability of giving more amount, say a few lakhs of rupees more?

The Hon'ble Sri H. C. DASAPPA.—In the Budget for 1951-52 we take into calculation the payment of Rs. $1\frac{1}{2}$ crores from the Centre and we have budgetted on that basis. So if more funds could be forthcoming by any chance, then we will be able to spend more, but not otherwise.

Sri L. H. THIMMA BOI.—Is there any probability of taking up the work of the left bank channel?

The Hon'ble Sri H. C. DASAPPA.—That is a detail which must be addressed to my Hon'ble colleague. It does not arise out of this question.

Sri H. SIDDAVEERAPPA (Chitaldrug District—General).—Out of Rs. $1\frac{1}{2}$ crores, how much has been spent for electrification in 1950-51?

The Hon'ble Sri H. C. DASAPPA.—I have already said I want notice for those details.

UNSTARRED QUESTIONS

(to which answers were laid on the table).

Expenditure in Education.

*Q.—6. **Sri M. V. KRISHNAPPA** (Kolar District—General).—

Will the Government be pleased to state:—

(*a*) the total amount of money that was spent for Education in the year 1946-47;

(*b*) the total amount of money that was spent in the year 1947-48, 1948-49, 1949-50 and 1950-51;

(*c*) (i) the number of Primary, Middle and High Schools that were started in 1946-47, and (ii) the number of Technical Schools and Colleges that were started in 1946-47, 1947-48, 1948-49, 1949-50 and 1950-51?

A.—The Hon'ble Sri R. CHENNIGARAMIAH (Minister for Local Self-Government).—

(*a*) Rs. 1,42,65,981.

(*b*) *Year.*		*Money spent.*
		Rs.
1947-48	...	1,75,39,850
1948-49	...	2,61,08,904
1949-50 (Nine months)	...	2,10.37,970
1950-51	...	Information not available.

(*c*) (i) The number of Primary, Middle and High Schools started during 1946-47 is as follows :—

Primary Schools	...	412
Middle School	...	46
High Schools	...	22

(ii) The number of Technical Schools and Colleges started during the year 1946-47 to 1950-51 is as detailed hereunder :—

	1946-47	1947-48	1948-49	1949-50	1950-51
Technical Schools.	1	1	1	2	2
Colleges ...	4	1	8	...	...

Allotments for the Construction of Primary and Middle Schools.

**Q.*—49. Sri H. M. MALLIKARJUNAPPA (Chikmagalur District—General).—

Will the Government be pleased to state :—

(*a*) the principle adopted in constructing the Primary and Middle Schools in the State:

(*b*) (i) the amount allotted in the year 1950-51 for construction of Primary and Middle Schools (district and talukwar figures to be given); and (ii) the amount spent in the year 1950–51 and the balance to be spent in the year 1950–51 (district and talukwar details to be given) ?

A.—The Hon'ble Sri R. CHENNIGARAMIAH (Minister for Local Self-Government)—

(*a*) The Primary and Middle School Buildings are constructed according to the needs of each locality and the availability of funds.

(*b*) (i) *Vide* Statement appended below.

(ii) As the year 1950-51 is not yet over, information cannot be furnished.

The amount allotted in the year 1950–51 for the construction of Primary and Middle Schools (Districtwar and Talukwar).

Sl. No.	Name of Divisions	Primary Schools	Middle Schools	Remarks
		Rs.	Rs.	
1	Bangalore Division, Bangalore	1,10,000	26,000	Talukwar figures are not available.
2	Buildings Division, Bangalore	30,000	4,000	
3	Kolar Division, Kolar	[illegible]0,000	15,000	
4	Tumkur Division Tumkur	80,000	67,700	
5	Mysore Division, Mysore	1,00,000	17,500	
6	Buildings Division, Mysore	40,000	6,000	
7	Mandya Division, Mandya	1,50,000	34.000	
8	Hassan Division, Hassan	90,000	82,000	
9	Chikmagalur Division, Chikmagalur	60,000	13,000	
10	Shimoga Division, Shimoga	1,10,000	40,700	
11	Chitaldrug Division, Chitaldrug	1'40,000	74,000	
12	District Board, Mysore	70,000	...	
13	District Board, Tumkur	90,020	...	
	Total ...	10,90,000	3,79,900	

Promotions from II Division to I Division in the Secretariat and extension of the principle to Education Department Tutorial Staff.

*Q.—105. Sri B. M. SHAMANNA GOWDA (Retroceded Area–General).—

Will the Government be pleased to state:—

(a) the basis on which persons working in the II Division in the Ministerial Establishment of the Secretariat are promoted to I Division;

(b) whether the same principle holds good in the case of persons working on the tutorial staff of the Education Department;

(c) if not, why?

A.—The Hon'ble Sri R. CHENNIGARAMIAH (Minister for Locol Self-Government).—

(a) On the basis of seniority combined with merit,

(b) Yes, generally, except in the case of vacancies meant for graduates.

(c) Non-graduate teachers cannot in the interests of the maintenance of good standards, be promoted to vacancies meant for graduates.

Audit Objections of Rice Mills in Krishnarajanagar Taluk.

*Q.—128. Sri M. C. SIVANANDA SARMA (Bangalore District—General).

Will the Government be pleased to state:—

(a) the audit objections of each of the Rice Mills in Krishnarajanagar Taluk from the year 1943 to end of 1950 (itemwar and yearwar details to be given);

(b) on whom the responsibilities have been fixed and for what reasons;

(c) the amount deducted from each of the Rice Mill-owners out of their hulling, handling and transport bills in each month, in respect of such objections till now;

(d) the balance yet to be deducted from each one of the Rice Mills;

(e) whether the Mill-owners have objected for such deductions and if so, the action taken thereon?

A.—The Hon'ble Sri T. MARIAPPA (Home Minister).—

(a) Statement appended below.

(b) The responsibilities have been fixed on the Mill-owners and the Depot Staff concerned depending upon the nature of the objection and the circumstances of each case, the reasons being generally shortage in stock, short (*iluvari*), misclassification of paddy, excess claims, etc.

(c) The millwar recoveries effected are as follows:—

		Rs.	a.	p.
S.B.R. Mills	...	1,279	10	3
K.R.B. Mills	...	1,591	5	4
S.K. Mills	...	646	15	0
S.C.V.D. Mills	{	1,222	15	6
		13,856	7	0
Karnataka Mills	...	140	5	0
Srinivasa Mills	...	106	14	0
S.K.R. Mills	...	114	2	0
S.R.R. Mills	...	634	5	0
S.P.R. Mills	...	1,307	13	9
Santhinatha Mills	...	315	3	9
S.K.P. Mills	...	147	0	0

Monthly figures are not readily available.

(d) *Balance Due.*		Rs.	a.	p.
S.L.R. M'lls	...	849	11	6
R.K.B. Mills	...	1,274	1	6
		190	5	9
S.C.V.D. Mills	{	13,856	7	0
		655	12	9
S.K. Mills		11,19	7	9
Srinivasa Mills	...	6	5	4
S.K.P. Mills	...	1,292	2	9
S.J.L. Mills	...	1,421	15	3

(e) Only S.C.V.L. Mills objected regarding deduction made in the audit and the matter is under correspondence.

STATEMENT No. I.

	Short iluvari	Misclassification	Shortage	Wrong calculation	Clearing charge	Excess claim
1943-1944.	Rs. a. p.	Rs. a. p.	Rs. a. p.	Rs. a. p.	Rs. a. p.	Rs. a. p.
S.B.R. Mills ...	982 8 0	...	Nii	...	63 0 0	...
R.K.B. ,, ...	1,352 14 0	134 0 9	...	...	54 0 0	...
C V.D. ,, ...	2,952 43 0	...	...	...	...	...
S.K. ,, ...	555 10 0	...	...	...	...	...
Karnataka ,, ...	210 6 0	82 6 0	...	...	...	...
Srinivasa ,, ...	...	...	...	...	...	...
S.R.R. ,, ...	56 12 9	...	24 11 0	3 14 0	...	46 2 0
S.J.L. ,, ...	457 7 0	...	16 0 0	...	80 0 0	...
S.L.N. ,, ...	490 0 0	...	119 4 3	...	...	...
S.K.R. ,, ...	40 2 0	...	7 15 0	...	...	...
S.K.P. ,, ...	182 10 0	...	...	...	...	...
S.P.R. ,, ...	335 6 0	...	...	...	...	...
1945			37 8 0	...	...	...
S.B.R. ,, ...	1,589 0 0	...	...	89 3 0	...	...
R.R.B. ,, ...	1,324 1 0	...	...	...	...	...
C.V D. ,, ...	1,609 15 0	...	...	...	...	...
S.K. ,, ...	567 9 0	...	58 8 0	98 9 6	...	...
Karnataka ,, ...	6,230 6 9	...	...	...	...	...
Srinivasa ,, ...	3,800 4 0	...	...	...	...	...
S.R.R. ,, ...	1,892 9 0	...	65 4 0	...	...	...
S.J.L. ,, ...	2,594 13 0	...	...	...	...	...
S.L.N. ,, ...	187 0 0	...	...	...	...	...
S.K.R. ,, ...	3,828 8 3	41 10 0	0 12 0	...	...	...
S.K.P. ,, ...	2,126 13 0	...	106 4 0	...	...	...
S.P.R. ,, ...	2,456 8 9	...	...	...	...	...

	Short	Wrong calculation	Misclassification	Shortage in stock	Excess claim	Penal rate	C ncession withdrawn
1-1-1946 to 1-3-51	Rs. a. p.	Rs. a. p.	Rs. a. p.	Rs. a. p.	Rs. a p.	Rs. a. p.	Rs. a. p.
S.B.R. ...	846 11 6	...	...	...	616 11 0	...	...
R.K.B. ...	...	14 6 0	94 2 4	216 6 0	541 12 6	...	...
C.V.D. ...	...	4 2 0	42 3 0	254 0 0	246 14 9	13,856 7 0	655 12 9
S.K. Mills ...	...	...	...	...	922 6 0	...	...
Srinivasa ...	...	...	...	...	76 4 0	...	...
Shantinatha ...	9 0 9	5 0 0	...	500 0 6	287 8 0	...	...
Jayalakshmi ...	416 0 0	...	18 13 0	212 0 0	234 3 0	...	...
Ranganatha ...	...	...	...	...	259 4 0	...	...
S.P.R. ...	...	...	...	...	1 134 5 0	...	...
S.K P. ...	...	...	...		404 3 0	...	...
S.K.R. ...	...	...	...	...	588 11 0	...	...
Total ...	1,274 12 3	23 8 0	155 2 4	1,182 12 0	5,301 2 7	13,856 7 0	655 12 9
1950-51							
S.C.V.D. ...	655 12 9	...	...	...	...	...	...

Formation of Jayapur and Vijayapur new villages in Ramanagaram Taluk.

*Q.—196. Sri T. MADIAH GOWDA (Bangalore District—General).—

Will the Government be pleased to state :—

(*a*) when the two villages Jayapur and Vijayapur in Ramanagaram Taluk were formed, and with what purposes;

(*b*) the facilities that are given to them by Government?

A.—Hon'ble Sri T. MARIAPPA (Home Minister).—

(*a*) The two villages were proposed to be formed during the construction of the Kanva Project for the benefit of the expropriated ryots whose lands were submerged in Anmanhalli and Hargarahalli.

(*b*) An extent of 1,400 acres in Doddamannugudde forest area was cleared and an extent of nearly 1,050

(SRI T. MARIAPPA.)

acres of arable lands was measured, phoded, and granted to the ryots for cultivation. Sites have been marked according to a plan prepared. Two wells, one for villages and one for Adikarnatakas, are provided. Roads and drains inside the vllages have been formed. Approach roads from Kutga Road near Hanumantharayana Gudi to these villages have been formed by the Public Works Department.

LEGISLATIVE BUSINESS.

MR. SPEAKER. (The Hon'ble Sri V. Venkatappa).—The Hon'ble Law Minister may move the motion for extension of time for the presentation of the Select Committees' Reports.

The Mysore Civil Courts (Amendment) Bill, 1951.

The Hon'ble Sri K. T. BHASHYAM (Minister for Law and Labour).—I beg to move:

"That the time appointed for the presentation of the report of the Select Committee on the Mysore Civil Courts (Amendment) Bill, 1951, be extended and that the report be presented at the next Session of the Legislative Assembly."

The necessity for this extension of time which I am asking for arises because the High Court is making some proposals regarding the jurisdiction of the several Courts in the State and we have not yet received those proposals. Secondly, the Central Civil Procedure Code has been made applicable to the State of Mysore and we have to fall in line with the system of jurisdiction prevailing in other parts of India, in Madras and Bombay particularly, and we are gathering statistics about that. Thirdly, there is a clause in this Bill regarding the circumstances under which second appeals will lie. That is a matter which we in the Select Committee feel should be brought under the Civil Procedure Code rather than under the Civil Courts' Act. All these reasons have contributed to the delay in the consideration of this Bill and therefore we propose that after getting all the statistics and the proposals we will finalise and send the report of the Select Committee. That is why we want time.

MR. SPEAKER.—The question is:

"That the time appointed for the presentation of the report of the Select Committee on the Mysore Civil Courts (Amendment) Bill, 1951, be extended and that the report be presented at the next session of the Legislative Assembly."

The motion was adopted.

The Mysore Suits Valuation Bill, 1951.

The Hon'ble Sri K. T. BHASHYAM (Minister for Law and Labour).—I beg to move:

"That the time appointed for the presentation of the report of the Select Committee on the Mysore Suits Valuation Bill, 1951, be extended and that the report be presented at the next session of the Legislative Assembly."

This follows the previous motion, because the Civil Courts (Amendment) Bill and also the Suits Valuation (Amendment) Bill go together and therefore, as a consequence of the previous motion, the time appointed for the presentation of the report in respect of this Bill also has to be extended.

Janab SYED ABDUR RAHMAN (Chikmagalur *cum* Shimoga–Muslim).—When is the next Session likely to be held; before the general election or after?

The Hon'ble Sri K. T. BHASHYAM.—I cannot say, Sir.

MR. SPEAKER.—The question is:

"That the time appointed for the presentation of the report of the Select Committee on the Mysore Suits Valuation Bill, 1951, be extended and that the report be presented at the next Session of the Legislative Assembly."

The motion was adopted.

The City of Bangalore Municipal Corporation (Amendment) Bill, 1951.

The Hon'ble Sri R. CHENNIGARAMIAH (Minister for Local Self-Government).—Sir, with regard to the City of Bangalore Municipal Corporation

(Amendment) Bill, 1951 yesterday it was proposed that the further discussion on the motion to consider the Bill may be resumed to-day; but some Hon'ble Members of this House have suggested to me that I may request the Chair to permit the House to resume discussion on the Bill to-morrow.

Mr. SPEAKER.—This may be done if the House so desires.

(Several Members: **Yes**).

Mr. SPEAKER.—The Hon'ble Minister for Local Self-Government may now move for the consideration of the Mysore Village Panchayets and District Boards Bill, 1951.

The Mysore Village Panchayets and District Boards Bill, 1951.

Motion to consider.

***The Hon'ble Sri R. CHENNIGARAMIAH** (Minister for Local Self-Government).—Sir, I beg to move:

"That the Mysore Village Panchayets and District Boards Bill, 1951, as reported by the Select Committee, be taken into consideration."

ಅಧ್ಯಕ್ಷರೇ, ಈ ವಿಷಯದಲ್ಲಿ ಕೆಲವು ಅಂಶಗಳನ್ನು ಮಾತ್ರ ನಾನು ಸಭೆಯ ಮುಂದೆ ಇಡಬೇಕಾಗಿದೆ. ವಿಲೇಜ್ ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟನ್ನು ಹೊಸದಾಗಿ ನಮ್ಮ ಮೈಸೂರು ದೇಶದಲ್ಲಿ ಜಾರಿಗೆ ತರಬೇಕೆಂದು ಹೇಳಿ ಹಿಂದಿನಸಾರಿ ಅಸೆಂಬ್ಲಿಯಲ್ಲೂ ಮತ್ತು ಹಿಂದಿನ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲೂ ಖಾಸಗಿ ಸದಸ್ಯರು ಅಭಿಪ್ರಾಯಪಟ್ಟಿದ್ದರು. ಅವರ ಅಭಿಪ್ರಾಯದಂತೆ ಸರ್ಕಾರದವರು ಒಂದು ಸಮಿತಿಯನ್ನು ಮಾಡಿ ಆ ಸಮಿತಿಯಲ್ಲಿ ಖಾಸಗಿ ಸದಸ್ಯರನ್ನೂ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳ ಅನೇಕ ಅಧ್ಯಕ್ಷರನ್ನೂ ನೇಮಿಸಿದ್ದರು. ಆ ಸಮಿತಿಯವರು ಪಂಚಾಯಿತಿ ಆಡಳಿತವನ್ನೂ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತವನ್ನೂ ಬಹಳ ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ಎರಡನ್ನೂ ಒಟ್ಟುಗೂಡಿಸಿ, ಈಗಿರತಕ್ಕ ಏರ್ಪಾಡನ್ನು ಮಾರ್ಪಾಡು ಮಾಡಿ ಸರ್ಕಾರದವರಿಗೆ ಒಂದು ವರದಿಯನ್ನು ಕೊಟ್ಟರು; ಅವರ ವರದಿಯ ಮೇಲೆ ಸರ್ಕಾರದವರು ಪರಿಶೀಲನೆಮಾಡಿ, ಕೆಲವು ಅಂಶಗಳನ್ನು ಬದಲಾವಣೆಮಾಡಿ ಈ ಸಭೆಯ ಮುಂದೆ ಒಂದು ಮಸೂದೆಯನ್ನು ಇಟ್ಟರು. ಈ ಮಸೂದೆ ಈ ಸಭೆಯ ಪರಿಶೀಲನೆಗೆ ಬಂದದ್ದಾಗ್ಯೆ ಈ ಸಭೆಯವರು ಇದನ್ನು ಸೆಲೆಕ್ಟ್ ಸಮಿತಿಗೆ ಪರಿಶೀಲನೆಗೆ ಕಳುಹಿಸಿದರು. ಸೆಲೆಕ್ಟ್ ಸಮಿತಿಯವರು ಈ ಮಸೂದೆಯಲ್ಲಿರತಕ್ಕ ಪ್ರತಿಯೊಂದು ಅಂಶವನ್ನೂ ಪರಿಶೀಲನೆಮಾಡಿ, ಕೆಲವು ಬದಲಾವಣೆಗಳನ್ನು ಮಾಡಿ, ಅವರ ಒಂದು ವರದಿಯನ್ನು ಕೊಟ್ಟಿದ್ದಾರೆ. ಈಗ ಸೆಲೆಕ್ಟ್ ಸಮಿತಿಯವರ ವರದಿ ಸಭೆಯ ಮುಂದೆ ಪರಿಶೀಲನೆಗೆ ಇದೆ. ನಾನು ಮೊದಲನೆಯದಾಗಿ ಸಭೆಯವರ ಕ್ಷಮಾಪಣೆ ಕೇಳಬೇಕಾಗಿದೆ: ಏಕೆಂದರೆ ಇದರಲ್ಲಿ ಕೆಲವು verbal mistakes ಮತ್ತು printing mistakes ಇವೆ. ಇದು ಆಗಬಾರದಾಗಿತ್ತು. ಆದರೆ ಕಾರಣಾಂತರದಿಂದ ಕೆಲವು ತಪ್ಪುಗಳು ಇದರಲ್ಲಿ ಕಂಡುಬರುತ್ತಿವೆಯಾದ್ದರಿಂದ ಸಭೆಯವರು ಇದನ್ನು ದಯವಿಟ್ಟು ಮನ್ನಿಸಬೇಕೆಂದು ತಿಳಿಸುತ್ತೇನೆ.

ಇವರಲ್ಲಿ ಬಹಳ ಮುಖ್ಯವಾದ ಬದಲಾವಣೆಯೆಂದರೆ ಇದ ವರೆಗೂ ಡಿಸ್ಟ್ರಿಕ್ಟ್ ಬೋರ್ಡ್‌ನ ಆಡಳಿತ ಮತ್ತು ಪಂಚಾಯಿತಿ ಆಡಳಿತ ಪ್ರತ್ಯೇಕವಾಗಿ ಬೇರೆ ಬೇರೆ ಕಾನೂನು ಪ್ರಕಾರ ನಡೆಯುತ್ತಾ ಇತ್ತು. ಇನ್ನು ಮುಂದೆ ಇವೆರಡನ್ನೂ ಒಂದು ಗೂಡಿಸಿ ಒಂದೇ ಕಾನೂನುಮಾಡಿ, ಇವೆರಡಕ್ಕೂ ಚುನಾವಣಾಮುಖೇನ ಆಡಳಿತ ನಡೆಯಬೇಕೆಂಬ ಒಂದು ಏರ್ಪಾಡು ಆಗಿದೆ. ಡಿಸ್ಟ್ರಿಕ್ಟ್ ಬೋರ್ಡ್‌ಗೆ ಇದುವರೆಗೂ property qualification ಮೇಲೆ ಚುನಾವಣೆ ನಡೆಯುತ್ತಾ ಇತ್ತು ಇನ್ನುಮುಂದೆ ಈ ಕಾನೂನು ಪ್ರಕಾರ ವಯಸ್ಕರ ಮತದಾನ ಪದ್ಧತಿಯ ಮುಖೇನ ಚುನಾವಣೆ ಆಗುತ್ತದೆ. ಮತ್ತು ಒಂದೊಂದು ಹಳ್ಳಿಯಲ್ಲೂ ಒಂದೊಂದು ಪಂಚಾಯಿತಿ ಇದುವರೆಗೂ ಇರುತ್ತಾ ಇತ್ತು. ಈ ಪದ್ಧತಿ ಸರಿಯಾಗಿಲ್ಲ, ಇದರಲ್ಲಿ ನ್ಯೂನತೆಗಳು ಕಂಡು ಬಂದಿವೆ; ಪಂಚಾಯಿತಿಗಳಲ್ಲಿ ಸಾಕಾದಷ್ಟು ಹಣವಿಲ್ಲದೆ ಯೇನಾದರೂ ಮಾರ್ಪಾಡು ಮಾಡಬೇಕೆಂದರೆ ಅದಕ್ಕೆ ಅವಕಾಶ ವಿರುತ್ತಿರಲಿಲ್ಲ. ಆದ್ದರಿಂದ ಇನ್ನುಮುಂದೆ ಕೆಲವು ಹಳ್ಳಿಗಳನ್ನು ಒಟ್ಟುಗೂಡಿಸಿ ಅದನ್ನು ಒಂದು ವಿಲೇಜ್ ಪಂಚಾಯಿತಿಯಾಗಿ ಮಾಡಬೇಕೆಂದು ಮಾಡಿದ್ದಾರೆ.

ಪಂಚಾಯಿತಿಗೆ ವಯಸ್ಕರ ಮತದಾನ ಪದ್ಧತಿಯ ಮೇಲೆ ಸದಸ್ಯರು ಚುನಾಯಿತರಾಗುತ್ತಾರೆ. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಪಂಚಾಯಿತಿಗೆ ಸದಸ್ಯರು ವಯಸ್ಕರ ಮತದಾನ ಪದ್ಧತಿಯ ಮೇಲೆ ಚುನಾಯಿತರಾಗುತ್ತಾರೆ; ಡಿಸ್ಟ್ರಿಕ್ಟ್ ಬೋರ್ಡಿಗೆ ಪಂಚಾಯಿತಿಯ ಸದಸ್ಯರು ಚುನಾವಣೆ ಮಾಡುತ್ತಾರೆ. ಆರ್ಥಿಕ ವಿಚಾರಕ್ಕೆ ಸಂಬಂಧಪಟ್ಟ ಹಾಗೆ, ಪಂಚಾಯಿತಿಗಳು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹೆಚ್ಚು ವರಮಾನ ಬರತಕ್ಕ ಕೆಲವು ಮಾರ್ಗಗಳನ್ನು ಸಮಿತಿಯವರು ಸಲಹೆ ಮಾಡಿದ್ದಾರೆ. ಆ ಸಲಹೆಗಳು ಇದರಲ್ಲಿವೆ ದೇಶದಲ್ಲಿ ಉತ್ಪತ್ತಿಯಾಗುವ ಭೂಕಂದಾಯದಲ್ಲಿ ಶೇಕಡ $12\frac{1}{2}$ ಯಷ್ಟನ್ನು ಗ್ರಾಮಪಂಚಾಯಿತಿಗಳಿಗೂ ಮತ್ತು $12\frac{1}{2}$ ಯಷ್ಟನ್ನು ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಕಾನೂನು ಬದ್ಧವಾಗಿ ಬಡ್ಜೆಟ್ಟಿನಲ್ಲಿ ಮೀಸಲಾಗಿಡಬೇಕೆಂಬುದು ಅವರ ಮುಖ್ಯವಾದ ಸಲಹೆ. ಇದರ ಜೊತೆಗೆ, ಇದುವರೆಗೂ ಇದ್ದ ಲೋಕಲ್ ಸೆಸ್‌ನ ಉತ್ಪತ್ತಿಯ ಹಕ್ಕೂ ಇನ್ನುಮುಂದೆಯೂ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಇರುತ್ತದೆ.

ಇದುವರೆಗೆ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಗ್ರಾಮಪಂಚಾಯಿತಿಗಳಲ್ಲಿ ನಿಮ್ನ ವಂಗಡದವರಿಗೆ ಸ್ಥಾನಗಳನ್ನು ಮೀಸಲಾಗಿಡುವ ಪದ್ಧತಿಯಿರಲಿಲ್ಲ. ಈ ಹೊಸ ಕಾನೂನು ಪ್ರಕಾರ ಈ ಸಂಸ್ಥೆಗಳಲ್ಲಿ ಅವರ ಜನಸಂಖ್ಯೆಯ ದಾಮಾಷಾ ಪ್ರಕಾರ ಸ್ಥಾನಗಳನ್ನು ಮೀಸಲಾಗಿಟ್ಟು ಅವರು ಚುನಾವಣೆಗಳಲ್ಲಿ ಚುನಾಯಿತರಾಗಿ ಬರಲು ಅವಕಾಶ ಮಾಡಲಾಗಿದೆ. ಹೀಗೆ ಅನೇಕ ಬಹು ಮುಖ್ಯವಾದ ಬದಲಾವಣೆಗಳನ್ನು ಮಾಡಿರುವು

*Indicates that the speech has not been revised by the Hon'ble Members concerned.

(THE HON'BLE SRI R. CHENNIGA-RAMIAH.)

ದಲ್ಲದೆ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಗ್ರಾಮಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರಗಳನ್ನೂ ಕೊಡಲಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಚುನಾಯಿತ ಅಧ್ಯಕ್ಷರೂ ಮತ್ತು ಗ್ರಾಮಪಂಚಾಯಿತಿಯಲ್ಲಿ ಚುನಾಯಿತ ಚೇರ್ಮನ್ನರೂ ಇರುತ್ತಾರೆ. ಇವರಿಗೆ ಬಹುಮಟ್ಟಿಗೆ ಹೆಚ್ಚಿನ ಅಧಿಕಾರವಿದೆ. ಈ ಎರಡು ಸಂಸ್ಥೆಗಳಿಗೆ ಇದುವರೆಗೆ ಇಲಾಖಾ ಮುಖ್ಯಾಧಿಕಾರಿಗಳಿರಲಿಲ್ಲ. ಈ ಹೊಸ ಕಾನೂನಿನ ಪ್ರಕಾರ 'ಕಮಿಷನರ್ ಫಾರ್ ಲೋಕಲ್ ಬಾಡೀಸ್' ಎಂಬ ಒಬ್ಬರು ಹೊಸ ಅಧಿಕಾರಿಗಳಿರುತ್ತಾರೆ. ಇದರಿಂದ ಇವುಗಳ ಆಡಳಿತವನ್ನು ಹೆಚ್ಚು ಮುತುವರ್ಜಿಯಿಂದಲೂ ಜಾಗರೂಕತೆಯಿಂದಲೂ ನೋಡಿಕೊಂಡು ಹೆಚ್ಚುಹೆಚ್ಚಿನ ಸೌಕರ್ಯಗಳನ್ನೂ ಕಲ್ಪಿಸಲು ಅವಕಾಶವಾಗುತ್ತದೆ, ಇದುವರೆಗೆ ಡೆಪ್ಯುಟಿ ಕಮಿಷನರವರೇ.....................................

Sri T. MADIAH GOWDA (Bangalore District—General).—Sir, I rise to a point of order. Now what is before us is only the report of the Select Committee and not the principles of the Bill. The principles of the Bill have already been accepted by the House, and the Hon'ble the Minister is again dealing with the principles of the Bill. That is not correct.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಜನರಲ್ ಪ್ರಿನ್ಸಿಪಲ್ಸ್‌ಗಳನ್ನು ಕೂಡ ಸೆಲೆಕ್ಟ್ ಕಮಿಟಿಯವರು ಪರಿಶೀಲನೆಮಾಡಿದ್ದಾರೆ. ಈ ಮಸೂದೆಯನ್ನು ಹಿಂದೆ ಸಭೆಯ ಮುಂದೆ ತಂದಾಗ ಸಾಮಾನ್ಯ ಚರ್ಚೆ ಸರಿಯಾಗಿ ಆಗಲಿಲ್ಲವಾದ್ದರಿಂದ ಕೆಲವರಿಗೆ ಅವಶ್ಯಕವಾಗಬಹುದೆಂದು ಮುಖ್ಯ ವಿಷಯಗಳನ್ನು ಸೂಕ್ಷ್ಮವಾಗಿ ಹೇಳುತ್ತಿದ್ದೇನೆ.

Mr. SPEAKER.—You can discuss the Bill. Where is the harm?

Sri T. MADIAH GOWDA—But can the principles of the Bill be discussed now at this stage?

ಅಧ್ಯಕ್ಷರು.—ಸೆಲೆಕ್ಟ್ ಕಮಿಟಿಯ ವರದಿಯನ್ನು ಪರಿಶೀಲನೆಮಾಡುವಾಗ ಸಾಮಾನ್ಯವಾಗಿ ಅವರು ಸೂಚಿಸಿರುವ ಬದಲಾವಣೆಗಳಿಗೆ ಸಂಬಂಧಪಟ್ಟ ವಿವರಗಳನ್ನೂ ಚರ್ಚೆಮಾಡಬಹುದು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸೆಲೆಕ್ಟ್ ಕಮಿಟಿಯ ವರದಿಯಲ್ಲಿ ಇಲ್ಲದೇ ಇರುವುದನ್ನು ನಾನು ಹೇಳುತ್ತಿಲ್ಲ. ಈಗ ಎಲ್ಲ ಅಂಶಗಳನ್ನೂ ಒಳಗೊಂಡ ಸೆಲೆಕ್ಟ್ ಕಮಿಟಿಯ ವರದಿ ಸಭೆಯ ಮುಂದಿದೆ. ತಿದ್ದುಪಡಿಗಳು ಚರ್ಚೆಗೆ ಬಂದಾಗ ಅವುಗಳ ಬಗ್ಗೆ ಉತ್ತರ ಹೇಳುವಾಗ ಮಿಕ್ಕ ವಿಷಯಗಳನ್ನು ತಿಳಿಸುತ್ತೇನೆ. ಆದುದರಿಂದ ಈ ಸೆಲೆಕ್ಟ್ ಸಮಿತಿಯ ವರದಿಗೆ ಸಭೆ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

Mr. SPEAKER.—Motion moved—

"That the Mysore Village Panchayets and District Boards Bill, 1951, as reported by the Select Committee, be taken into consideration."

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ಸೆಲೆಕ್ಟ್ ಸಮಿತಿಯ ವರದಿಯನ್ನು ಸಭೆಯ ಮುಂದಿಡುತ್ತಾ ಸಚಿವರು ಕೆಲವು ಅಂಶಗಳನ್ನು ಹೇಳಿದ್ದಾರೆ. ನಾನೂ ಈ ಸಮಿತಿಯಲ್ಲಿದ್ದೆ. ಈ ಮಸೂದೆ ಅಷ್ಟಾಗಿ ವಿಶೇಷವಾದ ಬದಲಾವಣೆಯನ್ನೇನೂ ಹೊಂದಿಲ್ಲ. ಆದರೂ ಒಟ್ಟಿನಲ್ಲಿ ಹಿಂದೆ ಇದನ್ನು ತಂದಾಗ ಇದ್ದುದಕ್ಕೂ ಈಗ ಇರುವುದಕ್ಕೂ ಹೋಲಿಸಿದರೆ ಕೆಲವು ವ್ಯತ್ಯಾಸಗಳಾಗಿವೆ. ಈ ವ್ಯತ್ಯಾಸಗಳಲ್ಲಿಯೂ ಒಂದು ಮೂಲಭೂತವಾದ ಕೊರತೆ ಇದೆ. ಅದನ್ನು ಸ್ವಲ್ಪ ಮಟ್ಟಿಗಾದರೂ ತಿದ್ದುವುದಕ್ಕೆ ಆಗದೇಯಿದ್ದುದಕ್ಕಾಗಿ ನನಗೆ ಬಹಳ ವ್ಯಸನವಾಯಿತು. ಪ್ರಜಾಸತ್ತೆ ಜಾರಿಗೆ ಬಂದು ಯಾವಾಗ ಆಡಳಿತ ಪ್ರಜೆಗಳ ಕೈಗೆ ಬಂದಿತೋ ಆಗ ಅನಿವಾರ್ಯವಾಗಿ ತೆರಿಗೆಗಳು ಜಾಸ್ತಿಯಾಗುತ್ತವೆ. ಹೀಗೆ ಜನ ಹೆಚ್ಚಿನ ತೆರಿಗೆ ಕೊಟ್ಟಮೇಲೆ ಆ ತೆರಿಗೆ ಸರಿಯಾಗಿ ವಿನಿಯೋಗವಾಗಲು ಜನರಿಗೆ ಸಾಕಾದಷ್ಟು ಅಧಿಕಾರವಿರಬೇಕಾದುದು ನ್ಯಾಯ. ಆದರೆ ಹಾಗಿಲ್ಲ. ಈ ಮಸೂದೆಯಲ್ಲಿ ಈ ಕೊರತೆ ಎದ್ದು ಕಾಣುತ್ತಿದೆ: ಪ್ರಜಾಪ್ರಭುತ್ವ ತತ್ವದ ಪ್ರಕಾರ ಚುನಾಯಿತ ಸದಸ್ಯರಿಂದ ಕೂಡಿದ ಸಮಿತಿಗಳೂ ಅವಕ್ಕೆ ಚುನಾಯಿತ ಅಧ್ಯಕ್ಷರುಗಳೂ ಇದ್ದಾರೆ. ಈ ಸಂಸ್ಥೆಗಳಿಗೆ ಸಂಬಂಧಪಟ್ಟ ಕಾನೂನುಗಳೆಲ್ಲವೂ ಇವೆ. ಆದರೆ ಅವುಗಳ ಅಧಿಕಾರ ವ್ಯಾಪ್ತಿ ಮತ್ತು ಆಡಳಿತ ಬೇರೆಯವರ ಕೈಯಲ್ಲಿವೆ. ಈ ಮಸೂದೆಯಲ್ಲಿ ಹೊಸದಾಗಿ ಕಮಿಷನರೊಬ್ಬರು ತಲೆಹಾಕಿದ್ದಾರೆ. 138ನೆಯ ಕ್ಲಾಜಿನ ಪ್ರಕಾರ ಅವರಿಗೆ ಪೂರ್ತಿ ಅಧಿಕಾರವನ್ನು ಕೊಟ್ಟಿದ್ದಾರೆ. ಈ ವಿಷಯದಲ್ಲಿ ನಾನು ಮೊದಲೇ ಆಕ್ಷೇಪಣೆಮಾಡಿದ್ದೇನೆ. ಅಲ್ಲದೆ ಸಮಿತಿಯಲ್ಲಿ dissenting note ಕೂಡ ಕೊಟ್ಟಿದ್ದೇನೆ.

"The Commissioner for Local Self-Government appointed by the Government shall be the chief controlling authority in respect of all matters relating to administration of Village Panchayets and District Boards"

ಎಂದು ಪೂರ್ಣ ಅಧಿಕಾರ ಕೊಡಲಾಗಿದೆ. ಹೀಗೆ ಹಿಂದೆ ಇಲ್ಲದಿದ್ದ ಒಂದು ಹೊಸ ಅಧಿಕಾರಸ್ಥಾನ ಕಲ್ಪನೆಯಾಗಿ ಪ್ರಜಾಪ್ರತಿನಿಧಿಗಳಿರಬೇಕಾದ ಒಂದು ಅಧಿಕಾರ ಅವರ ಕೈತಪ್ಪಿ ಹೋಗಿದೆ. ನಮ್ಮ ಆಡಳಿತಕ್ಕೊಳಪಟ್ಟ ಸಂಸ್ಥೆಗಳಲ್ಲಿ ನಮಗೆ ಪೂರ್ಣ ಅಧಿಕಾರವಿರುವುದು ನ್ಯಾಯ. ಇದಕ್ಕೆ ಬದಲಾಗಿ ಈ ರೀತಿ ಮಾಡಿರುವುದು ನ್ಯಾಯವೆ? ಒಂದು ವೇಳೆ ಜನ ಹೆಚ್ಚಿನ ತೆರಿಗೆಯನ್ನು ಕೊಡುವುದು ಬೇಡವೆಂದು ಹೇಳಿದರೆ ಆಗ ಅಧಿಕಾರ ವರ್ಗದವರೇ ಆಡಳಿತವನ್ನು ನಡೆಸಲಿ. ಉದಾಹರಣೆಗೆ ಡಿಸ್ಟ್ರಿಕ್ಟು ಬೋರ್ಡಿಗೆ ಡೆಪ್ಯುಟಿ ಕಮಿಷನರೇ ಅಧ್ಯಕ್ಷರಾಗಿದ್ದರೆ ಈ ವಿಶೇಷ ಆಫೀಸರ ಅವಶ್ಯಕತೆಯೇ ಇರುತ್ತಿರಲಿಲ್ಲ. ಅವರು ಸಬ್ ಡಿವಿಜನ್ ಆಫೀಸರು ಮತ್ತು ಅಮಲ್ದಾರರ ಮೂಲಕ ಕೆಲಸ ನಡೆಸುತ್ತಿದ್ದರು. ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರು, ಅವರೆಲ್ಲರಿಗೂ ಹೆಚ್ಚಿನ ಸಿಬ್ಬಂದಿ—ಇವು ಯಾವುದೂ ಬೇಕಾಗುತ್ತಿರಲಿಲ್ಲ. ಆದರೆ ಹಾಗೆ ಮಾಡಿಲ್ಲ. ಜನರ ಮೇಲಿನ ಕಂದಾಯದ ಹೊರೆ ಕಡಿಮೆಯಾಗಿಲ್ಲ. ಆದರೆ ಜನರ ಅಧಿಕಾರವನ್ನು ಮಾತ್ರ ಮೊಟಕು ಮಾಡಿದ ಹಾಗಿದೆ.

ಅಧ್ಯಕ್ಷರು.—Principlesನ್ನೇ ವಿರೋಧಿಸುತ್ತೀರಾ?

ಶ್ರೀ ಬಿ. ಹುಚ್ಚೇಗೌಡರು.—ನಾನು ಸೆಲೆಕ್ಟ್ ಕಮಿಟಿಯ ಸದಸ್ಯನಾಗಿದ್ದೆ. ಹಿಂದೆ dissenting note ಕೂಡ ಕೊಟ್ಟಿದ್ದೇನೆ.

ಅಧ್ಯಕ್ಷರು.—Principlesನ್ನೇ ಈಗ ವಿರೋಧಿಸುವುದಾಗಿದ್ದರೆ, ಅದು ಸಾಧ್ಯವಿಲ್ಲ. ಸೆಲೆಕ್ಟ್ ಕಮಿಟಿಯವರು ಏನು ಹೇಳಿದ್ದರೋ ಅದರ ಮೇಲೆ ಈಗ ಮಾತನಾಡಬಹುದು.

ಶ್ರೀ ಬಿ. ಹುಚ್ಚೇಗೌಡರು.—ವಿರೋಧ ಪಕ್ಷದ ಅಭಿಪ್ರಾಯಕ್ಕೆ ಮನ್ನಣೆಯಿಲ್ಲದಿದ್ದರೆ ಅದು ಪ್ರಜಾಸತ್ತೆಯೆ? ನಾನು ಹಿಂದೆ ಒಂದು dissenting note ಕೂಡ ಕೊಟ್ಟಿದ್ದೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—Dissenting note ಏನೂ ಅವರು ಕೊಟ್ಟಿಲ್ಲ.

Sri L. SIDDAPPA.—When the House is composed as it is, it is no good also giving dissenting note.

Sri H. K. VEERANNA GOWDH.—That is your opinion.

ಶ್ರೀ ಬಿ. ಹುಚ್ಚೇಗೌಡರು.—ಇದೇ ವಿಷಯವನ್ನೇ ನಾನು ಆಗ ಒತ್ತಾಯ ಮಾಡಿದರೂ ಅವರು ಅಂಗೀಕರಿಸಲಿಲ್ಲ; ಆದ್ದರಿಂದಲೇ ನಾನೀಗ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಸೆಲೆಕ್ಟ್ ಕಮಿಟಿಯ ವರದಿಯ ಮೇಲೆ ಬೇಕಾದರೆ ಏನಾದರೂ ಹೇಳಿ. ಅಷ್ಟೇ ಹೊರತು, ಈ ಬಿಲ್ಲಿನ ಮೂಲತತ್ವವನ್ನೇ ಈ ಸಂದರ್ಭದಲ್ಲಿ ವಿರೋಧಿಸುವುದಕ್ಕೆ ಪ್ರಯತ್ನಿಸುವುದು ಸರಿಯಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಆಮೇಲೆ, ಮಂತ್ರಿಗಳು ಹೇಳಿದರು, ಇದರಲ್ಲಿ ಪಂಚಾಯ್ತಿಯವರಿಗೆ ಬೇಕಾದಷ್ಟು ಅಧಿಕಾರಗಳನ್ನು ಕೊಟ್ಟಿದೆ ಎಂದು. ಹಿಂದೆ ಪಂಚಾಯಿತಿ ಚೇರ್ಮನ್ನರಿಗೆ 300 ರೂಪಾಯಿಗಳವರೆಗೂ ಖರ್ಚುಮಾಡುವ ಅಧಿಕಾರವಿತ್ತು. ಈಗ ಆ ಅಧಿಕಾರವೂ ಇಲ್ಲ! ಕೇವಲ 50 ರೂಪಾಯಿನವರೆಗೆ ಮಂಜೂರುಮಾಡುವ ಅಧಿಕಾರವಿದೆ.

ಇನ್ನೊಂದು ವಿಷಯವನ್ನು ನಾನು ಸೆಲೆಕ್ಟ್ ಸಮಿತಿಯಲ್ಲೂ ಕೂಡ ಹೇಳಿದ್ದೆ. ತಾಲ್ಲೂಕಿಗೊಂದು ಚುನಾವಣಾ ಕ್ಷೇತ್ರವಿರುವಂತೆ ಏರ್ಪಡಿಸಬೇಕೆಂದು ಸೂಚಿಸಿದ್ದೆವು. ಅದನ್ನೂ ಇಲ್ಲಿ ಮಾಡಿಲ್ಲ.

ಅಧ್ಯಕ್ಷರು.—ಹಾಗೆಂದರೇನು?

ಶ್ರೀ ಬಿ. ಹುಚ್ಚೇಗೌಡರು.—ಚುನಾವಣೆಗಳನ್ನು ನಡೆಸುವುದರಲ್ಲಿ ಒಂದೊಂದು ತಾಲ್ಲೂಕೂ ಒಂದು ಚುನಾವಣಾಕ್ಷೇತ್ರವಾಗುವಂತೆ ಮಾಡಬೇಕೆಂದು ನಾವು ಸೂಚನೆಮಾಡಿದ್ದೆವು........

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಚುನಾವಣಾ ನಿಬಂಧನೆಗಳನ್ನು ಮಾಡುವುದರಲ್ಲಿ ಅವೆಲ್ಲಾ ಬರುತ್ತವೆ.

ಶ್ರೀ ಬಿ. ಹುಚ್ಚೇಗೌಡರು.—ಅದು ಇಲ್ಲಿ ಸ್ಪಷ್ಟವಾಗುವುದಿಲ್ಲ. ಇಲ್ಲಿ ಚುನಾವಣಾಕ್ಷೇತ್ರ ಏನಿರುತ್ತದೆಂದು ನಿರ್ದಿಷ್ಟವಾಗಿ ಹೇಳಿಯೂ ಇಲ್ಲ; ಅಥವಾ ಸರ್ಕಾರದವರೇ ಅಧಿಕಾರ ತೆಗೆದುಕೊಂಡು ಚುನಾವಣೆ ಸಂಬಂಧದಲ್ಲಿ ನಿಬಂಧನೆಗಳನ್ನು ಮಾಡುವಾಗ ಅದನ್ನು ವಿಶದಪಡಿಸುತ್ತೇವೆಂದೂ ಹೇಳಿಲ್ಲ.

"The members shall be elected by electorates consisting of members of every Panchayet constituted within the District."

ಎಂದು ಮಾತ್ರ ಇಲ್ಲಿ ಹೇಳಿದೆ. ಸೆಲೆಕ್ಟ್ ಸಮಿತಿಯಲ್ಲಿಯೂ ಈ ಪ್ರಶ್ನೆ ಬಂದಿತ್ತು. ನಾವು ಹೇಳಿದುದರ ಮೇಲೆ ಅಲ್ಲಿ ಒಪ್ಪಿಕೊಂಡರು. ಆದರೂ ಇಲ್ಲಿ ಅದನ್ನು ಸ್ಪಷ್ಟಪಡಿಸದೆ ಬಿಟ್ಟಿದ್ದಾರೆ. ಇಲ್ಲಿರುವುದನ್ನು ಓದಿದರೆ ಒಟ್ಟು ಡಿಸ್ಟ್ರಿಕ್ಟೇ ಒಂದು ಚುನಾವಣಾಕ್ಷೇತ್ರವಾಗುವಂತಿದೆ. ತಾಲ್ಲೂಕಿನ ವಿಷಯವನ್ನು ಬಿಟ್ಟು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟಂತೆ ಇಲ್ಲಿ ಹೇಳಿದೆ.

ಅಧ್ಯಕ್ಷರು.—ಅದರಿಂದ ಏನು ವ್ಯತ್ಯಾಸವಾಗುತ್ತದೆ?

ಶ್ರೀ ಬಿ. ಹುಚ್ಚೇಗೌಡರು.—ಇದರ ಪ್ರಕಾರ ಒಟ್ಟು ಡಿಸ್ಟ್ರಿಕ್ಟ್ ಒಂದು ಚುನಾವಣಾ ಕ್ಷೇತ್ರವಾಗಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಒಂದೊಂದು ತಾಲ್ಲೂಕು ಒಂದು ಚುನಾವಣಾ ಕ್ಷೇತ್ರವಾಗಬೇಕು. ಈ ಪ್ರಶ್ನೆಯನ್ನು ಇಲ್ಲೇ ಮಸೂದೆಯಲ್ಲಿ ಸ್ಪಷ್ಟಪಡಿಸಬೇಕು.

ಆ ಮೇಲೆ, ಮಂಜೂರು ಮಾಡುವ ಅಧಿಕಾರದ ವಿಷಯದಲ್ಲಿ 15,000 ರೂಪಾಯಿಗಳವರೆಗೂ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಕೊಟ್ಟಿತ್ತು. ಅದನ್ನೂ ಇಲ್ಲಿ ತಿಳಿಸಿಲ್ಲ.

ಈ ಮಸೂದೆಯಲ್ಲಿ ವಯಸ್ಕರ ವಿದ್ಯಾಭ್ಯಾಸದ ಕೆಲಸವನ್ನು obligatory ಕರ್ತವ್ಯವೆಂದು ಇವರಿಗೆ ವಿಧಿಸಿದ್ದಾರೆ. ಈಗ ನಮಗೆಲ್ಲಾ ತಿಳಿದಿರುವಂತೆ ಈ ವಯಸ್ಕರ ವಿದ್ಯಾಭ್ಯಾಸದ ವಿಷಯ ಕೇಂದ್ರ ಸರ್ಕಾರದವರಿಗೆ ಸೇರಿದ್ದಾಗಿ ಅದರ ಜವಾಬ್ದಾರಿಯನ್ನು ಅವರೇ ವಹಿಸಿಕೊಳ್ಳುತ್ತಾರೆಂದು ಕಾಣುತ್ತದೆ.

ಅಧ್ಯಕ್ಷರು.—ಆದರೂ ಅದನ್ನು administer ಮಾಡುವವರು ಯಾರು?

ಶ್ರೀ ಬಿ. ಹುಚ್ಚೇಗೌಡರು.—ಆದರೂ ಇದನ್ನು obligatory ಕರ್ತವ್ಯವಾಗಿ ಸೇರಿಸುವುದು ಸರಿಯಲ್ಲ. ಏಕೆಂದರೆ ಒಂದು ವೇಳೆ ಅವರು (ಕೇಂದ್ರದವರು) ಹಣ ಕೊಡದೆ ಇದ್ದರೆ ನಾವೇ ಮಾಡಬೇಕಾಗಿ ಬರುತ್ತದೆ. ಭಾರತದಲ್ಲಿ ಎಲ್ಲರನ್ನೂ ಬಲಾತ್ಕಾರವಾಗಿ ಇನ್ನು ಹತ್ತು ವರ್ಷಗಳಲ್ಲಿ ಅಕ್ಷರಸ್ಥರನ್ನಾಗಿ ಮಾಡಬೇಕೆಂದು ಕೇಂದ್ರ ಸರ್ಕಾರದವರು ಜವಾಬ್ದಾರಿ ಹೊತ್ತಿರುವಾಗ ಅದನ್ನು ನಾವು ಒಪ್ಪಿಕೊಳ್ಳುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ.

ಒಟ್ಟಿನಲ್ಲಿ ಮಾನ್ಯ ಸಚಿವರು ಈ ಮಸೂದೆ ವಿಷಯದಲ್ಲಿ ಬಹಳ ಕೂಲಂಕಷವಾಗಿ ವಿಮರ್ಶೆ ಮಾಡಿ ಇದನ್ನು ತಯಾರಿಸಿದ್ದಾರೆಂದು ಹೇಳಬಹುದು. ಆದರೂ ಯಥಾ ಪ್ರಕಾರ ಕಾರ್ಯರಂಗದಲ್ಲಿ ಕೆಲವು ನ್ಯೂನತೆಗಳು ಕಂಡು ಬರುವುದು ಅನಿವಾರ್ಯ. ಅದರ ಮೇಲೆ ತಿದ್ದುಪಡಿಮಾಡಿಕೊಳ್ಳಬಹುದು. ಆದ್ದರಿಂದ ಸದ್ಯಕ್ಕೆ ನಾನು ಹೇಳಿದ ಸೂಚನೆಗಳ ಮೇಲೆ ಈ ಮಸೂದೆಯನ್ನು ಒಪ್ಪಿಸಿಕೊಳ್ಳಬಹುದೆಂದು ಹೇಳುತ್ತೇನೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಅಧ್ಯಕ್ಷರೇ, ಈ ಮಸೂದೆಯ ವಿಚಾರವಾಗಿ ಮಾತನಾಡುವುದಕ್ಕೆ ಮುಂಚೆ ಒಂದು ವಿಚಾರದಲ್ಲಿ ತಮ್ಮ ಅಪ್ಪಣೆ ಕೇಳಬೇಕೆಂದಿದ್ದೇನೆ. ನಿನ್ನೆ ನಾನು ಕಳುಹಿಸಿದ ತಿದ್ದುಪಡಿಯ ಜೊತೆಗೆ ಈ ದಿವಸ ಒಂದು ತಿದ್ದುಪಡಿಯನ್ನು ಕಳುಹಿಸಿಕೊಟ್ಟಿದ್ದೇನೆ. ಮಾನ್ಯ ಅಧ್ಯಕ್ಷರು ಈ ಬಗ್ಗೆ ಆಗಿರುವ delay ಯನ್ನು ಮನ್ನಿಸಿ 39ನೆಯ ಖಾಯಂ ಹುಕುಮನ್ನು suspend ಮಾಡಿ ಈ ತಿದ್ದುಪಡಿಯನ್ನೂ ಸಭೆಯ ಮುಂದಿಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಮಸೂದಾಕಾನೂನಿನ ವಿಚಾರ ನಾನು ಅಷ್ಟು ದೀರ್ಘವಾಗಿ ಟೀಕಿಸುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಎಷ್ಟೋ ತಿದ್ದುಪಡಿಗಳು ಈಗ ಸಭೆಯ ಮುಂದೆ ಬರಲಿವೆ. ಅವುಗಳನ್ನು ಚರ್ಚೆಗೆ ತೆಗೆದುಕೊಳ್ಳುವಾಗ ಏನೇನು ಹೇಳಬೇಕೋ ಅವುಗಳನ್ನು ಹೇಳುತ್ತೇನೆ. ಆದರೆ ಒಂದು ವಿಷಯವನ್ನು ನಾನೀಗ ಸಭೆಯ ಗಮನಕ್ಕೆ ತಂದು ಆ ಮೂಲಕ ಸರ್ಕಾರಕ್ಕೆ ಒಂದು ಸೂಚನೆ ಕೊಡಬೇಕೆಂದಿದ್ದೇನೆ: ಏಕೆಂದರೆ ಈ ಮಸೂದೆ ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಗ್ರಾಮ ಪಂಚಾಯ್ತಿಗಳಿಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೂ ಅನ್ವಯಿಸುವುದಾಗಿದೆ. ಅದೇನೆಂದರೆ, ಹಿಂದಿನ ಡಿಸ್ಟ್ರಿಕ್ಟ್ ಬೋರ್ಡ್‌ಗಳು ಮತ್ತು ಗ್ರಾಮ ಪಂಚಾಯ್ತಿಗಳಿಗೆ ಸಂಬಂಧಪಟ್ಟ ಆಕ್ಟ್ ಎರಡೂ ಸೇರಿದರೆ ಒಟ್ಟು ಎಷ್ಟಾಗುತ್ತದೆಯೋ ಅದರಲ್ಲಿ ಅರ್ಧ ಮಾತ್ರದಷ್ಟು ಈಗಿನ ಮಸೂದೆಯಿದೆ. ಇದು ಬಹಳ ಸಂಕ್ಷೇಪವಾಗಿದೆಯೆನ್ನಬೇಕು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು; short and sweet !!

ಶ್ರೀ ಎಲ್. ಸಿದ್ದಪ್ಪನವರು.—Brevity is no doubt a virtue. But if it is too brief then it may lead to some inconvenience. For instance, there was one point which was raised by the Hon'ble Member who spoke previous to me with regard to constituency. Clause 51 makes provision like this :

> "The member shall be elected by electorates consisting of members of every Panchayet constituted within the District."

ಈ ತೆರನಾಗಿ ಹೇಳಿರುವುದರಿಂದ, ಡಿಸ್ಟ್ರಿಕ್ಟಿನಲ್ಲಿರತಕ್ಕ ಪಂಚಾಯಿತ್ತಿ ಮೆಂಬರುಗಳು ಆ ಡಿಸ್ಟ್ರಿಕ್ಟಿಗೆ ಒಟ್ಟು ಎಷ್ಟು ಸ್ಥಾನಗಳು ನಿಗದಿಯಾಗಿರುತ್ತದೆಯೋ ಅಷ್ಟಕ್ಕೂ ಚುನಾಯಿಸುವುದೇ ಅಥವಾ ಒಂದೊಂದು ಡಿಸ್ಟ್ರಿಕ್ಟ್ ಬೋರ್ಡಿಗೂ ಇದುವರೆಗೆ ಮಾಡುತ್ತಿರುವಂತೆ ಪ್ರತಿಯೊಂದು ತಾಲ್ಲೂಕನ್ನೂ ಒಂದು ಚುನಾವಣಾ ಕ್ಷೇತ್ರವಾಗಿ ಮಾಡಿ, ಆ ಕ್ಷೇತ್ರಕ್ಕೆ ಇಷ್ಟು ಸ್ಥಾನಗಳೆಂದು ಗೊತ್ತು ಮಾಡಿ ಚುನಾಯಿಸುವುದೇ ಎಂಬುದು ಸರಿಯಾಗಿ ಅರ್ಥವಾಗುವುದಿಲ್ಲ.

The Hon'ble Sri K. T. BHASHYAM (Minister for Law and Labour).—The word used there is "electorates" in the plural and not "electorate". The whole district cannot be clubbed within one electorate; there are several electorates in one district.

Sri B. HUTCHE GOWDA.—Is it a single-member constituency?

The Hon'ble Sri K. T. BHASHYAM.—It is a matter for rules.

ಶ್ರೀ ಎಲ್. ಸಿದ್ದಪ್ಪನವರು.—ಅಂತೂ ಇಂಥಾ ಮುಖ್ಯ ವಿಷಯಗಳನ್ನೆಲ್ಲಾ ಈ ಸಭೆಯ ಗಮನಕ್ಕೆ ತರದೆ ಬರೀ ನಿಬಂಧನೆಗಳ ಮೂಲಕ ಜಾರಿಗೆ ತರುವುದು ಒಳ್ಳೆಯದಲ್ಲ. ಒಂದುವೇಳೆ ಅವಶ್ಯಕವಿದ್ದರೆ ಈ ಮಸೂದೆಯಲ್ಲೇ ಅವಕಾಶಮಾಡಿಕೊಳ್ಳಬಹುದಿತ್ತು. ಈಗ ಈ ಮಸೂದೆಯನ್ನು ನೋಡುವುದಾದರೆ, ಗ್ರಾಮ ಪಂಚಾಯ್ತಿಗಳಿಗೆ ಸಂಬಂಧಪಟ್ಟಂತೆ ಇಲ್ಲಿರುವ 48 ಕ್ಲಾಜುಗಳಲ್ಲಿ ಎಷ್ಟೋ ಕ್ಲಾಜುಗಳಲ್ಲಿ "Subject to such rules as may be made in this behalf" ಎನ್ನುವುದು ಸೇರಿಸಿರುವುದು ಕಣ್ಣಿಗೆ ಬೀಳುತ್ತದೆ. ಉದಾಹರಣೆಗೆ (3) ನೆಯ ಕ್ಲಾಜು ನೋಡಿ. ಅಲ್ಲದೆ.

> "The Government shall, subject to the provisions of this section and to such rules as may be made........."

ಎಂದು.

Almost every clause is subject to rules. *e.g.* see Clause 18 : ಅಲ್ಲಿಯವರೆಗೆ ಹಿಂದೆ ಎಲ್ಲಿಯೂ

> "Subject to such rules as may be made by the Government."

ಎಂದಿಲ್ಲ. ಆದರೆ ಅಲ್ಲಿಂದ ಮುಂದೆ ಪ್ರತಿಯೊಂದರಲ್ಲೂ ಇದೆ.

See Clause 19 :-

> "Subject to the provisions of this section and to such rules as may be made by the Government........"

See Clause 20 :

> "Subject to such rules as may be made by the Government..... ..."

See Clause 21 :

> "Subject to such rules as may be made by the Government........"

See Clause 22 :

> "Subject to such rules as may be made by the Government........"

ಈ ರೀತಿಯಾಗಿ ನೋಡಿಕೊಂಡು ಹೋದರೆ ಒಟ್ಟು ಇಲ್ಲಿರುವ 48 ಕ್ಲಾಜುಗಳಲ್ಲಿ ಸುಮಾರು ⅓ ಭಾಗದಷ್ಟರಲ್ಲಿ ಹೀಗೆ,

> "Subject to such rules as may be made by Government."

ಎಂದು ಹೇಳಿದೆ. ಒಳ್ಳೆಯದು! ಏನೋ ಒಂದು ಕಾರಣದಿಂದ ಇಟ್ಟುಕೊಂಡಿದ್ದರೂ ಕೂಡ ಇಂಥ ಬಹಳ ಮುಖ್ಯವಾದ ವಿಷಯಗಳನ್ನೆಲ್ಲಾ ನಿಬಂಧನೆಗಳ ಮೂಲಕ ಜಾರಿಗೆ ತರಲು ಅಧಿಕಾರವಿಟ್ಟುಕೊಂಡು, ಆ ನಿಬಂಧನೆಗಳನ್ನು ಕೂಡ ಈ ಸಭೆಯ ಮುಂದೆ ತರಬೇಕೆನ್ನುವ ಕಡ್ಡಾಯವಿರದೆ ಹೋದರೆ ಹೇಗೆ? ಆದ್ದರಿಂದ ಇಂಥ ಮುಖ್ಯ ವಿಷಯಗಳಲ್ಲಿ ಮಾಡುವ ನಿಬಂಧನೆಗಳನ್ನು special ಆಗಿ ಈ ಸಭೆಯ ಮುಂದಿಟ್ಟು, ಸಭೆಯ ಅವಗಾಹನೆಗೆ ತಂದು, ಅವರು ಪರಿಶೀಲನೆ ಮಾಡಿ, ಅವರೇನಾದರೂ ಬದಲಾವಣೆ ಮಾಡಬೇಕೆಂದು ಸೂಚನೆ ಕೊಡುವುದಾದರೆ ಅದಕ್ಕೂ ಒಂದು ಅವಕಾಶ ಕೊಡುವುದು ಸೂಕ್ತವೆಂದು ನಾನು ಹೇಳುತ್ತೇನೆ. ಇಂಥ ಪದ್ಧತಿ ಬಾಕಿ ಪ್ರಾಂತಗಳ ಶಾಸನ ಸಭೆಗಳಲ್ಲೂ ಕೂಡ ಇದೆ. ಉದಾಹರಣೆಗೆ, ಮದ್ರಾಸ್ ಪ್ರಾಂತ್ಯದಲ್ಲಿ ಜಮೀನ್ದಾರಿ ರದ್ದಿಯಾತಿ ಕಾನೂನು ಬಂದು, ಸಭೆಯಲ್ಲಿ ಪಾಸಾದ ಮೇಲೆಯೂ ಕೂಡ, ಆ ಮಸೂದೆಯ ಕೆಳಗೆ ಅವರು ಮಾಡಿದ ನಿಬಂಧನೆಗಳನ್ನು ಕೂಡ ಅವರು ಸಭೆಯ ಮುಂದಿಟ್ಟು ಅವರ ಅಭಿಪ್ರಾಯವನ್ನೂ ತೆಗೆದುಕೊಂಡು ಅವರು ಜಾರಿಗೆ ಕೊಟ್ಟರೆಂದು ಕೇಳಿದ್ದೇವೆ. ಈ ದಿವಸದ 'ಹಿಂದೂ' ಪತ್ರಿಕೆಯಲ್ಲಿ ಸಹ ಪಾರ್ಲಿಮೆಂಟಿನ ಮುಂದೆ Representation of People (No. 2) Bill ನ ದ್ವಿತೀಯ ಪಠಣವು ಪೂರೈಸಿದುದಾಗಿ ವರದಿಯಾಗಿದೆ. ಅನಂತರ ಆ ಬಿಲ್ಲಿಗೆ ಸಂಬಂಧಪಟ್ಟ ನಿಬಂಧನೆಗಳನ್ನು ಲಾ ಸಚಿವರು ಸಭೆಯ ಮುಂದಿಟ್ಟರೆಂಬುದಾಗಿ ವರದಿಯಾಗಿದೆ. ಆದರೆ ಆ ಬಿಲ್ಲಿನ ಬಗ್ಗೆ ತಿದ್ದುಪಡಿಗಳನ್ನು ಮಾಡಲಿಕ್ಕೆ ಅವಕಾಶವಿಲ್ಲದಿದ್ದಾಗ್ಯೂ ಪಾರ್ಲಿಮೆಂಟ್ ಸದಸ್ಯರ ಅವಗಾಹನೆಯ ಬಗ್ಗೆ ಇಡಲಾಗಿದೆಯೆಂದು ಅವರು ತಿಳಿಸಿದ್ದಾರೆ. ಅದೇ ಪ್ರಕಾರ ತಾವೂ ಕೂಡ ಈ ಬಿಲ್ಲಿಗೆ ಸಂಬಂಧಪಟ್ಟ ನಿಯಮಗಳನ್ನು ಸಭೆಯ ಮುಂದೆ ತರಬೇಕೆಂದು ಸೂಚಿಸುತ್ತೇನೆ. ಹಾಗೆ ತಂದನಂತರ ಅವಶ್ಯಕವೆಂದು ಕಂಡುಬಂದರೆ ಮುಂದಕ್ಕೆ ಆ ಬಗ್ಗೆ ತಕ್ಕ ಮಾರ್ಪಾಡುಗಳನ್ನು ಮಾಡಿಕೊಳ್ಳಲು ತಕ್ಕ ಅವಕಾಶಗಳನ್ನು ಕಲ್ಪಿಸಿಕೊಳ್ಳಬಹುದು.

ಒಟ್ಟಿನಲ್ಲಿ ಈ ಬಿಲ್ಲಿನ ತತ್ವವನ್ನು ನಾನು ಒಪ್ಪುತ್ತೇನೆ ಮತ್ತು ಇದನ್ನು ಸ್ವಾಗತಿಸುತ್ತೇನೆ.

Mr. SPEAKER.—The question is :

"That the Mysore Village Panchayets and District Boards Bill, 1951, as reported by the Select Committee, be taken into consideration."

The motion was adopted.

Mr. SPEAKER.—Now the clauses of the Bill will be submitted to the House. Clause 2. The Hon'ble Sri R. Chennigaramiah has got an amendment.

Sri L. SIDDAPPA.—If you are proceeding in order, *i.e.*, clause by clause, I have an amendment to clause 1.

Mr. SPEAKER.— Clause 1 would be taken up at the end.

The Hon'ble Sri R. CHENNIGARAMIAH.—The Hon'ble Member Sri L. Siddappa has given notice just now of an amendment. Has it been admitted ?

Mr. SPEAKER.—Yes.

The Hon'ble Sri R. CHENNIGARAMIAH.—Sir, I beg to move :

"In clause 2 (13) for the figure '92' the figure '97' shall be substituted."

ಹಿಂದೆ ಇದ್ದ ಕ್ಲಾಜಿನಲ್ಲಿ Establishment of market ಎಂಬ ಕಡೆ 92 ಎಂಬುದಾಗಿದ್ದ ನಂಬರನ್ನು ಈಗ 97 ಎಂದು ಬದಲಾಯಿಸಿದೆ. ಅಷ್ಟೆ. ಇದು mere verbal change ಅಷ್ಟೆ.

Mr. SPEAKER.—Amendment moved :

"In clause 2 (13) for the figure '92' the figure '97' shall be substituted.

The motion was adopted.

Mr. SPEAKER.—The question is :

"That Clause 2, as amended, stand part of the Bill."

The motion was adopted.

Clause 2, as amended, was added to the Bill.

Mr. SPEAKER.—Clause 3.

Sri L. SIDDAPPA (Shimoga District—General).—My amendment reads like this :

"In the proviso to sub-clause (2) the words 'in areas recognised by Government as Malnad' shall be inserted between the words "cases" and "establish."

ಈ ತಿದ್ದುಪಡಿಯನ್ನು ಸೂಚಿಸಿರುವುದರಲ್ಲಿ ನನ್ನ ಅಭಿಪ್ರಾಯವಿರುವುದು ಇಷ್ಟೆ, ಸ್ವಾಮಿ : ಈ ಮೊದಲೇ ಈ ಮಸೂದಾ ಕಾನೂನನ್ನು ತಯಾರಿಸಿದಾಗ 2,000ದಿಂದ ಹಿಡಿದು 5,000 ಪ್ರಜೆಗಳಿರತಕ್ಕ ಗ್ರಾಮಕ್ಕೆ ಅಥವಾ ಗ್ರಾಮಗಳ ಗುಂಪಿಗೆ ಒಂದೊಂದು ಪಂಚಾಯಿತಿಯನ್ನು ಮಾಡಬೇಕೆಂದು ಹೇಳಲಾಗಿತ್ತು. ಆದರೆ ಈ ಮಸೂದೆಯು ಸೆಲೆಕ್ಟ್ ಸಮಿತಿಯವರ ಮುಂದೆ ಹೋದಾಗ ಅವರು ಹೀಗೆ 2,000—5,000ವರೆಗೆ ಇರಬೇಕೆಂಬುದು ಬಹಳ ಹೆಚ್ಚಿನ ಪರಿಮಿತಿಯಾಗುತ್ತದೆ. ಮಲೆನಾಡಿನಂಥ ಪ್ರದೇಶದಲ್ಲಿ ಜನಭರಿತವಾದ ಗ್ರಾಮಗಳು ಅಷ್ಟಾಗಿರುವುದಿಲ್ಲವಾದ್ದರಿಂದ ಈ ಪರಿಮಿತಿಯನ್ನು ಒಂದು ವಿಶೇಷ ರಿಯಾಯಿತಿ ಮೇಲೆ ಮಲೆನಾಡು ಸರಹದ್ದಿನಲ್ಲಿ ಒಂದು ಸಾವಿರ ಪ್ರಜಾಸಂಖ್ಯೆಯಿರತಕ್ಕ ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಒಂದೊಂದು ಪಂಚಾಯಿತಿ ಸ್ಥಾಪಿಸಬಹುದೆಂದು ಒಂದು ತಿದ್ದುಪಡಿ ಮಾಡಿದ್ದಾರೆ. ಇದು ಬಹಳ ಸಾಧುವಾದ ತಿದ್ದುಪಡಿ. ಇದನ್ನು ನಾನು ಒಪ್ಪುತ್ತೇನೆ. ಆದರೆ ಇಂತಿಂಥಹ ತಾಲ್ಲೂಕುಗಳೇ ಮಲೆನಾಡು ಎಂಬುದಾಗಿ ಈಗಾಗಲೇ ಸರ್ಕಾರದವರು ವಿಧಾಯಕಮಾಡಿದ್ದಾರೆ. ಹಾಗೆ ನಿರ್ಧರಿಸಲಾಗಿರುವ ತಾಲ್ಲೂಕುಗಳಲ್ಲಿ ಮಾತ್ರ ಇದನ್ನು ಜಾರಿಗೆ ತರಬೇಕೆಂಬುದೇ ನನ್ನ ತಿದ್ದುಪಡಿಯ ಮುಖ್ಯಾಂಶ.

ಹಿಂದೆ ಒಂದಾವರ್ತಿ ಸರ್ಕಾರದವರು ಈ ಗ್ರಾಮ ಪಂಚಾಯಿತಿಗಳಿಗೆ ಇನ್ನೂ ಹೆಚ್ಚಿನ ಗೌರವ ಮತ್ತು ಅಧಿಕಾರಗಳನ್ನು ಕೊಡಬೇಕೆಂಬುದಾಗಿ ಒಂದು ಸರ್ಕಾರಿ ನೋಟಿಫಿಕೇಷನ್ನನ್ನು ಹೊರಡಿಸಿ, ಆಯಾಯ ಪಂಚಾಯಿತಿಗಳಿಗೇ ಕೆಲಕೆಲವು ಸಂದರ್ಭಗಳಲ್ಲಿ ಅದರ ಛೇರ್ಮನನ್ನು ಚುನಾವಣೆ ಮೂಲಕ ಅಥವಾ ನಾಮಕರಣ ಪದ್ಧತಿ ಪ್ರಕಾರ ಮಾಡಿಕೊಳ್ಳಬಹುದೆಂದು ಒಂದು ಆರ್ಡರನ್ನು ಹೊರಡಿಸಲಾಗಿತ್ತು. ಆದರೆ ಹಾಗೆ ಒಂದು ಆರ್ಡರನ್ನು ಹೊರಡಿಸಬೇಕಾಗಿದ್ದ ಪ್ರಮೇಯವೇನಿತ್ತೆಂದರೆ— ಅಲ್ಲಲ್ಲೇ ಕೆಲಕೆಲವು ಗ್ರಾಮಗಳಲ್ಲಿ ಅಪರೂಪ ಸಂದರ್ಭಗಳಲ್ಲಿ ಪಾರ್ಟಿ ಪಂಗಡಗಳಿದ್ದು, ಅಲ್ಲಿ ಚುನಾವಣೆಗೆ ಸುಗಮವಾದ ಅವಕಾಶಗಳಿಲ್ಲದೆ ಇದ್ದಾಗ ಜಿಲ್ಲಾಧಿಕಾರಿಗಳು ಅಂಥಾ ಪಂಚಾಯಿತಿಗೆ ಒಬ್ಬರನ್ನು ಛೇರ್ಮನ್ನರನ್ನಾಗಿ ನಾಮಕರಣ ಮಾಡಬಹುದೆಂದು 1946ನೆಯ ಇಸವಿಯಲ್ಲಿ ಸರ್ಕಾರದವರು ಒಂದು ನೋಟಿಫಿಕೇಷನ್ನನ್ನು ಹೊರಡಿಸಿದ್ದರು. ಆದರೆ ಕಾರ್ಯತಃ ಅದನ್ನು ಆಚರಣೆಗೆ ತರುವಾಗ, ಹಾಗೆ ಎಲ್ಲೆಲ್ಲಿ ನಾಮಕರಣಮಾಡಿ ಮಾಡಬೇಕಾಗಿತ್ತೋ ಅದನ್ನು ಗಮನಿಸದೆ ಅವಶ್ಯಕವಿದ್ದ ಮತ್ತು ಅಂಥಾ ಅವಶ್ಯಕವಿಲ್ಲದ ಎಲ್ಲಾ ಕಡೆಗಳಲ್ಲಿಯೂ ಈ ಹುಕ್ಕುಂ ಜಾರಿಗೆ ಬರಲು ಪ್ರಾರಂಭವಾಯಿತು. ಆದರೆ ಈಗ ಹಾಲಿ ಹೇಳಿರತಕ್ಕ ವಿಶೇಷ ಪರಿಮಿತಿಯ ಅವಕಾಶ ಸಹ ಆ ರೀತಿ ಆಗದಿರಲಿ ಎಂಬ ಉದ್ದೇಶದಿಂದಲೇ ಇದನ್ನು ತಂದಿದ್ದೇನೆ. ಹೀಗೆ ಒಂದು ಸಾವಿರ ಪ್ರಜಾಸಂಖ್ಯೆಯಿರತಕ್ಕ ಅವಕಾಶ ಕಡ್ಡಾಯವಾಗಿ ಮಲೆನಾಡಿಗೆ ಮಾತ್ರವೇ ಅನ್ವಯಿಸುವಂತೆ ಮಾಡಬೇಕೆಂಬ ಉದ್ದೇಶದಿಂದಲೇ ಈ ತಿದ್ದುಪಡಿಯನ್ನು ತಂದಿದ್ದೇನೆ.

Mr. SPEAKER.—Amendment moved:

"That in the proviso to sub-clause (2) the words "in areas recognised by Government as Malnad" shall be inserted between the words "cases" and "establish."

***Sri A. BHEEMAPPA NAIK** (Shimoga District—General).—I wish to second the amendment moved by Sri L. Siddappa. The number 'thousand' fixed now may be retained with this assurance that it is only in the case of

(SRI A. BHEEMAPPA NAIK):

Malnad areas. Only 1,000 will be fixed as the strength for the Village Panchayet. If Government give that assurance, that would serve the purpose. ಹಾಗೆ ಮಾಡಿದರೆ ಸರಿಹೋಗುತ್ತದೆ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ, ನಾನು ಈ ತಿದ್ದುಪಡಿಯನ್ನು ವಿರೋಧಿಸಬೇಕಾಗಿದೆ. ಸೆಲೆಕ್ಟ್ ಸಮಿತಿಯವರು ಈಗ ಮಾಡಿರುವ ತಿದ್ದುಪಡಿಯಪ್ರಕಾರ, ಒಂದು ಸಾವಿರ ಪ್ರಜಾಸಂಖ್ಯೆಯಿರತಕ್ಕ ಗ್ರಾಮ ಅಥವಾ ಗ್ರಾಮಗಳಿಗೆ ಎನ್ನುವುದು, ಕೇವಲ ಮಲೆನಾಡು ಪ್ರದೇಶದ ಒಂದೇ ಒಂದು ದೃಷ್ಟಿಯಿಂದ ಮಾಡಿದ್ದಾರೆಂದು ಹೇಳತಕ್ಕ ವಾದವನ್ನು ನಾನು ಒಪ್ಪುವುದಿಲ್ಲ. ಇದು ಹೆಚ್ಚಾಗಿ ಮಲೆನಾಡಿಗೇ ಅನ್ವಯಿಸುವುದಾಗಿದ್ದರೂ, ಮೈದಾನ ಪ್ರದೇಶದಲ್ಲಿಯೂ ಒಂದು ಊರಿನಿಂದ ಮತ್ತೊಂದು ಊರಿಗೆ ಬಹಳ ದೂರವಿದ್ದು ಅಲ್ಲಿಯೂ ಕೂಡ 1000—2000 ಪ್ರಜೆಗಳಿರತಕ್ಕಂಥ ಹಳ್ಳಿಗಳು ಇವೆ. ಆದರೆ ಅವು ಬಹಳ ವಿರಳ. ಆದ್ದರಿಂದ ಹೀಗೆ ಒಂದು ಊರಿನಿಂದ ಇನ್ನೊಂದು ಊರಿಗೆ ಇರತಕ್ಕ ದೂರವನ್ನು ಲೆಕ್ಕಹಾಕಿ ಅದರ ಮೇಲೆ ಇದನ್ನು ಒಪ್ಪಿಕೊಳ್ಳಬೇಕೆಂದರೆ ಆಗುವುದಿಲ್ಲ.

ಒಂದುವೇಳೆ ಈಗ ಸೆಲೆಕ್ಟ್ ಸಮಿತಿಯವರು ತಂದಿರುವ ತಿದ್ದುಪಡಿಯು ಹೆಚ್ಚಾಗಿ ಮಲೆನಾಡಿಗೇ ಅನ್ವಯಿಸುವುದಾದರೂ ಕೂಡ ಮೈದಾನ ಪ್ರದೇಶದಲ್ಲಿ ಅಂಥ ಸಂದರ್ಭ ಬಂದರೆ ಅಲ್ಲೂ ಸರ್ಕಾರದವರು ಅದೇ ವಿಧವಾದ ಒಂದು ರಿಯಾಯಿತಿಯನ್ನು ತೋರಿಸುವುದಕ್ಕೆ ಈ ಕಾನೂನಿನಲ್ಲಿ ಅವಕಾಶ ಮಾಡಬೇಕಾದ್ದು ಅಗತ್ಯ. ಅಂಥ ಅವಕಾಶವನ್ನು ಈಗ ಸೆಲೆಕ್ಟ್ ಸಮಿತಿಯವರು ಮಾಡಿದ್ದಾರೆ.

ಅಧ್ಯಕ್ಷರು.—ಸಮಿತಿಯವರು ಆ ರೀತಿ ಮಾಡಿಲ್ಲವೆಂದು ಒಬ್ಬ ಮಾನ್ಯ ಸದಸ್ಯರು ಈಗ ತಾನೇ ಹೇಳುತ್ತಿದ್ದರು.

ಶ್ರೀ ಟಿ. ಮಾದಯ್ಯಗೌಡರು.—ಮಲೆನಾಡಿನ ದೃಷ್ಟಿಯಿಂದ ಅವಕಾಶವನ್ನು ಮಾಡಿದ್ದರೂ ಕೂಡ ಜನರಲ್ಲಾಗಿ ಈ ಮಸೂದೆಯಲ್ಲಿ ಸೇರಿಸಿರುವುದು ಸಾಧುವಾಗಿದೆಯೆಂಬುದು ನನ್ನ ಅಭಿಪ್ರಾಯ. ಏಕೆಂದರೆ ಮೈದಾನ ಪ್ರದೇಶದಲ್ಲೂ ಕೂಡ ಮಲೆನಾಡಿಗೆ ಮಾಡಿರುವ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಸಂದರ್ಭಬಿದ್ದಾಗ ಹಾಗೆ ಅನ್ವಯಿಸುವುದಕ್ಕೆ ಅವಕಾಶ ಕೊಟ್ಟರೆ ತಪ್ಪಾಗಲಾರದು. ಹೆಚ್ಚಾಗಿ ಇದನ್ನು ಮಲೆನಾಡಿಗೆ ಅನ್ವಯಿಸುವುದಾದರೂ ಕೂಡ ಅಂಥ ಸಂದರ್ಭವೊದಗಿದಾಗ ಮೈದಾನಕ್ಕೂ ಅನ್ವಯಿಸುವಂತೆ ಮಾಡಲು ಅವಕಾಶ ಮಾಡಿರುವುದು ಬಹಳ ನ್ಯಾಯವಾಗಿದೆ. "In exceptional cases" ಎಂದು ಹೇಳಿದ್ದಾರೆ. ಆದ್ದರಿಂದ ಅಂಥ ಸಂದರ್ಭ ಮೈದಾನದಲ್ಲಿದ್ದರೆ ಏಕೆ ಇದನ್ನು ಅನ್ವಯಿಸಬಾರದು? ಈಗ ಮಲೆನಾಡಿಗೆ ಮಾತ್ರ ಅನ್ವಯಿಸುವ ಹಾಗೆ ಮಾಡಿ ಎಂದು ಶ್ರೀ ಸಿದ್ದಪ್ಪನವರು ಹೇಳಿದರು. ಎಲ್ಲೂ ಇದಕ್ಕೆ ವಿವರಣೆ ಕೊಟ್ಟಿಲ್ಲ. You have not defined the word 'malnad' anywhere in this Bill. ಸರ್ಕಾರದಲ್ಲಿ ಏನಾದರೂ ದಾಖಲೆ ಇದೆಯೋ ಏನೋ ಗೊತ್ತಿಲ್ಲ. ಆದ್ದರಿಂದ ಯಾವುದು ಮೈದಾನ, ಯಾವುದು ಮಲೆನಾಡು ಎಂದು ನಿರ್ದಿಷ್ಟವಾಗಿಲ್ಲದಿರುವಾಗ ಈಗ ಮಾಡಿರುವ ಅವಕಾಶವು ಸಾಧುವಾಗಿದೆಯೆಂದು ನನಗೆ ತೋರುತ್ತದೆ. ಯಾವ ಉದ್ದೇಶದಿಂದ ಇದನ್ನು ಸೆಲೆಕ್ಟ್ ಸಮಿತಿಯವರು ಮಾಡಿದ್ದಾರೋ ಅದಕ್ಕೆ ಭಂಗ ಬರುವುದಿಲ್ಲ. ಮಲೆನಾಡಿನವರಿಗೆ ಇದರಿಂದ ಯಾವ ವಿಧವಾದ ತೊಂದರೆಯೂ ಆಗುವುದಿಲ್ಲ. ಹೀಗಿರುವಾಗ ಈ ತಿದ್ದುಪಡಿಯನ್ನು ಶ್ರೀ ಸಿದ್ದಪ್ಪನವರು ಏಕೆ ಒತ್ತಾಯಪಡಿಸಬೇಕೆಂಬುದು ಅರ್ಥವಾಗುವುದಿಲ್ಲ. ಈ ಕಾರಣದಿಂದ ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ತಿದ್ದುಪಡಿಯನ್ನು ನಾನು ವಿರೋಧಿಸಬೇಕಾಗಿದೆ. ಮೂರನೆಯ ಕ್ಲಾಜಿಗೆ ಪ್ರಾವಿಸೊ ಬರುವುದಕ್ಕೆ ಕಾರಣವೇನೆಂದರೆ ಸೆಲೆಕ್ಟ್ ಸಮಿತಿಯಲ್ಲಿ ಸದಸ್ಯರು ಬಹಳವಾಗಿ ಚರ್ಚೆಮಾಡಿದರು. ಎರಡು ಸಾವಿರಕ್ಕೆ ಕಡಮೆಯಿಲ್ಲದೆ ಐದು ಸಾವಿರದೊಳಗೆ ಜನಸಂಖ್ಯೆಯಿರುವುದಕ್ಕೆ ಪಂಚಾಯಿತಿ ಮಾಡಲು ಅವಕಾಶ ಕೊಡಬೇಕೆಂದು 3ನೆಯ ಕ್ಲಾಜಿನಲ್ಲಿದೆ. ಸಮಿತಿಯಲ್ಲಿ ಮಲೆನಾಡು ಮತ್ತು ಮೈದಾನಗಳ ಅನುಭವವಿರುವ ಸದಸ್ಯರುಗಳಿದ್ದರು. ಅವರು ಕೆಲವು ಅಭಿಪ್ರಾಯಗಳನ್ನು ಸೂಚಿಸಿದರು. ಕೆಲವು ಗ್ರಾಮಗಳಲ್ಲಿ ಮಲೆನಾಡಿನ ಕಡೆ ರೋಗರುಜಿನಾದಿಗಳಿಂದ ಜನಸಂಖ್ಯೆ ಬಹಳ ಕಡಮೆಯಾಗಿದೆ. ಹತ್ತಾರು ಗ್ರಾಮಗಳನ್ನು ಸೇರಿಸಿದರೂ ಕೂಡ ಎರಡು ಸಾವಿರ ಜನಸಂಖ್ಯೆಯಾಗುವುದಿಲ್ಲ. ಆಗ ಕ್ಷೇತ್ರ ವಿಸ್ತಾರವಾಗಿ ಐದು ಮೈಲಿಗಳವರೆಗೂ ವಿಸ್ತರಿಸಿ ಗ್ರೂಪ್ ಪಂಚಾಯಿತಿಯಲ್ಲಿ ಆಡಳಿತ ನಡೆಸುವುದು ಬಹಳ ಕಷ್ಟವಾಗುತ್ತದೆ ಎಂದು ಕೂಲಂಕಷವಾಗಿ ಚರ್ಚೆಮಾಡಿ ಮಲೆನಾಡು ಮತ್ತು ಮೈದಾನದಲ್ಲಿ ಈ ತರಹ ಜನಸಂಖ್ಯೆ ಕಡಮೆಯಿರುವ ಸ್ಥಳಗಳಿಗೆ ಅನ್ವಯಿಸುವಂತೆ ಅವಕಾಶ ಮಾಡಿದರು. ಹಾಗೆ ಮಾಡಿ "Provided that the Government may in exceptional cases establish a panchayet ... ." ಎಂದು ಹೇಳಿರುವಾಗ ಶ್ರೀ ಸಿದ್ದಪ್ಪನವರು ಹೇಳುವುದು ಸರಿಯಾಗಿ ಕಾಣುವುದಿಲ್ಲ. ಮೈದಾನ ಪ್ರಾಂತಗಳಲ್ಲೂ ಕೂಡ ಏನಾದರೂ ಪ್ರಜಾಸಂಖ್ಯೆ ಕಡಮೆಯಿದ್ದರೆ ಅಲ್ಲಿಗೂ ಅನ್ವಯಿಸುವುದಕ್ಕೆ ಅನುಕೂಲವಾಗುವಂತೆ ಪ್ರಾವಿಸೋದಲ್ಲಿ ಅವಕಾಶ ಮಾಡಿದೆ. "In exceptional cases" ಎಂದು ಹೇಳುವುದನ್ನು ಮೈದಾನಕ್ಕೂ ಮತ್ತು ಮಲೆನಾಡಿಗೂ ಉಪಯೋಗಿಸಿಕೊಳ್ಳಬಹುದು. ಶ್ರೀ ಸಿದ್ದಪ್ಪನವರು ಈಗ ಹೇಳಿರುವ ತಿದ್ದುಪಡಿಯು ಅರ್ಥವಾಗುವುದಿಲ್ಲ ಮತ್ತು ಅದು ತಲೆಶಿರೋಭಾರವಾಗುತ್ತದೆ. "Provided that the Government may in exceptional cases in areas recognised by the Government as malnad establish a panchayet for a village or group of villages" ಎಂದು ಶ್ರೀ ಸಿದ್ದಪ್ಪನವರ ತಿದ್ದುಪಡಿ ಸೇರಿಸಿ ಓದಿದರೆ ಅದರ ಅರ್ಥವೇನು?

Sri L. SIDDAPPA.—There may be places even in malnad where this limit of 2,500 can be made applicable. There may be places in that very area itself. 1946ರಲ್ಲಿ ಸರ್ಕಾರದವರು ಇಂಥ ಒಂದು ನೋಟಿಫಿಕೇಷನ್ ಹೊರಡಿಸಿದಾಗ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಅವಕಾಶ ತಪ್ಪಿಹೋಯಿತು. ಹಾಗಿರಬಾರದು ಎಂದು ನಾನು ಹೇಳುವುದು.

ಶ್ರೀ ಎಸ್. ರಂಗರಾಮಯ್ಯನವರು.—Exceptional cases ಎಂದು ಹೇಳಿರುವುದರಿಂದ ಮಲೆನಾಡು ಮತ್ತು ಮೈದಾನಗಳೆರಡಕ್ಕೂ ಅನ್ವಯಿಸುವುದಕ್ಕೆ ದಾರಿಯಾಗುತ್ತದೆ. ಅದೂ ಅಲ್ಲದೆ ಒಂದೇ ಜಿಲ್ಲೆ

ಯಲ್ಲಿ ಮಲೆನಾಡು, ಮೈದಾನ ಎರಡೂ ಇರಬಹುದು. ಅದನ್ನು ಹೇಗೆ ನಿರ್ಧಾರ ಮಾಡುವುದು?

ಶ್ರೀ ಎಲ್. ಸಿದ್ದಪ್ಪನವರು.—ಮಲೆನಾಡು ಮತ್ತು ಮೈದಾನಕ್ಕೆ ಯಾವ ತಾಲ್ಲೂಕುಗಳು ಸೇರಿವೆ ಎಂಬುದನ್ನು ಸರ್ಕಾರದವರು ನಿರ್ಧಾರ ಮಾಡಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಆದರೂ ಕೂಡ exceptional ಎಂದು ಹೇಳಿ ಎರಡು ಅರ್ಥ ಮಾಡುವುದಕ್ಕೆ ಅವಕಾಶಮಾಡಿರುವಾಗ ಈ ತಿದ್ದುಪಡಿ ಮಾಡಿದರೆ ದ್ವಂದ್ವಾರ್ಥಕ್ಕೆ ಕಾರಣವಾಗುತ್ತದೆ. ಆದ್ದರಿಂದ "in areas recognised by Government as Malnad" ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಈ ರೀತಿ ತಿದ್ದುಪಡಿ ತಂದು ಅರ್ಥವನ್ನು ಸ್ಪಷ್ಟಪಡಿಸಬೇಕೆಂಬ ಉದ್ದೇಶವಿರುವುದು ಅನಾವಶ್ಯಕ. ಈ ಕಾರಣದಿಂದ ಈಗ ಪ್ರಾವಿಸೋದಲ್ಲಿರುವುದು ಬಹಳ ಚೆನ್ನಾಗಿದೆ ಮತ್ತು ಅರ್ಥವಾಗುತ್ತದೆ. ಅದನ್ನೇ ಇಟ್ಟುಕೊಳ್ಳಬೇಕು ಎಂದು ತಿಳಿಸಿ ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸೆಲೆಕ್ಟ್ ಸಮಿತಿಯವರು ಪ್ರತಿಯೊಂದು ಅಂಶವನ್ನೂ ಕೂಲಂಕಷವಾಗಿ ಚರ್ಚೆಮಾಡಿ ಈ ರೀತಿಯ ಒಂದು ಪ್ರಾವಿಸೋವನ್ನು ಸೂಕ್ತ ರೀತಿಯಲ್ಲಿ ತಂದಿರುತ್ತಾರೆ. ಬಹಳ ಮಟ್ಟಿಗೆ ಇದರ ಉದ್ದೇಶ ಮಲೆನಾಡಿಗೆ ಜಾಸ್ತಿಯಾಗಿ ಸಹಾಯವಾಗಲಿ ಎಂಬುದೇ ಆಗಿದೆ. ಆದ್ದರಿಂದ ಅನುಮಾನವೇನೂ ಇಟ್ಟುಕೊಳ್ಳಬೇಕಾಗಿಲ್ಲ. ಮಲೆನಾಡಿಗೆ ಅನ್ವಯಿಸಬೇಕೆಂದು ಅವಕಾಶಮಾಡಿರುವುದು ಸೂಕ್ತವಾಗಿದೆ. ಕೆಲವು ಮೈದಾನ ಪ್ರಾಂತದಲ್ಲೂ ಸಹ ಹೆಚ್ಚು ಜನಸಂಖ್ಯೆಯಿಲ್ಲದೆ ದೂರ ದೂರವಾಗಿರುವ ಗ್ರಾಮಗಳಿರುತ್ತವೆ. ಅಂಥ ಸಂದರ್ಭದಲ್ಲಿ ಹಾಗಿದ್ದರೆ ಅವಕಾಶವಿರಲಿ. ಸಾಧಾರಣವಾಗಿ ಶೇಕಡ 75 ಭಾಗ ಮಲೆನಾಡು ಪ್ರದೇಶಕ್ಕೆ ಅನುಕೂಲವಾಗಲಿ ಎಂದು ಈ ರೀತಿ ಮಾಡಿದೆ. ಮೈದಾನದಲ್ಲಿ ಜನಸಂಖ್ಯೆ ಕಡಮೆಯಿರುವ ಪರಿಸ್ಥಿತಿ ಬಂದರೆ ಅಂಥ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಬಹುದೆಂಬ ಉದ್ದೇಶವೇ ಹೊರತು ಮತ್ತೇನೂ ಇಲ್ಲ. ಆದ್ದರಿಂದ ಪುನಃ ಬದಲಾಯಿಸುವುದು ಚೆನ್ನಾಗಿರುವುದಿಲ್ಲ. ಆದ್ದರಿಂದ ಶ್ರೀ ಸಿದ್ದಪ್ಪನವರ ತಿದ್ದುಪಡಿಯನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

Sri L. SIDDAPPA.—Very well Sir, at least if the Government can give an assurance that instructions will be issued to the district authorities that it should be confined only to the malnad areas............

The Hon'ble Sri R. CHENNIGARAMIAH.—That means accepting the amendment.

The Hon'ble Sri K. T. BHASHYAM.—How is the Hon'ble Member Sri L. Siddappa prejudiced by the Government retaining power to form a panchayet in maidan areas where the population ranges from 1,000 to 2,000? How is any person in malnad prejudiced by the Government having that power? Will the Hon'ble Member kindly explain?

Sri L. SIDDAPPA.—I do not mean to say that the people are prejudiced. In fact my point is that it should be made applicable to the Malnad.

The Hon'ble Sri K. T. BHASHYAM.—Why?

Sri L. SIDDAPPA.—Why is it that in the Malnad Improvement Bill you fixed the upper limit as 2,500? So also, in the Select Committee this bill has undergone this transformation for the reason that in the malnad area it is not practicable.

The Hon'ble Sri K. T. BHASHYAM.—Please read the section: "Some of us think that in the less thickly populated parts of the State *like* the malnad areas"—it does not necessarily mean only malnad areas. Such places may exist in maidan areas also.

Sri L. SIDDAPPA.—Very well, it is not a very important point.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಹಿಂದೆ ಮಲೆನಾಡು ಪ್ರದೇಶ ಅಂತ ಇತ್ತು. ಸೆಲೆಕ್ಟ್ ಸಮಿತಿಯಲ್ಲಿ ಅದನ್ನು ತೆಗೆದುಹಾಕಲಾಯಿತು. ಆರೀತಿ ಮಾಡಲೇಬೇಕೆಂದರೆ 1,000 ಆದರೂ ಮಾಡಬಹುದು ಎಂದುಮಾಡಿ; ಆರೀತಿ ಮಲೆನಾಡಿಗೆ ಮಾತ್ರ ಇರತಕ್ಕ ಅವಶ್ಯಕತೆ ಏನು ಎಂದು ಶ್ರೀಮಾನ್ ಸಿದ್ದಪ್ಪನವರ ಅಭಿಪ್ರಾಯ ಅಷ್ಟೆ.

ಶ್ರೀ ಎಲ್. ಸಿದ್ದಪ್ಪನವರು.—1946ರಲ್ಲಿ ಒಂದು ನೋಟಿಫಿಕೇಷನ್ ಪ್ರಕಾರ ಒಂದು ಸರ್ಕಾರಿ ಆರ್ಡರ್ ಹೊರಡಿಸಿದ್ದರು. ಅದನ್ನು ಇಂಪ್ಲಿಮೆಂಟ್ ಮಾಡುವಾಗ........

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಿಂದಿನದನ್ನೇ ಮನಸ್ಸಿನಲ್ಲಿಟ್ಟುಕೊಂಡು ಇದಕ್ಕೆ apply ಮಾಡುತ್ತಾ ಇದ್ದೀರಿ.

ಶ್ರೀ ಎಲ್. ಸಿದ್ದಪ್ಪನವರು.—ಹಿಂದೆ ಏನಾಗಿತ್ತು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುವುದು ಮನುಷ್ಯನ ಸ್ವಭಾವ; ಅದು ಸ್ವಾಭಾವಿಕ.

The Hon'ble Sri K. T. BHASHYAM.—I wish to correct one misimpression. The Hon'ble Sri B. Hutche Gowda said that originally it was confined to malnad area and now we have removed it. It is not so. In fact, the proviso is new. We felt that there may be places where there may not be two thousand people within a compact area and it is to provide a Village Panchayet for such areas that this proviso was put in. Of course, sparse population is generally found in Malnad area, but it may be found in Maidan areas also here and there. It may be ten cases in Malnad and one case in Maidan. Why should not the Government declare a Pancha-

(THE HON'BLE SRI K. T. BHASHYAM).

yet for a population of one thousand to two thousand in Maidan area where the population is sparse? Nobody is prejudiced by the fact that this power is vested in the Government. As Sri Siddappa has already said, it is not a matter of any importance, I consider it worth his while to withdraw it.

Sri L. SIDDAPPA.—Then, with the permission of the House, I wish to withdraw my amendment.

The amendment was, by leave of the House, withdrawn.

Mr. SPEAKER.—The question is:

"That Clause 3 stand part of the Bill."

The motion was adopted.

Clause 3 was added to the Bill.

Mr. SPEAKER.—Clause 4.

The question is:

"That Clause 4 stand part of the Bill."

The motion was adopted.

Clause 4 was added to the Bill.

Mr. SPEAKER.—Clause 5. There is an amendment in respect of it.

Sri L. SIDDAPPA.—I beg to move:

"That the figure '10' shall be substituted for the figure '15'."

The present clause reads as follows:—

"A Panchayet shall consist of such number of members being not less than 15 nor more than 20 as may be determined by the Government subject to rules framed by the Government in this behalf."

ಇದು ಬಹಳ ಮುಖ್ಯವಾದದ್ದು. ಏಕೆಂದರೆ ಡಿಸ್ಟ್ರಿಕ್ಟ್ ಬೋರ್ಡ್‌ಗೆ ಚುನಾವಣೆ ಮಾಡುವಾಗ ವಿಲೇಜ್ ಪಂಚಾಯಿತಿಯಲ್ಲಿರತಕ್ಕ ಸದಸ್ಯರೇ ಅದಕ್ಕೆ ಎಲೆಕ್ಟೊರೇಟ್ ಆಗುತ್ತಾರೆ. ಆದ್ದರಿಂದ 1,000 ಪ್ರಜಾ ಸಂಖ್ಯೆ ಇರತಕ್ಕ ಪ್ರದೇಶದಲ್ಲೂ 15 ಜನ ಸದಸ್ಯರು 2½, 3 ಸಾವಿರ ಇರತಕ್ಕ ಪ್ರದೇಶದಲ್ಲೂ 15 ಜನ ಸದಸ್ಯರು ಆಗುತ್ತಾರೆ. ಇದು ಡಿಸ್ಟ್ರಿಕ್ಟ್ ಬೋರ್ಡ್‌ಗೆ ಎಲೆಕ್ಟೊರೇಟ್ ಆಗುವುದರಿಂದ ಬಹಳ ಹೆಚ್ಚು ವ್ಯತ್ಯಾಸವಾಗುತ್ತದೆ. ಈ ಒಂದು ಬಹು ಮುಖ್ಯವಾದ ಅಂಶ ಇರುವುದರಿಂದ ಈ ತಿದ್ದುಪಡಿಯನ್ನು ಸಭೆಯವರು ಒಪ್ಪುತ್ತಾರೆಂದು ನಂಬಿದ್ದೇನೆ.

Mr. SPEAKER.—Amendment moved:

"That the figure '10' shall be substituted for the figure '15'."

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಇದು ಬಹಳ ಮುಖ್ಯವಾದದು. ಏಕೆಂದರೆ ಪಂಚಾಯಿತಿ ಸಂಖ್ಯೆ ಜಾಸ್ತಿ ಆಯಿತು ಎಂದರೆ ಓಟರುಗಳ ಸಂಖ್ಯೆ ಜಾಸ್ತಿ ಆಗುತ್ತದೆ. 2,000ದಿಂದ 5,000ಕ್ಕೆ 15ರಿಂದ 20ರವರೆಗೆ ಸದಸ್ಯರ ಸಂಖ್ಯೆ ನಿಗದಿ ಮಾಡಿರುವುದರಿಂದ 1,000ಕ್ಕೆ 10ರಂತೆ ನಿಗದಿ ಮಾಡಬೇಕಾಗುತ್ತದೆ. ಆದುದರಿಂದ ಸಾಧ್ಯವಾದ ಮಟ್ಟಿಗೂ ಒಂದೇ ರೀತಿಯಾಗಿ ಮಾಡಬೇಕೆಂಬುದೇ ನಮ್ಮ ಅಭಿಪ್ರಾಯ.

* **Sri D. H. CHANDRASEKHARAIYA** (Chitaldrug District-General).—Sir, this seems to be a very desirable amendment in order to give discretion to the Government to fix up the number of each Village Panchayet according to the population. The Government have got discretion to fix the number between 15 and 20 as proposed in the Bill. But it is better that in cases where the population does not exceed thousand, the number of members constituting the panchayet concerned should be 10 or 12 according to the discretion exercised by the Government. In view of these considerations, I am of opinion that the amendment moved by the Hon'ble Member may be accepted by this House.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಶ್ರೀ ಸಿದ್ದಪ್ಪನವರು ಸೂಚಿಸಿರುವುದರಲ್ಲಿ ಮಿನಿಮಂ ಲಿಮಿಟ್ 15 ಇರುವುದನ್ನು 10ಕ್ಕೆ ಇಳಿಸಬೇಕೆಂದು ಹೇಳಿದ್ದಾರೆ. ಅದಕ್ಕೆ ಬದಲಾಗಿ ಮ್ಯಾಕ್ಸಿಮಂ ಲಿಮಿಟ್ 20 ಇರುವುದನ್ನು 25ಕ್ಕೆ ಮಾಡಿ ಎಂದು ಹೇಳಿದ್ದರೆ ಒಪ್ಪುತ್ತಾ ಇದ್ದರೋ ಏನೋ, ಈಗಲೂ ಸೂಕ್ತವೆಂದರೆ ಒಪ್ಪಿಕೊಳ್ಳಿ. ಆದರೆ ನನಗೆ ಏನು ಅನ್ನಿಸುತ್ತದೆ ಎಂದರೆ, ಹಿಂದೆ ವಿಲೇಜ್ ಪಂಚಾಯಿತಿ ಆಕ್ಟಿನಲ್ಲಿ ಸಣ್ಣ ಗ್ರಾಮ ಆಗಲಿ ದೊಡ್ಡ ಗ್ರಾಮ ಆಗಲಿ, 250 ಪ್ರಜಾಸಂಖ್ಯೆ ಇರುವ ಗ್ರಾಮಗಳಿಗೂ ಸಹ ಒಂದೊಂದು ಪಂಚಾಯಿತಿ ಇತ್ತು. 2000, 3,000 ಪ್ರಜಾ ಸಂಖ್ಯೆ ಇರತಕ್ಕ ಗ್ರಾಮಗಳಿಗೂ ಕೂಡ ಒಂದೊಂದು ವಿಲೇಜ್ ಪಂಚಾಯಿತಿ ಇತ್ತು, ಆಗ ಯಾವ ವಿಲೇಜ್ ಪಂಚಾಯಿತಿಯಲ್ಲಿ ಕೂಡ 15 ಜನಕ್ಕೆ ಕಡಿಮೆ ಸದಸ್ಯರು ಇರುತ್ತಾ ಇರಲಿಲ್ಲ. ಈಗ ಗ್ರಾಮಾಡಳಿತದಲ್ಲಿ ಜನಗಳಿಗೆ ಸ್ವಲ್ಪ ಹೆಚ್ಚಿನ ಅಧಿಕಾರವಿರಬೇಕೆಂದು ಹೇಳುತ್ತಿರುವ ಕಾಲದಲ್ಲಿ ಹೆಚ್ಚು ಜನ ಸದಸ್ಯರಿದ್ದು ಅಧಿಕಾರ ನಡೆಸುವುದು ಸೂಕ್ತವೆಂದು ಹೇಳಿ ನನಗೆ ಅನ್ನಿಸುತ್ತದೆ. ಅದೂ ಅಲ್ಲದೆ ನಾವಾದರೂ ಏನು ಹೇಳುತ್ತೇವೆ ಎಂದರೆ, ಕೊನೆಯಪಕ್ಷ ಒಂದು ಗ್ರಾಮಕ್ಕೆ ಒಬ್ಬ ಸದಸ್ಯರು ಇರಬೇಕೆಂದು ಕಾನೂನು ಮಾಡುತ್ತಾ ಇದ್ದೇವೆ. ವಿಲೇಜ್ ಗ್ರೂಪ್ ಮಾಡುವಾಗ ಕೆಲವು ಸಂದರ್ಭಗಳಲ್ಲಿ ಚಿಕ್ಕ ಚಿಕ್ಕ ಗ್ರಾಮಗಳಲ್ಲಿ 8–10ಕ್ಕೆ ಮೇಲ್ಪಟ್ಟು ಸೇರಿಸಿ ಗ್ರೂಪ್‌ಮಾಡಬೇಕಾಗಿ ಬರುತ್ತದೆಯೋ ಏನೋ. ಅಂಥಾ ಸಂದರ್ಭದಲ್ಲಿ ಅದು ಚಿಕ್ಕ ಗ್ರಾಮ ಆದ್ದರಿಂದ 10 ಜನ ಮಾತ್ರ ಸಾಕು ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಈಗಿರುವಂತೆ 15 ರಿಂದ 20ರವರೆಗೆ ಲಿಮಿಟ್ ಇಟ್ಟುಕೊಳ್ಳಬಹುದು ಎಂದು ಹೇಳುತ್ತೇನೆ.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ):- ಅಧ್ಯಕ್ಷರೇ, ಶ್ರೀ ಸಿದ್ದಪ್ಪನವರು ತಂದಿರತಕ್ಕ ತಿದ್ದು ಪಡಿಯನ್ನು ನಾನು ಪುಷ್ಟೀಕರಿಸುತ್ತೇನೆ. ಇದರಲ್ಲಿ 10-12 ಗ್ರಾಮ ಸೇರಿಸಬೇಕಾಗಬಹುದು, 14ಗ್ರಾಮ ಸೇರಿಸಬೇಕಾಗಬಹುದು. ಅಂಥ ಸಂದರ್ಭದಲ್ಲಿ ಪ್ರತಿಯೊಂದು ಗ್ರಾಮಕ್ಕೂ ಪ್ರಾತಿನಿಧ್ಯ ಸಿಕ್ಕಬೇಕಾಗುತ್ತದೆ. 10ಕ್ಕೆ ಲಿಮಿಟ್ ಮಾಡಿದರೆ ಶ್ರೀ ಮಾದಯ್ಯಗೌಡರು ವ್ಯಕ್ತಪಡಿಸಿದಂಥ ಸಂದರ್ಭದಲ್ಲಿ ಯಾವ ಪಂಚಾಯಿತಿಯಲ್ಲಿ 10-12ಕ್ಕಿಂತ ಜಾಸ್ತಿಯಾಗುತ್ತದೆಯೋ ಅದಕ್ಕೆ ತಕ್ಕಂತೆ ಹೆಚ್ಚು ಮಾಡಲಿಕ್ಕೆ ಸರ್ಕಾರದವರಿಗೆ ಅವಕಾಶವಿದ್ದೇ ಇರುತ್ತದೆ. 10ರಿಂದ 20ರ ಒಳಗೆ ಯಾವ್ಯಾವ ಪಂಚಾಯಿತಿಗೆ ಎಷ್ಟೆಷ್ಟು ಜನ ಸದಸ್ಯರನ್ನು ನಿಗದಿ ಮಾಡಬೇಕೆಂಬುದಕ್ಕೆ ಸರ್ಕಾರದವರಿಗೆ ಅಧಿಕಾರವಿದೆ. ಆದರೆ ಶ್ರೀ ಸಿದ್ದಪ್ಪನವರು ಮತ್ತು ಹುಚ್ಚೇಗೌಡರು ಹೇಳಿದ ಹಾಗೆ ಅಪ್ರತ್ಯಕ್ಷ ಚುನಾವಣೆಯಾಗುವಾಗ ಒಂದೇ ತಾಲ್ಲೂಕಿನಲ್ಲಿ ಕೆಲ ಕೆಲವು ಪಂಚಾಯಿತಿಗಳ ಜನಸಂಖ್ಯೆಯಲ್ಲಿ ವ್ಯತ್ಯಾಸ ಬರುತ್ತದೆ. ಅದನ್ನು ಸ್ವಲ್ಪ ಮಟ್ಟಿಗೆ ಕಮ್ಮಿ ಮಾಡುವುದಕ್ಕೆ ಸರ್ಕಾರದವರು 10ರಿಂದ 20ಕ್ಕೆ ಆ ಸಂಖ್ಯೆಯನ್ನು ಇಟ್ಟುಕೊಂಡರೆ ಬಹಳ ಅನುಕೂಲವಾಗುತ್ತದೆ. ಈ ವ್ಯತ್ಯಾಸವನ್ನು ಪೂರ್ತಿಯಾಗಿ ತೆಗೆದುಹಾಕುವುದಕ್ಕಾಗುವುದಿಲ್ಲ, ಏನು ಮಾಡಿದರೂ ಸ್ವಲ್ಪ ವ್ಯತ್ಯಾಸವಿದ್ದೇ ಇರುತ್ತದೆ. ಅದಷ್ಟು ಕಮ್ಮಿ ಮಾಡಬೇಕೆಂಬುದೇ ಇದರ ಉದ್ದೇಶ. ಅಪ್ರತ್ಯಕ್ಷ ಚುನಾವಣೆ ಇಟ್ಟುಕೊಂಡರೆ ಮುಂದೆ ಅವರು ಡಿಸ್ಟ್ರಿಕ್ಟ್ ಬೋರ್ಡ್‌ಗೆ ಓಟು ಮಾಡಬೇಕಾಗುತ್ತದೆ.

ತಾವು ಇಷ್ಟು ಚಿಟಿಕು ಮುಳ್ಳು ಅಳ್ಳಾಡಿಸಬೇಕಾಗಿಲ್ಲ. ಮುಂದೆ ಒಪ್ಪಿಕೊಂಡರೆ ಆಗ ನೋಡೋಣ. ಇವೊತ್ತು ಒಪ್ಪಿಕೊಂಡಿಲ್ಲ. ಈಗ ಏನು ತೊಂದರೆಯಾಗುತ್ತದೆ ಎನ್ನುವುದನ್ನು ನೋಡಿ ಸರಿಯಾಗಿ ತಿದ್ದಬೇಕು. ಕೆಲವು ಕಡೆ ಒಂದು ಸಾವಿರ ಜನರಿಗೆ ಒಂದ ಪಂಚಾಯಿತಿಯನ್ನು ಮಾಡಿ 15 ಸ್ಥಾನ ಕೊಟ್ಟು, ಇನ್ನು ಕೆಲವು ಕಡೆ 4½ ಸಾವಿರ ಜನರಿಗೆ ಒಂದು ಪಂಚಾಯಿತಿ ಮಾಡಿ ಅಲ್ಲಿಗೂ 15 ಸ್ಥಾನ ಕೊಟ್ಟರೆ ಆಗ ವ್ಯತ್ಯಾಸ ಎದ್ದು ಕಾಣುತ್ತದೆ. ಅದು ಪ್ರಾತಿನಿಧ್ಯ ದೃಷ್ಟಿಯಿಂದ ಸರಿಯಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರದವರಿಗೆ ಮೊದಲೇ ಅರಿಕೆ ಮಾಡಿಕೊಂಡ ಹಾಗೆ ವ್ಯತ್ಯಾಸವನ್ನು ಪೂರ್ತಿಯಾಗಿ ಸರಿಮಾಡದೇ ಹೋದರೂ ಇದನ್ನು ಕನಿಷ್ಠಕ್ಕೆ ಇಳಿಸುವುದು ಒಳ್ಳೆಯದು, ಆದಕಾರಣ 10 ರಿಂದ 20 ಇರಬೇಕು ಎಂದು ತಂದಿರುವ ತಿದ್ದುಪಡಿಯನ್ನು ಪುಷ್ಟೀಕರಿಸುತ್ತೇನೆ. ಸರ್ಕಾರದವರು ಒಪ್ಪಬೇಕೆಂದು ಕೇಳಿಕೊಳ್ಳುವುದಲ್ಲದೆ ಸಭೆಯವರೆಲ್ಲರೂ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Sri D. H. CHANDRASEKHARAIYA.— There is another amendment proposed by Sri T. Madiah Gowda in respect of clause 5.

Mr. SPEAKER.—We will take it up after this amendment is disposed of.

*ಶ್ರೀ ಎಂ. ಮಾದಯ್ಯನವರು (ಮೈಸೂರು ಡಿಸ್ಟ್ರಿಕ್ಟ್— ನಿಮ್ನ ಪಂಗಡ).—ಈ ತಿದ್ದುಪಡಿಯಲ್ಲಿ ಕನಿಷ್ಠ ಪರಿಮಿತಿಯನ್ನು 15 ಎಂದಿರುವುದನ್ನು 10 ಇರುವಂತೆ ಸೂಚಿಸಿದ್ದಾರೆ. ಒಂದು ವೇಳೆ ತಾವು ಒಂದು ಸಾವಿರ ಪ್ರಜಾಸಂಖ್ಯೆ ಇರತಕ್ಕ ಗ್ರಾಮಕ್ಕೆ 10 ಇರಬೇಕೆಂದು ಗೊತ್ತುಮಾಡಿದರೆ, ಪರಮಾವಧಿ ಪರಿಮಿತಿಯನ್ನು ಗೊತ್ತುಮಾಡಿರುವುದರಿಂದ ಪ್ರಜಾಸಂಖ್ಯೆ ಜಾಸ್ತಿ ಇರುವ ಗ್ರಾಮದ ಹಿತಕ್ಕೆ ಧಕ್ಕೆ ಬರುತ್ತದೆಂದು ಕಾಣುತ್ತದೆ. ಸೆಲೆಕ್ಟ್ ಕಮಿಟಿಯವರು ಕನಿಷ್ಠ ಮತ್ತು ಪರಮಾವಧಿ ಪರಿಮಿತಿಯನ್ನು 15 ಮತ್ತು 20 ಎಂದು ಗೊತ್ತು ಮಾಡಿರುವುದರಿಂದ ಏನು ತೊಂದರೆ ಎಂಬುದನ್ನು ಶ್ರೀ ಸುಬ್ರಹ್ಮಣ್ಯರವರು ವಿಶದಪಡಿಸಿದ್ದಾರೆ. ನಾನು ಒಂದು ಸಲಹೆ ಮಾಡುತ್ತೇನೆ. ಇನ್ನೂ ಅನುಕೂಲ ಮಾಡಬೇಕಾದರೆ, ಕನಿಷ್ಠ ಪರಿಮಿತಿಯನ್ನು ಗೊತ್ತುಮಾಡಿ ಪರಮಾವಧಿ ಪರಿಮಿತಿಯನ್ನು ತೆಗೆದುಬಿಡಿ. ಕನಿಷ್ಠ ಪರಿಮಿತಿ 10 ಎಂದು ಇರಲಿ, ಒಂದು ಸಾವಿರ ಪ್ರಜಾಸಂಖ್ಯೆಗೆ ಪ್ರಜಾಸಂಖ್ಯೆ ಹೆಚ್ಚಿದಂತೆಲ್ಲಾ ಇದನ್ನು ಹೆಚ್ಚಿಸಿಕೊಂಡು ಹೋದರೆ ಆಗ ಸಂಪೂರ್ಣವಾಗಿ ಪ್ರಜಾಸಂಖ್ಯೆಗನುಗುಣವಾಗಿ ಸದಸ್ಯರ ಸಂಖ್ಯೆ ಇದ್ದು ಸರಿಹೋಗುತ್ತದೆ.

ಸ್ವಾಮಿ, ಈಗ ಎಲ್ಲೆಲ್ಲಿಯೂ ಹಳ್ಳಿಗಳಿಗೆ ಅಧಿಕಾರ ಕೊಡಬೇಕೆಂದು ಕೂಗುತ್ತಿರುವಾಗ ಅದಕ್ಕೆ ತಕ್ಕ ಏರ್ಪಾಡು ಮಾಡುವುದು ಒಳ್ಳೆಯದು. ಜನಸಾಮಾನ್ಯಕ್ಕೆ ಹೆಚ್ಚು ಅಧಿಕಾರ ಕೊಡಬೇಕೆಂದು ಎಲ್ಲರೂ ಹೇಳುತ್ತಾರೆ. ಹತ್ತರಿಂದ ಹದಿನೈದು ಮಾಡಿ 'ಗ್ರೂಪ್' ಮಾಡಿದರೂ ಒಂದು ತಾಲ್ಲೂಕಿನಲ್ಲಿ ಕಡಿಮೆ ಜನಸಂಖ್ಯೆ ಇದ್ದರೆ ಅದಕ್ಕೆ ಜಾಸ್ತಿಯಾಗಬಹುದು. ಇನ್ನೊಂದು ಕಡೆ ಜನಸಂಖ್ಯೆ ಹೆಚ್ಚಿದರೆ ಅಲ್ಲಿಗೆ ಕಡಿಮೆಯಾಗಬಹುದು ಅಲ್ಲದೆ indirect election ಬೇರೆ ಒಪ್ಪಿಕೊಂಡಿದ್ದೇವೆ. ನೇರವಾದ ಚುನಾವಣೆ ನಡೆಯಬೇಕೆಂದು ಅನೇಕರು ವಾದಿಸುತ್ತಿದ್ದರು. ಮಹಾತ್ಮಾ ಗಾಂಧಿಯವರು ಹೇಳಿದಂತೆ ಮಾಡಬೇಕೆಂದರೆ, ಸಾಧ್ಯವಾದಷ್ಟೂ ಓಟರುಗಳ ಸಂಖ್ಯೆಯನ್ನು ಜಾಸ್ತಿ ಮಾಡಲು ಅವಕಾಶ ಕಲ್ಪಿಸಬೇಕು. ನೂರು ಜನರಿಂದ ಚುನಾಯಿತರಾಗುವುದಕ್ಕೆ ಬದಲು ಇನ್ನೂರು ಜನರಿಂದ ಚುನಾಯಿತರಾಗಿ ಬಂದರೆ ಅದರಿಂದ ಪ್ರಜಾಸತ್ತೆಗೆ ಹೆಚ್ಚು ಬೆಲೆ ಬಂದಂತಾಗುತ್ತದೆ. ಕನಿಷ್ಠ ಪರಿಮಿತಿಯನ್ನು ಗೊತ್ತುಮಾಡಿ ಪ್ರಜಾಸಂಖ್ಯೆಗನುಗುಣವಾಗಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವುದು ಒಳ್ಳೆಯದು. ಸಾವಿರಕ್ಕೆ 15 ಸ್ಥಾನಗಳಿದ್ದು ಐದು ಸಾವಿರಕ್ಕೆ 20 ಇದ್ದರೆ ಅದು ಸರಿಯಾಗುವುದಿಲ್ಲ.

ಅಧ್ಯಕ್ಷರು.—ಅದ ನಿಮ್ಮ ಸಲಹೆ, ಅದಿರಲಿ. ಈಗ ಈ ತಿದ್ದುಪಡಿಯ ವಿಚಾರ ಮಾತನಾಡಿ.

ಶ್ರೀ ಎಂ. ಮಾದಯ್ಯನವರು.—ಸಭೆಯ ಗಮನಕ್ಕೆ ಈ ವಿಷಯವನ್ನು ತರುವುದಕ್ಕಾಗಿ ನಾನು ಹೇಳುತ್ತಿದ್ದೇನೆ. ಈ ತಿದ್ದುಪಡಿಯನ್ನು ನಾನು ತೀವ್ರವಾಗಿ ವಿರೋಧಿಸುವುದಿಲ್ಲ. ಸರ್ಕಾರದವರು ಸೂಕ್ತವೆಂದು ತಿಳಿದು ಹೇಗೆ ಮಾಡುತ್ತಾರೋ ಹಾಗೆಯೇ ಆಗಬಹುದು.

The Hon'ble Sri K. T. BHASHYAM.— This is a very welcome amendment. I am surprised that Sri L. Siddappa has sought to confer larger powers on the Government than we intended to possess. I hope he will continue to do so for all time to come. We wanted to have the power to fix the number from 15 to 20 and I am grateful to Sri L. Siddappa because we can now fix it from 10 to 20. It is in the Malnad areas that these smaller panchayets are formed, and I thought he would insist

(THE HON'BLE SRI K. T. BHASHYAM).

on 15 being the membership there. But I am glad that he has restricted it to 10.

Since the powers of the Government are sought to be enlarged, I welcome the amendment.

*The Hon'ble Sri R. CHENNIGARAMIAH.—We have no objection to accept the amendment. I do not want to go further into the matter. The Select Committee has gone into the matter in detail. They thought it not desirable to have a panchayet with a strength of less than 15 members. For a population of 1,000 members, the Panchayet must have at least 15 representatives. Anything less than that is not desirable. It was also considered desirable to give weightage to the Malnad area. I am glad the Hon'ble Member Sri L. Siddappa has come forward to give this responsibility to the Government and I have no objection to accept the amendment.

Mr. SPEAKER.—The question is:

"That the figure '10' shall be substituted for the figure '15'."

The motion was adopted.

Mr. SPEAKER.—The Hon'ble Member Sri T. Madiah Gowda has an amendment.

*Sri T. MADIAH GOWDA.—Sir, I beg to move:

"That for the existing proviso to sub-clause (1), the following new proviso shall be substituted:—

"Provided that where a Panchayet is established for a group of villages, each village will be represented as far as possible by such number of members, in proportion to the population of each village."

ಸ್ವಾಮಿ, ಈ ತಿದ್ದುಪಡಿಯನ್ನು ಸೂಚಿಸುವುದರಲ್ಲಿ ನನ್ನ ಉದ್ದೇಶವಾದರೂ ಇಷ್ಟೇ: ಈಗ ಇರತಕ್ಕ ಕ್ಲಾಜಿನ ಪ್ರೊವೈಸೋನಲ್ಲಿ ಕೆಲವು ಹಳ್ಳಿಗಳನ್ನು ಸೇರಿಸಿ ಒಂದು ಪಂಚಾಯಿತ್ತಿ ಮಾಡಿದರೆ ಹಾಗೆ ಸೇರಿಸಲ್ಪಟ್ಟಿರುವ ಪ್ರತಿಯೊಂದು ಗ್ರಾಮಕ್ಕೂ ಒಬ್ಬೊಬ್ಬ ಸದಸ್ಯರಾದರೂ ಪಂಚಾಯಿತಿಯಲ್ಲಿರಲೇಬೇಕೆಂದು ಅರ್ಥವಾಗುತ್ತದೆ. ಹೀಗೆ ಪ್ರತಿ ಗ್ರಾಮಕ್ಕೂ ಒಬ್ಬೊಬ್ಬರು ಇರಲೇಬೇಕೆಂದು ನಿರ್ಧರವಾಡಿ ಚುನಾವಣೆ ನಡೆಸತಕ್ಕದ್ದು ಸ್ವಲ್ಪ ಕಷ್ಟ. ಒಟ್ಟಿಗೆ ಸೇರತಕ್ಕ ಗ್ರಾಮಗಳಿಗೆಲ್ಲಾ ಇಷ್ಟು ಜನ ಸದಸ್ಯರೆಂದು ನಿಗದಿ ಮಾಡಿ, ನಿಮ್ಮ ಪಂಗಡದವರಿಗೆ ಇಷ್ಟು ಸ್ಥಾನಗಳೆಂದು ಜನಸಂಖ್ಯೆಗನುಗುಣವಾಗಿ ಗೊತ್ತುಮಾಡಿ ಚುನಾವಣೆ ಮಾಡುವುದು ಸುಲಭ. ಇದು ಬಿಟ್ಟು ಒಂದೊಂದು ಗ್ರಾಮಕ್ಕೆ ಒಬ್ಬೊಬ್ಬ ಸದಸ್ಯರಿದ್ದೇ ಇರಬೇಕು, ಆ ಗ್ರಾಮದ ಜನಸಂಖ್ಯೆಗನುಗುಣವಾಗಿರಲಿ, ಇಲ್ಲದೇ ಇರಲಿ ಎಂದು ಮಾಡಿದರೆ ಚುನಾವಣೆ ನಡೆಸುವುದು ಕಷ್ಟವಾಗುವುದಲ್ಲದೆ, ನಿಮ್ಮ ಪಂಗಡದ ಸದಸ್ಯರಿಗೆ ಸ್ಥಾನಗಳನ್ನು ಗೊತ್ತುಮಾಡುವುದರಲ್ಲಿಯೂ ಕಷ್ಟ ಬರಬಹುದು. ಉದಾಹರಣೆಗೆ, ಅನೇಕ ಸಂದರ್ಭಗಳಲ್ಲಿ ಒಂದು ಗುಂಪಿಗೆ ಸೇರಿರುವ ಗ್ರಾಮಗಳಲ್ಲಿ ಕೆಲವು ಬೇಚರಾಕ್ ಗ್ರಾಮಗಳೂ ಸೇರಿರಬಹುದು; ಎಲ್ಲೋ ಒಂದೊಂದು ಮನೆ ಇದ್ದು ಆ ಮನೆಯಲ್ಲಿ ಒಬ್ಬರೋ ಇಬ್ಬರೋ ಇರಬಹುದು. ಅಂತಹ ಹಳ್ಳಿಗಳಿಗೂ ಒಂದೊಂದು ಸ್ಥಾನ ಕೊಡಬೇಕೆಂದರೆ ಅನೇಕ ಸಂದರ್ಭಗಳಲ್ಲಿ ಅನ್ಯಾಯವಾಗಬಹುದು.

ಕೆಲವು ಅನಾನುಕೂಲಗಳ ದೆಶೆಯಿಂದ ಕೆಲವು ಗ್ರಾಮಗಳು ಸಣ್ಣವಾಗಿದ್ದರೂ ಕೂಡ, ಅಲ್ಲಿನ ಕೆಲವು ಜನಗಳ ಪ್ರಭಾವದಿಂದ ಹೆಚ್ಚು ಜನರು ಸದಸ್ಯರಾಗಿ ಚುನಾಯಿತರಾಗಿ ಬರುವುದಕ್ಕೆ ಸಾಧ್ಯವಾಗಿ, ದೊಡ್ಡ ಗ್ರಾಮಗಳಲ್ಲಿ ಕಮ್ಮಿ ಜನಗಳು ಬರುವುದಾದರೆ—ಏಕೆಂದರೆ ಚುನಾವಣೆಗಳಲ್ಲಿ ಏನಾಗುತ್ತದೋ, ಏನಿಲ್ಲವೋ ಹೇಳುವುದಕ್ಕಾಗುವುದಿಲ್ಲ, ಆದ್ದರಿಂದ ಹಾಗೇನಾದರೂ ಆಗುವುದಾದರೆ—ದೊಡ್ಡ ಗ್ರಾಮಗಳಿಗೆ ಅನ್ಯಾಯವಾದಂತಾಗುತ್ತದೆ. ಅನೇಕ ಚಿಕ್ಕ ಗ್ರಾಮಗಳಲ್ಲಿ ಕೆಲವು ಪ್ರಭಾವಶಾಲಿಗಳಿದ್ದುಕೊಂಡು ಹೆಚ್ಚಿಗೆ ಪ್ರಾತಿನಿಧ್ಯ ಪಡೆದುಕೊಳ್ಳಬಹುದು. ದೊಡ್ಡ ಗ್ರಾಮಗಳಿಗೆ ತಕ್ಕ ಪ್ರಾತಿನಿಧ್ಯ ದೊರೆಯದೆ ಅನ್ಯಾಯವಾಗಬಹುದು. ಈ ಎಲ್ಲಾ ದೃಷ್ಟಿಯಿಂದ ನೋಡಿದರೆ, ನಿಬಂಧನೆಗಳನ್ನು ಮಾಡುವುದರಲ್ಲಾದರೂ ಈ ರೀತಿ ಮಾಡುತ್ತೇವೆಂದು ಹೇಳಿದ್ದರೆ ಚೆನ್ನಾಗಿತ್ತು. ಅಲ್ಲದೆ ನಾನು ಈ ತಿದ್ದುಪಡಿಯಲ್ಲಿ ಹೇಳಿರುವುದಾದರೂ "as far as possible" ಈ ರೀತಿ ಮಾಡಬೇಕು ಎಂದು. ಆದಷ್ಟು ಮಟ್ಟಿಗೆ ನ್ಯಾಯವಾದ ಪ್ರಾತಿನಿಧ್ಯ ಎಲ್ಲ ಗ್ರಾಮಗಳಿಗೆ ದೊರಕಿಸಿ ಕೊಡಬೇಕೆಂಬುದೇ ನನ್ನ ಉದ್ದೇಶ. ಇದರಿಂದ ಯಾವುದೊಂದು ಗ್ರಾಮದ ವಿಷಯದಲ್ಲಾಗಲೀ ಕೂಗು ಅಥವಾ ತಕರಾರು ಬಂದು ಪಂಚಾಯ್ತಿ ಆಡಳಿತದಲ್ಲಿ ವೈಮನಸ್ಯಗಳಿಗೆ ಅವಕಾಶವಿಲ್ಲದ ಹಾಗೆ ಆಗಿ ಪಂಚಾಯ್ತಿ ಆಡಳಿತಗಳು ಚೆನ್ನಾಗಿ ನಡೆದುಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆ. ಮುಂದೆ ಬರಬಹುದಾದ ತೊಂದರೆ ತಕರಾರುಗಳನ್ನೂ ಗ್ರಾಮ ಗ್ರಾಮಗಳಿಗೆ ಬರುವ ವೈಷಮ್ಯಗಳನ್ನೂ ತಪ್ಪಿಸುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಈ ಎಲ್ಲಾ ದೃಷ್ಟಿಗಳಿಂದಲೂ ನನ್ನ ಈ ಸಣ್ಣ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಳ್ಳಬಹುದೆಂದು ಹೇಳುತ್ತೇನೆ.

Mr. SPEAKER.—Amendment moved:

"For the existing proviso to sub-clause (1), the following new proviso shall be substituted—'Provided that where a panchayet is established for a group of villages, each village will be represented as far as possible by such number of members, in proportion to the population of each village.'"

*ಶ್ರೀ ಎಂ. ಮಾದಯ್ಯನವರು (ಮಂಡ್ಯ-ನಿಮ್ನ ಪಂಗಡ).—ಅಧ್ಯಕ್ಷರೇ, ಈ ತಿದ್ದುಪಡಿಯ ಸೂಚಕರ ಉದ್ದೇಶವೇನೋ ಒಳ್ಳೆಯದಾಗಿ ಕಾಣುತ್ತದೆ. ಒಂದು ಗ್ರೂಪಿನಲ್ಲಿರತಕ್ಕ ಎಲ್ಲಾ ಗ್ರಾಮಗಳಿಗೂ ಆಯಾ ಗ್ರಾಮಗಳ ಜನಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯವನ್ನು ದೊರಕಿಸಿ ಕೊಡಬೇಕೆಂದೇ ಅವರ ಆಶಯವಾಗಿ

ದೆ. ಆದರೆ ಉದ್ದೇಶ ವಾಸ್ತವವಾಗಿ ಈ ಪ್ರೊವೈಸೋವಿನಿಂದ ಸಾಧನೆಯಾಗುತ್ತದೆಯೋ ಎಂಬುದು ನನ್ನ ಅನುಮಾನ. ಅವರ ತಿದ್ದುಪಡಿಯಲ್ಲಿ "each village should be represented" ಎಂದು ಹೇಳಿದ್ದಾರೆ. ಚುನಾವಣೆಯಾದ ಮೇಲೆ ಆ ಗ್ರೂಪಿನಲ್ಲಿರತಕ್ಕ ಎಲ್ಲಾ ಸದಸ್ಯರುಗಳೂ ಆ ಗ್ರೂಪಿನಲ್ಲಿರತಕ್ಕ ಎಲ್ಲಾ ಹಳ್ಳಿಗಳನ್ನೂ ಪ್ರತಿನಿಧಿಸುತ್ತಾರೆಂತಲೇ ಅರ್ಥ. ಆದ್ದರಿಂದ, ಪ್ರಾಯಶಃ ಅವರ ಅಭಿಪ್ರಾಯದಲ್ಲಿ "Represented" ಎಂದರೆ, Reserved according to the population ಎಂಬುದರ ಅರ್ಥವಿರುವಂತೆ ತೋರುತ್ತದೆ. ಆದ್ದರಿಂದ ಈ ತಿದ್ದುಪಡಿಯ ಪದಜೋಡಣೆ ಆ ರೀತಿ ಬದಲಾವಣೆಯಾಗಿದ್ದರೆ ಚೆನ್ನಾಗಿತ್ತು. ಉದ್ದೇಶ ಸಾಧ್ಯವಾಗಿದ್ದರೂ ಇದರ ಪದಜೋಡಣೆ ಸರಿಯಾಗಿಲ್ಲ.

ಎರಡನೆಯದಾಗಿ, ಪಂಚಾಯ್ತಿ ಸದಸ್ಯರುಗಳ ಸಂಖ್ಯೆಯನ್ನು ಗೊತ್ತು ಮಾಡುವುದರಲ್ಲಿ ಅದು 15ಕ್ಕೆ ಮೇಲ್ಪಟ್ಟು 20ರ ಒಳಗಿರುವಂತೆ ಎಷ್ಟಿರಬೇಕೆಂಬುದನ್ನು ಸರ್ಕಾರದವರು ಮಾಡತಕ್ಕ ನಿಬಂಧನೆಗಳ ಮೇರೆಗೆ ಗೊತ್ತುಮಾಡುವುದಾಗಿದೆ. ಅದರಲ್ಲಿ,

> "It will be so much as may be determined by the Government subject to rules framed by Government in this behalf."

ಎಂದು ಹೇಳಿದೆ. ಈ ಪ್ರಕಾರ ಸಂಖ್ಯೆಯನ್ನು ಗೊತ್ತು ಮಾಡುವ ಸಂದರ್ಭದಲ್ಲೇ ಸರ್ಕಾರದವರು ಪ್ರಜಾಸಂಖ್ಯೆಗನುಗುಣವಾಗಿರುವಂತೆಯೂ ಸರಿಯಾದ ಅಂಕಿಯನ್ನು ಗೊತ್ತುಮಾಡುವುದಕ್ಕೆ ಸಾಧ್ಯವಿಲ್ಲವೇ ಎನ್ನಿಸುತ್ತದೆ ಆಯಾ ಗ್ರೂಪಿಗೆ ಸೇರಿದ ಗ್ರಾಮಗಳಲ್ಲಿ ಪ್ರಜಾಸಂಖ್ಯೆಗನುಗುಣವಾಗಿ ಇಷ್ಟಿಷ್ಟು ಕೊಟ್ಟಿದೆಯೆಂದು ಗೊತ್ತುಮಾಡಬಹುದು. ಹಾಗಿಲ್ಲದೆ, ಈ ಮಸೂದೆಯಲ್ಲೇ ಆ ಅಂಶವನ್ನು ಅಡಕಮಾಡಬೇಕೆಂದು ಅವರ ಉದ್ದೇಶವಿರುವುದಾದರೆ, ಇಲ್ಲಿ ನಿರ್ದಿಷ್ಟವಾಗಿ "Reserved" ಎಂಬ ಪದವನ್ನು ಸೇರಿಸಿದ ಹೊರತು ಅವರ ಉದ್ದೇಶ ಸಾರ್ಥಕವಾಗುವುದಿಲ್ಲ. In the way it is now worded it cannot be accepted. ಈ ಕಾರಣದಿಂದ ನಾನು ಈ ತಿದ್ದುಪಡಿಯನ್ನು ವಿರೋಧಿಸಬೇಕಾಗಿದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ),—ಈ ತಿದ್ದುಪಡಿಯಲ್ಲಿ ಸೂಚಿಸಿರುವ ಪ್ರಕಾರ ಪ್ರತಿಯೊಂದು ಗ್ರಾಮಕ್ಕೂ ಇಷ್ಟಿಷ್ಟು ಎಂದು ಹೇಳಬೇಕೆಂದು ಹೇಳಿದರೆ, ಈ ಅಂಕಿಯನ್ನು ಯಾವ ರೀತಿ ನಿರ್ಣಯಿಸುವುದೆಂಬುದೇ ಕಷ್ಟವಾಗುತ್ತದೆ. ಇದಕ್ಕೆ ಮೊದಲೇ ಇನ್ನೊಂದು ಅನುಮಾನವಿದೆ. ಏನೆಂದರೆ ಈ ಕ್ಲಾಜಿನಲ್ಲಿರುವ ಪ್ರಕಾರ ಒಂದು ಹಳ್ಳಿಗೆ ಒಬ್ಬರಾದರೂ ಇರಬೇಕೆಂದಿದೆ. ಮಸಲ ಒಂದು ಊರಿನಲ್ಲಿ ಯಾರೂ ಉಮೇದುವಾರಿಕೆ ಅರ್ಜಿಯನ್ನೇ ಸಲ್ಲಿಸದೆ ಹೋದರೆ ಏನು ಮಾಡುವುದು? ಆಗ ಅವರಿಂದ ನಾಮಿನೇಷನ್ ಮುಖಾಂತರ ಯಾರನ್ನಾದರೂ ತೆಗೆದುಕೊಳ್ಳುವುದೇ ಅಥವಾ ಕೋ-ಆಪ್ಟ್ ಮಾಡಿಕೊಳ್ಳುವುದೇ ಎಂಬುದು ಯಾವುದೂ ಇಲ್ಲಿ ಸೂಚಿತವಾಗಿಲ್ಲ. ಒಂದು ವೇಳೆ ಯಾರಾದರೂ ಅರ್ಜಿ ಸಲ್ಲಿಸಿದ್ದು ಅವರ ಉಮೇದವಾರಿಕೆ ಅರ್ಜಿ ಸರಿಯಾಗಿಲ್ಲದೆ ಹೋದರೆ ಹೇಗೆ? ಇಂಥಾ ಸಂದರ್ಭಗಳಲ್ಲಿ ಊರಿಗೊಬ್ಬರು ಇರಲೇಬೇಕೆಂದು ಕಡ್ಡಾಯ ಮಾಡುವುದರಿಂದ ಕಷ್ಟ ಬರುತ್ತದೆ. ಹೀಗಿರುವಲ್ಲಿ ಈ ತಿದ್ದುಪಡಿಯ ಪ್ರಕಾರ ಬದಲಾವಣೆ ಮಾಡಿತೆಂದರೆ ಮತ್ತೂ ಕಷ್ಟ. ಆದ್ದರಿಂದ ಸದ್ಯಕ್ಕೆ ಈಗಿರುವುದೇ ಸರಿಯಾಗಿದೆ. ಇದರಲ್ಲೂ ಕೂಡ "Provided there are sufficient number of candidates" ಎಂದು ಒಂದು Proviso ಸೇರಿಸಿ ಯಾರೂ ಮುಂದೆ ಬರದೆ ಹೋದರೆ ನಾಮಿನೇಷನ್ ಮೂಲಕವಾಗಲಿ ಭರ್ತಿ ಮಾಡಬಹುದೆಂದು ಹೇಳಬಹುದಾಗಿತ್ತು. ಆದ್ದರಿಂದ ಈಗ ಇರುವುದರಲ್ಲೇ ತೊಡಕುಗಳು ಬರುವಂತೆ ಕಾಣುತ್ತವೆಂದು ಹೇಳಿ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಕಾರಣ ಇಷ್ಟೆ: ಈ ಮಸೂದೆಯ ಪ್ರಕಾರ ನಾಲ್ಕಾರು ಗ್ರಾಮಗಳು ಸೇರಿ ಒಂದು ಪಂಚಾಯ್ತಿ ಮಾಡುವ ಸಂದರ್ಭದಲ್ಲಿ ಆಯಾ ಗ್ರಾಮದ ಪ್ರಜಾಸಂಖ್ಯೆಗನುಗುಣವಾಗಿ ಎಲ್ಲಿ ಎಲ್ಲಾ ಗ್ರಾಮಗಳಿಗೂ ಪ್ರಾತಿನಿಧ್ಯ ದೊರಕದೆ ಹೋಗುತ್ತದೆಯೋ ಎಂದು ಹೇಳಿ ಕೆಲವು ಸ್ಥಾನಗಳನ್ನು ಕಾದಿಡೋಣ ಎಂಬ ಸದುದ್ದೇಶದಿಂದಲೇನೋ ಈ ತಿದ್ದುಪಡಿಯನ್ನು ತಂದಿದ್ದಾರೆ, ನಿಜ. ಆದರೆ ಹಾಗೆ ಮಾಡುವುದಾದರೆ ಹೀಗೆ ಕಾದಿರಿಸಿರುವ ಗುಟ್ಟನ್ನು ತಿಳಿದುಕೊಂಡು ಪ್ರತಿಯೊಂದು ಗ್ರಾಮದವರೂ ತಮ್ಮಲ್ಲಿನ ನಾಲ್ಕಾರು ಜನಗಳಿಗೆ ಮಾತ್ರವೇ ಓಟು ಕೊಡುತ್ತಾರೆ ಬಾಕಿ ಗ್ರಾಮದವರನ್ನು ಸಂಪೂರ್ಣವಾಗಿ ಬಿಟ್ಟೇ ಬಿಡುತ್ತಾರೆ. ಈಗ ನಾವು ಗ್ರೂಪ್ ಪಂಚಾಯ್ತಿಗಳನ್ನು ಮಾಡಿರುವುದಾದರೂ ಏಕೆ? ಈ ಪಂಚಾಯ್ತಿಗಳು ಒಂದು Corporate ಸಂಸ್ಥೆಯಾಗಿ ಎಲ್ಲರಲ್ಲಿಯೂ ಒಂದು ಸಾರ್ವಜನಿಕ ಭಾವನೆ ಉಂಟಾಗಬೇಕೆಂಬುದೇ ಆಗಿದೆ. ಎಲ್ಲಾ ಜನರಿಗೂ ಆ ಎಲ್ಲಾ ಗ್ರಾಮಗಳ ಹಿತಸಾಧನೆಯೂ ದೃಷ್ಟಿಯಲ್ಲಿರಬೇಕು. ಅಂಥಾದ್ದರಲ್ಲೂ ಈಗಲೂ ಒಂದು ಪ್ರೊವೈಸೋ ಸೇರಿಸಿ ಪ್ರತಿಯೊಂದು ಗ್ರಾಮಕ್ಕೂ ಕನಿಷ್ಠ ಪಕ್ಷ ಒಬ್ಬರಾದರೂ ಇರುವಂತೆ ಮಾಡಿದೆ. ಆದ್ದರಿಂದ ಈಗಿರುವ ರೀತಿಯೇ ಸಾಧುವಾಗಿದೆ ಅಂಥಾದ್ದರಲ್ಲೂ ಶ್ರೀ ಹುಚ್ಚೇಗೌಡರು ಒಂದು ಗ್ರಾಮದಿಂದ ಯಾರೂ ನಿಲ್ಲದೆ ಹೋದರೆ ಏನು ಮಾಡುವುದು ಎಂದು, ಒಂದು ಅನುಮಾನವನ್ನು ಸೂಚಿಸಿದರು. ಅಂಥ ಸಂದರ್ಭದಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಒಂದು ಸಾರಿ ಹಾಗೆ ಯಾರೂ ನಿಲ್ಲದೆ ತಮ್ಮ ಕಷ್ಟವನ್ನು ತಿಳಿಸುವುದಕ್ಕೆ ಯಾರೂ ಇಲ್ಲದೆ ಹೋಗಿ ಕಷ್ಟ ಬಂದರೆ ಅವರೇ-ಬುದ್ಧಿ ಕಲಿತುಕೊಳ್ಳುತ್ತಾರೆ. ಆಗ್ಗೆ ಬಲೋದ್ಬಂಧವಾಡಿ ಅವರೇ ಯಾರನ್ನಾದರೂ ನಿಲ್ಲಿಸುತ್ತಾರೆ. ಈ ಎಲ್ಲಾ ದೃಷ್ಟಿಯಿಂದ ಈಗಿರುವಂತೆಯೇ ಬಿಡುವುದು ಒಳ್ಳೆಯದು. ಪಂಚಾಯ್ತಿಗಳಲ್ಲ ಒಂದು ರೀತಿಯಲ್ಲಿ corporate life ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಅದು ಬಿಟ್ಟು ಈ ರೀತಿ ಪ್ರಾತಿನಿಧ್ಯವನ್ನು ಹಂಚಿಹಾಕಿದರೆ ನಿಮ್ಮ ಉದ್ದೇಶವೇ ಭಂಗವಾಗುತ್ತದೆ. ಆದ್ದರಿಂದ ನಾನಿದನ್ನು ವಿರೋಧಿಸುತ್ತೇನೆ.

Sri K. SAMPANGIRAMIAH (Kolar District—General).—I rise to oppose the amendment moved by Sri T. Madiah Gowda. This amendment raises a fundamental issue. Local Boards as contemplated by the Bill are for the purpose of representing localities and not population. There is a distinction between the House of Representatives and Local Boards. In the House of Representatives, representation is based upon population. In the Local Boards

(SRI K. SAMPANGIRAMIAH).

representation is on the localities concerned. The emphasis is on the locality concerned and so in the clause as amended by the Select Committee they have made provision for one member at least to represent a village.

If the amendment is accepted, the position would be like this. In a small village where it does not contain sufficient number of people, that locality will go without representation. As the amendment is based upon the population and not on the locality, it goes to the very root of the matter. Therefore, it cannot be accepted.

Mr. SPEAKER.—The House will now rise for lunch for half-an-hour.

The Assembly adjourned for Lunch at Thirty-two Minutes past Three of the Clock and reassembled at Eight Minutes past Four of the Clock, Mr. Speaker (The Hon'ble Sri V. Venkatappa) in the Chair.

---

*ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಶ್ರೀ ಟಿ. ಮಾದಯ್ಯಗೌಡರು ತಂದಿರತಕ್ಕ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ. ಈಗಾಗಲೇ ಅದರಲ್ಲಿ ಹೇಳಿರುವಪ್ರಕಾರ as far as possible ಎಂಬುದಾಗಿ, ಆ ಗ್ರಾಮದ ಪ್ರಜಾಸಂಖ್ಯೆಗನುಸಾರವಾಗಿ ಸದಸ್ಯರು ಇರಬೇಕೆಂಬುದಾಗಿ ತಿಳಿಸಿದ್ದಾರೆ. ಇವರ ಅಭಿಪ್ರಾಯದ ಪ್ರಕಾರ ನೋಡುವುದಾದರೆ ಪ್ರಜಾಸಂಖ್ಯೆಗನುಗುಣವಾಗಿ ಇದನ್ನು ಬದಲಾವಣೆಮಾಡಬೇಕೆಂಬುದಾಗಿರುವಂತೆ ತೋರುತ್ತಿದೆ. ಆದರೆ ಈಗ ಇರತಕ್ಕದ್ದೇ ಸರಿಯಾಗಿದೆಯೆಂಬುದಾಗಿ ಸಲೆಕ್ಟ್ ಸಮಿತಿಯವರು ಸಹ ಒಪ್ಪಿಕೊಂಡಿದ್ದಾರೆ. ಈಗ ಆ ಕ್ಲಾಜು ಇರತಕ್ಕ ರೀತಿ ಸರಿಯಾಗಿಯೇ ಇರುತ್ತೆ. ಇದನ್ನೇ ಸಿಂಧುವಾಗಿ ಮಾಡಿರುತ್ತಾರೆ. ಚುನಾವಣೆಸ್ಥಾನಗಳನ್ನು ಮಾಡುವಾಗಲೇ ಇದನ್ನೆಲ್ಲಾ ಪರಿಶೀಲಿಸಿಯೇ ಅವರು ಅದನ್ನು ಮಾಡಿರುತ್ತಾರೆ. ಆದರೆ ಈಗ ತಿದ್ದುಪಡಿಯಲ್ಲಿ ಮಾನ್ಯ ಸದಸ್ಯರು ಸೂಚಿಸಿರುವ ಪ್ರಕಾರ ಕಡ್ಡಾಯವಾಗಿ ಹೀಗೆಮಾಡಬೇಕೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಸೆಲ್‌ಕ್ಟ್ ಸಮಿತಿಯರು ಮಾಡಿರತಕ್ಕದ್ದೇಸರಿಯಾಗಿದೆ. ಆದಕಾರಣ ಇವರು ತಂದಿರುವ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು. (ತುಮಕೂರು ಜಿಲ್ಲೆ).—15 seats ordinarily ಎಂದು ಹೇಳಿದೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—Shall ordinarily ಎಂದು ಹೇಳಿದೆ.

Sri T. MADIAH GOWDA.—I withdraw the amendment, with the permission of the House.

The amendment, by leave of the House, withdrawn.

Mr. SPEAKER.—The question is:

"That Clause 5, as amended, stand part of the Bill."

The motion was adopted.

Clause 5, as amended, was added to the Bill.

Mr. SPEAKER.—Clause 6. Sri T. Madiah Gowda has an amendment.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—Sir, I beg to move:

"That in the first proviso the following words shall be added at the end:

"If there are at least 25 members belonging to the scheduled castes".

ಈಗ ಪ್ರತಿಯೊಂದು ಗ್ರಾಮಪಂಚಾಯಿತಿಗೂ ಒಬ್ಬೊಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಸದಸ್ಯರಿದ್ದೇ ಇರಬೇಕೆಂದು ಗೊತ್ತು ಮಾಡಿದೆ. ಕೆಲವು ಕಡೆ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನವರು ಸಿಕ್ಕದಿರುವ ಸಂದರ್ಭ ಬರಬಹುದು ಎಂದು ಊಹೆ ಮಾಡಿ ಈ ತಿದ್ದುಪಡಿಯನ್ನು ತಂದಿದ್ದೇನೆ. ಕೊನೆಯ ಪಕ್ಷ 5 ಮನೆಯವರಿದ್ದು ಮನೆಗೆ 5 ಜನರಂತೆ 25 ಜನರಿದ್ದರೂ ಒಬ್ಬರಿಗೆ ಕಡ್ಡಾಯವಾಗಿ ಅವಕಾಶ ಕೊಟ್ಟೇ ಕೊಡಬೇಕು. ಅಂಥ ಸಂದರ್ಭದಲ್ಲಿ ಈ ತರಹ ಕಾನೂನು ತಿದ್ದುಪಡಿ ಮಾಡಿದರೆ ಒಳ್ಳೆಯದು. ಕೊನೆಯಪಕ್ಷ 25 ಜನ ಆ ಪಂಗಡದವರಿದ್ದರೂ ಒಬ್ಬ ಸದಸ್ಯರಿಗಾದರೂ ಅವಕಾಶ ಕೊಡಬೇಕು. ಹಾಗಿಲ್ಲದಿದ್ದರೆ ಈ ಕಾನೂನು ಪ್ರಕಾರ ಒದಗಿಸಿರುವ ಸೌಲಭ್ಯ ತಪ್ಪಿಹೋಗಬಹುದು ಎಂಬ ಅನುಮಾನದಿಂದ ಈ ತಿದ್ದುಪಡಿಯನ್ನು ತಂದಿದ್ದೇನೆ.

Mr. SPEAKER.—Amendment moved:

"That in the first proviso the following words shall be added at the end:

'If there are at least 25 members belonging to the scheduled castes'.

*ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಈ ತಿದ್ದುಪಡಿಯ ಉದ್ದೇಶ ಸರಿಯಾಗಿರಬಹುದು. ಆದರೆ ಅದು ಸೂಕ್ತವಾಗಿ ಕಾಣುವುದಿಲ್ಲ. ಒಂದು ಕಡೆ 24 ಜನ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನವರು ಇದ್ದರೆಂದು ಭಾವಿಸೋಣ. ಆಗ ಈ ತಿದ್ದುಪಡಿ ಪ್ರಕಾರ ಅವರಿಗೆ ಅವಕಾಶ ಬೇಡ ಎಂದು ಹೇಳಿದ ಹಾಗಾಗುತ್ತದೆ. ಒಂದೇ ಸಂಸಾರವಿದ್ದು 25 ಜನರಿಗಿಂತ ಕಡಮೆ ಸಂಖ್ಯೆಯಿರುವ ಸಂದರ್ಭದಲ್ಲಿ ಒಳ್ಳೆಯ ಪ್ರಭಾವಶಾಲಿಗಳಿದ್ದರೂ ಕೂಡ ದೇಶದ ಹಿತದೃಷ್ಟಿಯಲ್ಲಿ ಕೆಲಸಮಾಡಲು ಅವರಿಗೆ ಅವಕಾಶ ತಪ್ಪಿ ಹೋಗುತ್ತದೆ. ಒಳ್ಳೆಯ ನಾಗರಿಕ ಪ್ರಜೆಗೆ ಮತ್ತು ವಿದ್ಯಾವಂತನಿಗೆ ಸೇವೆ ಸಲ್ಲಿಸಲು ಅವಕಾಶವಿರುವುದಿಲ್ಲ. ಸ್ಥಾನವನ್ನು ಮೀಸಲಾಗಿಡದಿದ್ದರೆ ಹಳ್ಳಿಯವರು ಮೇಲ್ಮಟ್ಟಕ್ಕೆ ಬರುವುದಕ್ಕೆ ಅವಕಾಶವಿರುವುದಿಲ್ಲ. ಇರುವ ಒಂದು ಅವಕಾಶವನ್ನು ತಪ್ಪಿಸಿದ ಹಾಗಾಗು

ತ್ತದೆ. ಒಟ್ಟಿನಲ್ಲಿ ಗ್ರಾಮಾಂತರಗಳಲ್ಲಿರುವವರಿಗೆ, ಅದರಲ್ಲೂ ಕಡಮೆ ಜನಸಂಖ್ಯೆಯಿರುವವರಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆ. ಈಗ ಹಳ್ಳಿಗಾಡಿನಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ನಾಮಿನೇಟ್ ಮಾಡುತ್ತಿದ್ದಾರೆ. ಹಾಗೆ ಅವಕಾಶ ಕಲ್ಪಿಸಿರುವುದು ಮಾನ್ಯ ಸದಸ್ಯರಿಗೆ ಗೊತ್ತೇ ಇದೆ. ಅದನ್ನು ತಪ್ಪಿಸಿದರೆ ಮುಂದೆ ನಾಗರೀಕರಾಗಿ ಮುಂದೆ ಬರುವವರಿಗೆ ಇರುವ ಅವಕಾಶವನ್ನು ಕಡಿಮೆ ಮಾಡಿದ ಹಾಗಾಗುತ್ತದೆ. ಆದ್ದರಿಂದ ಆ ರೀತಿ ನಿರ್ಬಂಧ ಪಡಿಸುವುದು ಸರಿಯಲ್ಲವೆಂದು ಹೇಳಿ ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

ಶ್ರೀ ಟಿ. ಮಾದಯ್ಯಗೌಡರು.—'Shall be reserved' ಎಂದು ಪ್ರಾವಿಸೋದಲ್ಲೇ ಹೇಳಿದೆ. ಒಂದು ವೇಳೆ ಆ ಜನಾಂಗವು ಇಲ್ಲದಿದ್ದರೆ ಏನು ಮಾಡುವುದು ಎಂಬ ಉದ್ದೇಶದಿಂದ ನಾನು ಈ ತಿದ್ದುಪಡಿಯನ್ನು ಸೂಚಿಸಿದೆ.

ಶ್ರೀ ಎಂ. ಮಾದಯ್ಯನವರು.—ನಮ್ಮ ಸೀಮೆಯಲ್ಲಿ ಹರಿಜನರಿಲ್ಲದಿರುವ ಊರೇ ಇಲ್ಲ. ಹಾಗಿರುವಾಗ ಶ್ರೀ ಮಾದಯ್ಯಗೌಡರು ಅದರಲ್ಲೂ ಗ್ರಾಮಾಂತರಗಳ ವಿಚಾರದಲ್ಲಿ ಬಹಳವಾಗಿ ಹೊಡೆದಾಡುತ್ತಿದ್ದವರು ಈ ತರಹ ತಿದ್ದುಪಡಿಯನ್ನು ತಂದಿರುವುದು ಸರಿಯಲ್ಲ: ಅವರು ವಿಶೇಷ ರೀತಿಯ ಉತ್ತೇಜನ ಕೊಡತಕ್ಕವರು. ಅವರ ಉದ್ದೇಶ ಚೆನ್ನಾಗಿದೆ. ಆದ್ದರಿಂದ ದಯವಿಟ್ಟು ಈ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಮುಖ್ಯವಾಗಿ 25 ಜನರಿಗೆ ಕಡಿಮೆಯಿದ್ದರೂ ಒಂದು ಸ್ಥಾನ ಮೀಸಲಾಗಿಡಬೇಕಾದ್ದು ಆವಶ್ಯಕ. ಏಕೆಂದರೆ ಕಡಿಮೆ ಸಂಖ್ಯೆಯ ಜನರಿರುವಾಗ ಕಿರುಕುಳ ಹೆಚ್ಚಬಹುದು. ಆಗ ಅವರು ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವುದು ಬಹು ಕಷ್ಟ. ಒಬ್ಬ ನಿಮ್ನವರ್ಗದ ವಯಸ್ಕನಿದ್ದರೂ ಸಹ ಅವನನ್ನು ಚುನಾಯಿಸುವುದು ಅಗತ್ಯ. ಅದಲ್ಲದೆ ಶ್ರೀ ಮಾದಯ್ಯನವರು ಹೇಳುವ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ. ಅವರು ನಾಗರಿಕ ಅಥವಾ ವಿದ್ಯಾವಂತನಾದರೆ ಸದಸ್ಯನಾಗಬಹುದು ಎಂಬ ಅಭಿಪ್ರಾಯ ಸೂಚಿಸಿದರು. ಆದರೆ ನಾಗರೀಕರಾಗಿಯೂ, ಬುದ್ಧಿವಂತರಾಗಿಯೂ ಮಾಡುವುದು ನಮ್ಮ ಕರ್ತವ್ಯ. ವಿದ್ಯಾವಂತರೇ ಆಗಬೇಕು, ನಾಗರೀಕರೇ ಆಗಬೇಕು ಎಂದು ಹೇಳಿದರೆ ಯಾರೂ ಸಿಕ್ಕುವುದಿಲ್ಲ. ಆಗ ಅವರಿಗಿರುವ ಅವಕಾಶ ತಪ್ಪಿ ಕಷ್ಟವಾಗುತ್ತದೆ. ಆದ್ದರಿಂದ ಒಬ್ಬನಿದ್ದರೂ ಸಹ ಆತನಿಗೆ ಪ್ರಾತಿನಿಧ್ಯವಿದ್ದೇ ಇರಬೇಕು. ಎಷ್ಟು ಕಡಮೆ ಜನರಿದ್ದರೂ ಅವರಿಗೆ ತೊಂದರೆಯಿದ್ದೇ ಇರುತ್ತದೆ.

ಆಮೇಲೆ ಒಂದು ವೇಳೆ ಅರ್ಹರಾದವರು ಯಾರೂ ಇಲ್ಲದಿದ್ದರೆ ಚುನಾವಣೆ ಹೇಗೆ ನಡೆಯಬೇಕು ಎಂಬ ಸಂದೇಹ ಬರಬಹುದು. ಅಂಥ ಸಂದರ್ಭ ಬಂದರೆ ನಾಮಿನೇಟ್ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶವಿರಬೇಕು. ಮೊದಲು ಹತ್ತುವರ್ಷಗಳವರೆಗೆ ಈ ಪಂಗಡಕ್ಕೆ ನಾಮಿನೇಟ್ ಮಾಡಲು ಸರ್ಕಾರದವರು ಅಧಿಕಾರವನ್ನು ಉಳಿಸಿಕೊಳ್ಳಬಹುದು. ಈ ರೀತಿ ಮಾಡಿದ್ದರೆ ಚೆನ್ನಾಗಿತ್ತು.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಈ ತಿದ್ದುಪಡಿಯನ್ನು ವಿರೋಧಿಸಬೇಕಾಗಿದೆ. ಏಕೆಂದರೆ ಸಾಮಾನ್ಯವಾಗಿ ಒಂದು ಸಾವಿರದಿಂದ ಎರಡು ಸಾವಿರದವರೆಗೆ ಜನಸಂಖ್ಯೆಯಿರುವ ಪ್ರದೇಶದಲ್ಲಿ ಒಂದು ಪಂಚಾಯಿತಿ ಮಾಡುತ್ತೇವೆ. ಅಂಥ ಸಂದರ್ಭದಲ್ಲಿ 25 ಮಂದಿಯಾದರೂ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಸದಸ್ಯರಿರುವುದಿಲ್ಲ ಎಂದು ಹೇಳುವುದು ಆಶ್ಚರ್ಯಕರವಾಗಿದೆ. ಅದೂ ಅಲ್ಲದೆ ಮಾನ್ಯ ಮಿತ್ರರು ಹರಿಜನರನ್ನು ಮಾತ್ರ ಗಮನದಲ್ಲಿಟ್ಟಿರುವ ಹಾಗೆ ಕಾಣುತ್ತದೆ. ಅವರಲ್ಲದೆ ಇತರ ಪಂಗಡಗಳೂ ಇದಕ್ಕೆ ಸೇರುತ್ತವೆ. ಹಾಗಿರುವಾಗ ಯಾವ ಪ್ರದೇಶ ತೆಗೆದುಕೊಂಡರೂ ಒಂದು ಸಾವಿರದಿಂದ ಎರಡು ಸಾವಿರ ಜನಸಂಖ್ಯೆಯಿರುವ ಕಡೆ 25 ಕ್ಕಿಂತ ಕಡಮೆ ಈ ಪಂಗಡದವರಿರುವ ಪ್ರದೇಶ ಯಾವುದೂ ಇಲ್ಲ. ಆದ್ದರಿಂದ ಇಂಥ ತಿದ್ದುಪಡಿಯನ್ನು ತರುವುದು ಸೂಕ್ತವಲ್ಲ, ಅದರಿಂದ ಪ್ರಯೋಜನವಿಲ್ಲವೆಂದು ತಿಳಿಸಿ ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

*ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ ಈಗತಾನೆ ಶ್ರೀ ಸಂಪಂಗಿರಾಮಯ್ಯನವರು ಹೇಳಿದಹಾಗೆ ಒಂದು ಪಂಚಾಯಿತಿಯಾಗಬೇಕಾದರೆ ಕೊನೆಯ ಪಕ್ಷ ಸಾಮಾನ್ಯವಾಗಿ ಮೈದಾನ ಪ್ರಾಂತಗಳಲ್ಲಿ ಎರಡುಸಾವಿರ ಜನಸಂಖ್ಯೆ ಮಲೆನಾಡು ಪ್ರಾಂತಗಳಲ್ಲಿ ಒಂದುಸಾವಿರ ಜನಸಂಖ್ಯೆ ಆದರೂ ಇರಬಹುದು. ಆ ಎರಡುಸಾವಿರದಲ್ಲಿ 25 ಜನರಾದರೂ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನವರಿರುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ; ಇದ್ದೇ ಇರುತ್ತಾರೆ. ಒಂದು ವೇಳೆ ಈ ತಿದ್ದುಪಡಿಯನ್ನು ಒಪ್ಪಿದರೂ ಸಾಕಷ್ಟು ಪ್ರಯೋಜನವಾಗುವುದಿಲ್ಲ. ಹಾಗೆ 25 ಜನರಿದ್ದರೂ ಒಬ್ಬ ಸದಸ್ಯರಾದರೂ ಇರಬೇಕೆಂದು ಶಿಫಾರ್ಸು ಮಾಡಿದೆ. ಹಾಗಿರುವಾಗ ಈ ತಿದ್ದುಪಡಿ ಮಾಡಿದರೆ 25 ಜನರಿಗೆ ಕಡಮೆಯಾದರೆ ಒಬ್ಬ ಸದಸ್ಯರೂ ಬೇಕಾಗಿಲ್ಲ ಎಂಬ ಅರ್ಥ ಕೊಡುತ್ತದೆ. ಆದ್ದರಿಂದ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಸಾಧಾರಣವಾಗಿ ಕೆಲವು ಹಳ್ಳಿಗಳನ್ನು ಸೇರಿಸಿ ಒಂದು ಪಂಚಾಯಿತಿ ಮಾಡುವುದು. ಎರಡು ಮೂರು ಹಳ್ಳಿ ಸೇರಿಸುವಾಗ ಅದರಲ್ಲಿ ಆದಿಕರ್ಣಾಟಕ, ಕೊರಚ, ಕೊರಮ, ಲಂಬಾಣಿ ಮುಂತಾದ ಪಂಗಡದವರು ಇದ್ದೇ ಇರುತ್ತಾರೆ. ಈಗ ಮಾಡಿರುವ ಕಾನೂನಿನ ಪ್ರಕಾರ ಯಾವ ತೊಂದರೆಯೂ ಆಗುವುದಿಲ್ಲವೆಂಬ ನಂಬಿಕೆಯಿದೆ. ಆ ಕಾರಣದಿಂದ ಇಂಥ ಷರತ್ತನ್ನು ಹಾಕುವುದು ಸೂಕ್ತವಲ್ಲ. ಆದ್ದರಿಂದ ಒಪ್ಪುವುದಕ್ಕಾಗುವುದಿಲ್ಲ, ದಯವಿಟ್ಟು ವಾಪಸು ತೆಗೆದುಕೊಳ್ಳಬೇಕು ಎಂದು ಸೂಚಿಸುತ್ತೇನೆ.

Sri T. MADIAH GOWDA.—I seek the leave of the House and withdraw my amendment.

The amendment was, by leave of the House, withdrawn.

Mr. SPEAKER.—There is another amendment. It is by the Hon'ble Minister for Local Self-Government.

The Hon'ble Sri R. CHENNIGARAMIAH.—I beg to move:

"That after the second proviso, the following words shall be added as the third proviso:

"Provided further that the second proviso to this Section shall not affect any representation in a Panchayet until the expiry of the term of office of its members."

(THE HON'BLE SRI R. CHENNIGARAMIAH).

In other cases, in regard to District Boards and other Municipalites, this proviso has been employed but in this case it has been omitted. I want this proviso to be inserted.

Mr. SPEAKER.—Amendment moved:

"That after the second proviso, the following words shall be added as the third proviso:

"Provided further that the second proviso to this Section shall not affect any representation in a Panchayet until the expiry of the term of office of its members."

***ಶ್ರೀ ಎಂ. ಮಾದಯ್ಯನವರು.**—(ಮೈಸೂರು ಜಿಲ್ಲೆ—ನಿಮ್ನ ಪಂಗಡ).—ನಾನು ಇದನ್ನು ಅನುಮೋದಿಸುತ್ತೇನೆ. ಇದರಲ್ಲಿ ಒಂದು ಅನುಮಾನ ಬಂದಿದೆ. ಅದನ್ನು ಸ್ಪಷ್ಟೀಕರಿಸಬೇಕು.

"Provided further that the second proviso to this section shall not affect any representation in a panchyet until the expiry of the term of office of its members."

ಎಂಬುದಾಗಿ ಇದೆ. ಇದರಜೊತೆಗೆ

"If must be subject to the other provisions of the Act."

ಎಂದು ಸೇರಿಸಿಕೊಂಡರೆ ಇನ್ನೂ ಚೆನ್ನಾಗಿರುತ್ತದೆಂದು ಕಾಣುತ್ತದೆ.

The Hon'ble Sri K. T. BHASHYAM.—The object of adding this proviso is this. We say after ten years this reservation will cease. Supposing we pass this Bill now in 1951. In 1961 it will cease to operate so far as the reservation of seats is concerned. Supposing a member is elected in 1959 or 1960 and the period of the Panchayet being four years, there is still some period to run. Then somebody may rise and say it ceases to have any operation after 1961 and so the member cannot have the reserved seat. We want to avoid such a contingency and say that if a member has been elected prior to 1961 and if there is still some period for the Village Panchayet or District Board to run he will continue until the expiry of the term of the local body. It is purely an enabling clause.

ಶ್ರೀ ಎಂ. ಮಾದಯ್ಯನವರು.—ಮಾನ್ಯ ನ್ಯಾಯಾಂಗ ಸಚಿವರು ಏನು ಹೇಳಿದರೋ ಅದನ್ನೇ ನಾನೂ ಹೇಳಿರುವುದು. ಅದನ್ನು ಪುಷ್ಟೀಕರಿಸುತ್ತೇನೆ.

There is another clause disqualifying the members of the Panchayet.

The Hon'ble Sri K. T. BHASHYAM.—It shall not affect any representation in a Panchayet. That is all. The question of qualification or disqualification does not arise here.

ಶ್ರೀ ಎಂ. ಮಾದಯ್ಯನವರು.—ಈಗ ಒಂದು ಸೀಟು ರಿಸರ್ವ್ ಮಾಡಿರುತ್ತೀರಿ. ಒಂದು ಪಂಚಾಯಿತಿ ಒಳಗೆ ಚುನಾವಣೆ ಆಗುತ್ತದೆ. ಚುನಾವಣೆಯಾದ ಎರಡು ವರ್ಷದ ಮೇಲೆ ಆತನ ಒಂದು ಕ್ರಿಮಿನಲ್ ತಕ್ಸೀರಿಗೆ ಒಳಗಾಗುತ್ತಾನೆ. ಆಗ ಆತನಿಗೆ ನಾಲ್ಕು ವರ್ಷ ಶಿಕ್ಷೆಯಾಗುತ್ತದೆ. ಅಂಥ ಸಂದರ್ಭದಲ್ಲಿ "it shall not affect" ಎಂದರೆ ಹೇಗೆ ?

The Hon'ble Sri K. T. BHASHYAM.—It does not follow. It merely says that this cessation of reservation shall not come in the way of his continuance in office provided of course he satisfies the other requirements. If he becomes disqualified naturally he will go out.

***The Hon'ble Sri R. CHENNIGARAMIAH.**—This reservation is provided for ten years. If the term of office continues beyond ten years, the membership will not cease automatically. The person will continue as a member till the expiry of the term. So in order to enable the member to continue till the expiry of the term of office, this proviso has been brought in.

Mr. SPEAKER.—The question is:

"That after the second proviso, the following words shall be added as the third proviso:—

"Provided further that the second proviso to this section shall not affect any representation in a Panchayet until the expiry of the term of office of its members."

The motion was adopted.

Mr. SPEAKER.—The question is:

"That Clause 6, as amended, stand part of the Bill."

The motion was adopted.

Clause 6, as amended, was added to the Bill.

Sri T. MADIAH GOWDA.—As I have already represented, this House may adjourn now and the other amendments taken up to-morrow, because all are not fully prepared to take up the other amendments for consideration.

Sri M. N. JOIS (Mysore District—General).—I also agree with Sri T. Madiah Gowda, if the Hon'ble Leader of the House will come to our aid, because there are very important

amendments coming up for consideration and it is better to take them up to-morrow.

The Hon'ble Sri K. T. BHASHYAM.—I may say on behalf of the Hon'ble Leader of the House that the time at our disposal is so short that we should like to continue, but as Hon'ble Members feel that some more time is necessary, we do not wish to come in the way, but this should not be a precedent.

Mr. SPEAKER.—If Sri T. Madiah Gowda had sent in the amendments in time, there would have been no difficulty at all.

Is it the desire of the House that the other clauses of this Bill should be taken up to-morrow?

(Several Members: Yes).

Mr. SPEAKER.—The House will now adjourn and meet to-morrow at One of the Clock.

The Assembly adjourned at Twenty-six Minutes past Four of the Clock to meet again at One of the Clock on Wednesday, 30th May 1951.

WD 3189—GPB—500—5-7-51

ಕರ್ನಾಟಕ ರಾಜ್ಯ ಪತ್ರಾಗಾರ (B)
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No. 4707
ದಿನಾಂಕ Date........................

LEGISLATIVE ASSEMBLY.

TWENTY-SECOND DAY.

Thursday, 30th May 1951.

The Assembly met in the Assembly Hall, Old Public Offices, Bangalore, at One of the Clock.

Mr. Deputy Speaker (Sri L. H. Thimma Boyi) in the Chair.

STARRED QUESTIONS.

(to which oral answers were given.)

MR. DEPUTY SPEAKER (Sri L. H. Thimma Boyi).—Questions. Question No. 122. Sri D. H. Chandrasekharaiya.

Development Schemes submitted to the Government of India Planning Commissions for approval.

*Q.—122. SRI D. H. CHANDRASEKHARAIYA (Chitaldrug District—General).—

Will the Government be pleased to state:—

(*a*) the Development Schemes which have been submitted to the Government of India (Planning Commission) for consideration and approval;

(*b*) whether copies of these schemes will be made available to the members of the House for information?

A.—THE HON'BLE SRI K. CHENGALARAYA REDDY (Chief Minister).—

(*a*) and (*b*) They are deemed confidential till they are considered and approved by the Government of India.

SRI D. H. CHANDRASEKHARAIYA.—Have the schemes been now approved by the Government of India?

THE HON'BLE SRI K. CHENGALARAYA REDDY.—Recently there have been discussions between the representatives of the Mysore Government and the Government of India and certain decisions have been arrived at. But still they have not been finalised. They are still in a confidential stage. They will be ready for publication in about a week's time. We are also considering to release to the Press the summary of the decisions that have been arrived at so far.

SRI D. H. CHANDRASEKHARAIYA.—Has any proportion been fixed of the expenditure to be borne by the Government of Mysore and the Government of India?

THE HON'BLE SRI K. CHENGALARAYA REDDY.—I may indicate that the plans as now agreed upon cost about Rs. 32 crores out of which it is presumed that the Government of India will make available about 8 crores as loan.

SRI D. H. CHANDRASEKHARAIYA.—Does this expenditure of Rs. 32 crores refer to any scheme covering any particular period?

THE HON'BLE SRI K. CHENGALARAYA REDDY.—Yes, five-year period.

SRI D. H. CHANDRASEKHARAIYA.—Have the Government considered the steps to be taken to provide the quota to be provided for by the Government of Mysore regarding the implementation of the scheme approved?

THE HON'BLE SRI K. CHENGALARAYA REDDY.—The plans have been drawn up on a realistic basis. It is keeping this permanently in view that the plans have been drawn up and it is hoped that when the scheme is finalised it will be possible to implement it.

SRI D. H. CHANDRASEKHARAIYA.—Does the scheme include expansion of education also?

THE HON'BLE SRI K. CHENGALARAYA REDDY.—Yes.

Sri A. BHEEMAPPA NAIK (Chitaldrug District—General).—Where is the question of confidential nature when the Hon'ble Minister is giving out details now?

The Hon'ble Sri K. CHENGALARAYA REDDY.—When the reply to this question was given at the time of the last session, the plans were deemed to be confidential because the Government desired it to be kept confidential till an understanding was arrived at and since then discussions have taken place and decisions arrived at. And we are also desirous of distributing copies of the plans to the Hon'ble Members.

Sri D. H. CHANDRASEKHARAIYA.—When do the Government expect the schemes to be finalised?

The Hon'ble Sri K. CHENGALARAYA REDDY.—The schemes have been finalised, but the procedure is as follows:—

The National Planning Commission will submit all the plans that they have decided upon for the whole of India in the first instance to the Government of India. The Government of India will then publish or place all the plans before the Parliament. As part of the overall plan, the Mysore plan will also be included in it. So the plans now decided will be further dealt with by the Government of India and they have to arrive at a decision in consultation with the Parliament and then we could say that the plans are finalised and not before that.

Sri D. H. CHANDRASEKHARAIYA.—If the schemes have been finalised between the Mysore Government and the Government of India, what difficulty is there for this Government to publish the scheme with the permission of the Government of India?

The Hon'ble Sri K. CHENGALARAYA REDDY.—I would like to clarify the position still further. What is now being attempted is not separate State plans, each one State standing by itself but an All-India plan so that there may be no duplication of effort or energy or the spending of finances. So realising that an All-India plan is necessary, the National Planning Commission has been set up at the Centre. Certain Inter-Departmental Planning Committees have been set up and the various States were asked to send up plans. It was done. It was at that stage that the interpellation was put and I replied that they were confidential. The Planning Commission considered all these plans of the various States and an overall plan is evolved then. Till the overall plan is finalised, we do not know what the Mysore plan is. We cannot finalise it ourselves.

Sri A. BHEEMAPPA NAIK.—Why should it be confidential? After all the recommendations have been sent and we are all interested to know the plans. Would we not be in a better position to know what it is if a copy is given to our hands?

The Hon'ble Sri K. CHENGALARAYA REDDY.—The confidential stage is practically over. As much information as is possible and all relevant information will be made available to the Hon'ble Members at a very early date, as I have already indicated.

Sri M. GOVINDA REDDY (Chitaldrug District—General).—Are the plans of the Mysore Government to be subjected to further scrutiny?

The Hon'ble Sri K. CHENGALARAYA REDDY.—No scrutiny. The plans have been discussed. The whole question is one of finance. To what extent we can implement the plans when once they are adopted, is the main thing now. As I said earlier, the whole thing has to be dealt with on a realistic basis. If I may indicate, the original plan would have cost Rs. 80 crores. Where is the finance to come from? Is it from the State's stores or from the stores of the centre and if so in what proportion—all these things have to be taken into consideration.

Sri M. GOVINDA REDDY.—Are these plans to be approved by the Planning Commission?

The Hon'ble Sri K. CHENGALARAYA REDDY.—I have already answered this question. The National Planning Commission will consider all these plans for the whole of India, and the Government of India will probably consider the overall plan for the whole

of India. So it is that all the State plans have got to be considered in that context.

Sri M. GOVINDA REDDY.—After approval by the Planning Commission and before these plans are sent to the Government of India, are they to be subjected to revision or scrutiny by any other authority?

The Hon'ble Sri K. CHENGALARAYA REDDY.—I do not think so. The National Planning Commission will submit its plans and the Government of India may consider the action to be taken on them.

Sri M. GOVINDA REDDY.—Will the Government of India approve of these plans on the basis of the funds available or on the merits of each plan?

The Hon'ble Sri K. CHENGALARAYA REDDY.—Taking all aspects into consideration, the Government of India will have to take a decision.

Sri H. SIDDAVEERAPPA (Chitaldrug District—General).—Are any development schemes already in operation in Mysore State?

The Hon'ble Sri K. CHENGALARAYA REDDY.—Yes; some of them.

Sri H. SIDDAVEERAPPA.—What will happen to those schemes after these schemes have been sanctioned?

The Hon'ble Sri K. CHENGALARAYA REDDY.—We have provided for the completion of incomplete schemes. Obviously they will get priority.

Sri D. M. SIDDIAH (Mysore District—General).—When are these plans supposed to be given effect to?

The Hon'ble Sri K. CHENGALARAYA REDDY.—During the course of five years; some plans during the first two years and the other plans during the next three years; the overall period is five years.

Sri D. M. SIDDIAH.—What I am asking is when these plans are going to be implemented?

The Hon'ble Sri K. CHENGALARAYA REDDY.—From 51-52.

Sri D. M. SIDDIAH.—Is any radical change suggested in the scheme with regard to the system of education?

The Hon'ble Sri K. CHENGALARAYA REDDY.—No change in the system of education is thought of. We have considered what amount could be made available for expanding educational facilities in the State in general.

Sri D. M. SIDDIAH.—Is basic education contemplated in this plan?

The Hon'ble Sri K. CHENGALARAYA REDDY.—Yes.

Sri D. M. SIDDIAH.—Is improving the standard of living of the people included in the plan?

The Hon'ble Sri K. CHENGALARAYA REDDY.—Surely; the whole plan is intended for it.

Sri H. C. LINGA REDDY (Kolar District—General).—Are the Government aware of the recent communique issued by the Government of India with regard to development plans of Mysore?

Thi Hon'ble Sri K. CHENGALARAYA REDDY.—Yes.

Sri H. C. LINGA REDDY.—Does it mean that only eight crores will be set apart for these schemes as per the communique of the Government of India?

The Hon'ble Sri K. CHENGALARAYA REDDY.—That is what is assumed now.

Sri H. C. LINGA REDDY.—Is it true that one of the Ministers has said in his statement that 16 crores of rupees will be given by the Government of India?

The Hon'ble Sri K. CHENGALARAYA REDDY.—No.

Sri H. C. LINGA REDDY.—What are the various development plans and the amounts required, according to plans prepared by the State?

The Hon'ble Sri K. CHENGALARAYA REDDY.—All that information will be available to the Hon'ble Members when copies of the detailed plans will be distributed to them.

Sri H. C. LINGA REDDY.—When will they be distributed?

The Hon'ble Sri K. CHENGALARAYA REDDY.—I have already answered; as early as possible.

Sri H. C. LINGA REDDY.—Will it not be better if Mysore has a Planning Commission of its own so that it may go into the plans in detail and then send them on to the Government of India?

The Hon'ble Sri K. CHENGALARAYA REDDY.—That is a matter of opinion. The drafting of the plan is practically over.

Sri H. C. LINGA REDDY.—Has not our neighbouring State of Madras set up a Planning Commission of its own for that State?

The Hon'ble Sri K. CHENGALARAYA REDDY.—We have also a departmental Planning Committee now.

Sri H. C. LINGA REDDY.—Will it not be advisable to have non-official members on the Committee?

The Hon'ble Sri K. CHENGALARAYA REDDY.—Certainly; it is a worthwhile suggestion and we will consider that.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟಂತೆ ಈ ಸ್ಕೀಮನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವುದಕ್ಕೆ ಮುಂಚೆ ಈ ಸಭಾ ಸದಸ್ಯರ ಅಭಿಪ್ರಾಯವನ್ನೇನಾದರೂ ತೆಗೆದುಕೊಂಡು ಕಳುಹಿಸಿದಿರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನಾನಾಗಲೇ ಹೇಳಿದಂತೆ, ತೆಗೆದುಕೊಳ್ಳಬಹುದಾಗಿತ್ತು. ಆದರೂ, ನನಗೆ ತಿಳಿದ ಮಟ್ಟಿಗೆ ಆ ರೀತಿ ಇತರೇ ಯಾವ ಪ್ರಾಂತ ಶಾಸನ ಸಭೆಗಳಲ್ಲೂ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದು ಕಳುಹಿಸಿಕೊಟ್ಟ ಹಾಗೆ ಕಾಣುವುದಿಲ್ಲ. ಇದರಲ್ಲೊಂದು ಕಷ್ಟವೂ ಇದೆ. ಪ್ರತಿಯೊಂದು ಸ್ಟೇಜಿಗೂ informal ಆಗಿ ವಿಮರ್ಶೆ ಮಾಡಿ ನಾವು ನಮ್ಮ ಅಭಿಪ್ರಾಯವನ್ನು ಕಳುಹಿಸಿಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ ಮುಂಚೆ ನಮಗೊಂದು ಪ್ಲಾನು ಬರುತ್ತದೆ. ಅದರ ಮೇಲೆ ನಮ್ಮ ಅಭಿಪ್ರಾಯ ತಿಳಿಸಿದ ಮೇಲೆ ಅವರು ಪುನಃ ಯಾವುದಾದರೂ ವಿವರಗಳನ್ನು ಕೇಳಬಹುದು. ಹೀಗೆ ಅವರು ಬರೆಯುವುದು, ನಾವು ಉತ್ತರ ಕೊಡುವುದು, ಮತ್ತೆ ಅವರು ಕೇಳುವುದು—ಈ ರೀತಿ ಒಂದು ಅನಿರ್ದಿಷ್ಟ ಪರಿಸ್ಥಿತಿಯಿರುವುದರಿಂದ ಯಾವುದೊಂದನ್ನೂ ಅಖೈರಾಗಿ ಈ ಸಭೆಯ ಮುಂದಿಟ್ಟು ಚರ್ಚೆ ಮಾಡಿ ಕಳುಹಿಸುವುದು ಕಷ್ಟವಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಈ ಕಷ್ಟವನ್ನು ತಪ್ಪಿಸುವುದಕ್ಕಾಗಿ ನೀವೊಂದು inter-departmental Committee ಮಾಡಿರುವುದರಲ್ಲೇ ಕೆಲವು ಖಾಸಗಿ ಸದಸ್ಯರನ್ನು ಸೇರಿಸಿಕೊಂಡಿದ್ದರೆ ಚೆನ್ನಾಗಿತ್ತಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹಾಗೆ ಮಾಡಬಹುದಾಗಿತ್ತು ಎಂದು ಆಗಲೇ ಹೇಳಿದ್ದೇನೆ.

The Hon'ble Sri H. C. DASAPPA.—We are all non-officials in a way.

ಶ್ರೀ ಎಲ್. ಸಿದ್ದಪ್ಪನವರು.—For the time being ಏನೋ ಹೌದು. ಆದರೂ, ಈಗಲೂ ನೀವೇನು ಸ್ಕೀಮನ್ನು ಕಳುಹಿಸಿಕೊಟ್ಟಿದ್ದೀರೋ ಅದನ್ನು ಈ ಸಭೆಯ ಮುಂದಿಟ್ಟು ಈ ಸದಸ್ಯರ ಅಭಿಪ್ರಾಯವನ್ನೂ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇನ್ನು ಕೆಲವು ದಿವಸಗಳಲ್ಲೇ ಆ ಪ್ಲಾನನ್ನು ಪ್ರಕಟಣೆ ಮಾಡುತ್ತೇವೆ. ಅದರ ಮೇಲೆ ಸಭೆಯವರು ಚರ್ಚೆ ಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸುವುದರಲ್ಲೇನೂ ತೊಂದರೆಯಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ಹಾಗೆ ಎಲ್ಲವೂ ಪೂರ್ತಿಯಾಗಿ ಬಿಟ್ಟ ಮೇಲೆ ನಾವು ಮತ್ತೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಈ ಯೋಜನೆಗಳನ್ನು finalise ಮಾಡುವುದಕ್ಕೆ ಮುಂಚೆ ಒಮ್ಮೆ ಈ ಸಭೆಯವರು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಂಡಿಯಾ ಸರ್ಕಾರದ ನ್ಯಾಷನಲ್ ಪ್ಲಾನಿಂಗ್ ಕಮಿಷನ್ನಿನವರು ಜೂನ್ 8 ಕ್ಕೋ 12 ಕ್ಕೋ ತಮ್ಮ ಅಖೈರು ಯೋಜನೆಯನ್ನು ಸರ್ಕಾರಕ್ಕೆ ಕಳುಹಿಸಕೊಡಬೇಕೆಂದು ಯೋಚನೆ ಮಾಡಿಕೊಂಡಿದ್ದಾರೆ. ಅಂತೂ ಇಂಡಿಯಾ ಸರ್ಕಾರದವರು ಜೂನ್ ತಿಂಗಳಿನೊಳಗೆ ಈ ಸ್ಕೀಮನ್ನು finalise ಮಾಡಬೇಕೆಂದಿದ್ದಾರೆ. ಸಂದರ್ಭ ಹೀಗಿರುವಾಗ ನಾವದನ್ನು ಇಲ್ಲಿ ಪುನಃ ವಿಮರ್ಶೆ ಮಾಡಿ ನಮ್ಮ ಅಭಿಪ್ರಾಯಗಳನ್ನು ಆ ನ್ಯಾಷನಲ್ ಪ್ಲಾನಿಂಗ್ ಸಮಿತಿಗೆ ಕಳುಹಿಸಿಕೊಟ್ಟು ಅವರು ಅದರಂತೆ ಸ್ಕೀಮನ್ನು ಬದಲಾವಣೆ ಮಾಡಿ ಕಳುಹಿಸಿ ಕೊಡುವುದು ಎಷ್ಟು ಮಾತ್ರ ಸಾಧ್ಯವೋ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ತಾವು ಕಳುಹಿಸಿಕೊಟ್ಟಿರುವ ಯೋಜನೆಯಲ್ಲಿ ನಮ್ಮ ಸಂಸ್ಥಾನದಲ್ಲಿರುವ ಮೂರು ಮೇಜರ್ ಕಾಮಗಾರಿಗಳೇನಾದರೂ ಸೇರಿವೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸೇರಿವೆ.

ಶ್ರೀ ಎಲ್. ಸಿದ್ದಪ್ಪನವರು.—ಲಕ್ಕವಳ್ಳಿ, ತುಂಗ ಮತ್ತು ನುಗು—ಇವು ಮೂರೂ ಸೇರಿವೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸೇರಿವೆ. ಈಗ ಸರ್ಕಾರದವರು ಕೊಟ್ಟಿರುವ facts ಮತ್ತು statementsನಿಂದ ನಿಮಗೇ ಗೊತ್ತಾಗುತ್ತದೆ. ಸುಮಾರು 7-7½ ಕೋಟಿ ರೂಪಾಯಿಗಳನ್ನು ಈ ಐದು ವರ್ಷಗಳಲ್ಲಿ irrigation ಬಾಬಿಗೆ ಕೊಡಲಾಗುತ್ತದೆ ಎಂದು.

ಶ್ರೀ ಎಲ್. ಸಿದ್ದಪ್ಪನವರು.—ಹಾಗಾದರೆ ಈ ಮೂರು ಮೇಜರ್ ಕಾಮಗಾರಿಗಳು ಸೇರುವುದಿಲ್ಲ ! ! ಏಕೆಂದರೆ, ಲಕ್ಕವಳ್ಳಿ ಕಾಮಗಾರಿಯೊಂದಕ್ಕೇ 18 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಎಲ್ಲಾ ಕಾಮಗಾರಿಗಳಿಗೂ ಒಟ್ಟು ಸೇರಿ 7½ ಕೋಟಿಯೆಂದರೆ ಇವುಗಳು ಸೇರುವುದಿಲ್ಲ, ಅಲ್ಲವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇದು ಮೊದಲನೆಯ ಸ್ಟೇಜಿಗೆ ಮಾತ್ರ ಒದಗಿಸಿರುವ ಹಣ.

ಶ್ರೀ ಎಲ್. ಸಿದ್ದಪ್ಪನವರು.—ಈ ಸ್ಕೀಮುಗಳು ಯಾವ ಸ್ಕೀಮಿನಲ್ಲಿ ಸೇರಿವೆ ? ಎರಡು ವರ್ಷದ್ದರಲ್ಲೇ, ಐದು ವರ್ಷದ್ದರಲ್ಲೇ ಅಥವಾ ಹದಿನೈದು ವರ್ಷದ್ದರಲ್ಲೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಐದು ವರ್ಷದ್ದರಲ್ಲಿ.

ಶ್ರೀ ಎಲ್. ಸಿದ್ದಪ್ಪನವರು.—ಐದು ವರ್ಷದ ಸ್ಕೀಮಿನಲ್ಲಿ ಸೇರಿದ್ದು, ಇವು ಮೂರಕ್ಕೂ ಸೇರಿ 7½ ಕೋಟಿ ರೂಪಾಯಿಗಳೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೌದು.

Sri V. M. MASCARENHAS (Bangalore Retroceded Area—General).—Is it not strange that the Government should have launched upon these schemes costing crores of rupees with little consideration to this House?

The Hon'ble Sri K. CHENGALARAYA REDDY.—I would like to know what schemes the Hon'ble Member has in view. All these schemes have been mentioned in the Budget. The whole Budget was before the Hon'ble Members and they had ample opportunity to express their opinion on them. If the Hon'ble Member refers to a particular instance, I can give him a more definite reply.

Sri V. M. MASCARENHAS.—Do the plans refer only to those schemes?

The Hon'ble Sri K. CHENGALARAYA REDDY.—Those schemes and the schemes that will be decided upon in the next five years. When the next Budget is placed before the House it will contain all that information.

Sri V. M. MASCARENHAS.—Will this House be consulted before they are finalised?

The Hon'ble Sri K. CHENGALARAYA REDDY.—When the implementation of the plan is taken up and when funds have to be provided for in the Budget, then the matter will be seized of by this House. For example, we have already provided in the Budget for 1951-52 for the schemes incorporated in the five-year plan and the expenditure has already come up before the House for expression of opinion. If the Budget for 1952-53 is placed before the House at the next Budget Session the House will then know what those schemes are and the members will have an ample opportunity to express their opinion then.

Mr. DEPUTY SPEAKER.—Next question. Sri S. Ranga Rao.

Travelling Allowances drawn by each Minister up to end of February 1951.

Q.*—171. **Sri S. RANGA RAO (Chitaldrug District—General).—

Will the Government be pleased to state:—

the amount of travelling allowances drawn by each Minister during the following periods (i) from October 1947 to end of June 1948, (ii) from July 1948 to end of June 1949, (iii) from July 1949 to end of March 1950, and (iv) from April 1950 to end of February 1951?

A.—**The Hon'ble Sri K. CHENGALARAYA REDDY** (Chief Minister).—

Serial No.	Name of Minister	T.A. drawn during the period from October 1947 to end of June 1948.	From July 1948 to end of June 1949	From July 1949 to end of March 1950	From April 1950 to end of February 1951
		Rs. a. p.	Rs. a. p.	Rs. a. p.	Rs. a. p.
1	The Hon'ble Sri K. C. Reddy, Chief Minister.	3,002 9 0	5,597 10 0	4,216 1 0	5,336 12 0
2	The Hon'ble Sri H. C. Dasappa, Minister for Finance and Industries.	3,210 13 0	4,150 14 0	6,566 8 0	4,816 2 0
3	The Hon'ble Sri K. T. Bhashyam Iyengar, Minister for Law and Labour.	4,739 3 0	6,957 13 0	5,957 1 0	5,811 12 0
4	The Hon'ble Sri H. Siddaiya, Minister for Revenue.	3,590 1 0	7,128 6 0	4,382 10 0	3,519 12 0*
5	The Hon'ble Sri T. Mariappa, Home Minister.	3,191 3 0	4,814 12 0	5,885 7 0	5,834 5 0
6	The Hon'ble Sri R. Chennigaramiah, Minister for Local Self-Government.	2,563 5 0	4,962 11 0	2,892 5 0	3,279 6 0*
7	*Rajasevasakta* Sri P. Subbarama Chetty, Minister for City Municipalities and Muzrai.	1,699 4 0	2,738 7 0	3,625 7 0	...
8	Janab Mohamood Shariff, Minister for Excise and Public Health.	2,502 0 0	3,797 2 0	3,220 15 0	...
9	The Hon'ble Sri D. H. Chandrasekharaiya, Minister for Education.	1,580 15 0	5,181 8 0	5,022 12 0	...
10	The Hon'ble Sri T. Siddalingaiya, Minister for Education.	...	...	...	4,287 9 0†

* Claim for February 1951, not included as the bills have not been preferred.
† Up to 6th December 1950.

Sri S. RANGA RAO.—Do these figures include daily batta?

*__The Hon'ble Sri K. CHENGALARAYA REDDY.__—I should think so.

Sri S. RANGA RAO.—Do these figures include the Travelling Allowances of Ministers visiting Delhi and other places outside Mysore?

The Hon'ble Sri K. CHENGALARAYA REDDY.—Yes, certainly.

Sri S. RANGA RAO.—Do these figures include the expenses incurred by Ministers for travelling in foreign countries?

The Hon'ble Sri K. CHENGALARAYA REDDY.—No.

Sri S. RANGA RAO.—Is it possible to say how much that amount comes to?

The Hon'ble Sri K. CHENGALARAYA REDDY.—A separate question had been tabled regarding that and answer has already been given.

Sri S. RANGA RAO.—Is it not necessary that in the interest of economy of the State the Hon'ble Ministers should reduce their travelling expenses?

The Hon'ble Sri K. CHENGALARAYA REDDY.—I am afraid the Hon'ble Member himself at times wants the Ministers to go to certain places and though they resist accepting such invitations, they are compelled to go and discharge their public duties in a satisfactory way.

Sri S. RANGA RAO.—When two Ministers visit the same place, can they not travel in one and the same car and effect economy?

The Hon'ble Sri K. CHENGALARAYA REDDY.—That has been done in some cases.

Sri S. RANGA RAO.—Have not both the Ministers claimed separate travelling allowances?

The Hon'ble Sri K. CHENGALARAYA REDDY.—I do not think so.

Sri S. RANGA RAO.—Is it not desirable to avoid travelling for the sake of small functions, for example opening of a shop in Bus Stand at Nelamangala?

The Hon'ble Sri K. CHENGALARAYA REDDY.—I cannot say about that particular instance given by the Hon'ble Member. But the general practice is for the Minister not to accept single engagments and cover large distances for that purpose.

Sri S. RANGA RAO.—Is it not desirable for Ministers to avoid travelling expenses for opening an institution already working such as the Industrial Workshop at Nelamangala?

The Hon'ble Sri K. CHENGALARAYA REDDY.—I want notice.

Sri S. RANGA RAO.—Cannot such small functions at the same place and on the same day be opened by a single Minister and thus economy be effected?

The Hon'ble Sri K. CHENGALARAYA REDDY.—But the organisers of the function insist in some cases where two or three Ministers will have to go because of the importance of the function and the sanctity of the occasion.

Sri L. SIDDAPPA (Shimoga District—General).—Why should they yield to importunities?

The Hon'ble Sri K. CHENGALARAYA REDDY.—Sometimes.

The Hon'ble Sri H. C. DASAPPA.—Democracy.

Sri A. BHEEMAPPA NAIK (Chitaldrug District—General).—From what date to what date does this figure of T. A. of Sri T. Siddalingiah pertain?

The Hon'ble Sri H. C. DASAPPA.—It is mentioned there.

Sri A. BHEEMAPPA NAIK.—' From is not mentioned; 'up to' is mentioned

The Hon'ble Sri K. CHENGALARAYA REDDY.—The answer is specific.

Sri A. BHEEMAPPA NAIK.—What is the date on which Sri T. Siddalingiah took charge as Minister?

The Hon'ble Sri K. CHENGALARAYA REDDY.—Somewhere in February 1950.

Sri A. BHEEMAPPA NAIK.—Did he not draw any T. A. from February to April?

The Hon'ble Sri K. CHENGALARAYA REDDY.—I want notice.

Sri A. BHEEMAPPA NAIK.—Has he not drawn any T. A. from July 1949 to March 1950?

The Hon'ble Sri K. CHENGALARAYA REDDY.—I would like to look into that matter. But according to the answer given no T. A. is drawn.

Sri A. BHEEMAPPA NAIK.—What is the policy followed by the Ministers in travelling, whether it is in the interest of the State or whether it is to minimise the T. A. expenditure?

The Hon'ble Sri K. CHENGALARAYA REDDY.—I think the Hon'ble Member will have no doubt about the purpose of these travellings. It is always in the public interest.

Sri A. BHEEMAPPA NAIK.—Therefore, shall I take it that simply on the ground that Hon'ble Members ask the Hon'ble Ministers to minimise the T. A. expenditure the interest of the State will not be lost sight of?

The Hon'ble Sri K. CHENGALARAYA REDDY.—The answer is in the affirmative.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸಂಚಾರ ಭತ್ಯವನ್ನು ತಿಂಗಳಿಗೆ ಅಥವ ಒಂದು ವರ್ಷಕ್ಕೆ ಇಷ್ಟೇ ಮಾಡಬೇಕೆಂಬ ನಿಯಮ ನಿಗದಿಗಳೇನೂ ಇಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ರೀತಿಯ ಪರಿಮಿತಿಯೇನೂ ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಇಲ್ಲಿನ ಮಂತ್ರಿಗಳು ತೋರಿಸಿರತಕ್ಕ ಸಂಚಾರ ಭತ್ಯದ ಪ್ರಮಾಣ ನೆರೆ ಹೊರೆಯ ಪ್ರಾಂತ್ಯಗಳಲ್ಲಿ ಅಂದರೆ ಬೊಂಬಾಯಿ ಇತ್ಯಾದಿ ಸರ್ಕಾರಗಳಲ್ಲಿರತಕ್ಕ ಮಂತ್ರಿಗಳು ಪಡೆದಿರತಕ್ಕ ಸಂಚಾರ ಭತ್ಯಕ್ಕೆ ಹೋಲಿಕೆ ಹಾಕಿದರೆ, ಇಲ್ಲಿನವರು ತೋರಿಸಿರತಕ್ಕದ್ದು, ಹೊರಗಡೆಯವರ ಮೊಬಲಗಿಗಿಂತ ಹೆಚ್ಚಾಗಿದೆಯೋ ಅಥವಾ ಕಮ್ಮಿಯಾಗಿದೆಯೋ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ವಿಚಾರವನ್ನು ನಿರ್ದಿಷ್ಟವಾಗಿ ಹೇಳುವುದಕ್ಕಾಗದೇ ಇದ್ದರೂ, ಇಲ್ಲಿ ತೋರಿಸಿರತಕ್ಕದ್ದೇ ಬಹಳ ಮಟ್ಟಿಗೂ ಕಮ್ಮಿಯಾಗಿರುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ಸಾರ್ವಜನಿಕರು ತಮ್ಮಲ್ಲಿಗೆ ಬಂದು, ಯಾವುದಾದರೂ ಕೆಲಸದ ನಿಮಿತ್ತವಾಗಿ ಬರಬೇಕೆಂದು ತಮ್ಮನ್ನು ಪ್ರಾರ್ಥಿಸಿಕೊಂಡರೆ, ಹಾಗೆ ಬರುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಹಾಗೆ ಹೇಳಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಸಾರ್ವಜನಿಕರ ಆಹ್ವಾನದ ಮೇಲೆ ಹೋಗಿದ್ದಕ್ಕಾಗಿ ಹೆಚ್ಚು ಖರ್ಚು ಬಂದಿದೆಯೋ ಅಥವಾ ತಾವು ಸರ್ಕಾರಿ ಕೆಲಸದ ಬಗ್ಗೆ ಹೋಗಿದ್ದಕ್ಕಾಗಿ ಹೆಚ್ಚು ಖರ್ಚು ಬಂದಿದೆಯೋ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸರ್ಕಾರಿ ಕೆಲಸದ ಪ್ರಯುಕ್ತ ಹೋದಾಗಲೇ ಸಾರ್ವಜನಿಕರ ಕೆಲಸಗಳನ್ನು ನೆರವೇರಿಸಲಾಗಿರುತ್ತೆ. ಆದ್ದರಿಂದ ಈ ಸಂಬಂಧವಾಗಿ ಎರಡೂ ಸೇರಿಕೊಂಡೇ ಇಷ್ಟು ಖರ್ಚಾಗಿರುವುದು.

Sri H. C. LINGA REDDY (Kolar District—General).—Want is the distance from Bangalore to Nelamangala where two Ministers are said to have gone on the same day?

The Hon'ble Sri K. CHENGALARAYA REDDY.—I want notice.

Sri H. C. LINGA REDDY.—Is it not 17 miles?

The Hon'ble Sri K. CHENGALARAYA REDDY.— The Hon'ble Member knows it.

Sri H. C. LINGA REDDY.—I just wanted to know whether two Ministers went to a place so very near to Bangalore for a function. When two or three Ministers travel like that, do they go in one car?

The Hon'ble Sri K. CHENGALARAYA REDDY.—It all depends on the convenience of the Ministers. If they go at the same time, they go in one car. If they start at different times, they go in separate cars.

Sri H. C. LINGA REDDY.—When they travel in one car, do they draw T. A. separately?

The Hon'ble Sri K. CHENGALARAYA REDDY.—I have already answered; they do not.

Mr. DEPUTY SPEAKER.—Next question No. 178. Sri Kadidal Manjappa. The Hon'ble Member is not present. The question will be treated as unstarred.

Introduction of Kannada as Medium of Instruction in Secondary Schools.

*ಪ್ರಶ್ನೆ 207.—ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಸಂಸ್ಥಾನದ ಸೆಕೆಂಡರಿ ಸ್ಕೂಲುಗಳಲ್ಲಿ ಪಾಠ ಪ್ರವಚನಗಳನ್ನು ಕನ್ನಡದಲ್ಲಿಯೇ ಬೋಧಿಸುವುದನ್ನು ಆಚರಣೆಗೆ ತರುವ ವಿಷಯದಲ್ಲಿ ಸರ್ಕಾರದವರ ಕಾರ್ಯನೀತಿಯೇನು;

(b) ಇಲ್ಲಿಯವರೆಗೆ ಈ ಕಾರ್ಯನೀತಿಯು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ;

(c) ಸರ್ಕಾರದ ಈ ಕಾರ್ಯನೀತಿಯನ್ನು ಕಾರ್ಯರೂಪದಲ್ಲಿ ತರದೇ ಇರತಕ್ಕ ಯಾವುವಾದರೂ ವಿದ್ಯಾಭ್ಯಾಸದ ಸಂಸ್ಥೆಗಳಿವೆಯೆ;

(d) ಇದ್ದ ಪಕ್ಷದಲ್ಲಿ, ಅಂಥ ವಿದ್ಯಾಭ್ಯಾಸದ ಸಂಸ್ಥೆಗಳ ವಿಷಯದಲ್ಲಿ ಸರ್ಕಾರದವರು ಯಾವುವಾದರೂ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆಯೆ;

(e) ಕೈಕೊಂಡಿದ್ದ ಪಕ್ಷದಲ್ಲಿ, ಕೈಕೊಂಡಿರುವ ಕಾರ್ಯಕ್ರಮವೇನು? [illegible]

ಉತ್ತರ.—ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರು.)—

(a) ಪರಭಾಷೆಯ ಮೂಲಕ ಜ್ಞಾನವನ್ನು ಸಂಪಾದಿಸುವ ಪ್ರಯತ್ನದಲ್ಲಿ ವಿದ್ಯಾರ್ಥಿಗಳು ತಮ್ಮ ಬುದ್ಧಿಶಕ್ತಿಯನ್ನು ವ್ಯರ್ಥಮಾಡದಂತೆ ನೋಡಿಕೊಳ್ಳುವುದು, ಮತ್ತು ಪ್ರಾದೇಶಿಕ ಭಾಷೆಗೆ ಪ್ರಾಧಾನ್ಯವು ತಪ್ಪಿ ಹೋಗದಂತೆ ನೋಡಿಕೊಳ್ಳುವುದು ಮತ್ತು ವಿದ್ಯಾವಂತರು ಜನಸಾಮಾನ್ಯರೊಡನೆ ಸಂಪರ್ಕವನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳುವುದು—ಇವು ಸರ್ಕಾರದವರ ಕಾರ್ಯನೀತಿಯಲ್ಲಿ ಅಡಕವಾಗಿರುವ ಉದ್ದೇಶಗಳು.

(b) ಗಣನೀಯವಾದಮಟ್ಟಿಗೆ ಯಶಸ್ವಿಯಾಗಿದೆ.

(c) ಪ್ರತಿಯೊಂದು ತರಗತಿಯಲ್ಲಿ ಒಂದಕ್ಕಿಂತ ಹೆಚ್ಚಾದ "ಸೆಕ್ಷನ್" ಇರತಕ್ಕ ಹೈಸ್ಕೂಲುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳು ಶಿಕ್ಷಣ ಮಾಧ್ಯಮವಾಗಿರುತ್ತವೆ. ಪ್ರತಿಯೊಂದು ತರಗತಿಯಲ್ಲಿಯೂ ಒಂದೇ ಒಂದು 'ಸೆಕ್ಷನ್' ಇರತಕ್ಕ ಹೈಸ್ಕೂಲುಗಳಲ್ಲಿ ಇಂಗ್ಲಿಷ್ ಭಾಷೆಯು ಶಿಕ್ಷಣ ಮಾಧ್ಯಮವಾಗಿರುತ್ತದೆ.

(d) ಮತ್ತು (e) ಎಲ್ಲ ದರ್ಜೆಗಳಲ್ಲಿಯೂ ಕನ್ನಡ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಮಾಡುವ ವಿಷಯದಲ್ಲಿ ಪರಿಶೀಲನೆ ನಡೆಯಬೇಕಾಗಿರುವುದರಿಂದ ಯಾವ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಸೆಕೆಂಡರಿ ಸ್ಕೂಲುಗಳಲ್ಲಿ ಕನ್ನಡ ಮಾಧ್ಯಮವನ್ನು ಎಂದಿನಿಂದ ಆಚರಣೆಗೆ ತರಲಾಯಿತು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಇಲ್ಲಿಯ ತನಕ ತಾವು ಅನುಸರಿಸಿರತಕ್ಕ ನೀತಿಯ ಫಲವಾಗಿ, ಗಣನೀಯವಾದ ಮಟ್ಟಿಗೆ ಯಶಸ್ವಿಯಾಗಿದ್ದೆಯೆಂದು ತಿಳಿಸಿರುವುದರ ಬಗ್ಗೆ ತಾವು ವಿವರಣೆಗಳನ್ನು ಕೊಡಬಲ್ಲಿರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ವಿವರಣೆಯನ್ನು ಬಹಳ ಮಟ್ಟಿಗೆ ಕೊಡಬಹುದು. ಆದರೆ ಆ ವಿಷಯಗಳನ್ನೆಲ್ಲಾ ಒಳಗೊಂಡ ಒಂದು ದೊಡ್ಡ ಪಟ್ಟಿಯೇ ಇದೆ. ಅದರಲ್ಲಿ ಇಡೀ ಮೈಸೂರು ದೇಶದ ವಿಷಯವನ್ನೆಲ್ಲಾ ಅಡಕಮಾಡಿರುವುದರಿಂದ ಬಹಳ ದೊಡ್ಡದಾಗಿದೆ. ತಮಗೆ ಬೇಕೆಂದರೆ ಅದನ್ನೇ ಕೊಡುತ್ತೇನೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಹಿಂದೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ, ಕನ್ನಡ ಮಾಡಿಯಂನಲ್ಲೇ ಸೆಕೆಂಡರಿ ಪಾಠಶಾಲೆಗಳಲ್ಲಿ ಬೋಧನಾ ಕ್ರಮವನ್ನು ನಡೆಸಬೇಕೆಂದು ತಿಳಿಸಿದ್ದು ಯಾವಾಗ ಎಂಬ ಅಂಶವನ್ನು ತಾವು ಈಗ ಈ ಸಭೆಯ ಗಮನಕ್ಕೆ ತರಬಲ್ಲಿರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸರ್ಕಾರಿ ಹುಕ್ಕುಂಗಳೆಲ್ಲಾ ಪಬ್ಲಿಕ್ ಡಾಕ್ಯುಮೆಂಟ್ಸ್. ಅದನ್ನು ಹೊಸದಾಗಿ ಈಗ ಹೇಳಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಶಾಲೆಗಳಲ್ಲಿ ಒಂದೊಂದು ತರಗತಿಯಲ್ಲಿಯೂ ಒಂದಕ್ಕಿಂತ ಹೆಚ್ಚಾಗಿ 'ಸೆಕ್ಷನ್'ಗಳು ಇಲ್ಲದಂಥ ಕಡೆಗಳಲ್ಲೆಲ್ಲಾ ಪಾಠ ಪ್ರವಚನಗಳನ್ನು ಕನ್ನಡದಲ್ಲೇ ಬೋಧಿಸಬೇಕೆಂದು ಆಜ್ಞೆ ಹೊರಡಿಸಿಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಒಂದೇ ಒಂದು ಸೆಕ್ಷನ್ ಇದ್ದರೆ ಅಲ್ಲಿ ಕನ್ನಡ ಮಾಧ್ಯಮವನ್ನೂ ಮತ್ತು ಒಂದಕ್ಕಿಂತ ಹೆಚ್ಚಾಗಿರತಕ್ಕ ಪಾಠಶಾಲೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಡಿಯಂಗಳಲ್ಲಿ ಬೋಧನೆ ನಡೆಸುವಂತೆ, ಆಯಾಯ ಪಾಠಶಾಲೆಗಳ ಅನುಕೂಲ ನೋಡಿಕೊಂಡು, ಅದಕ್ಕೆ ತಕ್ಕಂತೆ ಮಾಡಲಾಗಿದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಕೇವಲ ಒಂದು ತರಗತಿಯಲ್ಲಿ ಒಂದೇ ಸೆಕ್ಷನ್ ಇದ್ದಾಗ್ಯೂ, ಅಲ್ಲಿ ಬರೀ ಇಂಗ್ಲೀಷ್ ಮಾಡಿಯಂ ಒಂದನ್ನೇ ಇಟ್ಟುಕೊಂಡಿರತಕ್ಕ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಹಾಗೆ ಸರ್ಕಾರಿ ಆಜ್ಞೆ ಜಾರಿಯಲ್ಲಿದ್ದಾಗ್ಯೂ ಅದಕ್ಕೆ ಗಮನ ಕೊಡದೆ ಕನ್ನಡ ಮಾಧ್ಯಮವನ್ನು ನಿಲ್ಲಿಸಿರತಕ್ಕದ್ದು ಸರಿಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗಿರಲಾರದು. ಬಹಳ ಮಟ್ಟಿಗೂ ಎಲ್ಲಾ ಕಡೆಯೂ ಕನ್ನಡದಲ್ಲೇ ಪಾಠಗಳನ್ನು ಹೇಳಲಾಗುತ್ತಿದೆ. ಎಲ್ಲೆಲ್ಲಿ ಒಂದಕ್ಕಿಂತ ಹೆಚ್ಚಾಗಿ 'ಸೆಕ್ಷನ್'ಗಳಿರುತ್ತವೆಯೋ ಅಲ್ಲಿ ಮಾತ್ರವೇ ಇಂಗ್ಲೀಷ್ ಮಾಡಿಯಮ್ಮನ್ನು ಇಟ್ಟುಕೊಂಡಿರಲಾಗಿದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಕೆಲವು ಪಾಠಶಾಲೆಗಳಲ್ಲಿ 8–10 ಸೆಕ್ಷನ್‌ಗಳಿದ್ದು, ಅಲ್ಲಿ ಒಂದು ಸೆಕ್ಷನ್‌ಗಾದರೂ ಕನ್ನಡ ಮಾಧ್ಯಮವಿಲ್ಲದಂತೆ ಆಚರಣೆಯಲ್ಲಿ ಅನುಸರಿಸುತ್ತಿರುವುದು ನೀತಿಗೆ ವಿರೋಧವಾಗಿರುತ್ತೆಂದು ಒಂದು ಆಜ್ಞೆಯನ್ನು ಹೊರಡಿಸುವಿರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಎಷ್ಟು ಸಾಧ್ಯವೋ ಅಷ್ಟನ್ನೂ ಮಾಡಲಾಗುತ್ತೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಸುಮಾರು 51 ಪಾಠಶಾಲೆಗಳಲ್ಲಿ 10–13 ಸೆಕ್ಷನ್‌ಗಳಿರುವ ಕಡೆ ಸಹ ಅಲ್ಲಿ ಕನ್ನಡ ಮಾಡಿಯಮ್ಮನ್ನು ಸಂಪೂರ್ಣವಾಗಿ ಕೈಬಿಟ್ಟಿರತಕ್ಕದ್ದು ಪಾಲಿಸಿಗೆ ವಿರೋಧವಾಗಿರುತ್ತೆಂದು ಭಾವಿಸುವುದಿಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಡೀ ಮೈಸೂರು ದೇಶಕ್ಕೆಲ್ಲಾ ಹೀಗೆ ಕೇವಲ 51 ಶಾಲೆಗಳಲ್ಲಿ ಮಾತ್ರ ಹಾಗೆ ಆಗಿರತಕ್ಕದ್ದೇನೂ ಒಂದು ಅತಿಶಯವಲ್ಲ. ಕ್ರಮೇಣ ಎಲ್ಲವನ್ನೂ ಸರಿಪಡಿಸಲಾಗುತ್ತೆ. ಏಕದಂ ಯಾವುದನ್ನು ಮಾಡಲಿಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಇನ್ನು ಮುಂದಾದರೂ ಕಡ್ಡಾಯವಾಗಿ ಸರ್ಕಾರದ ಆಜ್ಞೆಯನ್ನು ಜಾರಿಗೆ ತರಬೇಕೆಂದು ಒತ್ತಾಯಪಡಿಸುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಾಧ್ಯವಾದ ಮಟ್ಟಿಗೆ ಪ್ರಯತ್ನ ಪಡುತ್ತೇವೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಕನ್ನಡ ಮಾಧ್ಯಮವನ್ನು ಜಾರಿಗೆ ತರಬೇಕು, ಬಹಳ ಕಾಲದಿಂದಲೂ ಅದು ನಾಡನುಡಿಯಾಗಿ ದೇಶಕ್ಕೆ ಸೇವೆ ಮಾಡಿದೆ, ರಾಷ್ಟ್ರೀಯ ಸಂಸ್ಥೆಗಳು ಆ ವಿಚಾರದಲ್ಲಿ ಬಹಳವಾಗಿ ಕೆಲಸ ಮಾಡಿವೆ ಎಂಬುದೂ, ನಿರ್ಧಾರವಾದ ರೀತಿ ನೀತಿಯನ್ನನುಸರಿಸದಿದ್ದರೆ ಆ ಸಂಸ್ಥೆಗಳನ್ನು ಮುಚ್ಚಬೇಕಾಗುತ್ತದೆ ಎಂಬುದೂ ಸರ್ಕಾರದ ಗಮನಕ್ಕೆ ಬಂದಿದೆಯೆ? ಆ ಬಗ್ಗೆ ಮನವಿ ಬಂದಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗ ಇಂಗ್ಲಿಷ್ ಮಾಡಿಯಂ ದೇಶದಲ್ಲಿ ಜಾಸ್ತಿ ಮಾಡಬೇಕೆಂದು ಕೆಲವು ಕಡೆಗಳಿಂದ ಮನವಿ ಬಂದಿದೆ. ಒಂದೇ ಸೆಕ್ಷನ್ ಇರುವ ಕಡೆ ಇಂಗ್ಲೀಷ್ ಮಾಡಿಯಂ, ಎರಡು ಸೆಕ್ಷನ್ ಇರುವ ಕಡೆ ಕನ್ನಡ ಮಾಡಿಯಂ ಒಂದಕ್ಕೆ,

ಇಂಗ್ಲಿಷ್ ಮೀಡಿಯಂ ಇನ್ನೊಂದಕ್ಕೆ ಸಾಮಾನ್ಯವಾಗಿ ಕೊಡುತ್ತಿದೆ. ಸಾಧಾರಣವಾಗಿ ತೆಲುಗು, ತಮಿಳು, ಉರ್ದು ಭಾಷೆಯನ್ನು ಕಲಿಸುವ ಜಾಗಗಳಲ್ಲಿ ಇಂಗ್ಲೀಷ್ ಮೀಡಿಯಂ, ಕನ್ನಡ, ಸಂಸ್ಕೃತ ಇರುವಕಡೆ ಕನ್ನಡ ಮೀಡಿಯಂ ಕೊಡುತ್ತಿದೆ. ಮಾತೃಭಾಷೆ ಕನ್ನಡವಾಗಿದ್ದರೂ ಅನೇಕ ಕಡೆ ಇಂಗ್ಲೀಷ್ ಮೀಡಿಯಂಗೆ 'ಡಿಮ್ಯಾಂಡ' ಹೆಚ್ಚಾಗಿದೆ. ಸೆಕ್ಷನ್ ಒಂದಕ್ಕೆ 40 ಹುಡುಗರಿರಬೇಕೆಂದು ಹೇಳುವಾಗ ಅದಕ್ಕೆ ಮೀರಿರುವ ನಿದರ್ಶನಗಳು ಅನೇಕ ಕಡೆ ಇವೆ. ಹಾಗಿರುವಾಗ ಇಂಗ್ಲೀಷ್ ಮೀಡಿಯಂ ಜಾಸ್ತಿ ಮಾಡಬೇಕಾಗುತ್ತದೆ.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಇಂಗ್ಲೀಷ್ ಮತ್ತು ಕನ್ನಡ ಮೀಡಿಯಂ ವಿಚಾರದಲ್ಲಿ ದೇಶದಲ್ಲಿ ಒಂದು ನೀತಿಯನ್ನು ನಿರ್ಧಾರವಾಗಿ ಅನುಸರಿಸಬೇಕೆಂಬುದಕ್ಕೆ ಕಾರ್ಯಕ್ರಮವಿದೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಕನ್ನಡ ಮೀಡಿಯಂ ಜಾಸ್ತಿ ಮಾಡಬೇಕೆಂಬ ನೀತಿಯಿದೆ. ಅದನ್ನೇ ಮುಂದುವರಿಸುತ್ತಿದ್ದಾರೆ. ಸಾಧ್ಯವಾದ ಮಟ್ಟಿಗೆ ಇನ್ನೂ ಅದನ್ನು ಮುಂದುವರಿಸಬೇಕೆಂಬ ಉದ್ದೇಶವಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಕನ್ನಡ ಮೀಡಿಯಂ ಜಾರಿಗೆ ತರುವ ವಿಚಾರದಲ್ಲಿ ಸರ್ಕಾರದವರು ಆಜ್ಞೆಯೇನಾದರೂ ಹೊರಡಿಸಿದ್ದಾರೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಆಜ್ಞೆ ಹೊರಡಿಸದಿದ್ದರೆ ಕನ್ನಡ ಮೀಡಿಯಂ ಸ್ಕೂಲುಗಳೇ ತೆರೆಯಲ್ಪಡುತ್ತಿರಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವನ್ನು ಸೂಚಿಸಿ ಆಜ್ಞೆ ಹೊರಡಿಸಿದೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಹೌದು, ಹೊರಡಿಸಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆ ಆಜ್ಞೆಯಲ್ಲಿ ಕನ್ನಡ ಮೀಡಿಯಂ ಎಲ್ಲಿರಬೇಕು ಎಂದು ವಿಧಾಯಕ ಮಾಡಿದ್ದೀರಾ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಎಲ್ಲಾಕಡೆಯೂ ಕನ್ನಡ ಇರಬೇಕು. ಆದರೆ ಈಗ ಎರಡು ಸೆಕ್ಷನ್ ಇರುವಕಡೆ ಸಾಮಾನ್ಯವಾಗಿ ಒಂದರಲ್ಲಿ ಕನ್ನಡ ಇದೆ. ಒಂದೇ ಸೆಕ್ಷನ್ ಇರುವಕಡೆ ಇಂಗ್ಲೀಷ್ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಒಂದೇಸೆಕ್ಷನ್ ಇದ್ದು ಕನ್ನಡ ಮೀಡಿಯಂ ಇಲ್ಲದಿರುವ ಸ್ಕೂಲುಗಳ ಸಂಖ್ಯೆಯೆಷ್ಟು ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—51 ಇವೆ ಎಂದು ಶ್ರೀ ಶಿವಾನಂದಶರ್ಮರು ಈಗ ಹೇಳಿದರು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನನಗೆ ಸರ್ಕಾರದ ಉತ್ತರ ಬೇಕು.

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗಿದ್ದ ಮೇಲೆ ಸರ್ಕಾರದವರು ಎಷ್ಟು ಸ್ಕೂಲುಗಳಲ್ಲಿ ಒಂದು ಸೆಕ್ಷನ್‌ಗಿಂತ ಹೆಚ್ಚಾಗಿದ್ದರೂ ಕೂಡ ಕನ್ನಡ ಮೀಡಿಯಂ ಜಾರಿಗೆ ತಂದಿಲ್ಲವೆಂಬುದನ್ನು ಪರಿಶೀಲಿಸಿದ್ದಾರೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಪರಿಶೀಲನೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದನ್ನು ಹೇಳಲು ನೋಟೀಸ್ ಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಒಂದಕ್ಕೂ ಹೆಚ್ಚಿಗೆ ಸೆಕ್ಷನ್ ಇದ್ದರೂಕೂಡ ಕನ್ನಡ ಮೀಡಿಯಂ ಇಲ್ಲದಿರುವ ಸ್ಕೂಲುಗಳಿವೆಯೆಂಬುದನ್ನು ಒಪ್ಪುತ್ತೀರಾ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಇರಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಖಚಿತವಾಗಿ ಹೇಳಲು ನೋಟೀಸ್ ಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸರ್ಕಾರದ ಆಜ್ಞೆಯನ್ನು ವಿರೋಧಿಸಿದವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದೆಯೆಂದು ಉತ್ತರದಲ್ಲಿ ಹೇಳಿಲ್ಲ. ಕಾರಣವೇನು ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಸರ್ಕಾರದ ಆಜ್ಞೆಯನ್ನು ಯಾರೂ ವಿರೋಧಿಸಿಲ್ಲ. ಎಷ್ಟುಮಟ್ಟಿಗೆ ಎಲ್ಲಿ ಸಾಧ್ಯವೋ ಅಂಥಕಡೆ ಜಾರಿಗೆ ತಂದಿದೆ. ಆಗಲೇ ಹೇಳಿದಹಾಗೆ ಇಂಗ್ಲೀಷ್ ಮೀಡಿಯಂಗೇ ಬಹಳಮಟ್ಟಿಗೆ ಡಿಮ್ಯಾಂಡ್ ಇದೆ. ನಮ್ಮ ದೇಶದ ಎಲ್ಲಾ ಜಿಲ್ಲೆಗಳಲ್ಲೂ ಬಹಳಮಟ್ಟಿಗೆ ಕನ್ನಡ ಮೀಡಿಯಂ ಇದೆ. ಇಡೀ ದೇಶದಲ್ಲಿ '51 ಸ್ಥಳಗಳಲ್ಲಿಲ್ಲವೆಂದು ಹೇಳುವುದು ದೊಡ್ಡದಲ್ಲ. ಆದಷ್ಟುಮಟ್ಟಿಗೆ ಎಲ್ಲಾ ಕಡೆಯೂ ಕನ್ನಡ ಮೀಡಿಯಂ ಜಾರಿಗೆ ತರುವುದಕ್ಕೆ ಸದಾ ಪ್ರಯತ್ನಮಾಡುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—1951 ನೆಯ ಇಸವಿ ಫೆಬ್ರುವರಿಯಲ್ಲಿ ನಡೆದ ಅಧಿವೇಶನದಲ್ಲಿ ಬಂದಿದ್ದ "List of High Schools in the State where Kannada is not at all introduced as medium of instruction" ಎಂಬ ಪ್ರಶ್ನೆಗೆ ಉತ್ತರವಾಗಿ ಒಂದು ಪಟ್ಟಿಯನ್ನು ಕೊಟ್ಟಿರುವುದು ಸರ್ಕಾರದ ಗಮನದಲ್ಲಿದೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಉತ್ತರ ಕೊಟ್ಟಿರುವಾಗ ಅದು ಗಮನಕ್ಕೆ ಬಂದೇ ಇರುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅಂದ ಮೇಲೆ ಕನ್ನಡ ಮಾಧ್ಯಮವನ್ನು ಜಾರಿಗೆ ತರದಿದ್ದರೆ ಅದು ಆಜ್ಞೆ ಉಲ್ಲಂಘನೆ ಆದಹಾಗೆ ಅಲ್ಲವೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಅಲ್ಲ. ಕೆಲವುಕಡೆ ಸಾಧ್ಯವಾಗಿಲ್ಲ. ಆದ್ದರಿಂದ ಉಲ್ಲಂಘನೆ ಮಾಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗಾದರೆ ಸರ್ಕಾರದ ಆಜ್ಞೆಗೆ ಬೆಲೆಯೇನು ಬಂದಹಾಗಾಯಿತು ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಅನೇಕ ಕಡೆ ಜಾರಿಗೆ ತಂದಿರುವುದರಿಂದ ಅದಕ್ಕೆ ಬೆಲೆ ಕೊಟ್ಟಹಾಗಾಯಿತು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಜಾರಿಗೆ ತರದಿರುವುದೂ ಬೆಲೆಯೇನು ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಕೆಲವುಕಡೆ ಜಾರಿ ಮಾಡುತ್ತಿದ್ದಾರೆ. ಮಾಡುವುದಿಲ್ಲವೆಂದು ಯಾರೂ ಹೇಳಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಒಂದಕ್ಕಿಂತ ಹೆಚ್ಚು ಸೆಕ್ಷನ್ ಇರುವ ಕಡೆ ಕನ್ನಡ ಮಾಧ್ಯಮವನ್ನು ಜಾರಿಗೆ ತಂದಿದೆಯೆಂದು ಹೇಳಿದೆ. ಎಷ್ಟು ಸ್ಕೂಲುಗಳಲ್ಲಿ ಆರೀತಿ ಕನ್ನಡ ಜಾರಿಗೆ ಬಂದಿದೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಕೋಲಾರ ಜಿಲ್ಲೆಯಲ್ಲಿ 160, ತಿಪಟೂರಿನಲ್ಲಿ 90, ಮಲ್ಲೇಶ್ವರದಲ್ಲಿ 165—ಈರೀತಿ ವಿದ್ಯಾರ್ಥಿಗಳಿದ್ದಾರೆ.................................

ಶ್ರೀ ಎಸ್. ರಂಗರಾಮಯ್ಯನವರು.—ನಾನು ಕೇಳಿದ್ದು ಎಷ್ಟು ಸ್ಕೂಲುಗಳಲ್ಲಿ ಕನ್ನಡ ಮಾಧ್ಯಮವಿದೆ ಎಂದು. ಕನ್ನಡ ಮಾಧ್ಯಮವಿರುವ ಸ್ಥಳದಲ್ಲಿ ಅಂಕಿಗಳನ್ನು ಇಂಗ್ಲೀಷಿನಲ್ಲಿ ಬರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಬಂದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಪ್ರೈಮರಿ ಸ್ಕೂಲುಗಳಲ್ಲಿ ಕನ್ನಡದಲ್ಲಿ ಪಾಠ ಹೇಳುವಾಗ ಇಂಗ್ಲೀಷಿನಲ್ಲಿ ಅಂಕಿಗಳನ್ನು ಬರೆಯುತ್ತಿರುವುದು ಗೊತ್ತೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ರೂಢಿಯಲ್ಲಿ ಹಾಗೆ ಬಂದಿದೆ. ಆದರೆ ಪಾಠ ಹೇಳಿಕೊಡುವುದು ಕನ್ನಡದಲ್ಲಿ.

ಶ್ರೀ ಎಸ್. ರಂಗರಾಮಯ್ಯನವರು.—ಇನ್ನು ಮೇಲಾದರೂ ಕೂಡ ಕನ್ನಡ ಮೀಡಿಯಂ ಜಾರಿಗೆ ತರುವುದರ ಜೊತೆಗೆ ಅಂಕಿಗಳನ್ನು ಕೂಡ ಕನ್ನಡದಲ್ಲೇ ಬರೆಯಬೇಕೆಂದು ಕಡ್ಡಾಯ ಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಇದುವರೆಗೆ ಕನ್ನಡ ಅಂಕಿಯಲ್ಲಿ ಬರೆಯಕೂಡದೆಂದು ಮಾಡಿದ್ದರೆ ಮುಂದೆ ಬದಲಾಯಿಸಬಹುದು. ಈಗಲೂ ಕನ್ನಡದಲ್ಲೇ ಬರೆಯಬೇಕೆಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇನ್ನುಮೇಲೆ ಕನ್ನಡಪಾಠ ಹೇಳುವಾಗ ಕನ್ನಡ ಅಂಕಿ ಹಾಕಬೇಕೆಂದು ಕಡ್ಡಾಯವಾಗಿ ಆಜ್ಞೆ ಮಾಡಲು ಅಡ್ಡಿಯೇನು ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಇನ್ನುಮೇಲೆ ಎಂದು ಹೇಳಿದರೆ ಇದುವರೆಗೆ ನಡೆಯುತ್ತಿದೆಯೆಂದು ಒಪ್ಪಿದಹಾಗಾಗುತ್ತದೆ. ಈಗಲೂ ಕನ್ನಡ ಅಂಕಿಗಳಲ್ಲೇ ಬರೆಯಬೇಕೆಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—(d) ಮತ್ತು (c) ಪ್ರಶ್ನೆಗೆ ಉತ್ತರವಾಗಿ "No action is taken pending the examination of the question of medium of instruction in all grades" ಎಂದು ಹೇಳಿದೆ. ಹಾಗೆ ಪರಿಶೀಲನೆ ಮಾಡುವುದಕ್ಕೆ ಸಮಿತಿಯೇನಾದರೂ ಇದೆಯೋ ಅಥವಾ ಇಲಾಖೆಯವರೇ ಮಾಡುತ್ತಾರೋ ! ಅದಕ್ಕೆ ಏನು ಏರ್ಪಾಡಿದೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಅದು ಸರ್ಕಾರದ ಆಲೋಚನೆಯಲ್ಲಿದೆ. ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಸಾಮಾನ್ಯವಾಗಿ ಯಾವುದು ಮಾಡಬೇಕು ಎಂಬುದು ತೀವ್ರ ಪರ್ಯಾಲೋಚನೆಯಲ್ಲಿದೆ. ಅದಷ್ಟುಬೇಗ ಪರಿಶೀಲಿಸುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಪರಿಶೀಲನೆಗೆ ಸಮಿತಿ ಮಾಡುತ್ತೀರಾ ಅಥವಾ ಪರಿಣತರನ್ನು ನೇಮಕ ಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಆ ವಿಚಾರದಲ್ಲಿ ಪ್ರಪೋಸಲ್ ಬಂದಿದೆ. ಅದು ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಆದಷ್ಟು ಬೇಗ ತೀರ್ಮಾನ ಮಾಡಲಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಕನ್ನಡವನ್ನೇ ಕೊನೆಗೆ ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕೆಂಬುದು ಸರ್ಕಾರದ ಉದ್ದೇಶವಲ್ಲವೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಕೊನೆಗೆ ಕನ್ನಡ ಇರಬೇಕೆಂಬ ಉದ್ದೇಶವಿದೆ. ಆಮೇಲೆ ಹಿಂದಿ ಬರುತ್ತದೆಯಲ್ಲವೆ ?

ಶ್ರೀ ಎ. ಭೀಮಪ್ಪನಾಯಕರು.—ಈ ದಿವಸ ಇರುವ ಉದ್ದೇಶ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂಬುದೇ ಅಲ್ಲವೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಮಾತೃಭಾಷೆ ಕೂಡ ಕನ್ನಡವೇ ಆಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಇಂಗ್ಲೀಷನ್ನು ಶಿಕ್ಷಣ ಮಾಧ್ಯಮವಾಗಿ ಕೆಲವು ದಿವಸ ಬಿಟ್ಟಿರುವುದರ ಉದ್ದೇಶವೇನು ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಜನರ ಅಭಿಪ್ರಾಯ.

Sri A. BHEEMAPPA NAIK.—What was the object in allowing English as the medium of instruction for some time? Why did you allow English to continue for some time as the medium of instruction ?

The Hon'ble Sri R. CHENNIGARAMIAH.—English was the medium of instruction all along till now. It is only now that we are trying to encourage the mother-tongue as the medium of instruction. During the transition period, there are some people who have to be taught in English medium because their mother-tongue will not be Kannada.

ಶ್ರೀ ಎ. ಭೀಮಪ್ಪನಾಯಕರು.—ಕನ್ನಡ ಮೀಡಿಯಂ ಶಿಕ್ಷಣ ಇರುವಾಗ ಇಂಗ್ಲೀಷ್ ಮೀಡಿಯಂ ಇಟ್ಟುಕೊಂಡಿರುವುದರ ಉದ್ದೇಶವೇನು ; ಅದು ಯಾರಿಗೋಸ್ಕರ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಕನ್ನಡ ಮಾತೃಭಾಷೆಯಾಗಿಲ್ಲದೇ ಇರುವವರು ಇರುತ್ತಾರೆ. ಅಂಥವರು ಇಂಗ್ಲೀಷ್ ಮೀಡಿಯಂ ತೆಗೆದುಕೊಳ್ಳುತ್ತಾರೆ.

ಶ್ರೀ ಎ. ಭೀಮಪ್ಪನಾಯಕರು.—ಕನ್ನಡ ಮಾತೃಭಾಷೆಯಾಗಿಲ್ಲದೇ ಇರುವವರು ಇಂಗ್ಲೀಷ್ ಮೀಡಿಯಂ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುವುದು ಬಿಟ್ಟು ಮಾತೃಭಾಷೆ ಕನ್ನಡ ಆಗಿದ್ದು ದೊಡ್ಡದೊಡ್ಡ ಕನ್ನಡ ಪಂಡಿತರ ಮಕ್ಕಳೂ ಕೂಡ ಇಂಗ್ಲೀಷ್ ಮೀಡಿಯಂ ತೆಗೆದುಕೊಂಡಿರುವುದು ತಮಗೆ ಗೊತ್ತೇ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಆ ರೀತಿ ಕೆಲವರು ಇಂಗ್ಲೀಷ್ ಮೀಡಿಯಂ ತೆಗೆದುಕೊಳ್ಳುತ್ತಿದ್ದಾರೆ. ಬಹುಮಟ್ಟಿಗೆ ಕೆಲವು ದಿನಗಳ ಮೇಲೆ ಅವರೂ ಕನ್ನಡವನ್ನೇ ಓದಬೇಕಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಅದಕ್ಕೋಸ್ಕರವೇ ಯಾರ ಮಾತೃಭಾಷೆ ಕನ್ನಡ ಅಲ್ಲವೋ ಅವರಿಗೆ ಹೊರತು ಇನ್ನಾರಿಗೂ ಇಂಗ್ಲೀಷ್ ಮೀಡಿಯಂ ಇಟ್ಟುಕೊಳ್ಳ

ಕೂಡದು ಎಂದು ಸರ್ಕಾರದವರ ಆಜ್ಞೆ ಮಾಡು ತ್ತಾರೆಯೇ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಯೋಚನೆ ಮಾಡಲಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಯಾರ ಮಾತೃಭಾಷೆ ಕನ್ನಡವೋ ಅವರಿಗೆ ಇಂಗ್ಲೀಷ್ ಮೀಡಿಯಂ ತೆಗೆದುಕೊಳ್ಳಲು ಅವಕಾಶ ಕೊಡುವುದಿಲ್ಲ ಎಂದು ಸರ್ಕಾರದ ಆಜ್ಞೆ ಆದಹೊರತು ಇಂಗ್ಲೀಷಿನ ವ್ಯಾಮೋಹ ಹೋಗುವುದಿಲ್ಲ ; ಅವರು ಇಂಗ್ಲೀಷ್ ಮೀಡಿಯಂ ತರಗತಿಗಳಿಗೆ ಸೇರುವುದನ್ನು ಬಿಡುವುದಿಲ್ಲ. ಆದ್ದರಿಂದ ದಯವಿಟ್ಟು ಯಾರ ಮಾತೃಭಾಷೆ ಕನ್ನಡವೋ ಅಂಥವರು ಕನ್ನಡ ಮೀಡಿಯಂ ತರಗತಿಗೇ ಸೇರಬೇಕು ಎಂದು ಸರ್ಕಾರದ ಆಜ್ಞೆ ಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ನಾನು ಮೊದಲೇ ಹೇಳಿದೆ, ಒಂದು ಸೆಕ್ಷನ್ ಇರುವ ಕಡೆ ಸಾಮಾನ್ಯವಾಗಿ ಇಂಗ್ಲೀಷ್ ಮೀಡಿಯಂ ಇದೆ. ಎರಡು ಸೆಕ್ಷನ್ ಇರುವಕಡೆ ಒಂದು ಕನ್ನಡ, ಒಂದು ಇಂಗ್ಲೀಷ್ ಮೀಡಿಯಂ ಇರುತ್ತದೆ. ಒಂದೇ ಸೆಕ್ಷನ್ ಇರುವಂಥ ಕಡೆಗಳಲ್ಲಿ ಕನ್ನಡಿಗರಿದ್ದರೂ ಇಂಗ್ಲೀಷ್ ಮೀಡಿಯಂ ತೆಗೆದುಕೊಳ್ಳಬೇಕಾಗುತ್ತದೆ. ನಿರ್ಬಂಧಪಡಿಸಿದರೆ ಅದಕ್ಕೂ ಅವಕಾಶವಿರುವುದಿಲ್ಲ. ಆದ್ದರಿಂದ ಬಹುಮಟ್ಟಿಗೆ ಎಲ್ಲಾ ಕಡೆಯೂ ಎರಡು ಸೆಕ್ಷನ್ introduce ಆದ ಮೇಲೆ ಆ ವಿಷಯ ಯೋಚನೆಮಾಡಬಹುದು.

ಶ್ರೀ ಎ. ಭೀಮಪ್ಪನಾಯಕರು.—ಕೊನೆಯಪಕ್ಷ ಎರಡು ಸೆಕ್ಷನ್ ಇರುವ ಕಡೆಯಾದರೂ ಯಾರ ಮಾತೃಭಾಷೆ ಕನ್ನಡವೋ ಅವರಿಗೆ ಇಂಗ್ಲೀಷ್ ಮೀಡಿಯಂ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಆಜ್ಞೆ ಮಾಡದೇ, ಅದಕ್ಕೆ ಅವಕಾಶ ಕೊಟ್ಟರೆ.............

Sri M. N. JOIS (Mysore District—General).—Sir, I rise to a point of order. There cannot be any discussion during question time. He should put a definite question.

Sri A. BHEEMAPPA NAIK.—I am not discussing. I am putting a question. I am trying to clear the question. That is all. ಯಾವುದಾದರೂ ಒಂದುಕಡೆ ಎರಡು ಅಥವಾ ಎರಡಕ್ಕೆ ಹೆಚ್ಚಾದ ಸೆಕ್ಷನ್ ಇದ್ದು ಅಂಥಕಡೆ ಕನ್ನಡ ಮಾತೃಭಾಷೆ ಆಗಿಲ್ಲದೇ ಇರುವವರ ಹೊರತು ಇನ್ನಾರಿಗೂ ಇಂಗ್ಲೀಷ್ ಮೀಡಿಯಂ ಕೊಡುವುದಿಲ್ಲ ಎಂದು ಆಜ್ಞೆ ಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಆರೀತಿ ಕಡ್ಡಾಯವಾಗಿ ಆಜ್ಞೆ ಮಾಡುವುದಕ್ಕಾಗುವುದಿಲ್ಲ. ಬಹುಮಟ್ಟಿಗೆ ಕನ್ನಡ ಮಾತೃಭಾಷೆಯಾಗಿಲ್ಲದೇ ಇರುವವರಿಗೆ ಫಸ್ಟ್ ಪ್ರಿಫರೆನ್ಸ್ ಕೊಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಕನ್ನಡ ಮೀಡಿಯಂನಲ್ಲಿ ಹುಡುಗರು ಜಾಸ್ತಿಯಾಗಿರುತ್ತಾರೆ. ಮತ್ತು ಕೆಲವರಿಗೆ ಇಂಗ್ಲೀಷ್ ಮೀಡಿಯಂ ತೆಗೆದುಕೊಳ್ಳಬೇಕೆಂದು ಅಭಿಲಾಷೆ ಇರುತ್ತದೆ. ಅಂಥವರಿಗೆ ಕ್ಲಾಸ್ strength ನೋಡಿಕೊಂಡು ಕೊಡುತ್ತಾರೆ. ಸಾಮಾನ್ಯವಾಗಿ ಕನ್ನಡ ಮಾತೃಭಾಷೆಯಾಗಿರುವವರಿಗೆ ಇಂಗ್ಲೀಷ್ ಮೀಡಿಯಂ ಕೊಡುತ್ತಾ ಇಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಕನ್ನಡ ಮತ್ತು ಇಂಗ್ಲೀಷ್ ಮೀಡಿಯಂ ಇರುವಕಡೆ ತಮಿಳು ಮತ್ತು ಉರ್ದು ಭಾಷೆ ಮಾತೃಭಾಷೆಯಾಗಿರುವವರು ಶೇಕಡ ಎಷ್ಟು ಜನ ಇದ್ದಾರೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ಅವರ ಜೊತೆಗೆ ಕನ್ನಡ ಮಾತೃಭಾಷೆಯಾಗಿರುವವರೂ ಇಂಗ್ಲೀಷ್ ಮೀಡಿಯಂ ತೆಗೆದುಕೊಳ್ಳುತ್ತಿರುವುದು ಗೊತ್ತೇ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಕೆಲವರು ತೆಗೆದುಕೊಳ್ಳುತ್ತಾರೆ ಗೊತ್ತಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇಂಗ್ಲೀಷ್ ಮೀಡಿಯಂಗೆ ಜನಗಳ ಒತ್ತಾಯ ಜಾಸ್ತಿಯಾಗಿದೆ ಎಂದು ಹೇಳುತ್ತಾರೆ ಅದಕ್ಕೆ ಕಾರಣವೇನು ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಇಂಗ್ಲೀಷ್ ಮೀಡಿಯಂ ತೆಗೆದುಕೊಳ್ಳಬೇಕೆಂದು ಕೆಲವರಿಗೆ ಅಭಿಲಾಷೆಯಿರುತ್ತದೆ. ಅದೇ ಕಾರಣ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಕಾಲೇಜುಗಳಲ್ಲಿ ಇಂಗ್ಲೀಷ್ ಮೀಡಿಯಂ ಇರುವುದರಿಂದ ಆರೀತಿ ಅಭಿಲಾಷೆ ಪಡುತ್ತಾರೆ ಎಂಬುದು ಗೊತ್ತೇ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಯಾರಾದರೂ ಅವರಿಗೆ ತಿಳಿವಳಿಕೆ ಹೇಳಬೇಕು. ಅಥವಾ ಅವರಾದರೂ ಯೋಚನೆ ಮಾಡಬೇಕು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹೈಸ್ಕೂಲುಗಳಲ್ಲಿ ಈ ಕನ್ನಡ ಮೀಡಿಯಂ ಫಲದಾಯಕವಾಗಬೇಕಾದರೆ ವಿಶ್ವವಿದ್ಯಾನಿಲಯದಲ್ಲೂ ಕನ್ನಡ ಮೀಡಿಯಂ ಆಗಬೇಕೆಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ದೇಶದಲ್ಲಿ ಆರೀತಿ ಮಾಡಬೇಕೆಂಬ ಅಭಿಪ್ರಾಯವಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಸರ್ಕಾರದಿಂದ ಸಹಾಯಪಡೆದ ಶಾಲೆಗಳಲ್ಲಿ ಒಂದಕ್ಕಿಂತ ಹೆಚ್ಚಾಗಿ ಸೆಕ್ಷನ್‌ಗಳಿದ್ದರೂ ಕೂಡ ಕನ್ನಡ ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ವಿಧಾಯಕಮಾಡದೇ ಇರುವುದು ಗೊತ್ತೆ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಗೊತ್ತಿಲ್ಲ. ಒಂದು ವೇಳೆ ತಿಳಿಸಿದರೆ ವಿಚಾರ ಮಾಡುತ್ತೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ರೀತಿ ಕನ್ನಡ ಮೀಡಿಯಂ ವಿಧಾಯಕ ಮಾಡಬೇಕೆಂದು ಸರ್ಕಾರದವರಾಗಲೀ, ಇಲಾಖೆಯವರಾಗಲೀ ಅವರನ್ನು ಒತ್ತಾಯಮಾಡಿದ್ದಾರೆಯೇ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಏಡೆಡ್ ಹೈಸ್ಕೂಲುಗಳ ಮೇಲೆ ಪೂರ್ತಿಯಾಗಿ ಸರ್ಕಾರದವರ ಹತೋಟಿ ಇರುವುದಿಲ್ಲ. ಆದ್ದರಿಂದ ನಾವು ನಿರ್ಬಂಧ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗಬಹುದು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ರೀತಿ ನಡೆಯತಕ್ಕ ಸ್ಕೂಲುಗಳಲ್ಲಿ ಕನ್ನಡ ಮಾಧ್ಯಮವನ್ನು ವಿಧಾಯಕ ಮಾಡುವುದಕ್ಕೆ ಏನಾದರೂ ಅನಾನುಕೂಲವಿದೆ ಎಂಬುದಾಗಿ ಹೇಳಿ ಸರ್ಕಾರದವರ ಗಮನಕ್ಕೆ ಬಂದಿರುವ ನಿದರ್ಶನವಿದೆಯೇ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ನೋಟೀಸ್.

Karnataka State Archives,
(Department Library)
(ಪತ್ರಾಗಾರ ಗ್ರಂಥಾಲಯ)

ಶ್ರೀ ಎಂ. ಗೋವಿಂದರೆಡ್ಡಿಯವರು.—ಹಾಗೆ ವಿಧಾಯಕ ಮಾಡದೇ ಇದ್ದ ಪಕ್ಷದಲ್ಲಿ ಅಂಥ ಸ್ಕೂಲುಗಳಿಗೆ ಕೊಟ್ಟಿರುವ ರೆಕಾಗ್ನಿಷನ್ ವಾಪಸು ತೆಗೆದುಕೊಳ್ಳುತ್ತೇವೆ ಎಂದು ಹೇಳಲು ಆತಂಕವಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವರಿಗೂ ಕನ್ನಡದ ಮೇಲೆ ಅಭಿಮಾನವಿದೆ. ಕಾರಣಾಂತರದಿಂದ ಮಾಡದೇ ಇರಬಹುದು. ಆದ್ದರಿಂದ ರೆಕಾಗ್ನಿಷನ್ ವಾಪಸು ತೆಗೆದುಕೊಳ್ಳುವುದು ಸೂಕ್ತವಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಎಲ್ಲಾ ಸ್ಕೂಲುಗಳಲ್ಲೂ ವಿಧಾಯಕಮಾಡುವುದಕ್ಕೆ ಅವಕಾಶವಿದೆಯೇ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಏರ್ಪಾಡು ಮಾಡುವುದಕ್ಕಾಗುತ್ತದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಪ್ರಯತ್ನಪಡುತ್ತೇವೆ.

Sri H. SIDDAVEERAPPA (Chitaldrug District-General).—So long as English is one of the mediums of instruction, will it not compulsion to take up the Kannada medium affect the fundamental right of a student to be educated in the language in which he intends to be educated ?

The Hon'ble Sri R. CHENNIGARAMIAH.—He is not prevented from being educated in English.

Sri H. SIDDAVEERAPPA.—Can the Government compel a boy to take up only Kannada as the medium of instruction so long as English is there ?

The Hon'ble Sri R. CHENNIGARAMIAH.—We are not compelling the boys. We leave it to their discretion.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—(c) ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. ಈ ಆಜ್ಞೆ ಯಾವಾಗ ಆದದ್ದು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿಯವರು.—'In High Schools which have more than one section in each class Kannada and English will be the medium. In High Schools which have only one section in each class English is the medium' ಎಂದು ಹೇಳಿದ್ದೀರಿ. ಈ ಆಜ್ಞೆ ಇವತ್ತಿಗೂ ಜಾರಿಯಲ್ಲಿದೆಯೋ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇದೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಈ ಆಜ್ಞೆ 1940–41ರಲ್ಲಿ ಬದಲಾವಣೆ ಆಗಿದೆ ಎಂದರೆ ಒಪ್ಪುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಡಿ ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಈಚೆಗೆ ಈ ಆಜ್ಞೆಯನ್ನು ಬದಲಾವಣೆಮಾಡಿ ಒಂದು ಸೆಕ್ಷನ್‌ಗಿಂತ ಇನ್ನೂ ಹೆಚ್ಚಾಗಿ ಇಂಗ್ಲೀಷ್ ಸೆಕ್ಷನ್ ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಟ್ಟಿಲ್ಲವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿಯವರು.—"No action is taken pending the examination of the question" ಎಂದು ಹೇಳಿದ್ದೀರಿ. ಆಖೈರಾಗಿ ಪರಿಶೀಲನೆ ಮಾಡಿರುವುದು ಯಾವ ಇಸವಿಯಲ್ಲಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿಯವರು.—1946ನೆಯ ಇಸವಿಯಿಂದೀಚೆಗೆ ಈ ವಿಚಾರವನ್ನು ಪರಿಶೀಲನೆ ಮಾಡಿ ತೀರ್ಮಾನ ಮಾಡಿಲ್ಲವೆಂದು ಹೇಳಿದರೆ ಒಪ್ಪುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ನಿಜವಾಗಿದ್ದರೆ ಒಪ್ಪಬೇಕಾಗುತ್ತದೆ.

Mr. DEPUTY SPEAKER.—Question No. 230. Sri B. Channabyre Gowda The Hon'ble Member is not present. So the question will be treated as unstarred. Next question No. 58.

(Sri Mahanta Devaru was permitted to put Question No. 58 on behalf of Sri B. Hutche Gowda).

Loans to Industrial Concerns, Associations and Individuals.

*ಪ್ರಶ್ನೆ 58.—ಶ್ರೀ ಎಂ. ಎನ್. ಮಹಂತದೇವರು (ಮೈಸೂರು ಜಿಲ್ಲೆ) [on behalf of ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ)]—ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯಮಾಡಿ ತಿಳಿಸಬೇಕೆಂದು ಪ್ರಾರ್ಥನೆ :—

(a) 1947ನೆಯ ಇಸವಿ ಜುಲೈ ತಿಂಗಳಿನಿಂದ—

(i) ಸಂಸ್ಥಾನದಲ್ಲಿರುವ ಕೈಗಾರಿಕೆ ಉದ್ಯಮಗಳವರಿಗೆ,

(ii) ವೈಯಕ್ತಿಕವಾಗಿ ಸಂಸ್ಥಾನದ ಜನರಿಗೆ

(iii) ಇತರರಿಗೆ (ಎಂದರೆ ಸಂಘಗಳೇ ಮುಂತಾದುವುಗಳಿಗೆ) ಮಂಜೂರು ಮಾಡಿರುವ ಸಾಲಗಳ ಮೊಬಲಗೆಷ್ಟು ;

(b) ಈ ಸಾಲಗಳನ್ನು ಯಾವ ನಿಯಮಗಳ ಮತ್ತು ಷರತ್ತುಗಳ ಮೇರೆಗೆ ಮಂಜೂರು ಮಾಡಲಾಗಿದೆ ;

(c) ಪ್ರತಿಯೊಂದು ಸಂದರ್ಭದಲ್ಲಿಯೂ ಯಾವ ತಾರೀಖು ಸಾಲಗಳನ್ನು ಮಂಜೂರು ಮಾಡಲಾಯಿತು ;

(d) ಬಡ್ಡಿಯನ್ನೂ ಮತ್ತು ಅಸಲನ್ನೂ ಯಾವ ಯಾವ ತಾರೀಖುಗಳಲ್ಲಿ ವಸೂಲ್ಮಾಡಲಾಯಿತು ;

(e) ತಹಲ್‌ವರೆಗೆ ಬಡ್ಡಿ ಮತ್ತು ಅಸಲು ಬಾಬತ್ತು ಎಷ್ಟು ಮೊಬಲಗು ಬಾಕಿ ನಿಂತಿದೆ ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕೆ ಶಾಖೆಗಳ ಸಚಿವರು).—

(a), (b), (c) ಮತ್ತು (d) ವೈಯಕ್ತಿವಾಗಿ ಕೊಟ್ಟಿರುವ ಕೈಗಾರಿಕೆ ಸಾಲಗಳ ಸಂಬಂಧವಾದ ಒಂದು ತಖ್ತೆಯನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ (ಪರಿಶಿಷ್ಟವನ್ನು ದಯೆಯಿಟ್ಟು ನೋಡಿ). ಇದರಡಿ ಮುದ್ರಿತವಾಗಿದೆ.

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.)

1947ನೆಯ ಇಸವಿ ಜುಲೈ 1ನೆಯ ತಾರೀಖಿನಿಂದ 1951ನೆಯ ಇಸವಿ ಮಾರ್ಚಿ

ಜಂಜರು ನಂಬರು ಮತ್ತು ಸಾಲ ಪಡೆದವರುಗಳ ಹೆಸರು ಮತ್ತು ಸ್ಥಳ	ಸಾಲಗಳ ವಿವರ	ಮಂಜೂರು ಮಾಡಲ್ಪಟ್ಟ ಸಾಲದ ಮೊಬಲಗು	ಯಾವ ಉದ್ದೇಶಕ್ಕಾಗಿ ಸಾಲವನ್ನು ಮಂಜೂರು ಮಾಡಲಾಗಿದೆ	ಆಖೈರಾಗಿ ಸಾಲವನ್ನು ಕೊಡತಕ್ಕ ತಾರೀಖು
		ರೂ. ಗಳು		
1 ಶ್ರೀಮತಿ ಪುಟ್ಟಮ್ಮನವರು, ಬೆಂಗಳೂರು.	ವೈಯಕ್ತಿಕ ವಾಗಿ	1,500	ಗಂಧದ ಮರ ಮತ್ತು ದಂತದ ಕೆತ್ತನೆ ಕೆಲಸಗಳ ಸಂಬಂಧ ದಲ್ಲಿ ಕೆಲಸ ನಡೆಯಿಸುವ ಬಂಡವಾಳಕ್ಕೆ.	22—7—47
2 ಶ್ರೀ ಜಿ. ಎಸ್. ನಂಜುಂಡಯ್ಯನವರು, ಗೂಳೂರು, ತುಮಕೂರು ಡಿಸ್ಟ್ರಿಕ್ಟು.	ಡಿಟೋ ...	5,000	ಷೀಟ್‌ಮೆಟಲ್ ಕೊಳವೆಗಳನ್ನು ತಯಾರಿಸುವ ಕೈಗಾರಿಕೆಯನ್ನು ಏರ್ಪಡಿಸುವುದಕ್ಕೆ.	24—7—47
3 ಶ್ರೀ ಜೈಮುನಿರಾಯರು, ಬೆಂಗಳೂರು.	ವೈಯಕ್ತಿಕ ವಾಗಿ ವರ್ತಕರು	10,000	ಸ್ವಂತ ಹೆಂಚಿನ ಕಾರ್ಖಾನೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ.	24—7—47
4 ಶ್ರೀ ಸಣ್ಣಮಲ್ಲಪ್ಪನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	250	ಚರ್ಮದ ಕೈಗಾರಿಕೆಯನ್ನು ಉತ್ತಮಗೊಳಿಸುವುದಕ್ಕೆ.	26—7—47
5 ಶ್ರೀ ಸಣ್ಣತಿಪ್ಪಯ್ಯನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	250	ಡಿಟೋ ...	26—7—47
6 ಶ್ರೀ ಆರ್. ಹನುಮಪ್ಪನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	100	ಡಿಟೋ ...	26—7—47
7 ಶ್ರೀ ಮಲ್ಲಾರಪ್ಪನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	120	ಡಿಟೋ ...	26—7—47
8 ಶ್ರೀ ಲಿಂಗಪ್ಪನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	90	ಡಿಟೋ ...	26—7—47
9 ಶ್ರೀ ಡಿ. ಹನುಮಪ್ಪನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	200	ಡಿಟೋ ...	26—7—47
10 ಶ್ರೀ ಸಣ್ಣಹನುಮಪ್ಪನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	80	ಡಿಟೋ ...	26—7—47
11 ಶ್ರೀ ಓಬಯ್ಯನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	100	ಡಿಟೋ ...	26—7—47
12 ಶ್ರೀ ಚಿಕ್ಕಪ್ಪನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	90	ಡಿಟೋ ...	26—7—47
13 ಶ್ರೀ ಪೂಜಾರಿ ಮಲ್ಲಪ್ಪನವರು, ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	100	ಡಿಟೋ ...	26—7—47
14 ಶ್ರೀ ಎಕ್. ರಾಮಯ್ಯನವರು, ದೊಡ್ಡ ಸಿದವ್ವನಹಳ್ಳಿ.	ಡಿಟೋ ...	90	ಡಿಟೋ ...	26—7—47
15 ಶ್ರೀ ನಿಂಗಪ್ಪನವರು ದೊಡ್ಡಸಿದ್ದವ್ವನಹಳ್ಳಿ.	ಡಿಟೋ ...	120	ಡಿಟೋ ...	26—7—47
16 ಶ್ರೀ ಡಿ. [illegible] ರವರು, ಬೆಂಗಳೂರು	ಡಿಟೋ ...	6,000	ಉಕ್ಕಿನ ಕಾಮಗಾರಿಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ.	8-10—47
17 ಶ್ರೀ ಕೆ. ವೆ[illegible]ಯ್ಯನವರು, ತುಮಕೂರು	ಡಿಟೋ ...	6,000	ಸ್ಟೋನ್ ಕ್ರಷರ್ ಯಂತ್ರವನ್ನು ನಡೆಸುವುದಕ್ಕೆ.	29-11—47
18 ಶ್ರೀ ಜಿ. ಅರಸಪ್ಪನವರು, ಬೆಂಗಳೂರು.	ಡಿಟೋ ...	2,000	ರೇಷ್ಮೆ ನೆಯ್ಗೆಯ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ.	3-12—47
19 ಶ್ರೀ ಎಂ. ಮಾಯಪ್ಪನವರು, ತುಮಕೂರು.	ಡಿಟೋ ...	2,500	ಇಂಜಿನಿಯರಿಂಗ್ ವರ್ಕ್‌ಷಾಪ್‌ನ್ನು ಏರ್ಪಡಿಸುವುದಕ್ಕೆ.	22—1—48

10ನೆಯ ತಾರೀಖಿನವರೆಗೆ ಮಂಜೂರುಮಾಡಲ್ಪಟ್ಟ ಸಾಲಗಳನ್ನು ತೋರಿಸುವ ತಖ್ತೆ.

ಯಾವ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಸಾಲವನ್ನು ವಾಪಸು ಪಾವತಿಮಾಡ ಬೇಕಾಗಿದೆಯೆಂಬುದು		ಇದುವರೆಗೆ ಎಷ್ಟು ಮೊಬಲಗನ್ನು ವಸೂಲುಮಾಡಲಾಗಿದೆ		ಅಸಲು ಬಾಬತು ಬಾಕಿ ಬರಬೇಕಾಗಿ ರುವ ಮೊಬಲಗೆಷ್ಟು	ಬಡ್ಡಿ ಬಾಬತು ಬಾಕಿ ಬರಬೇಕಾ ಗಿರುವ ಮೊಬಲಗೆಷ್ಟು
ಬಡ್ಡಿ ದರ	ಎಷ್ಟು ಕಂತು ಗಳಲ್ಲಿ ವಾಪಸು ಪಾವತಿ ಮಾಡ ಬೇಕೆಂಬುದು	ಅಸಲಿಗೆ ಎಷ್ಟು	ಬಡ್ಡಿಗೆ ಎಷ್ಟು		
ಶೇಕಡ			ರೂ. ಆ. ಪೈ	ರೂ. ಆ. ಪೈ	ರೂ. ಆ. ಪೈ
4	15 ತಿಂಗಳ ಕಂತುಗಳು	ಮೊಬಲಗು ಪೂರ್ತಿಯಾಗಿ ಪಾವತಿ ಮಾಡಲ್ಪಟ್ಟಿದೆ ಮತ್ತು ಲೆಕ್ಕಾಚಾರಗಳು ಖೈದಾಗಿವೆ.	...	ಇಲ್ಲ	...
4	40 ತ್ರೈಮಾಸಿಕ ಕಂತುಗಳು.	375 (27-10-47 ರಿಂದ 16-6-49 ರವರೆಗೆ)	...	4,625 0 0	...
4	8 ವಾರ್ಷಿಕ ಕಂತುಗಳು.	3,750 (10-8-48 ರಿಂದ 25-7-50 ರವರೆಗೆ)	...	6,250 0 0	...
4	25 ತಿಂಗಳ ಕಂತುಗಳು	30 (1—2—49)	...	220 0 0	...
4	25 ಡಿಟ್ಟೋ	50 (22—2—49)	...	200 0 0	...
4	25 ಡಿಟ್ಟೋ	25 (9—2—49)	...	75 0 0	...
4	25 ಡಿಟ್ಟೋ	30 (15—2—49)	...	90 0 0	...
4	25 ಡಿಟ್ಟೋ	...	...	90 0 0	...
4	25 ಡಿಟ್ಟೋ	50 (24—1—49)	...	150 0 0	...
4	25 ಡಿಟ್ಟೋ	25 (24—1—49)	...	55 0 0	...
4	25 ಡಿಟ್ಟೋ	25 (24—1—49)	...	75 0 0	...
4	25 ಡಿಟ್ಟೋ	...	...	90 0 0	...
4	25 ಡಿಟ್ಟೋ	30 (24—1—49)	...	70 0 0	...
4	25 ಡಿಟ್ಟೋ ...	20 (1-2-49)	...	70 0 0	...
4	25 ಡಿಟ್ಟೋ ...	25 (1-2-49)	...	95 0 0	...
4	60 ಡಿಟ್ಟೋ ...	3,250 (9-1-48ರಿಂದ 8-6-50ರವರೆಗೆ)	...	2,750 0 0	...
4	20 ಷಾಣ್ಮಾಸಿಕ ಕಂತುಗಳು	...	...	6,000 0 0	...
4	20 ತ್ರೈಮಾಸಿಕ ಕಂತುಗಳು.	1,080 (4-3-48ರಿಂದ 27-4-50ರವರೆಗೆ)	...	920 0 0	...
4	34 ತಿಂಗಳ ಕಂತುಗಳು	750 (16-5-50ರಿಂದ 24-7-50ರವರೆಗೆ)	...	1,750 0 0	...

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.)

ಜಂಜರು ನಂಬರು ಮತ್ತು ಸಾಲ ಪಡೆದವರುಗಳ ಹೆಸರು ಮತ್ತು ಸ್ಥಳ	ಸಾಲಗಳ ವಿವರ	ಮಂಜೂರು ಮಾಡಲ್ಪಟ್ಟ ಸಾಲದ ಮೊಬಲಗು	ಯಾವ ಉದ್ದೇಶಕ್ಕಾಗಿ ಸಾಲವನ್ನು ಮಂಜೂರು ಮಾಡಲಾಗಿದೆ	ಆಖೈರಾಗಿ ಸಾಲವನ್ನು ಕೊಡತಕ್ಕ ತಾರೀಖು
		ರೂ.		
20 ಶ್ರೀ ಆರ್. ಕೆ. ಐಯ್ಯಂಗಾರ್ಯರು, ಬೆಂಗಳೂರು.	ವ್ಯೆಯಕ್ತಿಕವಾಗಿ ವರ್ತಕರು	4,000	ಸ್ವಂತ ಮುದ್ರಣಾಲಯವನ್ನು ಅಭಿವೃದ್ಧಿಗೊಳಿಸುವುದಕ್ಕೆ.	5—3—48
21 ಶ್ರೀಮತಿ ಗೌರಮ್ಮನವರು, ದೊಡ್ಡಬಳ್ಳಾಪುರ.	ಡಿಟೋ ...	1,500	ವಿದುಚ್ಛ್ಯಕ್ತಿಯ ಸಹಾಯದಿಂದ ನೆಯ್ಗೆಯ ಮಗ್ಗವನ್ನು ಏರ್ಪಡಿಸುವುದಕ್ಕೆ.	16—3—48
22 ಶ್ರೀ ಬಸ್ವಶೆಟ್ಟಿಪ್ಪನವರು, ಬೆಂಗಳೂರು.	ಡಿಟೋ ...	2,000	ಷಟಲ್ ಲೂಮ್‌ಗಳಿಗೆ ಮತ್ತು ವರ್ಕ್‌ಷಾಪಿನ ಅಭಿವೃದ್ಧಿಗೆ.	15—4—48
23 ಶ್ರೀ ಜಿ. ಆರ್. ಗೋಪಾಲರಾಯರು, ಮೈಸೂರು.	ಡಿಟೋ ...	2,000	ಮುದ್ರಣಾಲಯವನ್ನು ಏರ್ಪಡಿಸುವುದಕ್ಕೆ.	6—8—48
24 ಜನಾಬ್ ಮಿರ್ಜಾ ನೈಜ್‌ಮಂದ್ ಆಲಿಯವರು, ಮೈಸೂರು.	ಡಿಟೋ ...	2,000	ದಂತದ ಮತ್ತು ಗಂಧದ ಮರದ ಕೆತ್ತನೆಯ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ.	17—8—48
25 ಶ್ರೀ ಎಚ್. ಎಸ್. ಶಂಕರನಾರಾಯಣರಾಯರು, ಬೆಂಗಳೂರು.	ಡಿಟೋ ...	2,500	ಹೆಂಚುಗಳು, ಬಣ್ಣಗಳು, ಮುಂತಾದವುಗಳನ್ನು ತಯಾರಿಸುವುದಕ್ಕೆ.	17—8—48
26 ಶ್ರೀ ಆರ್. ರಾಮಸ್ವಾಮಪ್ಪನವರು ಮತ್ತು ಎ. ಆರ್. ನಾರಾಯಣಸ್ವಾಮಪ್ಪನವರು, ಬೆಂಗಳೂರು, ಉತ್ತರ ತಾಲ್ಲೂಕು.	ವ್ಯೆಯಕ್ತಿಕವಾಗಿ	2,500	ರೇಷ್ಮೆ ಕಾರ್ಖಾನೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ.	7—3—49
27 ಎಚ್. ವೆಂಕಟರೆಡ್ಡಿಯವರು, ಹಿರೇನಾಗವಲ್ಲಿ, ಚಿಕ್ಕಬಳ್ಳಾಪುರ ತಾಲ್ಲೂಕು.	ಡಿಟೋ ...	4,000	ರೈಸ್‌ಮಿಲ್, ರೋಟರಿ ಮತ್ತು ಫ್ಲೋರ್‌ಮಿಲ್ ಜೋಡಿಸುವುದಕ್ಕೆ.	1—4—49
28 ಕೆ. ಸಿದ್ದಯ್ಯನವರು, ಚನ್ನಪಟ್ಟಣ	ಡಿಟೋ ...	1,000	ಚರ್ಮದ ಕೈಗಾರಿಕೆಯ ಅಭಿವೃದ್ಧಿಗೆ.	13—5—49
29 ಟಿ. ನಾರಣಪ್ಪನವರು, ಬೆಳಗುಂಟೆ, ಮಾಗಡಿ ತಾಲ್ಲೂಕು.	ಡಿಟೋ ...	2,000	ಗೃಹಕೈಗಾರಿಕೆಗಳ ಕೇಂದ್ರದ ಕೆಲಸ ನಡೆಯಿಸುವ ಬಂಡವಾಳಕ್ಕೆ.	25—5—49
30 ಜನಾಬ್ ನೂರುಲ್ಲಾ ಷರೀಫ್ ರವರು, ಯಲಹಂಕ.	ಡಿಟೋ ...	3,500	ರೇಷ್ಮೆ ಹುರಿಮಾಡುವ ಯಂತ್ರವನ್ನು ಕೊಂಡುಕೊಳ್ಳುವುದಕ್ಕೆ ಮತ್ತು ರೇಷ್ಮೆ ಫಿಲೇಚರ್ ಕಾರ್ಖಾನೆಯ ಅಭಿವೃದ್ಧಿಗೆ.	21—7—49
31 ಕೊಟ್ಟಿಗೆ ಈಶ್ವರಪ್ಪನವರು, ಚಿತ್ರದುರ್ಗ.	ಡಿಟೋ ವರ್ತಕರು	20,000	ಹತ್ತಿಯನ್ನೆಕ್ಕುವ ಕಾರ್ಖಾನೆಯ ಅಭಿವೃದ್ಧಿಗೆ.	25—10—49
32 ಕೆ. ಬ್ಯಾಟರಂಗಪ್ಪನವರು, ನೆಲಮಂಗಲ.	ಡಿಟೋ	6,000	ರೋಟರಿ ಆಯಿಲ್‌ಮಿಲ್ಲನ್ನೂ ಮತ್ತು ಇಂಜಿನಿಯರಿಂಗ್ ವರ್ಕ್‌ಷಾಪನ್ನು ಏರ್ಪಡಿಸುವುದಕ್ಕೆ.	14—10—4
33 ಕೆ. ಕಾಳಾಚಾರಿಯವರು, ಮೈಸೂರು.	ಡಿಟೋ	250	ಮರದ ಕೆತ್ತನೆ ಕೆಲಸಕ್ಕೆ ...	14—10—49
34 ಎಲ್. ಬಸವಯ್ಯನವರು, ಮೈಸೂರು.	ಡಿಟೋ	250	ಡಿಟೋ ...	14—10—19

ಯಾವ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಸಾಲವನ್ನು ವಾಪಸು ಪಾವತಿಮಾಡಬೇಕಾಗಿದೆಯೆಂಬುದು		ಇದುವರೆಗೆ ಎಷ್ಟು ಮೊಬಲಗನ್ನು ವಸೂಲುಮಾಡಲಾಗಿದೆ		ಅಸಲು ಬಾಬತು ಬಾಕಿ ಬರಬೇಕಾಗಿರುವ ಮೊಬಲಗೆಷ್ಟು	ಬಡ್ಡಿ ಬಾಬತು ಬಾಕಿ ಬರಬೇಕಾಗಿರುವ ಮೊಬಲಗೆಷ್ಟು
ಬಡ್ಡಿಯ ದರ	ಎಷ್ಟು ಕಂತುಗಳಲ್ಲಿ ವಾಪಸು ಪಾವತಿಮಾಡಬೇಕೆಂಬುದು	ಅಸಲಿಗೆ ಎಷ್ಟು	ಬಡ್ಡಿಗೆ ಎಷ್ಟು		
ಶೇಕಡ			ರೂ. ಅ. ಪೈ	ರೂ. ಅ. ಪೈ	ರೂ. ಅ. ಪೈ
4	16 ಷಾಣ್ಮಾಸಿಕ ಕಂತುಗಳು.	106 (13-12-48ರಿಂದ 13-7-50ರವರೆಗೆ)	146 0 0	3,894 0 0	...
4	3 ಡಿಟ್ಟೋ ...	1,413 (4-7-49ರಿಂದ 23-6-50ರವರೆಗೆ)	111 0 0	87 0 0	...
4	16 ತ್ರೈಮಾಸಿಕ ಕಂತುಗಳು.	839-1-6 (20-7-48ರಿಂದ 19-12-50ರವರೆಗೆ)	45 10 6	1,160 14 6	...
4	40 ತಿಂಗಳ ಕಂತುಗಳು,	Account closed—Fully paid.	...	...	...
4	20 ಡಿಟ್ಟೋ ...	1 903 (28-9-48ರಿಂದ 25-8-50)ರ ವರೆಗೆ)	...	97 0 0	...
4	10 ಷಾಣ್ಮಾಸಿಕ ಕಂತುಗಳು.	...	...	2,500 0 0	...
4	5 ವಾರ್ಷಿಕ ಕಂತುಗಳು.	27-13-0(23-5-50)	107 3 0	2,472 3 0	...
4	40 ತಿಂಗಳಗಳಲ್ಲಿ.	...	...	4,000 0 0	...
4	20 ತ್ರೈಮಾಸಿಕಗಳಲ್ಲಿ.	ರೂ. 179-10-0 (13-7-49ರಿಂದ 29-3-50).	10 0 0	820 6 0	...
3½	10 ವರ್ಷಗಳಲ್ಲಿ	...	...	2,000 0 0	...
5	ಡಿಟ್ಟೋ ...	...	...	3,500 0 0	...
5	ಡಿಟ್ಟೋ ...	...	...	20,000 0 0	...
5	ಡಿಟ್ಟೋ ...	...	...	6,000 0 0	...
4	25 ತಿಂಗಳುಗಳಲ್ಲಿ.	ರೂ. 250-(12-11-49ರಿಂದ 18-10-50	6 15 0	ಇಲ್ಲ	...
4	ಡಿಟ್ಟೋ ...	ರೂ. 160-(12-11-49ರಿಂದ 14-2-51)	9 2 0	90 0 0	...

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.)

ಜಂಜರು ನಂಬರು ಮತ್ತು ಸಾಲ ಪಡೆದವರುಗಳ ಹೆಸರು ಮತ್ತು ಸ್ಥಳ	ಸಾಲಗಳ ವಿವರ	ಮಂಜೂರು ಮಾಡಲ್ಪಟ್ಟ ಸಾಲದ ಮೊಬಲಗು	ಯಾವ ಉದ್ದೇಶಕ್ಕಾಗಿ ಸಾಲವನ್ನು ಮಂಜೂರು ಮಾಡಲಾಗಿದೆ	ಅಖೈರಾಗಿ ಸಾಲವನ್ನು ಕೊಡತಕ್ಕ ತಾರೀಖು
		ರೂ.		
35 ಪುಟ್ಟಾಚಾರಿ, ಮೈಸೂರು ...	ವೈಯಕ್ತಿಕ ವಾಗಿ ವರ್ತಕರು	250	ಮರದ ಕೆತ್ತನೆಕೆಲಸ ...	14—10—45
36 ಎಚ್. ಕೆ. ಮಾದಯ್ಯನವರು, ಮಳವಳ್ಳಿ.	ಡಿಟೋ	12,000	ವಿದ್ಯುಚ್ಛಕ್ತಿಯ ಮಗ್ಗಗಳ ಜೋಡಣೆಕೆ.	10—11—49
37 ಆರ್. ವಿಶ್ವನಾಥ್, ಬೆಂಗಳೂರು.	ಡಿಟೋ	250	ದರ್ಜಿ ಕೆಲಸಕ್ಕೆ ...	21—11—49
38 ಎಚ್. ಟಿ. ಮಲ್ಲಿಯಪ್ಪನವರು, ಬೀರೂರು.	ಡಿಟೋ	5,000	ಯಂತ್ರಗಳನ್ನು ಕೊಳ್ಳುವುದಕ್ಕೆ	20—2—50
39 ಟಿ. ಟಿ. ಶರ್ಮರವರು, ಬೆಂಗಳೂರು.	ಡಿಟೋ	6,000	ಮುದ್ರಣಾಲಯಕ್ಕೆ ...	20—3—50
40 ಎಂ. ರಾಮಕೃಷ್ಣಯ್ಯನವರು, ಕೋಲಾರ.	ಡಿಟೋ	4,000	ಡಿಟೋ ...	21—3—50
41 ತುಕ್ಕೋಜಿರಾಯರು, ಗಂಜಾಂ ಶ್ರೀರಂಗಪಟ್ಟಣ.	ಡಿಟೋ	2,000	ಗಾಡಿಗಳನ್ನು ತಯಾರಿಸುವ ಉದ್ಯಮದ ಕೆಲಸ ನಡೆಯಿಸುವ ಬಂಡವಾಳಕ್ಕೆ.	11—9—50
42 ಗುಂಡೂರಾಮಯ್ಯನವರು, ಹೊಳೇನರಸೀಪುರ.	ಡಿಟೋ	2,500	ಸುಣ್ಣದ ಕಾರ್ಖಾನೆಯನ್ನು ಏರ್ಪಡಿಸುವುದಕ್ಕೆ.	29—8—50
43 ಎಂ. ರಾಮಯ್ಯನವರು, ಬೆಂಗಳೂರು ಸಿಟಿ.	ಡಿಟೋ	2,000	ಉತ್ತರಹಳ್ಳಿಯಲ್ಲಿ ಒಂದು ಫ್ಲೋರ್ ಮಿಲ್ಲನ್ನು ಜೋಡಿಸುವುದಕ್ಕೆ.	9—9—50
44 ಶ್ರೀಮತಿ ಆರ್. ಪದ್ಮಾವತಮ್ಮನವರು, ಬೆಂಗಳೂರು ಸಿಟಿ.	ಡಿಟೋ	2,500	ಫ್ಲೋರ್‌ಮಿಲ್ಲನ್ನು ಕೊಂಡುಕೊಳ್ಳುವುದಕ್ಕೆ.	4—12—50
45 ಶ್ರೀಮತಿ ಲಲಿತಮ್ಮನವರು, ಬೆಂಗಳೂರು.	ಡಿಟೋ	250	ಎಂಬ್ರಾಯಿಡರಿ ಮತ್ತು ನಿಟ್ಟಿಂಗ್ ಕೆಲಸಕ್ಕೆ.	25—9—50
46 ಎಸ್. ಯಲ್ಲಪ್ಪನವರು, ಕುಣಿಗಲು	ಡಿಟೋ	400	ಚರ್ಮದ ಹೊಲಿಗೆ ಕೆಲಸಕ್ಕೆ ...	2—2—51
47 ಜಿ. ನಂಜುಂಡಪ್ಪನವರು, ಮಾಲೂರು.	ಡಿಟೋ	250	ನೆಯ್ಗೆಗೆ ...	12—3—51
48 ಕರ್ಣಾಟಕ ಪ್ರಿಂಟರ್ಸ್ ಲಿಮಿಟೆಡ್, ಬೆಂಗಳೂರು.	ರಿಜಿಸ್ಟರ್ಡ್ ಕಂಪೆನಿ	25,000	ಮುದ್ರಣಾಲಯದ ಹಳೇ ಸಾಮಾಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ.	7—11—50
49 ಮೆಸರ್ಸ್ ರೇಡಿಯೋ ಮತ್ತು ಎಲೆಕ್ಟ್ರಿಕಲ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ ಲಿಮಿಟೆಡ್, ಬೆಂಗಳೂರು.	ಪಬ್ಲಿಕ್ ಲಿಮಿಟೆಡ್ ಕಂಪೆನಿ	23,25,000	ಕ್ಯಾಷ್ ಕ್ರೆಡಿಟ್ ಸಾಲ ...	8—1—49ರಿಂದ, 27-6-49ವರೆಗೆ
50 ಶ್ರೀ ಗಣೇಶನ್ ಟೆಕ್ಸ್‌ಟೈಲ್ ಮಿಲ್ಸ್, ದಾವಣಗೆರೆ.	ಡಿಟೋ	20,00,000	ಯಂತ್ರಗಳನ್ನು ಕೊಳ್ಳುವುದಕ್ಕೆ...	4-9-48ರಿಂದ, 7-1-49ವರೆಗೆ
51 ಶ್ರೀ ಶಂಕರ ಟೆಕ್ಸ್‌ಟೈಲ್ ಮಿಲ್ಸ್ ಲಿಮಿಟೆಡ್, ದಾವಣಗೆರೆ.	ಡಿಟೋ	10,00,000	ಡಿಟೋ ...	8-9-48ರಿಂದ, 22-9-48ವರೆಗೆ
52 ಮೈಸೂರು ಕ್ರೋಂ ಟ್ಯಾನಿಂಗ್ ಕಂಪೆನಿ ಲಿಮಿಟೆಡ್, ಬೆಂಗಳೂರು.	ಡಿಟೋ	2,00,000	ಯಂತ್ರವನ್ನು ಕೊಂಡುಕೊಳ್ಳುವುದಕ್ಕೆ ಮತ್ತು ಕೆಲಸ ನಡೆಯಿಸುವ ಮುಂಗಡಕ್ಕೆ.	17—11—49ರಿಂದ 22-12-50ವರೆಗೆ
53 ಮೈಸೂರು ಟೊಬ್ಯಾಕೋ ಕಂಪೆನಿ ಲಿಮಿಟೆಡ್, ಬೆಂಗಳೂರು.	ಡಿಟೋ	2,75,000	ಕೆಲಸ ನಡೆಯಿಸುವ ಬಂಡವಾಳಕ್ಕೆ.	8-3-48ರಿಂದ, 22-6-49ವರೆಗೆ

* ಇಲ್ಲಿಯವರೆಗೂ 2,000 ರೂಪಾಯಿಗಳನ್ನು ಮಾತ್ರ ಕೊಡಲಾಗಿದೆ.

ಯಾವ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಸಾಲವನ್ನು ವಾಪಸು ಪಾವತಿಮಾಡಬೇಕಾಗಿದೆಯೆಂಬುದು		ಇದುವರೆಗೆ ಎಷ್ಟು ಮೊಬಲಗನ್ನು ವಸೂಲುಮಾಡಲಾಗಿದೆ		ಅಸಲು ಬಾಬತು ಬಾಕಿ ಬರಬೇಕಾಗಿರುವ ಮೊಬಲಗೆಷ್ಟು	ಬಡ್ಡಿ ಬಾಬತು ಬಾಕಿ ಬರಬೇಕಾಗಿರುವ ಮೊಬಲಗೆಷ್ಟು
ಬಡ್ಡಿ ದರ	ಎಷ್ಟು ಕಂತುಗಳಲ್ಲಿ ವಾಪಸು ಪಾವತಿಮಾಡಬೇಕೆಂಬುದು	ಅಸಲಿಗೆ ಎಷ್ಟು	ಬಡ್ಡಿಗೆ ಎಷ್ಟು		
ಶೇಕಡ			ರೂ. ಆ. ಪೈ.	ರೂ. ಆ. ಪೈ	ರೂ. ಆ. ಪೈ.
4	25 ತಿಂಗಳುಗಳಲ್ಲಿ.	ರೂ. 150-(12-11-49ರಿಂದ 14-2-51)	9 2 0	100 0 0	...
5	12 ಅರ್ಧ ವರ್ಷಗಳಲ್ಲಿ.	...	...	12,000 0 0	...
4	25 ತಿಂಗಳುಗಳಲ್ಲಿ.	ರೂ. 10-(18-4-50)	...	240 0 0	...
5	20 ತ್ರೈಮಾಸಿಕಗಳಲ್ಲಿ.	...	...	5,000 0 0	...
5	6 ವರ್ಷಗಳಲ್ಲಿ	...	...	6,000 0 9	...
6	20 ಅರ್ಧ ವರ್ಷಗಳಲ್ಲಿ.	...	...	4,000 0 0	...
4	10 ಅರ್ಧ ವರ್ಷಗಳಲ್ಲಿ.	...	...	2,000 0 0	...
5	32 ತ್ರೈಮಾಸಿಕಗಳಲ್ಲಿ.	ರೂ. 96-11-2	...	2,403 4 10	* ...
4	16 ಅರ್ಧ ವರ್ಷಗಳಲ್ಲಿ.	...	...	2,000 0 0	...
4	ಡಿಟೋ ...	...	...	2,500 0 0	...
4	25 ತಿಂಗಳುಗಳಲ್ಲಿ ...	...	..	250 0 0	...
5	40 ಡಿಟೋ ...	...	...	400 0 0	...
5	25 ಡಿಟೋ ...	...	...	250 0 0	...
5	ಒಂದು ವರ್ಷದ [illegible] ಪೂರ್ತಿಯಾಗಿ ವಾಪಸುಮಾಡುವುದು	...	...	25,000 0 0	...
4 ಮತ್ತು 5	ಐದು ವರ್ಷಗಳಲ್ಲಿ ತೀರಿಸುವುದು	14,87,814 9 6	1,02,179 14 10	...	1,100 15 3
4 ಕಳೆದ ವರ್ಷಕ್ಕೆ	1 ವರ್ಷದಲ್ಲಿ..	93,905 14 2	1,59,094 1 10	19,06,094-1-10	2,872 4 0
4 ಕಳೆದ ವರ್ಷಕ್ಕೆ	1 ವರ್ಷದಲ್ಲಿ...	71,316 6 7	86,511 7 5	9,28,683—9—5	4,834 3 11
5	18 ತಿಂಗಳುಗಳಲ್ಲಿ ...	...	..	...	4,836 9 10
$3\frac{1}{2}$	1,00,000 ರೂಪಾಯಿಗಳು ಎಂಟು ವರ್ಷಗಳಲ್ಲಿ.	1,24.091 9 1	6,272 12 5	1,25,000 0 0	20,669 0 7

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.)

ಜಂಜರು ನಂಬರು ಮತ್ತು ಸಾಲ ಪಡೆದವರುಗಳ ಹೆಸರು ಮತ್ತು ಸ್ಥಳ	ಸಾಲಗಳ ವಿವರ	ಮಂಜೂರು ಮಾಡಲ್ಪಟ್ಟ ಸಾಲದ ಮೊಬಲಗು	ಯಾವ ಉದ್ದೇಶಕ್ಕಾಗಿ ಸಾಲವನ್ನು ಮಂಜೂರು ಮಾಡಲಾಗಿದೆ	ಆಖೈರಾಗಿ ಸಾಲವನ್ನು ಕೊಡತಕ್ಕ ತಾರೀಖು
54 ಮೈಸೂರು ಸಿಲ್ಕ್ ಫಿಲೇಚರ್ಸ್ ಲಿಮಿಟೆಡ್ ತಿರುಮಕೂಡಲು ನರಸೀಪುರ.	ಪಬ್ಲಿಕ್ ಲಿಮಿಟೆಡ್ ಕಂಪೆನಿ.	8,00,000 1,00,000	ಕೆಲಸ ನಡೆಯಿಸುವ ಬಂಡವಾಳಕ್ಕೆ.	7-7-48ರಿಂದ, 1-11-49ವರೆಗೆ
55 ಭಾರತಿ ಟ್ರೇಡಿಂಗ್ ಕಂಪೆನಿ ಹಾಸನ. ಪಾಲುದಾರರುಗಳು.— 1 ಕೆ. ಲಕ್ಕಪ್ಪನವರು. 2 ಎಲ್. ತಿಮ್ಮೇಗೌಡರು. 3 ಜಿ. ಎಸ್. ನಲ್ಲೂರೇಗೌಡರು. 4 ಕೆ. ಎಸ್. ನಂಜುಂಡಪ್ಪನವರು.	ಪಾಲುಗಾರಿಕೆ ಫರ್ಮ್	50,000	ಹೆಂಚಿನ ಕಾರ್ಖಾನೆಯ ಅಭಿವೃದ್ಧಿಗೆ.	1—7—49.

ಯಾವ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಸಾಲವನ್ನು ವಾಪಸು ಪಾವತಿಮಾಡಬೇಕಾಗಿದೆಯೆಂಬುದು		ಇದುವರೆಗೆ ಎಷ್ಟು ಮೊಬಲಗನ್ನು ವಸೂಲು ಮಾಡಲಾಗಿದೆ		ಅಸಲು ಬಾಬತು ಬಾಕಿ ಬರಬೇಕಾಗಿರುವ ಮೊಬಲಗೆಷ್ಟು	ಬಡ್ಡಿ ಬಾಬತು ಬಾಕಿ ಬರಬೇಕಾಗಿರುವ ಮೊಬಲಗೆಷ್ಟು
ಬಡ್ಡಿ ದರ ಎಷ್ಟು	ಎಷ್ಟು ಕಂತುಗಳಲ್ಲಿ ವಾಪಸು ಪಾವತಿಮಾಡಬೇಕೆಂಬುದು	ಅಸಲಿಗೆ ಎಷ್ಟು	ಬಡ್ಡಿಗೆ ಎಷ್ಟು		
ಶೇಕಡ			ರೂ. ಆ. ಪೈ	ರೂ. ಆ. ಪೈ	ರೂ. ಆ. ಪೈ
4 5	8 ವರ್ಷಗಳಿಗೆ ಮುಂಚೆ ವಾರ್ಷಿಕ ಕಂತುಗಳಲ್ಲಿ.	...	14,258 14 6	1,75,000 0 0	46,444 8 6
5	5 ವರ್ಷಗಳಲ್ಲಿ	...	...	45,000 0 0	1,728 15 0

ಶ್ರೀ ಎಂ. ಎಸ್. ಮಹಂತದೇವರು.—ಈ ಪಟ್ಟಿಯ ಪ್ರಕಾರ 55 ಸಂದರ್ಭಗಳಲ್ಲಿ ಸಾಲಗಳನ್ನು ಕೊಡೋಣವಾಗಿದೆ. ಈ ಕೈಗಾರಿಕೆಗಳಲ್ಲಿ ಯಾವುದು ನಡೆಯುತ್ತಿದೆ ಯಾವುದು ನಡೆಯುತ್ತಿಲ್ಲ ಎಂಬದನ್ನು ಸರ್ಕಾರದವರು ವಿಚಾರಿಸಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಮ್ಮ ಪ್ರಶ್ನೆಯ ವ್ಯಾಪ್ತಿ ಬಹಳ ದೊಡ್ಡದಾಗಿತ್ತು. ಕೈಗಾರಿಕೋದ್ಯಮಗಳಲ್ಲದೆ ವ್ಯಕ್ತಿಗಳಿಗೆ ಕೊಟ್ಟಿರುವ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್, ತಕ್ಕಾವಿ ಲೋನ್ ಎಲ್ಲವೂ ಸೇರಿದಂತಿತ್ತು. ಆದರೆ ಉತ್ತರ ಕೊಟ್ಟಿರುವುದು ಕೇವಲ ಕೈಗಾರಿಕೆ ಸಾಲಗಳ ವಿಚಾರ ಮಾತ್ರ.

ಶ್ರೀ ಎಂ. ಎಸ್. ಮಹಂತದೇವರು.—ಈ 55 ಸಂದರ್ಭಗಳಲ್ಲಿ ಸಾಲಗಳನ್ನು ಕೊಡಲಾಗಿದೆ, ಅವುಗಳಲ್ಲಿ ಯಾವ ಉದ್ಯಮ ನಡೆಯುತ್ತಿದೆ, ಯಾವುದು ನಡೆಯುತ್ತಿಲ್ಲ ಎಂಬ ಬಗ್ಗೆ ವರದಿಯನ್ನು ತರಿಸಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲಾಖೆಯವರು ಮೇಲ್ವಿಚಾರಣೆ ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಮಹಂತದೇವರು.—ಯಾರು ಮಾಡುತ್ತಾರೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೈಗಾರಿಕೆ ಇಲಾಖೆಯ ಡೈರೆಕ್ಟರವರು.

ಶ್ರೀ ಎಂ. ಎಸ್. ಮಹಂತದೇವರು.—ಇವುಗಳಲ್ಲಿ ಕೆಲವು ಸಾಲಗಳಿಗೆ ಬಡ್ಡಿದರ ಜಾಸ್ತಿಯಾಗಿದೆ, ಇನ್ನು ಕೆಲವಕ್ಕೆ ಕಡಿಮೆಯಾಗಿದೆ, ಇದಕ್ಕೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮೊದಲು ಬಡ್ಡಿಯದರ ಕಡಿಮೆ ಇತ್ತು, ಆ ಮೇಲೆ ಸ್ವಲ್ಪ ಹೆಚ್ಚಿಸಿದ್ದೇವೆ.

ಶ್ರೀ ಎಂ. ಎಸ್. ಮಹಂತದೇವರು.—ಪ್ರಾರಂಭದಲ್ಲೇ ಜಾಸ್ತಿ ಇದೆ ಆಮೇಲೆ ಕಡಿಮೆ ಇದೆ, ಪರಾಂಬರಿಸಬೇಕು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.-ಯಾವುದು ದಯವಿಟ್ಟು ತಿಳಿಸಿ.

ಶ್ರೀ ಎಂ. ಎಸ್. ಮಹಂತದೇವರು.—1948ರಲ್ಲಿ ಶೇಕಡ 4 ಇದೆ, 1949ರಲ್ಲಿ ಶೇಕಡ $3\frac{1}{2}$ಗೆ ಇಳಿಸಿದ್ದೀರಲ್ಲ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನು ಇಳಿಸುವುದಕ್ಕೆ ಕಾರಣವಿದೆ. ಅವರು ಗೃಹಕೈಗಾರಿಕೆಗಳ ವಿಚಾರವಾಗಿ ಪ್ರಯೋಗನಡೆಸಲು ಒಂದು ಸಹಕಾರ ಸಂಘದ ವ್ಯವಸ್ಥೆಮಾಡಿದರು. ಅದು ಒಬ್ಬ ವ್ಯಕ್ತಿಗೆ ಕೊಟ್ಟ ಸಾಲವಲ್ಲ. ಆದಕಾರಣ ಶೇಕಡ $\frac{1}{2}$ದಷ್ಟು ಕಡಿಮೆಮಾಡಲಾಯಿತು.

ಶ್ರೀ ಎಂ. ಎಸ್. ಮಹಂತದೇವರು.—ಈ ಪಟ್ಟಿಯಲ್ಲಿ 30, 31 ಮತ್ತು 32ನೆಯ ನಂಬರಿನ ಸಾಲಗಳಿಗೆ ಶೇಕಡ 5 ಬಡ್ಡಿ, 33, 34 ಮತ್ತು 35ನೆಯ ಸಾಲಗಳಿಗೆ ಶೇಕಡ 4ರಂತೆ ಬಡ್ಡಿ ಇದೆ, ಕಾರಣವೇನು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕಾರಣ ಇಷ್ಟೆ: 30 ರಿಂದ 32ನೆಯ ನಂಬರಿನ ಕೈಗಾರಿಕೆಗಳು ದೊಡ್ಡ ಕಾರ್ಖಾನೆಗಳು, 33, 34, 35 ಮರದ ಕೆತ್ತನೆ ಕೆಲಸ. ಪ್ರಾಯಶಃ ಇವು ಗೃಹಕೈಗಾರಿಕೆಗೆ ಸಂಬಂಧಪಟ್ಟವೆಂದು ಸ್ವಲ್ಪ ರಿಯಾಯಿತಿ ತೋರಿಸಲಾಗಿದೆ. ಮಿಕ್ಕ ದೊಡ್ಡ ಕೈಗಾರಿಕೆಗಳಿಗೆ ಈ ರಿಯಾಯಿತಿ ಇಲ್ಲ.

ಶ್ರೀ ಎಂ. ಎಸ್. ಮಹಂತದೇವರು.—ತಾವು ಕೊಟ್ಟಿರುವ ತಃಖ್ತೆಯ ಪ್ರಕಾರ ಸಾಲಗಳ ಬಾಕಿ ಬಹಳ ಹೆಚ್ಚಾಗಿದೆ, ಇದನ್ನು ವಸೂಲುಮಾಡುವುದಕ್ಕೆ ಏನಾದರೂ ವ್ಯವಸ್ಥೆಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ತಕ್ಕ ಏರ್ಪಾಡುಮಾಡಿದ್ದಾರೆ.

Sri V. M. MASCARENHAS.—(Bangalore Retroceded Area—General) In respect of the loans for the year 1950-51, repayable in one year—may I assume that they have now been repaid ?

The Hon'ble Sri H. C. DASAPPA.—The original agreement contemplated repayment within one year after the recovery of the moneys by the sale of the shares, but that did not mature and therefore there was a second agreement whereby they had to make monthly payments.

Sri V. M. MASCARENHAS.—The period has been enhanced. Is it so ?

The Hon'ble Sri H. C. DASAPPA.—Yes, on the basis of monthly payment.

Sri V. M. MASCARENHAS.—In the case of Messrs. Radio and Electrical Manufacturing Co., (Serial Number 49) there is a loan of as much as 9 lakhs still due ? Is so much amount due ?

The Hon'ble Sri H. C. DASAPPA.—The Hon'ble Member will see that it is a cash credit loan. It only means that up to that amount of Rs. 23,25,000, he is empowered to draw the loan. It does not mean that he draws the whole amount.

Sri V. M. MASCARENHAS.—Is this in addition to Rs. 20 lakhs invested by the Government as shares in the company ?

The Hon'ble Sri H. C. DASAPPA.—Yes.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ)—ಈ ಪಟ್ಟಿಯಲ್ಲಿ 50ನೆಯ ಐಟಂಗೆ ಕೊಟ್ಟಿರುವ ಸಾಲದ ಅವಧಿಯನ್ನು ಒಂದು ವರ್ಷದಿಂದ ಎಷ್ಟು ವರ್ಷಕ್ಕೆ ಹೆಚ್ಚಿಸಿದ್ದೀರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಿಂಗಳಿಗೆ 30 ಸಾವಿರದಂತೆ ಕೊಡಬೇಕೆಂದು ಮಾಡಿದೆ.

ಶ್ರೀ ಎ. ಭೀಮಪ್ಪನಾಯಕರು.—ಒಂದೇ ವರ್ಷದಲ್ಲಿ ಹಣವನ್ನು ವಾಪಸುಕೊಡುತ್ತೇವೆಂದು ಹೇಳಿದವರು ಹಾಗೆ ಕೊಡದೇ ಹೋದ ಮೇಲೆ, ತಾವು ವಸೂಲಿಗೆ ಪ್ರಯತ್ನಪಟ್ಟು ಅವರು ಕೊಡದೇ ಹೋದ ಮೇಲೆ ತಾನೆ ಈ ರೀತಿ ಪ್ರಯತ್ನಮಾಡಿರುವುದು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು. ವ್ಯಾಪಾರ ಬಿದ್ದು ಹೋದ ಕಾರಣ ಅವರು ಗೊತ್ತಾದ ಕಾಲದಲ್ಲಿ ಕೊಡಲಿಲ್ಲ. ಅದಕ್ಕಾಗಿ ತಿಂಗಳು ತಿಂಗಳಿಗೆ ಕೊಡಬೇಕೆಂದು ಗೊತ್ತುಮಾಡಿದೆವು.

ಶ್ರೀ ಎ. ಭೀಮಪ್ಪನಾಯಕರು.—ಎಷ್ಟು ವರ್ಷದಲ್ಲಿ ತೀರಿಸುತ್ತಾರೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಿಂಗಳಿಗೆ 30 ಸಾವಿರದಂತೆ ಕೊಟ್ಟು ತೀರಿಸಬೇಕು.

ಶ್ರೀ ಎ. ಭೀಮಪ್ಪನಾಯಕರು.—50 ಮತ್ತು 51 ಆ ಎರಡು ಮಿಲ್ಲಿನವರೂ 30 ಸಾವಿರದಂತೆ ಕೊಡುತ್ತಾರೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಶಂಕರ ಟೆಕ್ಸ್‌ಟೈಲ್ ಮಿಲ್ಸ್ 15 ಸಾವಿರದಂತೆ ಮತ್ತು ಗಣೇಶ ಟೆಕ್ಸ್‌ಟೈಲ್ ಮಿಲ್‌ನವರು 30 ಸಾವಿರದಂತೆ ಕೊಡಬೇಕು.

ಶ್ರೀ ಎ. ಭೀಮಪ್ಪನಾಯಕರು.—ಅವರಿಂದ ಸರಿಯಾಗಿ ಹಣ ಬರುತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬರುತ್ತಿದೆ.

ಶ್ರೀ ಎ ಭೀಮಪ್ಪನಾಯಕರು.—ಪಟ್ಟಿಯ 31 ನೆಯದು, ಕೊಟ್ಟಿಗೆ ಈಶ್ವರಪ್ಪನವರ ಕಾರ್ಖಾನೆ ಯಾವ ಊರಿನಲ್ಲಿದೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಚಿತ್ರದುರ್ಗದಲ್ಲಿದೆ.

Sri A. BHEEMAPPA NAIK.—Where is the Ginning Factory situated? There is no such factory in Chitaldrug Town.

The Hon'ble Sri H. C. DASAPPA.—It is not in Chitaldrug Town. It is away, about a mile, from the town.

Sri A. BHEEMAPPA NAIK.—What is the name of the village wherein it is located ?

The Hon'ble Sri H. C. DASAPPA.—I do not remember that village. It is not in Chitaldrug Town. It is in Chitaldrug Taluk, Chitaldrug Hobli and just a mile from the Town. It is so near Chitaldrug that I think my Hon'ble friend can easily pay a visit to that factory.

Sri A. BHEEMAPPA NAIK.—May I tell the Hon'ble Minister that there is no such factory working at present. Will the Hon'ble Minister kindly make enquiries as to whether any cotton is ever ginned at all there and if so the quantity of cotton ginned ? Are at least 10 bales ginned there ?

The Hon'ble Sri H. C. DASAPPA.—I take it that there is very much more of ginning than mere 10 bales there.

Sri A. BHEEMAPPA NAIK.—I challenge that not even one bale is ginned there.

The Hon'ble Sri H. C. DASAPPA.—I would be glad to have any information of that sort for investigation.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈಗ ಕೊಟ್ಟಿರುವ ಈ ಸಾಲಗಳು ಆಧಾರದ ಸಾಲಗಳೋ ಅಥವಾ ಆಧಾರವಿಲ್ಲದ ಸಾಲಗಳೊ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಲ್ಲವೂ ಆಧಾರದ ಸಾಲಗಳೇ. ಪ್ರತಿಯೊಂದಕ್ಕೂ ಸೆಕ್ಯೂರಿಟಿ ತೆಗೆದುಕೊಂಡಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಆಧಾರ ಎಂದರೆ, ಸ್ಥಿರಸ್ವತ್ತುಗಳ ಆಧಾರವೋ ಅಥವಾ ಬೇರೆ ರೀತಿಯ ಆಧಾರವೊ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸ್ಥಿರ ಸ್ವತ್ತುಗಳೂ ಸೇರಿವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಕೊಟ್ಟಿರುವ ಹಣಕ್ಕೆ ಸರಿಯಾದ ಆಧಾರವಿದೆ ಎಂದು ಸರ್ಕಾರಕ್ಕೆ ಸರಿಯಾಗಿ ಗೊತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಲ್ಲವನ್ನೂ ತನಿಖೆಮಾಡಿ ನೋಡಿ ಸಾಕಾದಷ್ಟು ಸೆಕ್ಯೂರಿಟಿಯನ್ನು ತೆಗೆದುಕೊಂಡೇ ಸಾಲಗಳನ್ನು ಕೊಡುವುದು.

ಶ್ರೀ ಎಚ್. ಸಿದ್ದವೀರಪ್ಪನವರು.—1947ನೆಯ ಜುಲೈ ಒಂದನೆಯ ತಾರೀಖಿನಿಂದೀಚೆಗೆ ಯಾವುದಾದರೂ bad debts ಆಗಿದೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮೈಸೂರು ಟೊಬ್ಯಾಕೋ ಕಂಪೆನಿ ಲಿಮಿಟೆಡ್ ಬೆಂಗಳೂರು ಇದಕ್ಕೆ ಕೊಟ್ಟಿರುವ 2,75,000 ರೂಪಾಯಿ ಸಾಲದ ಪೈಕಿ ಅಸಲು 12,500 ರೂಪಾಯಿ ಮತ್ತು ಬಡ್ಡಿ 20,669-0-7 ಬಾಕಿ ಇದೆ. ಏತಕ್ಕೆ ಇಷ್ಟೊಂದು ಬಾಕಿ ಬಿದ್ದಿದೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅಸಲು ಬಡ್ಡಿಗಾಗಿ ಕೊಡುವಷ್ಟು ಕೊಟ್ಟಿದ್ದಾರೆ, ಅಷ್ಟು ಬಾಕಿ ಉಳಿದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇನ್ನೂ ಬೇಕಾದಷ್ಟು ಬಾಕಿ ನಿಂತಿದೆಯಲ್ಲಾ, ಅದನ್ನು ವಸೂಲು ಮಾಡುವುದಕ್ಕೇನಾದರೂ ಪ್ರಯತ್ನಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ಸರಿಯಾಗಿ ಹಣ ವಾಪಸು ಕೊಡುತ್ತಿದ್ದಾರಲ್ಲಾ! ಅವರಿಗೆ ಸಾಲ ಕೊಟ್ಟಿರುವುದು 2,75,000 ರೂಪಾಯಿ. 8 ವರ್ಷಗಳವರೆಗೆ ವಾಯಿದೆ. ಒಂದು ಲಕ್ಷ ಕೊಟ್ಟಿದೆ. ಈಗ ಕಾಲಕಾಲಕ್ಕೆ ಹಣಪಾವತಿ ಸರಿಯಾಗಿ ಮಾಡುತ್ತಿದ್ದಾರೆ. ಇನ್ನು ಇದಕ್ಕಿಂತಲೂ ಸಲೀಸಾಗಿ ಪಾವತಿಮಾಡುವವರಿದ್ದಾರೆಯೇ ?

ಶ್ರೀ ಎಸ್. ರಂಗರಾಮಯ್ಯನವರು.—ಈಗ ಮೈಸೂರು ಟೊಬ್ಯಾಕೋ ಕಂಪೆನಿಯ ಸ್ಥಿರ ಆಸ್ತಿಪಾಸ್ತಿಗಳೆಲ್ಲವೂ ಸರ್ಕಾರಕ್ಕೆ ಆಧಾರವಾಡಿಕೊಂಡಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪೂರ್ತಿ !

ಶ್ರೀ ಎಸ್. ರಂಗರಾಮಯ್ಯನವರು.—ಈಗ ಅದರ ಆಸ್ತಿ ಏನಿದೆಯೆಂಬುದನ್ನು ವಿಚಾರ ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬೇಕಾದಷ್ಟಿದೆ. ನಾವು ಕೊಟ್ಟಿರುವ ಸಾಲಕ್ಕೆ ಅವರ ಆಸ್ತಿ ಬಹಳಮಟ್ಟಿಗೆ ಹೆಚ್ಚಿಗೆ ಇದೆ. ಅದರ ಷೇರುಗಳ ಬೆಲೆ 3 ರೂಪಾಯಿಗೆ ಇಳಿದಿದ್ದಂತಾದ್ದು ಈಗ 8 ರೂಪಾಯಿಗೆ ಮೇಲೆ ಹೋಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇದರ ಬ್ಯಾರ್ನಗಳು ಅನೇಕ ಕಡೆ ಕೆಲಸಮಾಡುತ್ತಿಲ್ಲವೆಂಬುದು ತಮಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೆಲವು ಕಡೆ ಕೆಲಸಮಾಡುತ್ತಿಲ್ಲ. ಕೆಲವು ಕಡೆ ಅವರೇ ತೆಗೆದಿರುವುದರಿಂದ ಅವು ಮುಚ್ಚಿವೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಬ್ಯಾರಕ್ ಗಳನ್ನು ಒಡೆದು ಮಾರುತ್ತಿದ್ದಾರೆಂಬುದು ತಮಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮಾರಿರ ಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆಮಾರು ವುದಕ್ಕೆ ತಾವು 'Release' ಮಾಡಿ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೆ ಮಾರುವಪಕ್ಷಕ್ಕೆ ಸರ್ಕಾರದ ಅನುಮತಿ ಪಡೆದೇ ಮಾರಿ ರುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಮಾರಿದಾಗ, ಬಂದ ಹಣದಲ್ಲಿ ಕೆಲವು ಭಾಗವನ್ನು ತಮಗೆ ಕೊಡು ತ್ತಾರೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಕೊಟ್ಟಿ ದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಇಲ್ಲಿ ಕೊಟ್ಟಿ ರುವ ಪಟ್ಟಿಯಲ್ಲಿ 35 ರಿಂದ 47ರ ವರೆಗೂ ಸಂಬಂಧ ಪಟ್ಟ ವ್ಯಕ್ತಿಗಳು ಯಾರೂ ಅಸಲು ಕೊಟ್ಟಿಲ್ಲ, ಇತ್ತಕಡೆ 'amount due towards interest' ಎನ್ನುವ ಕಡೆ ಏನೂ ವಿವರವನ್ನೂ ತಿಳಿಸಿಲ್ಲ. ಅವರುಗಳ ವಿಷಯ ದಲ್ಲಿ ಏನಾದರೂ ಮಾಫಿ ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವೆಲ್ಲಾ ಈಚೆಗೆ ಕೊಟ್ಟಿರುವುದು. ಕಳೆದ ಫೆಬ್ರುವರಿ ತಿಂಗಳಿ ನಿಂದೀಚೆಗೆ ಅವು ಬಂದಿವೆ.

ಶ್ರೀ ಎಸ್. ರಂಗರಾಮಯ್ಯನವರು.— ಅವರ ಆಸ್ತಿ ಪಾಸ್ತಿಗಳನ್ನೆಲ್ಲಾ ಆಗಾಗ್ಗೆ ಪರಿಶೀಲನೆಮಾಡುವುದು, ಅವುಗಳ ಬೆಲೆಯೇನು ಎಂಬದನ್ನು ವಿಚಾರಿಸುವುದು— ಇವೆಲ್ಲಾ ಯಶಸ್ವಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದಕ್ಕೇನಾದರೂ ಏರ್ಪಾ ಡು ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ಇಲಾಖೆಯವರು ಏರ್ಪಾಡುಮಾಡಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—Departmental ಆಗಿ ಮಾಡಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು.

ಶ್ರೀ ಎಂ. ಎಲ್. ಜೋಯಿಸರು (ಮೈಸೂರು ಜಿಲ್ಲೆ)— ಈ ಪಟ್ಟಿಯಲ್ಲಿ 29 ರಿಂದ 31ರವರೆಗೆ ಸಾಲ ಕೊಟ್ಟಿರು ವುವುಗಳ ಸಂಬಂಧದಲ್ಲಿ ಬಡ್ಡಿ ಬಾಕಿಯಾಗಲಿ, ಅಸಲು ಬಾಕಿಯಾಗಲೀ ಏನೂ ತಿಳಿಸಿಲ್ಲ. ಅವುಗಳಿಗೆ 10 ವರ್ಷದ ವಾಯಿದೆ ಕೊಟ್ಟಿದ್ದೀರಿ. ಅಂದರೆ ಅವರೇನೂ ಹಣ ಕೊಟ್ಟಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ಏನೂ ಕೊಟ್ಟಿಲ್ಲ ; ಆದ್ದರಿಂದ ಇಲ್ಲಿ ತಿಳಿಸಿಲ್ಲ.

ಶ್ರೀ ಎಂ. ಎಲ್. ಜೋಯಿಸರು.—ವರ್ಷಕ್ಕೊಂದು ಸಾರಿ ಅವರು ಕೊಡಬೇಕಾಗಿದೆಯಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು.

ಶ್ರೀ ಎಂ. ಎಲ್. ಜೋಯಿಸರು.—ಈಗಾಗಲೇ ಅವ ರಿಗೆ ಹಣಕೊಟ್ಟು ಒಂದು ವರ್ಷದ ಮೇಲೆ ಇಷ್ಟು ದಿವಸ ವಾಯಿತು. ಇದುವರೆಗೂ ಅವರಿಂದ ಏನೂ ಬಂದಿಲ್ಲ. ಅವರ ಮೇಲೇನಾದರೂ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು —ಇಲಾಖೆ ಯವರು ಕಾರ್ಯಕ್ರಮತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಂ. ಎಲ್. ಜೋಯಿಸರು.—ಈ ಫ್ಯಾಕ್ಟರಿಗೆ ತಾವು ಯಾವಾಗಲಾದರೂ ಹೋಗಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೋಗಿ ದ್ದೇನೆ.

ಶ್ರೀ ಎಂ. ಎಲ್. ಜೋಯಿಸರು.—ಅದು ಕೆಲಸ ಮಾಡುತ್ತಿರುವುದನ್ನು ನೀವು ನೋಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಾನೇ ನೋಡಿದ್ದೇನೆ.

[Mr. SPEAKER in the Chair.]

ಶ್ರೀ ಎಚ್. ಸಿದ್ದನಂಜಪ್ಪನವರು (ಹಾಸನ ಜಿಲ್ಲೆ)— 55ನೆಯ ನಂಬರಿನವರಿಗೆ 50,000 ರೂಪಾಯಿಗಳನ್ನು ಸಾಲಕೊಟ್ಟಿದ್ದೀರಿ. ಅದರಲ್ಲಿ ಏನೂ ವಾಪಸು ಕೊಟ್ಟಿಲ್ಲ. ಬಾಕಿ ಕಲಮಿನಲ್ಲಿ ಮಾತ್ರ 45,000 ರೂಪಾಯಿಗಳನ್ನು ತೋರಿಸಿದ್ದೀರಿ. ಹಾಗಾದರೆ ಉಳಿದ 5,000 ರೂಪಾಯಿ ಏನಾಯಿತು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅಲ್ಲಿ ಸ್ವಲ್ಪ ತಪ್ಪಿರುವ ಹಾಗಿದೆ. 50,000 ರೂಪಾಯಿಗ ಳಲ್ಲಿ ಸ್ವಲ್ಪ ಭಾಗ ವಾಪಸಾಗಿದೆ. 45,000 ರೂಪಾ ಯಿಗಳೇ ಅಸಲು. 50,000 ರೂಪಾಯಿಗಳಲ್ಲಿ ಸ್ವಲ್ಪ ಭಾಗದಷ್ಟು ಅಸಲಿಗೆ ಕೊಡದೆ ಇದ್ದಿದ್ದರೆ ಇಲ್ಲಿ ಅಸಲು 45,000 ಎಂದು ಹೇಳುತ್ತಿರಲಿಲ್ಲ. The Hon'ble Member can take it as part payment.

Mr. SPEAKER.—Question time is over.

UNSTARRED QUESTIONS.

(to which answers were laid on the Table).

Representation of all Communities in the Appointments of Professors and Assistant Professors.

*Q.—230. Sri B. CHANNABYRE GOWDA (Bangalore District—General).—

Will the Government be pleased to state :—

(a) who appoints the Professors and Assistant Professors in the State ;

(b) (i) the procedure adopted in such appointments, and (ii) the arrangement made to ensure representation of all communities in these appointments ?

A.—The Hon'ble Sri K. CHENGALARAYA REDDY (Chief Minister).—

(a) Professors and Assistant Professors on a permanent basis are appointed by Government on the recommendation of the University Council.

The University Council appoints Professors and Assistant Professors temporarily for a period of six months.

(*b*) (i) Vacancies of Professors are filled up after advertisement, selection by a Committee, approval of the University Council and sanction by Government.

Vacancies of Assistant Professors are ordinarily filled up from among the teaching staff of the University. If no suitable candidate is available the post is advertised. The selection is made by a Committee and the appointment is recommended to Government after approval by the University Council.

(ii) With a view to give adequate representation to all communities, preference is given generally to persons belonging to backward communities, if their qualifications are approximately equal to those of other candidates.

Abolition of the Post of Pro-Chancellor of the University.

Q.—178. **Sri Kadidal MANJAPPA** (Shimoga District—General).—

Will the Government be pleased to state :—

whether they are going to abolish the post of Pro-Chancellor of the University of Mysore ?

A.—**The Hon'ble Sri K. CHENGALARAYA REDDY** (Chief Minister).—

The post is vacant now. The question of abolition of the post will be taken up, while considering the new University Act.

Statement Laid on the Table.

Mr. SPEAKER.—(The Hon'ble Sri V. Venkatappa).— The Hon'ble Sri R. Chennigaramiah will lay on the Table the Statement on the working of the Elementary Education Act.

The Hon'ble Sri R. CHENNIGARAMIAH (Minister for Local Self-Government).—Sir, I beg to lay on the Table the statement on the working of the Elementary Education Act, 1941, for the year 1950-51.

Mr. SPEAKER.—Copies will be distributed to Hon'ble Members.

LEGISLATIVE BUSINESS

Mr. SPEAKER (The Hon'ble Sri V. Venkatappa).—Discussion on the consideration of the clauses of the Mysore Village Panchayets and District Board Bill, 1951, will be continued.

Clause 7. There is an amendment by Sri T. Madiah Gowda.

Sri T. MADIAH GOWDA.—Sir, I am not moving the amendment.

Mr. SPEAKER.—The question is :

" That clause 7 stand part of the Bill."

The motion was adopted.

Clause 7, was added to the Bill.

Mr. SPEAKER.—Clause 8. There is an amendment by Sri L. Siddappa. The Hon'ble Member is not present.

The question is :

" That clause 8 stand part of the Bill."

The motion was adopted.

Clause 8, was added to the Bill.

Mr. SPEAKER.—Clause 9. There is an amendment by the Hon'ble Sri R. Chennigaramiah.

The Hon'ble Sri R. CHENNIGARAMIAH.—Sir, I beg to move :

" That in clause 9 (d) for the words ' Criminal Procedure Code' the words ' Code of Criminal Procedure' shall be substituted."

This is only a verbal change. ಸಾಮಾನ್ಯವಾಗಿ ಎಲ್ಲಾ ಕಾನೂನುಗಳಲ್ಲೂ ಹೀಗೆಯೇ ಇರುತ್ತದೆ. ಅದೇ ರೀತಿ ಇಲ್ಲಿಯೂ ಮಾಡಬಹುದೆಂದು ನಾನು ಸೂಚಿಸುತ್ತೇನೆ.

Mr. SPEAKER.—The question is :

" That in clause 9 (d) for the word ' Criminal Procedure Code' the words ' Code of Criminal Procedure' shall be substituted."

The motion was adopted.

Mr. SPEAKER.—The question is :

" That clause 9, as amended, stand part of the Bill."

The motion was adopted.

Clause 9 as amended, was added to the Bill.

Mr. SPEAKER.—Clause 10. Sri K. Sampangiramiah. He has requested the Chair to allow Sri T. Ramachar to move his amendments as a special case.

Sri T. RAMACHAR.—(Kolar District General).—I am not moving this amendment.

Mr. SPEAKER.—There is another amendment by Sri M. Govinda Reddy. The Hon'ble Member is not present. There is no other amendment.

The question is:

"That clause 10 stand part of the Bill."

The motion was adopted.

Clause 10 was added to the Bill.

Mr. SPEAKER.—Clause 11. There is no amendment.

The question is:

"That clause 11 stand part of the Bill."

The motion was adopted.

Clause 11 was added to the Bill.

Mr. SPEAKER.—Clause 12. There is an amendment by Sri T. Madiah Gowda.

Sri T. MADIAH GOWDA.—Bangalore District—General).—Sir, I beg to move

"That in the marginal note, the words 'and Vice-Chairman' shall be omitted."

It is merely a clerical mistake and it may be accepted.

Mr. SPEAKER.—Amendment moved:

"That in the marginal note the words 'and Vice-Chairman' shall be omitted."

The Hon'ble Sri R. CHENNIGARAMIAH.—I accept the amendment.

Mr. SPEAKER.—The question is:

"That in the marginal note, the words and Vice-Chairman' shall be omitted."

The motion was adopted.

Mr. SPEAKER.—The question is:

"That Clause 12, as amended, stand part of the Bill."

The motion was adopted.

Clause 12 asamended was added to the Bill.

Mr. SPEAKER.—There is a new clause 12A. suggested by Sri K. Sampangiramiah.

Sri T. RAMACHAR.—I am not moving it.

Mr. SPEAKER.—Clause 13. There is an amendment by Sri L. Siddappa.

Sri L. SIDDAPPA.—(Shimoga District—General) My amendment reads like this:

"That the words 'shall be declared to have become vacant by the Deputy Commissioner' shall be substituted for the words 'shall become vacant', in line 2."

ಇದನ್ನು ಸೂಚಿಸುವುದರ ಉದ್ದೇಶವಿಷ್ಟೆ. ಯಾರಾದರೂ ಅನರ್ಹತೆಯುಳ್ಳವರು ಚುನಾಯಿತರಾಗಿ ಬಂದರೆ ಅವರು ಚುನಾಯಿತರಾಗಿ ಬಂದದ್ದು ಡೆಪ್ಯುಟಿ ಕಮಿಷನರ ನೋಟೀಸಿಗೆ ಹೋಗಿ, ಅವರು ಇಂಥವರು ಚುನಾಯಿತರಾಗಿ ಬಂದವರು ಸದಸ್ಯರಾಗಿರಲು ಅನರ್ಹರೆಂದು declare ಮಾಡಿದ ಮೇಲೆ ಮಾತ್ರವೇ ಅವರ ಸದಸ್ಯತ್ವ ಹೋಗುತ್ತದೆ. ಇಲ್ಲದಿದ್ದರೆ, ಅಲ್ಲಿಯವರೆಗೂ ಆ ಸದಸ್ಯರು continue ಆಗುವುದಕ್ಕೆ ಅವಕಾಶ ಎದೆ. ಇದನ್ನು ತಪ್ಪಿಸುವುದಕ್ಕಾಗಿ, ಈ ತಿದ್ದುಪಡಿಯನ್ನು ಸೂಚಿಸಿದ್ದೇನೆ. ಇದರ ಮೇಲೆ ಹೆಚ್ಚಿನ ಮಾತಿನ ಅವಶ್ಯಕವಿಲ್ಲ. ಈ ರೀತಿ ಮಾಡುವುದರಿಂದ ಅನುಕೂಲವುಂಟು. ಆದ್ದರಿಂದ ಸಭೆಯವರು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.—

Mr. SPEAKER.—Amendment moved:

"That the words 'shall be declared to have become vacant by the Deputy Commissioner' shall bs substituted for the words 'shall become vacant' in line 2."

The Hon'ble Sri R. CHENNIGARAMIAH.—I accept the amendment.

Mr. SPEAKER.—The question is:

"That the words 'shall be declared to have become vacant by the Deputy Commissioner' shall be substituted for the words 'shall become vacant', in line 2."

The motion was adopted.

Mr. SPEAKER.—The question is:

"That Clause 13, as amended, stand part of the Bill."

The motion was adopted.

Clause 13 as amended, was added to the Biil.

Mr. SPEAKER.—Clause 14. Sri L. Siddappa has an amendment.

Sri L. SIDDAPPA.—My amendment reads as follows:

"That the figure '5' shall be substituted for the figure '4 and in the proviso the figure '6' shall be substituted for the figure '5'."

ಈಗ ಇದರಲ್ಲಿ ಸೂಚಿಸಿರುವಹಾಗೆ 4 ಮತ್ತು 5 ವರ್ಷಗಳೆಂದು ಇದೆ. ಆದರೆ-ಈಗಿನ ಹೊಸ ರಾಜ್ಯಾಂಗ ಶಾಸನದ ಪ್ರಕಾರ ಇಂಥಾ ಆಫೀಸುಗಳ ಟರ್ಮ್ಗಳನ್ನು

ಹೆಚಿಸತಕ್ಕದ್ದು ಸ್ವಾಭಾವಿಕವಾದುದು. ಈ ನೀತಿಗನುಸಾರವಾಗಿಯೇ ಹಿಂದೆ ಶಾಸನ ಸಭೆ ಮತ್ತು ಪ್ರಜಾ ಪ್ರತಿನಿಧಿ ಸಭೆಗಳ ಕಾಲಾವಧಿ 4 ವರ್ಷಗಳಿದ್ದದ್ದನ್ನು ಈಗ 5 ವರ್ಷಗಳಿಗೆ ಹೆಚ್ಚಿಸಿದ್ದಾರೆ. ಅದೇರೀತಿ ಈ ಸಂದರ್ಭದಲ್ಲಿ ಸಹ ಈ ಪಂಚಾಯಿತಿ ಆಫೀಸಿನ ಕಾಲಾವಧಿಯನ್ನು 5 ವರ್ಷಗಳೆಂದು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಹೀಗೊಂದು ಹೆಚ್ಚಿನ ಕಾಲಾವಕಾಶ ಮಾಡಿಕೊಡುವುದರಿಂದ ಆಡಳಿತದ ಅನುಭವ ಪಡೆದು ದೇಶಸೇವೆ ಮಾಡಲು ಅನುಕೂಲವಾಗುತ್ತೆಂದು ನಾನು ಈ ತಿದ್ದುಪಡಿಯನ್ನು ತಂದಿದ್ದೇನೆ. ಇದಕ್ಕೆ ಸಭೆಯವರೂ ಸಹ ಒಪ್ಪಿಗೆ ಕೊಡಬಹುದೆಂದು ನಾನು ಭಾವಿಸಿದ್ದೇನೆ.

Mr. SPEAKER.—Amendment moved:

"That the figure '5' shall be substituted for the figure '4' and in the proviso the figure '6' shall be substituted for the figure '5'."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ಟೌನ್ ಮುನಿಸಿಪಾಲಿಟಿಗಳ ಆಕ್ಟಿನಲ್ಲಿ 4 ವರ್ಷಗಳ ಟರ್ಮ್ ಇದ್ದ ಹಾಗೆ ನನಗೆ ಜ್ಞಾಪಕವಿದೆ. ಅದು ಸರಿಯೋ ಅಥವಾ ಅಲ್ಲವೇ ಎಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು (ಲಾ ಮತ್ತು ಲೇಬರ್ ಸಚಿವರು).—ಹೌದು 4 ವರ್ಷಗಳೆಂದೇ ಇರುವುದು. ಆದರೆ ಈಗ ಶ್ರೀ ಸಿದ್ದಪ್ಪನವರು ಸೂಚಿಸಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಶಾಸನ ಸಭೆ ಇತ್ಯಾದಿಗಳಿಗೇನೋ ಟರ್ಮನ್ನು ಹೆಚ್ಚಿಸಲಾಗಿದೆ. ಆದರೆ ಅದೇ ರೀತಿ ಈ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲೂ ಮಾಡಿದರೆ ಜನರಲ್ಲಿ ಒಂದು ಅತೃಪ್ತಿ ಇದರ ಬಗ್ಗೆ ಮೂಡಬಹುದು. ಆದಕಾರಣ 4 ವರ್ಷಗಳೆಂದಿರತಕ್ಕದ್ದೇ ಸರಿಯಾಗಿದೆ. ಹಾಗೆ ಕಾಲ ವ್ಯತ್ಯಾಸವಿಲ್ಲದೆ ಎಲ್ಲಕ್ಕೂ ಒಂದೇ ಕಾಲ ಪರಿಮಿತಿಯನ್ನು ಗೊತ್ತು ಮಾಡಿದರೆ ಇವುಗಳ ಚುನಾವಣೆಗಳೆಲ್ಲವೂ ಸಹ ಏಕಕಾಲದಲ್ಲೇ ಬಂದು ಅದರಿಂದ ಅನಾನುಕೂಲವಾಗಬಹುದು, ಆದಕಾರಣ 4 ಮತ್ತು 5ವರ್ಷಗಳೆಂದಿರತಕ್ಕದ್ದೇ ಸರಿ.

ಶ್ರೀ ಎಸ್. ರಂಗರಾಮಯ್ಯನವರು.—ಸ್ವಾಮಿ, ನಾನು ಈಗ ತಂದಿರುವ ತಿದ್ದುಪಡಿಯನ್ನು ವಿರೋಧಿಸಬೇಕಾಗಿದೆ. ಈಗಿರತಕ್ಕ 4 ಮತ್ತು 5 ವರ್ಷಗಳೆಂದಿರತಕ್ಕದ್ದೇ ಸರಿಯಾಗಿದೆ. ಹೀಗಿದ್ದರೆ ಒಂದು ವೇಳೆ ಕಾಲಪರಿಮಿತಿಯನ್ನು ಒಂದು ವರ್ಷದವರೆಗೂ ಬಡಾವಣೆ ಮಾಡಿಕೊಳ್ಳಲು ಅವಕಾಶವಿರುತ್ತೆ. ಹಾಗಿಲ್ಲದೆ ಇದನ್ನು ಈಗ ಸೂಚಿಸಿರುವ ತಿದ್ದುಪಡಿಗನುಸಾರವಾಗಿ ಬದಲಾಯಿಸಿದರೆ ಮುನಿಸಿಪಾಲಿಟಿಗಳಿಗೆ ವಿಧಾಯಕ ಮಾಡಿರುವ ಕಾಲಕ್ಕಿಂತ ಹೆಚ್ಚಾಗುತ್ತೆ. ಆದ್ದರಿಂದ ಬಡಾವಣೆ ಮಾಡಲು ಅವಕಾಶವಿಲ್ಲ. ಇದರಿಂದ ಚುನಾವಣೆ ಕಾಲದಲ್ಲಿ ಸಹ ಗೊಂದಲಗಳಾಗಲು ಅವಕಾಶವಾಗುತ್ತೆ. ಆದಕಾರಣ ಈಗ ಶ್ರೀ ಸಿದ್ದಪ್ಪನವರ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ.

The Hon'ble Sri R. CHENNIGARAMIAH.—I cannot accept this amendment.

Sri L. SIDDAPPA.—Very well, I do not press it. I seek the leave of the House to withdraw the amendment.

The amendment was, by leave of the House, withdrawn.

Mr. SPEAKER.—Clause 14. The question is:

"That clause 14 stand part of the Bill."

The motion was adopted.

Clause 14 was added to the Bill

Mr. SPEAKER.—Clause 15.

The Hon'ble Sri R. CHENNIGARAMIAH.—I beg to move:

"That the words 'and Vice-Chairman, occurring in the marginal notes shall be omitted."

ಗ್ರಾಮ ಪಂಚಾಯಿತಿಗಳಿಗೆ ವೈಸ್ ಚೇರ್ಮನ್ ಇಲ್ಲವಾದಕಾರಣ ಆ ಪದವನ್ನು ತೆಗೆದುಹಾಕಬೇಕೆಂದು ಈ ತಿದ್ದುಪಡಿಯನ್ನು ತರಲಾಗಿದೆ. ಅಷ್ಟೆ.

Mr. SPEAKER.—Amendment moved.—

"That the words and Vice-Chairman' occurring in the marginal notes shall be omitted."

The motion was adopted.

Mr. SPEAKER.—The question is:

"That clause 15, as amended, stand part of the Bill."

The motion was adopted.

Clause 15, as amended, was added to the Bill.

Mr. SPEAKER.—Clause 16.

* **The Hon'ble Sri R. CHENNIGARAMIAH.**—Sir, I beg to move.—

"That in sub-clause (1) the following words shall be substituted for the second sentence:—

"and his seat shall become vacant on the expiry of seven clear days from the date of such resignation unless within such period of seven days he withdraws such resignation by writing under his hand addressed to the Chairman."

ಪಂಚಾಯಿತಿಗಳಲ್ಲಿರತಕ್ಕ ಸದಸ್ಯರು ಕೊಡತಕ್ಕ ರಾಜೀನಾಮೆಗೆ ಸಂಬಂಧಿಸಿದ ವಿಚಾರ ಇದು. ಹಾಗೆ ಅವರು ಒಂದಾವರ್ತಿ ರಾಜೀನಾಮೆ ಕೊಟ್ಟ ಕೂಡಲೇ ಅದು ಜಾರಿಗೆ ಬರಬೇಕೆಂಬುದಾಗಿ ತಿಳಿಸಿದೆ. ಆದರೆ ಕಾರಣಾಂತರಗಳ ಮೇಲೆ ಅಂಥಾ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಬಹುದಾದ ಸಂಭವಗಳಿದ್ದರೂ, ಅದಕ್ಕೆ ಈಗ ಕಾಲಾವಕಾಶವಿಲ್ಲ. ಏನೋ ಕಾರಣಗಳಿಂದ, ಮನಸ್ಸು ಶಾಂತಿಯಲ್ಲಿಲ್ಲದಿರುವಾಗ್ಗೆ ಕೆಲವರು ರಾಜೀನಾಮೆ ಕೊಡಬಹುದು. ಆದರೆ ಆ ಸ್ಥಾನದಲ್ಲಿದ್ದುಕೊಂಡು ಅವರು ಸಾರ್ವಜನಿಕರ ಸೇವೆ

---

* Speeches asterisked indicate that they have not been revised by the Hon'ble Member concerned.

(THE HON'BLE SRI R. CHENNIGA-RAMIAH).

ಮಾಡಬೇಕೆಂಬ ಆಸೆ ಅನೇಕರಿದ್ದಾಗ್ಯೂ ಹಾಗೆ ಅವರ ಆಸೆಗಳನ್ನು ಈಡೇರಿಸಲು ಈಗಿರುವ ನಿಬಂಧನೆಯ ಮೇರೆಗೆ ಅವಕಾಶವಿಲ್ಲ. ಹೀಗಾಗಿ ಅನೇಕ ಸಂದರ್ಭಗಳಲ್ಲಿ ಅನಾನುಕೂಲವಾಗಿರತಕ್ಕ ಅಂಶ ನನಗೆ ಅನುಭವ ಪೂರ್ವಕದಿಂದ ಗೊತ್ತಾಗಿದೆ. ಆ ಕಾರಣದಿಂದ ಅಂಥಾ ರಾಜೀನಾಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ಈ ತಿದ್ದುಪಡಿಯಲ್ಲಿ ಏಳು ದಿವಸಗಳ ಒಂದು ಕಾಲಪರಿಮಿತಿಯನ್ನು ಅಡಕ ಮಾಡಲಾಗಿದೆ. ಈ ಅವಧಿಯಲ್ಲಿ ಅವರು ತಮ್ಮ ರಾಜೀನಾಮೆಗಳನ್ನು ವಾಪಸ್ಸು ತೆಗೆದುಕೊಳ್ಳಬಹುದು. ಇದು ಬಹಳ ಸಾಧುವಾಗಿದೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved

"That in sub-clause (1) the following words shall be substituted for the second sentence:

"and his seat shall become vacant on the expiry of seven clear days from the date of such resignation unless within such period of seven days he withdraws such resignation by writing under his hand addressed to the Chairman."

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಮಾನ್ಯ ಮಂತ್ರಿಗಳವರು ಏನೊಂದು ಸದುದ್ದೇಶದಿಂದ ಈಗ ಸಭೆಯ ಮುಂದೆ ಸೂಚಿಸಿರತಕ್ಕ ತಿದ್ದುಪಡಿಯನ್ನು ತಂದಿದ್ದಾರೋ ಅಷ್ಟೇ ಸದುದ್ದೇಶದಿಂದ ಅದನ್ನು ಎಲ್ಲರೂ ಅಂಗೀಕರಿಸಬೇಕೆಂದು ಹೇಳುತ್ತಾ, ಈ ಬಗ್ಗೆ ನಾನು ಸೂಚಿಸಿರತಕ್ಕ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಸೂಚಿಸುತ್ತೇನೆ. ನನ್ನ ತಿದ್ದುಪಡಿಯ ಉದ್ದೇಶವೂ ಸಹ ಅಷ್ಟು ಸಾಧುವಾದುದ್ದಾಗಿದೆ. ಈಗ ಮಾನ್ಯ ಮಂತ್ರಿಗಳು ಹೇಳಿದ ಏಳು ದಿವಸಗಳ ವಾಯಿದೆಯೆಂಬುದು ನನ್ನ ಮನಸ್ಸಿಗೆ ಬಹಳ ಕಮ್ಮಿಯಾಯಿತೆಂದು ಅನಿಸುತ್ತಿದೆ. ಇದನ್ನು 15 ದಿವಸಕ್ಕೆ ಹೆಚ್ಚಿಸಬೇಕೆಂಬುದೇ ನನ್ನ ತಿದ್ದುಪಡಿಯ ಮುಖ್ಯೋದ್ದೇಶ. ಆದ್ದರಿಂದ ಇದನ್ನು ಮಾನ್ಯ ಮಂತ್ರಿಗಳು ಅಂಗೀಕಾರ ಮಾಡುವುದಾಗಿದ್ದರೆ ನಾನು ನನ್ನ ತಿದ್ದುಪಡಿಯನ್ನು ಸೂಚಿಸುವುದಿಲ್ಲ. I request the Honourable Minister to accept my suggestion.

Mr. SPEAKER.—Instead of 'seven' you want to have 'fifteen'?

Sri T. MADIAH GOWDA.—Yes, Sir.

The Hon'ble Sri R. CHENNIGA-RAMIAH.—I have no objection to accept the suggestion.

Mr. SPEAKER.—The question is:

"That in sub-clause (1) the following words shall be substituted for the second sentence:—

"and his seat shall become vacant on the expiry of fifteen clear days from the date of such resignation unless within such period of fifteen days he withdraws such resignation by writing under his hand addressed to the Chairman."

The motion was adopted.

Mr. SPEAKER.—Next amendment.

***The Hon'ble Sri R. CHENNIGA-RAMIAH.**—Sir, I beg to move:

"That for sub-clause (2) the following shall be substituted:—

"and his office shall become vacant on the expiry of ten clear days from the date of such resignation unless within the said period of ten days he withdraws such resignation by writing under his hand addressed to the Deputy Commissioner."

ಇದು ಪಂಚಾಯಿತಿ ಛೇರ್ಮನ್‌ರವರ ರಾಜೀನಾಮೆಗೆ ಸಂಬಂಧಪಟ್ಟ ಅಂಶ. ಹಾಗೆ ಅವರು ರಾಜೀನಾಮೆ ಕೊಟ್ಟ 10 ದಿವಸಗಳ ಅವಧಿಯಲ್ಲಿ ಅದನ್ನು ವಾಪಸ್ಸು ತಗೆದುಕೊಳ್ಳಲು ಅವಕಾಶ ಕಲ್ಪಿಸಿದೆ. ಆ ವಿಷಯವೇ ಈ ತಿದ್ದುಪಡಿಯಲ್ಲಿ ಅಡಕವಾಗಿರತಕ್ಕ ಅಂಶ. ಇವರು ಗೌರವಯುತವಾದ ಒಂದು ದೊಡ್ಡ ಸ್ಥಾನದಲ್ಲಿರುವುದರಿಂದ ಇವರಿಗೆ 10 ದಿವಸಗಳ ವಾಯಿದೆ ಕೊಡಲಾಗಿದೆ. ಸಭೆಯವರು ಇದಕ್ಕೆ ಅನುಮತಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved.—

"That for sub-clause (2) the following shall be substituted:—

"and his office shall become vacant on the expiry of ten clear days from the date of such resignation unless within the said period of ten days he withdraws such resignation by writing under his hand addressed to the Deputy Commissioner."

ಶ್ರೀ ಟಿ. ಮಾದಯ್ಯ ಗೌಡರು.—ಇದನ್ನೂ ಸಹ ಅದೇ ರೀತಿ 15 ದಿವಸಗಳೆಂದು ಮಾಡಿದರೆ ಆಗಬಹುದು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಗಬಹುದು.

Mr. SPEAKER.—The question is:

"That for sub-clause (2) the following shall be substituted;—

"and his office shall become vacant on the expiry of fifteen clear days from the date of such resignation unless within the said period of fifteen days he withdraws such resignation by writing under his hand addressed to the Deputy Commissioner."

The motion was adopted.

Mr. SPEAKER.—Marginal notes.

***The Hon'ble Sri R. CHENNIGA-RAMIAH.**—Sir, I beg to move.—

"That the words 'and Vice-Chairman' occurring in the marginal notes to Clause 16 shall be omitted."

Mr. SPEAKER.—The question is:

"That the words 'and Vice-Chairman' occurring in the marginal notes to clause 16 shall be omitted."

The motion was adopted.

Mr. SPEAKER.—The question is:

"That Clause 16, as amended, stand part of the Bill."

The motion was adopted.

Clause 16, as amended, was added to the Bill.

Mr. SPEAKER.—Clause 17. There is an amendment in the name of Sri T. Madiah Gowda.

Sri T. MADIAH GOWDA (Bangalore District—General).—I do not intend moving this amendment, Sir.

Mr. SPEAKER.—Then, I will put the clause to the House. The question is:

"That clause 17 stand part of the Bill."

The motion was adopted.

Clause 17 was added to the Bill.

Mr. SPEAKER.—Clause 18. Sri L. Siddappa has an amendment.

Sri L. SIDDAPPA.—Sir, I beg to move:

"That the words 'every panchayet' shall be substituted for the words 'the Commissioner.

As it is the clause reads as follows:—

18. Subject to such rules as may be made by the Government in this behaif the Commissioner shall appoint a Secretary to be in charge of one or more Panchayets specified by the Commissioner.

ಮಾನ್ಯ ಮಂತ್ರಿಗಳು ಈ ಮಸೂದಾ ಕಾನೂನನ್ನು ಮಂಡಿಸುವಾಗಲೇ ಈ ಕಾನೂನಿನ ಉದ್ದೇಶ ಈಗಿರುವುದಕ್ಕಿಂತ ಹೆಚ್ಚು ಅಧಿಕಾರವನ್ನು ಗ್ರಾಮ ಪಂಚಾಯಿತಿಗಳಿಗೆ ಕೊಡುವುದು ಮತ್ತು ಈಗಿರುವ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಸೌಲಭ್ಯ, ಹಣ ವಗ್ಗೈರೆ ಒದಗಿಸುವುದು ಎಂದು ಹೇಳಿದ್ದರು. 18ನೆಯ ಕ್ಲಾಜನ್ನು ನೋಡಿದರೆ ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಕೂಡ ಸೆಕ್ರೆಟೆರಿಯನ್ನು ನೇಮಕ ಮಾಡತಕ್ಕವರು ಬೆಂಗಳೂರಿನಲ್ಲಿರುವ ಕಮಿಷನರೆಂದು ಹೇಳಿರುವುದರಿಂದ ಪಂಚಾಯಿತಿಗಳಿಗೆ ಹೆಚ್ಚು ಅಧಿಕಾರ ಕೊಟ್ಟಿರುವಂತಾಗುವುದಿಲ್ಲ. ಅಲ್ಲದೆ ಈಗ ಹಳ್ಳಿಗಾಡಿನಲ್ಲೂ ಕೂಡ ಸ್ವಲ್ಪ ವಿದ್ಯಾವಂತರು ಹೆಚ್ಚು ಮಂದಿ ಸಿಕ್ಕುತ್ತಾರೆ. ಮೊದಲಿನ ಹಾಗೆ ವಿರಳವಾಗಿಲ್ಲ. ಹಳ್ಳಿಯವರೇ ಸೆಕ್ರೆಟೆರಿಯಾಗಿ ನೇಮಕವಾಗಲು ಅವಕಾಶ ಕೊಟ್ಟರೆ ಸ್ಥಳದ ಅಭಿಮಾನದ ಮೇಲೆ ಅವರು ಹೆಚ್ಚು ಮುತವರ್ಜಿಯಿಂದ ಕೆಲಸ ಮಾಡುತ್ತಾರೆ. ಹಾಗಿಲ್ಲದೆ ಈಗ ಬೆಂಗಳೂರಿನಲ್ಲಿರುವ ಕಮಿಷನರು ಇತರ ಕಡೆಗಳಿಗೆ ಸೆಕ್ರೆಟೆರಿಯನ್ನು ನೇಮಕ ಮಾಡುವುದರಿಂದ ಸಾಕಷ್ಟು ಪ್ರಯೋಜನವಾಗಲಾರದು. ಆ ರೀತಿ ಮಾಡುವುದಕ್ಕೆ ಬದಲಾಗಿ ಗ್ರಾಮ ಪಂಚಾಯಿತಿಗಳಿಗೇ ಈ ಅಧಿಕಾರವನ್ನು ಕೊಟ್ಟರೆ ಪಂಚಾಯಿತಿಗಳು ಅಭಿವೃದ್ಧಿಯಾಗಲು ಅವಕಾಶವಿರುತ್ತದೆ. ಆ ದೃಷ್ಟಿಯಿಂದ ಹಾಗೆ ಮಾಡುವುದು ಬಹಳ ಆವಶ್ಯಕ.

ಆ ಮೇಲೆ ಇನ್ನೊಂದು ವಿಚಾರ ಅದನ್ನೂ ಸರ್ಕಾರದವರು ಯೋಚನೆ ಮಾಡಬೇಕು. "One or more Panchayets specified by the Commissioner" ಎಂದು ಹೇಳಿರುವುದರಿಂದ ಎರಡು ಮೂರು ಪಂಚಾಯಿತಿಗಳನ್ನು ಸೇರಿಸಿ ಒಬ್ಬರೇ ಸೆಕ್ರೆಟೆರಿಗಳನ್ನು ಮಾಡುವುದಕ್ಕೆ ಅವಕಾಶವಿದೆ. ಅದು ತೃಪ್ತಿಕರವಾಗಿಲ್ಲ. ಆದ್ದರಿಂದ ಪ್ರದೇಶವನ್ನು ವಿಸ್ತಾರ ಮಾಡಿರುವ ಹಾಗೆ ಪ್ರತಿಯೊಂದು ಪಂಚಾಯಿತಿಗೂ ಒಬ್ಬೊಬ್ಬ ಸೆಕ್ರೆಟೆರಿಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದು ಒಳ್ಳೆಯದು. ಆ ದೃಷ್ಟಿಯಿಂದ ಅದನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪಂಚಾಯಿತಿಯ ಅಭಿವೃದ್ಧಿಯ ದೃಷ್ಟಿಯಿಂದ ಇದು ಬಹಳ ಮುಖ್ಯವಾದುದು. ಇದನ್ನು ಕೂಡ ಸಭೆಯವರು ಒಪ್ಪುತ್ತಾರೆಂದು ನಂಬಿದ್ದೇನೆ.

Mr. SPEAKER.—Amendment moved:

"That the words 'every panchayet' shall be substituted for the words 'the Commissioner.'

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಕಾರಣ ಇಷ್ಟು. ಈಗ ಪಂಚಾಯಿತಿಗೆ ಸೆಕ್ರೆಟೆರಿಯನ್ನು ನೇಮಕ ಮಾಡುವವರು ಯಾರು ಎಂಬ ವಿಚಾರ ಬಂದಿದೆ. ಈ ಆಕ್ಟು ಪ್ರಕಾರ ಕಮಿಷನರು ಎಂದು ಹೇಳಿದೆ. ಈ ತಿದ್ದುಪಡಿ ಪ್ರಕಾರ ಪ್ರತಿಯೊಂದು ಪಂಚಾಯಿತಿಯವರೇ ಮಾಡಬೇಕೆಂದಿದೆ. ಸೆಕ್ರೆಟರಿಯವರು ಸಂಬಳದ ಮೇಲೆ ನೇಮಕವಾಗಬೇಕಾಗುತ್ತದೆ. ಪಬ್ಲಿಕ್ ಸರ್ವಿಸ್ ಕಾನೂನು ಪ್ರಕಾರ ಸೆಕ್ರೆಟರಿ ನೇಮಕವಾಗಿ ಅದರ ಶಿಸ್ತಿಗೆ ಒಳಪಟ್ಟಿರುತ್ತಾರೆ. ಪಂಚಾಯಿತಿಯೇ ಆ ಕೆಲಸವನ್ನೂ ಮಾಡಬೇಕೆಂದರೆ ಅದಕ್ಕೆ ಆ ವಿಚಾರ ಸರಿಯಾಗಿ ಗೊತ್ತಾಗುವುದಿಲ್ಲ. ಖಾಸಗಿ ಸೆಕ್ರೆಟರಿಯಾದರೆ ಅವರ ಮೇಲೆ ಸಾಕಷ್ಟು ಅಧಿಕಾರವಿರುವುದಿಲ್ಲ. ಈಗಿರುವ ಪ್ರಕಾರ ಕಮಿಷನರಿಗೆ ಸೆಕ್ರೆಟರಿಯ ಮೇಲೆ ಸಂಪೂರ್ಣ ಅಧಿಕಾರವಿರುತ್ತದೆ. ಅದೇ ಪಂಚಾಯಿತಿಗೆ ಈ ಅಧಿಕಾರ ಕೊಟ್ಟರೆ ಒಬ್ಬೊಬ್ಬರು ಬೇಕು ಒಬ್ಬರು ಬೇಡ ಎಂದು ಹೇಳಬಹುದು ಯಾರನ್ನು ನೇಮಕ ಮಾಡಬೇಕು, ಯಾರ ಮಾತನ್ನು ಗಮನಿಸಬೇಕು ಎಂಬ ಜಿಜ್ಞಾಸೆಯುಂಟಾಗಿ ಪಕ್ಷಗಳು ಪ್ರಾರಂಭವಾಗುವುದಕ್ಕೆ ಅವಕಾಶವಾಗಬಹುದು. ಇದರಿಂದ ಬಹಳ ಅನನುಕೂಲವಾಗುತ್ತದೆ. ಕಮಿಷನರು ಸೆಕ್ರೆಟರಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ವರ್ಗಾಯಿಸಬಹುದು. ಆ ಅವಕಾಶ ಪಂಚಾಯಿತಿಗೆ ಇರುವುದಿಲ್ಲ. ಈ ಕಾರಣಗಳಿಂದ ಈ ಅಧಿಕಾರವನ್ನು ಕಮಿಷನರಿಗೆ ಬಿಟ್ಟು ಕೆಲವು ಸಂದರ್ಭಗಳಲ್ಲಿ ಬೇಕಾದರೆ ವಿನಾಯಿತಿ ಕೊಡಬಹುದು. ಒಂದು ಪ್ಯಾನಲ್ ಮಾಡಿ ಕೆಲವರ ಹೆಸರನ್ನು ನಮೂದಿಸುವುದು ಮುನಿಸಿಪಾಲಿಟಿಗಳಲ್ಲಿ ಮತ್ತು ಇತರ ಕಡೆಗಳಲ್ಲಿ ವಾಡಿಕೆಯಾಗಿದೆ. ಹಾಗೆ ಬೇಕಾದರೆ ಮಾಡಿ ಕಮಿಷನರಿಗೆ ಅದನ್ನು ಕಳುಹಿಸಿ ಒಪ್ಪಿಗೆ ಪಡೆಯುವುದಕ್ಕೆ ಅವಕಾಶ ಮಾಡಿಕೊಳ್ಳಬಹುದು ಪಂಚಾಯಿತಿಗೆ ಸೆಕ್ರೆಟೆರಿಯನ್ನು ನೇಮಿಸುವ ಅಧಿಕಾರ ಕೊಡುವುದು ಸೂಕ್ತವಲ್ಲ. ಅದರಲ್ಲೂ ಗ್ರಾಮ ಪಂಚಾಯಿತಿಗಳನ್ನು ಪ್ರಾರಂಭದಲ್ಲಿ ಮತ್ತು ಈ ಯೋಜನೆ ಪ್ರಾರಂಭದಲ್ಲಿ experimental ಆಗಿ ಮಾಡುತ್ತಿರುವುದರಿಂದ ಹೇಗೆ ನಡೆಯುತ್ತದೆ, ಎಷ್ಟು ಸುಸೂತ್ರವಾಗಿ ನಡೆಯುತ್ತದೆ ಎಂಬುದು ಗೊತ್ತಿಲ್ಲ. ಹಾಗಿರುವಾಗ ಕಮಿಷನರಿಗೇ ಈ ಅಧಿಕಾರವಿರುವುದು ಒಳ್ಳೆಯದು. ಆದ್ದರಿಂದ ಈ ದೃಷ್ಟಿಯಿಂದ ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಶ್ರೀ ಸಿದ್ದಪ್ಪನವರು ತಂದಿರತಕ್ಕ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ. ಪಂಚಾಯಿತಿಗೆ

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಸೆಕ್ರೆಟರಿಯನ್ನು ನೇಮಕ ಮಾಡತಕ್ಕ ವಿಚಾರದಲ್ಲಿ ಖಾಸಗಿಯವರನ್ನು ಪಂಚಾಯಿತಿಯವರೇ ನೇಮಕ ಮಾಡಿಕೊಳ್ಳಲು ಅವಕಾಶವಿರಬೇಕೆಂದು ಸೂಚಿಸಿದ್ದಾರೆ. ಸೆಕ್ರೆಟರಿಯವರು ಮಾಡಬೇಕಾದ ಕಾರ್ಯಕಲಾಪವೇನು ಎಂಬುದು 22ನೆಯ ಕ್ಲಾಜಿನಲ್ಲಿ ಹೇಳಿದೆ. Powers and duties of the Secretary of Panchayets ಸುಮಾರು 15ಐಟಂಗಳು ಇವೆ. ಅದನ್ನು ನೋಡಿದರೆ, ಸೆಕ್ರೆಟರಿಯು ಏನೇನು ಕೆಲಸ ಕಾರ್ಯ ಮಾಡಬೇಕಾಗಿದೆಯೆಂಬುದು ಗೊತ್ತಾಗುತ್ತದೆ. ಅದರಿಂದ ಕಮಿಷನರು ಮಾಡಬೇಕಾದ ಕೆಲಸವನ್ನು ಪಂಚಾಯಿತಿಯವರು ಅಥವಾ ಸ್ಥಳದವರು ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದು ತಾನಾಗಿಯೇ ವ್ಯಕ್ತವಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಖಾಸಗಿಯವರು ಎಂದು ಹೇಳಲಿಲ್ಲ. ಯೋಗ್ಯತೆಯಿರುವವರನ್ನು ಮಾಡಿ ಎಂದು ಹೇಳಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸೆಕ್ರೆಟರಿಯವರು ಡಿಸ್ಟ್ರೆಯಿಂಟ್ ವಾರೆಂಟ್ ಕಳುಹಿಸಬೇಕಾಗುತ್ತದೆ. ಕಂದಾಯ ಹೆಚ್ಚು ಕಡಮೆ ಮಾಡಬೇಕಾಗುತ್ತದೆ. ಆಗ ಸ್ಥಳದವರಲ್ಲಿ ಅವಿಶ್ವಾಸ ಹೆಚ್ಚಿ ಇಲ್ಲದಿರುವ ಗೊಂದಲಕ್ಕೆ ಕಾರಣವಾಗುತ್ತದೆ. ಸೆಕ್ರೆಟರಿಯವರು ಕರ್ತವ್ಯ ನಿರ್ವಹಣೆಮಾಡುವಾಗ ದೊಡ್ಡ ಪಂಚಾಯಿತಿಯೇ ಆಗುತ್ತದೆ. ಅವರ ಮೇಲೆ ಸ್ವಲ್ಪ ಹತೋಟಿಯಿರಬೇಕಾದ್ದು ಆವಶ್ಯಕ ಅದನ್ನು ಇಟ್ಟುಕೊಳ್ಳುವುದಕ್ಕೆ ಸರ್ಕಾರಿ ಅಧಿಕಾರಿಯಾಗಿರುವುದು ಸೂಕ್ತ. ಇದನ್ನು ದೃಷ್ಟಿಯಲ್ಲಿಟ್ಟು ಕಾನೂನು ಮಾಡಿದೆ. ಸರ್ಕಾರಿ ಅಧಿಕಾರಿಯಾದರೆ ಆತನ ಮೇಲೆಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತೆ. ಹತೋಟಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿರುತ್ತೆ. ಸರಿಯಾಗಿ ಕೆಲಸ ಮಾಡಿಸುವುದಕ್ಕೆ ಅನುಕೂಲವಿರುತ್ತದೆ. ಹಾಗೆ ಮಾಡದಿದ್ದರೆ ಕೆಲಸ ಕಾರ್ಯಗಳು ಸರಿಯಾಗಿ ಮಾಡಲು ತೊಂದರೆಯಾಗುತ್ತದೆ. ಆ ದೃಷ್ಟಿಯಿಂದ ಸೆಕ್ರೆಟರಿಯನ್ನು ನೇಮಿಸುವ ಅಧಿಕಾರ ಕಮಿಷನರಿಗೇ ಇರಬೇಕು ಎಂದು ಈ ಮಸೂದೆಯಲ್ಲಿ ಸೂಚನೆ ಮಾಡಿದೆ. ಸೆಕ್ರೆಟರಿಯವರಿಗೆ ಕೊಟ್ಟಿರುವ ಅಧಿಕಾರಗಳು ಮತ್ತು ಅವರ ಕೆಲಸಕಾರ್ಯಗಳೇ ಮುಂತಾದುವನ್ನು ನೋಡಿದರೆ ಸೆಕ್ರೆಟರಿಯನ್ನು ಕಮಿಷನರು ನೇಮಕ ಮಾಡುವುದನ್ನು ಒಪ್ಪಬಹುದೇ ಹೊರತು ಪಂಚಾಯಿತಿಯವರು ಮಾಡುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಸ್ಥಳದವರು ನೇಮಕ ಮಾಡುವುದರಿಂದ ಹೆಚ್ಚು ತೊಂದರೆಯೇ ಹೊರತು ಅನುಕೂಲವಾಗುವುದಿಲ್ಲ. ಆದಕಾರಣ ಮಾನ್ಯ ಸದಸ್ಯರು ಸೂಚಿಸಿರುವ ತಿದ್ದುಪಡಿಯನ್ನು 'ಅಂಗೀಕಾರ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

The Hon'ble Sri K. T. BHASHYAM.—There is one more point which the Hon'ble Member may consider. The effect of the amendment is that instead of having one secretary for more than one panchayet, every panchayet may have a Secretary. There may be many cases where one secretary for every panchayet may not have enough work. We are contemplating a panchayet for groups of villages also. Some Village Panchayets may not be able to maintain a Secretary. Therefore two or more panchayets may together form a group and have one Secretary. He may then have enough work.

Sri L. SIDDAPPA.—Please look at the duties cast on the Secretary under clause 22 of the Bill.

The Hon'ble Sri K. T. BHASHYAM.—I understand. Even so in a Panchayet consisting of a population of 1,000 or 1,500 there will not be work for him for the year and therefore it will be necessary to have one Secretary for more than one Panchayet in which case all the Panchayets should come together and then appont him. It will be rather difficult in such cases and as Sri Channabasappa pointed out, the position of the Secretary will become very embarrassing if he is to be obliged to the Panchayet for appointment. Recovery of Panchayet dues is a very important matter. It will be difficult for him to function if he is obliged to the Panchayetdars for his appointment. All this considered, I hope the Hon'ble Member will kindly see his way to withdraw the amendment which he has moved.

ಶ್ರೀ ಎಲ್. ಸಿದ್ದಪ್ಪನವರು.—ಖಾಸಗಿ ಸದಸ್ಯರು ಮಂತ್ರಿಗಳಾಗಿ ಕೆಲಸ ಮಾಡುವುದಕ್ಕೆ ಅರ್ಹತೆ ಇರುವಾಗ ವಿಲೇಜ್ ಪಂಚಾಯಿತಿಯವರು ಅರ್ಹತೆಯುಳ್ಳ ಒಬ್ಬ ಸೆಕ್ರೆಟರಿಯನ್ನು ನೇಮಕ ಮಾಡಲು ಆಗುವುದಿಲ್ಲವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅರ್ಹತೆ ವಿಚಾರ ಅಲ್ಲ. ಈ ವಿಷಯ ಸೆಲೆಕ್ಟ್ ಸಮಿತಿಯಲ್ಲಿ ಬಹಳವಾಗಿ ಚರ್ಚೆಯಾಗಿ ಕೂಲಂಕಷವಾಗಿ ಪರಿಶೀಲನೆ ಮಾಡಿದ್ದಾರೆ. ಸೆಕ್ರೆಟರಿಯನ್ನು ನೇಮಕ ಮಾಡುವುದಕ್ಕೆ ಪಂಚಾಯಿತಿಯವರಿಗೇ ಬಿಟ್ಟು ಬಿಟ್ಟರೆ ಅದೇ ಒಂದು ದೊಡ್ಡ ಪಂಚಾಯಿತಿ ಆಗುತ್ತದೆ. ಕೆಲವು ಸದಸ್ಯರು A ಸೆಕ್ರೆಟರಿ ಆಗಬೇಕು ಅಂತ, ಕೆಲವು ಸದಸ್ಯರು B ಸೆಕ್ರೆಟರಿ ಆಗಬೇಕು ಅಂತ ಅದು ಫೈಸಲಾಗುವುದಿಲ್ಲ. ಅಲ್ಲದೆ ಆಡಳಿತ ದೃಷ್ಟಿಯಿಂದ ಇದನ್ನು ಪಂಚಾಯಿತಿವರಿಗೇ ಬಿಟ್ಟು ಬಿಟ್ಟರೆ, ಅವರು ಎಷ್ಟು ಮಟ್ಟಿಗೆ ಕಮಿಷನರ ಕೈಕೆಳಗೆ ಕೆಲಸ ಮಾಡುವುದಕ್ಕೆ ಆಗುತ್ತದೆ ಮತ್ತು ಸರ್ಕಾರಿ ಕೆಲಸ ನಿರ್ಭಯವಾಗಿ ಮಾಡುವುದಕ್ಕೆ ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಆ ದೃಷ್ಟಿಯಿಂದ ಇದನ್ನು ಪಂಚಾಯಿತಿಯವರ ವಿವೇಚನೆಗೆ ಬಿಡುವುದು ಸೂಕ್ತವಲ್ಲ, ಸರಿಯಲ್ಲವೆಂದು ಸೆಲೆಕ್ಟ್ ಸಮಿತಿಯವರು ಕಮಿಷನರಿಗೇ ಈ ಅಧಿಕಾರವಿರಬೇಕೆಂದು ಮಾಡಿದ್ದಾರೆ.

ಎರಡನೆಯದಾಗಿ ಒಂದು ಪಂಚಾಯಿತಿಗೆ ಮೇಲ್ಪಟ್ಟು ಒಬ್ಬ ಸೆಕ್ರೆಟರಿ ಇರಬಹುದೇ ಇಲ್ಲವೇ ಎಂಬುದು. ಇದನ್ನು ಸೆಲೆಕ್ಟ್ ಸಮಿತಿಯವರು ಚೆನ್ನಾಗಿ ಪರಿಶೀಲಿಸಿದ್ದಾರೆ. ಒಂದು ಪಂಚಾಯಿತಿಗೆ ಒಬ್ಬ ಸೆಕ್ರೆಟರಿ ಇದ್ದರೆ, ಅವರಿಗೆ

ಭರತಕ್ಕ ಸಂಬಳ ಏನು, ಪಂಚಾಯಿತಿಗೆ ಇರತಕ್ಕ ಉತ್ಪತ್ತಿ ಏನು, ಇದನ್ನೆಲ್ಲಾ maintain ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಈಗ ತಾನೆ ಮಾನ್ಯರಾ ಸಚಿವರು ಹೇಳಿದ ಹಾಗೆ ಯೋಚನೆ ಮಾಡಬೇಕು. ಪಂಚಾಯಿತಿ ದೊಡ್ಡದಾಗಿದ್ದು ಆದಾಯ ಚೆನ್ನಾಗಿದ್ದರೆ ಅಂಥಾ ಪಂಚಾಯಿತಿಯವರು ಒಬ್ಬ ಸೆಕ್ರೆಟರಿಯನ್ನು ಇಟ್ಟುಕೊಳ್ಳಬಹುದು. ಚಿಕ್ಕ ಪಂಚಾಯಿತಿಯಾಗಿದ್ದು ಆದಾಯ ಕಡಿಮೆಯಾಗಿದ್ದರೆ ಅಂಥಾ ಸಂದರ್ಭದಲ್ಲಿ ಅಕ್ಕಪಕ್ಕದಲ್ಲಿರತಕ್ಕ 2-3 ಪಂಚಾಯಿತಿಗಳನ್ನು ನೋಡಿಕೊಳ್ಳುವುದಕ್ಕೆ ಈಗಿರುವಂತೆ ಅವಕಾಶವಿರುತ್ತದೆ. ಆದ್ದರಿಂದ 2-3 ಪಂಚಾಯಿತಿಗಳಿಗೆ ಒಬ್ಬ ಸೆಕ್ರೆಟರಿ ಇರಬಹುದು, ಎಂದು ಸೆಲೆಕ್ಟ್ ಸಮಿತಿಯವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಆ ರೀತಿ ಮಾಡುವುದು ಸರಿಯಾಗಿರುವುದರಿಂದ ಈ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ. ದಯವಿಟ್ಟು ಶ್ರೀ ಸಿದ್ದಪ್ಪನವರು ತಮ್ಮ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri L. SIDDAPPA.—I seek the permission of the House to withdraw the amendment.

The amendment was, by leave of the House, withdrawn.

Mr. SPEAKER.—The question is:

"That clause 18 stand part of the Bill."

The motion was adopted.

Clause 18 was added to the Bill.

Mr. SPEAKER.—Clause 19. Sri L. Siddappa has an amendment.

Sri L SIDDAPPA.—I beg to move:

"That in sub-clause 3 for the words one half the words 'one third' shall be substituted and in the proviso the word 'three' shall be substituted for the word 'five'."

ಇದು ಏಕೆಂದರೆ ಕೆಲವು ಗ್ರಾಮಗಳನ್ನು ಸೇರಿಸಿ ನಾವು ಒಂದು ಪಂಚಾಯಿ ಮಾಡುತ್ತೇವೆ. In a panchayet where there are 20 members 9 ಜನ ಹೋಗಿ ಕೋರಂ ಇಲ್ಲದೆ ಮೀಟಿಂಗ್ ಇಲ್ಲ ಎಂದರೆ ಏನೂ ಕೆಲಸ ಮಾಡದೆ ಬೇರೆ ಗ್ರಾಮಗಳಿಂದ ಬಂದವರು ತಮ್ಮ ಗ್ರಾಮಗಳಿಗೆ ವಾಪಸು ಹೋಗಬೇಕಾಗುತ್ತದೆ. ಅದಕ್ಕೆ ಬದಲಾಗಿ one third ಇಡುವುದು ಸೂಕ್ತ. ಕಾರಣಾಂತರದಿಂದ ಹೆಚ್ಚು ಮಂದಿ ಸದಸ್ಯರು ಬರದೇ ಇದ್ದರೂ ಬಂದವರಾದರೂ ಅವರ ಕೆಲಸವನ್ನು ಮಾಡುವುದಕ್ಕೆ ಅವಕಾಶವಿರಲಿ ಎಂಬುದೇ ನನ್ನ ಉದ್ದೇಶ. ಅಲ್ಲದೆ ದೊಡ್ಡ ದೊಡ್ಡ ಸಭೆಗಳಿಗೆ ಎಂದರೆ ಲೆಜಿಸ್ಲೇಟೀವ್ ಕೌನ್ಸಿಲ್ ಮತ್ತು ಅಸೆಂಬ್ಲಿಗಳಿಗೂ ಕೂಡ ಮೊದಲು ಕೋರಂ 70 ಇರುತ್ತಿತ್ತು, ಈಗ ಈ ಅಸೆಂಬ್ಲಿಗೆ ಕೋರಂ 10ಜನ ಇರಬೇಕೆಂದು ನಿರ್ಧರಿಸಿದ್ದೇವೆ. ಇಂಥಾ ಸಂದರ್ಭದಲ್ಲಿ ವಿಲೇಜ್ ಪಂಚಾಯಿತಿಗೂ ಕೂಡ 'one half' ಬಹಳ ಜಾಸ್ತಿ ಆಗುತ್ತದೆ. ಆದ್ದರಿಂದ 'one third' ಇಟ್ಟುಕೊಳ್ಳುವುದು ಸೂಕ್ತ. ಆಡಳಿತ ದೃಷ್ಟಿಯಿಂದಲೂ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. 'one third' ಅಂತ ಒಪ್ಪಿಕೊಳ್ಳುವುದಾದರೆ 'Provided not less than 5 members' ಅನ್ನುವುದಕ್ಕೆ ಬದಲಾಗಿ 'three members' ಎಂದು ತಿದ್ದುಪಡಿ ಸೂಚಿಸಿರುತ್ತೇನೆ. ಈ ರೀತಿ ಮಾಡಿದರೆ ಅನುಕೂಲ ಎಂದು ಹೇಳಿ ಈ ತಿದ್ದುಪಡಿಯನ್ನು ಈ ಸಭೆಯ ಮುಂದಿಟ್ಟಿರುತ್ತೇನೆ.

Mr. SPEAKER.—Amendment moved:

"That in sub-clause (3) for the words 'one half' the words 'one third' shall be substituted and in the proviso the word 'three' shall be substituted for the word 'five'."

Hon'ble Member Sri Madiah Gowda may also move his amendment with respect to this sub-clause.

***Sri T. MADIAH GOWDA.**—Sir, I beg to move:

"That in line 6 of sub-clause (3), the words 'on the same day or' shall be omitted."

ಇದಕ್ಕೆ ವಿವರಣೆ ಅನಗತ್ಯ. ಗ್ರಾಮಪಂಚಾಯಿತಿಗಳ ಮೀಟಿಂಗ್ ಗ್ರಾಮದಲ್ಲೇ ಆಗುವುದು. ಆದರೂನೂ ಅನೇಕ ಸಂದರ್ಭದಲ್ಲಿ ಮೀಟಿಂಗ್ ಆಗುವ ದಿನ ಸದಸ್ಯರಿಲ್ಲದೆ ಅಥವಾ ಆ ಸದಸ್ಯರಿಗೆ ಸರಿಯಾಗಿ ನೋಟೀಸ್ ತಲುಪದೇ ಕೋರಂ ಆಗದಿದ್ದರೆ ಮೀಟಿಂಗ್ adjourn ಆಗಿ ಅದೇ ದಿನ ಅರ್ಧಘಂಟೆಯ ಮೇಲೆ ಕೋರಂ ಇಲ್ಲದೆ ಮೀಟಿಂಗ್ ಮಾಡುತ್ತೇವೆ ಎಂದರೆ ನ್ಯಾಯಕ್ಕೆ ಚ್ಯುತಿಬರಬಹುದು. ಈ ಒಂದು ಕಾರಣದಿಂದ ಯಾವರೀತಿ ಡಿಸ್ಟ್ರಿಕ್ಟ್ ಬೋರ್ಡ್‌ಗೆ ಅದೇ ದಿನ adjourned meeting ಮಾಡಕೂಡದು ಎಂಬುದಾಗಿ ನಿಗದಿಯಾಗಿದೆಯೋ ಹಾಗೆಯೇ ಗ್ರಾಮ ಪಂಚಾಯಿತಿಗೂ ಸಹ ಅದೇ ದಿನ adjourned meeting ಮಾಡಕೂಡದು ಎಂಬ ರೂಲ್ ಅನ್ವಯಿಸುವಂತೆ ಈ ಕಾನೂನಿನಲ್ಲಿ ನಿಗದಿ ಮಾಡಬೇಕು. ಅದೇ ದಿನ ಎಂಬ ಪದವನ್ನು ಈ ಸಬ್ ಸೆಕ್ಷನ್‌ನಿಂದ ತೊಡೆದು ಹಾಕಬೇಕೆಂದು ನನ್ನ ಸೂಚನೆ. ಇದನ್ನು ಸಭೆಯವರು ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

Mr. SPEAKER.—Amendment moved:

"That in line 6 of sub-clause (3), the words 'on the same day or' shall be omitted."

*ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ).—ಶ್ರೀ ಸಿದ್ದಪ್ಪನವರು ಸೂಚಿಸಿರುವ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ ಈಗಿನ ಪಂಚಾಯಿತಿ ಆಕ್ಟ್ ಪ್ರಕಾರ ಸಾಮಾನ್ಯವಾಗಿ ಒಂದೊಂದು ಗ್ರಾಮಕ್ಕೆ ಒಂದೊಂದು ಪಂಚಾಯಿತಿ ಇದೆ. ಈಗ ನಾವು ಅಂಗೀಕಾರಮಾಡುವ ಮಸೂದೆಯಂತೆ ಗ್ರೂಪ್‌ಸಿಸ್ಟಂ ಜಾರಿಗೆ ಬರುವುದರಿಂದ ನಾಲ್ಕಾರು ಗ್ರಾಮಗಳು ಒಂದೊಂದು ಪಂಚಾಯಿತಿಗೆ ಸೇರಿರುತ್ತವೆ. ಕೋರಂ ಕಡಿಮೆಮಾಡಿದ್ದ ಪಕ್ಷದಲ್ಲಿ ಒಂದೆರಡು ಗ್ರಾಮಗಳವರು ಬರದೇ ಇದ್ದರೂ ಯಾವ ಒಂದು ದೊಡ್ಡ ಗ್ರಾಮದಲ್ಲಿ ಆಫೀಸು ಇರುತ್ತದೆಯೋ ಅಲ್ಲಿ ಕೆಲಸ ಕಾರ್ಯಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ಕಾರಣಾಂತರದಿಂದ ಹಳ್ಳಿಗಳಿಂದ ಬರುವುದು ಸ್ವಲ್ಪ ತಡವಾದರೆ ಆ ಮೀಟಿಂಗ್‌ನಲ್ಲಿ ಭಾಗವಹಿಸುವುದಕ್ಕೆ ಆಗದೆ ಆ ಸದಸ್ಯರಿಗೆ ಅಸಮಾಧಾನವಾದಂತಾಗುತ್ತದೆ. ಆ ದೃಷ್ಟಿಯಿಂದ ಸಾಧ್ಯವಾದಷ್ಟೂ ಕೋರಂ ಜಾಸ್ತಿ ಇದ್ದರೆ ಅನುಕೂಲವೇ ಹೊರತು ಕಡಿಮೆಮಾಡಿದರೆ ತೊಂದರೆಯಾಗುತ್ತದೆ. ಆದ್ದರಿಂದ ಶ್ರೀಮಾನ್ ಸಿದ್ದಪ್ಪನವರ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ.

(ಶ್ರೀ ಎಂ. ಮಾದಯ್ಯನವರು)

ಶ್ರೀ ಮಾದಯ್ಯಗೌಡರ ತಿದ್ದುಪಡಿಯಲ್ಲಿ ಸ್ವಲ್ಪ ಸ್ವಾರಸ್ಯವಿದೆ. ಈ ತಿದ್ದುಪಡಿ ಮಾಡಬೇಕೆಂಬುದರಲ್ಲಿ ಅನುಮಾನವಿಲ್ಲ. ಅದನ್ನು ಒಪ್ಪಬಹುದು ಎಂದು ಹೇಳಿ ಅದನ್ನು ಅನುಮೋದಿಸಿ ಶ್ರೀ ಸಿದ್ದಪ್ಪನವರ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

*ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಶ್ರೀ ಸಿದ್ದಪ್ಪನವರ ತಿದ್ದುಪಡಿಯಲ್ಲಿ ⅓ ಭಾಗ ಕೋರಂ ಇದ್ದರೆ ಸಾಕು ಎಂದು ಹೇಳುತ್ತಾರೆ. ಅದನ್ನು ಒಪ್ಪುವುದಕ್ಕಾಗುವುದಿಲ್ಲ. ನಿನ್ನೆತಾನೆ ಅವರು ಸೂಚಿಸಿದ ತಿದ್ದುಪಡಿ ಪ್ರಕಾರ 10ರಿಂದ 20ರವರೆಗೂ ಸದಸ್ಯರು ಇರಬಹುದೆಂದು ಒಪ್ಪಿಕೊಂಡಿದ್ದೇವೆ. ಒಂದು ಪಂಚಾಯಿತಿಯಲ್ಲಿ 10 ಜನ ಸದಸ್ಯರಿದ್ದರೆ ಈ ತಿದ್ದುಪಡಿ ಪ್ರಕಾರ ಕೋರಂ ಇರಬೇಕಾದರೆ 4 ಜನ ಇದ್ದರೆ ಸಾಕು. 4 ಜನ ಸೇರಿ ಒಂದು ತೀರ್ಮಾನಕ್ಕೆ ಬರುವುದು ಅಷ್ಟು ಸೂಕ್ತವಾಗಿ ಕಾಣುವುದಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—10 ಜನ ಇರುವ ಕಡೆ 4 ಜನ ಆಗುತ್ತದೆ; 15 ಜನ ಇರುವ ಕಡೆ 5 ಜನ ಆಗುತ್ತದೆ; 20 ಜನ ಇರುವ ಕಡೆ 7 ಜನ ಆಗುತ್ತದೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ರೀತಿ ಮಾಡುವುದು ಸೂಕ್ತವಲ್ಲ. ಒಂದು ತೀರ್ಮಾನ ತೆಗೆದುಕೊಳ್ಳುವಾಗ ಕೊನೆಪಕ್ಷ ಅರ್ಧವಾದರೂ ಇರಬೇಕೆಂದು ಸೆಲೆಕ್ಟ್ ಸಮಿತಿಯವರು ಪರಿಶೀಲನೆಮಾಡಿ ಅರ್ಧಭಾಗ ಇರಬೇಕೆಂದು ಅಷ್ಟು ಇಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ತಮ್ಮ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಾದಯ್ಯಗೌಡರು ಹೇಳುವುದು ಒಂದು ರೀತಿಯಲ್ಲಿ ಸೂಕ್ತವೆಂದು ಕಾಣುತ್ತದೆ. ಒಂದು ವೇಳೆ ಕೋರಂ ಇಲ್ಲದೆ ಸಭೆ ಮುಂದುವರಿದರೆ ಆ ದಿನವೇ ಪುನಃ ಮೀಟಿಂಗ್ ಮಾಡಬಹುದು ಅಥವಾ ಇನ್ನಾವುದಾದರೂ ದಿನವನ್ನು ಗೊತ್ತುಮಾಡಬಹುದು. ಎರಡಕ್ಕೂ ಅವಕಾಶವಿದೆ. ಅದೇ ದಿನವೇ ಪುನಃ ಮೀಟಿಂಗ್ ಇಟ್ಟುಕೊಂಡರೆ ಬೇರೆ ಹಳ್ಳಿಗಳಿಂದ ಬರಬೇಕಾಗಿದ್ದ ಸದಸ್ಯರು ಆ ಹೊತ್ತು ಬಾರದಿದ್ದರೆ ಇನ್ನೊಂದು ದಿನ ಬರುವುದಕ್ಕೆ ಅವಕಾಶವಿಲ್ಲದಂತಾಗುತ್ತದೆ. ಚೇರ್ಮನ್ನರು ಅದೇ ದಿನವೇ ಪುನಃ ಮೀಟಿಂಗು ಮಾಡೋಣವೆಂದು ತೀರ್ಮಾನಿಸಬಹುದು. Adjourned meeting ಆದರೆ ಅದಕ್ಕೆ ಕೋರಂ ಇರಬೇಕಾಗಿಲ್ಲ. ಈ ರೀತಿ ಆದರೆ ಸರಿಯಾಗುವುದಿಲ್ಲ. ಒಂದುಸಾರಿ ಕೋರಂ ಇಲ್ಲದೆ adjourn ಆದರೆ ಆ ಹೊತ್ತೇ ಪುನಃ ಸೇರಲು ಅವಕಾಶವಿರಬಾರದು. ಬೇರೆ ದಿನ ಇಟ್ಟುಕೊಂಡರೆ ಆ ಹೊತ್ತು ಬರದೆಯಿದ್ದ ಬೇರೆ ಸದಸ್ಯರು ಬರಲು ಅವಕಾಶವಾಗುತ್ತದೆ. ಆದಕಾರಣ ಈ ತಿದ್ದುಪಡಿ ಸೂಕ್ತವಾಗಿದೆ. ಇದನ್ನು ಒಪ್ಪಿಕೊಳ್ಳುತ್ತೇನೆ.

Sri L. SIDDAPPA.—I seek the permission of the House to withdraw my amendment.

The amendment was, by leave of the House, withdrawn.

Mr. SPEAKER.—The question is:

"That in line 6 of sub-clause (3), the words on the same day or' shall be omitted."

The motion was adopted.

***Sri T. MADIAH GOWDA.**—Sir, I beg to move:

"That in sub-clause (5), the words 'the Vice-Chairman shall preside and in case both are absent' shall be omitted."

ಇಲ್ಲಿ ವೈಸ್‌ಚೇರ್ಮನ್‌ಗೆ ಯಾವ ಅವಕಾಶವನ್ನೂ ಮಾಡಿಲ್ಲ. ಪ್ರಾಯಶಃ ಇದು ತಪ್ಪಾಗಿ ಸೇರಿಬಿಟ್ಟಿರುವಂತೆ ಕಾಣುತ್ತದೆ. ಆದುದರಿಂದ ಈ ಪದಗಳನ್ನು ತೆಗೆದುಹಾಕುವುದು ಸೂಕ್ತವೆಂದು ಈ ತಿದ್ದುಪಡಿಯನ್ನು ಸೂಚಿಸಿದ್ದೇನೆ.

Sri H. M. CHANNABASAPPA (Mysore District—General).—It is a consequential change and therefore it may be ordered that wherever the words occur they may be deleted.

The Hon'ble Sri R. CHENNIGARAMIAH.—Sir, I accept the amendment.

Mr. SPEAKER.—The question is:

"That in sub-clause (5), the words 'the Vice-Chairman shall preside and in case both are absent' shall be omitted."

The motion was adopted.

The Hon'ble Sri R. CHENNIGARAMIAH.—I do not propose to move my amendment to sub-clause 5.

Mr. SPEAKER.—The question is:

"That clause 19, as amended, stand part of the Bill."

The motion was adopted.

Clause 19, as amended, was added to the Bill.

Mr. SPEAKER.—Clause 20. The Hon'ble Minister has an amendment to sub-clause 1.

***The Hon'ble Sri R. CHENNIGARAMIAH.**—Sir, I beg to move:

"That the word 'shall' shall be omitted and the words 'Officers and servants' shall be substituted for the word 'Establishment' in the margin thereof.

ಇದರಲ್ಲಿ establishment ಎಂಬ ಪದವಿದೆ. ಹಿಂದೆ 3ನೆಯ ಕ್ಲಾಜಿನಲ್ಲಿ ಪಂಚಾಯಿತಿಯನ್ನು establish ಮಾಡಬೇಕೆಂಬ ಪದವಿರುವುದರಿಂದ ಈ ಕ್ಲಾಜಿನಲ್ಲಿ ಅದೇ establishment ಎಂಬ ಪದವನ್ನು ಸೇರಿಸಿದರೆ confuse ಆಗುತ್ತದೆ. ಆದಕಾರಣ ಇದಕ್ಕೆ ಬದಲು officers and servants ಎಂಬ ಪದಗಳನ್ನು ಸೇರಿಸಿದರೆ ಉತ್ತಮವೆಂದು ಯೋಚಿಸಿ ಈ ತಿದ್ದುಪಡಿಯನ್ನು ತರಲಾಗಿದೆ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is :

"That the word 'shall' shall be omitted and the words 'Officers and servants' shall be substituted for the word 'Establishment' in the margin thereof."

The motion was adopted.

*The Hon'ble Sri R. CHENNIGA-RAMAIAH.**—Sir, I beg to move the following amendment to Sub-clause 2:

"That the word 'shall' be substituted for the word 'will'.

20 (2) ನೆಯ ಕ್ಲಾಜಿನಲ್ಲಿ.—

"The Officers and servants appointed by the Panchayet will be subject to the disciplinary control of the Secretary."

ಎಂದಿದೆ. ಇಲ್ಲಿ will ಎಂಬ ಪದಕ್ಕಿಂತ shall ಎಂಬುದು ಸರಿಯಾದ ಪದವಾದ್ದರಿಂದ ಅದನ್ನು ಸೇರಿಸ ಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತರಲಾ ಗಿದೆ. ಇದನ್ನು ಒಪ್ಪುವುದರಲ್ಲಿ ತೊಂದರೆಯೇನೂ ಇಲ್ಲ.

Mr. SPEAKER.—The question is:

"That the word 'shall' be substituted for the word 'will'.

The motion was adopted.

Mr. SPEAKER.—The question is :

"That clause 20, as amended, stand part of the Bill."

The motion was adopted.

Clause 20, as amended, was added to the Bill.

Mr. SPEAKER.—Clause 21.

Sri T. RAMACHAR.—I do not propose to move the amendment.

Sri L. SIDDAPPA.—Sir, I beg to move:

"That item (5) shall be deleted."

ಇದರಲ್ಲಿ ಇಷ್ಟು. ಐಟಂ (5) ರಲ್ಲಿ "exercise such other powers as may be conferred by other provisions of this Act" ಎಂದಿದೆ. ಬೇರೆ ಕ್ಲಾಜುಗಳಲ್ಲಿ ನಮೂದಾಗಿರುವ ಅಧಿಕಾರಗಳಿದ್ದರೆ ಅದರಂತೆ ಮಾಡೇ ಮಾಡುತ್ತಾರೆ. ಇಲ್ಲಿ ಅದನ್ನು ನಮೂದಿಸುವುದು ಅನಾವಶ್ಯಕ.

As it is unnecessary, I think that may be deleted.

Mr. SPEAKER.—Amendment moved:

"That Item (5) shall be deleted."

The Hon'ble Sri K. T. BHASHYAM.—The object of putting in this clause is when you definitely say that the powers of the Panchayet are so and so, if you do not say this, it may be argued that these powers cannot be exercised by him, because if the Legislature intended that these powers should be exercised, they should have mentioned it in the clause. Every legislation must be as far as possible proof against criticism. It is not superfluous. It may lead to confusion and criticism. Therefore it is put in. Granting that this is superfluous, it is better to be superfluous and avoid confusion than to be brief and create confusion.

The Hon'ble Sri R. CHENNIGA-RAMIAH.—We cannot accept the amendment.

Sri L. SIDDAPPA.—I seek the permission of the House to withdraw the amendment.

The amendment was, by leave of the House, withdrawn.

Mr. SPEAKER.—The question is:

"That clause 21 stand part of the Bill."

The motion was adopted.

Clause 21 was added to the Bill.

Mr. SPEAKER.—Clause 22.

Sri T. RAMACHAR.—The amendment is not properly printed. There appears to be some printer's mistake. What was wanted was that there should be provision to file suits and complaints on behalf of the Panchayet and to conduct proceedings on its behalf. The amendment as was originally sent is not correctly printed in the list of amendments. I therefore request that I may be permitted to move the amendment as was originally sent to the officer.

ಅಧ್ಯಕ್ಷರು.—ಈಗ ಸಭೆಯ ಮುಂದಿರತಕ್ಕ ತಿದ್ದುಪಡಿಯನ್ನು ಪುನಃ ತಿದ್ದುಪಡಿ ಮಾಡುತ್ತೀರಾ?

ಶ್ರೀ ಟಿ. ರಾಮಾಚಾರ್ಯರು.—ಮೊದಲು ಕಳುಹಿಸಿದ್ದ ತಿದ್ದುಪಡಿಯಲ್ಲಿ ಹಾಗೆಯೇ ಇತ್ತು.

ಅಧ್ಯಕ್ಷರು.—ಈಗ ಕೊಟ್ಟಿರುವ ತಿದ್ದುಪಡಿಯನ್ನು ಬದಲಾವಣೆಮಾಡಬೇಕೆಂದು ನಿಮ್ಮ ಅಭಿಪ್ರಾಯವೆ?

ಶ್ರೀ ಟಿ. ರಾಮಾಚಾರ್ಯರು.—ಮೊದಲು ಕೊಟ್ಟಿರುವ ತಿದ್ದುಪಡಿಯಲ್ಲೇ suits and complaints ಎಂದಿದೆ.

Since the amendment is not printed in the list as was originally sent to the office, I request the permission of the Chair to move it as was sent originally.

(ಶ್ರೀ ಟಿ. ರಾಮಾಚಾರ್ಯರು).

The intention is that there must be provision in the Act for filing suits and complaints and not suits or complaints on behalf of the Panchayet. I therefore move :

"That in item (13) the word 'suits and' may be added before the word 'complaints.'

Mr. SPEAKER.—Amendment moved:

"That in item (13) the words 'suits and' may be added before the word 'complaints.'

The Hon'ble Sri R. CHENNIGA RAMIAH.—I accept the amendment.

Mr. SPEAKER.—The question is:

"That in item (13) the words 'suits and may be added before the word 'complaints.'

The motion was adopted.

Mr. SPEAKER.—The question is:

"That clause 22, as amended, stand part of the Bill."

The motion was adopted.

Clause 22, as amended, was added to the Bill.

Mr. SPEAKER.—Clause 23. There is an amendment by Sri L. Siddappa.

Sri L. SIDDAPPA.—I do not propose to move the amendments under this clause.

Mr. SPEAKER.—There is another amendment by Sri M. N. Jois.

Sri M. N. JOIS.—I beg to move my amendment which reads like this:

"That the following items shall be added after item (24):—

(25) rural security including organisation of village guards and other associations for the maintenance of village morale and safety;

(26) organising rural development or multi-purpose co-operative societies;

(27) subject to such rules as the Government may make in this behalf, deciding money suits of the value of less than Rs. 100 and trying complaints in respect of offences under the Cattle Trespass Act, Mysore Public Health Act and the Police Act, where only fine could be imposed."

ಸ್ವಾಮಿ, ಈ ಡಿಸ್ಟ್ರಿಕ್ಟ್‌ಬೋರ್ಡ್ ಮತ್ತು ಪಂಚಾಯ್ತಿಗಳ ಸುಧಾರಣೆಯನ್ನು ತರುವುದರಲ್ಲಿ ಬಹಳ ಮುಖ್ಯವಾದ ಉದ್ದೇಶವೇನೆಂದರೆ ಹಳ್ಳಿಗಾಡಿನಲ್ಲಿ ಈಗ ಪಟ್ಟಣಗಳಲ್ಲಿ ಕೇಂದ್ರೀಕೃತವಾಗಿರತಕ್ಕ ಶಕ್ತಿಯೇನಿದೆಯೋ—ಆರ್ಥಿಕವಾಗಿಯಾಗಲಿ, ಸಾಮಾಜಿಕವಾಗಿಯಾಗಲಿ, ನೈತಿಕವಾಗಿಯಾಗಲಿ—ಅವೆಲ್ಲವೂ ಕೂಡ ಸಾಧ್ಯವಾದಮಟ್ಟಿಗೂ ಹಳ್ಳಿಗೆ ಹೋಗಬೇಕು, ಹಳ್ಳಿಗಾಡು ಅಭಿವೃದ್ಧಿಸ್ಥಿತಿಗೆ ಬರಬೇಕೆಂಬುದೇ ಆಗಿದೆ. ಈ ದೃಷ್ಟಿಯಿಂದ ಮತ್ತು ಆರ್ಥಿಕ, ನೈತಿಕ ಮತ್ತು ಸಾಮಾಜಿಕ ಮುಂತಾದುವುಗಳೆಲ್ಲವುಗಳ ದೃಷ್ಟಿಯಿಂದ ಕೂಡ ನಾವು ಪಂಚಾಯ್ತಿಗಳನ್ನು ಬಲಪಡಿಸಬೇಕಾಗಿದೆ. ಆ ರೀತಿ ಬಲಯುತವಾಗಿ ಮಾಡುವಾಗ್ಗೆ ಹಳ್ಳಿಗಾಡಿನಲ್ಲಿರತಕ್ಕ ಒಬ್ಬೊಬ್ಬ ವ್ಯಕ್ತಿಗೂ ಅವನವನ ಜವಾಬ್ದಾರಿಯೇನೆಂಬುದರ ಅರಿವು ಬರಬೇಕಾದ್ದು ಅತ್ಯಾವಶ್ಯಕ. ಆ ಅರಿವು ಬರಬೇಕಾದರೆ, ಜವಾಬ್ದಾರಿಗಳ ಜೊತೆಗೆ ಕೆಲವು ಕರ್ತವ್ಯಗಳನ್ನೂ ಕೂಡ ಅವನು ಮಾಡಬೇಕಾಗುತ್ತದೆ. ಈ ಎಲ್ಲ ದೃಷ್ಟಿಯಿಂದ ನೋಡುವುದಾದರೆ, ಅಲ್ಲಿರತಕ್ಕ ಜನಗಳಿಗೆ ತಮ್ಮ ಭದ್ರತೆಯನ್ನು ತಾವೇ ನೋಡಿಕೊಳ್ಳುವಂತೆ ಮಾಡುವುದು ಅತ್ಯವಶ್ಯಕ. ಈ ದೊಡ್ಡ ಜವಾಬ್ದಾರಿಯನ್ನು ಅಲ್ಲಿರತಕ್ಕ ಪಂಚಾಯ್ತಿಗೆ ಕೊಡುವುದರಿಂದ ಆ ಜನರ ನೈತಿಕಮಟ್ಟ ಬಹಳಮಟ್ಟಿಗೆ ಹೆಚ್ಚಿದ ಹಾಗಾಗುತ್ತದೆ. ಈ ಉದ್ದೇಶದಿಂದ ಈ 25ನೆಯ ಕ್ಲಾಜನ್ನು ಇಲ್ಲಿ ಸೇರಿಸಬೇಕೆಂದು ಹೇಳುತ್ತೇನೆ. ಹಿಂದೆ ಮೂಲ ಬಿಲ್ಲಿನಲ್ಲಿ ಇದು ಸೇರಿತ್ತು. ಆದರೆ ಸೆಲೆಕ್ಟ್ ಸಮಿತಿಯಲ್ಲಿ ಇದನ್ನು discretionary functionsನಲ್ಲಿ ಸೇರಿಸಿದ್ದಾರೆ. ಇದರ ಪ್ರಕಾರ ಇಷ್ಟಪಟ್ಟರೆ ಮಾಡಬಹುದು, ಇಲ್ಲದಿದ್ದರೆ ಬಿಟ್ಟು ಬಿಡಬಹುದೆಂದು ಅರ್ಥವಾಗುತ್ತದೆ. ಒಂದು ಕೆಲಸವನ್ನು ಕರ್ತವ್ಯವೆಂದು ಭಾವಿಸಿ ಮಾಡುವುದಕ್ಕೂ ಇಷ್ಟಪಟ್ಟು ಮಾಡುವುದಕ್ಕೂ ವ್ಯತ್ಯಾಸವಿದೆ. ಈ ಕೆಲಸವನ್ನು ಕರ್ತವ್ಯದೃಷ್ಟಿಯಿಂದ ಮಾಡಬೇಕೆಂಬುದೇ ನನ್ನ ಮತ. ಹಾಗೆ ಮಾಡದೇ ಹೋದರೆ ಇದರ ಜವಾಬ್ದಾರಿ ಪೂರ್ತಿಯಾಗಿ ಜನಗಳಿಗೆ ಗೊತ್ತಾಗುವುದಿಲ್ಲ. Obligatory ಕರ್ತವ್ಯಗಳಲ್ಲಿ ಇದನ್ನು ಸೇರಿಸಿದರೆ ಅದನ್ನು ಅವರು ಮಾಡಲೇಬೇಕಾಗುತ್ತದೆ. ಆಗಲೇ ನಾವು ಮಾಡುವ ಕೆಲಸದ ಜವಾಬ್ದಾರಿಯ ಅರಿವು ನಮಗೆ ಬಂದೀತು. ಅಲ್ಲದೆ ಇದರಿಂದ ದೇಶದಲ್ಲಿ ಬಹಳಮಟ್ಟಿಗೆ ಶಾಂತಿ, ನೆಮ್ಮದಿಯುಂಟಾಗುತ್ತದೆ; ಸೌಖ್ಯ ನೆಲೆಗೊಳ್ಳುತ್ತದೆಂದು ನನ್ನ ಅಭಿಪ್ರಾಯ.

ಇನ್ನು 26ನೆಯ ಕ್ಲಾಜನ್ನು ಆರ್ಥಿಕ ದೃಷ್ಟಿಯಿಂದ obligatoryಯಾಗಿ ಪಂಚಾಯಿತಿಗಳಿಗೆ ವಿಧಿಸಬೇಕೆಂದು ಹೇಳುತ್ತೇನೆ. ಈಗಿರತಕ್ಕದರ ಪ್ರಕಾರ ರಾಜಕೀಯದಲ್ಲಿ ನೋಡಲಿ, ಸಮಾಜದಲ್ಲಿ ನೋಡಲಿ, ಎಲ್ಲ ಕಡೆಯಲ್ಲೂ ಒಂದುಕಡೆ ಬಂಡವಾಳ ಶಾಹಿ, ಇನ್ನೊಂದು ಕಡೆ ಕಮ್ಯೂನಿಸ್ಟ್ ಪ್ರಭಾವ—ಕೆಲವುಕಡೆ ಸೋಷಿಯಲಿಸಂ ಎದ್ದು ಕಾಣುತ್ತಿದ್ದರೂ communism is only an extreme form of socialism ಎಂದು ಹೇಳಿದರೆ ತಪ್ಪಲ್ಲ. ಆದ್ದರಿಂದ ಇವೆರಡಕ್ಕೂ *via media* ವಾಗಿರುವಂತೆ ನಾವು ಒಂದು ಸಮಾಜ ಕಟ್ಟಬೇಕಾದರೆ, ಅದು ಮುಖ್ಯವಾಗಿ ಈ ಕೋ-ಆಪರೇಟಿವ್ ಚಳುವಳಿಯಿಂದಲೇ ಸಾಧ್ಯವಾಗತಕ್ಕುದಾಗಿದೆ. ಚೈನಾದೇಶ ನಾವೆಲ್ಲರೂ ಕೇಳುತ್ತಿದ್ದ ಹಾಗೆ ಒಳಜಗಳ ಕಚ್ಚಾಟಗಳಿಗೆ ಸಿಕ್ಕಿ ಹೆಣಗಾಡುತ್ತಿದ್ದಂಥಾದ್ದು ಈಗ ಒಂದು ಮಹಾ ಬಲಯುತ ರಾಷ್ಟ್ರವಾಗಿ ಅಮೆರಿಕಾ ದೇಶವನ್ನೇ ಎದುರಿಸಲು ಶಕ್ತಿ ಹೊಂದಿದೆ. ಹೊಟ್ಟೆಗೆ ಹಿಟ್ಟಿಲ್ಲದೆ ಒದ್ದಾಡುತ್ತಿದ್ದ ಆ ದೇಶ ಇಂದು ಹೊಟ್ಟೆಗೆ ಹಿಟ್ಟಿಲ್ಲದೆ ಬಳಲುವ ಇಂಡಿಯಾಕ್ಕೆ ಆಹಾರ ಕೊಡುವ ಸ್ಥಿತಿಗೆ ಬರಬೇಕಾದರೆ ಅದು ಮುಖ್ಯವಾಗಿ ಅಲ್ಲಿ ಸಹಕಾರ ತತ್ವ ಕಾರ್ಯರೂಪದಲ್ಲಿ ಅನುಸರಣೆಗೆ ಬಂದಿರುವುದೇ ಬಹಳಮಟ್ಟಿಗೆ ಕಾರಣವಾಗಿದೆ.

ಒಬ್ಬ ಸದಸ್ಯರು.—ಛೇ, ಛೇ!!

ಶ್ರೀ ಎಂ. ಎಚ್. ಜೋಯಿಸರು.—ಛೀ, ಥೂ, ಅನ್ನುವವರು ಬೇಕಾದರೆ ಅವರ ವಾದವನ್ನು ಆಮೇಲೆ ಹೇಳಬಹುದು.

ಶ್ರೀ ಎ. ಭೀಮಪ್ಪನಾಯಕರು.—ಯಾವುದಕ್ಕೆ ಯಾವುದು ಸಂಬಂಧ!

ಶ್ರೀ ಎಲ್. ಸಿದ್ದಪ್ಪನವರು.—Communistic principles ಎಲ್ಲವೂ ಅಲ್ಲದೆಯೆಂದು ಹೇಳಬಹುದು.

ಶ್ರೀ ಎಂ. ಎಚ್. ಜೋಯಿಸರು.—ಅಲ್ಲಿ communistic ತತ್ವಗಳು ಯಾವುವೂ ಇಲ್ಲವೇ ಇಲ್ಲ.

[There was some interrutipon by some members from the back and the member stopped to listen.]

Mr. SPEAKER.—The Hon'ble Member may go on with his speech.

ಶ್ರೀ ಎಂ. ಎಚ್. ಜೋಯಿಸರು.—If I am interrupted like this and if there are any interjections I have to reply them.

ಈ ಸಹಕಾರ ತತ್ವದಿಂದಲೇನೇ ಮಧ್ಯಸ್ಥಗಾರರು ಮತ್ತು ದಳ್ಳಾಳಿಗಳೆಂದು ಸಮಾಜದಲ್ಲಿ ಶೋಷಿಸುವ ವರ್ಗವೇನಿದೆಯೋ ಅವರು ಶೋಷಿಸುವುದನ್ನು ಬಹಳ ಮಟ್ಟಿಗೆ ಕಡಿಮೆಮಾಡಲು ಸಾಧ್ಯ. ಆದ್ದರಿಂದ ಸಹಕಾರ ತತ್ವವನ್ನು ಜಾರಿಗೆ ತರುವುದು ಬಹಳ ಒಳ್ಳೆಯ ತತ್ವ. ಈಗಿನ ಸರ್ಕಾರ ಒಪ್ಪಿಕೊಂಡು ಅಲ್ಲಲ್ಲೇ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಆರಂಭ ಮಾಡುತ್ತಿದ್ದಾರೆ. ಕಲವು ಕಡೆಗಳಲ್ಲಿ ಅವು ಚೆನ್ನಾಗಿ ಕೆಲಸಮಾಡಿವೆ. ಇನ್ನು ಕೆಲವು ಕಡೆಗಳಲ್ಲಿ ಕಲಸ ಮಾಡಿಲ್ಲ. ಹಾಗೆ ಅವು ಕೆಲಸ ಮಾಡದಿರುವುದೂ ಕೂಡ ಆ ಜನರಿಗೆ ಅವರ ಕರ್ತವ್ಯವಿದೆಂದು ಹೇಳದೆ, ಈ ಕೆಲಸಕ್ಕೆ discretionary character ಕೊಟ್ಟಿರುವುದರಿಂದ ಎಂದು ಹೇಳಬೇಕು. ಅಲ್ಲದೆ, ಆರ್ಥಿಕ ದೃಷ್ಟಿಯಿಂದಲೂ ಕೂಡ ಒಂದೊಂದು ಪಂಚಾಯ್ತಿಯವರೂ ಕೂಡ ಅಲ್ಲಿರತಕ್ಕ ಜನಗಳಿಗೆ ಬೇಕಾದ ಸಾಮಾನುಗಳೆನ್ನೆಲ್ಲಾ ಹೊಂದಿಸಿಕೊಂಡು ಕಡಿಮೆ ಲಾಭದಿಂದ ಒದಗಿಸಿಕೊಡುವ ಏರ್ಪಾಡಿದ್ದರೆ ಹಳ್ಳಿಗಾಡಿನ ಆರ್ಥಿಕಸ್ಥಿತಿ ಬಹಳಮಟ್ಟಿಗೆ ಉತ್ತಮಗೊಳ್ಳಬಹುದು. ಅಷ್ಟೇ ಅಲ್ಲ. ಈ ಸಂಘಗಳು ಹಳ್ಳಿಗಾಡಿನಲ್ಲಿ ಆಗತಕ್ಕ ಆಹಾರ ಧಾನ್ಯವನ್ನಾಗಲಿ, ಅಲ್ಲಿ ತಯಾರಾದಂಥ ಸಾಮಾನುಗಳನ್ನಾಗಲೀ ಕೊಂಡುಕೊಂಡು ಬೇರೆ ಕಡೆ ಮಾರಾಟ ಮಾಡುವುದಕ್ಕೂ ಅವಕಾಶವಾಗುತ್ತದೆ. ಇದರಿಂದ ಅಲ್ಲಿನ ಜನರ ಆರ್ಥಿಕ ಮಟ್ಟ ಹೆಚ್ಚುತ್ತದೆ. ಈ ದೃಷ್ಟಿಯಿಂದ ಒಂದೊಂದು ಪಂಚಾಯಿತಿಗೂ ಒಂದು ಮಲ್ಟಿಪರ್ಪಸ್ ಸೊಸೈಟಿಯಿದ್ದರೆ ಉತ್ತಮವೆಂದು ನನ್ನ ಅಭಿಪ್ರಾಯ.

ಇನ್ನು ಮೂರನೆಯದು. ಹಳ್ಳಿಗಾಡಿನಲ್ಲಿ ಸಾಮಾನ್ಯವಾಗಿ ದೊಡ್ಡದೊಡ್ಡ ವ್ಯವಹಾರಗಳು ಬರುವುದು ಕಡಿಮೆ. ಬೆಳಗಾದರೆ ಅಲ್ಲಿ ಇಲ್ಲಿ ಸಣ್ಣಪುಟ್ಟ ವ್ಯವಹಾರಗಳೇ ಜಾಸ್ತಿ. ಇಂಥ ವ್ಯವಹಾರಗಳನ್ನು ತೆಗೆದುಕೊಂಡು ಬೇರೆ ಊರಿಗೆ ಹೋಗುವುದಾಗಲೀ ಅಥವ ಅದರ ಫೈಸಲಾತಿ ಬಗ್ಗೆ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಹತ್ತುವುದಾಗಲೀ ಕಡಿಮೆಯಾಗಬೇಕು. ಈ ದೃಷ್ಟಿಯಿಂದ ಅಲ್ಲಿರತಕ್ಕ ಜನಗಳಿಗೇ ಈ ಅಧಿಕಾರ ಕೊಡಬೇಕೆಂದು ಹೇಳುತ್ತೇನೆ.

ಅಷ್ಟೇ ಅಲ್ಲದೆ ಈ ಸಣ್ಣ ಪುಟ್ಟ ವ್ಯವಹಾರಗಳನ್ನೆಲ್ಲಾ ಆ ಊರಿನಲ್ಲೇ ವಿಚಾರಣೆ ನಡೆಸಿ ತೀರ್ಪು ಕೊಡುವುದಾದರೆ ಆ ಊರಿನವರಿಗೆಲ್ಲಾ 'ಈ ಮನುಷ್ಯ ಇಂಥವನು, ಇಂಥ ಕೆಲಸ ಮಾಡಿದ್ದಾನೆ' ಎಂದು ಬಹಳಮಟ್ಟಿಗೆ ಪ್ರಚಾರಕ್ಕೆ ಬಂದು ಆ ಊರಿನ ಜನರಲ್ಲಿ ತಪ್ಪು ಮಾಡುವುದೇ ಕಡಿಮೆಯಾಗಬಹುದು.

ಈ ಎರಡು ದೃಷ್ಟಿಯಿಂದ ಇದನ್ನು ಮಾಡಬೇಕಾದ್ದು ಸಾಧುವಲ್ಲದೆ ಧರ್ಮ ಪರಿಪಾಲನೆ ಮಾಡಬೇಕು, ನ್ಯಾಯಪರಿಪಾಲನೆ ಮಾಡಬೇಕೆಂಬುದರ ವಿಷಯದಲ್ಲಿ ಆ ಜನಗಳಿಗೆ ಒಂದು ವಿಧವಾದ ಶಿಕ್ಷಣ ಕೊಟ್ಟಹಾಗಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಮೂರು ತಿದ್ದುಪಡಿಗಳನ್ನೂ ಒಪ್ಪಿಕೊಂಡು ಅವರು ಈ ಮಸೂದೆಯನ್ನು ತಂದಿರುವುದರ ಮುಖ್ಯ ಉದ್ದೇಶವನ್ನು ಸಫಲಗೊಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—Amendment moved:

"That the following items shall be added after item (24):

25. rural security including organisation of village guards and other associations for the maintenance of village morale and safety;

26. organising rural development or multipurpose co-operative societies;

27. subject to such rules as the Government may make in this behalf, deciding money suits of the value of less than Rs. 100 and trying complaints in respect of offences under the Cattle Trespass Act, the Mysore Public Health Act and the Police Act, where only fine could be imposed."

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ಪಂಚಾಯಿತಿಗಳಮೇಲೆ ಕರ್ತವ್ಯವನ್ನು ನೇಮಕಮಾಡುವ ವಿಷಯದಲ್ಲಿ ಶ್ರೀಮಾನ್ ಜೋಯಿಸರು ಸೂಚಿಸಿರುವ ತಿದ್ದುಪಡಿಗಳ ಪೈಕಿ ಮೊದಲಿನ ಎರಡನ್ನು ಐಚ್ಛಿಕ ಕರ್ತವ್ಯಗಳಲ್ಲಿ ಅಳವಡಿಸಿದೆ. ಇವರು ಸೂಚಿಸಿರತಕ್ಕ ತಿದ್ದುಪಡಿಗಳ ಪೈಕಿ ಕೆಲವು ಐಚ್ಛಿಕ ಜವಾಬ್ದಾರಿಗಳಲ್ಲಿ ಅಡಕವಾಗಿವೆ. ಅವರ ಉದ್ದೇಶವೇನೋ ಬಹಳ ಒಳ್ಳೆಯದೆ. ಆದರ್ಶವಾಗಿದೆ. ನಾವು ಈಗಾಗಲೆ ಪಂಚಾಯಿತಿಗಳಮೇಲೆ ಕೆಲವು ಹೊರೆಯನ್ನು ಹಾಕಿದ್ದೇವೆ. ಆ ಹೊರೆಯನ್ನು ಹೊರಬಲ್ಲ ಶಕ್ತಿ ಸಾಮರ್ಥ್ಯಗಳು ಅವಕ್ಕಿದೆಯೇ ಎಂಬುದನ್ನು ಆಲೋಚಿಸಿ ಈ ತಿದ್ದುಪಡಿಗಳನ್ನು ತರಬೇಕಾಗಿತ್ತೆಂದು ನನ್ನ ಅಭಿಪ್ರಾಯ. ಕಾಲಕ್ರಮೇಣದಲ್ಲಿ ಕೆಲಸ ನಿರ್ವಹಿಸಬಲ್ಲ ಶಕ್ತಿ ಹೊಂದಿದ ನಂತರ ನಾವು ಈ ಕೆಲಸ ಕಾರ್ಯಗಳನ್ನೂ ಮತ್ತು ಹೆಚ್ಚಿನ ಅಧಿಕಾರವನ್ನೂ ಸಹ ಕೊಡಲು ಸಲಹೆ ಮಾಡಬಹುದು. ಮೆಟ್ಟಲು ಮೆಟ್ಟಲುಗಳಾಗಿ ಹೋಗುವುದನ್ನು ಬಿಟ್ಟುಬಿಟ್ಟು ಒಂದೇ ಬಾರಿಗೆ ಈ ಭಾರವನ್ನೆಲ್ಲಾ ಅವುಗಳಮೇಲೆ ಹೊರಿಸಿದರೆ ಮುಂದೆ ಬಹಳ ಕಷ್ಟಕ್ಕೀಡಾಗಬಹುದೆಂಬ ಅಂಶವನ್ನು ಒಪ್ಪಿಕೊಳ್ಳಲೇಬೇಕು. ಹಾಗೂ ಒಂದು ವೇಳೆ ಅವುಗಳ ಶಕ್ತಿ ಸಾಮರ್ಥ್ಯಗಳನ್ನು ಲಕ್ಷಿಸದೆ ಹೊರೆ ಹೊರಿಸಿದರೆ ದೇಶಕ್ಕೂ ಮತ್ತು ಜನರಿಗೂ ಅದರಿಂದ ಆಗತಕ್ಕ ಅನುಕೂಲಕ್ಕೆ ಬದಲಾಗಿ ಅನಾನುಕೂಲವೇ ಹೆಚ್ಚಾಗುತ್ತೆಂಬ ಅಂಶವನ್ನು ಶ್ರೀ ಎಂ. ಎಚ್. ಜೋಯಿಸರು ಕಡ್ಡಾಯವಾಗಿ ಒಪ್ಪಿಕೊಳ್ಳಲೇಬೇಕು. ಈಗ ನಮ್ಮ ದೇಶದಲ್ಲಿರತಕ್ಕ ಪ್ರತಿಯೊಂದು ಪಂಚಾಯಿತಿಗೂ ಒಂದೇ ಸಮನಾದ ಹಣಕಾಸಿನ ವರಮಾನ, ಕೆಲಸ ನಡೆಸಬಲ್ಲಂಥ ದಕ್ಷರಾದ ಜನರು ಇದ್ದಾರೆಂದು ಹೇಳಲಾಗುವುದಿಲ್ಲ. ಈ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ಆಲೋಚನೆಮಾಡಿ ಸರ್ಕಾರದವರು ಮತ್ತು ಸಮಿತಿಯವರೂ ಒಂದೇ ತೀರ್ಮಾನಕ್ಕೆ ಬಂದಿದ್ದಾರೆ. ಆದಕಾರಣ ಶ್ರೀಮಾನ್ ಜೋಯಿಸರು ಯಾವ ಒಂದು

(ಶ್ರೀ ಎಚ್. ಎಂ. ಚನ್ನಬಸಪ್ಪನವರು.)

ಸದುದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೋ, ಆ ಸದುದ್ದೇಶ ಇದರಿಂದ ನೆರವೇರುವುದಿಲ್ಲ.

"(25) rural security including organisation of village guards and other associations for the maintenance of village morale and safety ;

(26) organising rural development or multi-purpose co-operative societies ;

(27) subject to such rules as the Government may make in this behalf deciding money suits of the value of less than Rs. 100 and trying complaints in respect of offences under the Cattle Trespass act, the Mysore Public Health Act and the Police Act, where only fine could be imposed."

ಈ ತಿದ್ದುಪಡಿಗಳಲ್ಲಿ ಹೇಳಿರತಕ್ಕದ್ದೆಲ್ಲ ಬಹಳ ಚೆನ್ನಾಗಿ ಇದೆ. ಕ್ಲಾಜ್ 27 ರಲ್ಲಿ ಹೇಳಿರತಕ್ಕದ್ದೆಲ್ಲವನ್ನೂ 25—26ನೆಯ ಕ್ಲಾಜಿನಲ್ಲೇ ಐಚ್ಛಿಕವಾಗಿ ಅಳವಡಿಸಿದ್ದಾರೆ. ಪಂಚಾಯಿತಿಗಳಿಗೆ ದಕ್ಷತೆಯಿಂದ ಕೆಲಸ ನಿರ್ವಹಿಸತಕ್ಕ ಶಕ್ತಿಯುಂಟಾದಾಗ ಈ ಅಧಿಕಾರಗಳನ್ನೆಲ್ಲಾ ಅವುಗಳಿಗೆ ಸರ್ಕಾರದವರು ಕೊಟ್ಟೇ ಕೊಡುತ್ತಾರೆ. ಈಗ ನಮಗೆ ಗೊತ್ತಿರುವ ಪ್ರಕಾರ ಕೆಲವು ಸಂಸ್ಥೆಗಳು ದಕ್ಷತೆಯಿಂದ ಕೆಲಸ ನಿರ್ವಹಿಸುತ್ತಿದ್ದರೂ, ಆ ರೀತಿ ಕೆಲಸ ನಡೆಸಲಾರದೆ ತೊಂದರೆ ತಾಪತ್ರಯಗಳಿಗೀಡಾಗಿರತಕ್ಕ ಸಂಸ್ಥೆಗಳೂ ಅನೇಕ ಇವೆ. ಅವುಗಳ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಇಂಥಾ ಸನ್ನಿವೇಶದಲ್ಲಿ ಅವುಗಳಿಗೆ ಈ ಹೆಚ್ಚಿನ ಜವಾಬ್ದಾರಿಯುತವಾದ ಕೆಲಸವನ್ನೂ ಒಪ್ಪಿಸಿದರೆ ಅವುಗಳ ಕೆಲಸಕಾರ್ಯಗಳು ಮುಂದೆ ಅಸಮರ್ಪಕವಾಗುವುವು. ಆಗ ಪರಿಸ್ಥಿತಿ ಏನಾಗುತ್ತೆಂಬುದನ್ನು ಆಲೋಚಿಸಿ ನೋಡಿ. ಈಗ ಶ್ರೀ ಜೋಯಿಸ್‌ರವರು ಸೂಚಿಸಿರತಕ್ಕ 27ನೆಯ ತಿದ್ದುಪಡಿಯ ಪ್ರಕಾರ ಗ್ರಾಮಪಂಚಾಯಿತಿಗಳಿಗೆ ಗ್ರಾಮ ನೈರ್ಮಲ್ಯದ ಶಾಸನ, ಕ್ಯಾಟ್ಲ್‌ಟ್ರೆಸ್‌ಪಾಸ್ ಆಕ್ಟ್ ಮತ್ತು ಪೋಲೀಸ್ ಆಕ್ಟ್ ಪ್ರಕಾರ ಕೆಲವು ಕೇಸುಗಳನ್ನು ವಿಚಾರಣೆಮಾಡಿ, ತೀರ್ಪು ಕೊಡತಕ್ಕಂಥ ಅಧಿಕಾರ ಕೊಡಬೇಕೆಂದು ಕೇಳಿರತಕ್ಕದ್ದು ಬಹಳ ಹೆಚ್ಚಿನದು. ಇದರ ಜೊತೆಗೆ ಸಿವಿಲ್ ಮತ್ತು ಕ್ರಿಮಿನಲ್ ಸ್ವಭಾವದ ತಕ್ಕರಾರುಗಳನ್ನೂ ವಿಚಾರಣೆಮಾಡಿ, ತೀರ್ಪು ಕೊಡುವಂಥ ಅಧಿಕಾರ ಕೊಡಬೇಕೆಂದು ಕೇಳಿದ್ದಾರೆ. ನಮ್ಮ ದೇಶದಲ್ಲಿ ಜನರು ಅಂಥ ಶಕ್ತಿ ಸಾಮರ್ಥ್ಯಗಳನ್ನು ಪಡೆಯಬೇಕೆಂಬುದೇ ನಮ್ಮೆಲ್ಲರ ಉದ್ದೇಶ. ಈ ಅಂತಸ್ತಿಗೆ ಬಂದರೆ ಬಹಳ ಒಳ್ಳೆಯದು. ಅಲ್ಲಿಗೆ ಬರುವ ತನಕ, ಪಂಚಾಯಿತಿಗಳಿಗೆ ಎಷ್ಟರಮಟ್ಟಿನ ಅಧಿಕಾರ ಕೊಟ್ಟರೆ ಸೂಕ್ತವೋ ಅಷ್ಟರಮಟ್ಟಿನ ಅಧಿಕಾರ ಕೊಡಬೇಕೇ ಶಿವಾಯಿ ಅತಿ ಆತುರದಿಂದ ದುಡಿಕಿ ಕೆಲಸಮಾಡಬಾರದು. ಕೇಸುಗಳನ್ನು ವಿಚಾರಣೆ ಮಾಡಿ, ಅವುಗಳ ಬಗ್ಗೆ ತೀರ್ಮಾನ ಕೊಡತಕ್ಕಂಥ ಕಾನೂನು ಪರಿಶ್ರಮವುಳ್ಳ ಜನರು ಗ್ರಾಮಾಂತರಗಳಲ್ಲಿ ಎಷ್ಟಿದ್ದಾರೆ ? ಜನರು ಆ ಶಕ್ತಿಯ ಮಟ್ಟಕ್ಕೇರಿದಾಗ ಇದನ್ನು ಮಾಡಬಹುದು. ಈಗ ಸದ್ಯಕ್ಕೆ ಜನರು ಇನ್ನೂ ಅಷ್ಟು ತಿಳಿವಳಿಕೆಯುಳ್ಳವರಾಗಿಲ್ಲ. ಇದು premature stage. ಇಂಥಾ ಪರಿಸ್ಥಿತಿಯಲ್ಲಿ ಇವುಗಳಿಗೆ ಈ ಅಧಿಕಾರಗಳನ್ನು ಕೊಟ್ಟರೆ—ಪಂಚಾಯ್ತಿಗಳ ಬದಲು ಕೆಲ್ಲಾ ಪಂಚಾಯ್ತಿಯೇ ಆಗುತ್ತೆ. ಈ ಸಂಬಂಧವಾಗಿ ಸಮಿತಿಯವರು ಒಂದು ಉಪಸಮಿತಿಯನ್ನು ಏರ್ಪಡಿಸಿ ಈ ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ಸಲಹೆಮಾಡಲು ನೇಮಿಸಿದ್ದರು. ಅಂಥಾ ಅಧಿಕಾರಗಳು ಸದ್ಯಕ್ಕೆ ಅನಾವಶ್ಯಕವೆಂಬ ತೀರ್ಮಾನಕ್ಕೆ ಅವರು ಬಂದು, ಆ ರೀತಿ ಸಲಹೆಮಾಡಿದ್ದಾರೆ. ಹಾಗೆ ಅವರು ಮಾಡಿರತಕ್ಕದ್ದು ಸೂಕ್ತ ಮತ್ತು ನ್ಯಾಯವಾಗಿದೆ. ಈ ಎಲ್ಲ ಕಾರಣಗಳಿಂದ ಸದ್ಯದ ಪರಿಸ್ಥಿತಿಗೆ ಶ್ರೀ ಜೋಯಿಸರ ಉದ್ದೇಶ ಹೊಂದಾಣಿಕೆಯಾಗದೆ ಇರುವುದರಿಂದ ಆ ಪಂಚಾಯ್ತಿಗಳು ಶಕ್ತಿ ಪಡೆಯುವತನಕ ವಾಪಸ್ಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಸದಸ್ಯರಾದ ಶ್ರೀ ಜೋಯಿಸರು ಅವರ ಈ ಮೂರು ಅಂಶಗಳನ್ನೂ 23ನೆಯ ಕ್ಲಾಸಿನಲ್ಲಿ ಅಡಕಮಾಡಬೇಕೆಂದು ಹೇಳಿದ್ದಾರೆ. ಆದರೆ ಅದನ್ನು ನಾನು ವಿಷಾದದಿಂದ ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳಬೇಕಾಗಿದೆ.

ಮೊದಲನೆಯದಾಗಿ ಕೊನೆಯ ವಿಚಾರವನ್ನು ತೆಗೆದುಕೊಳ್ಳೋಣ. ಇವರು ಯಾವಾಗಲೂ ಕೇವಲ ಪಟ್ಟಣದ ವಾಸವನ್ನೇ ಮಾಡಿಕೊಂಡಿದ್ದು, ಅವರಿಗೆ ಅಷ್ಟಾಗಿ ಹಳ್ಳಿಯವರ ಜೀವನದ ವಿಚಾರ ತಿಳಿಯದು. ಅದೇ ರೀತಿ ನಾನೂ ಸಹ ಹೆಚ್ಚಾಗಿ ಪಟ್ಟಣವಾಸದಲ್ಲೇ ಇದ್ದಾಗ್ಯೂ ಹಳ್ಳಿಯ ಸಂಪರ್ಕವನ್ನು ಮಾತ್ರ ನಾನು ಇಂದಿಗೂ ಕೈಬಿಟ್ಟಿಲ್ಲ ಆದರೆ ಹಳ್ಳಿಯಲ್ಲಿ ಈ ಪಂಚಾಯ್ತಿಯಲ್ಲಿ ವ್ಯಾಜ್ಯ ೀಗೆಹರಿಸಬೇಕೆಂಬುದು ಎಷ್ಟು ಕಠಿಣತರವಾದ್ದೆಂಬುನ್ನು ಹೇಳತೀರದಾಗಿದೆ. ಜನರು ಹೀಗೆ ಕೋರ್ಟು ಕಛೇರಿಗಳಿಗೆ ಅಲೆಯುವುದನ್ನು ತಪ್ಪಿಸಿ, ಅವರವರ ವ್ಯವಹಾರವನ್ನು ಅವರವರ ಗ್ರಾಮದಲ್ಲೇ ತೀರ್ಮಾನಮಾಡಬೇಕೆಂದು ಹೇಳುವುದು ಬಹಳ ಒಳ್ಳೆಯದು. ಆದರೆ ವಸ್ತುತಃ ಅದನ್ನು ಆಚರಣೆಗೆ ತರಲು ಬಹಳ ಕಷ್ಟವಿದೆ ಜನರು ಆ ಮಟ್ಟಕ್ಕೆ ಇನ್ನೂ ಬಂದಿಲ್ಲ. ಈಗ ಒಂದೊಂದು ಪಂಚಾಯಿತಿಗೆ 20—25 ಜನ ಸದಸ್ಯರಿರುತ್ತಾರೆ. ಇಷ್ಟು ಜನರೂ ಸೇರಿ ಒಂದು ವ್ಯವಹಾರ ತೀರಬೇಕೆಂದು ಹೇಳತಕ್ಕದ್ದು ಅಷ್ಟು ಸಾಧುವಾಗಿಲ್ಲ. ಹಳ್ಳಿಯಲ್ಲಿ ಉದಾಹರಣೆಗೆ ಒಬ್ಬನ ದನ ಮತ್ತೊಬ್ಬನ ಜಮೀನಿಗೆ ಹೋಗಿ ಬೆಳೆಯನ್ನು ಲುಕ್ಸಾನು ಮಾಡಿದಂಥ ಸಂದರ್ಭ ಬಂದಾಗ, ಅಂಥಾ ಮನುಷ್ಯನಿಗೆ ಜುಲ್ಮಾನೆ ಇತ್ಯಾದಿ ವಿಧಿಸಬೇಕೆಂದು ತೀರ್ಮಾನ ಕೊಡಬೇಕಾಗಿ ಬಂದಾಗ, ಹಾಗೆ ಜುಲ್ಮಾನೆ ಕೊಡಬೇಕಾದ ಮನುಷ್ಯನು ಅಲ್ಲಿಗೆ ಹಿಂದಿನ ವರ್ಷಗಳ ಹಿಂದಿನ ನಡೆವಳಿಕೆ ತೆಗೆಯುತ್ತಾ 'ನಿನ್ನ ದನಗಳು ನನ್ನ ಜಮೀನಿಗೆ ಬಂದಾಗ, ಹೀಗೆ ಜುಲ್ಮಾನೆಯನ್ನು ನೀನು ಕೊಟ್ಟಿದ್ದೆಯೊ' ಎಂದು ವಾದಿಸಲಿಕ್ಕೆ ಪ್ರಾರಂಭಿಸಿ, ಕಡೆಗೆ ತಲೆತಲೆ ಹೊಡೆದಾಡಿಕೊಂಡು, ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಹೋಗುವ ತನಕಲೂ ತಯಾರಾಗಿದ್ದಾರೆ. ಆದಕಾರಣ ಹೀಗೆ ಪಂಚಾಯಿತಿಗಳವರಿಗೆ ಈ ರೀತಿ ವ್ಯಾಜ್ಯಗಳನ್ನು ವಿಚಾರಣೆಮಾಡಿ, ಫೈಸಲ್ ಮಾಡತಕ್ಕ ಶಕ್ತಿ ಸಧ್ಯಕ್ಕೆ ಇರುವುದಿಲ್ಲ. ಗ್ರಾಮನೈರ್ಮಲ್ಯದ ವಿಚಾರದಲ್ಲೂ ಹೀಗೆ ಆಗುತ್ತೆ. ಒಬ್ಬರು ಬಚ್ಚಲು ನೀರು ರಸ್ತೆಗೆ ಬಿಡಬಾರದೆಂದರೆ ಮತ್ತೊಬ್ಬರು, ವಾಸನೆ ಏನೂ ಬರುತ್ತಿಲ್ಲ ; ಬಿಟ್ಟರೇನು, ಎಂದು ಅಡ್ಡಹೇಳಲು ಬಂದುಬಿಡುತ್ತಾರೆ. ಹಳ್ಳಿ ವಿಚಾರ ಬಹಳ ಕಷ್ಟ. ಆದರೆ ಅಕ್ಕಪಕ್ಕದ ಪ್ರಾವಿನ್ಸುಗಳಲ್ಲಿ ಅಂದರೆ ಮದ್ರಾಸ್ ಇತ್ಯಾದಿ ಪ್ರಾವಿನ್ಸುಗಳಲ್ಲಿ ಅಧಿಕಾರ ಕೊಟ್ಟಿದ್ದಾರೆ. ಅಲ್ಲಿ ಬಹಳ ಕಾಲದಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದಿದೆ. ನಮ್ಮ ಸ್ನೇಹಿತರು ಕೊಳ್ಳೇಗಾಲದಲ್ಲಿ ಮಣೆಗಾರರು ಇತ್ಯಾದಿಯವರಿಗೆ ಇರುವ ಅಧಿಕಾರ ಮತ್ತು ಮದ್ರಾಸ್ ಸರಹದ್ದಿನಲ್ಲಿರತಕ್ಕ ಗ್ರಾಮಗಳ ಸ್ಥಿತಿ ನೋಡಿ, ಅದೇ ರೀತಿ ಇಲ್ಲಿನ ಪಂಚಾಯಿತಿಗಳಿಗೂ ಆ ಅಧಿಕಾರವಿರಬೇಕೆಂದು ಕೇಳಿರುವಂತೆ ತೋರು

ತ್ತದೆ. ಆದರೆ ಅಲ್ಲಿಯ ಪರಿಸ್ಥಿತಿಗೂ ಇಲ್ಲಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಇಲ್ಲಿರತಕ್ಕ ಪಂಚಾಯಿತಿಗಳೆಲ್ಲಾ ಇನ್ನೂ ಶೈಶವಾವಸ್ಥೆಯಲ್ಲಿರುತ್ತವೆ. ಇಂಥವುಗಳಿಗೆ ಈ ಅಧಿಕಾರಗಳನ್ನು ಕೊಡುವುದೆಂದರೆ ಹಾಲು ಕುಡಿಸುವ ಕೂಸಿಗೆ ವಿಷ ಕುಡಿಸಿದಂತಾಗುತ್ತದೆ. ಆದಕಾರಣ ಇದನ್ನು ಕರ್ತವ್ಯದೃಷ್ಟಿಯಿಂದ ವಿಮರ್ಶೆ ಮಾಡಿ ಹೇಳತಕ್ಕ ವಿಚಾರವಾಗಿದೆ. ಆದರೆ ಕೆಲವು ಗ್ರಾಮಗಳಲ್ಲಿ ಇಂಥಾ ಕೆಲಸ ನಿರ್ವಹಿಸಬಲ್ಲ ಜನರಿರಬಹುದು. ಪ್ರತಿಯೊಂದು ಕಡೆಯಲ್ಲೂ ಹೀಗೆ ಬುದ್ಧಿವಂತರಿರುತ್ತಾರೆಂದೂ, ಅವರು ಅಭಿವೃದ್ಧಿಪಡಿಸಲು ತಯಾರಿರುತ್ತಾರೆಂದೂ ಹೇಳುವುದು ಕಷ್ಟ.

ಈಗ ಸಮಗ್ರಸೇವಾ ಸಹಕಾರ ಸಂಘಗಳು ಚೆನ್ನಾಗಿ ನಡೆಯುತ್ತಿವೆ. ತತ್ರಾಪಿ ಮೈಸೂರು ಜಿಲ್ಲೆಯಲ್ಲಿ ಹಣಕ್ಕೆ ಹಣ ಕೊಡುವಷ್ಟು ರೀತಿಯಲ್ಲಿ ಈಗಾಗಲೇ ಸಂಪಾದನೆಮಾಡಿದ್ದಾರೆ. ಆದರೆ ಎಲ್ಲಾ ಗ್ರಾಮಕ್ಕೂ ಅದನ್ನು ಕೊಡುವುದಕ್ಕಾಗುವುದಿಲ್ಲ. ಒಂದು ಸರ್ಕಲ್ಲಿನಲ್ಲಿ ಅಂಥಾದ್ದು ಒಂದು ಸೊಸೈಟಿ ಇರುತ್ತದೆ. ಈಗ ನಮ್ಮ ಮುಂದಿರುವ ವಿಷಯವನ್ನು ಒಪ್ಪಿದರೆ ಪ್ರತಿಯೊಂದು ಗ್ರಾಮದಲ್ಲೂ ಈ ಸಹಕಾರ ಸಂಘವನ್ನು ಇಡಬೇಕೆಂದು ಅರ್ಥವಾಗುತ್ತದೆ. ಈಗ ಸೊಸೈಟಿಯಲ್ಲಿ ಅನೇಕ ಕಂಟ್ರೋಲ್ ಸಾಮಾನುಗಳು ವಗೈರೆ ಕೊಡುತ್ತಿರುವುದರಿಂದ ಸ್ವಲ್ಪ ಅದಕ್ಕೆ ಜೀವ ಬಂದಂತಾಗಿದೆ. ಹಾಗಿರುವಾಗ ಪ್ರತಿಯೊಂದು ಗ್ರಾಮಕ್ಕೂ ಈ ಸಮಗ್ರ ಸೇವಾ ಸಹಕಾರ ಸಂಘವನ್ನು ಕೊಡಬೇಕೆಂದು ಹೇಳಿದರೆ ಅದು ಸಾಧ್ಯವೂ ಇಲ್ಲ ಮತ್ತು ಕಂಟ್ರೋಲು ಸಾಮಾನುಗಳನ್ನು ಪ್ರತಿಯೊಂದಕ್ಕೂ ಹಂಚುವುದು ಬಹಳ ಕಷ್ಟವಾಗುತ್ತದೆ. ಹಾಗೆ ಕೊಡುವುದರಿಂದ ಲಾಭವೂ ಇಲ್ಲ ಮತ್ತು ಯಾರಿಗೂ ಪ್ರಯೋಜನವೂ ಆಗುವುದಿಲ್ಲ. ಪ್ರತಿಯೊಂದು ಗ್ರಾಮಕ್ಕೂ ಪಂಚಾಯಿತಿಯವರು ಈಗ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಹಾಗೆ ಮಾಡಿದರೆ ಈಗ ನಡೆಯುತ್ತಿರುವುದಕ್ಕೆ ಬಹಳ ಕಷ್ಟನಷ್ಟಗಳುಂಟಾಗುತ್ತವೆ. ಪ್ರತಿ ಪಂಚಾಯಿತಿಗೂ ಒಂದೊಂದು ಸೊಸೈಟಿಯನ್ನು ಕೊಡಿ, 2 ಸಾವಿರ ಜನಸಂಖ್ಯೆಗೆ ಒಂದು ಕೊಡಿ ಎಂದು ಹೇಳಿದರೆ ಅದು ಸರ್ಕಲ್ ಸೊಸೈಟಿ ಮತ್ತು ಬ್ರಾಂಚ್ ಸೊಸೈಟಿ ಆಗುವ ಪರಿಸ್ಥಿತಿ ಬರುತ್ತದೆ. ಇದರಿಂದ ಬಹಳ ಜಿಜ್ಞಾಸೆಯಾಗಿ ಮನಃಕಷಾಯಕ್ಕೆ ಕಾರಣವಾಗುತ್ತದೆ ಹಾಗೇಕೆ ಮಾಡಬೇಕು ? ಇದು ಅನುಭವ ಸಿದ್ಧವಾದ ಮಾತು. ಆದ್ದರಿಂದ ಈ ಸಮಗ್ರಸೇವಾ ಸಹಕಾರ ಸಂಘಗಳನ್ನು ಪ್ರತಿಯೊಂದು ಗ್ರಾಮಕ್ಕೂ ಕೊಡುವುದಕ್ಕಾಗುವುದಿಲ್ಲ. ಈಗಿರುವಂತೆ ಅವು ಸರ್ಕಲುಗಳಲ್ಲೇ ಇರಬೇಕು. ಪ್ರತಿಯೊಂದು ಗ್ರಾಮಕ್ಕೂ ಕೊಡುವುದಾದರೆ ಬರೀ ಬ್ರಾಂಚ್ ಸೊಸೈಟಿಯಂತಾಗಿ ಸರಿಯಾಗಿ ನಡೆಯುವುದಿಲ್ಲ. ಅನ್ಯಾಯವಾಗಿ ಚೆನ್ನಾಗಿ ಕೆಲಸ ನಡೆಯುತ್ತಿರುವುದಕ್ಕೂ ಅಡ್ಡಿಮಾಡಿದಹಾಗಾಗುತ್ತದೆ. ಆದ್ದರಿಂದ ಇದು ಸಾಧ್ಯವಿಲ್ಲ. ಆಮೇಲೆ

"Rural security including organisation of village guards and other associations for the maintenance of village morale and safety."

ಎಂದು ಹೇಳಿದೆ. ಶ್ರೀ ಚನ್ನಬಸಪ್ಪನವರು ಆಗಲೇ ಹೇಳಿದಹಾಗೆ ಕರ್ತವ್ಯದೃಷ್ಟಿಯಿಂದ ಹಾಗೆ ಮಾಡಿದರೆ ಬಹಳ ಕಷ್ಟವಾಗುತ್ತದೆ. ಅದನ್ನು ಐಚ್ಛಿಕವಾಗಿ ಮಾಡುವುದಕ್ಕೆ ಬಿಡುವುದು ಒಳ್ಳೆಯದು. ಮನಸ್ಸು ಒಂದೇ ರೀತಿಯಲ್ಲಿರುವುದಿಲ್ಲ. ಅಲ್ಲಲ್ಲಿರುವ ಯುವಕರೇ ಸೇರಿ ಮಾಡಬೇಕೆಂದಿದೆ. ಅವರಿಗೆ ಅದನ್ನು ಬಿಡುವುದಾದರೆ ಪೋಲೀಸಿನವರ ಕಾವಲಿರಬೇಕೆಂದಿದೆ. ಪೋಲೀಸ್ ಆಕ್ಟ್ ಇನ್ನೂ ತಿದ್ದುಪಡಿಯಾಗಿಲ್ಲ. ಅದರ ಪ್ರಕಾರ ಗ್ರಾಮದ ಪಟೇಲರಿಗೆ ಅಧಿಕಾರವಿದೆ. ಇದನ್ನು ಮಾಡಿದರೆ ಈಗ ಅವರು ಅನಾದರಣೆಮಾಡುತ್ತಾರೆ. ಒಂದುವೇಳೆ ಅವರು ಮಾಡದಿದ್ದರೆ ನಾಳೆ ಪೋಲೀಸ್ ಆಕ್ಟ್ ಪ್ರಕಾರ ಪಟೇಲರನ್ನು ಆಕ್ಷೇಪಿಸುವುದಕ್ಕೆ ಅವಕಾಶವಿರುತ್ತದೆ. ಅವರು ಬೇಕಾಗಿಲ್ಲ, ಒಂದು ಸಂಸ್ಥೆ ಮಾಡೋಣವೆಂದರೆ ಒಬ್ಬರಿಗೊಬ್ಬರಿಗೆ ತಿಕ್ಕಾಟ ಬರುತ್ತದೆ. ಆದ್ದರಿಂದ ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಬೇಕು. ಇದೊಂದು ಸೂಚನೆಯನ್ನು ಮಾಡಿದರೂ ನಮ್ಮ ಮಿತ್ರರಾದ ಶ್ರೀ ಜೋಯಿಸರಂಥವರನ್ನು ಕರೆದುಕೊಂಡು ಹೋಗಿ ಭಾಷಣಮಾಡಿಸಿದರೆ ಅವರಿಗೆ ಹುಮ್ಮಸ್ಸು ಬರುತ್ತದೆ. ಆದ್ದರಿಂದ ಐಚ್ಛಿಕವಾಗಿರಬೇಕು. ಕರ್ತವ್ಯವೆಂದು ಮಾಡಿದರೆ ತೀರಾ ಮುಂಡಾಟವಾಗುತ್ತದೆ. ಆದ್ದರಿಂದ ಈಗ ಕಾನೂನಿನಲ್ಲಿರುವುದು ಸರಿಯಾಗಿದೆ.

ಆಮೇಲೆ 27ನೆಯ ಕ್ಲಾಜು ಪ್ರಕಾರ ಜುಲ್ಮಾನೆ ಹಾಕುವುದು ಮುಂತಾದ್ದು ಖಂಡಿತ ಆಗುವುದಿಲ್ಲ. ಪಂಚಾಯಿತಿ ಕೋರ್ಟಿದ್ದರೂ ತಾಲ್ಲೂಕು ಮತ್ತು ಹೋಬಳಿಗಳಲ್ಲಿ ಇದು ಸರಿಯಾಗಿ ನಡೆಯಲು ಸಾಧ್ಯವಿಲ್ಲ, ಇನ್ನೂ ಅಲ್ಲಿ ಶಿಕ್ಷಣ ಸಾಲದು. ಒಂದೇಸಲ ಇದೆಲ್ಲಾ ಮಾಡಿದರೆ ಕಷ್ಟವಾಗುತ್ತದೆ. ಹಿಂದೆ ಒಂದುಸಲ ಬೆಂಚು ಕೋರ್ಟಿನಲ್ಲಿ ಶಿಕ್ಷೆ ಕೊಡಬೇಕೆಂದು ಗೊತ್ತಾದಾಗ ಪ್ರಭಾವಶಾಲಿಗಳು ಕಣ್ಣುಮಿಟುಕಿಸುವಷ್ಟರಲ್ಲಿ ಬೆಂಚಿನ ಕೆಳಗೆ ಬೆಟ್ಟನ್ನು ತೋರಿಸಿ ಎರಡು ರೂಪಾಯಿ ಜುಲ್ಮಾನೆ ಹಾಕಲು ಸೂಚಿಸಿದರು. ಇಷ್ಟು ದಾಕ್ಷಿಣ್ಯ ಮತ್ತು ಅಧೈರ್ಯ ಇರುವಾಗ ಸಂಸ್ಥಾನಾ ವಳೆ ಹಳ್ಳಿಯಲ್ಲಿ ಪಂಚಾಯಿತಿ ಮೂಲಕ ಜುಲ್ಮಾನೆ ವಿಧಿಸುವುದು ಅಸಾಧ್ಯ, ಆದ್ದರಿಂದ ಕಡ್ಡಾಯವಾಗಿ ಇದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಎರಡು ರೂಪಾಯಿ ಜುಲ್ಮಾನೆಯೋ ಅಥವಾ ಲಂಚವೋ ?

ಶ್ರೀ ಎಸ್. ರಂಗರಾಮಯ್ಯನವರು.—ಆಮೇಲೆ ಎರಡು ರೂಪಾಯಿ ಜುಲ್ಮಾನೆ ಹಾಕಿದರು. ಮೂರನೆಯ ಕ್ಲಾಜನ್ನು ಖಂಡಿತ ಒಪ್ಪುವುದಕ್ಕಾಗುವುದಿಲ್ಲ, ಬಾಕಿ ಎರಡು ಕ್ಲಾಜಿನಲ್ಲಿ ಮೊರೇಲ್ ಡೆವಲಪ್‌ಮೆಂಟ್ ಮತ್ತು ಸಮಗ್ರಸೇವಾ ಸಹಕಾರ ಸಂಘಗಳ ವಿಚಾರ ಹೇಳಿದೆ. ಅವು discretionary ಅಂದರೆ ಐಚ್ಛಿಕವಾಗಿ ಇರಬೇಕು. Obligatory duty ಎಂದು ಮಾಡುವುದಕ್ಕಾಗುವುದಿಲ್ಲ. ಈ ಕಾರಣದಿಂದ ಮೂರನೆಯದನ್ನು ನಾನು ವಿರೋಧಿಸುತ್ತೇವೆ.

ಶ್ರೀ ಎಂ. ಮಾದಯ್ಯನವರು.—On a point of information, Sir. ಕೊನೆಯ ಐಟಂನಲ್ಲಿ ಸೂಚಿಸಿರುವಂತೆ ಆ ವಿಚಾರದಲ್ಲಿ ಸಂಸ್ಥಾನಗಳ ಶಾಸನ ಸಭೆಗಳವರು ಕಾನೂನು ಮಾಡಬೇಕಾದರೆ ಇಂಡಿಯಾ ಸರ್ಕಾರದ ಅನುಮತಿ ಪಡೆಯಬೇಕೆ ?

The Hon'ble Sri K. T. BHASHYAM.—It is not necessary. But it does not arise, because it is only if the amendment is accepted that the question would arise. But as a matter of fact, I may say that we need not take the consent of the Government of India.

*ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಅವರು ತಂದಿರುವ ಮೂರು ತಿದ್ದುಪಡಿಗಳನ್ನೂ ಕೂಡ ಮಿತ್ರರಾದ ಶ್ರೀ ರಂಗರಾಮಯ್ಯನವರು ಹೇಳಿದ ಹಾಗೆ ವಿಧಿಯಿಲ್ಲದೆ ವಿರೋಧಿಸುತ್ತೇನೆ.

(ಶ್ರೀ ಎ. ಭೀಮಪ್ಪನಾಯಕರು.)

ಮೊದಲು 27ನೆಯ ಐಟಂ ವಿಚಾರ. ಹಿಂದೆ ವಿಲೇಜ್ ಮುನ್ಸೀಫ್ ಕೋರ್ಟು, ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟು ಇಟ್ಟಿದ್ದರು ಎಂದು ಹೇಳಿ ಪಂಚಾಯಿತಿಗೆ ಕೊಡಬೇಕು ಎಂದು ಕೇಳಿರುವ ಅಧಿಕಾರವನ್ನು ನೋಡಿದರೆ ಪ್ರಾಕ್ಟಿಕಲ್ಲಾಗಿ ಬೆಂಚ್ ಆಫ್ ಜಡ್ಜಸ್ ಎಂದು ಮಾಡಬೇಕೆಂದಿದ್ದಾರೋ ಏನೋ ಗೊತ್ತಿಲ್ಲ. 15 ಜನ ಪಂಚಾಯಿತದಾರರು ಕೂತು ತೀರ್ಮಾನ ಮಾಡುವಾಗ ಏಳು ಜನರ ಮೆಜಾರಿಟಿ ಇರಬೇಕೇ ಅಥವಾ ಒಬ್ಬರೇ ತೀರ್ಮಾನ ಕೊಡಬೇಕೇ ಎಂಬುದನ್ನು ಪ್ರಾಕ್ಟಿಕಲ್ಲಾಗಿ ಯೋಚನೆ ಮಾಡಿದ್ದರೆ ಮಾನ್ಯ ಸದಸ್ಯರು ಈ ತಿದ್ದುಪಡಿಯನ್ನು ತರುತ್ತಿರಲಿಲ್ಲ. ಅದರಲ್ಲೂ ಈಗ ಇತರ ಕಡೆಗಳಲ್ಲೂ ಮತ್ತು ಮೈಸೂರು ದೇಶದಲ್ಲೂ ನ್ಯಾಯಾಂಗವು ಸ್ವತಂತ್ರವಾಗಿರಬೇಕೆಂದು ಹೇಳುವಾಗ Cattle Trespass Act, ಸಣ್ಣ ಸಣ್ಣ suits, ಸಣ್ಣ ಸಣ್ಣ ಕ್ರಿಮಿನಲ್ ಕೇಸುಗಳು ಮುಂತಾದುವನ್ನು ತೀರ್ಮಾನ ಮಾಡುವ ಹಕ್ಕಿರಬೇಕೆಂದು ಹೇಳುವುದು ಉಚಿತವಲ್ಲ. ಯಾವುದನ್ನು ಸೇರಿಸಬೇಕು, ಯಾವುದನ್ನು ಬಿಡಬೇಕು, ಪಂಚಾಯಿತಿಗಳ ಈಗಿನ ಸ್ಥಿತಿಯಲ್ಲಿ ಇವನ್ನು ಸೇರಿಸಿ ಅವಕ್ಕೆ ಅವಕಾಶ ಕೊಟ್ಟರೆ ಏನಾಗುತ್ತದೆ, ಈಗ ಅವರಲ್ಲಿರುವ ನ್ಯಾಯ ವಿಮರ್ಶೆಯ ಮಟ್ಟವೇನು ಎಂಬುದನ್ನೆಲ್ಲಾ ಯೋಚನೆ ಮಾಡಬೇಕು. ಹೊರ ದೇಶಗಳಲ್ಲಿರುವ ಹಾಗೆ ಚೆನ್ನಾಗಿ ಅರಿತುನುರಿತವರು ಮತ್ತು ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಶಿಕ್ಷಣ ಪಡೆದವರು ನ್ಯಾಯ ವಿಮರ್ಶೆ ಮಾಡುವುದು ಸೂಕ್ತವೇ ಹೊರತು ಬಾಕಿಯವರು ಮಾಡುವುದು ಸರಿಯಲ್ಲ. ಆದ್ದರಿಂದ ಜುಲ್ಮಾನೆ ಹಾಕುವುದು ಪಂಚಾಯಿತಿಗೆ ವಹಿಸುವುದು ಸೂಕ್ತವೂ ಅಲ್ಲ ಮತ್ತು ನ್ಯಾಯವೂ ಅಲ್ಲ.

ಎರಡನೆಯದು ಚೈನಾ ಒಂದಾನೊಂದು ಕಾಲದಲ್ಲಿ ನಮ್ಮನ್ನು ಬೇಡುತ್ತಿದ್ದು ಈ ದಿವಸ ನೋಡುವ ಹಾಗೆ ಆಯಿತು, ಆದ್ದರಿಂದ ಸಹಕಾರ ಸಂಘ ಬೇಕಾಗಿಲ್ಲವೆಂದು ಯಾರೂ ಹೇಳಲಿಲ್ಲ. ಅದನ್ನು discretion ಗೆ ಬಿಟ್ಟಿದ್ದಾರೆ. 24ನೆಯ ಕ್ಲಾಜಿನಲ್ಲಿ ಅದಕ್ಕೆ ಅವಕಾಶವಿದೆ. ಸರ್ಕಾರವನ್ನು ಕೇಳಿ ಮಾಡಬಹುದು ಎಂದು ಹೇಳಿದೆ. ಹಾಗೆ ದಕ್ಷತೆಯಿರುವ ಕಡೆ ಮಾಡೋಣ.

ಆಮೇಲೆ ಕೆಲವು ದಿನ ಚೆನ್ನಾಗಿ ಕೆಲಸ ಮಾಡುತ್ತವೆ. ಪ್ರತಿಯೊಂದು ಹಳ್ಳಿಯಲ್ಲೂ ಈಗ ಕೊಟ್ಟಿರತಕ್ಕ compulsory duties ಏನಿವೆಯೋ ಅವನ್ನು ಚೆನ್ನಾಗಿ ಮಾಡಿದ್ದಾರೆ ಎಂದಮೇಲೆ ಅವರಿಗೆ ಹೆಚ್ಚು ಹೆಚ್ಚು ಕರ್ತವ್ಯಗಳನ್ನು ಕೊಡೋಣ. ಮಾನ್ಯ ಮಿತ್ರರನೇಕರು ಜಿಲ್ಲಾ ಬೋರ್ಡು, ಗ್ರಾಮ ಪಂಚಾಯಿತಿಗಳು ಎಲ್ಲ ಕೆಲಸಗಳನ್ನೂ ಮಾಡಿಲ್ಲ ಎಂದು ಹೇಳಿದರು. ಅದನ್ನು ಒಪ್ಪುವವರ ಪೈಕಿ ನಾನೂ ಒಬ್ಬ. ಮೊದಲು ಯಾವುದಕ್ಕೇ ಆಗಲೀ ಸಾಕಾದಷ್ಟು ಶಿಕ್ಷಣ ಬೇಕು. ಇದನ್ನು ಪಾರ್ಟಿ ಮೀಟಿಂಗ್‌ನಲ್ಲಿ ಹೇಳಿದರು. ಅಲ್ಲಿ ಶ್ರೀಮಾನ್ ಸಿದ್ದಪ್ಪನವರು ಇರಲಿಲ್ಲ. ಕಾಂಗ್ರೆಸ್ ಪಾರ್ಟಿ ಮೀಟಿಂಗ್‌ನಲ್ಲಿ ಪ್ರತಿಯೊಂದೂ ಕೂಲಂಕಷವಾಗಿ ಚರ್ಚೆಯಾಗುತ್ತದೆ. ಅಲ್ಲಿ ಈ ವಿಷಯ ಬಂದಿತ್ತು ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದರಲ್ಲಿ ಸಾಕಷ್ಟು ಶಿಕ್ಷಣ ಕೊಟ್ಟು ಹಳ್ಳಿಯವರು ಎಲ್ಲ ಕೆಲಸವನ್ನೂ ಚೆನ್ನಾಗಿ ಮಾಡುತ್ತಾರೆ ಎಂದು ನಿರ್ದಿಷ್ಟವಾಗಿ ಗೊತ್ತಾದ ಮೇಲೆ ಬಲಾತ್ಕಾರವಾಗಿ ಕರ್ತವ್ಯ ಹೇರೋಣ. ಈಗಿನ ಪರಿಸ್ಥಿತಿಯಲ್ಲಿ discretionary duties ಇರುವುದು ಒಳ್ಳೆಯದು. ಎಲ್ಲಿ ಸಾರ್ವಜನಿಕರೇ ಕೇಳುತ್ತಾರೋ ಅಲ್ಲಿ ಅವರಿಗೆ ಹೆಚ್ಚಿನ ಸೌಲಭ್ಯ ಕೊಡಲು 24ನೇ ಸೆಕ್ಷನ್ ಪ್ರಕಾರ ಸರ್ಕಾರದವರಿಗೆ ಅಧಿಕಾರವಿದೆ. ಜನತೆಗೆ ಬೇಕಾದಾಗ, ಆಯಾಯ ಹಳ್ಳಿಯವರೇ ಈ ಕರ್ತವ್ಯಗಳನ್ನು ವಹಿಸಲಿ ಎಂದಾಗ ವಹಿಸುವುದಕ್ಕೆ ಸರ್ಕಾರದವರಿಗೆ ಅವಕಾಶವಿದೆ. ಆದ್ದರಿಂದ ಇದನ್ನು ಬಲಾತ್ಕಾರವಾಗಿ ಕಾನೂನಿನ ಕಡತಕ್ಕೆ ಏರಿಸುವುದು ಬೇಡ. ಇದು ಇದ್ದದ್ದೇ ಆದರೆ ಮುನ್‌ಸೀಫ್ ಕೋರ್ಟ್‌ನಲ್ಲಾಗಲೀ, ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಾಗಲೀ ಎದುರು ಪಾರ್ಟಿಗೆ ಜುಲ್ಮಾನೆ ಹಾಕಿಸಬೇಕೆಂಬ ಮನೋಭಾವ ಹುಟ್ಟಿಸುತ್ತದೆ. ಆದ್ದರಿಂದ ಇದನ್ನು ಖಂಡಿತ ಸೇರಿಸಬಾರದು. ಇವತ್ತಿನ ಪರಿಸ್ಥಿತಿ ಎಷ್ಟು ಮಟ್ಟಿಗಿದೆ, ಜನತೆಯ ನೈತಿಕ ಮಟ್ಟ ಎಷ್ಟು ಕಳಮಟ್ಟಕ್ಕೆ ಇಳಿಯುತ್ತಿದೆ ಎಂದರೆ ಅದನ್ನು ಹೆಚ್ಚು ಹೇಳಬೇಕಾಗಿಲ್ಲ. ಹೀಗಿರುವಾಗ ನಾಲ್ಕೈದು ಪಂಚಾಯಿತಿಗಳೂ ಒಟ್ಟಿಗೆ ಸೇರಿಕೊಂಡಿದ್ದು 15—20 ಜನ ಸದಸ್ಯರು ಒಂದು case try ಮಾಡಲು ಅಧಿಕಾರ ಕೊಡುವುದು ಅರ್ಥವಿಲ್ಲದ ಮಾತು. ಇಲ್ಲಿ ಪಂಚಾಯಿತಿಗಳಿಗೆ ಎಂದು ಇದೆ. ಪಂಚಾಯಿತಿ ಚೇರ್ಮನ್‌ಗೆ ಅಂತ ಆದರೂ ಇಲ್ಲ. ಆ ದೃಷ್ಟಿಯಿಂದ ಇದು ಇನ್ನೂ ಪಾರ್ಟಿ ವೈಷಮ್ಯ ಹೆಚ್ಚಿಸುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಜನತೆಗೆ ಪರಿಹಾರ ಸಿಕ್ಕುತ್ತದೆ ಎಂದು ನನಗಂತೂ ಅನ್ನಿಸುವುದಿಲ್ಲ. ಯಾರೋ ಒಬ್ಬ ಮಾನ್ಯ ಮಿತ್ರರು premature ಅನ್ನುವುದನ್ನು immature ಎಂಬುದಾಗಿ ಹೇಳಿದರು, ಅದನ್ನು ಉಪಯೋಗಿಸದೆ ಇದು ಈಗ ಬೇಡ ಎಂದು ಮಾತ್ರ ಹೇಳುತ್ತೇನೆ. ಇದು ಸದ್ಯಕ್ಕೆ ಅಗತ್ಯವಿಲ್ಲ. ಈಗಿರುವ ರೀತಿಯಲ್ಲೇ ಇರುವುದು ಚೆನ್ನಾಗಿದೆಯೆಂದು ಹೇಳುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಶ್ರೀ ಜೋಯಿಸರು ತಂದಿರತಕ್ಕ ಈ ತಿದ್ದುಪಡಿಯನ್ನು ಸಂತೋಷದಿಂದ ಸಮರ್ಥಿಸುತ್ತೇನೆ. ಮಾನ್ಯ ಸದಸ್ಯರೊಬ್ಬರು ಹಳ್ಳಿಗಳ ವಿಚಾರ ಎಷ್ಟು blackest colours ನಲ್ಲಿ ನಮ್ಮ ಮುಂದೆ ಇಟ್ಟರು ಎಂದರೆ ಇದು ಬಹಳ ವಿಷಾದಪಡಬೇಕಾಗಿದೆ. ಶ್ರೀಮಾನ್ ರಂಗರಾಮಯ್ಯನವರು ಮತ್ತು ಭೀಮಪ್ಪನಾಯಕರು ಹಳ್ಳಿಗಳಲ್ಲಿ ಎಷ್ಟು ಪಾರ್ಟಿ ವೈಷಮ್ಯ ಇದೆ ಎಂಬ ಬಗ್ಗೆ ಎಂಥಾ ಕರಾಳ ಚಿತ್ರವನ್ನು ಇಟ್ಟರು ಎಂದರೆ ಒಂದು ಮಾತಿನಲ್ಲಿ ಹೇಳಬೇಕಾದರೆ ಇದಕ್ಕೆಲ್ಲಾ ಕಾರಣ ರಾಯರುಗಳೇ! (hear! hear!!) ಹಳ್ಳಿಗಳಲ್ಲಿ ಅಂಥಾ ಪರಿಸ್ಥಿತಿ ಇಲ್ಲ. ಶ್ರೀಮಾನ್ ರಂಗರಾಮಯ್ಯನವರಿಗೆ ಹಳ್ಳಿ ಜೀವನದ ಅನುಭವ ಬಹಳ ಬಾಲ್ಯದಲ್ಲಿ ಆಯಿತು ಎಂದು ಕಾಣುತ್ತದೆ. ಅವರು ಹಳ್ಳಿ ಬಿಟ್ಟು ಪಟ್ಟಣ ಸೇರಿ ಬಹಳ ವರ್ಷಗಳಾಗಿವೆ. ಆಗಿನ ಸ್ಥಿತಿಗೂ ಈಗಿನ ಸ್ಥಿತಿಗೂ ಬಹಳ ವ್ಯತ್ಯಾಸವಾಗಿದೆ. ಯಾವ ಕಾಲದಲ್ಲಿ ನಾವು ಇದ್ದೇವೆ! ಹಳ್ಳಿಗಳಲ್ಲಿ ಎಷ್ಟುಮಟ್ಟಿಗೆ ಪರಸ್ಪರ ವಿಶ್ವಾಸ ಮತ್ತು ಜನಗಳಲ್ಲಿ ಒಂದು ಸೌಹಾರ್ದ ಮನೋಭಾವ ಬೆಳೆಯುತ್ತಾ ಇದೆ ಎಂಬುದು ಈಗ ಹಳ್ಳಿಗಳಲ್ಲಿ ವಾಸಮಾಡುತ್ತಾ ಇರತಕ್ಕವರಿಗೆ ಗೊತ್ತಿದೆ. ಹಿಂದಿನ ಸರ್ಕಾರದ ಆಡಳಿತ ಬೇರೆಯಾಗಿತ್ತು. ಅವರ ತತ್ವ divide and rule policy ಆಗಿದ್ದು ಜನಗಳಲ್ಲಿ ಕಲಹ ತಂದು ಹಾಕಿ, ಇಬ್ಭಾಗ ಮಾಡಿ ರಾಜ್ಯಾಡಳಿತ ನಡೆಸುತ್ತಿದ್ದುದರ ಪರಿಣಾಮವಾಗಿ ಹಳ್ಳಿಗಳ ಸ್ಥಿತಿ ಕೆಟ್ಟುಹೋಗಿತ್ತು. ಸ್ವಾತಂತ್ರ್ಯ ಬಂದಮೇಲೆ ಜನರಲ್ಲಿ ಒಂದು ವಿಶ್ವಭಾವನೆ, ಮಧುರ ಭಾವನೆ ಕುದುರಿ, ಜನಗಳು ಮುಂದುವರಿಯಬೇಕು, ವಿದ್ಯಾವಂತರಾಗಬೇಕು, ಅವರ ಜೀವನದ ಮಟ್ಟ ಹೆಚ್ಚಿಸಬೇಕು, ಅವರು ಹೆಚ್ಚು ಹೆಚ್ಚು ಅಧಿಕಾರ ಪಡೆದು ಪ್ರಜಾ ಸರ್ಕಾರದ

ಸತ್ಪ್ರಜೆಗಳಾಗಿ ಬಾಳಬೇಕು - ಎಂಬ ಮನೋಭಾವ ಹಳ್ಳಿಗಳಲ್ಲಿ ಚೆನ್ನಾಗಿ ಬೆಳೆಯುತ್ತಾ ಇದೆ. ಸರ್ಕಾರದವರು ವಿಕೇಂದ್ರೀಕೃತವಾದ ರಾಜ್ಯಾಡಳಿತ ಮಾಡಬೇಕೆಂದು ಹೇಳಿ. ಹಳ್ಳಿಗಳಿಗೆ ಹೆಚ್ಚು ಅಧಿಕಾರ ಕೊಡುವುದು ಒಳ್ಳೆಯದು ಎಂದು ಆ ದೃಷ್ಟಿಯಿಂದ ಗ್ರಾಮ ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಸಂಬಂಧಪಟ್ಟಂತೆ.ಈ ಬಿಲ್ಲನ್ನು ತಂದಿದ್ದಾರೆ. ಇಂಥಾ ಕಾಲದಲ್ಲಿ ಹಳ್ಳಿಯವರಿಗೆ ಅಧಿಕಾರ ಕೊಟ್ಟರೆ ಏನಾಗುತ್ತದೆಯೋ, ಏನೋ ಪಾರ್ಟಿ ವೈಷಮ್ಯ ಹೆಚ್ಚಾಗಬಹುದೋ ಏನೋ ಎಂದರೆ ಮದುವೆ ಆದ ಹೊರತು ಹುಚ್ಚುಬಿಡುವ ಹಾಗಿಲ್ಲ, ಹುಚ್ಚು ಬಿಟ್ಟ ಹೊರತು ಮದುವೆ ಆಗುವ ಹಾಗಿಲ್ಲ ಎನ್ನುವ ಗಾದೆಯಂತೆ ಆಗುತ್ತದೆ. ಜನಗಳನ್ನು ನಂಬಿ ಅವರಿಗೆ ಅಧಿಕಾರ ಕೊಡಬೇಕು. ಪ್ರಾರಂಭದಲ್ಲಿ ತಪ್ಪು ಮಾಡಬಹುದು. ಹಳ್ಳಿಯವರು ತಪ್ಪು ಮಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ಕೆಲಸಮಾಡುವಾಗ ಪ್ರಾರಂಭದಲ್ಲಿ ತಪ್ಪು ಮಾಡಿದರೂ 'try and err' ಎಂಬ ನೀತಿಯನ್ನನುಸರಿಸಿ ಅದನ್ನು ತಿದ್ದಿಕೊಂಡರೆ ಹೆಚ್ಚು ಹೆಚ್ಚು ಅನುಕೂಲವಾಗುತ್ತದೆ. ಜವಾಬ್ದಾರಿಯನ್ನು ವಹಿಸಿಕೊಂಡು ಕೆಲಸ ಕಲಿತುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಹಳ್ಳಿಯವರು ಶ್ರೀಮಾನ್ ಜೋಯಿಸರವರು ತಂದಿರತಕ್ಕ ತಿದ್ದುಪಡಿಯಂತೆ ಕೆಲವು ವಿಶೇಷ ಅಧಿಕಾರಗಳನ್ನು ಕೊಟ್ಟರೆ ಯಾವತ್ತೂ ದುರುಪಯೋಗಪಡಿಸುವುದಿಲ್ಲ. ಈ ಸ್ವಾತಂತ್ರ್ಯವನ್ನು ಹಳ್ಳಿಯವರಿಗೆ ಕೊಟ್ಟರೆ ಯಾವಾಗಲೂ ಒಂದು ರೀತಿಯಲ್ಲಿ ಹೋಗುತ್ತಾರೆ. ತಿಳಿದಂಥವರು ಯಾರಾದರೂ ಕಲಹ ತಂದುಹಾಕಬೇಕೆಂದು ಪ್ರಚೋದನೆ ಮಾಡಿ, ಕಿರುಕುಳ ಕೊಟ್ಟು, ಪಾರ್ಟಿ ವೈಷಮ್ಯ ತಂದರೆ ಹಳ್ಳಿಗಳವರು ಕೆಡುತ್ತಾರೆಯೇ ಹೊರತು ಅವರಷ್ಟಕ್ಕೆ ಅವರನ್ನು ಬಿಟ್ಟರೆ ಅವರು ಕೆಡಕು ಮಾಡಿಕೊಳ್ಳುವುದಿಲ್ಲ. ತಮ್ಮ ತಲೆಯ ಮೇಲೆ ತಾವೇ ಕಲ್ಲು ಹಾಕಿಕೊಳ್ಳುವುದಕ್ಕೆ ಹೋಗುವುದಿಲ್ಲ. ಬಹಳ ಪ್ರಗತಿಯಿಂದ ಸಾಗುತ್ತಾರೆ. ಆದರೆ ಸರಿಯಾದ ತಿಳಿವಳಿಕೆಯಿಂದ ಕೂಡಿದ ಜನರು ಅವರನ್ನು ನಡೆಸಿಕೊಂಡು ಹೋಗುವುದಕ್ಕೆ ಈಗ ಪ್ರಾರಂಭದಲ್ಲಿ ಬೇಕು. ಈಗ ಗ್ರಾಮ ಪಂಚಾಯಿತಿ ಎಂದು ಮಾಡಿ, ಅನೇಕ ಅಧಿಕಾರಗಳನ್ನು ಕೊಟ್ಟು ಅವರ ಆದಾಯವನ್ನು ಜಾಸ್ತಿ ಮಾಡಿ ಕೊಡುವಂಥ ಪ್ರಗತಿದಾಯಕವಾದ ಒಂದು ಹೊಸ ಮಸೂದೆಯನ್ನು ತಂದಿರುವಾಗ ಅವರಿಗೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟ ಪಕ್ಷದಲ್ಲಿ ಅದನ್ನು ಅವರು ನ್ಯಾಯವಾಗಿ ವಿನಿಯೋಗಿಸಿಕೊಂಡು ಆಡಳಿತ ನಡೆಸಲು ತಯಾರಾಗುತ್ತಾರೆ. ಇದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು, ಅತ್ಯಾವಶ್ಯಕ. ಅದರಲ್ಲೂ ಈ ರೀತಿ ಕೋಆಪರೇಟೀವ್ ಸೊಸೈಟಿಗಳು ಮುಂದೆ ಬರುವುದು ಬಹಳ ಮುಖ್ಯವಾಗಿದೆ. ಈಗ ಹಳ್ಳಿಯವರಿಗೆ ಬೇಕಾದ ಪದಾರ್ಥಗಳನ್ನು ಒದಗಿಸಲು ಸರಿಯಾದ ಏಜೆನ್ಸಿ ಇಲ್ಲ. ಚೈನಾದೇಶದ ಉದಾಹರಣೆಯನ್ನು ಶ್ರೀ ಜೋಯಿಸರು ಕೊಟ್ಟದ್ದು ಪ್ರಶಂಸನೀಯವಾಗಿದೆ. ಚೈನಾದೇಶದಲ್ಲಿ ಕಮ್ಯೂನಿಸಂ ಇದೆ. ಅವರು ಹಳ್ಳಿಗಳ ಉದ್ಧಾರಕ್ಕೆ ಕೆಲಸ ಮಾಡಿದ್ದಾರೆ. ನಮ್ಮ ದೇಶದಲ್ಲಿ ಕಮ್ಯೂನಿಸಂ ಇದೆಯೇ ಎಂದರೆ ಮಹಾತ್ಮಾ ಗಾಂಧಿಯವರು ಕಮ್ಯೂನಿಸಂಗಿಂತಲೂ ಶ್ರೇಷ್ಠವಾದ ತತ್ವವನ್ನು ಹೇಳಿದ್ದಾರೆ. ಅವರ ತತ್ವವನ್ನು ನಾವು ಅನುಷ್ಠಾನಕ್ಕೆ ತಂದರೆ ಕಮ್ಯೂನಿಸಂನಿಂದ ಎಷ್ಟು ಫಲದಾಯಕವಾಗುತ್ತದೆಯೋ ಅದಕ್ಕಿಂತ ಹೆಚ್ಚು ಫಲದಾಯಕವಾಗುತ್ತದೆ. ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗಬೇಕು; ತಮಗೆ ಬೇಕಾದ ಪದಾರ್ಥಗಳನ್ನು ತಾವೇ ಚೆನ್ನಾಗಿ ತಯಾರು ಮಾಡಿಕೊಳ್ಳಬೇಕು; ಪರಾವಲಂಬನವಿಲ್ಲದೆ ಜೀವನ ನಡೆಸಬೇಕು; ತಮ್ಮ ಕಾಲಮೇಲೆ ತಾವೇ ನಿಲ್ಲಬೇಕು, ಪ್ರಜಾಪ್ರಭುತ್ವಕಟ್ಟಬೇಕು ಎಂದು ಮಹಾತ್ಮಾ ಗಾಂಧಿಯವರು ಈ ತತ್ವವನ್ನು ಸಾರಿದ್ದಾರೆ. ಇದನ್ನು ಅನುಷ್ಠಾನಕ್ಕೆ ತರಬೇಕಾದರೆ ಈ ಒಂದು ತಿದ್ದುಪಡಿಯನ್ನು ಮಾಡಿದರೆ ಒಳ್ಳೆಯದು. ಪ್ರತಿ ಹಳ್ಳಿಯಲ್ಲೂ ಸೊಸೈಟಿ ಕೊಟ್ಟು ತನ್ಮೂಲಕ ಪದಾರ್ಥಗಳನ್ನು ಒದಗಿಸುವುದು ಬಹಳ ಮುಖ್ಯವಾದ ವಿಚಾರ. ಹಳ್ಳಿಗಳ ಸೆಕ್ಯೂರಿಟಿ, ಸೇಫ್ಟಿ ದೃಷ್ಟಿಯಿಂದಲೂ ಮತ್ತು ಹಳ್ಳಿಯ ಜನಗಳ ನೀತಿಯ ಮಟ್ಟ ಕೆಳಮಟ್ಟಕ್ಕೆ ಇಳಿದಿದೆ ಎಂದು ಹೇಳಿದರು, ಅದು ಉತ್ತಮ ಸ್ಥಿತಿಗೆ ಬಂದೇ ಬರುತ್ತದೆ. ಆ ದೃಷ್ಟಿಯಿಂದಲೂ ಅವರಿಗೆ ಈ ಒಂದು ಅಧಿಕಾರವನ್ನು ಕೊಡುವುದು ಉತ್ತಮ. ಶ್ರೀಮಾನ್ ಚನ್ನಬಸಪ್ಪನವರು ಹಳ್ಳಿಯ ಜನಗಳಿಗೆ ಇದು ಅರ್ಥವಾಗುತ್ತದೆಯೇ ಎಂದು ಕೇಳಿದರು. ಈಗಿನ ಯುಗದಲ್ಲಿ ನೀವೇ ಒಂದು ಕಡೆ ವಿದ್ಯಾವಂತರು ಹಳ್ಳಿಗಳಿಗೆ ಹೋಗಬೇಕು ಎಂದು ಹೇಳುತ್ತೀರಿ; ಅದೇ ಮತ್ತೊಂದು ಕಡೆ ಈ ಕಾನೂನುಗಳು ಅವರಿಗೆ ಹೇಗೆ ತಿಳಿಯುತ್ತದೆ ಎಂದು ಕೇಳುತ್ತೀರಿ. ಈಗ ಅನೇಕ ಜನ ವಿದ್ಯಾವಂತರು ಹಳ್ಳಿಗಳಲ್ಲಿ ನೆಲಸಿದ್ದಾರೆ, ನೆಲಸುತ್ತಾ ಇದ್ದಾರೆ, ನೆಲಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ ಮೈಸೂರು ಕಾಲೇಜಿನಲ್ಲಿ ಬಿ.ಎ. (ಆನರ್ಸ್) ಡಿಗ್ರಿಪಡೆದುಕೊಂಡಿರುವ ಪುರುಷೋತ್ತಂ ಎಂಬುವರೊಬ್ಬರು ಒಂದು ಹಳ್ಳಿಗೆ ಹೋಗಿ ಅಲ್ಲಿ ಹೈಸ್ಕೂಲು ಹೆಡ್ ಮಾಸ್ಟರು ಆಗಿದ್ದಾರೆ. ಹೀಗೆ ಅನೇಕ ಉದಾಹರಣೆಗಳಿವೆ. ಈರೀತಿಯಾಗಿರುವಾಗ ಈ ಕಾನೂನುಗಳ ಅರ್ಥವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ತಿಳಿಸುವುದಕ್ಕೆ ಕಷ್ಟವಾಗುವುದಿಲ್ಲ. ಯಾವ ದೃಷ್ಟಿಯಿಂದಲೇ ಆಗಲಿ ಒಂದು ಅಧಿಕಾರವನ್ನು ಬಲಗೈಯಲ್ಲಿ ಕೊಟ್ಟು ಎಡಗೈಯಲ್ಲಿ ಕಿತ್ತುಕೊಳ್ಳುವುದು ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧವಾದುದು. ಆದ್ದರಿಂದ ಮಾನ್ಯ ಸಭೆಯವರು ಶ್ರೀಮಾನ್ ಜೋಯಿಸ್‌ರವರ ತಿದ್ದುಪಡಿಗೆ ಬೆಂಬಲ ಕೊಡುತ್ತಾರೆಂದು ನಂಬಿ ಇದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ.

Mr. SPEAKER.—The House will now rise for lunch and re-assemble at Four of the Clock.

The Assembly adjourned at Thirty Minutes past Three of the Clock and re-assembled at Nine Minutes past Four of the Clock, Mr. Speaker (The Honourable Sri V. Venkatappa) in the Chair.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಶ್ರೀ ಜೋಯಿಸರು ತಂದಿರತಕ್ಕ ಈ ತಿದ್ದುಪಡಿಯನ್ನು ನಾನು ಅನುಮೋದಿಸುತ್ತೇನೆ. ಆದರೆ ಅವರು ಹೇಳಿರತಕ್ಕ 27ನೆಯ ಕ್ಲಾಜಿನ ವಿಚಾರದಲ್ಲಿ ಮಾತ್ರ ನನಗೆ ಭಿನ್ನಾಭಿಪ್ರಾಯವಿದೆ. ಆದರೂ ಅದನ್ನು ನಾನು ವಿರೋಧಿಸುತ್ತಿದ್ದೇನೆಂದು ಅಭಿಪ್ರಾಯಪಡಬಾರದು. ಅದಕ್ಕೆ ಬೇರೆ ಕಾರಣಗಳನ್ನು

(ಶ್ರೀ ಎಚ್. ಸಿದ್ಧವೀರಪ್ಪನವರು.)

ಆಮೇಲೆ ತಿಳಿಸುತ್ತೇನೆ. ತಮ್ಮ ಘನವಾದ ಅಧ್ಯಕ್ಷತೆಯಲ್ಲಿ ಸಮಿತಿಯವರಿಂದ ತಯಾರಾದ ವರದಿಯಲ್ಲಿ ತಾವು ಈ ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿದ್ದೀರಿ. ತಮ್ಮ ಸಮಿತಿಯ ವರದಿಯ 24ನೆಯ ಪುಟದಲ್ಲಿ 20 ಮತ್ತು 21ನೆಯ ಪ್ಯಾರಾಗಳಲ್ಲಿ ಈ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದೀರಿ. ಅಲ್ಲಿ ಗ್ರಾಮ ಪಂಚಾಯಿತಿಗಳಿಗಿರಬೇಕಾದ ಹೆಚ್ಚಿನ ಅಧಿಕಾರಗಳ ವಿಚಾರವನ್ನು ಪ್ರಸ್ತಾಪಮಾಡುತ್ತಾ obligatory duties ನಲ್ಲಿ ಈ ವಿಚಾರವನ್ನು ಸೇರಿಸಿದ್ದೀರಿ. ಆದರೆ ಯಾವ ಕಾರಣದಿಂದಲೋ ಸೆಲೆಕ್ಟ್ ಕಮಿಟಿಯವರೋ ಅಥವಾ ಈ ಮಸೂದೆಯನ್ನು ತಯಾರು ಮಾಡಿದವರೋ ಇದನ್ನು discretionary ಅಧಿಕಾರದಲ್ಲಿ ಸೇರಿಸಿದ್ದಾರೆ. ಒಂದು ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ಪರಿಶೀಲಿಸೋಣ. ಈ ಮಸೂದೆಯ ಉದ್ದೇಶವೇನು ಎಂಬುದನ್ನು ಗಮನಿಸಿದರೆ, ಈ ದಿವಸ ಒಂದೇಕಡೆ ಅಧಿಕಾರ ಹೆಚ್ಚಾಗಿ ಕೇಂದ್ರೀಕೃತವಾಗಿರುವುದನ್ನು ತಪ್ಪಿಸಿ ಗ್ರಾಮಪಂಚಾಯಿತಿಗಳಿಗೆ ಅಧಿಕಾರ ಕೊಡಬೇಕು. ಅವರೂಕೂಡ ಅಧಿಕಾರವನ್ನು ನಿರ್ವಹಿಸಬೇಕು, ಅವರಿಗೆ ಹೆಚ್ಚು ಹೆಚ್ಚಾಗಿ ಹಣಕಾಸಿನ ಸೌಲಭ್ಯವನ್ನುಕೊಡಬೇಕು ಎಂಬುದು ಈ ಮಸೂದೆಯ ಉದ್ದೇಶವಾಗಿದೆ.

ಮಾನ್ಯ ಸ್ನೇಹಿತರು ಕೆಲವರು ಹೇಳಿದರು—ಇವತ್ತಿನ ಸಮಾಜದ ಸ್ಥಿತಿಯಲ್ಲಿ ಈ ಅಧಿಕಾರವನ್ನು ಅವರಿಗೆ ವಹಿಸತಕ್ಕದ್ದು ಸಾಧುವಲ್ಲ, ಅವರಿಗೆ ಅದನ್ನು ಸರಿಯಾಗಿ ನಿರ್ವಹಣೆ ಮಾಡುವ ಶಕ್ತಿ ಸಾಲದೆಂದು ಹೇಳಿದರು. ನಾನದನ್ನು ಒಪ್ಪಲಾರೆ. ಕಾರಣ ಇಷ್ಟೆ. ನಾವು ಇವತ್ತಿನ ದಿವಸ ಭಾರತದಲ್ಲಿ ಯಾವ ರಾಜ್ಯಾಂಗ ರಚನೆಯಾಗಿದೆಯೋ ಅದರ ಪ್ರಕಾರ ಎಲ್ಲಾ ಅಧಿಕಾರಗಳನ್ನೂ ಜನಗಳಿಗೇ ಕೊಟ್ಟಿದ್ದೇವೆ. ಶಾಸನ ಸಭೆಯಲ್ಲಿ ರಚಿಸುವ ಅಧಿಕಾರವುಳ್ಳ ಪ್ರಜೆಗಳೇ ಇಂದು Sovereign Body ಯಾಗಿದ್ದಾರೆ. ಹೀಗಿದ್ದು ಅವರು ಒಂದು ದೇಶದ ಅಧಿಕಾರವನ್ನು ಒಂದು ಪ್ರಾಂತದ ಅಧಿಕಾರವನ್ನು ನಿರ್ವಹಿಸತಕ್ಕ ಶಕ್ತಿಯನ್ನು ಹೊಂದಿರಬೇಕಾದರೆ, ಅದೇ ಪ್ರಕಾರ ರಾಜ್ಯಾಂಗವನ್ನು ರಚಿಸಿರಬೇಕಾದರೆ, ನಾವೀಗ ಇಲ್ಲಿ ಪ್ರಜೆಗಳಿಗೆ ಇಂಥ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಶಕ್ತಿ ಸಾಲದೆನ್ನುವವಾದ ಒಪ್ಪಿಕೊಂಡರೆ, ಈ ಪ್ರತಿನಿಧಿಸಭೆಗಳನ್ನು (Representative Bodies) ಚುನಾವಣೆ ಮಾಡಿರುವವರಿಗೆ ಶಕ್ತಿಯಿಲ್ಲವೆಂದು ಅಪ್ರತ್ಯಕ್ಷವಾಗಿ ಹೇಳಿದ ಹಾಗಾಯಿತು. ಅದನ್ನು ಖಂಡಿತ ನಾವು ಒಪ್ಪುವುದಕ್ಕಾಗುವುದಿಲ್ಲ. ಒಂದು ವೇಳೆ ಇವತ್ತು ಆ ಅಧಿಕಾರವನ್ನು ನಿರ್ವಹಿಸುವುದಕ್ಕೆ ಶಕ್ತಿಯಿಲ್ಲದಿರಬಹುದು. ಆದರೆ ಯಾರಿಗೇ ಆಗಲಿ ಅನುಭವ ಬರಬೇಕಾದರೆ ಅವನಿಗೊಂದು ಅವಕಾಶಕೊಟ್ಟು ನೋಡಬೇಕು. ಅದರಲ್ಲೂ ಮುಖ್ಯವಾಗಿ ಗ್ರಾಮ ರಕ್ಷಣಾಧಿಕಾರವೆಂಬುದು ಈಗಿನ ಪರಿಸ್ಥಿತಿಯಲ್ಲಿ ಬಹಳ ಪ್ರಾಮುಖ್ಯವಾದುದು. ಈ ಸಂಬಂಧದಲ್ಲಿ ನಮ್ಮ ಜಿಲ್ಲೆಯಲ್ಲಿನ ಗ್ರಾಮಗಳ ಪರಿಸ್ಥಿತಿಯನ್ನೇ ನೋಡುವುದಾದರೆ, ಅದರ ಬಗ್ಗೆ ಇದೇ ಸಭೆಯಲ್ಲಿ ಬಂದಿರತಕ್ಕ ಚರ್ಚೆಗಳನ್ನು ಪರಿಶೀಲಿಸುವುದಾದರೆ ಸರ್ಕಾರದವರು ಈ ಎಲ್ಲಾ ಗ್ರಾಮಗಳಿಗೂ ಹೋಗಿ ರಕ್ಷಣೆ ಕೊಡುವುದು ಎಷ್ಟು ಅಸಾಧ್ಯವೆಂಬುದು ವ್ಯಕ್ತಪಡುತ್ತದೆ. ಅದಕ್ಕೆ ಬದಲು ನೀವು ಅಲ್ಲಲ್ಲೇ ಪೋಲೀಸ್ ಪಡೆಗಳನ್ನಿಟ್ಟು ಗ್ರಾಮಸ್ಥರಿಗೇ ಬಂದೂಕುಗಳನ್ನು ಕೊಟ್ಟು ಸ್ವಲ್ಪ ತರಪೇತು ಮಾಡಿದ್ದರೆ, ನಿಮ್ಮ ಗ್ರಾಮದ ಶಾಂತಿಯನ್ನು ಕಾಪಾಡುವ ಅಧಿಕಾರ ನಿಮ್ಮದೆಂದು ಹೇಳಿದ್ದರೆ ಎಷ್ಟೋ ಚೆನ್ನಾಗಿತ್ತೆಂದು ಅಲ್ಲಿನ ಅನೇಕ ಜನರು ಹೇಳುತ್ತಿದ್ದಾರೆ. ಈ ದೃಷ್ಟಿಯಿಂದ ಈ ತಿದ್ದುಪಡಿಯು ಬಹಳ ಮುಖ್ಯವಾದುದು. ಈ ಅಧಿಕಾರವನ್ನು ಗ್ರಾಮಪಂಚಾಯ್ತಿಗಳಿಗೆ ಕೊಟ್ಟು ಗ್ರಾಮ ರಕ್ಷಣೆ ನಿಮ್ಮ ಜವಾಬ್ದಾರಿ, ನಿಮಗೆ ಬೇಕಾದ್ದನ್ನು ಏರ್ಪಡಿಸಿಕೊಳ್ಳಬೇಕೆಂದು ಹೇಳಿದರೆ ಗ್ರಾಮಗಳಲ್ಲೇ ದಕ್ಷರಾದವರು ಅನೇಕರಿರುತ್ತಾರೆ. ಅವರಲ್ಲೇ ಒಂದು ಸಂಸ್ಥೆಯನ್ನು ಏರ್ಪಾಡುಮಾಡಿ ಶಿಸ್ತನ್ನು ಬೆಳಸಿದರೆ ಖಂಡಿತವಾಗಿಯೂ ಅವರು ತಮ್ಮ ಗ್ರಾಮದ ಶಾಂತಿರಕ್ಷಣೆ ಮಾಡುವ ಅಧಿಕಾರವನ್ನು ನಿರ್ವಹಿಸುವ ಶಕ್ತಿ ಬಂದೇಬರುತ್ತದೆಂಬುದರಲ್ಲಿ ನನಗೆ ಎಳ್ಳಷ್ಟು ಅನುಮಾನವಿಲ್ಲ. ಇದನ್ನು ನಿರ್ವಹಿಸುವುದಕ್ಕೆ ಶಕ್ತಿಯಿಲ್ಲವೆನ್ನುವುದಾದರೆ, ಈ ಬಿಲ್ಲಿನ ಮೂಲಕ ಅವರಿಗೆ ವಹಿಸಬೇಕೆಂದಿರತಕ್ಕ ಇನ್ನೂ ಮಹತ್ತರವಾದ obligatory duties ವಿಷಯ ಏನು ಹೇಳಬೇಕು. ಉದಾಹರಣೆಗಾಗಿ ಹೇಳುವುದಾದರೆ, 23ನೆಯ ಕ್ಲಾಜಿನ ಪ್ರಕಾರ, ಷೆಡ್ಯೂಲ್ಡ್ ಪಂಗಡದವರ ಅಭಿವೃದ್ಧಿ ಕಾರ್ಯವನ್ನು ಇವರಿಗೆ ವಹಿಸಿದ್ದೀರಿ. ಇದು ಮಹತ್ತರವಾದ ಜವಾಬ್ದಾರಿ. ಇಂಥ ಮುಖ್ಯವಾದ ಜವಾಬ್ದಾರಿಯನ್ನೇ ಅವರಿಗೆ ಕೊಟ್ಟಿರುವಾಗ, ಅವುಗಳನ್ನು ನಿರ್ವಹಿಸಬಲ್ಲವರು ಶ್ರೀಮಾನ್ ಜೋಯಿಸರು ಈ 25 ಮತ್ತು 26ನೆಯ ಕ್ಲಾಜುಗಳಲ್ಲಿ ಸೂಚಿಸಿರತಕ್ಕ ಅಧಿಕಾರಗಳನ್ನು ಅವರು ನಿರ್ವಹಿಸುವುದಿಲ್ಲವೆಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ.

ಆದರೆ, 27ನೆಯ ಕ್ಲಾಜಿನ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಭಿನ್ನಾಭಿಪ್ರಾಯವಿದೆ. ಅದರಲ್ಲೂ ಕೂಡ ಆ ಜನಗಳಿಗೆ ಅಧಿಕಾರ ಕೊಟ್ಟು ಹಳ್ಳಿಗಳಲ್ಲಿನ ದಾವೆಗಳನ್ನು ಇತ್ಯರ್ಥಮಾಡಬೇಕೆಂದರೆ, ಅವರಿಗೆ ಅಂಥ ಶಕ್ತಿಯಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅದರಲ್ಲೂ ಅವರು ತೀರ್ಮಾನಕೊಟ್ಟರೆ ಅದು ಪೂರ್ಣ common sense ಮೇಲೆ ಸ್ಥಳದ ವಿದ್ಯಮಾನಗಳನ್ನು ತಿಳಿದುಕೊಂಡು ಧರ್ಮದೃಷ್ಟಿಯಿಂದ ಕೊಟ್ಟ ತೀರ್ಪಾಗಿರುತ್ತದೆ. Error of judgment ಬಹಳ ಕಡಿಮೆಯೆಂದೇ ಹೇಳಬೇಕು. ಅದೇ ಕೋರ್ಟುಗಳಲ್ಲಾದರೆ ತಪ್ಪು ಯಾರದೆಂದು ಸರಿಯಾಗಿ ನೋಡದ ಸ್ಥಳ ವಿದ್ಯಮಾನಗಳನ್ನರಿಯದೆ ಮಾಡದೆ ತೀರ್ಪು ಕೊಟ್ಟುಬಿಡಬಹುದು. ಆದರೂ ಒಂದು ದೃಷ್ಟಿಯಿಂದ ಇದನ್ನು ಒಪ್ಪದಿರಬೇಕಾಗಿದೆ. ಯಾವಾಗ್ಯೂ ಸಾಧ್ಯವಾದಮಟ್ಟಿಗೂ ನ್ಯಾಯಾಂಗವೂ ಕಾರ್ಯಾಂಗವೂ ಬೇರೆಯಾಗಿರಬೇಕು. ನ್ಯಾಯಾಂಗಕ್ಕಿರತಕ್ಕ ಅಧಿಕಾರವನ್ನು ನಾವು ಯಾವ ಸಂಸ್ಥೆಯೂ ಚಲಾಯಿಸುವ ರೀತಿ ಮಾಡಕೂಡದು. ನನ್ನ ದೃಷ್ಟಿಯಲ್ಲಿ ನಮ್ಮ ದೇಶದಲ್ಲಿ ಈಗ ಬೆಂಚ್ ಕೋರ್ಟುಗಳು ತೀರ್ಮಾನಮಾಡಬೇಕೆಂದಿರುವ ಕಾನೂನು ಪದ್ಧತಿಯನ್ನು ತಪ್ಪಿಸಿ ಅದನ್ನೂ ನ್ಯಾಯವಾದ ರೀತಿಯಲ್ಲಿ ಕೋರ್ಟುಗಳಿಗೇ ಹೋಗುವಂತೆ ಮಾಡುವುದು ಸೂಕ್ತವೆಂದು ಹೇಳುತ್ತೇನೆ. ಈ ಒಂದು ದೃಷ್ಟಿಯಿಂದ ಮಟ್ಟಿಗೆ ನ್ಯಾಯಾಂಗ ಬೇರೆಯಾಗಿಯೇ ಇರಬೇಕೆಂದು ನಾನು ಹೇಳುತ್ತೇನೆ. ನ್ಯಾಯಾಂಗಕ್ಕೂ ಕಾರ್ಯಾಂಗಕ್ಕೂ ಸಂಬಂಧವಿರಬಾರದು. ಆದ್ದರಿಂದ 27ನೆಯ ಕ್ಲಾಜು ಅನಾವಶ್ಯಕ, ಬಾಕಿ 25, 26ನೆಯ ಕ್ಲಾಜುಗಳನ್ನು ಸಭೆಯವರು ಒಪ್ಪುವುದು ಸೂಕ್ತವೆಂದು ಹೇಳಿ ನಾನು ಈ ಸೂಚನೆಯನ್ನು ಅನುಮೋದಿಸುತ್ತೇನೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ನನ್ನ ಮಾನ್ಯ

ಸ್ನೇಹಿತರನೇಕರು ಈ ತಿದ್ದುಪಡಿಗಳನ್ನು ಒಪ್ಪಿಕೊಂಡಿದ್ದಾರೆ. ಆದರೆ ಕೆಲವರು ಇದರ ವಿಷಯದಲ್ಲಿ ತಮ್ಮ ಹೆದರಿಕೆಯನ್ನು ವ್ಯಕ್ತಪಡಿಸಿದ್ದಾರೆ. ಹಳ್ಳಿಗಳಲ್ಲೇನೋ ಇದರಿಂದ ಪಾರ್ಟಿ ವೈಷಮ್ಯಗಳು ಹುಟ್ಟಿಕೊಳ್ಳಲು ಅವಕಾಶವಾಗುತ್ತದೆಂಬುದೇ ಆ ಅಂಜಿಕೆ. ಇದೇ ರೀತಿಯಲ್ಲಿ 1947ನೆಯ ಇಸವಿ ಆಗಸ್ಟ್ 15ಕ್ಕೆ ಮೊದಲು ಬ್ರಿಟಿಷರು ನಮ್ಮ ದೇಶಕ್ಕೆ ಸ್ವರಾಜ್ಯ ಕೊಡುವ ಮೊದಲು, ಸ್ವರಾಜ್ಯ ನಮಗೆ ಕೊಟ್ಟುಬಿಟ್ಟರೆ ನಮ್ಮ ನಮ್ಮಲ್ಲೇ ಜಗಳ ಕಚ್ಚಾಟಗಳುಂಟಾಗುತ್ತವೆ. ಆದ್ದರಿಂದ ಸ್ವರಾಜ್ಯ ಕೊಡುವುದಿಲ್ಲ ಎಂದು ವಾದಮಾಡುತ್ತಿದ್ದರು ಅದೇ ವಾದವನ್ನು ಇಂದು ನಮ್ಮಲ್ಲೇ, ನಮ್ಮ ಜನರೇ ಸಾಲದ್ದಕ್ಕೆ ಸುಸಂಸ್ಕೃತರೂ ವಿದ್ಯಾವಂತರೂ ಆಗಿರುವವರು ಈ ಅಧಿಕಾರವನ್ನು ಜನರಿಗೆ ಕೊಡುವ ವಿಷಯದಲ್ಲಿ ಹೇಳಿದರೆ ಆಶ್ಚರ್ಯವಾಗುತ್ತದೆ. ನಮ್ಮಲ್ಲಿ ಸಾಮಾನ್ಯವಾಗಿ ಏನು ಭಾವನೆ ಬಂದಿದೆಯೆಂದರೆ ವಿಶ್ವವಿದ್ಯಾನಿಲಯಗಳಲ್ಲಿ ಓದಿ ಏನೋ ಒಂದು ಡಿಗ್ರಿ ಪಡೆದವರೇ ದೇಶದ ಆಡಳಿತವನ್ನು ನಡೆಸಬಲ್ಲರು, ಅವರೇ ಮೇಧಾವಿಗಳು, ಪ್ರತಿಭಾವಂತರು, ಇತರೇ ಜನಗಳೆಲ್ಲಾ ಮೃಗಗಳು, ಮೂಢರು ಎನ್ನುವ ಭಾವನೆ ಬಂದಿದೆ. ಇಂದು ನಮ್ಮ ದೇಶದಲ್ಲಿ ಶೇಕಡ 80ರಷ್ಟು ಜನರು ಹಳ್ಳಿಗಾಡಿನಲ್ಲಿದ್ದಾರೆ. ಆದ್ದರಿಂದ ನೀವು ಹೇಳುವ ರೀತಿಯಲ್ಲೇ ಹೋಗುವುದಾದರೆ ಇನ್ನು ನೂರು ವರ್ಷಗಳಾದರೂ ನಮ್ಮ ದೇಶ ಹೀಗೇ ಇರುತ್ತದೆ. ಮಹಾತ್ಮಾ ಗಾಂಧಿಯವರು ಹಳ್ಳಿಗಳಿಗೆ ಹೆಚ್ಚು ಹೆಚ್ಚು ಅಧಿಕಾರವನ್ನು ವಹಿಸಿ ಗ್ರಾಮಸ್ವರಾಜ್ಯವನ್ನು ಏರ್ಪಡಿಸಬೇಕೆಂದು ಏನು ಹೇಳುತ್ತಿದ್ದರೋ ಆ ಮಹದಾಸೆಗೆ ಕೊಡಲಿಪೆಟ್ಟು ಕೊಟ್ಟಹಾಗಾಗುತ್ತಿದೆ. ಈಗ ಯಾವ ರಾಜ್ಯಾಂಗವನ್ನು ನಾವು ಮಾಡಿದ್ದೇವೋ ಆ ರಾಜ್ಯಾಂಗದಲ್ಲೇ ಇಂಥ ಒಂದು ಸಮಾಜ ಪದ್ಧತಿ ಜಾರಿಗೆ ತರಬೇಕೆಂದಿತ್ತು. ಅನೇಕ ಕಾರಣಗಳಿಂದ ಅದಕ್ಕೆ ವ್ಯತಿರಿಕ್ತವಾಗಿ ನಮ್ಮ ರಾಜ್ಯಾಂಗವೇರ್ಪಟ್ಟಿದೆ. ಆದರೆ ನಮ್ಮ ಸರ್ಕಾರದವರು ಆಗಲೂ ಕೂಡ ವಿಕೇಂದ್ರೀಕೃತ ಆಡಳಿತ ಬೇಕೆಂದು ಎಷ್ಟೋಸಲ ಹೇಳುತ್ತಿದ್ದರು. ಆ ರಾಜ್ಯಾಂಗವನ್ನು ನಾವೇ ಮಾಡುವುದಕ್ಕೆ ನಮಗೇ ಅಧಿಕಾರವಿದ್ದಿದ್ದರೆ ನಾವು ಖಂಡಿತವಾಗಿಯೂ ಅದನ್ನು ಮಾಡುತ್ತಿದ್ದೆವು. ಅವತ್ತು ಅದನ್ನು ಮಾಡಲು ಆಗದೆ ಹೋದದ್ದರಿಂದ ಇವತ್ತು ನಮ್ಮ ಸರ್ಕಾರದವರು ಜನಗಳಿಗೆ ಅಧಿಕಾರ ಕೊಡಬೇಕೆಂದು ಈ ಮಸೂದೆಯನ್ನು ತಂದಿದ್ದಾರೆ. ಅಂಥಾದ್ದನ್ನು ಸೆಲೆಕ್ಟ್ ಸಮಿತಿಯವರು ತೆಗೆದು ಹಾಕಿದ್ದನ್ನು ನೋಡಿ, ನಮ್ಮ ಸ್ನೇಹಿತರು ಕೆಲವರು ಆಗಲೇ ಅಧಿಕಾರವನ್ನು ಬಲಗೈಯಲ್ಲಿ ಕೊಟ್ಟರು ಎಡಗೈಯಲ್ಲಿ ಕಿತ್ತುಕೊಂಡರು ಎಂದು ಹೇಳಿದರು. ಸರ್ಕಾರದವರು ಮಸೂದೆಯಲ್ಲಿ ಈ ಅಧಿಕಾರವನ್ನು ಕೊಟ್ಟಿದ್ದರೂ ಸೆಲೆಕ್ಟ್ ಸಮಿತಿಯವರು ಏನೋ ಒಂದು ದೃಷ್ಟಿಯಿಂದ ಇದನ್ನು ಕೊಟ್ಟಿಲ್ಲ. ಇದರಿಂದ ಕಬ್ಬಿನ ಜಲ್ಲೆಯನ್ನು ರಸಹಿಂಡಿ ಸಿಪ್ಪೆಯನ್ನು ಮಾತ್ರ ಕೊಟ್ಟಹಾಗಾಗಿದೆ! ಆದ್ದರಿಂದ ಈ ತಿದ್ದುಪಡಿಯನ್ನು ಒಪ್ಪಿಕೊಂಡು ಈ ಮಸೂದೆಯನ್ನು ಜಾರಿಗೆ ಕೊಡುವುದರಿಂದ ಏನೂ ಕೊಳ್ಳೇಹೋಗುವುದಿಲ್ಲ. ಒಂದುವೇಳೆ ಏನಾದರೂ ತೊಂದರೆಯಾದರೆ, ನಮ್ಮ ಕೈಯಲ್ಲೇ ಅಧಿಕಾರವಿರುತ್ತದೆ. ಅವ್ಯವಸ್ಥೆಯೇನಾದರೂ ಆದರೆ ಪುನಃ ಮಾರ್ಪಾಟು ಮಾಡುವ ಅಧಿಕಾರ ಈ ಶಾಸನ ಸಭಾಸದಸ್ಯರಿಗೆ ಇದ್ದೇ ಇದೆ. ಅಂಜಿಕೆಗೇನೂ ಕಾರಣವಿಲ್ಲ. ನಮ್ಮ ಮಾನ್ಯ ಸ್ನೇಹಿತರು ಕೆಲವರು ಹೇಳಿದಂತೆ ಸಾಮಾನ್ಯವಾಗಿ ಲಾಯರ್ ವೃತ್ತಿಯಲ್ಲಿರುವವರೇ ಹೀಗೆ ಹೇಳುವುದು. ಅವರ ದೃಷ್ಟಿಯಲ್ಲಿ ಲಾಯರುಗಳು ಮಾತ್ರವೇ ನ್ಯಾಯ ತೀರ್ಮಾನಕ್ಕೆ ಸರಿಯಾದ ಸೇವೆ ಮಾಡಲು ಅರ್ಹರು ಎಂದು ಭಾವನೆ ಇರುವಂತಿದೆ. ಅವರು ಹೇಳಿರುವ ಹಾಗೆ ಅದು ಸೇವೆಯಲ್ಲ, ಜೀವನಕ್ಕಾಗಿ ಅವಲಂಬಿಸಿರುವ ವೃತ್ತಿ. ಹಳ್ಳಿಯ ಜನಗಳೂ ಬುದ್ಧಿವಂತರು, ಅನುಭವಸ್ಥರು. ಅವರು ಎಲ್ಲಾ ಕಲಹಗಳನ್ನೂ ಬಹಳ ಸಮರಸತೆಯಿಂದ ತೀರ್ಮಾನ ಮಾಡಬಲ್ಲವರಾಗಿದ್ದಾರೆಂಬುದನ್ನು ನಾವು ತಿಳಿದುಕೊಳ್ಳಬೇಕು.

ಈಗ ಹಳ್ಳಿಗಳ ಸ್ಥಿತಿಗತಿಯೇನಾಗಿದೆಯೆಂದರೆ ಅವರು ಲಾಯರ್‌ಗಳ ಮನೆ ಬಾಗಲಿಗೆ ತಿರುತಿರುಗಿ ದಿನೇ ದಿನೇ ಹೀನಸ್ಥಿತಿಗೆ ಬರುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ಮಹಾತ್ಮಗಾಂಧಿಯವರು ಹೇಳುತ್ತಿದ್ದ ಮಾತುಗಳು ಸೇಕಡ 99ರಷ್ಟು ನಿಜವಾಗಿ ಕಂಡುಬರುತ್ತವೆ. ಆದುದರಿಂದಲೇ ಅವರು ಈ ತೆರನಾದ ಅವಕಾಶಗಳನ್ನು ಗ್ರಾಮಪಂಚಾಯಿತಿಗಳಿಗೆ ವಹಿಸಿ, ಇದನ್ನು ರಾಮರಾಜ್ಯವನ್ನಾಗಿ ಮಾಡಬೇಕೆಂಬ ಆಸೆ ಅವರಿಗೆ ಬಹಳವಾಗಿತ್ತು. ಹೀಗೆ ಮಾಡಿದರೆ ಕೋರ್ಟಿನಲ್ಲಿ ದೊರೆಯಬಹುದಾದ ನ್ಯಾಯಕ್ಕಿಂತಲೂ ಶ್ರೇಷ್ಠವಾದ ಮತ್ತು ಎಲ್ಲರಿಗೂ ಒಂದು ಸರ್ವಸಮ್ಮತವಾದ ನ್ಯಾಯದೊರೆಯಲು ಅವಕಾಶವಾಗುತ್ತದೆ. ಇದರಿಂದ ಗ್ರಾಮದ ಜನಗಳಿಗೆ ಆಗತಕ್ಕ ಲಕ್ಷಾಂತರ ರೂಪಾಯಿಗಳ ಖರ್ಚೂ ಸಹ ಉಳಿಯಲು ಅವಕಾಶವಾಗುತ್ತೆ. ನಾನು ಆತ್ಮಪ್ರಶಂಸೆ ಮಾಡಿಕೊಳ್ಳಬೇಕೆಂದೇನೂ ಹೇಳುತ್ತಿಲ್ಲ. ನಮ್ಮ ಗ್ರಾಮದ ಸುತ್ತಮುತ್ತಿನ ಸುಮಾರು 10—15 ಹಳ್ಳಿಗಳವರು ಕೋರ್ಟಿಗೆ ಹೋಗಿ ವ್ಯವಹರಿಸಿಕೊಳ್ಳಬೇಕೆಂದಿದ್ದ ಅನೇಕ ಮೊಕದ್ದಮೆಗಳನ್ನು ಆಯಾಯ ಗ್ರಾಮಗಳ ಪಂಚಾಯಿತಿ ಮೂಲಕವೇ ತೀರ್ಮಾನ ಮಾಡಿ, ಅವರಿಗೆ ಲಕ್ಷಾಂತರ ರೂಪಾಯಿಗಳು ಅನಾಯಾಸವಾಗಿ ಖರ್ಚಾಗುತ್ತಿದ್ದನ್ನು ಉಳಿಸಿರತಕ್ಕ ಸಂದರ್ಭಗಳೂ ಅನೇಕವಾಗಿವೆ. ಕೋರ್ಟಿನ ವ್ಯವಹಾರದಲ್ಲಿ 'ಗೆದ್ದವನು ಸೋತಂತೆಯೂ, ಸೋತವನು ಸತ್ತಂತೆಯೂ' ಎಂಬುದಾಗಿ ಹಳ್ಳಿಗಳ ಕಡೆ ಹೇಳತಕ್ಕ ವಾಡಿಕೆಯುಂಟು. ಹೀಗೆ ಕೋರ್ಟಿನಲ್ಲಿ ಆಗತಕ್ಕ ನ್ಯಾಯತೀರ್ಪುಗಳೆಲ್ಲಾ ವಕೀಲರ ಚಾಕಚಕ್ಯತೆಯ ಮೇಲೆ ಹೋಗುತ್ತದೆಯೇ ಶಿವಾಯಿ ಸ್ಥಳದಲ್ಲಿ ನಡೆದ ನಿಜವಾದ ವಿದ್ಯಮಾನಗಳ ಮೇಲೆ ಹೋಗುವುದಿಲ್ಲ. ಹಳ್ಳಿಗಳಲ್ಲಿ ಕನಿಷ್ಠಪಕ್ಷ ನಾಲ್ಕಾರು ಜನ ಸತ್ಯವಂತರುಗಳಾದರೂ ಇಲ್ಲವೇನು! ಹಳ್ಳಿಗಳಲ್ಲೆಲ್ಲಾ ಪುಂಡರುಗಳೇ ಹೆಚ್ಚು. ಅವರುಗಳಿಗೆ ನ್ಯಾಯಹೇಳಿ ಒಪ್ಪಿಸತಕ್ಕದ್ದೇ ಬಹಳ ಕಠಿಣವೆಂದು ಕೆಲವರು ವಾದಿಸಿದ್ದಾರೆ. ಆದರೆ ಇನ್ನು ಮುಂದೆಲ್ಲಾ ಆಗತಕ್ಕ ಚುನಾವಣೆಗಳು ಕೇವಲ ವಯಸ್ಕರ ಮತದಾನದ ಮೇಲೆ ನಿಂತಿರುತ್ತವೆ. ಆದ್ದರಿಂದ ಇಂಥಾ ವಿಚಾರಗಳೆಲ್ಲಾ ನಿಮ್ಮ ಜವಾಬ್ದಾರಿಯನ್ನು ಸರಿಯಾಗಿ ಅರಿತುಕೊಂಡು ಈ ಕೆಲಸಗಳನ್ನೆಲ್ಲಾ ನೀವೆ ಮಾಡಿಕೊಂಡು ಹೋಗಬೇಕೆಂದು ಇವುಗಳನ್ನೆಲ್ಲಾ ಅವರಿಗೇ ಬಿಟ್ಟುಕೊಡತಕ್ಕದ್ದು ಉಚಿತವಾಗಿದೆ. ಆದರೆ ಶ್ರೀ ಸಿದ್ದವೀರಪ್ಪನವರೇನೋ ಮೂರನೆಯ ತಿದ್ದುಪಡಿಯನ್ನು ವಿರೋಧಿಸಿ ಮಾತನಾಡಿದ್ದಾರೆ. ಅದಕ್ಕೆ ಸಾಕಷ್ಟು ಕಾರಣಗಳೂ ಇವೆ. ಅವರಿರತಕ್ಕದ್ದು ಸಂಸ್ಥಾನದ ಗಡಿನಾಡಿನಲ್ಲಿ. ಅಲ್ಲಿಯ ಇಂದಿನ ಪರಿಸ್ಥಿತಿಯನ್ನು ನೋಡಿಕೊಂಡು ಅವರು ಆ ರೀತಿ ಹೇಳಿರತಕ್ಕದ್ದೂ ಸಹಜವಾಗಿಯೇ ಇದೆ. ಆದಾಗ್ಯೂ ತಾವು ಈಸಾರ್ತಿ ಇಂಥಾ ಒಂದು ಅವಕಾಶವನ್ನು ಅವರಿಗೆ ಕೊಟ್ಟು ಒಂದು ಟ್ರಯಲ್ ಮಾಡಿ ನೋಡಿ. ನಮಗೆ ಸ್ವಾತಂತ್ರ್ಯ ಬಂದನಂತರ ಕಳೆದ ಜನವರಿ 26ರಲ್ಲಿ ಹೊಸ ರಾಜ್ಯಾಂಗ ಶಾಸನವು ಜಾರಿಗೆ

(ಶ್ರೀ ಎಂ. ಎಲ್. ನಂಜರಾಜ ಅರಸಿನವರು.)

ಬಂತು! ಆದರೆ ಆ ಬಗ್ಗೆ ಅದಕ್ಕೆ ಈಗಾಗಲೇ ತಿದ್ದುಪಡಿಗಳು ಬರಲಿಲ್ಲವೇನು? ಇದರ ಬಗ್ಗೆ ಅದೇ ರೀತಿ ಮುಂದೆ ಬೇಕಾದರೆ ಬದಲಾವಣೆ ಮಾಡಬಹುದು. ಇದಕ್ಕೆ ಸಂಬಂಧಪಟ್ಟ ವರದಿ ಈ ಸಭೆಯ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಆಗಿರತಕ್ಕದ್ದಾಗಿದೆ. ಆದ್ದರಿಂದ ಇದನ್ನು ತಳ್ಳಿಹಾಕುವುದು ಸರಿಯಲ್ಲ. ಈ ತಿದ್ದುಪಡಿಯನ್ನು ತಾವೆಲ್ಲರೂ ಒಪ್ಪಿಕೊಳ್ಳಬೇಕೆಂದು ಸೂಚಿಸುತ್ತೇನೆ. ಹೀಗೆ ಮಾಡಿದಲ್ಲಿ ಮಹಾತ್ಮಾಗಾಂಧಿಜೀಯವರ ಅಭಿಪ್ರಾಯಕ್ಕೆ ಪೂರ್ತಿ ಮನ್ನಣೆಕೊಟ್ಟು ರಾಮರಾಜ್ಯದ ಸ್ಥಾಪನೆಗೆ ದಾರಿಹಾಕಿದಂತಾಗುತ್ತದೆ. ಇದರಿಂದ ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ಜವಾಬ್ದಾರಿಯೇನೆಂಬುದನ್ನು ಅರಿತು ದೇಶಸೇವೆ ಮತ್ತು ದೇಶದ ಉದ್ಧಾರಕ್ಕಾಗಿ ದುಡಿದು, ಅವರು ಸ್ವಾವಲಂಬಿಗಳಾಗಲು ಮಾರ್ಗವಾಗುತ್ತೆ. ನಾನು ಇದನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

The Hon'ble Sri K. T. BHASHYAM.—Sir, I think I will be helpful to the Hon'ble Members if I say a few words at this stage. I ought to have spoken a little earlier. The difficulty in accepting this amendment is, that it refers to law and order—rural security including organisation of village guards. Law and Order is essentially the duty of Government and we cannot easily and lightly throw the burden on a village. Of course, if any village comes up to the standard of maintaining the security of the place, nobody objects. But, to put it as a primary duty upon them to look after the security of the village, will be too heavy a strain on the Village Panchayet, particularly when we are just organizing them to bear other additional responsibilities. We will have to give them time to develop strength and gather experience. I very much appreciate the speech of my Hon'ble friend Sri Nanjaraj Urs who said, that although it is not obligatory on the villagers, in this place they were wise enough not to go to Courts of Law but have the matter settled among themselves. It is indeed a very wise thing to do. Human nature is such that when you make it obligatory there is opposition to it whereas if you leave it discretionary they work with zeal and enthusiasm. You prescribe a text-book, boys do not like to read it; leave it as a novel, they read it again and again. These are psychological matters of daily experience. I would therefore suggest that we had better leave it as discretionary. We do not prevent any village from organizing village security. If they can do so, Government would welcome it. But, we do not want to make it an obligatory duty on Village Panchayets to look after the law and order of the place. It is the duty of the Government and the village can help us to do so.

So far as the judicial work and the trial of cases are concerned, although it may be only petty cases, it is rather difficult for the Village Panchayet to be entrusted with the work. Therefore, we consider that it is not fair to the Village Panchayet to burden it with this work also. The judicial work also has to be conducted by the Government. Besides, it is not a matter which can come under the Village Panchayets and District Boards Act. It must come under the Civil Courts Act. There, we may say, "the Village Panchayet may decide such and such cases."

So far as multi-purpose co-operative societies are concerned, we welcome every village to form it and we will be very glad indeed. But, we do not want to make it compulsory. We are contemplating Village Panchayet with a 1,000 or 2,000 population. It is really not possible for such a small panchayet to run a multi-purpose co-operative society as efficiently as others can do. But, if they can, so much the better. It all depends upon the people of that village, upon the local leaders. If they do the work, nobody prevents them. We cannot however force them to start a co-operative society. It would fail and that would be a setback to the movement. It is better not to start a co-operative society and fail. We have got all the provisions enabling the villages to do all that the Hon'ble Member Sri Jois has in his view. To say we have ideals before us is one thing and to say that it is a reality is another thing. It takes some time for an ideal to be realised. We have to face the realities of the situation and go slow. We have provided for these developments in the discretionary powers of the Village Panchayets. Therefore, I would request Sri M. N. Jois not to press his amendment.

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ):— ಸ್ವಾಮಿ, ಈ ನ್ಯಾಯ ತೀರ್ಮಾನದ ವಿಚಾರದಲ್ಲಿ ಹಳ್ಳಿಗಳವರಿಗೆ ಈ ಜವಾಬ್ದಾರಿ ಕೊಡುವುದರಿಂದ ನಿಜವಾಗಿಯೂ ನಾವು ಈ ದಿವಸ ಹಳ್ಳಿ ರೈತರಿಗೆ ಒಂದು ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಈ ದಿವಸ ಹಳ್ಳಿಗಳಲ್ಲಿ ಎಲ್ಲಿ ನೋಡಲೀ ಗ್ರಾಮಧರ್ಮ ಮತ್ತು ಗ್ರಾಮ ರಕ್ಷಣೆಗಳಿಗೆ ಸರಿಯಾಗಿ ಒಬ್ಬರೂ ನಿಗಾ ಕೊಡುತ್ತಿಲ್ಲ. ಗ್ರಾಮದಲ್ಲಿರತಕ್ಕ ಅನೇಕ ಪುಂಡರುಗಳು ಗ್ರಾಮದ ಜನರ ಮಾತಿಗೆ ಬೆಲೆ ಆಗಲೀ ಏನೊಂದು ಮರ್ಯಾದೆ ಆಗಲೀ ಇವುಗಳ್ಯಾವುದನ್ನೂ ಕೊಡದೆ ಅವರು ಆಡಿದ್ದೇ ಆಟವಾಗಿ ಹೋಗಿದೆ. ಹೀಗಾಗಿ ಗ್ರಾಮದಲ್ಲಿ ಏನೊಂದು ಕೆಲಸ ಕಾರ್ಯಗಳಾಗಬೇಕಾಗಿದ್ದರೂ ಅವುಗಳಿಗೆ ಬೆಂಬಲವಿಲ್ಲದೆ ಹಳ್ಳಿ ಮುಖಂಡರ ಮಾತಿಗೆ ಬೆಲೆಯಿಲ್ಲವಾಗಿದೆ. ಹೀಗೆಲ್ಲಾ ಆಗುತ್ತಿದ್ದರೆ ಕಷ್ಟಪಟ್ಟು ಕಲಸ ಮಾಡತಕ್ಕ ಜನರಿಗೆ ಯಾವ ಒಂದು ನೆಮ್ಮದಿಯೂ ಇಲ್ಲದಂತಾಗಿ ಅವರು ಕೂಡ ಸೋಮಾರಿಗಳಾಗಿ ತಿರುಗಾಡಲು ಅವಕಾಶವಾಗುತ್ತದೆ. ನಾನು ಅಲ್ಲಲ್ಲೆ ಕೆಲವರನ್ನು ಕೇಳಿದ್ದಕ್ಕೆ ಅವರು ಸ್ವಾಮಿ ನಾವೇಕೆ ಕಷ್ಟಪಟ್ಟು ಕೆಲಸ ಮಾಡಬೇಕು, ಹಾಗೇನಾದರೂ ಮಾಡಿದರೆ, ಊರಿನಲ್ಲಿರತಕ್ಕ ಪುಂಡು ಜನರು ಆ ಬೆಳೆಯನ್ನೆಲ್ಲಾ ಕದ್ದು ಕಿತ್ತುಕೊಂಡು ಹೋಗುತ್ತಾರೆ, ಇಲ್ಲವೇ ದನಕರುಗಳನ್ನು ಬಿಟ್ಟು ಮೇಯಿಸಿ ಬಿಡುತ್ತಾರೆ, ಆದ್ದರಿಂದ ನಾವು ಅಷ್ಟು ಶ್ರಮ ಪಡುವುದರಲ್ಲಿ ಸುಖವೇನಿದೆಯೆಂಬುದಾಗಿ ಕೇಳಿದರು. ಹೀಗೆ ಆಗಲು ಇದಕ್ಕೆಲ್ಲಾ ಕಾರಣ ಆ ಗ್ರಾಮದ ಮುಖ್ಯಸ್ಥರ ಮಾತಿಗೆ ಬೆಲೆ ಇಲ್ಲದಿರುವುದೇ ಆಗಿದೆ. ಈಗಲೂ ಕೆಲವು ಕಡೆ ಹಳ್ಳಿಯಲ್ಲಿ ಮಾಡತಕ್ಕ ಪಂಚಾಯಿತಿಗಳ ಬಗ್ಗೆ ಅಲ್ಲಿರುವ ಜನರು ಆಯಾಯ ಗ್ರಾಮಗಳಲ್ಲಿ ನಡೆಯುತಕ್ಕ ಸಣ್ಣ ಪುಟ್ಟ ತಕ್ಸೀರುಗಳನ್ನು ತೀರ್ಮಾನ ಮಾಡಲು, ಇಂಡಿಯನ್ ಪೀನಲ್ ಕೋಡನ್ನು ಓದದೆ ಇದ್ದಾಗ್ಯೂ ಕೋರ್ಟಿನಲ್ಲಿ ಸದ್ರಿ ತಕ್ಸೀರುಗಳನ್ನು ಹೇಗೆ ವಿಚಾರಣೆ ಮಾಡಿ ಒಂದು ಶಿಕ್ಷೆಯನ್ನು ವಿಧಿಸುತ್ತಾರೋ ಅದಕ್ಕಿಂತಲೂ ಮಹತ್ತಾದ ರೀತಿಯಲ್ಲಿ ಪಂಚಾಯಿತಿ ಮಾಡಿ ಶಿಕ್ಷೆ ಮಾಡಲು ಶಕ್ತರಾಗಿದ್ದಾರೆ. ಅವರು ಆಚರಿಸತಕ್ಕ ವಿಧಾನ ಸಾಮಾನ್ಯ ರೀತಿಯಲ್ಲಿದ್ದಾಗ್ಯೂ ಪರಿಣಾಮದಲ್ಲಿ ಬಹಳ ಹೆಚ್ಚಿನದಾಗಿರುತ್ತೆ. ತೆಲುಗಿನಲ್ಲಿ ಈ ಸಂಬಂಧವಾಗಿ ಒಂದು ಗಾದೆಯನ್ನು ಹೇಳುತ್ತಾರೆ. ಏನೆಂದರೆ—"ದೋಸಕಾಯಿ ದೊಂಗನಿಕಿ ದೊಂಚಪೆಟ್ಟು, ಮಾಮಿಡಿಕಾಯಿ ದೊಂಗನಿಕಿ ಮಂಚಪೆಟ್ಟು" ಎಂಬುದಾಗಿ. ಆದ್ದರಿಂದ ಇಂಥಾ ತಕ್ಸೀರುಗಳನ್ನು ಫೈಸಲ್ ಮಾಡಲು ಆ ಜನಗಳಿಗೂ ಕೂಡ ಕಾನೂನಿನ ಜೀವಾಳ ಏನೆಂಬುದು ಗೊತ್ತಿದ್ದೇ ಇದೆ.

ಪಾಪ ಭೀತಿಯಿಂದ ಧರ್ಮದ ಹಿತದೃಷ್ಟಿಯಿಂದ ಈ ದಿವಸ ಕೂಡ ಅನೇಕ ಗ್ರಾಮಗಳಲ್ಲಿ ಜನರು ನ್ಯಾಯ ರೀತಿಯಿಂದ ನಡೆದುಕೊಳ್ಳುತ್ತಿದ್ದಾರೆ. ಅನೇಕ ಗ್ರಾಮಗಳಲ್ಲಿ ಈಗಲೂ ತಪ್ಪಿತಸ್ಥರಿಗೆ ಜುಲ್ಮಾನೆ ಹಾಕುತ್ತಾರೆ. ತಪ್ಪು ಮಾಡಿದ ತಕ್ಷಣ ಪಂಚಾಯಿತಿ ಸೇರಿ ನ್ಯಾಯ ಫೈಸಲು ಮಾಡಿ ತಪ್ಪಿತಸ್ಥನಿಂದ ದಂಡ ವಸೂಲು ಮಾಡಿ ಅದನ್ನು ದೇವಸ್ಥಾನಕ್ಕೋ ಅಥವಾ ಬೇರೆ ಕಾರ್ಯಕ್ಕೋ ಕೊಡುತ್ತಾರೆ. ಈಗ ಸ್ವಲ್ಪ ತಿಳುವಳಿಕೆ ಬಂದು ಕೆಲವು ಕಡೆ ಪಂಚಾಯಿತರು ಹೇಳಿದ ಮಾತು ಕೇಳದೆ ಕೆಲವರು ಪಂಚಾಯಿತಿ ತೀರ್ಮಾನವಾದ ಮಾರನೆಯ ದಿನ ಹೋಗಿ ಲಾಯರು ನೋಟೀಸು ಕೊಡಿಸುತ್ತಾರೆ. ಗ್ರಾಮದ ಮುಖಂಡರು ಕೋರ್ಟಿಗೆ ಬರಬೇಕೆಂದು ಹೇಳುತ್ತಾರೆ. ಹೀಗಾಗಿ ಗ್ರಾಮದಲ್ಲಿ ಪಂಚಾಯಿತರಿಂದ ದೊರೆಯುವ ನ್ಯಾಯ ಕೋರ್ಟಿನಲ್ಲಿ ದೊರಕದೆ ಧರ್ಮಕ್ಕೆ ಚ್ಯುತಿ ಬಂದಿದೆ. ಇದಕ್ಕೆಲ್ಲಾ ಕಾನೂನು ಬಲದಿಂದ ಕಾರ್ಯಕ್ರಮ ನಡೆಯಬೇಕೆಂದರೆ ಬಹಳ ಅನಾನುಕೂಲವಾಗುತ್ತದೆ. ಈ ಚಿಕ್ಕ ಪುಟ್ಟ ಅಧಿಕಾರಗಳನ್ನು ಕೊಡುವುದರಿಂದ ಸದುಪಯೋಗಪಡಿಸಿಕೊಳ್ಳುತ್ತಾರೋ ಇಲ್ಲವೋ ಎಂದು ಸಂಶಯಪಡಬಾರದು. ಅನೇಕ ಕಡೆ ಗ್ರಾಮದ ಕಟ್ಟುಕಟ್ಟಳೆಗೆ ಹೆದರುತ್ತಾರೆ. ನಾನು ಚಿಕ್ಕವನಾಗಿದ್ದಾಗ ಒಂದು ಸನ್ನಿವೇಶ ಜರುಗಿತು. ಒಂದು ಪಂಚಾಯಿತಿ ಆಗುವಾಗ ಒಬ್ಬ ಪ್ಲೀಟ್ ಲಾಯರು ಸುಳ್ಳು ಸಾಕ್ಷಿಯನ್ನು ಕರೆದುಕೊಂಡು ಬಂದಿದ್ದ. ಆದರೆ ಆ ಸಾಕ್ಷಿಯು ಹೇಳಿಕೆ ಕೊಡುವಾಗ ಸತ್ಯವಾಗಿ ಹೇಳುತ್ತೀಯೋ ಎಂದು ಕೇಳಿದಾಗ ತನ್ನ ಗ್ರಾಮದವರ ಮುಂದೆ, ತಾನು ಹುಟ್ಟಿದ ಗ್ರಾಮದಲ್ಲಿ ದೇವರ ಮುಂದೆ ಸುಳ್ಳು ಹೇಳಲು ಮನಸ್ಸು ಬಾರದೆ ನಿಜವನ್ನೇ ಹೇಳಿಬಿಟ್ಟನು. ಅದೇ ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟರ ಮುಂದೆ ಹೇಳುವಾಗ ಸತ್ಯವಾಗಿ ಹೇಳುತ್ತೀಯಾ ಎಂದು ಕೇಳಿದಾಗ, ಸತ್ಯವಾಗಿ ಹೇಳುತ್ತೇನೆ ಎಂದು ಸುಳ್ಳು ಸಾಕ್ಷಿಯನ್ನು ಹಿಂದು ಮುಂದು ನೋಡದೆ ಹೇಳಿಬಿಡುತ್ತಾನೆ. ಐದು ರೂಪಾಯಿಗಳು ಕೊಟ್ಟರೆ ಸಾಕು, ಸುಳ್ಳು ಸಾಕ್ಷಿಯನ್ನು ಹೇಳಲು ಒಂದು ಹಳ್ಳಿಯಲ್ಲಿ 150 ಜನರು ಬೇಕಾದರೂ ಬರುತ್ತಾರೆ. ಅದೂ ಅಲ್ಲದೆ ಸಣ್ಣ ಪುಟ್ಟ ತಕರಾರುಗಳು ಹೈಕೋರ್ಟುವರೆಗೂ ಹೋಗಿ ಬಹಳ ಕಾಲ ವ್ಯರ್ಥವಾಗುತ್ತಿದೆ. ಒಂದು ಗ್ರಾಮದಲ್ಲಿ ಒಂದು ಕಳ್ಳತನ, ಒಂದು ಜಗಳ ಆದರೂ ಕೋರ್ಟಿಗೆ ಬರಬೇಕು. ಹಾಗೆ ಹೋದರೆ ನ್ಯಾಯವೂ ಅನೇಕ ವೇಳೆ ದೊರೆಯುವುದಿಲ್ಲ. ಇದರಿಂದ ರೈತರಲ್ಲಿ ಜಿದ್ದಿಗೆ ಕಾರಣವಾಗುತ್ತದೆ. ಒಂದು ಹುಣಿಸೆಮರದ ವಿಷಯಕ್ಕಾಗಿ ಹೈಕೋರ್ಟಿನವರೆಗೆ ಹೋಗಿರುವ ನಿದರ್ಶನವಿದೆ. ಪಂಚಾಯಿತರಿಗಾದರೆ ಸ್ಥಳ ವಿದ್ಯಮಾನ ಗೊತ್ತಿರುವುದರಿಂದ ನ್ಯಾಯ ದೊರಕುತ್ತದೆ. ಆದರೆ ಕೋರ್ಟಿನ ಜಡ್ಜಿಗಳಿಗೆ ಯಾವ ವಿಷಯವೂ ಗೊತ್ತಿಲ್ಲದಿರುವುದರಿಂದ ಅವರು ಸಾಕ್ಷಿಗಳು ಕೊಡುವ ಹೇಳಿಕೆ ಮೇಲೆ ಆಧಾರ ಪಡಬೇಕಾಗುತ್ತದೆ. ಸುಳ್ಳು ಸಾಕ್ಷಿಗಳು ಬೇರೆ ಇರುವುದರಿಂದ ನಿಜವಾದ ಸಂಗತಿ ತಿಳಿಯುವುದಿಲ್ಲ. ಮರವಿಲ್ಲದಿದ್ದರೂ ಕೇಸು ಮಾಡುವುದಕ್ಕೆ ಸಾಧ್ಯವಿದೆ. ಅದರಿಂದ ಕೋರ್ಟಿನಲ್ಲಿ ಸರಿಯಾಗಿ ನ್ಯಾಯ ದೊರಕುವುದಿಲ್ಲ. ಹೀಗಾಗಿರುವ ನಿದರ್ಶನಗಳು ಎಷ್ಟೋ ಇವೆ. ಲಾಯರುಗಳಿಗೆ ಅಥವಾ ಜಡ್ಜಿಗಳಿಗೆ ನಿಜವಾದ ವಿಚಾರ ಗೊತ್ತಾಗುವುದಿಲ್ಲ. ಸುಳ್ಳು ಸಾಕ್ಷಿಗಳಿಂದ ನಿರಪರಾಧಿಗಳಿಗೆ ಶಿಕ್ಷೆಯಾಗಿ ಅಪರಾಧವನ್ನು ನಿಜವಾಗಿಯೂ ತಪ್ಪಿಸಿಕೊಂಡಿರುವ ಅನೇಕ ಸಂದರ್ಭಗಳಿವೆ. ಈ ಎಲ್ಲಾ ದೃಷ್ಟಿಯಿಂದ ಗ್ರಾಮಗಳಲ್ಲಿ ದೊಡ್ಡ ಮನುಷ್ಯರಿಗೆ ಸರಿಯಾದ ಮಾನ್ಯತೆ ದೊರೆತು ಕಾಯಿದೆ, ಕಟ್ಟು ಕಾಪಾಡಿಕೊಂಡು ಬರಬೇಕಾದರೆ ಅವರಿಗೆ ಸಹಾಯವಾಗಿ ಕಾನೂನಿನ ಬಲ ಇರಲೇಬೇಕು. ಅನೇಕ ಗ್ರಾಮಗಳಲ್ಲಿ ಈ ಕಾನೂನು ಬಲವಿಲ್ಲ. ನೂರಾರು ಗ್ರಾಮಗಳಲ್ಲಿ ಕಾನೂನು ಬಲವಿದ್ದರೆ ಗ್ರಾಮ ಧರ್ಮವನ್ನು ಸರಿಯಾಗಿ ನಡೆಸಿಕೊಂಡು ಹೋಗಲು ಅವಕಾಶವಾಗುವುದರಿಂದ ಅದನ್ನೊದಗಿಸಿ ಉಪಕಾರ ಮಾಡಬೇಕು.

ಎರಡನೆಯದು ಸಮಗ್ರ ಸೇವಾ ಸಹಕಾರ ಸಂಘದ ವಿಚಾರ. ನಮ್ಮ ತಾಲ್ಲೂಕಿನಲ್ಲಿ ಈಗ 25 ಪಂಚಾಯಿತಿಗಳನ್ನು ಮಾಡಿದ್ದಾರೆ. ಅವಕ್ಕೆಲ್ಲಾ ಸಹಾಯವಾಗುವಂತೆ 25 ಸಹಕಾರ ಸಂಘಗಳನ್ನು ಚಿಕ್ಕ ಚಿಕ್ಕದಾಗಿ ಮಾಡುವುದರಿಂದ ಏನೂ ಅನರ್ಥವಾಗುವುದಿಲ್ಲ. ಅದರಿಂದ ಬಹಳ ಚೆನ್ನಾಗಿ ಕೆಲಸವೂ ನಡೆಯುತ್ತದೆ ಮತ್ತು

(ಶ್ರೀ ಎಂ. ವಿ. ಕೃಷ್ಣಪ್ಪನವರು.)

ಜನರಿಗೂ, ಪಂಚಾಯಿತಿಗಳಿಗೂ ಉತ್ಪತ್ತಿ ಬರುತ್ತದೆ; ಸಹಕರಿಸಿ ಎಲ್ಲರೂ ಪ್ರಯತ್ನ ಪಡಲು ಅನುಕೂಲವಾಗುತ್ತದೆ. ಬೇಕಾದ ವಸ್ತುಗಳನ್ನು ತೆಗೆದುಕೊಳ್ಳಬಹುದು. ಕಳ್ಳತನಕ್ಕೆ ಅವಕಾಶವಿರುವುದಿಲ್ಲ. ಗ್ರಾಮದಲ್ಲಿರುವ ಪದಾರ್ಥಗಳು ಕಳ್ಳದಾರಿಯಲ್ಲಿ ಸಾಗಿ ಹೋಗಲು ಅನ್ವದವಿರುವುದಿಲ್ಲ. ಆದ್ದರಿಂದ ಸಹಕಾರ ಸಂಘಗಳನ್ನು ಕಡ್ಡಾಯವಾಗಿ ಏರ್ಪಡಿಸಿದರೆ ಬಹಳ ಉಪಕಾರವಾದಂತಾಗುತ್ತದೆ.

ಮೂರನೆಯದು ಜುಲ್ಮಾನೆ ವಿಷಯ. ಇದು ಸಾಧಾರಣವಾಗಿ ಪೂರ್ವದಿಂದಲೂ ರೂಢಿಯಲ್ಲಿತ್ತು. ಹಿಂದೆ ಹೋಬಳಿ ಹೆಡ್‌ಕ್ವಾರ್ಟರಿನಲ್ಲಿ ನೂರು ರೂಪಾಯಿಗಳವರೆಗೆ ಸಾಲ ಪಡೆದಿರುವುದಕ್ಕೆ ದಾವ ದಾಖಲು ಮಾಡಲು ವಿಲೇಜ್ ಮುನ್ಸೀಫ್ ಕೋರ್ಟಿತ್ತು, ಅದು ಚೆನ್ನಾಗಿತ್ತು. ಆದ್ದರಿಂದ ಆ ವಿಚಾರದಲ್ಲಿ ಮೊದಲು ಕಾನೂನು ಜಾರಿಗೆ ತಂದು ರೈತರಿಗೆ ಅಧಿಕಾರ ಕೊಡುವುದರಿಂದ ಉಪಕಾರವಾಗುತ್ತದೆಯೇ ಹೊರತು ಅಪಕಾರವಾಗುವುದಿಲ್ಲ ಎಂದು ಹೇಳಿ ಈ ತಿದ್ದುಪಡಿಯನ್ನು ಅನುಮೋದಿಸುತ್ತೇನೆ.

Janab MAHOMED HANIEF (Bangalore—Muslim):—Sir, I rise to support the amendment brought forward by the Hon'ble Member Sri M. N. Jois. With respect I wish to say that time was when the Congress wished to have panchayet raj in this country; to make the panchayet a self-sufficient and a self-sufficing unit, the soul and centre of all activities and entrust to it all aspects of village life—social, political, economic—and endeavour to make that unit a real unit, to be a link in a chain of links spread over and scattered all over the country. It meant that this panchayet raj should be made to aspire and rise equal to the occasion and realise its responsibility and willingly perform all these functions sharing with all the good things that we create within the unit and if possible send out the surplus to the neighbouring unit. That was their ideal and that was their ambition. And now those ideals are far from realisation, we are to-day having a patch work of things. The pattern is neither western nor eastern. It is certainly not Indian. India of the past based its society on joint family system and made it the unit of human life. To-day it is given the go-by and the thing that has taken its place has worsened the situation. It is neither good nor proper. I would like to see a revolution in this country and a desire and an attempt made by the people to make the panchayet the real and the only centre of our activities. If I had that in mind, I would not hesitate to give that this amendment wants to secure. With respect I listened to the Hon'ble Law Minister. Certainly Sir, law and order is the primary function of the Government. But if a unit of that Government is in a position to co-operate in the maintenance of law and order, why should not the Government welcome it? Is it not a fact Sir, that even at this present moment far distant villages, away from road and any means of communication, are subjected to loot and destruction by desperadoes, by rowdies of those villages? What happens? Murders take place, properties are looted; police do not reach the place in time. They go there after the event only to concoct and to make matters worse and not give the much-desired and much-needed help and protection to the people. On the other hand, if the village is organised, if it has got a party of constables who would be in a position to give some help on these occasions, why should not the Government welcome it?

The Hon'ble Sri K. T. BHASHYAM.—Who says 'No'? I rise to a point of personal explanation. I made it clear that if a village is capable of organising rural security, we would welcome it. We will be glad if such a thing comes about; but, to force it is a different matter.

Janab MAHOMED HANIEF.—I am only saying 'Let it be by compulsion." Let there be a law; let there be a rule." If we are to govern ourselves by our own whims, why should there be so much of law, why should there be so much of force? Let there be no apprehension on our part that there is force in this land which will not permit us to do things in our own way. That is a great preventive. That prevents me from doing wrong. Let the village people feel that there is a body of men to administer their village. Why should we not take advantage of that? Why should we not make it compulsory? The earlier it is done, the better. The arguments advanced on the floor of this

House were those with which we were very familiar when the British were here. The stage of saying 'Prove your fitness, then we will give you something' is gone. Without taking us to water, you ask us to learn to swim. Make them do wrong. It is the birthright of every citizen of the country to go wrong. Are not the present Government making mistakes? Are they not correcting their mistakes? Credit the villagers with certain amount of wisdom; let them have sense of responsibility; make them carry on the Government; give them the opportunity; place them in position and then test them. That is what we should do. The fundamental upon which we wished to lay the foundation of independence is gone. You have swerved from that fundamental. I want you to get back to that ideal and begin again. Begin again and you will see that all difficulties and all problems that you are confronted with will vanish. There will be no transport of articles without sanction. There will be a sense of responsibility in the people. Let them share the responsibility. Give them liberty and power and make them happy. Unless and until you give the villagers an opportunity and give them responsibility and make a Panchayet a unit, there will be no salvation for the country. Let us make a beginning. Make them fit. You can make them fit only by giving them responsibility to act. I am repeating what I have said before. Make one gentleman occupy a place of responsibility. You will see that he will discharge his function very satisfactorily. Give the people that opportunity. Give the Panchayet those powers. Supposing you do that. You will be raising the dignity of the Panchayets to a very great extent and make them conscious that they have the power to punish wrong, to settle disputes, without causing delay and without causing further expenditure. It is in the interest of every village. Make every villager feel that his neighbour is his brother. That consciousness must come in. That spirit of co-operation, that spirit of brotherliness must come in. That inspiration that we are all children of one God entitles us to enjoy equal privileges. The development of that spirit must begin at the bottom.

The Hon'ble Sri K. T. BHASHYAM.—You do not get co-operation by compulsion!

Janab MAHOMED HANIEF.—Is the Police force a compulsion? Is the President here control a compulsion? He is there to control. He gives me the right to speak. There is such a thing as adjustment; there is such a thing as understanding. If I understand that I am not going to be allowed to speak beyond limit, that there is the President to call me to order, it is a compulsion on my part. The very fact that I am compelled to do an act in a certain way, makes me to correct myself and be on my guard, not to speak things which will make the President call me to order (Interruption by Sri A. Bheemappa Naik). It will not be to the liking of some others. Unless and until we go back to the fundamentals, there is no salvation for this country and the Panchayet Raj is the only thing that is going to save this country. Don't make little of the Panchayet. Panchayet is a unit which must be maintained and supported to the best of one's ability. The amendments are intended to achieve that end. Make them compulsory and see whether the fruit that it will bear will be not worthy of your eating or not.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸ್ವಾಮಿ, ಅಧ್ಯಕ್ಷರೇ ಈ ತಿದ್ದುಪಡಿಯ ಮೇಲೆ ಮಾತನಾಡಬೇಕೆಂದು ನಾನು ಮೊದಲು ಮನಸ್ಸು ಮಾಡಿರಲಿಲ್ಲ. ಸೆಲೆಕ್ಟ್ ಸಮಿತಿಯಲ್ಲಿ ಇದು ಕೂಲಂಕಷವಾಗಿ ಚರ್ಚೆಯಾಗಿದೆ. ಅದರಲ್ಲಿ ನಾನೂ ಭಾಗಿಯಾಗಿದ್ದೆ. ಕೆಲವು ಸಣ್ಣ ಪುಟ್ಟ ತಕ್ಸೀರುಗಳಿಗೆ ಶಿಕ್ಷೆ ಕೊಡುವ ಅಧಿಕಾರ ಅವರಿಗೆ ಇರಬೇಕೇ ಬೇಡವೇ ಎಂಬುದನ್ನು ಪರಿಶೀಲಿಸುವುದಕ್ಕೆ ಶ್ರೀ ವೆಂಕಟಪ್ಪನವರ ಸಮಿತಿಯಲ್ಲಿ ಒಂದು ಸಣ್ಣ ಸಮಿತಿ ಏರ್ಪಾಡಾಗಿತ್ತು. ಅವರೂ ಸಹ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ಅಭಿಪ್ರಾಯಕ್ಕೆ ಬಂದರು. ಅದು ವರದಿಯಲ್ಲಿ ಇದೆ. ಈ ತಿದ್ದುಪಡಿಗೆ ಸಂಬಂಧಪಟ್ಟಂತೆ ಮಾತನಾಡುತ್ತಾ ಅನೇಕ ಸದಸ್ಯರು ಹೊರಪಡಿಸಿದ ಅಭಿಪ್ರಾಯವನ್ನು ನೋಡಿದರೆ ಕೆಲವರು ತಿದ್ದುಪಡಿಯಲ್ಲಿ ಕಾಣಿಸಿರುವ ಮೂರು ಕಾರ್ಯಗಳಿಗೆ ಕೈಹಾಕಲೇಬಾರದು ಎಂದು ಭಾವಿಸಿಕೊಂಡಿರುವ ಹಾಗೂ ಮತ್ತೆ ಕೆಲವರು ಈ ಕಾರ್ಯಗಳನ್ನು ಕಡ್ಡಾಯವಾಗಿ ಮಾಡಲೇಬೇಕು ಎಂದು ಕಾನೂನು ಮಾಡಬೇಕೆಂದು ಸೂಚಿಸುವಂತೆಯೂ

(ಶ್ರೀ ಎಚ್. ಕೆ. ವೀರಣ್ಣಗೌಡರು.)

ವ್ಯಕ್ತಪಡುತ್ತದೆ. ಗ್ರಾಮದಲ್ಲಿ ನಡೆಯತಕ್ಕ ಕೆಲಸ ಕಾರ್ಯಗಳಿಗಾಗಲೀ, ಅಲ್ಲಿ ನಡೆಯತಕ್ಕ ಸಣ್ಣ ಪುಟ್ಟ ತಕ್ಸೀರುಗಳಿಗೆ ಶಿಕ್ಷೆ ಮಾಡತಕ್ಕ ವಿಚಾರವಾಗಲೀ ಇವೆರಡೂ ನಮ್ಮ ಗ್ರಾಮಗಳಿಗೆ ಹೊಸದೇನೂ ಅಲ್ಲ. ಒಂದಲ್ಲ ಒಂದು ರೂಪದಲ್ಲಿ ಮೊದಲಿನಿಂದಲೂ ಅವು ನಮ್ಮ ಗ್ರಾಮಗಳಲ್ಲಿ ಅನುಷ್ಠಾನದಲ್ಲಿ ಇದ್ದಂಥ ವಿಚಾರಗಳೇ ಆಗಿವೆ. ಆದ್ದರಿಂದ ಈಗ ನಾವು ಯೋಚನೆ ಮಾಡಬೇಕಾದ್ದು ಇಷ್ಟೆ. ಬಲವಂತವಾಗಿ ಮಾಡುವಂತೆ ಕಾನೂನು ಮಾಡಬೇಕೇ ಅಥವಾ ಎಲ್ಲಿ ಅವಕಾಶವಿದೆಯೋ, ಎಲ್ಲಿ ಉತ್ಸಾಹವಿದೆಯೋ, ಎಲ್ಲಿ ತಕ್ಕ ಜನಗಳು ಸಿಕ್ಕುತ್ತಾರೆಯೋ ಅಲ್ಲಿ ಮಾಡುವಂತೆ ಪ್ರೋತ್ಸಾಹ ಕೊಡಬೇಕೇ ಎಂಬುದು ನಮ್ಮ ಮುಂದಿರತಕ್ಕ ಪ್ರಶ್ನೆ. ಹಳ್ಳಿಗಾಡಿನಲ್ಲಿ ವಿದ್ಯಾವಂತರಲ್ಲದವರು ಇರುತ್ತಾರೆ. ಆದ್ದರಿಂದ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವುದಿಲ್ಲವೆಂದು ಕೆಲವರು ಹೇಳಿದರು ಮತ್ತು ಹಳ್ಳಿಗಾಡಿನಲ್ಲಿರುವ ಕೆಲವು ಲೋಪ ದೋಷಗಳನ್ನು ಎತ್ತಿ ತೋರಿಸಿದರು. ನನಗೆ ಅನ್ನಿಸುತ್ತದೆ: ನಾವು ಯಾರೂ ಪಟ್ಟಣದಲ್ಲಿ ಹುಟ್ಟಿ ಬೆಳೆದವರಲ್ಲ. ಗ್ರಾಮಾಂತರದಿಂದ ಬಂದು ಕೆಲವು ವರ್ಷಗಳಿಂದ ಪಟ್ಟಣದಲ್ಲಿ ಇರುವವರೇ ಹೊರತು ಹಳ್ಳಿಗಳಲ್ಲಿ ಹುಟ್ಟಿದವರೇ ಆಗಿದ್ದೇವೆ. ಮಾನ್ಯ ಸದಸ್ಯರಲ್ಲಿ ಬಹುಮಂದಿ ಹಳ್ಳಿಗಾಡಿನವರಾಗಿದ್ದಾರೆ ಅಥವಾ ಅವರ ತಂದೆ ತಾಯಿಗಳು ಹಳ್ಳಿಗಾಡಿನವರಾಗಿದ್ದರು ಎನ್ನುವುದರಲ್ಲಿ ಸಂದೇಹವಿಲ್ಲ.

ಅಂದ ಮೇಲೆ ಪಟ್ಟಣಗಳಲ್ಲಿ ವಿದ್ಯಾವಂತರು ಹೆಚ್ಚೋ ಅಥವ ಹಳ್ಳಿಗಳಲ್ಲಿ ಹೆಚ್ಚೋ ಎಂಬ ವಿಚಾರವನ್ನು ಈಗ ವಿಮರ್ಶೆ ಮಾಡಬೇಕಾದ ಅಗತ್ಯ ಕಾಣುವುದಿಲ್ಲ. ನಾವು ಪಟ್ಟಣಗಳಲ್ಲಿ ಈಗ ಇದ್ದರೂ ಮೊದಲು ಹಳ್ಳಿಯವರೇ. ಆದುದರಿಂದ ಹಳ್ಳಿಗಾಡಿನವರು ಸತ್ಯವಂತರು ಅಥವ ಅಸತ್ಯವಂತರು, ಪಟ್ಟಣದವರು ಸತ್ಯವಂತರು ಅಥವ ಅಸತ್ಯವಂತರು ಎಂದು ಹೇಳುವುದಕ್ಕಾಗುವುದಿಲ್ಲ. ಮನುಷ್ಯಸ್ವಭಾವ ಹಳ್ಳಿಯಲ್ಲಿರಲಿ ಪಟ್ಟಣದಲ್ಲಿರಲಿ ಒಂದೇ ಆಗಿರುತ್ತದೆ. ಎಲ್ಲ ಕಡೆಯೂ ಕೆಲವರು ಒಳ್ಳೆಯವರೂ ಇರುತ್ತಾರೆ, ಕೆಲವರು ಕೆಟ್ಟವರೂ ಇರುತ್ತಾರೆ. ಇದು ಹಾಗಿರಲಿ, ಮುಖ್ಯವಾಗಿ ನಮ್ಮ ಮುಂದಿರುವ ತಿದ್ದುಪಡಿಯ ಪ್ರಕಾರ ಈ ಕಾನೂನಿನಲ್ಲಿ ಹಳ್ಳಿಗಾಡಿನಲ್ಲಿ ಜನ ಮಾಡುವ ಸಣ್ಣ ಪುಟ್ಟ ತಪ್ಪುಗಳಿಗೆ ಶಿಕ್ಷೆ ವಿಧಿಸುವ ಅಧಿಕಾರವನ್ನು ಗ್ರಾಮಪಂಚಾಯಿತಿಗೆ ಕಡ್ಡಾಯವಾಗಿ ಕೊಡಬೇಕೆಂಬುದು ಒಂದು. ಈ ಸಂಬಂಧವಾಗಿ ಸೆಲೆಕ್ಟ್ ಸಮಿತಿಯಲ್ಲಿಯೂ ಕೆಲವು ಸಲಹೆಗಳನ್ನು ಮಾಡಿದರು. ಅನೇಕ ಹಳ್ಳಿಗಳಿಗೆ ವಿದ್ಯಾವಂತರು ಹೋಗಿ ನೆಲೆಸಿದ್ದಾರೆಂಬುದು ನಿಜ. ಎಲ್ಲೆಲ್ಲಿ ಕಾನೂನನ್ನು ತಿಳಿದುಕೊಂಡು ಈ ವಿಚಾರಗಳನ್ನು ನೋಡಿಕೊಳ್ಳಲು ಜನರಿಗೆ ಶಕ್ತಿಯಿದೆಯೋ ಅಂತಹ ಕಡೆಗಳಿಗೆ ಇಂತಹ ಅಧಿಕಾರವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ ಎಂದು ನ್ಯಾಯಾಂಗ ಮಂತ್ರಿಗಳು ಹೇಳಿದ್ದಾರೆ. ಸುಮ್ಮನೆ ಎಲ್ಲವನ್ನೂ ಕಡ್ಡಾಯ ಮಾಡುವುದರಿಂದ ಪ್ರಯೋಜನವಿಲ್ಲ. ಉದಾಹರಣೆಗೆ ಪೋಲೀಸ್ ಕಾನೂನು ಪ್ರಕಾರ ಹಳ್ಳಿಗಳಲ್ಲಿ ರಾತ್ರಿ ಕಾವಲು ಪದ್ಧತಿ ಕಡ್ಡಾಯವಾಗಿದೆ. ಆದರೂ ಇವೊತ್ತು ಆ ಪದ್ಧತಿ ಮಾಯವಾಗಿದೆ. ಇದಕ್ಕೆ ಕಾರಣ, ಮಾನ್ಯ ನ್ಯಾಯ ಸಚಿವರು ಹೇಳಿದ ಹಾಗೆ ಯಾವುವನ್ನೇ ಆದರೂ ಇಂತಹ ವಿಚಾರದಲ್ಲಿ ಬಲವಂತ ಮಾಡಿದರೆ, ಅದನ್ನು ತಪ್ಪಿಸಿಕೊಳ್ಳಲು ಜನರು ಪ್ರಯತ್ನ ಮಾಡುತ್ತಾರೆ. ಅದೇ ಔದಾರ್ಯದಿಂದ ಮಾಡುವ ಕೆಲಸವಾದರೆ ತಾವೇ ಮುಂದೆ ಬಂದು ಸಂತೋಷದಿಂದ ನಡೆಸುತ್ತಾರೆ. ಕಡ್ಡಾಯ ಮಾಡಿದ್ದರೂ ಈಗ ರಾತ್ರಿ ಕಾವಲು ಎಲ್ಲಿಯೂ ನಡೆಯುತ್ತಿಲ್ಲ. ಇದಕ್ಕೆ ಹೊಸ ರೂಪವನ್ನು ಕೊಟ್ಟು ಸೇವಾದಳ ಎಂದು ಮಾಡಿದರೆ ಮಾಡುತ್ತಾರೆ. ಹೀಗೆ ಅವರಿಗೆ ಉತ್ಸಾಹ ಹುಟ್ಟುವಂತೆ ಮಾಡಿದರೆ, ತಾವೇ ಮಾಡುತ್ತಾರೆ. ಕೆಲವು ಕಡೆ ವಿದ್ಯಾವಂತರಿರುತ್ತಾರೆ. ಎಲ್ಲೆಲ್ಲಿ ಅವಕಾಶವಿರುತ್ತದೆಯೋ ಅಲ್ಲಿ ಮಾಡಬಹುದು. ಕಡ್ಡಾಯವಿಲ್ಲದಿದ್ದರೂ ಜನ ಸ್ವಪ್ರೇರಿತರಾಗಿ ಮಾಡಿದರೆ ಸಂತೋಷ. ಅಂಥವರಿಗೆ ಪ್ರೋತ್ಸಾಹ ಕೊಡಲು ಕಾನೂನಿನಲ್ಲಿ ಅವಕಾಶವಿದೆ. ಆದುದರಿಂದ ಸಮಯ, ಕಾಲ, ಸನ್ನಿವೇಶಗಳನ್ನು ನೋಡಿಕೊಂಡು ಇದನ್ನು ಜಾರಿಗೆ ತರಬೇಕೇ ಹೊರತು ಎಲ್ಲ ಕಡೆಯೂ ಒಂದೇ ರೀತಿ ಮಾಡಿ ಎಲ್ಲ ಗ್ರಾಮಪಂಚಾಯಿತಿಗಳಲ್ಲಿಯೂ ಕೋರ್ಟುಗಳನ್ನು ಮಾಡಲೇಬೇಕು, ಸೇವಾದಳಗಳನ್ನು ಮಾಡಲೇಬೇಕು, ಅಥವ ಸಹಕಾರ ಸಂಘಗಳನ್ನು ಮಾಡಲೇಬೇಕು ಎಂದು ಕಡ್ಡಾಯ ಮಾಡಿದರೆ ಕೆಲಸ ಸುಸೂತ್ರವಾಗಿ ನಡೆಯುವುದಿಲ್ಲ. ಈಗ ಎಷ್ಟೋ ಕಡೆ ಸಮಗ್ರ ಸೇವಾ ಸಂಘಗಳಿವೆ. ಕೆಲವು ಕಡೆ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆ. ಇನ್ನು ಕೆಲವು ಕಡೆ ಸರ್ಕಾರಿ ನೌಕರರೂ ಖಾಸಗಿ ಜನರೂ ಸೇರಿರುವ ಕಡೆ ಸಾವಿರಾರು ರೂಪಾಯಿಗಳು ದುರುಪಯೋಗವಾಗಿ ಮೊಖದ್ದಮೆಗಳು ನಡೆಯುತ್ತಿವೆ. ಹೀಗೆ ಇಂತಹ ವಿಷಯಗಳಲ್ಲಿ ತಾಳಿ ನೋಡಿ ಮುಂದುವರಿದರೆ ತಪ್ಪುಗಳಾಗುವುದಿಲ್ಲ. ಈ ಮಸೂದೆಯಲ್ಲಿ ಪಂಚಾಯಿತಿಯವರಿಗೆ ಈ ಅಧಿಕಾರಗಳನ್ನು ಕೊಡಬಾರದೆಂದು ಎಲ್ಲಿಯೂ ಹೇಳಿಲ್ಲ. ಇದರಲ್ಲಿ ಎರಡು ಭಾಗಗಳನ್ನು ಮಾಡಿದ್ದಾರೆ. ಕೆಲವು ಕಾರ್ಯಗಳನ್ನು ಪಂಚಾಯಿತಿಗಳ ವಿವೇಚನೆಗೆ ಬಿಟ್ಟಿದ್ದಾರೆ, ಕೆಲವನ್ನು ಬಲವಂತವಾಗಿ ಮಾಡಲೇಬೇಕೆಂದು ಮಾಡಿದ್ದಾರೆ. ಕೆಲವಕ್ಕೆ ಪ್ರೋತ್ಸಾಹ ಕೊಡಬೇಕು ಮತ್ತೆ ಕೆಲವಕ್ಕೆ ಕಡ್ಡಾಯ ಮಾಡಬೇಕು. ಕೆಲವು ವಿಚಾರಗಳಲ್ಲಿ ಬಲವಂತ ಮಾಡಿ ಕಾನೂನು ಮಾಡಿದರೆ ಕಾನೂನಾಗಬಹುದೇ ಹೊರತು ಇಲ್ಲದಿದ್ದರೆ ಕಾರ್ಯಯಶಸ್ವಿಯಾಗಿ ನಡೆಯಲಾರದು. ಆದುದರಿಂದ ಯಾರಾದರೂ ಎಚ್ಚರಿಕೆಯಿಂದ ನಡೆಸುತ್ತೇವೆಂದು ಹೇಳಿದರೆ ಸರ್ಕಾರದವರು ಈ ಅಧಿಕಾರ ಕೊಡಲು ಅವಕಾಶವಿದೆ. ಹೀಗಿರುವುದರಿಂದ ಮಾನ್ಯ ಶ್ರೀಮಾನ್ ಜೋಯಿಸರು ತಮ್ಮ ತಿದ್ದುಪಡಿಗಳನ್ನು ಒತ್ತಾಯ ಮಾಡಬಾರದೆಂದು ಸೂಚಿಸುತ್ತೇನೆ.

ಶ್ರೀ ಎಂ. ಸಿ. ಶಿವಾನಂದಶರ್ಮ ಅವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಮಾನ್ಯ ಸಚಿವರು ಶ್ರೀ ಜೋಯಿಸರು ತಂದಿರತಕ್ಕ ಈ ತಿದ್ದುಪಡಿಗಳ ವಿಷಯದಲ್ಲಿ ಮಾತನಾಡುತ್ತಾ ಈ ಅಧಿಕಾರಗಳು ಗ್ರಾಮಪಂಚಾಯಿತಿಗಳಿಗೆ ಬೇಡ, ಅವರಿಗೆ ಈ ಅಧಿಕಾರಗಳು ಇರಲೇಬಾರದು ಎಂದು ಅಭಿಪ್ರಾಯಪಟ್ಟಂತೆ ಕಾಣಲಿಲ್ಲ. ಇದಕ್ಕೆ ಇನ್ನೂ ಕಾಲಬೇಕು, ಹಳ್ಳಿಯ ಜನ ಇನ್ನೂ ಸುಸಂಸ್ಕೃತರಾಗಬೇಕು, ಆಡಳಿತ ನಡೆಸುವುದರಲ್ಲಿ ಇನ್ನೂ ಅಭ್ಯಾಸ ಬರಬೇಕು; ಅನುಭವ ಬರಬೇಕು, ಆಮೇಲೆ ಈ ಅಧಿಕಾರಗಳನ್ನು ಕೊಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟರೆಂದು ನನ್ನ ಭಾವನೆ. ಅವರು ಹೇಳುವುದು ನಿಜ. ಹಾಗೆ ಮಾಡುವುದು ಸೂಕ್ತ. ಆದರೆ ಯಾವ ಓಟಿನಿಂದ ಈ ಮಂತ್ರಿಮಂಡಲ ಸ್ಥಾಪನೆಯಾಗಿದೆಯೋ ಯಾರಿಂದ ಈ ಸಭೆಗೆ ಸದಸ್ಯರಾಗಿ ಚುನಾಯಿತರಾಗಿ ಬಂದಿದ್ದೇವೆಯೋ ಯಾರಿಂದ ಅಧಿಕಾರ ಪಡೆದು ಇಲ್ಲಿ ಅರ್ಥಿಕ ಕೇಂದ್ರೀಕೃತವಾಗಿದೆಯೋ ಅವ

ರಿಗೆ ಅಧಿಕಾರ ಕೊಡುವ ವಿಷಯದಲ್ಲಿ ಸಂಶಯವನ್ನು ವ್ಯಕ್ತಪಡಿಸುತ್ತೇವಲ್ಲಾ ಎಂದು ನನಗೆ ಅನ್ನಿಸುತ್ತಿದೆ. ಈ ರೀತಿ ಸಂದೇಹಕ್ಕೆ ಎಡೆಯಿಲ್ಲ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಈಗತಾನೇ ಜಾರಿಗೆ ಬಂದಿದೆ. ಇದು ನಮಗೆ ಹೊಸದು. ಎಡರು ತೊಡರಿನಿಂದ ಹೆಜ್ಜೆ ಹಾಕುತ್ತಿದ್ದೇವೆ. ಇದರಲ್ಲಿ ಮುಗ್ಗರಿಸಿಬೀಳುವ ಸಂಭವ ಹೆಚ್ಚು, ನಿಜ, ಒಂದೇಸಾರಿ ಎಲ್ಲರೂ ನ್ಯಾಯ ಶಾಸ್ತ್ರ ಚತುರರಾಗುವುದಕ್ಕೆ ಸಾಧ್ಯವಿಲ್ಲ. ಕ್ರಮೇಣ ಅನುಭವ ಪಡೆಯಬೇಕು. ಶ್ರೀ ಜೋಯಿಸರು ತಂದಿರುವ ತಿದ್ದುಪಡಿಗಳು ಸಾಧುವಾಗಿವೆ. ಗ್ರಾಮ ಪಂಚಾಯಿತಿ ರಾಜ್ಯದ ಕನಸು ನೆನಸಾಗಬೇಕು. ಪಂಚಾಯಿತಿ ಆಡಳಿತದ ತತ್ವವೇ ಇದು. ಎಲ್ಲ ಕಡೆಯೂ ಒಂದೇರೀತಿ ಇರುವುದಿಲ್ಲವೆಂಬುದೇನೋ ನಿಜ. ಉದಾಹರಣೆಗೆ ಸರಿಯಾಗಿ ಕೆಲಸಮಾಡದ, ಜಗಳದಲ್ಲಿ ಕಾಲ ಕಳೆಯುವ ಕೆಲವು ಮುನಿಸಿಪಾಲಿಟಿಗಳ ಅಧಿಕಾರವನ್ನೂ, ಆಡಳಿತವನ್ನೂ ಅಮಲ್ದಾರರಿಗೇ ವಹಿಸಿದ್ದಾರೆ, ಮತ್ತೆ ಕೆಲವುಕಡೆ ಪುನಃ ಖಾಸಗೀ ಜನರಿಗೇ ವಾಪಸು ಕೊಟ್ಟಿದ್ದಾರೆ. ಕೆಲವುಕಡೆ ಹಾಗೂ ಇರುತ್ತದೆ ಮತ್ತೆ ಕೆಲವು ಕಡೆ ಹೀಗೂ ಇರುತ್ತದೆ. ಒಟ್ಟಿನಲ್ಲಿ ಯೋಗ್ಯರೂ ದಕ್ಷರೂ ಇರುವಕಡೆ ಅಧಿಕಾರಗಳನ್ನು ಕೊಡದೆ ಸುಮ್ಮನೆ ಪಂಚಾಯಿತಿಗಳನ್ನು ಏರ್ಪಾಡು ಮಾಡುವುದರಿಂದ ಅಲ್ಲಿಯ ಜನರಿಗೆ ನ್ಯಾಯನೀತಿಗಳನ್ನು ಕಾಪಾಡಿ ಕೊಳ್ಳುವ ಅಭ್ಯಾಸ ಬರುವುದೇ ಇಲ್ಲವೆಂದು ನನಗೆ ಅನ್ನಿಸುತ್ತದೆ. ಜನರು ಸ್ವಪರಿಪೂರ್ಣತೆಯನ್ನು ಹೊಂದಿ ತಮ್ಮ ವಿದ್ಯಾಬುದ್ಧಿ ಆರೋಗ್ಯ ಮುಂತಾದುವನ್ನು ಕಾಪಾಡಿಕೊಂಡು ಯಾರು ಯಾರಿಗೂ ಅಧೀನವಾಗಿರದೆ ಸ್ವತಂತ್ರವಾಗಿ ಸ್ವಶಕ್ತಿಯಿಂದ ಜೀವನ ನಡೆಸುವುದೇ ಪಂಚಾಯಿತಿ ರಾಜ್ಯದ ಗುರಿ ಎಂದು ನಾನು ತಿಳಿದು ಕೊಂಡಿದ್ದೇನೆ. ಹಿಂದೆ ನಾನು ಒಂದು ಹೈಸ್ಕೂಲನ್ನು ಸ್ಥಾಪನೆಮಾಡಬೇಕೆಂದು ಪ್ರಯತ್ನಪಟ್ಟಾಗ ಅಲ್ಲಿಯ ಜನ "ಎಲ್ಲಾದರೂ ಜನ ಹೀಗೆ ಮಾಡುವುದುಂಟೆ, ಅದು ಸರ್ಕಾರದವರು ಮಾಡುವ ಕೆಲಸ, ನೀವು ಮಾಡುವುದುಂಟೆ" ಎಂದು ಹೇಳಿ ಎಲ್ಲೋ ಹಣವನ್ನು ವಸೂಲು ಮಾಡಿ ತಿನ್ನುವುದಕ್ಕೆ ಪ್ರಯತ್ನ ನಡೆಯುತ್ತಿದೆಯೆಂಬ ಸಂದೇಹವನ್ನು ಜನ ವ್ಯಕ್ತಪಡಿಸಿದರು. ಸಂಸ್ಥೆಗಳನ್ನು ಖಾಸಗಿಯಾಗಿ ಸ್ಥಾಪಿಸಿ ಯಶಸ್ವಿಯಾಗಿ ನಡೆದ ಈಗಿನ ಪರಿಸ್ಥಿತಿ ನೋಡಿ ಸಂಶೋಧನದಿಂದ ಸಹಾಯಮಾಡಲು ಮುಂದೆ ಬರುತ್ತಿದ್ದಾರೆ. ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಇಂಥಾದ್ದಕ್ಕೆಲ್ಲ ಹಣ ಕೊಡುವುದಕ್ಕೆ ಸಾಧ್ಯವಿಲ್ಲ, ನಾವು ಕೊಡುತ್ತೇವೆ, ನೀವು ಬನ್ನಿ, ಸ್ಕೂಲುಗಳನ್ನು ತೆರೆಯಿರಿ ಎಂದು ಜನರು ಹೇಳುತ್ತಿದ್ದಾರೆ. ಈಗಾಗಲೇ ಎರಡು ಮೂರು ಮಿಡ್ಲ್‌ಸ್ಕೂಲುಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಖಾಸಗೀ ಸ್ಕೂಲುಗಳು ಈಗಾಗಲೇ ಚೆನ್ನಾಗಿ ನಡೆಯುತ್ತಿವೆ. ಈ ರೀತಿ ತಾವೇ ಜವಾಬ್ದಾರಿ ವಹಿಸಿ ನಡೆಸುವುದು ಖಾಸಗಿ ಜನರಲ್ಲಿ ನಮ್ಮ ದೇಶದಲ್ಲಿ ಹೆಚ್ಚುಹೆಚ್ಚಾಗಿ ರೂಢಿಗೆ ಬರಬೇಕು. ಇನ್ನುಮುಂದೆ ಗ್ರಾಮಾಂತರಗಳಲ್ಲಿ ಜನ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದು, ತಮ್ಮ ಊರನ್ನು ರಕ್ಷಣೆ ಮಾಡಿಕೊಳ್ಳುವುದು, ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಮುಂತಾದ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದು ಅತ್ಯಾವಶ್ಯಕ. ಈಚೆಗೆ ಹಳ್ಳಿಗಳಲ್ಲಿ ವಿದ್ಯಾವಂತರು ಹೆಚ್ಚುತ್ತಿದ್ದಾರೆ. ಹಳ್ಳಿಯ ಜನರೇನೂ ಕುರುಡರಲ್ಲ, ಮೂಕರಲ್ಲ, ಕಿವುಡರಲ್ಲ. ಜನರನ್ನೂ ವಿಷಯಗಳನ್ನೂ ಪರೀಕ್ಷೆ ಮಾಡಿ ನೋಡುವ ಸ್ಥಿತಿಗೆ ಬಂದಿದ್ದಾರೆ. ಯಾರು ನಿಸ್ವಾರ್ಥಸೇವೆ ಮಾಡುತ್ತಾರೋ, ಯಾರು ಜನರ ಹಿತಕ್ಕಾಗಿ ಬಲಿದಾನ ಮಾಡುತ್ತಾರೋ ಅವರ ವಿಷಯದಲ್ಲಿ ಹೆಚ್ಚಿನ ಅಭಿಮಾನ ತೋರಿಸುತ್ತಾರೆ. ಆದುದರಿಂದ ಯಾರಿಗೆ ಓಟು ಕೊಡಬೇಕೆಂಬುದನ್ನು ಅವರು ಅರಿತಿದ್ದಾರೆ. ಓಟನ್ನು ಯಾರಿಗೆ ಕೊಡಬೇಕೆಂದು ಪ್ರಚಾರ ಮಾಡುವವರು ಪಂಚಾಯಿತಿಯ ಸದಸ್ಯರು. ಆದುದರಿಂದ ಶ್ರೀ ಜೋಯಿಸರು ತಂದಿರುವ ತಿದ್ದುಪಡಿ ನಿಜವಾಗಿಯೂ ಸಾಧುವಾಗಿದೆ. ಇದು ನಿಜವಾದ ಪಂಚಾಯಿತಿ ರಾಜ್ಯವೆಂದು ಮಹಾತ್ಮಾ ಗಾಂಧಿಯವರು ಏನು ಹೇಳುತ್ತಿದ್ದರೋ, ಹಿಂದಿನವರು ಏನು ಮಾಡಿದ್ದರೋ ಅದಕ್ಕನುಗುಣವಾಗಿದೆ ಎನ್ನಿಸುತ್ತದೆ. ಹಿಂದಿನ ಕಾಲದಲ್ಲಿ ಗ್ರಾಮಪಂಚಾಯಿತಿಗಳವರು ಬೇಕಾದಷ್ಟು ಕೆಲಸಗಳನ್ನು ಮಾಡುತ್ತಿದ್ದರೆಂದು ವ್ಯಕ್ತಪಟ್ಟಿದೆ. ತಮ್ಮ ತಮ್ಮ ಗ್ರಾಮಗಳಿಗೆ ಬೇಕಾದ ರಸ್ತೆ, ಬಾವಿ, ಕೆರೆಗಳು ಮುಂತಾದುವನ್ನು ತಾವೇ ನಿರ್ಮಾಣ ಮಾಡಿಕೊಳ್ಳುತ್ತಿದ್ದರು. ತಮ್ಮ ಮಕ್ಕಳಿಗೆ ಬೇಕಾದ ಸ್ಕೂಲುಗಳನ್ನು ತಾವೇ ಏರ್ಪಾಡು ಮಾಡಿಕೊಳ್ಳಬೇಕು. ಎಲ್ಲವನ್ನೂ ಸರ್ಕಾರವೇ ಮಾಡುವುದಕ್ಕಾಗುವುದಿಲ್ಲ. ಎಲ್ಲರಿಗೂ ವಿದ್ಯಾಭ್ಯಾಸ ಬೇಕು. ಸರ್ಕಾರ ಎಷ್ಟು ಸ್ಕೂಲುಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಅಲ್ಲದೆ ಈಗ ಉಪಾಧ್ಯಾಯರುಗಳಿಗೆ ಕೊಡುತ್ತಿರುವ ಸಂಬಳ ಸಾಲದೆಂಬ ಕೂಗು ಬೇರೆ ಇದೆ. ಏನಿದ್ದರೂ ಸರ್ಕಾರದವರು ಗ್ರಾಂಟು ರೂಪದಲ್ಲಿ ಹಣಕೊಟ್ಟು ಜನರೇ ವಿದ್ಯಾಸಂಸ್ಥೆಗಳನ್ನು ನಡೆಸಬೇಕು. ಸರ್ಕಾರ ಏನಿದ್ದರೂ ಆಗಾಗ ಹೋಗಿ ಮೇಲ್ವಿಚಾರಣೆ ನೋಡಿಕೊಂಡು ತನಿಖೆ ಮಾಡಿ, ಏನಾದರೂ ಲೋಪದೋಷಗಳು ಕಂಡುಬಂದರೆ ತಿದ್ದಬಹುದು. ಜನರು ಕಂದಾಯದ ರೂಪದಲ್ಲಿ ಕೊಟ್ಟ ಹಣವನ್ನು ಸಹಾಯ ರೂಪದಲ್ಲಿ ಅವರಿಗೇ ಕೊಟ್ಟು ಅಧಿಕಾರವನ್ನೂ ಕೊಟ್ಟು ಆ ಅಧಿಕಾರವನ್ನು ಉಪಯೋಗಿಸುವುದರಲ್ಲಿ ಏನು ತಪ್ಪು ಮಾಡುತ್ತಾರೆ, ಸರಿಯಾಗಿ ನಡೆಸುತ್ತಾರೆಯೇ ಇಲ್ಲವೇ ಎಂಬುದನ್ನು ನೋಡುವುದಕ್ಕೆ ಸರ್ಕಾರ ಇದೆಯೇ ಹೊರತು ತಾನೇ ಎಲ್ಲ ಅಧಿಕಾರಗಳನ್ನೂ ತನ್ನಲ್ಲಿ ಕೇಂದ್ರೀಕೃತ ಮಾಡಿಕೊಂಡು ನಡೆಸುವುದಾದರೆ ದೇಶ ಮುಂದೆ ಬರುವುದಿಲ್ಲ, ಗಾಂಧೀಜಿಯವರ ಕನಸು ನೆನಸಾಗುವುದಿಲ್ಲವೆಂದು ಹೇಳಬಹುದು. ಆದುದರಿಂದ ಶ್ರೀ ಜೋಯಿಸರು ತಂದಿರುವ ತಿದ್ದುಪಡಿಗಳನ್ನು ನಾನು ಅನುಮೋದಿಸುತ್ತೇನೆ. ಮಲ್ಟಿ ಪರ್‌ಪಸ್ ಕೋ-ಆಪರೇಟಿವ್ ಸೊಸೈಟಿ ಎಂಬ ಸಂಸ್ಥೆಗಳು ಅತ್ಯಾವಶ್ಯಕವಾಗಿ ಇರಬೇಕಾದ ಸಂಸ್ಥೆಗಳು. ಇವುಗಳನ್ನು ಪಂಚಾಯಿತಿಯವರೇ ಏರ್ಪಾಡು ಮಾಡಿಕೊಳ್ಳುವುದು ಅವಶ್ಯಕ. ಕಾರಣವೇನೆಂದರೆ, ಈ ಸೊಸೈಟಿಗಳಿಗೇ ಬೇರೆ ಸದಸ್ಯರು ಪಂಚಾಯಿತಿಗಳಿಗೇ ಬೇರೆ ಸದಸ್ಯರಿದ್ದರೆ ಅನೇಕ ಸಂದರ್ಭಗಳಲ್ಲಿ ಕಚ್ಚಾಟಕ್ಕೆ ಅವಕಾಶವಾಗುತ್ತದೆ, ಪಾರ್ಟಿಗಳಾಗುವುದಕ್ಕೆ ಅವಕಾಶವಾಗುತ್ತದೆ. ಯಾರು ಜನರ ವಿಶ್ವಾಸವನ್ನು ಗಳಿಸಿರುತ್ತಾರೋ ಅವರು ಪಂಚಾಯಿತಿ ಸದಸ್ಯರಾಗಿ ಬರಬೇಕು. ಇಂಥವರಿಗೆ ಸದವಕಾಶವನ್ನು ಕಲ್ಪಿಸಿಕೊಡಬೇಕು. ಈ ಎಲ್ಲ ದೃಷ್ಟಿಯಿಂದಲೂ ಈ ತಿದ್ದುಪಡಿಗಳನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಪಡಿಸಿ ನಾನು ಕುಳಿತುಕೊಳ್ಳುತ್ತೇನೆ.

Sri M. GOVINDA REDDY (Chitaldrug District—General).—Sir, I wish to say a few words on this amendment and oppose it. It is really a glorious thing to conjure up the vision of a Panchayet Raj. When we extend the theory and idea of Panchayet Raj it looks

(SRI M. GOVINDA REDDY.)

very appealing. But here we are forging a piece of legislation and we cannot bring sentiment into the argument and legislate in pursuance of the sentiment. With reference to the third point in that amendment, namely, the conferring of judicial powers on a Panchayet, let us consider how far this step is practicable and how far it is desirable to vest a Panchayet with judicial powers. We are having Panchayets and we cannot change the conditions of villages as they are now. Let us visualise the conditions of the Village Panchayet and if we should clothe the Panchayet with judicial powers, what will be the situation? Every minute cattle stray into the field and an offence of trespass is committed. In villages there are no lavatories and the people sit by the roadside for answering calls of nature. They are offending the Public Health Act. Water from the houses runs down and collects into pool and there stagnates. It is again an offence under the Public Health Act. A villager comes driving his cart home in the evening without light. There again he is committing an offence under the Police Act. When two people get into hot disputes they all use Sanskrit and they do not use Kannada. (Laughter) These are matters which occur every minute, every hour and would it be possible for us to administer punishment? If we should clothe the Panchayets with judicial powers I do not think anybody in the village will be spared. Apart from this aspect let us consider the praticability of having a Panchayet Court. We will be entrusting these powers to a body of persons and how are these people to regulate sitting in the Panchayet Courts? They are not officers. They will have their own avocations to follow. Is it possible to sit at regular hours? Who is to summon witnesses and execute the decision of the Panchayet Court? As it is, the Panchayets have very slender finances and they do not have enough finances to bear all the obligatory duties that are conferred on them according to this Act. They must maintain an officer, an executive authority, to execute the decision of the Panchayet Court, to see that a person when he does not pay fine is kept in custody. They must have whole-time officers and maintain them from Panchayet funds. Would it be possible for any panchayet in a village to execute decrees? Suppose a person who is charged does not pay fine; what is the position? Either it will have to be collected as an arrear of panchayet tax and a warrant of destraint has to be taken or the power of giving imprisonment has to be given to the officer. Would that be possible? These are practical aspects which, I am very sorry to find, my friend Janab Mahomed Hanief has not realised. It is impossible to put them into practice.

JANAB MAHOMED HANIEF.—Government will come to its aid.

SRI M. GOVINDA REDDY.—How can Government think of giving aid? I was a member of the sub-committee which went into the question of ascertaining whether panchayets could be clothed with judicial powers, and we examined the question. One State which had conferred this power, we learn, was withdrawing those powers because it was found impracticable, because it was found to give rise to so many complications and make the whole thing unworkable. I am not going into the question whether it is desirable to entrust the panchayets with judicial powers. It is a controversial point and nobody can say with his hand on his heart and with courage that it is desirable under the present circumstances to confer judicial powers on panchayets. It is a disputed point and I am not entering into it. I say purely from the practical point of view that it is not at all practicable to invest panchayets with judicial powers.

Then with regard to organising multi-purpose co-operative societies I will say a few words. There are certain things which should be made obligatory and there are certain others which should be encouraged to be done voluntarily. Let us take the instance of a child. If we compel the child to do a certain thing, for instance, exercise, it becomes a punishment and the child

will not do it. Supposing you encourage the child to play; it would do it and have the exercise willingly. On the same analogy we must encourage the village panchayets to voluntarily develop these social and also economic activities. We cannot compel them to have multi-purpose co-operative societies however desirable they may be. Supposing there are two parties in a village. One group organises one society and the other will see that it does not work. So it is not desirable at all to compel or make it obligatory on the part of the village panchayets to have multi-purpose co-operative societies and nobody has contended that the village panchayets should not organise co-operative societies. In fact it is very desirable that every panchayet should have co-operative societies and provide facilities to its residents for all their needs. They are all desirable but making a certain thing obligatory is altogether a different point.

With these words I oppose the amendment.

* ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಧ್ಯಕ್ಷರೇ, ಶ್ರೀ ಜೋಯಿಸ'ರವರು ತಂದಿರತಕ್ಕ ತಿದ್ದುಪಡಿಯಮೇಲೆ ಬಹಳ ಸುಲಭವಾಗಿ ಚರ್ಚೆ ಷುರುವಾಗಿ ಬಹಳ ಸ್ವಾರಸ್ಯವಾಗಿ ಕೊನೆಗೊಂಡಿತು. ಮೊದಲನೆಯದಾದ 25ನೆಯ ಕ್ಲಾಜು, "Rural Security including organisation of Village Guards" ಮತ್ತು ಎರಡನೆಯದಾದ, 26ನೆಯ ಕ್ಲಾಜು, 'organising rural development or multi-purpose co-operative societies'—ಇವೆರಡರ ವಿಷಯದಲ್ಲಿ ಮಾನ್ಯ ಸದಸ್ಯರು ಬಹಳ ಚೆನ್ನಾಗಿ, ವಿಶದವಾಗಿಯೇ ತಿಳಿಸಿದ್ದಾರೆ. ಆದರೆ ಇವನ್ನು 24ನೆಯ ಸೆಕ್ಷನ್ನಿನಲ್ಲಿ ಐಚ್ಛಿಕ ಕರ್ತವ್ಯಗಳಲ್ಲಿ ಈಗಾಗಲೇ ಸೇರಿಸಿದೆ. ಮಾನ್ಯ ಸದಸ್ಯರ ಉದ್ದೇಶ, ಇದು ಐಚ್ಛಿಕವಾಗಿರಕೂಡದು, ಕಡ್ಡಾಯವಾಗಿ ಮಾಡತಕ್ಕ ಕರ್ತವ್ಯಗಳಲ್ಲಿ ಸೇರಿರಬೇಕು ಎಂದು. ಮುಖ್ಯವಾಗಿ ಅವರ ಉದ್ದೇಶಕ್ಕೂ, ಮಾನ್ಯ ಸಭಾಸದಸ್ಯರ ಉದ್ದೇಶಕ್ಕೂ ಸರ್ಕಾರದ ಉದ್ದೇಶಕ್ಕೂ ಏನೂ ವ್ಯತ್ಯಾಸವಿಲ್ಲ. ಕಡ್ಡಾಯವಾಗಿ ಮಾಡಬೇಕೆಂದರೆ ಹಣವಿರಲಿ, ಇಲ್ಲದಿರಲಿ ಮಾಡಿಯೇ ಮಾಡಬೇಕು. ಅದಕ್ಕೆ ಬದಲು ಐಚ್ಛಿಕವೆಂದಿದ್ದರೆ ಯಾವಾಗ ಹಣ ಸಿಕ್ಕುತ್ತದೆಯೋ ಆಗ ಒಗ್ಗಟ್ಟಾಗಿ ಸೇರಿ ಮಾಡಬಹುದು. ವ್ಯಾಪಾರ ದೃಷ್ಟಿಯಿಂದ ಮಲ್ಟಿಪರ್ಪಸ್' ಸೊಸೈಟಿ ಏರ್ಪಡಿಸುವುದಕ್ಕೆ ಯಾವಾಗ ಅನುಕೂಲಗಳಿವೆ, ಸೌಕರ್ಯಗಳಿವೆ ಎಂಬುದನ್ನು ಯೋಚನೆಮಾಡಿ ಮಾಡುವುದಕ್ಕೆ ಪಂಚಾಯಿತಿಗಳವರ ವಿವೇಚನೆಗೆ ಬಿಡುವುದು ಒಳ್ಳೆಯದೇ ಅಲ್ಲವೇ ಅನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಅದಿಲ್ಲದೆ ಈ ಕರ್ತವ್ಯವನ್ನು obligatory ಯಾಗಿ ಮಾಡಿ ಈ ಕಾನೂನು ಜಾರಿಗೆ ಬಂದಕೂಡಲೆ ದೇಶದಲ್ಲಿರುವ ಎಲ್ಲಾ ಪಂಚಾಯ್ತಿಗಳವರೂ ಮಲ್ಟಿಪರ್ಪಸ್' ಸೊಸೈಟಿ ಏರ್ಪಡಿಸಬೇಕು, village guards ಇಡಬೇಕು ಎನ್ನುವುದಾದರೆ ಅದಕ್ಕೆ ಸಾಕಷ್ಟು ಧನಸಹಾಯ, ಜನಸಹಾಯ ಸಿಕ್ಕುತ್ತದೆಯೇ ಎನ್ನುವುದನ್ನೂ ಯೋಚನೆಮಾಡಬೇಕಾಗಿದೆ. ಕಾರ್ಯದೃಷ್ಟಿಯಿಂದ ಹೇಳುವುದಾದರೆ, ಕಾನೂನು ಜಾರಿಗೆ ಬಂದ ತಕ್ಷಣ ಎಲ್ಲಾ ಕಡೆಯಲ್ಲೂ ಏರ್ಪಾಡು ಮಾಡುವುದು ಕಷ್ಟ; ಈಗಲೇ ಕಡ್ಡಾಯವಾಗಿ ಮಾಡಿದರೆ ಎಲ್ಲರೂ ತೊಂದರೆ ಅನುಭವಿಸಬೇಕಾಗುತ್ತದೆ. ಈ ಕಾರಣದಿಂದ ಈ ಕರ್ತವ್ಯಗಳನ್ನು obligatoryಯಾಗಿ ಮಾಡುವುದು ಸೂಕ್ತವಾಗಿ ಕಾಣುವುದಿಲ್ಲ. ಅದಕ್ಕೆ ಬದಲು ಐಚ್ಛಿಕ ಕರ್ತವ್ಯವಾಗಿ ಸೇರಿಸಿ ಧನಸಹಾಯವಿದ್ದು ಅನುಕೂಲವಾದಾಗ ಪಂಚಾಯ್ತಿಯವರು ಮಾಡಬಹುದು. ಅದಕ್ಕೆ ಸರ್ಕಾರದವರು ಬೇಕಾದ ಸಹಾಯ ಮತ್ತು ಉತ್ತೇಜನ ಕೊಟ್ಟೇ ಕೊಡುತ್ತಾರೆ, ಎಂಬ ರೀತಿಯಲ್ಲಿದ್ದರೆ ಪಂಚಾಯ್ತಿಯವರೇ ತಾವೇ ತಾವಾಗಿ—ಮುಂದೆ ಬಂದು ಇನ್ನೂ ಹೆಚ್ಚಿಗೆ ಉಮೇದಿನಿಂದ ಕೆಲಸಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಷುರುವಿನಲ್ಲೇ ಕಡ್ಡಾಯವಾಗಿಡುವುದು ಸೂಕ್ತವಲ್ಲವೆಂದು ನಾನು ಬಹಳ ವಿನಯದಿಂದ ಶ್ರೀ ಜೋಯಿಸ್‌ರವರಿಗೆ ತಿಳಿಸಿ ಅವರು ಈ ತಿದ್ದುಪಡಿಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಈ 27ನೆಯ ಕ್ಲಾಜಿನಲ್ಲಿ, ಬಹಳ ಕಠಿಣತರವಾದ ಸಮಸ್ಯೆಗಳನ್ನೆಲ್ಲಾ ಪರಿಹಾರ ಮಾಡಬೇಕಾಗಿದೆ. ಇದನ್ನು ನೋಡಿದರೇ ಬಹಳ ಭಯಭೀತಿಗಳು ಬಂದುಬಿಡುವಹಾಗಿದೆ. ಈಗಾಗಲೇ ಮಾತನಾಡಿರತಕ್ಕ ಮಾನ್ಯ ಸದಸ್ಯರೆಲ್ಲರೂ, ಈ ಪ್ರಕಾರ ಕಾನೂನನ್ನು ಜಾರಿಗೆ ತಂದಿದ್ದೇ ಆದರೆ ಮುಂದಕ್ಕೆ ಇದರಿಂದ ಎಂತೆಂಥ ಪರಿಣಾಮಗಳುಂಟಾಗಬಹುದು, ಎಂತೆಂಥ ಕಷ್ಟಗಳು ಸಂಭವಿಸಬಹುದು, ಜನರಿಗೆ ಕಾರ್ಯತಃ ಇದನ್ನು ನಡೆಸುವಾಗ ಏನೇನು ತೊಂದರೆ, ಕಷ್ಟನಷ್ಟಗಳುಂಟಾಗಬಹುದೆಂಬುದನ್ನು ಅನೇಕ ಉದಾಹರಣೆಗಳ ಮೂಲಕ ಸಮರ್ಥನೆಮಾಡಿ ಬಹಳ ಚೆನ್ನಾಗಿ ತಿಳಿಸಿದ್ದಾರೆ. ಈ ವಿಚಾರಗಳೆಲ್ಲ ಮುಖ್ಯವಾಗಿ ಜನರ ನೀತಿ, ನಡತೆ ಮತ್ತು ವಿದ್ಯಾರ್ಹತೆ ಮೇಲೆ ಹೋಗತಕ್ಕದ್ದಾಗಿರುತ್ತೆಂದು ಎಲ್ಲರೂ ಒತ್ತಿ ಹೇಳಿದ್ದಾರೆ. ಆದರೆ ಪಂಚಾಯಿತಿ ರಾಜ್ಯಸ್ಥಾಪನೆಯಾದರೆ ಅದರಿಂದ ದೇಶಕ್ಕೆ ಎಂತಹ ಶಾಂತಿಸಂಧಾನಗಳು ನೆಲೆಸುತ್ತವೆಂದು ಹೇಳತಕ್ಕದ್ದು ಎಲ್ಲರಿಗೂ ಅಪೀಲಾಗಬಹುದು. ಆದರೆ ಇದು ಅಷ್ಟು ಶೀಘ್ರವಾಗಿ ಮತ್ತು ಸುಲಭವಾಗಿ ಆಗತಕ್ಕ ಬದುಕಲ್ಲ. ಕೆಲವು ಮಾನ್ಯ ಸದಸ್ಯರು, ಬ್ರಿಟಿಷರು ನಮ್ಮ ದೇಶವನ್ನಾಳುತ್ತಿದ್ದಾಗ, ನಮಗೆ ಸ್ವರಾಜ್ಯವನ್ನು ಕೊಡಬೇಕೆಂದು ಕೇಳಿದ ವೇಳೆಯಲ್ಲಿ, ನಿಮಗೆ ಇನ್ನೂ ರಾಜ್ಯಭಾರಮಾಡುವ ಶಕ್ತಿ ಮತ್ತು ದಕ್ಷತೆಗಳಿಲ್ಲವೆಂದು ಹೇಳುತ್ತಿದ್ದರು. ಹಾಗೆ ಅವರು ನಮ್ಮ ದೇಶವನ್ನು ಬಿಟ್ಟುಹೋದ ಕೂಡಲೇ ನಾವು ಇಲ್ಲಿ ಈಗ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೇ ಎಂಬುದಾಗಿ ತಿಳಿಸಿದ್ದಾರೆ. ಆದರೆ ಬ್ರಿಟಿಷರು ಅಧಿಕಾರ ಬಿಟ್ಟುಕೊಡಲು ಎಷ್ಟು ವರ್ಷಕಾಲ ಸತಾಯಿಸಿ ಬಿಟ್ಟುಕೊಟ್ಟರೆಂಬುದನ್ನು ಅವರು ಮರೆತಿದ್ದಾರೆ. ಸುಮಾರು 55 ವರ್ಷಗಳಕಾಲ ಬಹಳ ಕಷ್ಟಪಟ್ಟು ಸ್ವಾತಂತ್ರ್ಯದ ಬಗ್ಗೆ ಹೋರಾಟ ಮಾಡಿದ್ದರ ಫಲವಾಗಿ ಕೊನೆಗೆ ಅವರು ನಮ್ಮ ದೇಶವನ್ನು ಬಿಟ್ಟು ಹೋಗಬೇಕಾಗಿ ಬಂತು. ಹಾಗೂ ಆಗದಮೇಲೆ ಈಗ ನಮ್ಮ ಡೊಮಿನಿಯನ್ ಪ್ರದೇಶದಲ್ಲಿರತಕ್ಕ ಪ್ರತಿಯೊಂದು ದೇಶಕ್ಕೂ ಸ್ವಾತಂತ್ರ್ಯ ಲಭಿಸಿದೆಯೇನು? ಇಲ್ಲ. ಅನೇಕ

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.)

ಸಣ್ಣಪುಟ್ಟ ರಾಜ್ಯಗಳ ಸ್ವಾತಂತ್ರವೆಲ್ಲಾ ಕೇಂದ್ರದಲ್ಲಿ ಕೇಂದ್ರೀಕೃತವಾಗಿದೆ. ಮುಂದೆ ಅವುಗಳು ಒಂದು ನಿಯಮಿತ ಮಟ್ಟಕ್ಕೆ ಬಂದನಂತರ ಅವುಗಳಿಗೂ ಅದು ಲಭಿಸಲೇಲಭಿಸುತ್ತದೆ. ಈಗ ಹೊಸದಾಗಿ ಮೊದಲನೆಯ ಸಾರ್ತಿಗೆ ಒಂದು ರಾಜ್ಯಾಂಗ ಶಾಸನವನ್ನು ರಚಿಸಲಾಗಿದೆ. ಆದರೆ ಅದು ಸರ್ವರಿಗೂ ಸಮ್ಮತವಾಗಿ ಯಾವ ಲೋಪದೋಷಗಳೂ ಇಲ್ಲವೆಂದು ಭಾವಿಸಿ ಮಾಡಲಾಗಿತ್ತು. ಆದರೆ ಅಂಥಾ ರಾಜ್ಯಾಂಗ ವಿಧಿಯಲ್ಲೂ ಕೂಡ, ಅನೇಕ ಲೋಪದೋಷಗಳಿರತಕ್ಕದ್ದು ಇತ್ತೀಚೆಗೆ ಕಾರ್ಯತಃ ಕಂಡುಬಂದಿದ್ದರಿಂದ, ಅನೇಕ ಕೋರ್ಟುಗಳಲ್ಲಿ ತೀರ್ಪು ಮೂಲಕ ಜನರಿಗೆ ಗೋಚರವಾಗಿ, ಈಗ ಅಂಥ ಲೋಪದೋಷಗಳನ್ನು ಸರಿಪಡಿಸಲು ಅದಕ್ಕೆ ಅನೇಕ ತಿದ್ದುಪಡಿಗಳನ್ನು ತಂದಿದ್ದಾರೆ. ಹೀಗೆ ಜನರು ಹೆಚ್ಚುಹೆಚ್ಚು ವಿದ್ಯಾವಂತರಾಗುತ್ತ ಬಂದಹಾಗೆಲ್ಲಾ ಕಾನೂನು ಬದಲಾವಣೆ ಮತ್ತು ಅದರಲ್ಲಿರಬೇಕಾದ ಲೋಪದೋಷಗಳನ್ನು ತಿದ್ದಲು ಒತ್ತಾಯ ಬಂದೇಬರುತ್ತದೆ. ಇದರ ಬಗ್ಗೆ ಸಹ ಮುಂದೆ ಜನರು ಹೆಚ್ಚು ವಿದ್ಯಾವಂತರಾಗಿ ದಕ್ಷತೆಪಡೆದ ನಂತರ ಈರೀತಿ ಮಾಡೇಮಾಡಬೇಕಾಗುತ್ತದೆ. ಆದರೆ ನಮಗೀಗ ಸ್ವಾತಂತ್ರ್ಯ ಲಭಿಸಿದೆಯೆಂದು ಏಕ್‌ದಂ ಎಲ್ಲರಿಗೂ, ಅವರಿಗೆ ದಕ್ಷತೆ ಇರಲಿ, ಇಲ್ಲದೆಇರಲಿ ಸ್ವಾತಂತ್ರ್ಯ ಕೊಟ್ಟರೆ ಅನಾಹುತವಾಗಿ ಹೋದೀತೆಂದು, ಹಾಗೆ ಮಾಡದೆ ಕೇಂದ್ರದವರೇ ಅದನ್ನೆಲ್ಲಾ ತಮ್ಮಲ್ಲಿ ಕೇಂದ್ರೀಕೃತ ಮಾಡಿಕೊಂಡಿದ್ದಾರೆ. ಇದೆಲ್ಲಾ ನಿಧಾನವಾಗಿ ಮಾಡಬೇಕಾದ ವಿಚಾರಗಳು. ಹಾಗಿಲ್ಲದೆ ನಮ್ಮ ಹುಡುಗ ಮಾಧ್ಯಮಿಕ ಶಾಲೆಯ ಪರೀಕ್ಷೆಯಲ್ಲಿ ನೂರಕ್ಕೆ ನೂರರಷ್ಟು ನಂಬರ್ ಪಡೆದು ಪರೀಕ್ಷೆಯಲ್ಲಿ ಬಹಳ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿ ಬಹಳ ಜಾಣನಾಗಿದ್ದಾನೆಂದರೆ, ಆತನನ್ನು ಏಕ್‌ದಂ ತೆಗೆದುಕೊಂಡುಹೋಗಿ ಬಿ.ಎ., ಪರೀಕ್ಷೆಗೆ ಕೂಡಿಸಿದರೆ, ಆತನು ತೇರ್ಗಡೆಯಾಗಲಿಕ್ಕಾಗುತ್ತದೆಯೇ ? ಆದಕಾರಣ ಕ್ರಮಕ್ರಮವಾಗಿ ಮುಂದುವರಿಯಬೇಕೇ 'ಶಿವಾಯಿ ಏಕ್‌ದಂ ಹೋಗತಕ್ಕದ್ದು ಅಪಾಯಕರ. ನಾನು ಹೀಗೆ ಹೇಳಿದಮಾತ್ರಕ್ಕೆ ನಮ್ಮ ದೇಶದಲ್ಲಿ ದಕ್ಷರೂ, ವಿದ್ಯಾವಂತರೂ ಇಲ್ಲವೆಂಬುದಾಗಿ ತಾವು ಭಾವಿಸಬಾರದು. ಇದ್ದಾರೆ. ಆದರೆ ಅಪರೂಪ. ಇಂದು ದೇಶದಲ್ಲಿರತಕ್ಕ ಬುದ್ಧಿವಂತರೆಲ್ಲರೂ ಸೇರಿಕೊಂಡೇ ಒಗ್ಗಟ್ಟಾಗಿ ಈ ಕಾನೂನುಗಳನ್ನೆಲ್ಲಾ ದೇಶ ವರ್ತಮಾನಗಳಿಗೆ ಸರಿಹೋಲುವಂತೆ ನೋಡಿ ಮಾಡಿದ್ದಾರೆ. ಆದರೆ ದೇಶದಲ್ಲಿರತಕ್ಕ ಜನಸಾಮಾನ್ಯರಿಗೆ ಇನ್ನೂ ಅಷ್ಟು ಹೆಚ್ಚಿನ ವಿದ್ಯಾರ್ಹತೆಗಳು ದೊರೆತಿಲ್ಲ. ಹಾಗಿರುವ ಕಾರಣ ಈಗ ಅವರಿಗೆ ಕಾನೂನು ಪರಿಶ್ರಮವಿಲ್ಲದ ವೇಳೆಯಲ್ಲಿ, ಈ 100 ರೂಪಾಯಿಗಳೊಳಗಿರತಕ್ಕ ದಾವಾ ಕೇಸುಗಳು, ಕ್ಯಾಟಲ್ ಟ್ರೆಸ್‌ಪಾಸ್ ಆಕ್ಟ್ ಪ್ರಕಾರ ಬರತಕ್ಕ ಕೇಸುಗಳನ್ನು ನಡೆಸುವುದು ಹೋಗಿ ಪಂಚಾಯಿತಿಯೇ ಟ್ರೆಸ್ ಪಾಸಾಗತಕ್ಕ ಸಂಭವಗಳು ಹೆಚ್ಚಾಗಿವೆ. ಇದರಿಂದ ಬಹಳ ಕಷ್ಟವಾಗುತ್ತದೆ. ಪಂಚಾಯಿತಿಗಳಿಗೆ ಈ ಅಧಿಕಾರವನ್ನೇನಾದರೂ ಸಧ್ಯದ ಪರಿಸ್ಥಿತಿಯಲ್ಲಿ ಕೊಟ್ಟುಬಿಟ್ಟರೆ ಜನರು ಹೇಗೂ ಕೋರ್ಟಿಗೆ ಹೋಗಬೇಕಾಗಿಲ್ಲವೆಂದು ದಿನ ಬೆಳಗಾದರೆ ಒಂದಲ್ಲ ಒಂದು ಕೇಸನ್ನು ತಂದುಹಾಕಿ ಪ್ರತಿಕ್ಷಣದಲ್ಲೂ ಪಂಚಾಯಿತಿ ಬದುಕೆಲ್ಲ ಬರಿ ಪಂಚಾಯಿತಿಯಲ್ಲೆ ಮುಕ್ತಾಯವಾಗುವಂತಾಗುತ್ತದೆ. ಇಂಥಾ ಕೇಸುಗಳ ವಿಚಾರಣೆಗೆ ಮುಂದೆ ಲಾಯರುಗಳೂ ಸಹ ಹಾಜರಾಗಬಹುದೋ ಏನೋ. ಆದರೆ ಈಗ ಮದ್ರಾಸ್ ಪ್ರಾಂತ್ಯದಲ್ಲಿ ಜಿಲ್ಲಾ ಬೋರ್ಡು ಮತ್ತು ಗ್ರಾಮಪಂಚಾಯಿತಿಗಳ ಕೇಸುಗಳಲ್ಲಿ ಲಾಯರುಗಳು ಹಾಜರಾಗುತ್ತಿರುವಂತಿದೆ. ಆದರೆ ಈಗ ತಾನೆ ಇದನ್ನು ಹೊಸದಾಗಿ ಕಾನೂನು ಮಾಡಿರುವುದರಿಂದ ಇದರಲ್ಲಿ ಕಾರ್ಯತಃ ಏನೇನು ಲೋಪದೋಷಗಳಿರುತ್ತವೆಂಬುದನ್ನು ಈಗಲೇ ನಿರ್ಧರಿಸಿ ಅದಷ್ಟು ಅವುಗಳನ್ನು ತಡೆಗಟ್ಟಬೇಕೇ ಶಿವಾಯಿ, ಜಾರಿಗೆ ಕೊಟ್ಟು ಅವುಗಳಿಗೆ ಪದೇಪದೇ ತಿದ್ದುಪಡಿಗಳನ್ನು ತರತಕ್ಕದ್ದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಜನರು ವಿದ್ಯಾವಂತರಾಗಿ ಅಭಿವೃದ್ಧಿಗೆ ಬಂದರೆ ನಮಗೆ ಬಹಳ ಸಂತೋಷ. ಹಾಗೆ ಅವರು ಅಭಿವೃದ್ಧಿಗೆ ಬರಬೇಕೆಂಬುದೇ ನಮ್ಮೆಲ್ಲರ ಆಸೆಯೂ ಆಗಿದೆ. ಹಾಗೆ ಅವರು ಬುದ್ಧಿವಂತರಾದ ಮೇಲೆ ಅವರಿಗೆ ದೊರೆಯತಕ್ಕ ಸ್ಥಾನಮಾನಗಳು ಬಂದೇಬರುತ್ತವೆ. ಅದರಲ್ಲಿ ಯಾರಿಗೂ ಯಾವ ಸಂಶಯವೂ ಇರಬೇಕಾಗಿಲ್ಲ. ಆದರೆ ಇದು ಎಕ್ಸಪೆರಿಮೆಂಟಲ್ ಸ್ಟೇಜ್ ಆದ್ದರಿಂದ, ಜನರು ಇನ್ನೂ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾವಂತರಾಗುವತನಕ ಈ ತಿದ್ದುಪಡಿಗಳನ್ನು ಮಾನ್ಯ ಸೂಚಕರಾದ ಶ್ರೀಮಾನ್ ಜೋಯಿಸರು ವಾಪಸ್ಸು ತೆಗೆದುಕೊಳ್ಳುವುದು ಉತ್ತಮವಾದುದೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಆದರೆ ಶ್ರೀಮಾನ್ ಜೋಯಿಸರು ಕೇಳಿರತಕ್ಕ ವಿಚಾರಗಳು ಬಹಳ ಒಳ್ಳೆಯವೆ. ಆದಾಗ್ಯೂ ನಾವು ನಿಧಾನವಾಗಿ ಮುಂದುವರಿಯಬೇಕಾದ್ದು ಈ ಸಂದರ್ಭದಲ್ಲಿ ಉಚಿತವಾಗಿ ತೋರುತ್ತಿದೆ. ಆದಕಾರಣ ಅವರು ಈ ತಿದ್ದುಪಡಿಗಳನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಎಂ. ಎಸ್. ಜೋಯಿಸರು.—ನಾನೇನೋ ಇದನ್ನು ವಾಪಸ್ಸು ತೆಗೆದುಕೊಳ್ಳಬಹುದು. ಒಪ್ಪುತ್ತೇನೆ. ಆದರೆ ನನ್ನ ಜೊತೆಗೆ ಶ್ರೀ ಮಹಂತದೇವರೂ ಸಹ ಇರುತ್ತಾರೆ. ಆದಕಾರಣ ನಾನು ಇದನ್ನು ವಾಪಸ್ಸು ಪಡೆದರೆ, ಅವರೂಸಹ ಇದನ್ನು ವಾಪಸ್ಸು ಪಡೆದಂತಾಗುತ್ತದೆಯೇ ಎಂಬ ಅಂಶವನ್ನೂ ಸಹ ತಾವು ಸ್ವಲ್ಪ ಆಲೋಚನೆಮಾಡಿ ನೋಡಬೇಕಾಗಿದೆ.

ಅಧ್ಯಕ್ಷರು.—ಸೂಚಕರು ತಮ್ಮ ತಿದ್ದುಪಡಿಯನ್ನು ತೆಗೆದುಕೊಳ್ಳಲು ಸಭೆಯವರ ಅನುಮತಿ ಇದೆಯೇ ? (ಸಭಿಕರೆಲ್ಲರೂ ಆಗಬಹುದೆಂದು ಸೂಚನೆ ಮಾಡಿದರು.)

The Amendment was, by leave of the House, withdrawn.

Mr. SPEAKER.—Next Amendment. Sri T. Madiah Gowda.

*ಶ್ರೀ ಟಿ. ಮಾದಯ್ಯಗೌಡರು.—ನನ್ನ ತಿದ್ದುಪಡಿಯೂ ಸಹ ಸ್ವಲ್ಪ ಹೆಚ್ಚುಕಡಿಮೆ ಇದೇ ರೀತಿಯಾಗಿರುವುದರಿಂದ ಅಂದರೆ, ರೀಡಿಂಗ್ ರೂಮು, ಲೈಬ್ರೆರಿ ಇತ್ಯಾದಿಗಳ ಬಗ್ಗೆ ಅವರಿಗೆ ಅಧಿಕಾರ ಕೊಡಬೇಕೆಂಬುದಾಗಿ ನನ್ನ ತಿದ್ದುಪಡಿಯಿತ್ತು. ಇದು ಬಹಳ ಮುಖ್ಯವಾದದ್ದು. ಶ್ರೀ ಜೋಯಿಸರ ತಿದ್ದುಪಡಿಯನ್ನೇ ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಬಂದಿರುವಕಾರಣ ನಾನೂ ಸಹ ನನ್ನ ತಿದ್ದುಪಡಿಯನ್ನು ಮಂಡಿಸುವುದಿಲ್ಲ.

Mr. SPEAKER.—The question is:

"That Clause 23 stand part of the Bill"

The motion was adopted.

Clause 23 was added to the Bill.

Mr. SPEAKER.—Clause—24. Because Sri T. Madiah Gowda has not moved his amendment to clause 23, I take it that he is not moving this consequential amendment also. The Hon'ble Minister has an amendment.

***The Hon'ble Sri R. CHENNIGA-RAMIAH.**—Sir, I beg to move—

—" That in item No. 7 the words ' and construction and maintenance of slaughter houses " shall be omitted and items numbers (8), (9), (10) (11), (12), (13), (14) shall be renumbered as items numbers (9), (10), (11), (12), (13), (14), (15) respectively. Before item No. (9) so renumbered the following item shall be inserted as item No. (8).

" 8. Construction and maintenance of slaughter houses ".

ಇದರಲ್ಲಿ ಹೆಚ್ಚಿನ ವಿಚಾರವೇನೂ ಇಲ್ಲ. Cattle breeding, medical treatment ಇವೆಲ್ಲಾ ಇರುವುದರ ಜೊತೆಯಲ್ಲಿ slaughter houses ಎಂದಿರುವುದು ಸರಿಯಲ್ಲ, ಅವಲಕ್ಷಣ ಎಂದು ಸೆಂಟಿಮೆಂಟಲ್ ಆಬ್ಜೆಕ್ಷನ್ ಕೆಲವು ಕಡೆಯಿಂದ ಬಂತು. ಆದ್ದರಿಂದ slaughter houses ಬೇರೆ ಐಟಂ ಮಾಡಬೇಕೆಂದು ತಿದ್ದುಪಡಿ ತಂದಿದೆ. ಇದು ಅಕ್ಷೇಪಣೀಯವಲ್ಲದ್ದರಿಂದ ದಯವಿಟ್ಟು ಒಪ್ಪಿಗೆ ಕೊಡಬೇಕು.

Mr. SPEAKER.—The question is :—

" That in Item No. 7 the words ' and construction and maintenance of slaughter houses ' shall be omitted and items numbers (8), (9), (10), (11), (12), (13), (14) shall be renumbered as items, numbers (9), (10), (11), (12), (13), (14), (15) respectively. Before item No. (9) so renumbered the following item shall be inserted as item No. 8 —

' 8. Construction and maintenance of slaughter houses '.

The motion was adopted.

Mr. SPEAKER.—Sri Jois may move his amendment.

Sri M. N. JOIS.—As my amendment is consequential, I do not move it.

Mr. SPEAKER.—Sri T. Madiah Gowda has an amendment.

***Sri T. MADIAH GOWDA.**—Sir, I beg to move :

" That in item (14) after the word ' organising' the words ' supervising and controlling ' shall be added.

ಈಗ ಇರುವುದರ ಪ್ರಕಾರ ಕೇವಲ 'organising ಎಂದು ಮಾತ್ರ ಇದೆ. Organise ಮಾಡಿದ ಮೇಲೆ ಸೂಪರ್‌ವೈಸ್ ಮಾಡುವ ಮತ್ತು ಕಂಟ್ರೋಲ್ ಮಾಡುವ ಅಧಿಕಾರ ಕೂಡ ಆರ್ಗನೈಜ್ ಮಾಡುವಂಥ ಸಂಸ್ಥೆಗೆ ಇರತಕ್ಕದ್ದು ಸೂಕ್ತ; ಆರ್ಗನೈಜ್ ಮಾಡಿ ಅಲ್ಲಿಗೇ ಬಿಡತಕ್ಕದ್ದು ಸರಿಯಲ್ಲ. ಅದು ಚೆನ್ನಾಗಿ ನಡೆಯಬೇಕು, ಆದ್ದರಿಂದ ಅದರ ಮೇಲೆ ಉಸ್ತುವಾರಿ ನೋಡಿಕೊಳ್ಳಲು, ಅದರ ಕೆಲಸ ದಕ್ಷತೆಯಿಂದ ನಡೆಯಲು ಅಧಿಕಾರವಿರಬೇಕು. ಆ ಒಂದು ದೃಷ್ಟಿಯಿಂದ ಯಾವ ಬಾಧಕವೂ ಇಲ್ಲದೇ ಇರತಕ್ಕಂಥ ಈ ತಿದ್ದುಪಡಿಯನ್ನು ತಂದಿದೆ. ಇದನ್ನು ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Amendment moved :

" That in item (14) after the word ' organising ' the words ' supervising and controlling ' shall be added."

The Hon'ble Sri R. CHENNIGA-RAMIAH.—I accept the amendment, Sir.

Mr. SPEAKER.—The question is :

" That in item (14) after the word ' organising ' the words ' supervising and controlling ' shall be added."

The motion was adopted.

Mr. SPEAKER.—Sri L. Siddappa has tabled an amendment.

Sri L. SIDDAPPA.—I am not moving my amendment.

Mr. SPEAKER.—Sri T. Ramachar may move his amendment.

Sri T. RAMACHAR.—Sir, the amendment is for including the establishment and maintenance of warehouses in each village. I beg to move :

" That after item 15 the following shall be added as item 16 ;

' to establish and maintain warehouses'."

Since the Warehouses Act is passed, I think it is absolutely necessary to have warehouses in each village. I therefore suggest that the amendment may be accepted.

Mr. SPEAKER.—Amendment moved:

" That after item 15 the following shall be added as item 16 :

' to establish and maintain warehouses'."

The Hon'ble Sri R. CHENNIGA-RAMIAH.—I accept the amendment, Sir.

Mr. SPEAKER.—The question is :

" That after item 15 the following shall be added as item 16 :

' to establish and maintain warehouses'."

The motion was adopted.

Mr. SPEAKER.—The question is :

" That Clause 24, as amended, stand part of the Bill."

The motion was adopted.

Clauses 24, as amended, was added to the Bill.

Mr. SPEAKER.—Clauses 25 and 26. The question is:

"That Clauses 25 and 26 stand part of the Bill."

The motion was adopted.

Clauses 25 and 26 were added to the Bill.

Mr. SPEAKER.—Clause 27.

Sri T. RAMACHAR (Kolar District General,—Sir, I beg to move:

"That in line 6 for the words 'provided that' the word 'and' may be substituted.

I feel that the words 'provided that' will not properly fit in with the context. I therefore suggest that the word 'and' may be substituted for the words 'provided that.' Clause 27 grants some powers for each panchayet to appoint committees to perform certain functions and as such I suggest 'and' may be substituted for 'provided that.'

Mr. SPEAKER.—Amendment moved:

"That in line 6 for the words 'provided that' the word 'and' may be substituted.

The Hon'ble Sri R. CHENNIGARAMIAH.—I accept the amendment.

Mr. SPEAKER.—The question is:

"That in line 6 for the words 'provided that' the word 'and' may be substituted."

The motion was adopted.

Sri L. SIDDAPPA (Shimoga District-General).—Sir, I beg to move:

"That in Clause 27 the figure '30' may be deleted."

Clause 27 reads as follows:

"A panchayet shall have power to do all acts necessary for and incidental to the carrying out of the functions entrusted or delegated to it, and in particular and without prejudice to the foregoing power, to exercise the powers specified in sections 28, 29, 30, 31 and 32...."

Section 30 deals with the power given to Government and not does not deal with power to panchayet. All other clauses except clause 30 deal with the powers conferred on the panchayet. So I suggest that the figure 30 may be deleted.

Mr. SPEAKER.—Amendment moved:

"That in Clause 27 the figure 30 may be deleted."

The Hon'ble Sri K. T. BHASHYAM.—Sir, there is some misapprehension about this. The power of the Government to prohibit the erection of buildings is there, no doubt. But who is to initiate the proceedings? The Panchayet will have to initiate the proceedings. The Chairman of the Village Panchayet will have to be invested with the power under the Rules. That is why we have to bring in clause 30 under clause 27. If we do not bring it there, the position will be that at every stage the Government will have to initiate the proceedings. We prohibit the construction of buildings and allow the chairman of the panchayet to take note of any violation and initiate the proceedings. That is why 30 is shown in clause 27. It is not superfluous nor is it without meaning. Supposing I accept the amendment. Tomorrow the chairman of a panchayet cannot initiate the proceedings. I suggest that Sri Siddappa should not press this amendment.

Sri L. SIDDAPPA.—The specific power to prohibit the construction of buildings is given under this clause. The power to initiate is power to prohibit. You may make provision under the Rules. You are giving power under Clause 30 to the Government and not to the panchayet.

The Hon'ble Sri K. T. BHASHYAM.—The rule will be framed in respect of Section 30 and the Chairman of any Village Panchayet will be authorized to initiate proceedings, that is, do an act under Section 30 and that is why we say:

"A Panchayet shall have power to do all acts necessary for and incidental to the carrying out of the functions entrusted to it......and to exercise the powers spceifid in Section 30."

Otherwise, he will not have the power even to initiate proceedings. That is why Section 30 is put in.

Sri L. SIDDAPPA.—I seek the permission of the House to withdraw my amendment.

The amendment was, by leave of the House, withdrawn.

Mr. SPEAKER.—The question is :

"That Clause 27, as amended, stand part of the Bill."

The motion was adopted.

Clause 27, as amended, was added to the Bill.

Mr. SPEAKER.—Clause 28. The question is :

"That Clause 28 stand part of the Bill."

The motion was adopted.

Clause 28 was added to the Bill.

Mr. SPEAKER.—Clause 29.

Sri T. RAMACHAR (Kolar District—General).—Sir, I beg to move :

"That in line 6 of sub-clause (1) for the words 'two months' the words 'one month' shall be substituted."

The reason is this. If refusal to grant license is not communicated within two months, the applicant may deem that license has been granted and so begin his construction. In the Municipalities Act, a period of only one month is provided for and in a village, two months' period is too long a time to wait for the grant of license and as such a period of one month is quite ample for the grant of license. The applicant may wait and assume that license has been granted if no refusal is communicated within one month.

Mr. SPEAKER.—Amendment moved:

"That in line 6 of sub-clause (1) for the words 'two months' the words 'one month' shall be substituted.",

*__Sri T. MADIAH GOWDA.__—My amendment also is the same. I beg to move :

"That in clause (1) for the words 'two months' the words 'one month' shall be substituted."

ಒಂದು ತಿಂಗಳು ಅವಧಿಯೊಳಗಾಗಿ ಗ್ರಾಮಪಂಚಾಯಿತಿಯವರು ಲೈಸೆನ್ಸ್ ಕೊಡದಿದ್ದರೆ ಯಾರು ಲೈಸೆನ್ಸ್ ಕೇಳಿರುತ್ತಾರೋ ಅವರು ಮನೆ ಕಟ್ಟಿಕೊಳ್ಳಬಹುದು ಎಂದು ಗ್ರಾಮಪಂಚಾಯಿತಿ ಕಾನೂನಿನಲ್ಲಿ ಇದುವರೆಗೂ ಇತ್ತು. ಅದು ಜನಗಳಿಗೆ ಉಂಟುಮಾಡಿಕೊಟ್ಟ ಒಂದು ಸೌಕರ್ಯ. ಇನ್ನುಮುಂದೆ ಗ್ರಾಮಪಂಚಾಯಿತಿ ಆಡಳಿತ ಇನ್ನೂ ಹೆಚ್ಚು ದಕ್ಷತೆಯಿಂದ ನಡೆಯಬೇಕು ; ಪಂಚಾಯಿತಿ ಆಡಳಿತಕ್ಕೆ ಒಬ್ಬ ಸಂಬಳ ತೆಗೆದುಕೊಳ್ಳತಕ್ಕ ಕಾರ್ಯದರ್ಶಿ ಇರಬೇಕು ; ತಪ್ಪದೇ ತಿಂಗಳು ತಿಂಗಳಿಗೆ ಮೀಟಿಂಗ್ ಆಗಬೇಕು ಎಂಬುದಾಗಿ ಅನೇಕ ಹೊಸ ವಿಧಾನಗಳನ್ನೆಲ್ಲಾ ಮಾಡಿರತಕ್ಕ ಈ ಕಾಲದಲ್ಲಿ ಮನೆ ಕಟ್ಟಿಕೊಳ್ಳಲು ಆತ ಎರಡುತಿಂಗಳು ಲೈಸೆನ್ಸ್‌ಗೆ ಕಾಯಲಿ ಎಂಬ ನಿಯಮ ಹಾಕಿರತಕ್ಕದ್ದು ಈ ಮಸೂದೆಯ ಅಭಿಪ್ರಾಯಕ್ಕೆ ವಿರೋಧವಾಗಿದೆ ಎಂದು ನನಗೆ ಅನ್ನಿಸುತ್ತದೆ. ಮೊದಲು ಒಂದು ತಿಂಗಳು ಇದ್ದುದ್ದನ್ನು ಈಗ ಎರಡು ತಿಂಗಳಿಗೆ ಹೆಚ್ಚಿಸುವುದು ಸರಿಯಾಗಿ ಕಾಣುವುದಿಲ್ಲ. ಮೊದಲು 2 ತಿಂಗಳು ಇದ್ದು ಈಗ ಒಂದು ತಿಂಗಳಿಗೆ ಇಳಿಸಿದ್ದರೆ ಚೆನ್ನಾಗಿರುತ್ತಿತ್ತು. ಬಹಳ ಕಾಲದಿಂದಲೂ ಒಂದು ತಿಂಗಳು ಇದ್ದದ್ದನ್ನು ಈಗ ಎರಡು ತಿಂಗಳು ಮಾಡುವುದು ನಿಜವಾಗಿಯೂ ಸೂಕ್ತವಲ್ಲ. ಅನೇಕ ಸಂದರ್ಭಗಳಲ್ಲಿ ತಮಗೆ ಗೊತ್ತಿದೆ ; ಗ್ರಾಮಾಂತರಗಳ ಜನರು ಇದ್ದಕ್ಕಿದ್ದಹಾಗೆ ಅನುಕೂಲವಾಯಿತು ಎಂದರೆ ಮನೆ ಕಟ್ಟುವುದಕ್ಕೆ ಪ್ರಾರಂಭಿಸುತ್ತಾರೆ. ಮುಂದಾಗಿ ಅರ್ಜಿ ಹಾಕಬೇಕು, ಸಾಮಾನು ಹೊಂಚಿಕೊಳ್ಳಬೇಕು, ಲೈಸೆನ್ಸ್ ಪಡೆದು ಆಮೇಲೆ ಪ್ರಾರಂಭ ಮಾಡಬೇಕೆಂದು ಅವರು ಇರುವುದಿಲ್ಲ. ಯಾವಾಗ ಸಾಮಾನು ಹೊಂಚಿಕೊಳ್ಳುತ್ತಾರೋ ಆಗ ಅರ್ಜಿ ಹಾಕುತ್ತಾರೆ. ಅಂಥ ಸಂದರ್ಭದಲ್ಲಿ ಎರಡು ತಿಂಗಳು ಕಾಯುವುದರೊಳಗೆ ಮಳೆ ಬಂದರೆ ಮನೆ ಕಟ್ಟುವಹಾಗಿಲ್ಲ. ಹೊಂಚಿಕೊಂಡಿದ್ದ ಸಾಮಾನು ಗೆದ್ದಲುತಿಂದು ಹೋಗುತ್ತದೆ ಅಥವಾ ಇನ್ನಾವುದಾದರೂ ವಿಧದಲ್ಲಿ ಅನ್ಯಾಕ್ರಾಂತವಾಗುತ್ತದೆ. ಆಮೇಲೆ ಪುನಃ ಲೈಸೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಗ್ರಾಮಪಂಚಾಯಿತಿಯವರು ಜಾಗ್ರತೆಜಾಗ್ರತೆ ಲೈಸೆನ್ಸ್ ಕೊಡಲೇಬೇಕು. ಹಾಗೆ ಒಂದು ತಿಂಗಳಿನಲ್ಲಿ ಕೊಡುವುದಕ್ಕೆ ಅಗದಿದ್ದ ಪಕ್ಷದಲ್ಲಿ ಇನ್ನೂ ಆಲೋಚನೆ ಮಾಡುತ್ತಾ ಇದ್ದೇವೆ ಆದಷ್ಟು ಜಾಗ್ರತೆ ಕೊಡುತ್ತೇವೆ ಎಂದು ತಿಳಿಸಿದರೆ ಆಗ ಕೆಲಸ ನಿಲ್ಲಿಸಬಹುದು. ಅದಕ್ಕೆ ಅವಕಾಶವಿದೆ. ಏನೂ ಇಲ್ಲದೆ ತಟಸ್ಥರಾಗಿ ಕುಳಿತುಕೊಂಡಿದ್ದು ಎರಡು ತಿಂಗಳು ಕಾದಮೇಲೆ ಲೈಸೆನ್ಸ್ ತೆಗೆದುಕೊಂಡು ಮನೆ ಕಟ್ಟಿಕೊಳ್ಳಲಿ ಎಂದರೆ ಗ್ರಾಮಪಂಚಾಯಿತಿಯವರಿಗೆ ಇಲ್ಲದ ಒಂದು ಧೋರಣೆಯನ್ನು ಕಲಿಸಿಕೊಡುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಜಾಗ್ರತೆ ಕೆಲಸಮಾಡಿ, ಅನುಕೂಲ ಅನಾನುಕೂಲ ಯೋಚಿಸಿ ಒಂದು ಲೈಸೆನ್ಸ್ ಕೊಡಬೇಕೆಂದರೆ ಅವರಿಂದ ಕೊಡಲು ಆಗುವುದಿಲ್ಲ. ಈ ಕಾರಣದಿಂದ ಆದಷ್ಟುಜಾಗ್ರತೆ ಲೈಸೆನ್ಸ್ ಕೊಡತಕ್ಕ ಏರ್ಪಾಡು ಇರಬೇಕು. ಒಂದುವೇಳೆ ಲೈಸೆನ್ಸ್ ಕೊಡದಿದ್ದರೆ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶವಿರಬೇಕು. ಒಂದು ತಿಂಗಳು ಇದ್ದದ್ದನ್ನು ನಮ್ಮ ಸೆಲೆಕ್ಟ್ ಸಮಿತಿಯವರು ಎರಡು ತಿಂಗಳಿಗೆ ಹೆಚ್ಚಿಸಿದ್ದಾರೆ ಅದೇನು ಕಾರಣವೋ ನನಗೆ ಗೊತ್ತಿಲ್ಲ. ಆದ್ದರಿಂದ ದಯವಿಟ್ಟು ಇದನ್ನು ಮಾನ್ಯ ಮಂತ್ರಿಗಳು ಖಂಡಿತ ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

Mr. SPEAKER.—Amendment moved:

"That in clause (1) for the words 'two months' the words 'one month' shall be substituted."

*ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಶ್ರೀಮಾನ್ ಮಾದಯ್ಯಗೌಡರು ಹೇಳುವಂಥ ಪರಿಸ್ಥಿತಿ ಹಳ್ಳಿಗಳಲ್ಲೇನೂ ಇಲ್ಲ. ಪ್ರತಿಯೊಂದೂ ಲೈಸೆನ್ಸ್ ತಗೆದುಕೊಂಡೇ ಕಟ್ಟುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅರ್ಜಿ ಹಾಕಿ ಲೈಸೆನ್ಸ್ ತಗೆದುಕೊಂಡು ಪ್ಲಾನ್‌ನಂತೆ ಯಾರೂ ಕಟ್ಟುತ್ತಿಲ್ಲ. ಇದರಿಂದ ಅನಾನುಕೂಲವಾಗುತ್ತದೆಯೇ ಎಂದರೆ ಖಂಡಿತ ಆಗುವುದಿಲ್ಲ. ಎರಡು ತಿಂಗಳು ಕೊಟ್ಟರೆ

(ಶ್ರೀ ಎಂ. ಮಾದಯ್ಯನವರು.)

ಲೈಸೆನ್ಸ್ ಕೊಡುವುದು ನಿಧಾನವಾಗಿ ಮನೆ ಕಟ್ಟಿಕೊಳ್ಳಲು ಹೊಂಚಿಕೊಂಡಿದ್ದ ಸಾಮಾನುಗಳು ಗೆದ್ದಲು ಹಿಡಿದು ಹಾಳಾಗಿಹೋಗುತ್ತವೆ ಎಂದು ಶ್ರೀಮಾನ್ ಮಾದಯ್ಯಗೌಡರು ಹೇಳಿದರು. ಆರೀತಿ ಏನೂ ಆಗುವುದಿಲ್ಲ. ಏಕೆಂದರೆ ಮನೆ ಕಟ್ಟುವವರಲ್ಲಿ ಲೈಸೆನ್ಸೂ ಇರುವುದಿಲ್ಲ, ಏನೂ ಇರುವುದಿಲ್ಲ. ಈರೀತಿ ಎರಡು ತಿಂಗಳು ಅವಕಾಶ ಕೊಟ್ಟಿರುವುದು ಯಾರಿಗೆ ಅನುಕೂಲ ಎಂದರೆ ಪಂಚಾಯಿತಿಯವರಿಗೆ. ಅವರ ದೃಷ್ಟಿಯಿಂದ ಮಾಡಬೇಕಾಗುತ್ತದೆ. ಹೇಗೆಂದರೆ ಈಗ ಅನೇಕ ಹಳ್ಳಿಗಳನ್ನು ಸೇರಿಸಿ ಒಂದು ಪಂಚಾಯಿತಿ ಮಾಡುತ್ತಾರೆ. ನಾನಾ ಗ್ರಾಮಗಳಿಂದ ಸಂಬಂಧಪಟ್ಟ ಕಾಗದಪತ್ರಗಳು ಬರಬೇಕು ; ಹಿಯರಿಂಗ್ ಆಗಬೇಕು; ಪಂಚಾಯಿತಿ ಮೀಟಿಂಗ್‌ನಲ್ಲಿ ಇಡಬೇಕು ಇಂಥಾದ್ದಕ್ಕೆಲ್ಲಾ ಒಂದು ಅವಕಾಶವಿದ್ದರೆ ಆಡಳಿತಗಾರರಿಗೆ ಅನುಕೂಲವಾಗುತ್ತದೆ. ಪಾರ್ಟಿಗಳಿಗೆ ಇದರಿಂದ ಏನೂ ಅನಾನುಕೂಲ ಇಲ್ಲವೇಇಲ್ಲ; ಅರ್ಜಿ ಹಾಕಿ ಕಟ್ಟುತ್ತಾ ಇರುತ್ತಾರೆ. ಆದ್ದರಿಂದ ಅಂಥಾ ತೊಂದರೆ ಏನಿದೆಯೋ ಗೊತ್ತಾಗುವುದಿಲ್ಲ. ಸೆಲೆಕ್ಟ್ ಸಮಿತಿಯವರು ಎರಡು ತಿಂಗಳಿಗೆ ಜಾಸ್ತಿ ಮಾಡಿರುವುದನ್ನು ಈಗಿರುವಹಾಗೆ ಒಪ್ಪಬಹುದು ಎಂದು ಹೇಳುತ್ತೇನೆ.

*ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಗ್ರಾಮದಲ್ಲಿ ಪಂಚಾಯಿತಿಯ ಲೈಸೆನ್ಸ್ ಇಲ್ಲದೆ ಮನೆ ಕಟ್ಟುತ್ತಾರೆ ಎಂದು ಶ್ರೀಮಾನ್ ಮಾದಯ್ಯನವರು ಹೇಳಿದರು, ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಅನೇಕ ಕಡೆಗಳಲ್ಲಿ ಬಹಳ ಕಟ್ಟುನಿಟ್ಟಾಗಿ ಲೈಸೆನ್ಸ್‌ಗೆ ಅರ್ಜಿ ಹಾಕಿ, ಲೈಸೆನ್ಸ್ ತೆಗೆದುಕೊಂಡು ಮನೆ ಕಟ್ಟುತ್ತಾ ಇದ್ದಾರೆ. ಯಾರಾದರೂ ಮನೆ ಕಟ್ಟುತ್ತಾರೆ ಎಂದರೆ ಅನೇಕ ತಕರಾರುಗಳು ಬರುತ್ತವೆ. ಅವರು ಹೇಳಿದಂತೆ ಹಿಂದೆ ನಡೆದಿರಬಹುದು. ಈಗ ಆರೀತಿ ಆಗುವುದನ್ನು ಬಹುಮಟ್ಟಿಗೆ ನಿಲ್ಲಿಸಿದ್ದಾರೆ. ಅಂಥಾದ್ದಕ್ಕೆ ಅವಕಾಶವಿಲ್ಲ. ಈಗಿರುವುದು ಲೈಸೆನ್ಸ್ ತೆಗೆದುಕೊಂಡು ಕಟ್ಟಬೇಕೆಂದೇ ಇದೆ. ಅದೇರೀತಿ ಮಾಡುತ್ತಾ ಇದ್ದಾರೆ.

ಶ್ರೀ ಎಂ. ಎನ್. ಜೋಯಿಸರು.—ತಾವು ಬಂದಮೇಲೆ ಬಹುಮಟ್ಟಿಗೆ ಕಾನೂನು ಜಾರಿಗೆ ಬಂದಿದೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಂತೋಷ. ಈ ಕಾನೂನಿನ ಉದ್ದೇಶವಾದರೂ ಖಂಡಿತ ಲೈಸೆನ್ಸ್ ತೆಗೆದುಕೊಂಡೇ ಕಟ್ಟಬೇಕೆಂದು ಇದೆ. ಈ ಸಂದರ್ಭದಲ್ಲಿ ಒಂದು ತಿಂಗಳು ಇರಬೇಕೇ, 2 ತಿಂಗಳು ಇರಬೇಕೇ ಎಂಬುದನ್ನು ಸೆಲೆಕ್ಟ್ ಸಮಿತಿಯವರು ಬಹಳ ಚೆನ್ನಾಗಿ ಪರಿಶೀಲಿಸಿದ್ದಾರೆ. ಮುನಿಸಿಪಾಲಿಟಿಯಲ್ಲಾದರೆ compact area, ಸಿಬ್ಬಂದಿ ಇರುತ್ತದೆ ತಕ್ಷಣಹೋಗಿ ಮಹಜರು ಮಾಡಲು ಸ್ಯಾನಿಟರಿ ಇನ್‌ಸ್ಪೆಕ್ಟರು ಇರುತ್ತಾರೆ. ಮುನಿಸಿಪಲ್ ಕೌನ್ಸಿಲ್‌ನಲ್ಲಿ ಇಟ್ಟು ಜಾಗ್ರತೆ ತೀರ್ಮಾನ ಮಾಡಬಹುದು. ಪಂಚಾಯಿತಿಯಲ್ಲಾದರೆ ಹಲವಾರು ಹಳ್ಳಿಗಳು ಸೇರಿ ಒಂದು ಪಂಚಾಯಿತಿ ಆಗಿರುತ್ತದೆ. ಆ ಹಳ್ಳಿಯಿಂದ ನಾಲ್ಕುಜನ, ಈ ಹಳ್ಳಿಯಿಂದ ನಾಲ್ಕುಜನ ಇನ್ನೊಂದು ಹಳ್ಳಿಯಿಂದ ನಾಲ್ಕುಜನ ಈರೀತಿ ಒಟ್ಟು 10–15 ಜನ ಸದಸ್ಯರು ಒಟ್ಟಿಗೆ ಕರೆತು ರೆಕಾರ್ಡ್ ಬಿಲ್ಡ್ ಅಪ್ ಮಾಡಿ ಒಂದು ತೀರ್ಮಾನ ಮಾಡಬೇಕೆಂದರೆ ಒಂದು ತಿಂಗಳಿನಲ್ಲಿ ಸಾಧ್ಯವಾಗುವುದಿಲ್ಲ. ನಾನಾ ತೊಂದರೆಗಳಿರುತ್ತವೆ. ಆದ್ದರಿಂದ ಸ್ವಲ್ಪ ಕಾಲಾವಕಾಶವಿರಲಿ ಎಂದು ಯೋಚನೆಮಾಡಿ ಎರಡು ತಿಂಗಳು ಇಟ್ಟಿದೆ. ಆ ರೀತಿ ಮನೆ ಕಟ್ಟಿಕೊಳ್ಳಬೇಕೆಂದು ಇಷ್ಟವುಳ್ಳವರು ಎರಡು ತಿಂಗಳ ಮೊದಲೇ ಅರ್ಜಿಹಾಕುತ್ತಾರೆ. ಕಾನೂನಿನಲ್ಲಿ ಎರಡು ತಿಂಗಳು ಎಂದು ತಿಳಿಸಿದರೆ ಅದಕ್ಕನುಸಾರವಾಗಿ ಮೊದಲೇ ಅರ್ಜಿ ಹಾಕಿಕೊಂಡು ಲೈಸೆನ್ಸ್ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿಕೊಳ್ಳುತ್ತಾರೆ. ಇದು ಇರುವುದು ಒಳ್ಳೆಯದು. ಒಂದು ತಿಂಗಳು ಮಾಡಿದರೆ ಬಹಳ ತೊಂದರೆಯಾಗುತ್ತದೆ. ರೆಕಾರ್ಡ್ ಬಿಲ್ಡ್ ಅಪ್ ಮಾಡುವುದು, ಪಂಚಾಯಿತಿ ಮೀಟಿಂಗ್ ಮಾಡಿ ತೀರ್ಮಾನ ಮಾಡುವುದು ಇದಕ್ಕೆಲ್ಲಾ ಕಾಲಾವಕಾಶವಿಲ್ಲದೆ ತೊಂದರೆಯಾಗುವುದರಿಂದ ದಯವಿಟ್ಟು ಮಾನ್ಯ ಸದಸ್ಯರು ಈ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri T. RAMACHAR.—Sir, I request the House to permit me to withdraw my amemdment.

Sri T. MADIAH GOWDA.—Sir, I may also be permitted to withdraw my amendment.

The amendments were, by leave of the House, withdrawn.

Sri T. RAMACHAR.—Sir, I beg to move:

"That after sub-clause (2) the following sub-clause shall be added as sub-clause (3):—

"(3) An appeal shall lie to the Deputy Commissioner from any order or direction or notice of the panchayet under sub-section (2) *supra* and the decision of the Deputy Commissioner on such appeal shall be final."

ಈಗ ಮಸೂದೆಯಲ್ಲಿ 29 (2) ನೆಯ ಕ್ಲಾಜಿನ ಪ್ರಕಾರ ಪಂಚಾಯಿತಿಗಳಿಗೆ ಕೆಲವು ಅಧಿಕಾರಗಳನ್ನು ಕೊಡಲಾಗಿದೆ. ಪಂಚಾಯಿತಿ ಪ್ರದೇಶದಲ್ಲಿ ಅವರ ಅನುಮತಿಯಿಲ್ಲದೆ ಕಟ್ಟುವ ಕಟ್ಟಡಗಳನ್ನು ನಿಲ್ಲಿಸಬಹುದು, ಕಟ್ಟಿದ ಕಟ್ಟಡಗಳನ್ನು ಒಡೆಸಿ ಹಾಕಬಹುದು. ಇಂತಹ ಸಂದರ್ಭಗಳಲ್ಲಿ ಪಂಚಾಯಿತಿಯ ಆಜ್ಞೆಯೋ ಆಖೈರು ಆಜ್ಞೆ, ಆದರಮೇಲೆ ಅಪೀಲೇ ಇಲ್ಲ ಎಂಬ ಭಾವನೆ ಬರುವ ರೀತಿಯಲ್ಲದೆ. ಮೇಲಿನ ಅಧಿಕಾರಿಗಳಿಗೆ ಅಪೀಲಿಗೆ ಅವಕಾಶ ಈ ಮಸೂದೆಯಲ್ಲಿ ಎಲ್ಲಿಯೂ ಅಡಕವಾಗಿಲ್ಲ. ಹಾಗಾದರೆ ಜನರಿಗೆ ಬಹಳ ಅನ್ಯಾಯವಾಗುತ್ತದೆ. ಇದನ್ನು ತಪ್ಪಿಸಲು ಡೆಪ್ಯುಟಿ ಕಮೀಷನರಿಗೆ ಅಪೀಲು ಇರುವುದು ಸೂಕ್ತ, ಅವರ ತೀರ್ಮಾನ ಕೊನೆಯ ತೀರ್ಮಾನವಾಗಬೇಕೆಂದು ಮಾಡಿದರೆ ಈಗ ಮಸೂದೆಯಲ್ಲಿರುವ ಒಂದು ಲೋಪ ಹೋಗಿ ಸರಿಯಾಗುತ್ತದೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದೆ, ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ.

Mr. SPEAKER.—Amendment moved:

"That after sub-clause (2) the following sub-clause shall be added as sub-clause (3):—

"(3) An appeal shall lie to the Deputy Commissioner from any order or direction or notice of the panchayet under sub-section (2) *supra* and the decision of the Deputy Commissioner on such appeal shall be final."

The Hon'ble Sri R. CHENNIGARAMIAH.—I accept the amendment.

Mr. SPEAKER.—The question is :

"That after Sub-clause (2) the following sub-clause shall be added as sub-clause (3) :—

"(3) An appeal shall lie to the Deputy Commissioner from any order or direction or notice of the panchayet under sub-section (2) *supra* and the decision of the Deputy Commissioner on such appeal shall be final."

The motion was adopted.

Mr. SPEAKER.—The question is:

"That clause 29, as amended, stand part of the Bill."

The motion was adopted.

Clause 29, as amended, was added to the Bill.

Mr. SPEAKER.—Clauses 30 and 31. The question is:

"That clauses 30 and 31 stand part of the Bill."

The motion was adopted.

Clauses 30 and 31 were added to the Bill.

Mr. SPEAKER.—Clause 32.

Sri T. RAMACHAR.—Sir, I beg to move :

"That in sub-clause (1) after the words "students' Hostel" the words 'Dharmasala' shall be added."

ಈ ಮಸೂದೆಯ 32 ನೆಯ ಕ್ಲಾಜಿನಲ್ಲಿ ಕೆಲವಕ್ಕೆ ಮಾತ್ರ ಅವಕಾಶ ಕೊಟ್ಟಿದೆ, ಅದರಲ್ಲಿ

'Other than a students' hostel under public or recognised control."

ಎಂದಿದೆ. ಇದರ ಜೊತೆಗೆ dharmasala ಎಂಬು ದನ್ನು ಸೇರಿಸಬೇಕೆಂದು ತಿದ್ದುಪಡಿಯಲ್ಲಿ ಸೂಚಿಸಿದೆ. ಇದರಿಂದ ಬಾಧಕವೇನೂ ಇಲ್ಲ, ಇವನ್ನು ಒಪ್ಪುತ್ತಾರೆಂದು ನಂಬಿದ್ದೇನೆ.

Mr. SPEAKER.—Amendment moved:

"That in sub-clause (1) after the words 'students' hostel' the words 'Dharmasala' shall be added."

The Hon'ble Sri R. CHENNIGARAMIAH.—I accept the amendment.

Mr. SPEAKER.—The question is :

"That in sub-clause (1) after the words 'students' hostel' the words 'Dharmasala' shall be added."

The motion was adopted.

Mr. SPEAKER.—The question is :

"That clause 32, as amended, stand part of the Bill.

The motion was adopted.

Clause 32, as amended, was added to the Bill.

Mr. SPEAKER.—Clauses 33 to 39, both inclusive. The question is :

"That clauses 33 to 39, both inclusive, stand part of the Bill."

The motion was adopted.

Clauses 33 to 39, both inclusive, were added to the Bill.

Mr. SPEAKER.—Clause 40.

The Hon'ble Sri R. CHENNIGARAMIAH.—Sir, I beg to move :

"That for the existing sub-clause (1) the following sub-clause shall be substituted :—

"(1) A Panchayet may levy a Village Improvement Tax, commutable into a contribution of labour, subject to the rules prescribed in this behalf".

ಈಗ ಮಸೂದೆಯ 40 (1) ನೆಯ ಕ್ಲಾಜಿನಲ್ಲಿ

"A Panchayet may levy a village improvement tax subject to such provisions as may be made by it in bye-laws."

ಎಂದಿದೆ, ಈ ವಿಷಯದಲ್ಲಿ ಈಗಲೂ ಒಂದು ರೀತಿಯ ಪದ್ಧತಿ ಹಳ್ಳಿಗಳಲ್ಲಿ ಜಾರಿಯಲ್ಲಿದೆ. ಅವರು ತೆರಿಗೆಯನ್ನು ಹಣದರೂಪದಲ್ಲಾದರೂ ಕೊಡಬಹುದು, ಇಲ್ಲದಿದ್ದರೆ ಕೆಲಸಮಾಡಿ ಅದಕ್ಕೆ ವಜಾ ಹಾಕಿ ಕೊಳ್ಳಬಹುದು, ಹೀಗೆ ಕೆಲಸಮಾಡಿ ತೆರಿಗೆಗೆ ಉತ್ತಾರ ಹಾಕಿ ಕೊಳ್ಳುವ ವಿಷಯ ಇದರಲ್ಲಿ ಬಿಟ್ಟು ಹೋಗಿದೆ. ಅದ ಕಾರಣ ಇದನ್ನು ಸೇರಿಸುವುದು ಒಳ್ಳೆಯದೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದೆ. ಹಳ್ಳಿಗಳಲ್ಲಿ ಅನೇಕ ಕೆಲಸಗಳು ನಡೆಯುತ್ತವೆ. ಆ ಕೆಲಸಗಳನ್ನು ಜನರೇ ಮಾಡುವುದಾದರೆ ಮಾಡಬಹುದು, ಹಾಗೆ ಮಾಡಲು ಅನೇಕರು ಒಪ್ಪುತ್ತಾರೆ. ಆದುದರಿಂದ ಈ ತಿದ್ದುಪಡಿಯನ್ನು ಒಪ್ಪಬಹುದು.

Mr. SPEAKER.—The question is :

"That for the exisiting sub-clause, the following sub-clause shall be substituted.:—

"(1) A Panchayet may levy a Village Improvement Tax, commutable into a contribution of labour, subject to the rules prescribed in this behalf."

The motion was adopted.

Mr. SPEAKER.—The question is.—

"That clause 40, as amended, stand part of the Bill."

The motion was adopted.

Clause 40, as amended, was added to the Bill.

Mr. SPEAKER.—Clause 41. The question is :

"That clause 41 stand part of the Bill."

The motion was adopted.

Clause 41 was added to the Bill.

Mr. SPEAKER.—Clause 42.

The Hon'ble Sri R. CHENNIGA-RAMIAH.—Sir, I beg to move.—

"That the words 'pilgrim tax' occurring in the marginal notes shall be omitted."

ನಮ್ಮ ದೇಶದಲ್ಲಿ ಪಿಲ್‌ಗ್ರಿಮ್ ಟ್ಯಾಕ್ಸ್ ಹಾಕುವುದು ಒಳ್ಳೆಯದಲ್ಲವೆಂಬ ಅಭಿಪ್ರಾಯದಿಂದ ಅದನ್ನು ವಜಾ ಮಾಡಿದೆ. ಆದಕಾರಣ ಇದನ್ನು ಈ ಮಸೂದೆಯಲ್ಲಿ ಬಿಟ್ಟು ಬಿಡುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದೆ. ಆದ್ದರಿಂದ ಇದನ್ನು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That the words 'pilgrim tax' occurring in the marginal notes shall be omitted."

The motion was adopted.

Mr. SPEAKER.—The question is:

"That clause 42, as amended, stand part of the Bill."

The motion was adopted.

Clause 42, as amended, was added to the Bill.

Mr. SPEAKER.—Clauses 43 and 44. The question is:

"That clauses 43 and 44 stand part of the Bill."

The motion was adopted.

Clauses 43 and 44 were added to the Bill.

Mr. SPEAKER.—Clause 45.

The Hon'ble Sri R. CHENNIGA-RAMIAH.—Sir, I beg to move:—

"That the word 'cesses' in the marginal notes shall be omitted."

ಇದರಲ್ಲಿ cesses ಎಂಬ ಪದ ಇದೆ. ಗ್ರಾಮ ಪಂಚಾಯಿತಿಯಲ್ಲಿ ಯಾವ ಸೆಸ್ಸನ್ನೂ ಹಾಕುವುದಿಲ್ಲ. ಈ ಕ್ಲಾಜ್‌ನಲ್ಲಿ,

"The amount of taxes, fees or other dues shall be paid in such manner as may be prescribed, and in case of default of such payment, shall be recoverable by the Amildar as an arrear of land revenue"

ಎಂದಿದೆ. ಸೆಸ್ ಎಂಬುದಿಲ್ಲ. We are not imposing any cesses. ಆದುದರಿಂದ ಈ ಪದವನ್ನು ಬಿಟ್ಟುಬಿಡಬೇಕೆಂದು ಈ ತಿದ್ದುಪಡಿಯನ್ನು ತಂದಿರುವುದು. ಇದನ್ನು ಸಭೆ ಒಪ್ಪಬಹುದು.

Mr. SPEAKER.—The question is:

"That the word 'cesses' in the marginal notes shall be omitted."

The motion was adopted.

Mr. SPEAKER.—The question is:

"That clause 45, as amended, stand part of the Bill."

The motion was adopted.

Clause 45, as amended, was added to the Bill.

Mr. SPEAKER.—Clause 46.

Sri T. RAMACHAR.—Sir, I beg to move:

"That the words 'and with the previous sanction of the Government' shall be inserted between the words 'prescribed' and 'a panchayet'."

ಈ 46ನೆಯ ಕ್ಲಾಜಿನಲ್ಲಿ ಪಂಚಾಯಿತಿಯವರು ಸಾಲ ಪಡೆಯಲು ಅವಕಾಶಮಾಡಿದೆ. ಹಾಗೆ ಸಾಲ ಪಡೆಯುವುದಕ್ಕೆ ಮುನ್ನ ಅವರು ಸರ್ಕಾರದ ಅನುಮತಿಯನ್ನು ಪಡೆದು ಸಾಲ ಪಡೆಯಬಹುದೆಂದು ಈ ತಿದ್ದುಪಡಿಯಲ್ಲಿರುವ ಪದಗಳನ್ನು ಸೇರಿಸಬೇಕೆಂದು ನನ್ನ ಉದ್ದೇಶ. ಹೀಗೆ ಮಾಡುವುದು ಒಳೆಯದು. ಈ ಕಾರಣ ಈ ತಿದ್ದುಪಡಿಯನ್ನು ಒಪ್ಪಬೇಕೆಂದು ಕೇಳುತ್ತೇನೆ.

Mr. SPEAKER.—Amendment moved:

"That the words 'and with the previous sanction of the Government' shall be inserted between the words 'prescribed' and 'a panchayet'."

The Hon'ble Sri R. CHENNIGA-RAMIAH.—I accept the amendment.

Mr. SPEAKER.—The question is:

"That the words 'and with the previous sanction of the Government' shall be inserted between the words 'prescribed' and 'a panchayet'."

The motion was adopted.

Mr. SPEAKER.—The question is:

"That clause 46, as amended, stand part of the Bill."

The motion was adopted.

Clause 46, as amended, was added to the Bill.

Mr. SPEAKER.—Clause 47.

The Hon'ble Sri R. CHENNIGA-RAMIAH.—Sir, I beg to move:

"That in clause 47 (1) and (2), for the word 'person' the word 'officer' shall be substituted."

ಈ 47 (1) ನೆಯ ಕ್ಲಾಜಿನಲ್ಲಿ Commissioner or to such other person ಎಂದಿದೆ. Person ಎಂಬ ಪದ ಇಲ್ಲಿ ಸರಿಯಾಗುವುದಿಲ್ಲವಾದುದರಿಂದ officer ಎಂಬಪದ ಇರಬೇಕೆಂದು ಈ ತಿದ್ದುಪಡಿಯನ್ನು ತಂದಿದೆ. ಇದನ್ನು ಒಪ್ಪಿಕೊಳ್ಳಬೇಕೆಂದು ಸೂಚಿಸುತ್ತೇನೆ.

Mr. SPEAKER.—The question is :

"That in clause 47 (1) and (2), for the word 'person' the word 'officer' shall be substituted."

The motion was adopted.

***Sri T. MADIAH GOWDA.**—Sir, I beg to move :

"That in proviso to sub-clause (2) of clause 47, the words 'one month' shall be substituted for the words 'two months.'"

ಈ ಮಸೂದೆಯ 47 (2)ನೆಯ ಕ್ಲಾಜಿನಲ್ಲಿ 2 ತಿಂಗಳಿರುವುದನ್ನು ಒಂದು ತಿಂಗಳು ಎಂದು ಮಾಡಬೇಕೆಂದು ಸೂಚಿಸಿದ್ದೇನೆ. ಈ ತಿದ್ದುಪಡಿಯ ಉದ್ದೇಶವಾದರೂ ಇಷ್ಟೇ: ಒಂದು ಆಯವ್ಯಯದ ಪಟ್ಟಿಯನ್ನು ತಯಾರು ಮಾಡಿ ಪಂಚಾಯಿತಿಯವರು ಕಮಿಷನರಿಗೆ ಕಳುಹಿಸಬೇಕು. ಅದಕ್ಕೆ ಕಮಿಷನರವರ ಒಪ್ಪಿಗೆ ಪಡೆಯಬೇಕು; ಇಂತಹ ಒಪ್ಪಿಗೆ ಅಥವ ಅನುಮತಿ ಎರಡು ತಿಂಗಳು ಕಳೆಯುವವರೆಗೆ ಅವರಿಂದ ಬಾರದೇಯಿದ್ದರೆ ಆಗ ಆ ಆಯವ್ಯಯದ ಪಟ್ಟಿ ಸರ್ಕಾರದ ಅನುಮತಿಯನ್ನು ಪಡೆಯಿತೆಂದು ಭಾವಿಸಿ ಪಂಚಾಯಿತಿಯವರು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬಹುದೆಂದು ಇದರಲ್ಲಿದೆ. ಇದರಿಂದ ಒಂದು ವರ್ಷದ ಆಯವ್ಯಯ ಪಟ್ಟಿಯನ್ನು ತಯಾರಿಸಬೇಕಾದರೆ ಕನಿಷ್ಟಪಕ್ಷ ಮೂರು ತಿಂಗಳಿಗೆ ಮುಂಚೆ ಮಾಡಬೇಕಾಗಿದೆ. ಮುಂದಿನ ವರ್ಷದ ವರಮಾನ, ಖರ್ಚು ಏನೆಂಬುದನ್ನು ಪಂಚಾಯಿತಿಯವರು ಮೂರು ತಿಂಗಳ ಮುಂಚೆ ಕುರಿತು ಯೋಚಿಸಬೇಕು. ಇದು ಕಷ್ಟದ ಕೆಲಸ. ನಾಳೆ ಬರತಕ್ಕ ಆಯವ್ಯಯವೇನೆಂಬುದನ್ನು ಹಿಂದಿನವಾರ ಅಥವ ಹಿಂದಿನ ತಿಂಗಳೇ ಯೋಚನೆಮಾಡುವುದಕ್ಕೆ ಅನೇಕ ಸಂದರ್ಭಗಳಲ್ಲಿ ಕಷ್ಟವಿರುವಾಗ 3 ತಿಂಗಳ ಹಿಂದೆಯೇ ಎಲ್ಲವನ್ನೂ ಲೆಕ್ಕಹಾಕಿ ತಯಾರಿಸುವುದೆಂದರೆ ಕಷ್ಟ. ಹಾಗೆ ಮಾಡದೆ ಹೋದರೆ ಆಗುವುದಿಲ್ಲ. ಏಕೆಂದರೆ ಮುಂದಿನ ವರ್ಷದ ಪ್ರಾರಂಭದ ಹೊತ್ತಿಗೆ ಆಯವ್ಯಯಪಟ್ಟಿ ಮೇಲಿಂದ ಅನುಮೋದನೆಯಾಗಿ ಬಂದಿರಬೇಕು. ಇಲ್ಲದಿದ್ದರೆ ಪಂಚಾಯ್ತಿಗಳವರು ಅಲ್ಲಿಯವರೆಗೆ ಯಾವ ಖರ್ಚುವೆಚ್ಚಗಳನ್ನೂ ಮಾಡುವುದಕ್ಕಾಗುವುದಿಲ್ಲ. ಅಲ್ಲಿನ ನೌಕರಮಾನೆಯವರಿಗೆ ಸಂಬಳ ಕೊಡುವುದಕ್ಕೆ ಕೂಡ ಆಗುವುದಿಲ್ಲ. ಇಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಒಂದು ವೇಳೆ ಸರ್ಕಾರದವರು ಅಥವಾ ಕಮಿಷನರ್‌ರವರು ಈ ಆಯವ್ಯಯ ಪಟ್ಟಿಗಳನ್ನು ಅನುಮೋದಿಸಲೇಬೇಕೆನ್ನುವ ಸಂದರ್ಭದಲ್ಲಿ ಅವರು ಆದಷ್ಟು ಜಾಗ್ರತೆ, 15 ದಿವಸ ಅಥವ ಒಂದು ತಿಂಗಳಲ್ಲಿ ವಾಪಸುಮಾಡುವ ಏರ್ಪಾಡುಮಾಡಬೇಕು. ಅದರಲ್ಲೂ, ಕಮಿಷನರು ನೋಡಬೇಕೆಂದರೂ ಅವರೇ ನೋಡುವುದಿಲ್ಲ. ತಮ್ಮ ಕೈಕೆಳಗಿರುವ ಡೆಪ್ಯುಟಿ ಕಮಿಷನರಿಗೋ ಅಥವಾ ಸಬ್ ಡಿವಿಜನ್ ಆಫೀಸರಿಗೋ ಆ ಕೆಲಸವಹಿಸಬಹುದು. ಅವರೂ ಎರಡು ತಿಂಗಳ ಕಾಲ ಬೇಕೆನ್ನುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಏನಿದ್ದರೂ ಒಂದು ತಿಂಗಳೊಳಗೆ ಅದನ್ನು ಅನುಮೋದಿಸುತ್ತೇವೆಂದು ತಿಳಿಸಬೇಕು, ಇಲ್ಲದಿದ್ದರೆ, ಬದಲಾವಣೆಗಳೇನಾದರೂ ಇದ್ದರೆ ಆ ಬದಲಾವಣೆಯನು ಸೂಚಿಸಿಕಳುಹಿಸಬೇಕು ಇಲ್ಲದೆ ನಿಧಾನಮಾಡಿದರೆ ಪಂಚಾಯ್ತಿ ಆಡಳಿತ ನಡೆಸುವವರಿಗೆ ಬಹಳ ಕಷ್ಟವಾಗುತ್ತದೆ. ಇಂದು ನಾಳೆ ಎಂದುಕೊಂಡು ಎರಡು ತಿಂಗಳಾದರೂ ಕಳುಹಿಸದೆ ಹೋದರೆ 2-3 ತಿಂಗಳವರೆಗೆ ಪಂಚಾಯಿತಿಯವರು ಕೆಲಸಮಾಡುವುದಕ್ಕೇ ಆಗುವುದಿಲ್ಲ. ಇಂಥ ಅನುಭವ ನಮಗೆ ಬೇಕಾದಷ್ಟಿದೆ. ಇಂಥಾದ್ದಕ್ಕೆ ಅವಕಾಶ ಕೊಟ್ಟರೆ ಅವರಲ್ಲಿ ದಕ್ಷತೆ, ಜವಾಬ್ದಾರಿಕೆ, ಸ್ವಾವಲಂಬನೆ ಎಂದಿಗೂ ಬರುವುದಿಲ್ಲ. ಈ ಕಾನೂನಿನಲ್ಲಿರುವುದೊಂದೊಂದಕ್ಕೂ ಕಮಿಷನರನ್ನು ಕೇಳಬೇಕು, ಸರ್ಕಾರದವರನ್ನು ಕೇಳಬೇಕು ಎನ್ನುವುದು ಸಾಮಾನ್ಯವಾಗಿ ಒಪ್ಪತಕ್ಕದ್ದಲ್ಲ. ಆದ್ದರಿಂದಲೇ ಒಂದು ತಿಂಗಳಿನಲ್ಲೇ ಏನಿದ್ದರೂ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ನಾನು ಈ ತಿದ್ದುಪಡಿಯಲ್ಲಿ ಸೂಚಿಸಿದ್ದೇನೆ. ಸಾಮಾನ್ಯವಾಗಿ ಪಂಚಾಯ್ತಿಯವರೂ ತಮ್ಮ ಹಣಕಾಸಿನ ಪರಿಸ್ಥಿತಿಯನ್ನೆಲ್ಲಾ ನೋಡಿಕೊಂಡೇ ಇಂಥಿಂಥಾ ಐಚ್ಛಿಕ ಕೆಲಸಗಳನ್ನು ಮಾಡುವುದಕ್ಕೆ ಅಂದಾಜುಹಾಕಿಕೊಂಡಿರುತ್ತಾರೆ. ಒಂದು ವೇಳೆ ಏನಾದರೂ ಹೆಚ್ಚಾಗಿ ಮಾಡಬೇಕಾದರೆ ಸರ್ಕಾರದವರ ಅಥವ ಮೇಲಿನ ಆಫೀಸರ ಅಪ್ಪಣೆ ಪಡೆದೇ ಮಾಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಎರಡು ತಿಂಗಳ ಕಾಲವೆಂಬುದು ಬಹಳ ದೀರ್ಘವಾದ ಅವಧಿ. ಅದನ್ನು ಒಂದು ತಿಂಗಳೆಂದು ಮಾಡಿದರೆ ಅನುಕೂಲ. ಆದ್ದರಿಂದ ಇಂಥ ಒಂದು ಉಪಯುಕ್ತವಾದ ಬದಲಾವಣೆಯನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

Mr. SPEAKER.—Amendment moved:

"That in proviso to sub-clause (2) of clause 47, the words 'one month' shall be substituted for the words 'two months.'"

***ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.**—ಇದೊಂದು ಒಳ್ಳೆಯ ಸಲಹೆಯಾದರೂ, ಇದರಲ್ಲೂ ಅದೇ ಕಷ್ಟ ಬರುತ್ತದೆ. ಶ್ರೀಮಾನ್ ಮಾದಯ್ಯಗೌಡರೇನೋ ಒಳ್ಳೆಯ ಉದ್ದೇಶದಿಂದಲೇ ತಂದಿರಬಹುದು. ಅವರ ಮನಸ್ಸಿನಲ್ಲಿ ಕೇವಲ ಒಂದೊಂದು ಪಂಚಾಯ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿದ್ದಾರೆ. ಆದರೆ ಸರ್ಕಾರದವರ ದೃಷ್ಟಿಯಲ್ಲಿ ಸಂಸ್ಥಾನಾದ್ಯಂತ ಇರುವ ಸಾವಿರಾರು ಪಂಚಾಯ್ತಿಗಳಿವೆ. ಅಲ್ಲದೆ ಅದೇಕಾಲವೇ ಸರ್ಕಾರದ financial yearನ ಪ್ರಾರಂಭ. ಆದ್ದರಿಂದ ಈ ಕಾಲದಲ್ಲೇ ಒಟ್ಟಿಗೆ ನೂರಾರು ಪಂಚಾಯ್ತಿಗಳಿಂದ ಬಡ್ಜೆಟ್ಟುಗಳು ಬಂದರೆ, ಮತ್ತು ಅವುಗಳೆಲ್ಲವನ್ನೂ ಒಂದೇ ತಿಂಗಳಿನಲ್ಲಿ ವಿಮರ್ಶೆಮಾಡಿ ಕಳುಹಿಸಿಕೊಡಬೇಕೆಂದರೆ ಕಷ್ಟ. ಎಷ್ಟೋ ಸಂದರ್ಭಗಳಲ್ಲಿ discretionary ಯಾಗಿ ಮಾಡಬೇಕಾದ ಕೆಲಸವನ್ನು obligatory ಕೆಲಸಗಳ ಬಾಬಿಗೆ ಸೇರಿಸಿಬಿಟ್ಟಿರುತ್ತಾರೆ. ಎಷ್ಟೋ ಬಾಬುಗಳನ್ನು delete ಮಾಡಬೇಕಾಗುತ್ತದೆ. ಇದನ್ನೆಲ್ಲಾ ಪರಿಶೀಲನೆಮಾಡಿ ಒಂದು ತಿಂಗಳಿನಲ್ಲೇ ವಾಪಸು ಕಳುಹಿಸಿಕೊಡುತ್ತೇವೆಂದರೆ ಕಾರ್ಯರೂಪದಲ್ಲಿ ಬಹಳ ಕಷ್ಟವಾಗುತ್ತದೆ. ನೂರಾರು ಪಂಚಾಯ್ತಿಗಳಿಂದ ಬಂದಿರುತ್ತವೆ. ಕೆಲವನ್ನು 15 ದಿವಸದಲ್ಲಿ ಮಾಡಿ ಕಳುಹಿಸಬಹುದು ಇನ್ನು ಕೆಲವನ್ನು ಒಂದು ತಿಂಗಳಲ್ಲಿ ಮಾಡಿ ಕಳುಹಿಸಬಹುದು. ಆದ್ದರಿಂದಲೇ ಕೊನೆಯಪಕ್ಷ ಎರಡು ತಿಂಗಳೆಂದು ಇಟ್ಟುಕೊಂಡಿದೆ. ಮಾನ್ಯ ಸೂಚಕರು ಇದಕ್ಕೆ ಒಂದು ಆಕ್ಷೇಪವನ್ನು ಹೇಳಿದರು : ಎರಡು ತಿಂಗಳವರೆಗೂ ಕಾದಿದ್ದು ಪಂಚಾಯ್ತಿಯವರು ಅಲ್ಲಿಯವರೆಗೂ ಏನೊಂದು ಕೆಲಸಕಾರ್ಯಗಳನ್ನೂ ಮಾಡದಹಾಗಾಗುತ್ತದೆ ಎಂದು. ಆದರೆ ವಾಸ್ತವವಾಗಿ ಹಾಗಾಗುವುದಿಲ್ಲವೆಂದು ನಾನು ಹೇಳಬಲ್ಲೆ. ಏಕೆಂದರೆ ತಾವೇ ಡಿಸ್ಟ್ರಿಕ್ಟ್ ಬೋರ್ಡ್‌ಗಳ ವಿಷಯ ನೋಡಿದ್ದೀರಿ. ಬಡ್ಜೆಟ್ ಏನೋ ಮೇಲಿಂದ ಮಂಜೂರಾಗಿ ಬರುವುದು ಸ್ವಲ್ಪ ನಿಧಾನವಾಗಬಹುದು. ಅಂದಮಾತ್ರಕ್ಕೇ ಅವರ

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು)

ದಿನಚರಿ ಕೆಲಸಗಳೇನೂ ನಡೆಯದೆ ನಿಂತುಹೋಗುವುದಿಲ್ಲ. ಏನಿದ್ದರೂ ಹೊಸದಾಗಿ ಯಾವುದಾದರೂ ಬಾಬುಗಳನ್ನು ಸೇರಿಸಿದ್ದರೆ ಅಂಥ ಸಂದರ್ಭದಲ್ಲಿ ಈ ಹೊಸ ಬಾಬುಗಳಿಗೆ ಕೈ ಹಾಕದಹಾಗೆ ಅವರು ಕಾಯಬೇಕಾಗುತ್ತದೆ ಅಷ್ಟೇ. ದಿನಚರಿ ಕೆಲಸಗಳಿಗೇನೂ ಕಾಯಬೇಕಾಗಿಲ್ಲ. In anticipation of the sanction of the Budget they will go on with their normal work. ಅಂಥವುಗಳಿಗೇನೂ ತೊಂದರೆಯಿರುವುದಿಲ್ಲ. ಆದ್ದರಿಂದ ಈ ತಿದ್ದುಪಡಿಯ ಪ್ರಕಾರ ಒಂದು ತಿಂಗಳಿಗೆ ಇಳಿಸಿದರೆ ಆಡಳಿತ ದೃಷ್ಟಿಯಿಂದ ಕಷ್ಟವಾಗುತ್ತದೆ. ಆದಕಾರಣ ದಯವಿಟ್ಟು ಮಾನ್ಯ ಸೂಚಕರು ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಸಿದ್ದಪ್ಪನವರು.—ಈ ಅಧಿಕಾರವನ್ನು ಡೆಪ್ಯುಟಿ ಕಮಿಷನರ್‌ರವರಿಗಾಗಲೀ ವಹಿಸುವುದಕ್ಕೆ (delegate ಮಾಡುವುದಕ್ಕೆ) ಅವಕಾಶವಿದೆಯೇ ?

The Hon'ble Sri K. T. BHASHYAM.—It is the Commissioner who has got the power.

ಶ್ರೀ ಟಿ. ಮಾದಯ್ಯಗೌಡರು.—ಸಭೆಯವರ ಅನುಮತಿಯಮೇಲೆ ನಾನು ಇದನ್ನು ವಾಪಸು ತೆಗೆದುಕೊಳ್ಳಲಿಚ್ಛಿಸುತ್ತೇನೆ.

The amendment was, by leave of the House, withdrawn.

Mr. SPEAKER.–The next amendment is also in the name of Sri T. Madiah Gowda.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).–ನನ್ನ ಇನ್ನೊಂದು ತಿದ್ದುಪಡಿ ಈ ರೀತಿಯಿದೆ :

"In item (V) of sub clause (4) of clause 47 the words 'as prescribed' shall be added at the end.'"

ಈ ಉಪವಿಧಿಯಲ್ಲಿ 'The scrutiny of such budget shall be limited to ascertain if adequate closing balance has been provided for' ಎಂದು ಹೇಳಿದೆ. ಇದಕ್ಕೆ ನಾನು ಸೂಚಿಸಿರುವ ತಿದ್ದುಪಡಿಯ ಉದ್ದೇಶವಿಷ್ಟು. ಬರೀ 'adequate closing balance' ಇರಬೇಕೆಂದು ಹೇಳಿದ ಮಾತ್ರಕ್ಕೇ ಸರಿಯಾಗಿ ಅರ್ಥವಾಗುವುದಿಲ್ಲ. ಅದರ ಮುಂದೆ 'as prescribed by rules' ಎಂದರೆ ನಿಬಂಧನೆಗಳಿಗನುಸಾರವಾಗಿ ಇಡಲಾಗಿದೆಯೆಂದು ಹೇಳಬೇಕು. ಇಲ್ಲದಿದ್ದರೆ ಯಾವುದು adequate, ಯಾವುದಲ್ಲ ಎಂಬುದು ಗೊತ್ತಾಗುವುದಿಲ್ಲ. ಒಬ್ಬ ಅಧಿಕಾರಿಗೆ adequate ಎಂದು ತೋರುವಂಥಾದ್ದು ಮತ್ತೊಬ್ಬರಿಗೆ inadequate ಎಂದು ತೋರಬಹುದು. ಆದ್ದರಿಂದ 'as prescribed by rules' ಎಂದು ಸೇರಿಸಬೇಕೆಂದು ನಾನು ಸೂಚಿಸುತ್ತೇನೆ.

Mr. SPEAKER.—Amendment moved:

"In item (V) of sub-clause (4) of clause 47, the words 'as prescribed 'shall be added at the end."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ನಾನಿದನ್ನು ವಿರೋಧಿಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ಇದು ಅನಾವಶ್ಯಕವೆಂದೇ ಹೇಳಬೇಕು. ಏಕೆಂದರೆ 47ನೆಯ ಸೆಕ್ಷನ್ನಿನ ಪ್ರಾರಂಭವನ್ನು ನೋಡಿದರೆ ಇದರ ಅರ್ಥವಾಗುತ್ತದೆ. ಅಲ್ಲಿ ಹೇಳಿದೆ:

"Subject to such rule as may be prescribed in this behalf by the Government, every panchayet shall prepare a budget of estimated receipts and expenditure...............' ಎಂದು.

ಅದರ ಪ್ರಕಾರ ಸರ್ಕಾರದವರು ಈ ನಿಬಂಧನೆಗಳನ್ನು ಮಾಡಿಯೇ ಮಾಡುತ್ತಾರೆ ; adequate closing balance ಏನೆನ್ನುವುದನ್ನು ಹೇಳಿಯೇ ಹೇಳುತ್ತಾರೆ. ಅಲ್ಲದೆ 3ನೆಯ ಉಪವಿಧಿಯಲ್ಲಿ :

"No expenditure which is not provided for in the Budget as passed by the Commissioner or such other officer shall be incurred without the previous sanction of the Commissioner"

ಎಂದು ಹೇಳಿದೆ. ಆಮೇಲೆ, ಷುರುವಿನಲ್ಲಿ 'Subject to such rules as may be prescribed' ರೀತಿಯಲ್ಲಿ ತಯಾರಾದಂಥಾದ್ದನ್ನು scrutiny ಮಾಡುವುದರಲ್ಲಿ,

'It shall be limited to ascertain if adequate closing balance has been provided for.'

ಎಂದು ಹೇಳಿದಮೇಲೆ, Subject to rules ಪ್ರಕಾರವೇ ಆಗಿದೆಯೇ ಎಂಬುದನ್ನು scrutinize ಮಾಡಬೇಕೆಂದು ಅರ್ಥವಾಗುತ್ತದೆ. ಆದ್ದರಿಂದ ಈ ತಿದ್ದುಪಡಿಯಲ್ಲಿ ಸೂಚಿಸಿರುವುದರ ಅರ್ಥ ಆ ಕ್ಲಾಜಿನಲ್ಲೇ ಈಗಲೂ ಇದ್ದೇ ಇದೆ. ಆದ್ದರಿಂದ ಇದನ್ನು ಸೇರಿಸುವುದು ಅನವಶ್ಯಕವೆಂದು ಹೇಳುತ್ತೇನೆ.

*ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಒಂದುವೇಳೆ ಹಾಗೆ ಸೇರಿಸುವುದರಲ್ಲೇನೂ ತೊಂದರೆಯಿಲ್ಲ, ಮೇಲೆ ಹೇಳಿದ್ದನ್ನೇ ಮತ್ತೆ ಹೇಳಿದಹಾಗಾಗುತ್ತದೆ. ಆದ್ದರಿಂದ prescribed by rule ಎಂದು ಸೇರಿಸಬಹುದು. I accept the amendment.

Mr. SPEAKER.—The question is:

"That in item (v) of sub-clause (4) of clause 47, the words 'as prescribed' shall be added at the end."

The motion was adopted.

Mr. SPEAKER.—The question is:

"That clause 47, as amended, stand part of the Bill."

The motion was adopted.

Clause 47, as amended, was added to the Bill.

Mr. SPEAKER.—Clause 48. The question is:

"That clause 48 stand part of the Bill".

The motion was adopted.

Clause 48 was added to the Bill.

Mr. SPEAKER.—When shall we reserve further discussion on the clauses of this Bill?

Sri H. M. CHANNABASAPPA (Mysore District—General).—Tomorrow, Sir.

Mr. SPEAKER.—But, tomorrow we have to take up the draft Rules of Procedure.

The Hon'ble Sri K. T. BHASHYAM (Minister for Law and Labour).—We can resume discussion on the consideration of clauses as soon as we finish up the Rules of Procedure.

Mr. SPEAKER.—Yes. The House will now adjourn till One of the Clock tomorrow.

The Assembly adjourned at Three Minutes past Six of the Clock to meet again at One of the Clock on Thursday 31st May 1951.

WD 3189—GPB—500—18-7-51

LEGISLATIVE ASSEMBLY.

TWENTY-THIRD DAY.

Thursday, 31st May 1951.

The Assembly met in the Assembly Hall, Old Public Offices, Bangalore, at Ten Minutes past One of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS.

(to which oral answers were given)

Mr. SPEAKER (The Hon'ble Sri V. Venkatappa).—Question No. 189. Sri A. G. Ramachandra Rao.

Transferring certain Government Industrial Concerns to private individuals and Government taking up new ventures.

**Q.*—189. Sri A. G. RAMACHANDRA RAO (Hassan District—General).—

Will the Government be pleased to state :—

(*a*) the names and number of industries, whose capital is less than Rs. 10 lakhs in which Government have more than 51 per cent of capital or are controlled and managed by Government;

(*b*) whether they have at any time thought of transferring them to private individuals and taking up new ventures;

(*c*) whether they have formulated any policy in the matter?

A.—The Hon'ble Sri H. C. DASAPPA (Minister for Finance and Industries).—

(*a*) Six, namely—

(1) The Mysore Implements Factory, Hassan.

(2) The Government Dichromate Factory, Belagula.

(3) The Government Soap Factory, Bangalore.

(4) The Central Industrial Workshop, Bangalore.

(5) The Government Silk Filatures, Kankanhalli.

(6) The Government Silk Weaving Factory, Mysore.

(*b*) and (*c*) The desirability of gradually transferring the ownership and management of some of the Government Industrial Concerns to Joint Stock Companies is under the consideration of Government. No decision has yet been taken in regard to the number or nature of the concerns to be so transferred or the terms and conditions of transfer nor has any general policy been formulated in the matter.

Sri A. G. RAMACHANDRA RAO.—May I presume that these six industries are neither basic nor classified as essential?

The Hon'ble Sri H. C. DASAPPA.—They may not be classified as key or basic, but they certainly are essential.

Sri A. G. RAMACHANDRA RAO.—In the ordinary sense I mean industries are classfied as basic or essential. Do they come technically under that?

The Hon'ble Sri H. C. DASAPPA.—They may not be basic or key Industries.

Sri A. G. RAMACHANDRA RAO.—These industries were started with the view that they might be developed and handed over to private people and fresh industries might be taken up, is it not?

The Hon'ble Sri H. C. DASAPPA.—Not all. Take the case of the Central Industrial Workshop. There is no idea of making it over to a private agency, nor the Government Dichromate Factory which was started during the war at the instance of the Government of India. So some of them no doubt were started with the idea that the Hon'ble Member has just now expressed.

Sri A. G. RAMACHANDRA RAO.—So industries Nos. 1, 3, 5 and 6 could easily come under that category, namely, that they would be developed and then handed over to private agencies?

The Hon'ble Sri H. C. DASAPPA.—Roughly.

Sri A. G. RAMACHANDRA RAO.—Have these industries been in existence for over a decade or two?

The Hon'ble Sri H. C. DASAPPA.—Yes.

Sri A. G. RAMACHANDRA RAO.—Are they in a fit condition to be handed over to private agencies?

The Hon'ble Sri H. C. DASAPPA.—Yes.

Sri A. G. RAMACHANDRA RAO.—How many cases of industrial concerns are under the consideration of Government for being transferred to private agencies?

The Hon'ble Sri H. C. DASAPPA.—In the case of one or two, they were under consideration some time back before we came to power. As regards the others we are now considering what to do with them.

Sri V. M. MASCARENHAS (Bangalore Retroceded Area—General).—In the last session, the Government promised to consider the question of defining the policy in this connection. Has any definite action been taken since by the Government in this regard?

The Hon'ble Sri H. C. DASAPPA.—We have received Sri Kasturbhai Lalbhai's report and recently Sri Gorwall came here and he is also looking into this matter and I think he will be submitting a report shortly to the Government of India. We will take all those points into consideration and decide.

Sri V. M. MASCARENHAS.—Is it possible to give a rough idea as to when.........................

The Hon'ble Sri H. C. DASAPPA.—We do not want to have any kind of schedule to do this. There are various circumstances as the Hon'ble Member will know, that will have to be taken into consideration. Supposing a concern is flourishing very well. The question will arise as to why we should lose the profits that the concern is giving to the Government. If it is not faring very well, the question again will arise that it may not be very wise or profitable to transfer it to a private concern because it may not fetch as much return and it may be better to rehabilitate that. So there are various considerations, but the general policy is there.

Sri V. M. MASCARENHAS.—Is it not better for them once for all to make up their mind and tell the public the action that is proposed to be taken, instead of keeping them under suspense?

The Hon'ble Sri H. C. DASAPPA.—No question of suspense arises. The Government is the owner of the concern. I think the choice, as to the time and the manner of transferring the industries must be left to the Government even as a private person would be exercising his own discretion as to when he should like to part with any property of his.

Sri A. BHEEMAPPA NAIK (Chitaldrug District—General).—What about the buildings in which these industries are located? Will they also be transferred or sold away?

The Hon'ble Sri H. C. DASAPPA.—Nothing has been decided upon. That is a point that will give rise to a problem.

Sri A. BHEEMAPPA NAIK.—I am particularly referring to the area near the Soap Factory.

The Hon'ble Sri H. C. DASAPPA.—That is why I said that that will create a problem which we have got to solve.

Sri A. BHEEMAPPA NAIK.—Will the Hon'ble Minister consider the feasibility of retaining that area since it is located very close to the Technological Institute which in due course might develop to a greater extent?

Mr. SPEAKER.—The Hon'ble Member is making a representation.

Sri A. BHEEMAPPA NAIK.—Is he considering that aspect?

The Hon'ble Sri H. C. DASAPPA.—I can assure the Hon'ble Member that there is no idea of giving away the premises of the Soap Factory because the Government themselves have an idea of transferring the Soap Factory to the new site in the Industrial Suburb.

Disposal of applications under the Irrigation well subsidy Scheme.

*ಪ್ರಶ್ನೆ 52.—ಶ್ರೀ ಎಂ. ಎಸ್. ಮಹಂತದೇವರು (ಮೈಸೂರು ಜಿಲ್ಲೆ) [On behalf of ಶ್ರೀ ಬಿ. ಹುಚ್ಚೆಗೌಡರು (ತುಮಕೂರು ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆಸ್ಥಾನ)].—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ನೀರಾವರಿ ಬಾವಿಗಳನ್ನು ತೋಡಿಸುವುದಕ್ಕೆ ಸಹಾಯದ್ರವ್ಯವನ್ನು ಕೊಡತಕ್ಕ ಯೋಜನೆಯನ್ನು ಯಾವಾಗ ಮಂಜೂರು ಮಾಡಲಾಯಿತು ;

(b) ಸರ್ಕಾರದವರು ಈ ಕೆಳಗೆ ಕಂಡಂತೆ ವಿವರಗಳನ್ನು ಒದಗಿಸಬೇಕೆಂದು ಪ್ರಾರ್ಥನೆ:—

(i) ಪ್ರತಿ ವರ್ಷವೂ ಬಂದ ಅರ್ಜಿಗಳ ಸಂಖ್ಯೆ ;

(ii) ಆ ಪೈಕಿ ಎಷ್ಟು ಅರ್ಜಿಗಳ ಸಂಬಂಧದಲ್ಲಿ ಮಂಜೂರಾತಿಯನ್ನು ಕೊಡಲಾಯಿತು ;

(iii) ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಯಿತು ;

(iv) ಪ್ರತಿ ವರ್ಷವೂ ಎಷ್ಟು ಮೊಬಲಗನ್ನು ಮಂಜೂರು ಮಾಡಲಾಯಿತು ಮತ್ತು ವಾಸ್ತವವಾಗಿ ಎಷ್ಟು ಮೊಬಲಗನ್ನು ವಿನಿಯೋಗಿಸಲಾಯಿತು ;

(v) ಪ್ರತಿ ವರ್ಷವೂ ಪೂರೈಸಲ್ಪಟ್ಟ ಬಾವಿಗಳ ಸಂಖ್ಯೆ ಎಷ್ಟು ?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವಿನ್ಯೂ ಮತ್ತು ಎಕ್ಸೈಜು ಶಾಖೆಗಳ ಸಚಿವರು).—

(a) 1946ನೆಯ ಇಸವಿಯಲ್ಲಿ.

(b) (i), (ii), (iii), (iv) ಮತ್ತು (v) ವಿವರಗಳನ್ನು ಇದಕ್ಕೆ ಲಗತ್ತಿಸಿರುವ ತಖ್ತೆಯಲ್ಲಿ ಒದಗಿಸಲಾಗಿದೆ, (ಇದರಡಿ ಮುದ್ರಿಸಲಾಗಿರುವ ತಖ್ತೆಯನ್ನು ದಯೆಯಿಟ್ಟು ನೋಡಿ).

1945–46ನೆಯ ಇಸವಿಯಿಂದ ನೀರಾವರಿ ಬಾವಿಗಳನ್ನು ತೋಡಿಸಲು ಸಹಾಯದ್ರವ್ಯವನ್ನು ಒದಗಿಸುವುದಕ್ಕಾಗಿ ಏರ್ಪಟ್ಟ ಯೋಜನೆಗೆ ಸಂಬಂಧಪಟ್ಟ ವಿವರಗಳನ್ನು ತೋರಿಸುವ ತಃಖೆ.

	1945—46	1946—47	1947—48	1948—49	1949—50	1950—51
1 ಪ್ರತಿ ವರ್ಷವೂ ಬಂದ ಅರ್ಜಿಗಳ ಸಂಖ್ಯೆ.	5,224	5,243	6,513	9,882	5,440	3,871
2 ಮಂಜೂರುಮಾಡಲ್ಪಟ್ಟ ಅರ್ಜಿಗಳ ಸಂಖ್ಯೆ.	2,141	2,288	2,125	1,730	1,099	628
3 ತಿರಸ್ಕರಿಸಲ್ಪಟ್ಟ ಅರ್ಜಿಗಳ ಸಂಖ್ಯೆ.	2,618	2,815	2,780	5,444	1,675	1,041
4 ಪ್ರತಿ ವರ್ಷವೂ ಮಂಜೂರು ಮಾಡಲ್ಪಟ್ಟ ಮೊಬಲಗು.	6,40,393	9,71,889	5,33,027	7,85,738	6,21,698	3,42,789
5 ವಾಸ್ತವವಾಗಿ ವಿನಿಯೋಗಿಸಲ್ಪಟ್ಟ ಮೊಬಲಗು.	4,97,503	7,32,668	5,05,734	6,71,086	5,96,347	3,14,213
6 ಪೂರ್ತಿಗೊಳಿಸಲ್ಪಟ್ಟ ಬಾವಿಗಳ ಸಂಖ್ಯೆ.	1,010	979	1,136	449	915	715

ಶ್ರೀ ಎಂ. ಎಸ್. ಮಹಂತದೇವರು (ಮೈಸೂರು ಜಿಲ್ಲೆ).—ಈ ಬಾವಿಗಳನ್ನು ಇಷ್ಟೇ ಕಾಲದಲ್ಲಿ ಪೂರೈಸಬೇಕೆಂದು ನಿಬಂಧನೆ ಏನಾದರೂ ಇದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸುಮಾರು ಆರು ತಿಂಗಳ ಒಳಗೆ ಪೂರೈಸಬೇಕು ಎಂದು ತಿಳಿಸಿದೆ.

ಶ್ರೀ ಎಂ. ಎಸ್. ಮಹಂತದೇವರು.—ಆರು ತಿಂಗಳೊಳಗೆ ಮಾಡದಿದ್ದರೆ, ಆ ರೀತಿ ಮಾಡಲೇಬೇಕೆಂದು ಕಡ್ಡಾಯಮಾಡಿ ಕ್ರಮ ಜರುಗಿಸುವುದಕ್ಕೆ ಏರ್ಪಾಡು ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಷ್ಟೂ ಚೆಕ್‌ಮಾಡುತ್ತಾರೆ. ಪಾರ್ಟಿಗೆ ಅನಾನುಕೂಲವಾದ ಸಂದರ್ಭದಲ್ಲಿ ಸ್ವಲ್ಪಕಾಲ ಮುಂದುವರಿಸುವುದು ರೂಢಿಯಲ್ಲಿದೆ.

ಶ್ರೀ ಎಂ. ಎಸ್. ಮಹಂತದೇವರು.—ಒಟ್ಟು ಹತ್ತು ಸಾವಿರ ಬಾವಿಗಳಿಗೆ ಮಂಜೂರು ಮಾಡಿದ್ದೀರಿ. ಆ ಪೈಕಿ ಐದು ಸಾವಿರ ಮಾತ್ರ ಆಗಿದೆ. ಬಾಕಿ ಐದು ಸಾವಿರ ಯಾವ ಸ್ಥಿತಿಯಲ್ಲಿದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಐದು ಸಾವಿರದ ಎರಡು ನೂರು ಪೂರ್ತಿಯಾಗಿದೆ. ಬಾಕಿಯದು ಆಗುತ್ತಾ ಇದೆ, near ing completion in various stages.

ಶ್ರೀ ಎಂ. ಎಸ್. ಮಹಂತದೇವರು.—ಒಂದೊಂದು ಬಾವಿಗೆ ಎಷ್ಟು ಸಹಾಯ ದ್ರವ್ಯ ಕೊಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ವರ್ಷ 500 ರೂಪಾಯಿನಂತೆ ಕೊಡಲಾಯಿತು, ಕೆಲವು ವರ್ಷ 1,000 ರೂಪಾಯಿನವರೆಗೂ ಕೊಟ್ಟಿದೆ. ಈಗ 500 ರೂಪಾಯಿ ಗ್ರಾಂಟು, 500 ರೂಪಾಯಿ ಸಾಲ ಕೊಡಲಾಗುತ್ತಿದೆ.

ಶ್ರೀ ಎಂ. ಎಸ್. ಮಹಂತದೇವರು.—ಅಲಾಟ್‌ಮೆಂಟ್ ಮಾಡಿರುವುದು ಜಾಸ್ತಿಯಾಗಿದ್ದರೂ ಅರ್ಜಿಗಳನ್ನು ನಿರಾಕರಿಸಿ ಕಡಿಮೆ ಕೊಟ್ಟಿರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅನರ್ಹವಾದಂಥ ಅರ್ಜಿಗಳನ್ನು ನಿರಾಕರಿಸಲಾಗಿದೆ.

ಶ್ರೀ ಎಂ. ಎಚ್. ಮಹಂತದೇವರು.—ಎಂದರೆ ಅಂಥ ಸ್ಥಳದಲ್ಲಿ ಬಾವಿ ತೆಗೆಯುವ ಪಕ್ಷಕ್ಕೆ ಅಲ್ಲಿ ನೀರು ಬರುವುದಿಲ್ಲ ಎಂಬ ಕಾರಣವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಒಂದೇ ಕಾರಣವಲ್ಲ, ಅನೇಕ ಕಾರಣಗಳಿವೆ, ಅವೆಲ್ಲವನ್ನೂ ಈಗ ನಾನು ಹೇಳಲಿಚ್ಛಿಸುವುದಿಲ್ಲ.

ಶ್ರೀ ಎಂ. ಎಚ್. ಮಹಂತದೇವರು.—ರೈತರಿಗೆ ತಾವು ಕೊಡತಕ್ಕ 500 ರೂಪಾಯಿ ಸಾಲದೆ, ಅವರು ತಮ್ಮ ಬಂಡವಾಳವನ್ನು ಖರ್ಚು ಮಾಡಿದರೂ ಸಹ ಕೆಲಸ ನಿಂತು ಹೋಗಿರುವುದು ಗೊತ್ತೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ರೀತಿ ಕೆಲವು ಇವೆ.

ಶ್ರೀ ಎಂ. ಎಚ್. ಮಹಂತದೇವರು.—ಅದನ್ನು ಸರಿಪಡಿಸುವುದಕ್ಕೆ ಏನು ಏರ್ಪಾಡು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೋಸ್ಕರವೇ ನಾವು ಏಕದಂ 500 ರೂಪಾಯಿ ಕೊಡುವುದಿಲ್ಲ. ಕೆಲಸ ಪ್ರೋಗ್ರೆಸ್ ಆಗಿರುವುದು ನೋಡಿಕೊಂಡು ಕೊಡುತ್ತಾ ಇದ್ದೇವೆ. ಹಾಗಾದರೂ ಅವರಿಂದ ಅಸಾಧ್ಯವಾದರೆ ನಾವೇನೂ ಮಾಡಲಿಕ್ಕಾಗುವುದಿಲ್ಲವೆಂದು ಬಹಳ ವ್ಯಾಕುಲದಿಂದ ತಿಳಿಸಬೇಕಾಗಿದೆ.

ಶ್ರೀ ಎಂ. ಎಚ್. ಮಹಂತದೇವರು.—ಆ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದೇ ನಿಂತು ಹೋಗಿರುವ ಬಾವಿಗಳು ಎಷ್ಟಿವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಷ್ಟೇನೂ ಹೆಚ್ಚಾಗಿಲ್ಲ. ಕರಾರುವಾಕ್ಕಾಗಿ ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಬಿ. ಎಚ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಒಂದೊಂದು ಡಿಸ್ಟ್ರಿಕ್ಟ್‌ಗೆ ಇಷ್ಟಿಷ್ಟು ಎಂಬುದಾಗಿ ಬಾವಿಗಳನ್ನು ಕೊಡುತ್ತೀರಾ ಅಥವಾ ಕೇಳಿದ ಕಡೆ ಕೊಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಡಿಸ್ಟ್ರಿಕ್ಟ್‌ಗೆ ಇಷ್ಟು ಅಂತ ಅಲಾಟ್ ಮಾಡುತ್ತೇವೆ. ಅದನ್ನು ಡೆಪ್ಯುಟಿ ಕಮಿಷನರ ಮತ್ತು ಸ್ಥಳೀಯ ರೆವಿನ್ಯೂ ಆಫೀಸರ ಸಲಹೆಯ ಮೇಲೆ ಕೊಡಲಾಗುತ್ತದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಬಾವಿ ಬೇಕೆಂದು ಕೊಟ್ಟಿರುವ ಅರ್ಜಿಗಳನ್ನು ಪರಿಶೀಲನೆಗೆ ತೆಗೆದುಕೊಳ್ಳದಿರಲು ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪರಿಶೀಲನೆಗೆ ತೆಗೆದುಕೊಂಡಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹಾಸನ ಜಿಲ್ಲೆಯಲ್ಲಿ 800 ಅರ್ಜಿಗಳು ಬಂದಿದ್ದು ಅನೇಕವನ್ನು ಪರಿಶೀಲನೆಗೆ ತೆಗೆದುಕೊಳ್ಳದಿರುವುದು ಗೊತ್ತೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಬಾವಿಗಳನ್ನು ಆರು ತಿಂಗಳೊಳಗೆ ಮುಗಿಸಬೇಕೆಂದು ಹೇಳಿದಿರಿ, ಬಾವಿಗಳನ್ನು ಬೇಗ ತೆಗೆಯಲು ಸೌಕರ್ಯವನ್ನು, ಎಂದರೆ, ಎಂಜಿನ್ನು, ಡೈನಮೈಟು ಮುಂತಾದುವನ್ನು ರೈತರು ಕೇಳಿದರೆ ಇವುಗಳನ್ನೊದಗಿಸಲು ಸಿಬ್ಬಂದಿಯನ್ನೇನಾದರೂ ಸರ್ಕಾರದವರು ಇಟ್ಟಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ, ಇದಕ್ಕಾಗಿ ಸಿಬ್ಬಂದಿಯನ್ನೇನೂ ಇಟ್ಟಿಲ್ಲ. ಅವರ ಕೆಲಸವಾದ್ದರಿಂದ ಅವರೇ ಮಾಡಿಕೊಳ್ಳಬೇಕು. ಸರ್ಕಾರದವರನ್ನು ಕೇಳಿದರೆ ಅವಶ್ಯಕವಾದ ಸಹಾಯವನ್ನು ಕೊಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಅನೇಕ ಕಡೆಗಳಲ್ಲಿ ಬಾವಿಯಿಂದ ನೀರು ತೆಗೆಯಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಎಂಜಿನ್ನಿನ ಸಹಾಯವಿಲ್ಲದಿದ್ದರೆ ಕಷ್ಟವಾಗುತ್ತದೆಂಬುದು ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಅಷ್ಟು ಕಷ್ಟವಾದ ಬಾವಿಗಳಿರುವುದಿಲ್ಲ. ಯಾರಾದರೂ ಕೇಳಿದರೆ ಸಾಧ್ಯವಾದ ಸಹಾಯವನ್ನೊದಗಿಸುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಇದಕ್ಕೆ ಸಾಕಾದಷ್ಟು ಎಂಜಿನ್ನುಗಳು ಮತ್ತು ಸಿಬ್ಬಂದಿಯನ್ನಿಡುವುದಕ್ಕಾಗುತ್ತದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೀರಾವರಿ ಬಾವಿಗಳಿಗಾಗಿಯೇ ಬೇರೆ ಸಿಬ್ಬಂದಿಯನ್ನಿಡುವ ಪರಿಸ್ಥಿತಿ ಇಲ್ಲವೆಂದು ಹೇಳಬೇಕಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಉತ್ತರದ 16ನೆಯ ಪುಟದಲ್ಲಿ number of applications rejected ಎಂದು ವಿವರಗಳನ್ನು ಕೊಡಲಾಗಿದೆ, ಇದರಲ್ಲಿ ಇನಾಮ್ ಮತ್ತು ಜಹಗೀರಿ ಗ್ರಾಮಗಳವರಿಂದ ಬಂದ ಅರ್ಜಿಗಳೂ ಸೇರಿವೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಶೃಂಗೇರಿ, ಯಳಂದೂರು ಇಂತಹ ಗ್ರಾಮಗಳಿಂದ ಅರ್ಜಿಗಳು ಬಂದರೆ ಅವರಿಗೆ ಕೊಡುತ್ತಿರಲಿಲ್ಲ, ಈಗ ಕೊಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದರೆ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗಾಗಲೇ ಕೊಡುತ್ತಿದ್ದೀರೋ ಅಥವ ಹೊಸದಾಗಿ ಇನ್ನು ಮೇಲೆ ಮಾಡುತ್ತೀರೊ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೊಸದಾಗಿ ಪರಿಶೀಲನೆ ಮಾಡಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಸುಮಾರು 5,200 ಬಾವಿಗಳು ಪೂರ್ತಿಯಾಗಿವೆ. ಇವುಗಳಿಂದ ನೀರಾವರಿಯಾಗಿರುವ ಜಮೀನೆಷ್ಟು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರಾಸರಿ ಒಂದು ಬಾವಿಗೆ $2\frac{3}{4}$ ಎಕರೆ ನೀರಾವರಿಯಾಗುತ್ತದೆಂದು ಹೇಳಬಹುದು.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಸರ್ಕಾರದಿಂದ ಪಡೆದ ಹಣದಿಂದ ಬಾವಿಗಳನ್ನು ತೋಡಿಸುತ್ತಾರೆಯೋ ಇಲ್ಲವೆ ಎಂಬುದನ್ನು ನೋಡಿಕೊಳ್ಳಲು ಸಿಬ್ಬಂದಿ ಇದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ರೆವಿನ್ಯೂ ಅಧಿಕಾರಿಗಳು ಈ ಕೆಲಸ ಮಾಡುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡರು.—ಕೆಲವರು ಹಣವನ್ನು ತೆಗೆದುಕೊಂಡು ಬಾವಿಗಳನ್ನು ತೋಡಿಸಿಲ್ಲವೆಂಬುದು ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಅಂಥವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥವರಿಗೆ ವಾರಂಟು ಕಳುಹಿಸಿ, ಹಣ ವಸೂಲು ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಈ ಬಾವಿಗಳ ಕೆಳಗೆ ರಾಗಿ ಬೆಳೆಯಬೇಕೆಂಬ ನಿಯಮವಿದೆಯಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಹಾರ ಬೆಳೆಗಳನ್ನು ಬೆಳೆಯಬೇಕೆಂದಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಹಾಗೆ ಬೆಳೆಯದಿದ್ದರೆ ಏನು ಮಾಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥವರಿಂದ ಹಣವನ್ನು ವಸೂಲು ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಅಂತಹ ಸಂದರ್ಭಗಳು ಸರ್ಕಾರದವರ ಗಮನಕ್ಕೆ ಬಂದಿವೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿವೆ. ತುಮಕೂರು ಜಿಲ್ಲೆಯಲ್ಲೇ 50 ಕೇಸುಗಳಿವೆ.

Restoration of Pathapalli Majure Hosahalli Tank, Srinivasapur Taluk.

* ಪ್ರಶ್ನೆ 62.—ಶ್ರೀ ಜಿ. ನಾರಾಯಣಗೌಡರು (ಕೋಲಾರ ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕಂಡ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಶ್ರೀನಿವಾಸಪುರ ತಾಲ್ಲೂಕು ಹೊಗಳಗೆರೆ ಸರ್ಕಲಿಗೆ ಸೇರಿದ ಪಾತಪಲ್ಲಿ ಮಜುರೆ ಹೊಸಹಳ್ಳಿ ಕೆರೆಯನ್ನು ಉಪಯೋಗಿಸದೆ ಬಿಟ್ಟು ಬಿಟ್ಟುದು ಯಾವಾಗ ;

(b) ಈ ಕೆರೆಗೆ ಸೇರಿದ ಅಚ್ಚುಕಟ್ಟಿನ ವಿಸ್ತೀರ್ಣವೇನು ;

(c) ಹೊಸಹಳ್ಳಿ ಗ್ರಾಮಕ್ಕೆ ಯಾವ ಕೆರೆಯೂ ಇಲ್ಲವೆಂಬುದು ಸರ್ಕಾರದವರಿಗೆ ತಿಳಿದಿವೆಯೆ ;

(d) ಅಚ್ಚುಕಟ್ಟನ್ನು ಸಾಗುವಳಿಗೆ ಬಿಟ್ಟುಕೊಡಲಾಗಿದೆಯೆ ?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವಿನ್ಯೂ ಮತ್ತು ಎಕ್ಸೈಜು ಶಾಖೆಯ ಸಚಿವರು) —

(a) ಅದನ್ನು ಉಪಯೋಗಿಸದೆ ಬಿಟ್ಟು ಸುಮಾರು 60 ವರ್ಷಗಳಾಗಿವೆ.

(b) 15 ಎಕರೆಗಳು-26 ಗುಂಟೆಗಳು.

(c) ತಿಳಿದಿದೆ.

(d) ಇಲ್ಲ.

ಶ್ರೀ ಜಿ. ನಾರಾಯಣಗೌಡರು.—ಈ ಕೆರೆಯನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಕೆರೆಯನ್ನು ಕೈಬಿಟ್ಟು 60 ವರ್ಷವಾಗಿದೆ. ಇನ್ನುಮುಂದೆ ಹೊಸದಾಗಿ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಜಿ. ನಾರಾಯಣಗೌಡರು.—ಆ ಕೆರೆಯನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಸಾಧ್ಯವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ಅಚ್ಚುಕಟ್ಟಿರುವುದು 15 ಎಕರೆ. ಅಂದಾಜು ತಯಾರಿಸಿ ಎಷ್ಟು ಹಣ ಖರ್ಚಾಗಬಹುದೆಂದು ನೋಡಿ ಯೋಚನೆ ಮಾಡಬೇಕು.

ಶ್ರೀ ಜಿ. ನಾರಾಯಣಗೌಡರು.—ಜೀರ್ಣೋದ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಅದರ ಅಚ್ಚುಕಟ್ಟನ್ನು ವ್ಯವಸಾಯಕ್ಕೆ ಕೊಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಮಾಡುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಈ ಕೆರೆಯನ್ನು ಜೀರ್ಣೋದ್ಧಾರ ಮಾಡಬೇಕೆಂದು ಅರ್ಜಿ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿರಬಹುದು, ನೋಟೀಸ್ ಬೇಕು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಹಿಂದೆ ಅಂದಾಜಾಗಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಈ ಕೆರೆಯ ಅಂಗಳ ಎಷ್ಟಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಸಾಗುವಳಿಗೆ ಕೊಡಲು ಕೆರೆಯ ಅಂಗಳ ಜಾಸ್ತಿ ಇದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಅಂದಾಜು ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗಲೇ ಉತ್ತರ ಹೇಳಿದ್ದೇನೆ.

Arrangement for payment of Pay or Potigi to village officers transferred from Madras State to Mysore.

* ಪ್ರಶ್ನೆ 69.—ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಡಿಸ್ಟ್ರಿಕ್ಟು—ನಿಮ್ನ ತರಗತಿಗಳವರ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಮೈಸೂರು ಸಂಸ್ಥಾನದಿಂದ ಮದರಾಸು ಪ್ರಾಂತಕ್ಕೂ ಮತ್ತು ಮದರಾಸು ಪ್ರಾಂತದಿಂದ ಮೈಸೂರು ಸಂಸ್ಥಾನಕ್ಕೂ ವರ್ಗಾಯಿಸಲಾಗಿರುವ ಗ್ರಾಮಗಳ ಸಂಖ್ಯೆ, ಅವುಗಳ ಹೆಸರುಗಳು, ಹುಟ್ಟುವಳಿ ಮೊದಲಾದುವು ಮತ್ತು ಅವುಗಳು ಹಾಗೆ ವರ್ಗಾಯಿಸಲ್ಪಟ್ಟ ತಾರೀಖುಗಳು;

(b) ಮದರಾಸು ಪ್ರಾಂತದಿಂದ ಮೈಸೂರು ಸಂಸ್ಥಾನಕ್ಕೆ ಬರತಕ್ಕ ಪಟೇಲರುಗಳ, ಶಾನುಭೋಗರುಗಳ, ತೋಟಿಗಳು ಮತ್ತು ತಳವಾರರುಗಳ (ಅಥವಾ ಮದರಾಸು ಪ್ರಾಂತದಲ್ಲಿ ಬೇರೆ ಯಾವುದಾದರೂ ಹೆಸರಿನಿಂದ ಕರೆಯಲ್ಪಡತಕ್ಕ ತೋಟಿಗಳು ಅಥವಾ ತಳವಾರರುಗಳ) ಸಂಖ್ಯೆ ಎಷ್ಟು;

(c) ಗ್ರಾಮ ನೌಕರರುಗಳಿಗೆ ಸಂಬಳಗಳನ್ನು ಕೊಡಲು ಮಾಡಿರತಕ್ಕ ಏರ್ಪಾಡುಗಳೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವಿನ್ಯೂ ಮತ್ತು ಎಕ್ಸೈಜು ಶಾಖೆಯ ಸಚಿವರು).—

ಉತ್ತರ.—(a) ಮೈಸೂರು ಸಂಸ್ಥಾನದಿಂದ ಮದರಾಸು ಪ್ರಾಂತಕ್ಕೆ ವರ್ಗಾಯಿಸಲಾಗಿರುವ ಗ್ರಾಮಗಳು :

ತುಮಕೂರು ಡಿಸ್ಟ್ರಿಕ್ಟು

ಯಾವುವೂ ಇಲ್ಲ.

ಬೆಂಗಳೂರು ಡಿಸ್ಟ್ರಿಕ್ಟು

ಯಾವುವೂ ಇಲ್ಲ.

(ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.)

ಕೋಲಾರ ಡಿಸ್ಟ್ರಿಕ್ಟು.

ಗ್ರಾಮ		ಹುಟ್ಟುವಳಿ (ರೆವೆನ್ಯೂ) ರೂ.	ಆ.	ಪೈ
1 ವರದೇಕೊಪ್ಪ	...	438	0	0
2 ಬೈಪರೆಡ್ಡಿಹಳ್ಳಿ	...	393	0	0
3 ಗೊಲ್ಲಹಳ್ಳಿ	...	211	0	0
4 ಹೊಸಪೇಟೆ	...	424	0	0
5 ಚಿನ್ನಾರದೊಡ್ಡಿ	...	875	0	0
6 ಹಾರಕ ಚಿನ್ನೇನಪಲ್ಲಿ	...	68	0	0
7 ವೆಲಗಲ ಕುಪ್ಪ	...	44	0	0
8 ಕುಲದಾಸಪುರ	...	1,188	0	0

ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕು.

1 ಬಡಗಲಪುರ	...	311	0	0

18-2-1950

ಚಿತ್ರದುರ್ಗ ಡಿಸ್ಟ್ರಿಕ್ಟು.

1 ಜೋಡಿಕಸೆನಾಯ್ಕನಹಳ್ಳಿ	...	60	1	0
2 ಗೌರೀಪುರ	...	228	10	3
3 ಜೋಡಿ ಬೊಮ್ಮೇನಹಳ್ಳಿ	...	15	0	6
4 ಬೊಮ್ಮಘಟ್ಟ	...	1,552	4	9
5 ಸರ್ವಮಾನ್ಯ ಓಬಳಾಪುರ	...	20	10	0
6 ಬುಡ್ಡೇನಹಳ್ಳಿ	...	217	2	9

ಹಾಸನ ಡಿಸ್ಟ್ರಿಕ್ಟು.

ಯಾವುವೂ ಇಲ್ಲ.

ಮೈಸೂರು ಡಿಸ್ಟ್ರಿಕ್ಟು.

ಯಾವುವೂ ಇಲ್ಲ.

ಚಿಕ್ಕಮಗಳೂರು ಡಿಸ್ಟ್ರಿಕ್ಟು.

ಯಾವುವೂ ಇಲ್ಲ.

ಶಿವಮೊಗ್ಗ ಡಿಸ್ಟ್ರಿಕ್ಟು.

ವಿವರಗಳು ಸಿದ್ಧವಾಗಿ ದೊರೆಯುವಂತಿಲ್ಲ.

ಮದರಾಸು ಪ್ರಾಂತದಿಂದ ಮೈಸೂರು ಸಂಸ್ಥಾನಕ್ಕೆ ವರ್ಗಾಯಿಸಲಾಗಿರುವ ಗ್ರಾಮಗಳು.

1 ಕೋಟಗಾನಹಳ್ಳಿ ...
2 ಹೊನ್ನಾಪುರ ...
3 ಬೀಮನಕುಂಟೆ ...
4 ಬುಲ್ಲಾಸಮುದ್ರ ...
5 ವಿರೂಪಗುಂಡನಹಳ್ಳಿ ...
6 ಬದಿಗೊಂಡನಹಳ್ಳಿ ...
7 ಈರಕ್ಯಾತನಪಾಳ್ಯ ...
8 ನರ್ಜಮ್ಮನಹಳ್ಳಿ ...

		ರೂ.	ಆ.	ಪೈ
ಹುಟ್ಟುವಳಿ	...	1,278	14	0
ಜೋಡಿ	...	284	0	0

1950ನೆಯ ಇಸವಿ ಜನವರಿ 25ನೆಯ ತಾರೀಖು ವರ್ಗಾಯಿಸಲಾಯಿತು.

ಬೆಂಗಳೂರು ಡಿಸ್ಟ್ರಿಕ್ಟು.

1 ಮಡಿವಾಳಂ (ದಾಖ್ಲೆ ಗ್ರಾಮಗಳೊಡನೆ)
2 ಮರಸೂರು (ದಾಖ್ಲೆ ಗ್ರಾಮಗಳೊಡನೆ)

ಹುಟ್ಟುವಳಿ.		ರೂ.	ಆ.	ಪೈ
1 ಮಡಿವಾಳಂ	...	3,845	0	5
2 ಮರಸೂರು	...	3,587	3	4

ಕೋಲಾರ ಡಿಸ್ಟ್ರಿಕ್ಟು.

1 ಅರಳೇರಿ	...	1,524	0	0
2 ಅಂಗಸೆಟ್ಟಿಹಳ್ಳಿ	...	179	0	0
3 ಕಿಂದೇನಹಳ್ಳಿ	...	324	0	0
4 ಉಪ್ಪಾರಹಳ್ಳಿ	...	212	0	0
5 ಕಾಸಿಕುಂಚೆನಹಳ್ಳಿ	...	57	0	0
6 ಗಾಸಿಗದೇನಹಳ್ಳಿ	...	76	0	0
7 ಇತ್ತಕುಡಿ	...	2,024	0	0
8 ತೊಲಕನಹಳ್ಳಿ, 9 ಬೈಪೆನಹಳ್ಳಿ, 10 ದೊರಸಂದಹಳ್ಳಿ	...	399	0	0
11 ರಾಯಸಮುದ್ರಂ, 12 ತೊಲಸನ ಬಡ್ಡಿ, 13 ತೀರ್ಥಂಬಂಡಹಳ್ಳಿ	...	524	0	0
14 ಚೌಕಿಕುಂಟಿಪಲ್ಲಿ, 15 ಮೊರಪುರಂ, 16 ಅಂಬಾಪುರಂ	...	814	0	0

ಚಿತ್ರದುರ್ಗ ಡಿಸ್ಟ್ರಿಕ್ಟು.

ಕಣಜನಹಳ್ಳಿ (ಅಸ್ಲಿ ಗ್ರಾಮಗಳು ಮತ್ತು ನಾಲ್ಕು ದಾಖ್ಲೆ ಗ್ರಾಮಗಳು.

ಹುಟ್ಟುವಳಿ ... ರೂ. 4,479 15 0

ಹಾಸನ ಡಿಸ್ಟ್ರಿಕ್ಟು—ಯಾವುವೂ ಇಲ್ಲ.

ಮಂಡ್ಯ ಡಿಸ್ಟ್ರಿಕ್ಟು—ಯಾವುವೂ ಇಲ್ಲ.

ಚಿಕ್ಕಮಗಳೂರು ಡಿಸ್ಟ್ರಿಕ್ಟು—ಯಾವುವೂ ಇಲ್ಲ.

ಶಿವಮೊಗ್ಗ ಡಿಸ್ಟ್ರಿಕ್ಟು.

1 ಹೆಬ್ಬಿಗೆ
2 ಕೋಟೆ ಸಿರೂರು
3 ನಾಗೋಡಿ (ಅಸ್ಲಿ ಗ್ರಾಮಗಳು ಮತ್ತು ಅವುಗಳಿಗೆ ಸೇರಿದ 47 ದಾಖ್ಲೆ ಗ್ರಾಮಗಳು).

ರೆವೆನ್ಯೂ—ವಿವರಗಳು ಸಿದ್ಧವಾಗಿ ದೊರೆಯುವಂತಿಲ್ಲ.

(b) ತುಮಕೂರು ಡಿಸ್ಟ್ರಿಕ್ಟು

ಮಡಕಸಿರದಿಂದ ಮಧುಗಿರಿ ತಾಲ್ಲೂಕಿಗೆ ವರ್ಗವಾದವರುಗಳು ಒಬ್ಬರು ಪಟೇಲರು ಮತ್ತು ಶ್ಯಾನುಭೋಗರು ಇಬ್ಬರು ತಳವಾರರು ಮತ್ತು ಒಬ್ಬರು ತೋಟಿ.

ಬೆಂಗಳೂರು ಡಿಸ್ಟ್ರಿಕ್ಟು.

ಪಟೇಲರು ಇಬ್ಬರು	ತಳವಾರರು ಇಬ್ಬರು.
ಶ್ಯಾನುಭೋಗರು ಇಬ್ಬರು.	ತೋಟಿಗಳು ಮೂರುಮಂದಿ.

ಕೋಲಾರ ಡಿಸ್ಟ್ರಿಕ್ಟು.

ಶ್ಯಾನುಭೋಗರು	...	4
ಪಟೇಲರುಗಳು	...	2
ತೋಟಿಗಳು	...	5
ತಳವಾರರು	...	1

ಮೈಸೂರು ಡಿಸ್ಟ್ರಿಕ್ಟು—ಯಾರೂ ಇಲ್ಲ.

ಚಿತ್ರದುರ್ಗ ಡಿಸ್ಟ್ರಿಕ್ಟು.

ಪಟೇಲರು	...	1
ಶ್ಯಾನುಭೋಗರು	...	1
ತೋಟಿಗಳು	...	1
ತಳವಾರರು	...	2

ಶಿವಮೊಗ್ಗ ಡಿಸ್ಟ್ರಿಕ್ಟು

ವಿವರಗಳು ಸಿದ್ಧವಾಗಿ ದೊರೆಯುವಂತಿಲ್ಲ.

ಹಾಸನ ಡಿಸ್ಟ್ರಿಕ್ಟು—ಯಾರೂ ಇಲ್ಲ.

ಮಂಡ್ಯ ಡಿಸ್ಟ್ರಿಕ್ಟು—ಯಾರೂ ಇಲ್ಲ.

ಚಿತ್ರದುರ್ಗ ಡಿಸ್ಟ್ರಿಕ್ಟು—ಯಾರೂ ಇಲ್ಲ.

(c) ಮದರಾಸು ಪ್ರಾಂತದಲ್ಲಿ ನಡೆಯಿಸಲಾಗುತ್ತಿದ್ದಂತೆಯೇ, 1950ನೆಯ ಇಸವಿ ಮಾರ್ಚಿ 28ನೆಯ ತಾರೀಖು ಆರ್. 9694-700—ಎಲ್. ಆರ್. 85-49-19ನೆಯ ನಂಬರಿನ ಸರ್ಕಾರಿ ಹುಕುಮಿನ ಮೇರೆಗೆ ಅವರ ಸಂಬಳ ಮತ್ತು ಭತ್ಯಗಳನ್ನು ಪ್ರತಿ ತಿಂಗಳೂ ಕೊಡಲಾಗುತ್ತಿದೆ ಮತ್ತು 'I ಲ್ಯಾಂಡ್ ರೆವೆನ್ಯೂ ಗ್ರಾಮ ಸಿಬ್ಬಂದಿ—ಶ್ಯಾನುಭೋಗರುಗಳ ಮತ್ತು ಪಟೇಲರುಗಳ ಪೋಟಿಗೆ ಎಂಬ ಬಾಬಿನಿಂದ ಈ ವೆಚ್ಚವನ್ನು ವಹಿಸಲಾಗುತ್ತಿದೆ.

ಶ್ರೀ ಟಿ. ಹನುಮಯ್ಯನವರು.—ಈ ಪ್ರಶ್ನೆಯ (ಸಿ) ಭಾಗಕ್ಕೆ ಉತ್ತರವಾಗಿ ಪಟೇಲರು, ಶಾನುಭೋಗರು, ತೋಟಿ ತಳವಾರರುಗಳಿಗೆ ಸಂಬಳ ಮತ್ತು ಭತ್ಯಗಳನ್ನು ಕೊಡಲಾಗುತ್ತಿದೆ ಎಂದು ತಿಳಿಸಿದೆ, ಎಷ್ಟು ಸಂಬಳ ಕೊಡುತ್ತೀರಿ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಅದರ ಸಂಬಂಧವಾದ ರಿಕಾರ್ಡುಗಳು ಇನ್ನೂ ನನ್ನಲ್ಲಿಗೆ ಬಂದಿಲ್ಲ ಕರಾರುವಾಕಾಗಿ ಜ್ಞಾಪಕವಿಲ್ಲ, 20 ರೂಪಾಯಿ ಎಂದು ಜ್ಞಾಪಕ.

ಶ್ರೀ ಟಿ. ಹನುಮಯ್ಯನವರು.—ಈ ನಾಲ್ಕು ತರಹ ನೌಕರರಿಗೂ ಒಂದೇ ರೀತಿ ಸಂಬಳವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬೇರೆ ಬೇರೆ ಸಂಬಳ.

ಶ್ರೀ ಟಿ. ಹನುಮಯ್ಯನವರು.—ಮೈಸೂರು ದೇಶದಿಂದ ಮದ್ರಾಸಿಗೆ ಕೊಟ್ಟಿರುವ ಹಳ್ಳಿಗಳ ಪಟೇಲರು, ಶ್ಯಾನುಭೋಗರು, ತೋಟಿ ತಳಾರಿಗಳಿಗೆ ಅವರು ಸಂಬಳ ಕೊಡುತ್ತಾರೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನು ಮೇಲೆ ಕೊಡುತ್ತಾರೆಂದು ನಂಬಿದ್ದೇವೆ.

ಶ್ರೀ ಟಿ. ಹನುಮಯ್ಯನವರು.—ಅಲ್ಲಿಂದ ಇಲ್ಲಿಗೆ ಬಂದಿರುವ ಗ್ರಾಮ ನೌಕರರಿಗೆ ನೀವು ಸಂಬಳ ಕೊಡುತ್ತಿರುವುದರಿಂದ ಮೈಸೂರು ದೇಶದಲ್ಲಿರುವ ಇತರ ಗ್ರಾಮ ನೌಕರರಿಗೂ ಸಂಬಳ ಕೊಡುವುದು ಸೂಕ್ತವಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದು ನೀತಿಗೆ ಸಂಬಂಧಪಟ್ಟ ದೊಡ್ಡ ಪ್ರಶ್ನೆ : ಇದಕ್ಕೆ ಈಗ ಉತ್ತರ ಹೇಳಲು ಸಾಧ್ಯವಿಲ್ಲ.

ಶ್ರೀ ಟಿ. ಹನುಮಯ್ಯನವರು.—ಅಲ್ಲಿಗೆ ವರ್ಗಾಯಿಸುವುದಕ್ಕೆ ಮುಂಚೆ ಈ ವಿಚಾರದಲ್ಲಿ ಅವರೊಡನೆ ಕರಾರು ಏಕೆ ಮಾಡಿಕೊಳ್ಳಲಿಲ್ಲ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಲ್ಲಿಂದ ನಮ್ಮಲ್ಲಿಗೆ ವರ್ಗವಾಗಿ ಬಂದಿರುವ ಗ್ರಾಮ ನೌಕರರಿಗೆ ನಾವು ಸಂಬಳ ಪಾವತಿ ಮಾಡುತ್ತಿದ್ದೇವೆ. ಹಾಗೆಯೇ ಅವರೂ ಮಾಡುತ್ತಿದ್ದಾರೆಂದು ನಾವು ನಂಬಬಹುದು.

ಶ್ರೀ ಟಿ. ಹನುಮಯ್ಯನವರು.— ಅದರಂತೆಯೇ ಮೈಸೂರು ದೇಶದವರಿಗೂ ಏಕೆ ಅವರು ಕೊಡಬಾರದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಡಿ ಹೇಳಬೇಕು, ಅವರು ಕೊಡುತ್ತಾರೆಂದು ನಂಬಿಕೆ ಇದೆ.

ಶ್ರೀ ಟಿ. ಹನುಮಯ್ಯನವರು.—ಅಲ್ಲಿಂದ ಇಲ್ಲಿಗೆ ಬಂದಿರುವವರಿಗೆ ಮಾತ್ರ ಸಂಬಳ ಕೊಡುತ್ತಿರುವುದು ಮೈಸೂರು ದೇಶದಲ್ಲೇ ಇರುವವರಿಗೆ ಕೊಡದೇ ಇರುವುದು ಹೀಗಾದರೆ ಸರ್ಕಾರದಲ್ಲಿ ಎರಡು ವಿಧವಾದ ನೀತಿ ಮತ್ತು ಆಡಳಿತವಿದ್ದಂತಾಗುವುದಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದು ಜಾರಿಗೆ ಬಂದಿರುವುದು 1950ನೆಯ ಜನವರಿ 26ನೆಯ ತಾರೀಖಿನಿಂದ, ಇರತಕ್ಕವರು ಒಟ್ಟು 31 ಜನ. ಇಲ್ಲಿರುವವರಿಗೆಲ್ಲರಿಗೂ ಕೊಡಬೇಕೆಂಬುದು ದೊಡ್ಡ ಪ್ರಶ್ನೆಯೆಂದು ಆಗಲೇ ಹೇಳಿದ್ದೇನೆ.

ಶ್ರೀ ಟಿ. ಹನುಮಯ್ಯನವರು.—ಒಂದು ದೇಶದಲ್ಲಿ ಒಂದು ಕಡೆ ಇರುವವರಿಗೆ ಕೊಟ್ಟು ಉಳಿದವರಿಗೆ ಕೊಡದೆ ಹೋದರೆ ತೊಂದರೆಯಾಗುವುದಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ಕೆಲವರಿಗೆ ವಿಶೇಷ ಸಂದರ್ಭದಿಂದ ಕೊಡಬೇಕಾಗಿದೆ ಅಷ್ಟೆ.

Grant of land in Nelamakanahalli and Thalagavadi villages to Depressed class people of Meladasanadoddi.

*ಪ್ರಶ್ನೆ 136.—ಶ್ರೀ ಎಂ. ಸಿ. ವೆಂಕಟೇಶ್ವರವರು (ಮಂಡ್ಯ ಡಿಸ್ಟ್ರಿಕ್ಟು—ನಿಮ್ನ ತರಗತಿಗಳವರ ಪರವಾಗಿ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಮಳವಳ್ಳಿ ತಾಲ್ಲೂಕು ನೆಲಮಾಕನಹಳ್ಳಿಯ 124ನೆಯ ಸರ್ವೆ ನಂಬರಿನ ಪ್ರದೇಶದಲ್ಲೂ ಮತ್ತು ತಳಗವಾಡಿ ಗ್ರಾಮದ 142ನೆಯ ಸರ್ವೆ ನಂಬರಿನ ಪ್ರದೇಶದಲ್ಲೂ ಜಮೀನುಗಳನ್ನು ಕೊಡಿಸಬೇಕೆಂಬುದಾಗಿ ಕೋರಿ ಮದ್ದೂರು ತಾಲ್ಲೂಕಿನ ಮೇಲದಾಸನ ದೊಡ್ಡಿ ಗ್ರಾಮದ ನಿಮ್ನ ತರಗತಿಗಳವರು ಅರ್ಜಿ ಬರೆದುಕೊಂಡ ತಾರೀಖು ಯಾವುದು;

(b) ಆ ಸಂಬಂಧದಲ್ಲಿ "ರಿಕಾರ್ಡು" ಎಷ್ಟರ ಮಟ್ಟಿಗೆ ನಡೆದು ಇತ್ಯರ್ಥವಾಗಬೇಕಾಗಿ ಉಳಿದಿದೆ?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಯ ಸಚಿವರು).—

(a) 1951ನೆಯ ಇಸವಿ ಜನವರಿ 22ನೆಯ ತಾರೀಖು,

(ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.)

(b) ಆವಶ್ಯಕವಾದ 'ರಿಕಾರ್ಡು' ನಡೆಯುತ್ತಿದೆ ಯೆಂದೂ ಇನ್ನೂ ಹೆಚ್ಚಿಗೆ ಕೈಕೊಳ್ಳಬೇಕಾದ ಕಾರ್ಯ ಕ್ರಮಗಳು ನಡೆಯುತ್ತಿವೆಯೆಂದೂ ವರದಿಯಾಗಿದೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—1951ನೆಯ ಇಸವಿ ಜನವರಿ 22ನೆಯ ತಾರೀಖು ಅವರು ಅರ್ಜಿ ಕೊಟ್ಟಿರುವುದು ತಿಳಿಸಿದೆ, ಇದಕ್ಕೆ ಹಿಂದೆ ಕೊಟ್ಟಿರಲಿಲ್ಲವೆ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರದ ವರಿಗೆ ಗೊತ್ತಿಲ್ಲ. ಸರ್ಕಾರಕ್ಕೆ ಕೊಟ್ಟ ಅರ್ಜಿಯ ತಾರೀ ಖನ್ನು ಇಲ್ಲಿ ಕೊಟ್ಟಿದೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಈ ಅರ್ಜಿಯಲ್ಲಿ ಅವರು ಹಿಂದೆ ಮೂರು ವರ್ಷಗಳಿಂದ ಅರ್ಜಿ ಕೊಡು ತ್ತಿದ್ದೇವೆ, ಇದುವರೆಗೂ ಏನೂ ಕಾರ್ಯಕ್ರಮ ತೆಗೆದು ಕೊಂಡಿಲ್ಲ ಎಂದು ನಮೂದು ಮಾಡಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಅರ್ಜಿ ಯಲ್ಲಿರುವ ವಿವರಗಳು ನನಗೆ ಜ್ಞಾಪಕವಿಲ್ಲ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಮೂರು ವರ್ಷ ದಲ್ಲಿ ಕೊಟ್ಟದ್ದಕ್ಕೆ ಎಂಡಾರ್ಸ್‌ಮೆಂಟ್ ಕೂಡ ಬಂದಿದೆ ಎಂಬುದನ್ನು ಸ್ಥಿರಪಡಿಸಿದರೆ ಪರಿಶೀಲನೆ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರಕ್ಕೆ ಅರ್ಜಿ ಕೊಟ್ಟಿರುವುದು 22-1-51ರಲ್ಲಿ, ಈ ವಿಚಾರದಲ್ಲಿ ಅಮಲ್ದಾರರಿಗೆ ಮೂರು ರಿಮೈಂಡರುಗಳನ್ನು ಕೊಟ್ಟಿದೆ ಇನ್ನು ಒಂದು ತಿಂಗಳೊಳಗೆ ಈ ವಿಚಾರ ಇತ್ಯರ್ಥ ವಾಗುತ್ತದೆಂದು ಭರವಸೆ ಕೊಡಬಲ್ಲೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಹಿಂದೆ ಅರ್ಜಿ ಕೊಟ್ಟಿರುವವರಿಗೆ ಮಂಜೂರಾಗದೇ ಇರುವುದು ಗೊತ್ತಿ ದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಿಂದೆ ಕೊಟ್ಟದ್ದು ನನಗೆ ಜ್ಞಾಪಕವಿಲ್ಲ. ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅರ್ಜಿ ಬಂದಮೇಲೆ ತೀವ್ರವಾಗಿ ಕೆಲಸ ನಡೆಯುತ್ತದೆ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಈಗ ಬೇರೆ ಅರ್ಜಿ ಗಳ ವಿಷಯದಲ್ಲಿ ನಡೆಯುತ್ತಿರುವ ನಡವಳಿಕೆಗಳನ್ನು ನಿಲ್ಲಿಸಿ, ಇವರು ಮೊದಲೇ ಅರ್ಜಿ ಕೊಟ್ಟವರಾದ್ದ ರಿಂದ ಇವರ ಅರ್ಜಿಯನ್ನು ಮೊದಲು ಪರಿಶೀಲಿಸ ಬೇಕೆಂದು ಆಜ್ಞೆಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾವು ಹೇಳಿದ್ದು ನನಗೆ ಅರ್ಥವಾಗಲಿಲ್ಲ.

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಇವರು ಮೊದಲ ಅರ್ಜಿದಾರರು. ಬೇರೆಯವರ ಅರ್ಜಿಯ ಸಂಬಂಧವಾಗಿ ಪರಿಶೀಲನೆ ನಡೆಸುವುದಕ್ಕೆ ಮುಂಚೆಯೇ ಇದಕ್ಕೆ ಗಮನ ಕೊಡಿ ಎಂದು ಆಜ್ಞೆ ಮಾಡುತ್ತೀರಾ?

(ಉತ್ತರವಿಲ್ಲ).

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).— ಮೂರು ಸಾರಿ ರಿಮೈಂಡರುಗಳನ್ನು ಕೊಟ್ಟರೂ ಅಮ ಲ್ದಾರರು ಜವಾಬು ಕೊಡದಿರಲು ಕಾರಣವೇನು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದು ದೊಡ್ಡ ಪ್ರಶ್ನೆ ಅನೇಕ ರಿಕಾರ್ಡುಗಳನ್ನು ನೋಡಬೇಕಾಗು ತ್ತದೆ. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕು, ಸದ್ಯ ದಲ್ಲೇ ಉತ್ತರ ಬರುತ್ತದೆ.

ಶ್ರೀ ಬಿ. ಚನ್ನಬೈರೇಗೌಡರು.—ಮೂರು ತಿಂಗಳಾ ದರೂ ರಿಮೈಂಡರಿಗೆ ಉತ್ತರ ಏಕೆ ಕೊಡಲಿಲ್ಲ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಂತಹ ವಿಚಾರವನ್ನು ತೀರ್ಮಾನ ಮಾಡಲು ಮೂರು ತಿಂಗಳ ಕಾಲ ಹೆಚ್ಚೇನೂ ಅಲ್ಲ.

Alienation of lands granted to Depressed class people.

* ಪ್ರಶ್ನೆ 160.—ಶ್ರೀ ಗೋವಿಂದದಾಸ್‌ರವರ (ಹಾಸನ ಡಿಸ್ಟ್ರಿಕ್ಟು—ನಿಮ್ನ ತರಗತಿಗಳವರ ಪರ ವಾಗಿ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಪರಭಾರೆ ಮಾಡಕೂಡದೆಂಬ ಷರತ್ತಿನ ಮೇಲೆ ಯಾವ ತಾರೀಖಿನ ಲಾಗಾಯಿತು ನಿಮ್ನ ತರ ಗತಿಗಳವರಿಗೆ ಜಮೀನುಗಳನ್ನು ಮಂಜೂರು ಮಾಡ ಲಾಗಿದೆ;

(b) 1951ನೆಯ ಇಸವಿ ಜನವರಿ ತಿಂಗಳಿನವರೆಗೆ ಸಂಸ್ಥಾನದಲ್ಲಿ ನಿಮ್ನ ತರಗತಿಗಳವರಿಗೆ ಒಟ್ಟು ಎಷ್ಟು ಎಕರೆಗಳ ಜಮೀನನ್ನು ಮಂಜೂರು ಮಾಡಲಾಗಿದೆ;

(c) ಇದುವರೆಗೆ ಎಷ್ಟು ಎಕರೆಗಳ ಜಮೀನು ಪರ ಭಾರೆ ಮಾಡಲ್ಪಟ್ಟಿದೆ;

(d) ಆ ಜಮೀನುಗಳನ್ನು ಹಿಂದಕ್ಕೆ ಪಡೆಯಲು ಅವರು ಯಾವ ಕಾರ್ಯಕ್ರಮಗಳನ್ನು ಕೈಕೊಂಡಿರು ತ್ತಾರೆ? (ತಾಲ್ಲೂಕುವಾರು ವಿವರಗಳನ್ನು ಒದಗಿಸ ಬೇಕೆಂದು ಪ್ರಾರ್ಥನೆ).—

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಗಳ ಸಚಿವರು).—

(a) ರಿಯಾಯಿತಿ ನಿಬಂಧನೆಗಳ ಮೇರೆಗೆ ಮತ್ತು ಎಂದೆಂದಿಗೂ ಪರಭಾರೆಮಾಡಕೂಡದೆಂಬ ನಿಯಮಕ್ಕೆ ಒಳಪಟ್ಟು ಜಮೀನುಗಳನ್ನು ಮಂಜೂರು ಮಾಡುವುದು, ಕ್ರಮವಾಗಿ 1938ನೆಯ ಇಸವಿ ಜೂನ್ 27ನೆಯ ತಾರೀಖಿನ ಆರ್. 5682—ಎಲ್. ಆರ್. 389-37-3 ನೆಯ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿಯೂ ಮತ್ತು 1938ನೆಯ ಇಸವಿ ಡಿಸೆಂಬರ್ 13ನೆಯ ತಾರೀ ಖಿನ ಆರ್. 2828—ಎಲ್. ಆರ್. 89-38-10ನೆಯ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿಯೂ ಸಾದರಾದ ಲ್ಯಾಂಡ್ ರೆವೆನ್ಯೂ ನಿಬಂಧನೆಗಳ ಪೈಕಿ 43ನೆಯ ನಿಬಂಧನೆಯಿಂದ (5ರಿಂದ 8ರವರೆಗೆ) ಕ್ರಮ ಗೊಳಿಸಲ್ಪಟ್ಟಿರುತ್ತದೆ.

(b)—

	ಡಿಸ್ಟ್ರಿಕ್ಟಿನ ಹೆಸರು		ಎಷ್ಟು ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ ಎಕರೆ	ಗುಂಟೆ
1	ಕೋಲಾರ	...	19,271	0
2	ಮಂಡ್ಯ	...	4,199	0
3	ಹಾಸನ	...	5,370	7
4	ಶಿವಮೊಗ್ಗ	...	2,992	38
5	ಚಿಕ್ಕಮಗಳೂರು	...	3,953	5
6	ಚಿತ್ರದುರ್ಗ	...	15,042	22
7	ಮೈಸೂರು	...	6,596	30
8	ತುಮಕೂರು	...	13,774	30
9	ಬೆಂಗಳೂರು	...	7,623	15
	ಒಟ್ಟು	...	78,823	27

ಇದು 1950ನೇ ಇಸವಿ ಡಿಸೆಂಬರ್ ತಿಂಗಳವರೆಗೆ 12 ತಿಂಗಳುಗಳು

		ಎಕರೆ	ಗುಂಟೆ
(c) ಕೋಲಾರ ಡಿಸ್ಟ್ರಿಕ್ಟು (ಬಂಗಾರಪೇಟೆ ತಾಲ್ಲೂಕು)	...	18	0
16 0 } ಗೋರಿಬಿದನೂರು 2 0 }	...		
ಹಾಸನ ಡಿಸ್ಟ್ರಿಕ್ಟು (ಅರಸೀಕೆರೆ ತಾಲ್ಲೂಕು)	...	61	36
ತುಮಕೂರು ಡಿಸ್ಟ್ರಿಕ್ಟು (ತುರುವೇಕೆರೆ ತಾಲ್ಲೂಕು)	...	16	3

ಮಂಡ್ಯ, ಮೈಸೂರು, ಶಿವಮೊಗ್ಗ, ಚಿಕ್ಕಮಗಳೂರು, ಬೆಂಗಳೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳು ತಮ್ಮ ಡಿಸ್ಟ್ರಿಕ್ಟುಗಳಲ್ಲಿ ಅಂಥ ಸಂದರ್ಭಗಳು ವರದಿಯಾಗಿಲ್ಲವೆಂದು ವರದಿ ಮಾಡಿರುತ್ತಾರೆ.

(d) ಕೋಲಾರ ಡಿಸ್ಟ್ರಿಕ್ಟಿನಲ್ಲಿ, ಪರಭಾರೆ ಮಾಡಲ್ಪಟ್ಟ ಜಮೀನುಗಳು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿವೆಯೆಂದೂ ಮತ್ತು ಗ್ರಾಂಟುಗಳು ರದ್ದುಪಡಿಸಲ್ಪಟ್ಟಿವೆಯೆಂದೂ ವರದಿಯಾಗಿದೆ.

ಹಾಸನ ಡಿಸ್ಟ್ರಿಕ್ಟು, ಅರಸೀಕೆರೆ ತಾಲ್ಲೂಕಿನಲ್ಲಿ ಒಂದು ಸಂದರ್ಭದಲ್ಲಿ, ಗೀಜನಹಳ್ಳಿ ಸರ್ವೆ 46 ಮತ್ತು 47ನೆಯ ನಂಬರುಗಳಿಗೆ ಸಂಬಂಧಪಟ್ಟ ಜಮೀನು. ಅದನ್ನು ಕೊಂಡುಕೊಂಡವನ ಹೆಸರಿಗೆ ಖಾಯಂಗೊಳಿಸಲ್ಪಟ್ಟಿತು ಮತ್ತು ಮತ್ತೊಂದು ಸಂದರ್ಭದಲ್ಲಿ ಜಮೀನು ಅದನ್ನು ಮೊದಲು ಪಡೆದುಕೊಂಡಿದ್ದವನ ಹೆಸರಿಗೆ ಪುನಃ ವರ್ಗಾಯಿಸಲ್ಪಟ್ಟಿತು. ಉಳಿದ ಐದು ಸಂದರ್ಭಗಳಲ್ಲಿ, ಆ ಜಮೀನುಗಳನ್ನು ಸರ್ಕಾರಕ್ಕೆ ತೆಗೆದುಕೊಂಡು ಅವುಗಳನ್ನು ಇತರರಿಗೆ ವಿಲೇಮಾಡಲು ಕಾರ್ಯಕ್ರಮವು ಕೈಕೊಳ್ಳಲ್ಪಟ್ಟಿದೆಯೆಂದು ವರದಿಯಾಗಿದೆ.

ತುಮಕೂರು ಡಿಸ್ಟ್ರಿಕ್ಟು, ತುರುವೇಕೆರೆ ತಾಲ್ಲೂಕಿನಲ್ಲಿ ಪರಭಾರೆ ಮಾಡಲ್ಪಟ್ಟ 16 ಎಕರೆ 3 ಗುಂಟೆಗಳ ಜಮೀನು 1942ನೆಯ ಇಸವಿ ಆಗಸ್ಟ್ ತಿಂಗಳಿನಲ್ಲಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿರುವುದಾಗಿ ವರದಿಯಾಗಿದೆ.

ಶ್ರೀ ಗೋವಿಂದದಾಸ್‌ರವರು.—ಕೋಲಾರ ಜಿಲ್ಲೆಯಲ್ಲಿ ಮತ್ತು ಹಾಸನ ಜಿಲ್ಲೆಯಲ್ಲಿ ಇಷ್ಟಿಷ್ಟು ಜಮೀನು ಪರಭಾರೆಯಾಗಿದೆಯೆಂದು ಇದರಲ್ಲಿ ತಿಳಿಸಿದೆ, ಇದರಲ್ಲಿ ಹಂಗಾಮಿಯಾಗಿ ಕೊಟ್ಟ ಜಮೀನೂ ಸೇರಿದೆಯೇ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಗೋವಿಂದದಾಸ್‌ರವರು.—ಹಾಸನ ಜಿಲ್ಲೆಯಲ್ಲಿ ಅರಸೀಕೆರೆ ತಾಲ್ಲೂಕಿನಲ್ಲಿ 61 ಎಕರೆ 36 ಗುಂಟೆ ಪರಭಾರೆಯಾಗಿದೆ ಎಂದು ಹೇಳಿದೆ. ಆ ಜಮೀನು ಯಾವ ಯಾವ ಗ್ರಾಮದಲ್ಲಿರುವುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—(ಡಿ) ಭಾಗದ ಉತ್ತರದಲ್ಲಿ ತಿಳಿಸಿದೆ. ಗೀಜನಹಳ್ಳಿಯ ಸರ್ವೆ ನಂಬರು 46 ಮತ್ತು 47 ಎಂದು ತಿಳಿಸಿದೆ.

ಶ್ರೀ ಗೋವಿಂದದಾಸ್‌ರವರು.—ಕಾನೂನು ಗೊತ್ತಿಲ್ಲದೆ ಆ ರೀತಿ ಮಾಡಿದ್ದಾರೆಂಬುದು ಸರ್ಕಾರದವರಿಗೆ ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ತಿಳಿದ ಮೇಲೆ ಆ ರೀತಿ ಕ್ರಮ ಜರುಗಿಸಿದ್ದು.

ಶ್ರೀ ಗೋವಿಂದದಾಸ್‌ರವರು.—46 ಮತ್ತು 47 ನೆಯ ನಂಬರುಗಳಿಗೆ ಸಂಬಂಧಪಟ್ಟ ಜಮೀನು ಅದನ್ನು ಕೊಂಡುಕೊಂಡವನ ಹೆಸರಿಗೆ ಖಾಯಂಗೊಳಿಸಲ್ಪಟ್ಟಿತು ಎಂದು ಉತ್ತರದಲ್ಲಿ ತಿಳಿಸಿದೆ. ಇದನ್ನು ಮೊದಲನೆಯ ಜಮೀನಿನವರಿಗೇ ಖಾಯಂಮಾಡಲು ಸರ್ಕಾರಕ್ಕೆ ಏನು ತೊಂದರೆ ಇತ್ತು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಆಯಾ ಸಂದರ್ಭ, ವಿದ್ಯಮಾನಗಳ ಮೇಲೆ ಹೋಗುತ್ತದೆ.

ಶ್ರೀ ಡಿ. ಗೋವಿಂದದಾಸ್‌ರವರು.—ಇನ್ನೊಂದು ಸಂದರ್ಭದಲ್ಲಿ ಜಮೀನನ್ನು ಮೊದಲು ಪಡೆದುಕೊಂಡಿದ್ದವರಿಗೇ ಖಾಯಂಮಾಡಲ್ಪಟ್ಟಿತು ಎಂದು ಉತ್ತರದಲ್ಲಿ ಹೇಳಿದೆ. ಯಾರು ಖಾಯಂಆಗಿ ಪಡೆದುಕೊಂಡಿದ್ದರೋ ಅವರಿಗೇ ಖಾಯಂ ಮಾಡುವುದಕ್ಕೆ ಕಾರಣವೇನಿತ್ತು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಲ್ಲಿ ಏನು ಸಂದರ್ಭವಿತ್ತೋ ಸರಿಯಾಗಿ ಜ್ಞಾಪಕವಿಲ್ಲ. ಬಹುಶಃ ಅವರಿಗೇ ಹೆಚ್ಚಿನ ಹಕ್ಕಿರಬೇಕು; ಆದ್ದರಿಂದ ಖಾಯಂ ಮಾಡಿದೆಯೆಂದು ಊಹೆ.

ಶ್ರೀ ಡಿ. ಗೋವಿಂದದಾಸ್‌ರವರು.—ಉಳಿದ ಐದು ಸಂದರ್ಭಗಳಲ್ಲಿ ಜಮೀನನ್ನು ವಾಪಸು ತೆಗೆದುಕೊಂಡು ಬೇರೆಯವರಿಗೆ ಮಾರಬೇಕೆಂದು ಹುಕ್ಕುಂ ಮಾಡಿದೆಯೆಂದು ಹೇಳಿದೆ. ಮೊದಲು ವಿಲೇವಾರಿ ಮಾಡಿದ್ದವರಿಗೇ ತಿರುಗಿ ಕೊಡುವುದಕ್ಕೇನು ತೊಂದರೆಯಿತ್ತು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರು ಜಮೀನು ಸಾಗುಮಾಡದಿರಬಹುದು. ಅಥವಾ ಇನ್ನಾರಿಗಾದರೂ ಪರಭಾರೆ ಮಾಡಿರುವುದು ಗೊತ್ತಾಗಿರಬಹುದು. ಅದರಿಂದ ಹೀಗೆ ಮಾಡಿರಬಹುದು.

ಶ್ರೀ ಡಿ. ಗೋವಿಂದದಾಸ್‌ರವರು.—ಹರಿಜನರು ಜಮೀನಿಲ್ಲದವರು, ಬಡವರು, ಅವರಲ್ಲನೇಕರಿಗೆ ಕಡಿಮೆ ಜಮೀನು ಸಿಕ್ಕಿದೆ; ಆದ್ದರಿಂದ ಅವರುಗಳಿಗೇ 4—5 ಎಕರೆಗಳಷ್ಟಾದರೂ ಕೊಟ್ಟು ಅವರ ಸ್ಥಿತಿಯನ್ನು ಉತ್ತಮಪಡಿಸಬೇಕೆಂಬುದೇ ಸರ್ಕಾರದವರ ಉದ್ದೇಶವಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡು ಮೂರು ಭಾಗಗಳನ್ನು ನಿಮ್ಮ ಪ್ರಶ್ನೆ ಒಳಗೊಂಡಿರುವುದರಿಂದ ಎಲ್ಲಕ್ಕೂ ಒಂದೇ ರೀತಿಯಾಗಿ ಉತ್ತರಕೊಡುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಸರ್ಕಾರದವರು ಬಹಳ ಉದಾರತೆಯಿಂದ ಈ ಜನಾಂಗದವರಿಗೆ ಜಮೀನುಗಳನ್ನು ಕೊಡುತ್ತಿದ್ದಾರೆಂದು ನಾನು ಸಂತೋಷದಿಂದ ಹೇಳಬಲ್ಲೆ.

ಶ್ರೀ ಡಿ. ಗೋವಿಂದದಾಸ್‌ರವರು.—ಈ ರೀತಿಯಾಗಿ ಕೊಟ್ಟಿರುವುದರಿಂದ ಸರ್ಕಾರದವರ ಸದುದ್ದೇಶ ಸಾರ್ಥಕವಾಗಿದೆಯೆಂದು ಅಭಿಪ್ರಾಯಪಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾರ್ಥಕವಾಗುತ್ತಿದೆಯೆಂದು ಹೇಳಲು ಸಂತೋಷಿಸುತ್ತೇನೆಂದು ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ.

ಶ್ರೀ ಡಿ. ಗೋವಿಂದದಾಸ್‌ರವರು.—ಇನ್ನುಮುಂದೆ ಹೀಗೆ ಜಮೀನುಗಳು ಪರಭಾರೆಯಾಗದಂತೆ ಸರ್ಕಾರದವರೇನಾದರೂ ಕಾರ್ಯಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೆಚ್ಚಿಗೆಯೇನೂ ಈಗ ಪರಭಾರೆ ಆಗಿಲ್ಲ. ಎಪ್ಪತ್ತೆಂಟು ಸಾವಿರದ, ಎಂಟುನೂರ ಇಪ್ಪತ್ತಮೂರು ಎಕರೆಗಳ ಪೈಕಿ ಕೇವಲ 95 ಎಕರೆಗಳಷ್ಟು ಪರಭಾರೆಯಾಗಿರುವುದೇನೂ ದೊಡ್ಡದಲ್ಲ.

Mr. SPEAKER.—Next question. Sri A. G. Ramachandra Rau.

———

Bad condition of Roads in Hassan District.

* ಪ್ರಶ್ನೆ 190.—ಶ್ರೀ ಎ. ಜಿ. ರಾಮಚಂದ್ರ ರಾಯರು (ಹಾಸನ ಡಿಸ್ಟ್ರಿಕ್ಟು–ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಹಾಸನ ಡಿಸ್ಟ್ರಿಕ್ಟಿನ ರಸ್ತೆಗಳು ಬಹಳ ನಾದುರಸ್ತಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(b) ಹೊಸ 'ಬಸ್' ಲೈನುಗಳಿಗಾಗಿ 'ಪರ್ಮಿಟ್ಟು' ಗಳನ್ನು ಕೊಡುವಾಗ, ರಸ್ತೆಗಳು, ಹೊಸ ಬಸ್ ಲೈನುಗಳನ್ನು ಹಾಕುವುದಕ್ಕೆ ಯೋಗ್ಯವಾಗಿದೆಯೇ— ಎಂಬುದನ್ನು ಸರಿಯಾದ ಅಧಿಕಾರಾವಿರತಕ್ಕವರು ಪರಿಶೀಲಿಸಿದ ಮೇಲೆ ಅಂಥ ಪರ್ಮಿಟ್ಟುಗಳನ್ನು ಕೊಡಲಾಗುತ್ತಿದೆಯೆ ;

(c) ಈಗ ರಸ್ತೆಗಳು ಇರುವ ಸ್ಥಿತಿಯಲ್ಲಿ ಈಗ ನಡೆಯುತ್ತಿರುವಷ್ಟು "ಬಸ್ ಲೈನು" ಗಳಿರುವುದು ಸರಿಯೆ ಎಂಬ ವಿಚಾರವನ್ನು ಪರಿಶೀಲಿಸುವುದಕ್ಕೆ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡುವರೆ ?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಯ ಸಚಿವರು).—

(a) ಇಲ್ಲ.

(b) ಹೌದು.

(c) ಪ್ರಶ್ನೆಯ (a) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದರೆ, ಈ ಪ್ರಶ್ನೆಗೆ ಅವಕಾಶವಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಸನ ಡಿಸ್ಟ್ರಿಕ್ಟಿನ ರಸ್ತೆಗಳು, ತಾವು ಪ್ರಯಾಣಮಾಡಿ ತಿಳಿದಿರುವಮಟ್ಟಿಗೆ, ಅವು ಸಮರ್ಪಕವಾಗಿವೆಯೆಂದು ಹೇಳುತ್ತೀರಾ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವರು ನಿರೀಕ್ಷಣೆ ಮಾಡುವಂಥ ಉತ್ತಮಸ್ಥಿತಿಯಲ್ಲಿ ಕೆಲವು ರಸ್ತೆಗಳು ಇಲ್ಲದಿರಬಹುದು. It all depends upon the availability of funds.

ಶ್ರೀ ಎ. ಜಿ. ರಾಮಚಂದ್ರರಾಯರು.—ಹೆಚ್ಚಿಗೆ ಗ್ರಾಂಟ್ ಕೊಡಬೇಕೆಂದು ಕೇಳಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಸಾರಿ ಹೆಚ್ಚಿಗೆ ಗ್ರಾಂಟನ್ನು ಸ್ಪೆಷಲ್ಲಾಗಿ ಹಾಸನ ಡಿಸ್ಟ್ರಿಕ್ಟಿಗೆ ಕೊಡುತ್ತೇವೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಗಾದರೆ ಈಗಿರುವ ರಸ್ತೆಗಳ ದುಸ್ಥಿತಿಯನ್ನು ಉತ್ತಮಪಡಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಬಗ್ಗೆ ಪ್ರಯತ್ನಮಾಡುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಈ ರಸ್ತೆಗಳಿಂದ ಬರತಕ್ಕ ಟ್ಯಾಕ್ಸ್ ಮುಂತಾದ ಉತ್ಪತ್ತಿಗಳನ್ನು ಆ ರಸ್ತೆಗಳಿಗೆ ಉಪಯೋಗಿಸುತ್ತಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಭಾಗವನ್ನು ಉಪಯೋಗಿಸುತ್ತಿದ್ದೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅವುಗಳಿಂದ ಬಂದ ಹಣವನ್ನೆಲ್ಲಾ ಅದಕ್ಕೆ ಉಪಯೋಗಿಸಬೇಕೆಂದು ಮಾಡಿದ್ದೀರಾ ? ಅಥವಾ ಬರುವ ದುಡ್ಡಿನಲ್ಲಿ ಎಷ್ಟು ಭಾಗ ಉಪಯೋಗಿಸಬೇಕೆಂದು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಹಣ ಜನರಲ್ ಫಂಡಿಗೆ ಸೇರಿದರೂ, ಸಾಮಾನ್ಯವಾಗಿ ಅದರಲ್ಲಿ ಬಂದದ್ದಕ್ಕಿಂತ ಹೆಚ್ಚಿಗೆಯೇ ಉಪಯೋಗಿಸುತ್ತಿದ್ದೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅಲ್ಲಿ ಬಂದ ಟ್ಯಾಕ್ಸ್ ದುಡ್ಡು ಮುಂತಾದ್ದನ್ನೆಲ್ಲಾ ಆ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಉಪಯೋಗಿಸಿದರೆ, ಅವು ಎಷ್ಟೋ ಉತ್ತಮಗೊಳ್ಳುತ್ತವಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಹೆಚ್ಚಿಗೆಯೇ ಕೊಡುತ್ತಿದ್ದೇವೆ. ರಸ್ತೆಗಳು ಉತ್ತಮಗೊಳ್ಳುತ್ತವೆ.

Mr. SPEAKER.—Next question Sri M. Govinda Reddy.

Discharged Mysore Military Personnel and their resettlement and rehabilitation.

*ಪ್ರಶ್ನೆ 18.—ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಮುಂದಿನ ಏಪ್ರಿಲ್ ತಿಂಗಳಿನಿಂದ ತಮ್ಮ ನೌಕರಿಯಿಂದ ಬಿಡುಗಡೆ ಮಾಡಲ್ಪಡಬೇಕಾಗಿರತಕ್ಕ ಸಂಸ್ಥಾನದ ಮಿಲಿಟರಿ ನೌಕರರ ಸಂಬಂಧವಾಗಿ ಪ್ರಧಾನ ಸಚಿವರು, ದೆಹಲಿಯಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳೊಡನೆ ಮಾತುಕತೆ ನಡೆಯಿಸಿದ್ದಾರೆಯೆ ;

(b) ಮಾತುಕತೆ ನಡೆಯಿಸಿದ್ದ ಪಕ್ಷದಲ್ಲಿ, ಯಾವ ವಿಷಯಗಳನ್ನು ಚರ್ಚಿಸಲಾಯಿತು ;

(c) ಯಾವ ತೀರ್ಮಾನಕ್ಕೆ ಬರಲಾಯಿತು ;

(d) ತೊಂದರೆಗೀಡಾದ ಮಿಲಿಟರಿ ನೌಕರರಿಗೆ ದೊರಕಿಸಿಕೊಟ್ಟ ಪರಿಹಾರವೇನು ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) ಹೌದು, ನಡೆಯಿಸಿದ್ದಾರೆ.

(b), (c) ಮತ್ತು (d) ಹಿಂದೆ ಮಿಲಿಟರಿ ನೌಕರಿಯಲ್ಲಿದ್ದು ಬಿಡುಗಡೆ ಹೊಂದಿರತಕ್ಕ ಮಿಲಿಟರಿ ನೌಕರರಿಗೆ ಪುನಃ ಉದ್ಯೋಗವನ್ನು ದೊರಕಿಸಿಕೊಡುವುದಕ್ಕೂ ಅಥವಾ ಅವರು ಪುನಃ ನೆಲೆಗೆ ನಿಲ್ಲುವಂತೆ, ಮಾಡುವುದಕ್ಕೂ ಮತ್ತು ಅವರ ವಿಚಾರವನ್ನು ಪುನರ್ವ್ಯವಸ್ಥೆಗೊಳಿಸುವುದಕ್ಕೂ ಸಂಬಂಧಪಟ್ಟ ಯೋಜನೆಗಳನ್ನು ಚರ್ಚಿಸಲಾಯಿತು. ಮೈಸೂರು ಸರ್ಕಾರದವರು, ಇಂಡಿಯಾ ಸರ್ಕಾರಕ್ಕೆ ಕಳುಹಿಸಿಕೊಡಲು ಸಮಗ್ರವಾದ ಯೋಜನೆಗಳನ್ನು ತಯಾರಿಸಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಕೇಂದ್ರ ಸರ್ಕಾರದವರೊಡನೆ ಚರ್ಚೆ ನಡೆಸಿದಾಗ ಈಗ ಸೈನ್ಯದಿಂದ ನಿವೃತ್ತಿಮಾಡಬೇಕೆಂದಿರುವವರ ಪೈಕಿ ಕೆಲವರನ್ನು ಇಟ್ಟುಕೊಳ್ಳುವ ಪ್ರಶ್ನೆಯೇನಾದರೂ ಬಂದಿತ್ತೇ ?

*ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವರಿಗೆ short service commission ಗಳನ್ನು ಕೊಡಬೇಕೆಂದು ಒತ್ತಾಯ ಮಾಡಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಎಷ್ಟು ಜನರನ್ನು short service commission ಮೇಲೆ ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದರು ಅಥವಾ ನೀವು ಸೂಚನೆ ಮಾಡಿದಿರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಎಲ್ಲರಿಗೂ ಕೊಡಬೇಕೆಂದು ಒತ್ತಾಯ ಮಾಡಿದ್ದೇವೆ. ಒಂದು ವೇಳೆ medical examination ಮೇಲೆ ಅರ್ಹರಾಗದಿದ್ದರೆ ಅಂಥವರಿಗೆ permanent short Service commission ಆದರೂ ಕೊಡಬೇಕೆಂದು ಕೇಳಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—Short service ಕಮಿಷನ್ ಕೊಡುವಾಗ ಅವರನ್ನು ಯಾವ ಸ್ಥಾನದಲ್ಲಿಡಬೇಕೆಂಬುದನ್ನು ಚರ್ಚೆ ಮಾಡಿದಿರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಏಕೆಂದರೆ, ಮೊದಲೇ, ಅವರಿಗೆ not less advantageous position ನ್ನು ಕೊಡಬೇಕೆಂದು ಒಪ್ಪಂದವಾಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದರ ಪ್ರಕಾರ ಆ ಒಪ್ಪಂದಕ್ಕೆ ಕಟ್ಟು ಬಿದ್ದು ಅವರನ್ನು ಅವರವರ ಸ್ಥಾನದಲ್ಲೇ ಇಡಬೇಕೆಂದು ಒತ್ತಾಯ ಮಾಡಿದಿರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒತ್ತಾಯ ಮಾಡಿದ್ದೇವೆ. ಮೊನ್ನೆ ತಾನೆ ಹೋದಾಗಲೂ ಹೇಳಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಆ ಮಾತುಕತೆಗಳಲ್ಲಿ ಇವರಿಗೆ ಕೊಡತಕ್ಕ ಪೆನ್ಷನ್ ಬಗ್ಗೆ ಇಂಡಿಯಾ ಸೈನಿಕರು ಪೆನ್ಷನ್ ಆದರೆ ಹೊಂದತಕ್ಕ ಪೆನ್ಷನ್ನಿಗೂ ಈಗ ನಮ್ಮ ಮೈಸೂರು ದೇಶದ ಮಿಲಿಟರಿಯವರು ಭಾರತದ ಮಿಲಿಟರಿಯೊಡನೆ integrate ಆದ ಮೇಲೆ ಅವರಿಂದ ನಿವೃತ್ತರಾದ ಮಿಲಿಟರಿಯವರಿಗೆ ಕೊಡತಕ್ಕ ಪೆನ್ಷನ್ನಿಗೂ ವ್ಯತ್ಯಾಸವಿದೆಯೆಂಬುದನ್ನು ಅವರ ಗಮನಕ್ಕೆ ತಂದಿರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಂದಿದ್ದೇವೆ. ಹೋದ ಸಾರಿಯೇ ಈ ಬಗ್ಗೆ ಉತ್ತರ ಕೊಟ್ಟಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇವರುಗಳ ಪೆನ್ಷನ್ನನ್ನೂ ಆ ಸೈನಿಕರ ಪೆನ್ಷನ್ನಿನ ಮಟ್ಟಕ್ಕೇ ಏರಿಸಬೇಕೆಂದೇನಾದರೂ ಹೇಳಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಅವರು ಕೊಡತಕ್ಕ mustering out concession ಗಳು ಕಡಿಮೆಯಾಗಿದೆಯೆಂದು ಒತ್ತಾಯ ಮಾಡಿದುದರ ಮೇಲೆಯೇ ಅವರಿಗೆ ಕೊಡುತ್ತಿರುವ mustering out concession ಗಳನ್ನು ಜಾಸ್ತಿ ಮಾಡಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ನಾನು mustering out concession ಗಳನ್ನು ಕೇಳಲಿಲ್ಲ. ಪೆನ್ಷನ್ ಕೊಡುವುದರಲ್ಲಿ ನಮ್ಮ ಸೈನಿಕರಿಗೆ ಪೆನ್ಷನ್ ಕೊಡುತ್ತಿರುವುದು ಇಂಡಿಯಾದ ಮಿಲಿಟರಿಯಿಂದ ನಿವೃತ್ತರಾದವರಿಗೆ ಪೆನ್ಷನ್ ಕೊಡುವುದಕ್ಕಿಂತಲೂ ಕಡಿಮೆ ಕೊಡುತ್ತಿದ್ದಾರೆಂಬುದನ್ನು ತಿಳಿಸಿ, ಅದನ್ನು ಅವರ ಮಟ್ಟಕ್ಕೇ ಏರಿಸಬೇಕೆಂದು ಒತ್ತಾಯಮಾಡಿದಿರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಒತ್ತಾಯ ಮಾಡಿದ್ದೇವೆ. Integration ಆದ ಮೇಲೆ, ಇಂಡಿಯಾ ಮಿಲಿಟರಿ ಪೆನ್ಷನ್‌ದಾರರಿಗೆ ಯಾವ ರೀತಿ ಸೌಲಭ್ಯಗಳನ್ನು ಕೊಡುತ್ತಾರೋ ಅದೆಲ್ಲವನ್ನೂ ನಮ್ಮ ದೇಶದ ಸೈನಿಕರಿಗೂ ಕೊಡಬೇಕೆಂದು ಹೇಳಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ನಿರ್ದಿಷ್ಟವಾಗಿ ಅವರು ಏನಾದರೂ ಜವಾಬು ಕೊಟ್ಟರೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಸಾರಿ ಹೇಳಿದರು, ಇದು ಬಹಳ ಕಷ್ಟವಾಗುತ್ತದೆ. Integration ಕಾಲದಲ್ಲಿ ಯಾವ ಯಾವ general rules ಮಾಡಿದ್ದೇವೋ ಅದರಂತೆ ಮಾಡಬೇಕು, ಮೈಸೂರಿಗೇ ಸ್ಪೆಷಲ್ಲಾಗಿ ಏನೂ ಕೊಡುವುದಕ್ಕಾಗುವುದಿಲ್ಲ ಎಂದು, ಆದರೂ, ನಾವು ಒತ್ತಾಯ ಮಾಡಿ, ಹೀಗೆ ಮಾಡಿದರೆ ಅತೃಪ್ತಿಯುಂಟಾಗುತ್ತದೆ, ಪುನಃ ಈ ವಿಷಯವನ್ನು ಪರ್ಯಾಲೋಚನೆ ಮಾಡಿ ಕೊಡಬೇಕೆಂದು ಹೇಳಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹೆಚ್ಚಿಗೆ ಕೊಡುವುದಕ್ಕೆ ಅವರು ಒಪ್ಪಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇನ್ನೂ ಒಪ್ಪಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಒಪ್ಪುವ ಭರವಸೆಯೇನಾದರೂ ಸರ್ಕಾರದವರಿಗಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಭರವಸೆ ಇಟ್ಟುಕೊಂಡಿದ್ದೇವೆ. ಸಾಧ್ಯವಾದ ಮಟ್ಟಿಗೂ ಒತ್ತಾಯ ಮಾಡಿಕೊಂಡೇ ಬಂದಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವರು ಒಪ್ಪದೇಇದ್ದರೂ,ಕನಿಷ್ಠ ಪಕ್ಷ ಅವರ ದರ್ಜೆಯಲ್ಲಿ ಪೆನ್ಷನ್ನನ್ನಾದರೂ ಕೊಡಬೇಕೆಂದು ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದವರಿಗೆ ಒತ್ತಾಯ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊನ್ನೆಯೂ ಕೂಡ ಒತ್ತಾಯ ಮಾಡಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈಚೆಗೇನಾದರೂ ಆ ರೀತಿ ಪೆನ್ಷನ್ ಕೊಡುವುದಕ್ಕಾಗುವುದಿಲ್ಲವೆಂದು ನಿರ್ದಿಷ್ಟವಾಗಿ ಹೇಳಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಳೆದ ಸಾರಿ ಹೇಳಿದ ಮೇಲೆ ಈಚೆಗೆ ಉತ್ತರ ಬಂದಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈಚೆಗೆ, ಅವರು ಇಟ್ಟುಕೊಂಡಿರುವ ಅಧಿಕಾರಿಗಳನ್ನೂ ಕೂಡ ಅವರು ಮೊದಲಿದ್ದ ದರ್ಜೆಗಿಂತ ಕಡಿಮೆ ದರ್ಜೆಗೆ ನೇಮಕ ಮಾಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ. ಇಂಟೆಗ್ರೇಷನ್ ಆದಮೇಲೆ ಹೀಗೆ ನಮ್ಮ ಕೆಲವು ಆಫೀಸರುಗಳನ್ನು ಕಡಿಮೆ ದರ್ಜೆಗೆ ಹಾಕಿರುವುದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದರ ಬಗ್ಗೆ, ಇವುಗಳೆಲ್ಲಾ ಇಂಟೆಗ್ರೇಷನ್ ಷರತ್ತುಗಳಿಗೆ ವಿರುದ್ಧವಾಗಿವೆಯೆಂದು ಅವರ ಗಮನಕ್ಕೆ ತರಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಂದಿದ್ದೇವೆ. ಹೀಗೆ ಮಾಡಿದರೆ ನಮ್ಮವರಲ್ಲಿ ಬಹಳ heart-burn ಉಂಟಾಗುತ್ತದೆ. ಅವರಿಗೆ ಏನೇನು status ಇತ್ತೋ ಅವನ್ನು ಕಾಪಾಡಬೇಕೆಂದು ಹೇಳಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವರು ಸರಿಪಡಿಸುತ್ತೇವೆಂದು ಹೇಳಿದರೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಲೋಚನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದನ್ನು ಒತ್ತಾಯಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—We shall try our best to help our army personnel.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹೀಗೆ ಕಡಿಮೆ ದರ್ಜೆಗೆ ಹಾಕಿರುವುದರ ಪ್ರತಿಭಟನೆಗಾಗಿ ಅಲ್ಲಿರತಕ್ಕ ಸೈನ್ಯದ ಅಧಿಕಾರಿಗಳು ರಾಜಿನಾಮೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರದವರ ಗಮನಕ್ಕೆ official ಆಗಿ ಏನೂ ಬಂದಿಲ್ಲ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಇಂಡಿಯಾ ಸರ್ಕಾರದವರೊಂದಿಗೆ ಹೋದ ಅಸೆಂಬ್ಲಿಯ ಸಮಯದಲ್ಲಿ ಮಾನ್ಯ ಮಂತ್ರಿಗಳು ಮಾತುಕತೆ ನಡೆಸಿದಂದಿನಿಂದೀಚೆಗೆ, ತಾವು ಆಗ್ಗೆ ಸಭೆಗೆ ಭರವಸೆ ಕೊಟ್ಟಿದ್ದರಿಂದೀಚೆಗೇನಾದರೂ ನಮ್ಮಿಂದ ಅಲ್ಲಿಗೆ ಹೋಗಿದ್ದ ಮಿಲಿಟರಿ ನೌಕರರಲ್ಲಿ ಯಾರನ್ನಾದರೂ ಹಿಂದೆ ತೆಗೆದಿದ್ದವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1-4-51 ರಿಂದ ನಿವೃತ್ತರಾಗಬೇಕೆಂದಿದ್ದವರನ್ನು 1-6-51 ರವರೆಗೆ ಇಟ್ಟುಕೊಳ್ಳುತ್ತೇವೆಂದು ಹೇಳಿದ್ದಾರೆ. ಮತ್ತು ಅಷ್ಟರೊಳಗೆ rehabilitation proposals ತಯಾರು ಮಾಡಿ ನಾವು ಕಳುಹಿಸಿಕೊಟ್ಟರೆ ಅದಕ್ಕೆ ಸಾಕಾದಷ್ಟು ಹಣ ಕಾಸಿನ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎ. ಭೀಮಪ್ಪನಾಯಕರು.—ಈಗಾಗಲೇ 1-6-51ನೆಯ ತಾರೀಖು ಬಂತಲ್ಲಾ! ಮುಂದೇನು ಮಾಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರನ್ನೆಲ್ಲಾ ಇಟ್ಟುಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀ ಎ. ಭೀಮಪ್ಪನಾಯಕರು.—ಈ ಮಿಲಿಟರಿ ವಿಷಯವಾಗಿ, ಇಂಡಿಯಾ ಸರ್ಕಾರದವರು ಹಿಂದೆ ಕೊಟ್ಟ ಮಾತಿನಂತೆ ಇಂದಿನವರೆಗೆ ನಡೆದುಕೊಂಡಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—It is a very delicate matter and the whole thing is in the stage of negotiation.

ಶ್ರೀ ಎ. ಭೀಮಪ್ಪನಾಯಕರು.—Naturally the House will draw its own inference.

ತಾವು ನಮ್ಮಿಂದ ಅವರನ್ನು ಇಂಡಿಯಾ ಸರ್ಕಾರಕ್ಕೆ ಕಳುಹಿಸುವಾಗ ಏನೇನು ಷರತ್ತುಗಳನ್ನು ಮಾಡಿಕೊಂಡಿದ್ದೀರಿ, ಯಾವ ಯಾವ ತೆರದ ಸೌಲಭ್ಯಗಳನ್ನು ಕೊಡಬೇಕೆಂದು ಹೇಳಿದ್ದೀರಿ?

ಅಧ್ಯಕ್ಷರು.—ಹೋದಸಾರಿಯೇ ಹೇಳಿದ್ದಾರಲ್ಲಾ! ಈಗ ತಿರುಗಿ ಕೇಳುವುದೇ!

ಶ್ರೀ ಎ. ಭೀಮಪ್ಪನಾಯಕರು.—Certain matters arise out of this. What conditions have they implemented?

ಅಧ್ಯಕ್ಷರು.—ಷರತ್ತುಗಳೇನೆಂಬುದನ್ನು ಆಗಲೇ ಹೇಳಿದ್ದಾರೆ.

ಶ್ರೀ ಎ. ಭೀಮಪ್ಪನಾಯಕರು.—ಹೋದ ಸಾರಿ ಈ ಸಭೆಯಲ್ಲಿ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟದ್ದರಿಂದೀಚೆಗೆ ಇಂದಿನವರೆಗೆ ಆ ಷರತ್ತುಗಳಲ್ಲಿ ಎಷ್ಟನ್ನು ಇಂಡಿಯಾ ಸರ್ಕಾರದವರು ಕಾರ್ಯತಃ ಜಾರಿಗೆ ತಂದಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಕೂಡಲೇ ನಿವೃತ್ತಿ ಮಾಡಬೇಕೆಂದಿದ್ದ ಕೆಲವರನ್ನು ಇನ್ನೂ ಕೆಲವು ದಿನಗಳವರೆಗೆ ಇಟ್ಟುಕೊಂಡಿದ್ದಾರೆ. ವರ್ಗಾಯಿಸಬೇಕೆಂದಿದ್ದ ಕೆಲವರನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. Rehabilitation ಬಗ್ಗೆ ಹಣ ಸಹಾಯ ಮಾಡುತ್ತೇವೆಂದು ವಾಗ್ದಾನ ಮಾಡಿದ್ದಾರೆ.

ಶ್ರೀ ಎ. ಭೀಮಪ್ಪನಾಯಕರು.—ನೀವು ಸ್ಕೀಮ್ ತಯಾರಿಸಿ ಕೇಂದ್ರಕ್ಕೆ ಕಳುಹಿಸಿಕೊಡುವುದಕ್ಕೆ ಮುಂಚೆ ಅಲ್ಲಿಂದ ನಿವೃತ್ತರಾಗಿರುವವರನ್ನು Rehabilitate ಮಾಡುವುದಕ್ಕಾಗಿ ಮೈಸೂರು ಸರ್ಕಾರದವರೇನಾದರೂ ಸ್ವಲ್ಪ ಮಟ್ಟಿಗೆ ಹಣವನ್ನು ಮುಂಗಡವಾಗಿ ಕೊಟ್ಟು ಸಹಾಯ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಸ್ವಲ್ಪ ಹಣ ಕೊಟ್ಟಿದ್ದೇವೆ. ಅಲ್ಲದೆ ಅಲ್ಲಿಂದ ನಿವೃತ್ತರಾದವರನ್ನು ಇಲ್ಲಿ ರಿಸರ್ವ್ ಪೋಲೀಸ್ ಮುಂತಾದ ಕೆಲವು ಕಡೆಗಳಲ್ಲಿ ಕೆಲಸಕ್ಕೆ ತೆಗೆದುಕೊಂಡಿದ್ದೇವೆ. ಆದರೆ ಇದಕ್ಕೆ ಮುಖ್ಯವಾಗಿ ಇಂಡಿಯಾ ಸರ್ಕಾರದವರ ಹಣ ಸಹಾಯ ಬಹಳ ಅಗತ್ಯವಾಗಿದೆ. ಸಧ್ಯಕ್ಕೇನೋ ನಾವೊಂದು ಕಮಿಟಿ ಮಾಡಿ ಯಾರ್ಯಾರಿಗೆ ಯಾವ ರೀತಿ ಸಹಾಯ ಮಾಡಬೇಕೆಂದು ಹೇಳಿ ಸ್ವಲ್ಪ ಹಣ ಕೊಟ್ಟಿದ್ದೇವೆ.

ಶ್ರೀ ಎ. ಭೀಮಪ್ಪನಾಯಕರು.—ಅವರೆಲ್ಲರನ್ನೂ ಹ್ಯಾಬಿಲಿಟೇಟ್ ಮಾಡಲಿಕ್ಕೆ ಒಟ್ಟು ಎಷ್ಟು ಹಣ ಬೇಕಾಗುತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 40 ಲಕ್ಷ ಚಿಲ್ಲರೆ ಬೇಕಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಈಗ ಯಾವ ಹುದ್ದೆಯೂ ಇಲ್ಲದೆ, ನೀವೂ ಸಹ ಆ ಪೈಕಿ ಕೆಲವರಿಗೆ ಯಾವ ವಿಧವಾದ ಕೆಲಸಗಳನ್ನೂ ಕೊಡದೆ, ಜೀವನಕ್ಕೆ ಮಾರ್ಗವಿಲ್ಲದಂತೆ ಇರತಕ್ಕವರು ಎಷ್ಟು ಮಂದಿ ಇದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು. ಆದಾಗ್ಯೂ ಸುಮಾರು 300 ಜನಗಳಿರಬಹುದು. ಈಗಾಗಲೆ ಕೆಲವರಿಗೆ ಆಲ್ಟರ್‌ನೇಟೀವ್ ಎಂಪ್ಲಾಯ್‌ಮೆಂಟ್ಸ್ ಕೊಡಲಾಗಿದೆ. ಕೆಲವರು ರಜಾದ ಮೇಲೆ ಊರುಗಳಿಗೆ ಹೋಗಿದ್ದಾರೆ. ಹಾಗೆ ಯಾವ ಕೆಲಸಕಾರ್ಯಗಳೂ ಇಲ್ಲದೆ ಇರತಕ್ಕವರೆಲ್ಲರೂ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂಬುದಾಗಿ ಪತ್ರಿಕೆಗಳ ಮುಖಾಂತರವೂ ಮತ್ತು ವಿಶೇಷ ಪ್ರಕಟಣೆಗಳ ಮುಲಕವೂ ತಿಳಿಸಲಾಗಿದೆ. ಈ ಬಗ್ಗೆ ನೋಡಿಕೊಳ್ಳಲು ಒಬ್ಬ ಮಿಲಿಟರಿಯಲ್ಲಿರತಕ್ಕ ಅಸಿಸ್ಟೆಂಟ್ ಡೈರೆಕ್ಟರವರನ್ನೇ ನೇಮಕಮಾಡಲಾಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಹಾಗಾದರೆ ಒಟ್ಟು ನಿರುದ್ಯೋಗಿಗಳಾಗಿರತಕ್ಕವರ ಸಂಖ್ಯೆ ಎಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 2,000 ಜನಗಳು.

ಶ್ರೀ ಎ. ಭೀಮಪ್ಪನಾಯಕರು.—ಅಂದಮೇಲೆ ಇನ್ನು 1,700 ಜನರು ಜೀವನಕ್ಕೆ ಯಾವ ಮಾರ್ಗವೂ ಇಲ್ಲದೆ ಇದ್ದಾರೆಂದಾಯಿತು. ಇವರ ಜೀವನೋಪಾಯದ ಬಗ್ಗೆ ಏನು ಏರ್ಪಾಡುಗಳನ್ನು ಮಾಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯೋಜನೆಯನ್ನು ತಯಾರಿಸಿ ಅದನ್ನು ಇಂಡಿಯಾ ಸರ್ಕಾರದವರ ಅಂಗೀಕಾರಕ್ಕೆ ಕಳುಹಿಸಿಕೊಡಲಾಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಇಂಡಿಯಾ ಸರ್ಕಾರದವರು ತಾವು ಕಳುಹಿಸಿರತಕ್ಕ ಯೋಜನೆಯನ್ನು ಅಂಗೀಕಾರಮಾಡುವತನಕ ಅಲ್ಲಿಯವರೆಗೆ ಇವರಿಗೆ ಬೇಕಾಗುವ ದ್ರವ್ಯ ಸಹಾಯಗಳನ್ನು ತಾವು ನೀಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಆಲೋಚನೆಮಾಡಬೇಕಾದ ವಿಷಯ.

ಶ್ರೀ ಎ. ಭೀಮಪ್ಪನಾಯಕರು.—ಅವರು ಈಗ ಬಹಳ ತೊಂದರೆಪಡುತ್ತಿದ್ದಾರೆಂಬುದು ತಮಗೆ ಗೊತ್ತಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಊಹಾ ಪ್ರಶ್ನೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ತಾ॥ 1—6—1951 ರಿಂದ ಇಂಡಿಯಾ ಸರ್ಕಾರದ

ವರು ಮೈಸೂರಿಗೆ ಸೇರಿದ ಎಷ್ಟು ಜನ ಮಿಲಿಟರಿಯವರನ್ನು ಕೆಲಸದಿಂದ ತೆಗೆಯುತ್ತಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಈಗಲೇ ಹೇಗೆ ಹೇಳುವುದಕ್ಕಾಗುತ್ತದೆ? ಇನ್ನೂ ನೋಡಬೇಕಾಗಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಾಳೆಯ ದಿವಸ ದಿಂದಲೇ ಕೆಲಸದಿಂದ ತೆಗೆದುಹಾಕಲ್ಪಡುವ ಜನರಿಗೆ ತಾವೇನು ಮಾರ್ಗಾನುಕೂಲಗಳನ್ನು ಕಲ್ಪಿಸಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂಡಿಯಾ ಸರ್ಕಾರದವರನ್ನು ಸಹಾಯನೀಡಲು ಕೇಳಿಕೊಂಡಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಾಳೆಯಿಂದಲೇ ಅವರನ್ನು ಕೆಲಸದಿಂದ ತೆಗೆದುಹಾಕಬೇಕಾಗಿರುವುದರಿಂದ ಇವರಿಗೆ ತಾವೇನು ವ್ಯವಸ್ಥೆಮಾಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ತೆಗೆದೇ ತೆಗೆಯುತ್ತೇವೆಂದೇನೂ ಅವರು ನಮಗೆ ತಿಳಿಸಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಅವರಿಂದ ಆ ರೀತಿ ಭರವಸೆ ಬಂದಿದೆಯೆ ?

The Hon'ble Sri T. MARIAPPA.—We hope for the best ; after all human nature is to be always hopeful.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹೀಗೆ ಅರೆಯುತ್ತಿರುವ ಜನಗಳ ಪೈಕಿ ಅಧಿಕಾರವರ್ಗಕ್ಕೆ ಸೇರಿರತಕ್ಕವರೆಷ್ಟುಮಂದಿಯಿದ್ದಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 22—23 ಮಂದಿ ಇರಬಹುದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗೆ ಕೆಲಸವಿಲ್ಲದೆ ಇದ್ದವರ ಪೈಕಿ ಎಷ್ಟು ಜನರಿಗೆ ತಾವು ತಮ್ಮ ಪೋಲೀಸ್ ಇಲಾಖೆಯಲ್ಲಿ ನೌಕರಿಗಳನ್ನು ಕೊಟ್ಟಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ಸಾವಿರಾರು ಜನರು ಹೊಟ್ಟೆಗಿಲ್ಲದೆ ತಿರುಗುತ್ತಿರುವವರಿಗೆ ಜಮೀನು ಕೊಡತಕ್ಕ ಯೋಜನೆಯೇನಾದರೂ ಉಂಟೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಹಾಗೆ ಹೊಟ್ಟೆಗಿಲ್ಲದೇನೂ ಅಲೆಯುತ್ತಿಲ್ಲ. ಅನೇಕರಿಗೆ, ರಜಾ ಮಂಜೂರಾಗಿದ್ದು ಅವರೆಲ್ಲರೂ ಸಂಬಳ ಪಡೆಯುತ್ತಿದ್ದಾರೆ. ಅನೇಕರಿಗೆ ಗ್ರ್ಯಾಚ್ಯುಯಿಟಿ ಸಹ ಕೊಡಲಾಗಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗೆ ತಾವು ಅವರಿಗೆ ಕೊಟ್ಟಿರತಕ್ಕ ಗ್ರ್ಯಾಚ್ಯುಯಿಟಿ ಸಾಕಾಗುತ್ತದೆಯೆ ? ಎಷ್ಟು ದಿವಸಕ್ಕಾಗಬಹುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವರಿಗೆ ರಜ ಕೊಟ್ಟು ಸಂಬಳ ಕೊಡಲಾಗುತ್ತಿದೆ.—ಇನ್ನು ಗ್ರ್ಯಾಚುಯಿಟಿ ಪ್ರಶ್ನೆ ವರ್ಷಕ್ಕೆ ಇಷ್ಟಿಷ್ಟೆಂದು ನಿಗದಿಯಾಗಿದೆ. ಇದು ಆ ಪ್ರಕಾರ ಕೊಡಲಾಗುತ್ತೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ಪೈಕಿ ಯಾರಾದರೂ ಜಮೀನುಗಳಿಗೆ ಅರ್ಜಿ ಹಾಕಿಕೊಂಡಿದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವರು ಹಾಕಿಕೊಂಡಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗಾದರೆ ಅಂಥಾವರಿಗೆಲ್ಲಾ ಜಮೀನು ಕೊಡುವಂತೆ ಆಜ್ಞೆ ಹೊರಡಿಸಲಾಗುತ್ತದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಂಥವರಿಗೆಲ್ಲಾ ಟಾಪ್ ಪ್ರಯಾರಿಟಿ ಕೊಟ್ಟು ಜಮೀನುಗಳನ್ನು ಕೊಡಬೇಕೆಂದು ತಿಳಿಸಲಾಗಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಈಗ ಇಂಡಿಯಾ ಸರ್ಕಾರಕ್ಕೆ ತಾವು ಕಳುಹಿಸಿಕೊಟ್ಟಿರತಕ್ಕ ಯೋಜನೆಯನ್ನು ನಮ್ಮ ಸರ್ಕಾರದವರು ಬಹಳ ದೀರ್ಘವಾಗಿ ಆಲೋಚನೆಮಾಡಿ, ಕಳುಹಿಸಿಕೊಟ್ಟಿದ್ದರಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಮಿಲಿಟರಿ ಪರ್ಸನಲ್‌ಗಳ ಅಭಿಪ್ರಾಯಪಡೆದು, ಸೂಕ್ತವಾಗಿರುತ್ತೆಂದು ಭಾವಿಸಿರತಕ್ಕ ಯೋಜನೆಯನ್ನೇ ಕಳುಹಿಸಲಾಗಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಗೊಂದು ವೇಳೆ ಇಂಡಿಯಾ ಸರ್ಕಾರದವರು ನಿಮ್ಮ ಯೋಜನೆಯನ್ನು ಒಪ್ಪಿಕೊಳ್ಳದೆ ಹೋದ ಸಂದರ್ಭದಲ್ಲಿ ಇವರೆಲ್ಲರ ಜವಾಬ್ದಾರಿಯನ್ನೂ ಮೈಸೂರು ಸರ್ಕಾರದವರೇ ಹೊರಬೇಕಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಹೇಳುವುದಕ್ಕಾಗುವುದಿಲ್ಲ. 1—4—50ರಿಂದ ನಮ್ಮಲ್ಲಿದ್ದ ಮಿಲಿಟರಿಯವರ ಹೊಣೆಗಾರಿಕೆಯನ್ನೆಲ್ಲಾ ಕೇಂದ್ರ ಸರ್ಕಾರದವರು ವಹಿಸಿಕೊಂಡಿದ್ದಾರೆ. ಇದು ಅವರಮೇಲೆ ಬಿದ್ದಿರತಕ್ಕ ಹೊಣೆಗಾರಿಕೆ; ಮತ್ತು ಅವರ ಪ್ರಥಮ ಕರ್ತವ್ಯವಾಗಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಗೆ ಇಂಡಿಯಾ ಸರ್ಕಾರದವರು ನೌಕರಿ ಕೊಡದೆ ಕಳುಹಿಸತಕ್ಕವರಿಗೆಲ್ಲಾ ತಾವು ಇಲ್ಲಿ ನೌಕರಿ ಕೊಡತಕ್ಕದ್ದು ನ್ಯಾಯ ಮತ್ತು ಸೂಕ್ತವಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಬಗ್ಗೆ ನಾವು ಇಂಡಿಯಾ ಸರ್ಕಾರದವರಿಂದ ಭರವಸೆ ಪಡೆದಿದ್ದೇವೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಿಂದೆ ತಾವು ಈ ಸಭೆಯಲ್ಲಿ ಆ ಮಿಲಿಟರಿಯವರ ಬಗ್ಗೆ ಯೋಜನೆ ಸಿದ್ಧಪಡಿಸಲು ರಚಿತವಾಗತಕ್ಕ ಸಮಿತಿಗೆ ಈ ಸಭೆಯಿಂದ ಕೆಲವು ಮಾನ್ಯ ಸದಸ್ಯರನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸಲಾಗಿತ್ತು. ಅದರಂತೆ ತೆಗೆದುಕೊಂಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಶ್ರೀಮಾನ್ ಎಲ್. ಸಿದ್ದಪ್ಪನವರನ್ನೂ ಮತ್ತು ಶ್ರೀಮಾನ್ ಎಂ. ಗೋವಿಂದ ರೆಡ್ಡಿಯವರನ್ನೂ ತೆಗೆದುಕೊಳ್ಳಲಾಗಿದೆ.

Sri H. C. LINGA REDDY (Kolar District—General).—You have said that different schemes are under preparation by this Government. What are the various schemes under preparation ?

***The Hon'ble Sri T. MARIAPPA.**—I want notice.

The Hon'ble Sri K. T. BHASHYAM.—Land acquisition, Industries, Tractor Service, etc.

Sri H. C. LINGA REDDY.—Will the Hon'ble Minister kindly enlighten me and the House about this ?

The Hon'ble Sri T. MARIAPPA.—For example, Land Acquisition, allowing young people to start business, then Tractor service, Silk Filatures, etc.

Sri H. C. LINGA REDDY.—Are these schemes under preparation ?

The Hon'ble Sri T. MARIAPPA.—No. Schemes have been finalised and they have been sent to the Government of India.

Sri H. C. LINGA REDDY.—Have you received any reply in this behalf?

The Hon'ble Sri T. MARIAPPA.—The Hon'ble the Law Minister delivered the schemes in person on 21st May 1951.

Sri H. C. LINGA REDDY.—How long it will take to start the whole matter?

The Hon'ble Sri T. MARIAPPA.—I think very early.

Sri H. C. LINGA REDDY.—Will the Government of Mysore see that nobody goes unhelped in this matter?

The Hon'ble Sri T. MARIAPPA.—We shall do our best.

Mr. SPEAKER.—Next question No. 133. Sri H. M. Channabasappa.

Suspension of Officials in Food section in Nanjangud and Krishnarajanagar Taluks.

*ಪ್ರಶ್ನೆ 133.—ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ನಂಜನಗೂಡು ಮತ್ತು ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ 'ಫುಡ್‌ಸೆಕ್ಷನ್' ಶಾಖೆಯಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ನೌಕರರು, ಫುಡ್ ಶಿರಸ್ತೇದಾರರು, ಫುಡ್ ಇನ್ಸ್‌ಪೆಕ್ಟರುಗಳು, ರೆವೆನ್ಯೂ ಇನ್ಸ್‌ಪೆಕ್ಟರುಗಳು, ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರುಗಳು ಮತ್ತು ಕೊಳ್ಳುವ ಮತ್ತು ಮಾರಾಟದ ಡಿಪೋಗಳ ಗುಮಾಸ್ತರುಗಳು – ಇವರುಗಳ ಹೆಸರುಗಳೇನು ;

(b) ಅವರು ಯಾವ ಯಾವ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಮತ್ತು ಅವರು ಈ ತಾಲ್ಲೂಕುಗಳಲ್ಲಿ ಒಂದಲ್ಲ ಒಂದು ನೌಕರಿ ಸ್ಥಾನದಲ್ಲಿ ಎಷ್ಟು ಕಾಲದಿಂದ ಇರುವರು ;

(c) ಕೃಷ್ಣರಾಜನಗರ ತಾಲ್ಲೂಕಿನ ಫುಡ್ ಶಿರಸ್ತೇದಾರರನ್ನೂ ಮತ್ತು ಇನ್ನೂ ಕೆಲವು ನೌಕರರನ್ನು 'ಸಸ್ಪೆಂಡ್' ಮಾಡಿ ಹುಕುಮುಗಳನ್ನು ಸಾದರುಮಾಡಲಾಗಿದೆಯೆ ಮತ್ತು ಹಾಗೆ ಮಾಡಿದ್ದರೆ ಯಾವಾಗ ಸಾದರುಮಾಡಲಾಯಿತು ಮತ್ತು ಹಾಗೆ ಮಾಡಲು ಕಾರಣವೇನು ;

(d) 'ಸಸ್ಪೆಂಡ್' ಮಾಡಲಾಗಿರುವ ನೌಕರರು ಮಾಡಿರುವ ತಕ್ಸೀರುಗಳ ಸ್ವಭಾವವೇನು ?

ಉತ್ತರ – ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) ಮತ್ತು (b) ವಿವರಗಳನ್ನು ಪರಿಶಿಷ್ಟದ ತಖ್ತೆಯಲ್ಲಿ ಕೊಡಲಾಗಿದೆ (ದಯೆಯಿಟ್ಟು ಪರಿಶಿಷ್ಟವನ್ನು ನೋಡಿ.)

(c) ಹೌದು. (d) ಭಾಗಕ್ಕೆ ಕೊಟ್ಟಿರುವ ಉತ್ತರದಲ್ಲಿ ನಮೂದುಮಾಡಿರುವ ಕಾರಣಕ್ಕಾಗಿ 1951 ನೆಯ ಇಸವಿ ಫೆಬ್ರವರಿ 28ನೆಯ ತಾರೀಖು 'ಸಸ್ಪೆನ್ಷನ್' ಹುಕುಮುಗಳನ್ನು ಸಾದರುಮಾಡಲಾಗಿದೆ.

(d) ಅವರಮೇಲೆ ಮಾಡಿರುವ ಆಪಾದನೆಗಳ ವಿಷಯದಲ್ಲಿ ವಿವರವಾದ ತನಿಖೆ ನಡೆಯುತ್ತಿದೆ. ತನಿಖೆ ನಡೆಯುತ್ತಿರುವ ಕಾರಣ, ಅವರನ್ನು 'ಸಸ್ಪೆಂಡ್' ಮಾಡಲಾಗಿದೆ.

Iನೆಯ ನಂಬರಿನ ತಖ್ತೆ—ನಂಜನಗೂಡು ತಾಲ್ಲೂಕು.

ಕ್ರಮ ಸಂಖ್ಯೆ	ಈಗಿರುವ ಹುದ್ದೆಯ ಹೆಸರು	ನೌಕರನ ಹೆಸರು	ಅವರು ಕೆಲಸಮಾಡುತ್ತಿರುವ ಸ್ಥಳಗಳು	ಈ ತಾಲ್ಲೂಕಿನಲ್ಲಿ ಅವರು ಕೆಲಸಮಾಡಲು ಪ್ರಾರಂಭಿಸಿದ ತಾರೀಖು
1	ಸ್ಪೆಷಲ್ ಶಿರಸ್ತೇದಾರರು	ಜನಾಬ್ ಎಚ್. ಮಹಮ್ಮದ್ ಷರೀಫ್ ಅವರು	ನಂಜನಗೂಡು ತಾಲ್ಲೂಕು	29—11—1947
2	ಸ್ಪೆಷಲ್ ರೆ॥ ಇನ್ಸ್ಪೆಕ್ಟರು	,, ಎಚ್. ಎ. ಜಬ್ಬಾರ್ ಅವರು	ಚತ್ರಹೋಬಳಿ	1—12—1918
		ಶ್ರೀಗಳಾದ—		
3	ಅ॥ ಫುಡ್ ಇನ್ಸ್ಪೆಕ್ಟರು	ಎಚ್. ಎಚ್. ರಾಮಸ್ವಾಮಿಯವರು	ಸರ್ಕಾರದ ಕೇಂದ್ರ ಡಿಪೋ, ನಂಜನಗೂಡು	21—3—1949
4	ರೆವೆನ್ಯೂ ಇನ್ಸ್ಪೆಕ್ಟರು	ಎಚ್. ಎಲ್. ನಾಗಪ್ಪನವರು	ಕಳಲೆ ಸರ್ಕಲ್	12—12—1947
5	ಡಿಟ್ಟೋ	ಎನ್. ಶ್ರೀಕಂಠಯ್ಯನವರು	ಬಿಳಿಗೆರೆ ಹೋಬಳಿ	1—6—1949
6	ಡಿಟ್ಟೋ	ಎ. ಕೃಷ್ಣಸ್ವಾಮಿಯವರು	ಕಸಬಾ ಹೋಬಳಿ	5—9—1949
7	ಡಿಟ್ಟೋ	ಎ. ಕೃಷ್ಣಪ್ಪನವರು	ಹೆಡತಲೆ ಸರ್ಕಲ್	9—8—1950
8	ಡಿಟ್ಟೋ	ಎ. ಆರ್. ಟಿ ತರೀನ್ ಅವರು	ಕವಲಂದೆ ಸರ್ಕಲ್	10—11—1948
9	ಡಿಟ್ಟೋ	ಎಚ್ ವೆಂಕಟರಾಮಯ್ಯನವರು	ಚಿತ್ರಸರ್ಕಲ್ 1	13—11—1948
10	ಡಿಟ್ಟೋ	ಕೆ. ಶಿವರಾಮಯ್ಯನವರು	ಹುಲ್ಲಹಳ್ಳಿ ಸರ್ಕಲ್	1—12—1948
11	ಡಿಟ್ಟೋ	ಚಿಂದ್ರಪ್ಪನವರು	ಹುರ	10—11—1948
12	ಡಿಟ್ಟೋ	ಎಸ್. ದೇವಪ್ಪನವರು	ಬಿಳಿಗೆರೆ ಹೋಬಳಿ	1—10—1950
13	ಫುಡ್ ಅಕೌಂಟೆಂಟರು	ಸಿ. ನಾಗೇಂದ್ರಯ್ಯನವರು	ತಾಲ್ಲೂಕು ಆಫೀಸು	10—4—1950
14	ಫುಡ್ ಗುಮಾಸ್ತರು	ಸಿ. ಎಸ್. ರಾಮಯ್ಯನವರು	ತಾಲ್ಲೂಕು ಕ್ಲಾರ್ಕ್	1—12—1949
15	ಡಿಟ್ಟೋ	ಕೆ. ಆರ್. ಸುಬ್ಬರಾಯರು	ಡಿಟ್ಟೋ	20—12—1948
16	ಡಿಟ್ಟೋ	ಬಿ. ಬಿ. ಚತ್ರಶಾಲಸಿಂಗ್ ಅವರು	ಡಿಟ್ಟೋ	25—4—1949
17	ಕೊಳ್ಳುವ ಡಿಪೋವಿನ ಕ್ಲಾರ್ಕ್	ಎಂ. ಎನ್. ಮಾದಯ್ಯನವರು	ಕ್ಲಾರ್ಕ್, ಸರ್ಕಾರದ ಕೇಂದ್ರ ಡಿಪೋ, ನಂಜನಗೂಡು	7—6—1943
18	ಡಿಟ್ಟೋ	ಎಂ. ಎಸ್. ನಾರಾಯಣರಾಯರು	ಶ್ರೀಕಂಠೇಶ್ವರ ಮಿಲ್ಸ್	30—11—1949
19	ಡಿಟ್ಟೋ	ಎ ಚಿಂದ್ರಶೇಖರಯ್ಯನವರು	ರಾಜರಾಜೇಶ್ವರಿ ಮಿಲ್ಸ್	3—12—1949
20	ಡಿಟ್ಟೋ	ಆರ್. ವಿ. ನರಸಿಂಹ ಅಯ್ಯಂಗಾರ್‌ರು	ಸರಸ್ವತಿ ಮಿಲ್ಸ್	1—9—1948
21	ಡಿಟ್ಟೋ	ಜನಾಬ್ ನಜೀರ್ ಮಹಮದ್‌ಖಾನ್ ಅವರು	ನಂಜುಂಡೇಶ್ವರ ಮಿಲ್ಸ್	23—1—1949
22	ಡಿಟ್ಟೋ	ಕೆ. ವಿ. ಸುಬ್ಬರಾಯ ಅವರು	ಮಲ್ಲೇಶ್ವರ ಮಿಲ್ಸ್	16—9—1949
23	ಡಿಟ್ಟೋ	ಆರ್. ವಿ. ದಾಸಪ್ಪನವರು	ಹದಿನಾಡು ಪರ್ಚೇಸ್ ಡಿಪೋ	24-9—1950
24	ಮಾರಾಟದ ಡಿಪೋವಿನ ಕ್ಲಾರ್ಕ್	ಎಂ. ಬಿ. ವೀರಭದ್ರಪ್ಪನವರು	ರೂರಲ್ ಡಿಪೋ, ನಂಜನಗೂಡು	27—3—1949
25	ಡಿಟ್ಟೋ	ಎನ್. ಶ್ರೀನಿವಾಸಯ್ಯನವರು	ಡಿಟ್ಟೋ ಬದನವಾಳು	ಡಿಟ್ಟೋ
26	ಡಿಟ್ಟೋ	ಕೆ. ಆರ್. ಕೃಷ್ಣಸ್ವಾಮಿರಾಯರು	ಡಿಟ್ಟೋ ಹೆಜ್ಜಿಗೆ	25—7—1949
27	ಡಿಟ್ಟೋ	ಎಚ್. ಎಸ್. ರಾಮಣ್ಣನವರು	ಡಿಟ್ಟೋ ಹೊಸಕೋಟೆ	1—7—1950
28	ಡಿಟ್ಟೋ	ಎಂ. ಸಿದ್ದಯ್ಯನವರು	ಡಿಟ್ಟೋ ಬಿಳಿಗೆರೆ	27—3—1949
29	ಡಿಟ್ಟೋ	ಗುರುಸಿದ್ದ ಆರಾಧ್ಯರು	ಡಿಟ್ಟೋ ದೇವನೂರು	17—6—1949
30	ಡಿಟ್ಟೋ	ಬಿ. ಪಿ. ಕೃಷ್ಣಪ್ಪನವರು	ಡಿಟ್ಟೋ ಸೂರಹಳ್ಳಿ	1—2—1947
31	ಡಿಟ್ಟೋ	ಕೆ. ವಿ. ಸೀತಾರಾಮಯ್ಯನವರು	ಡಿಟ್ಟೋ ದೊಡ್ಡಹೊಮ್ಮ	27—3—1949

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

II ನಂಬರು ತಖ್ತೆ—ಕೃಷ್ಣರಾಜನಗರ ತಾಲ್ಲೂಕು.

ಕ್ರಮ ಸಂಖ್ಯೆ	ನೌಕರನ ಹೆಸರು	ಹುದ್ದೆ	ಒಂದಲ್ಲ ಒಂದು ನೌಕರಿ ಸ್ಥಾನದಲ್ಲಿ ಕೆಲಸ ಮಾಡುತ್ತಿರುವ ಕಾಲಾವಧಿ
	ಶ್ರೀಯುತರುಗಳಾದ—		
1	ಎಚ್. ವಿ ವರದಾಚಾರ್, ಬಿ.ಎ., ಅವರು.	ಸ್ಪೆಷಲ್ ಶಿರಸ್ತೇದಾರರು (ಟ್ರ್ಯಾನ್ಸ್ಪೋರ್ಟ್)...	4 ವರ್ಷಗಳು
2	ಆರ್. ಮುನಿಸ್ವಾಮಿನಾಯಕ್, ಬಿ.ಎ., ಅವರು.	ಡಿಟೋ ...	ಈಚೆಗೆ ವರ್ಗಾಯಿಸರಾಗಿದೆ.
3	ಬಿ. ಸ್ವಾಮಿಯವರು ...	ಕಸಬಾ ಪ್ರದೇಶ (ಆಹಾರಕ್ಕೆ ಸಂಬಂಧಪಟ್ಟ ಕೆಲಸವನ್ನು ನಿರ್ವಹಿಸಲು ನೇಮಕವಾದ ಕಾಂಟ್ರಿಬ್ಯೂಷನ್ ಸ್ಪೆಷಲ್ ಶಿರಸ್ತೇದಾರರು).	3 ವರ್ಷ 3 ತಿಂಗಳು.
4	ಸಿ. ಎಂ. ದಾರಿಯಾ, ಬಿ.ಎ., ಅವರು.	ಸ್ಪೆಷಲ್ ಶಿರಸ್ತೇದಾರರು ಸಾಲಿಗ್ರಾಮ ...	2 ತಿಂಗಳು
	(a) ಕೆ. ಜಿ ನರಸಿಂಹಶಾಸ್ತ್ರಿಯವರು.	ಫುಡ್ ಅಕೌಂಟೆಂಟ್ ...	3 ವರ್ಷಗಳು
	(b) ಎನ್. ಟಿ. ಕಾಳಯ್ಯನವರು	ಅಸಿಸ್ಟೆಂಟ್ ಫುಡ್ ಇನ್ಸ್ಪೆಕ್ಟರ್ ಹೆಬ್ಬಾಳು ಪ್ರದೇಶ.	6 ವರ್ಷಗಳು
5	ಬಿ. ಟಿ. ತಿಮ್ಮಯ್ಯನವರು ...	ಸ್ಪೆಷಲ್ ರೆವೆನ್ಯೂ ಇನ್ಸ್ಪೆಕ್ಟರ್ ಮಿರ್ಲೆ ...	3 ತಿಂಗಳು
6	ಕೆ. ಎನ್. ವೈಕುಂಠೇಗೌಡರು, ರೆವೆನ್ಯೂ ಕ್ಲಾರ್ಕ್.	ಸ್ಪೆಷಲ್ ರೆವೆನ್ಯೂ ಇನ್ಸ್ಪೆಕ್ಟರ್ ಹನಸೋಗಿ ...	3 ವರ್ಷಗಳು
7	ಕೆಂಪರಾಮಯ್ಯನವರು ...	ಡಿಟೋ ಸಾಲಿಗ್ರಾಮ ...	6 ವರ್ಷಗಳು
8	ಎಚ್. ಎಸ್. ಅಚ್ಚಪ್ಪನವರು ...	ಡಿಟೋ ಹೊಸ ಅಗ್ರಹಾರ ...	3 ತಿಂಗಳು
9	ವಿ. ರಾಜಪ್ಪನವರು ...	ಡಿಟೋ ಗಂಧನಹಳ್ಳಿ ...	3 ವರ್ಷಗಳು
10	ಟಿ. ಎನ್. ಲಿಂಗಶೆಟ್ಟಿಯವರು	ಡಿಟೋ ತಿಪ್ಪೂರು ...	ಈಚೆಗೆ ವರ್ಗಾಯಿಸರಾಗಿದೆ.
11	(ಈಚೆಗೆ ವರ್ಗಾಯಿಸಲಾಗಿದೆ)		
12	ಶ್ರೀನಿವಾಸರಾಯರು (ಈಚೆಗೆ ವರ್ಗಾಯಿಸಲಾಗಿದೆ),	ಡಿಟೋ ಕಸಬಾ ...	ಡಿಟೋ
13	ಬಿ. ಕೃಷ್ಣಮೂರ್ತಿಯವರು ...	ಡಿಟೋ ಕಸಬಾ ...	1 ವರ್ಷ
	ಎಚ್. ಬಿ. ಬೋರೇಗೌಡರು ..	ಡಿಟೋ ಹೊಸಅಗ್ರಹಾರ (ಹಂಗಾಮಿಯಾಗಿ ನೇಮಕವಾದಲಾಗಿದೆ).	7 ವರ್ಷಗಳು
14	ಜ॥ ಅಬ್ದುಲ್‌ರಬ್ ಅವರು ...		
15	ಜ॥ ಅಬ್ದುಲ್‌ಕರೀಂ ಅವರು ...	ಡಿಟೋ ಹೊಸೂರು ...	2 ವರ್ಷಗಳು
16	ಬಿ. ಆನಂದಯ್ಯನವರು ...	ರೆವೆನ್ಯೂ ಇನ್ಸ್ಪೆಕ್ಟರ್ ತಿಪ್ಪೂರು ...	ಈಚೆಗೆ ವರ್ಗಾಯಿಸಲಾಗಿದೆ.
17	ಡಿ. ವಿ. ಸಂಜೀವಶೆಟ್ಟಿಯವರು...	ಡಿಟೋ ಕಸಬಾ ...	
18	ಬಿ ಕರಿಶೆಟ್ಟಿಯವರು ...	ಡಿಟೋ ಹಂಪಾಪುರ ...	4 ವರ್ಷಗಳು
19	ಸಿ. ಎಸ್. ನಾಗಪ್ಪನವರು ...	ಡಿಟೋ ಸಾಲಿಗ್ರಾಮ ...	4 ವರ್ಷಗಳು
20	ಪಿ. ಟಿ. ಸುಬ್ಬಯ್ಯನವರು ...	ಡಿಟೋ ಹೆಬ್ಬಾಳು ...	2½ ವರ್ಷಗಳು
21	ಟಿ. ಎನ್. ನಂಜಶೆಟ್ಟಿಯವರು...	ಡಿಟೋ ಮಿರ್ಲೆ ...	3 ವರ್ಷಗಳು
22	ಬಿ. ಪಿ. ರಾಮಕೃಷ್ಣಯ್ಯನವರು	ಡಿಟೋ ಹರದನಹಳ್ಳಿ ...	1½ ವರ್ಷಗಳು
23	ಟಿ. ಎನ್. ನಂಜಪ್ಪನವರು ...	ಡಿಟೋ ಹನಸೋಗೆ ...	3 ವರ್ಷಗಳು
24	ಜಿ. ಸಿದ್ದರಾಜು ಅವರು ...	ಡಿಟೋ ಹೊಸೂರು ...	6 ತಿಂಗಳು
25	ಸಿ. ಬಸವರಾಜಯ್ಯನವರು ...	ರೆವೆನ್ಯೂ ಇನ್ಸ್ಪೆಕ್ಟರ್, ಹೊಸಅಗ್ರಹಾರ ...	2 ವರ್ಷಗಳು
26	ಎ. ವೆಂಕಟಸುಬ್ಬಯ್ಯನವರು ...	ಆರ್. ಕೆ. ಎಸ್. ಮಿಲ್ಸ್, ಕೃಷ್ಣರಾಜನಗರ ಪರ್ಚೇಸ್ ಡಿಪೋ ಕ್ಲಾರ್ಕ್.	3 ತಿಂಗಳು
27	ಬಿ. ಬಸವಯ್ಯನವರು ...	ಡಿಪೋ ಕ್ಲಾರ್ಕ್, ಎಸ್. ಪಿ. ಆರ್. ಆಫೀಸಿನಲ್ಲಿ ಬೇರೆ ಕೆಲಸದಮೇಲೆ.	3 ,,
28	ಎಚ್. ಜಿ. ಸಿದ್ದಲಿಂಗಶೆಟ್ಟಿಯವರು.	ಪರ್ಚೇಸ್ ಡಿಪೋ ಕ್ಲಾರ್ಕ್ ಎಸ್. ಕೆ. ಮಿಲ್ಸ್	4 ವರ್ಷಗಳು
		ಡಿಟೋ ಕರ್ನಾಟಕ ಮಿಲ್ಸ್ ...	3 ತಿಂಗಳು
29	ಜ॥ ರಹಮಾನ್ ಷರೀಫ್ ಅವರು	ಡಿಟೋ ಶಾಂತಿನಾಥ ಮಿಲ್ಸ್ ...	3 ,,
30	ಕೆ. ವಿ. ಶ್ರೀನಿವಾಸನ್ ಅವರು ...	ಡಿಟೋ ಶ್ರೀನಿವಾಸ ಮಿಲ್ಸ್ ...	3 ,,

ಕ್ರಮ ಸಂಖ್ಯೆ	ನೌಕರನ ಹೆಸರು	ಹುದ್ದೆ	ಒಂದಲ್ಲ ಒಂದು ನೌಕರಿ ಸ್ಥಾನದಲ್ಲಿ ಕೆಲಸ ಮಾಡುತ್ತಿರುವ ಕಾಲಾವಧಿ
31	ವೈ. ಎಸ್. ದೊರೆಸ್ವಾಮಿಯವರು	ಪರ್ಚೇಸ್ ಡಿಪೋ ಕ್ಲಾರ್ಕ್ ಪಿ. ಡಿ. ಮಿಲ್ಸ್ ಕೃಷ್ಣರಾಜನಗರ.	3 ತಿಂಗಳು 3 ,,
32	ಡಿ. ಪದ್ಮನಾಭಯ್ಯನವರು ...	ಡಿಟೋ ಎಸ್. ಎಲ್. ಎನ್. ಮಿಲ್ಸ್	
33	ಸಿ. ವಿ. ರಾಜಣ್ಣನವರು ...	ಡಿಟೋ ಎಸ್. ಕೆ. ಅರ್. ಆಫೀಸಿನಲ್ಲಿ ಬೇರೆ ಕೆಲಸದ ಮೇಲೆ.	3 ,, 3 ,,
34	ಎಂ. ಡಿ. ಸೈಯದ್ ಅವರು ...	ಡಿಟೋ ಮಾರಗೌಡನಹಳ್ಳಿ ...	
35	ಎಸ್. ಎಂ. ರಾಮೇಗೌಡರು ...	ಡಿಟೋ ಶ್ರೀಕಂಠ ಮಿಲ್ಸ್ ...	3 ,,
36	ಜವರ ತಮ್ಮಯ್ಯನವರು ...	ಡಿಟೋ ಹೆಬ್ಬಸೂರು ...	3 ,,
37	ಜೀವೇಂದ್ರಕುಮಾರ್ ಅವರು ...	ಡಿಟೋ ಎಸ್. ಪಿ. ಆರ್. ಮಿಲ್ಸ್ ...	3 ,,
38	ಎಸ್. ನಾಗರಾಜ್ ಅವರು ...	ಡಿಟೋ ಎಸ್. ಎಸ್. ಆರ್. ಮಿಲ್ಸ್	3 ,,
39	ಎಂ. ಡಿ. ಸದಾಶಿವಯ್ಯನವರು...	ಡಿಟೋ ಡಿಟೋ ...	2 ವರ್ಷಗಳು
40	ಆರ್. ಸಿ. ರಾಜಶೇಖರ್ ಅವರು	ಡಿಟೋ ಎಸ್. ಸಿ. ಎನ್. ಆರ್. ಮಿಲ್ಸ್	3 ತಿಂಗಳು
41	ರಾಜನಂಜೇಗೌಡರು ...	ಡಿಟೋ ಶಾರದ ಮಿಲ್ಸ್ ...	3 ,,
42	ಪುಟ್ಟಕುಮಾರ್ ಅವರು ...	ಡಿಟೋ ಹೆಬ್ಬಾಳು ...	3 ,,
43	ಎಚ್. ಕೆ. ಸಿದ್ದೇಗೌಡರು ...	ಡಿಟೋ ಹರದನಹಳ್ಳಿ ...	2 ,,
44	ಎ. ಪಿ. ಶಿವಶಂಕರ್ ಅವರು ...	ಡಿಟೋ ಚಂದಗಾಲು ...	3 ,,
45	ಎಂ. ಜಿ. ಶ್ರೀಕಂಠ ಆರಾಧ್ಯ ...	ಡಿಟೋ ಹೊಸೂರು ...	3 ,,
	(a) ಕಲ್ಲೇಶ ಅವರು ...	ಫುಡ್ ಕ್ಲಾರ್ಕ್ ...	15 ದಿವಸಗಳು
	(b) ಎಲ್. ಬಸವಯ್ಯನವರು	ಡಿಟೋ ...	ಡಿಟೋ
	(c) ವೈ. ಕೆ. ಮೂಡಲಗಿರಯ್ಯನವರು.	ಡಿಟೋ ...	3 ವರ್ಷಗಳು
46	ಡಿ. ಎಂ. ನಾಗೇಗೌಡರು ..	ಪರ್ಚೇಸ್ ಡಿಪೋ ಕ್ಲಾರ್ಕ್, ದೊಡ್ಡಕೊಪ್ಪಲು...	3 ತಿಂಗಳು
47	ಬಿ. ಎನ್. ರಂಗಪ್ಪನವರು ...	ಡಿಟೋ ಅರ್ಜುನಹಳ್ಳಿ ...	3 ,,
48	ಎಲ್. ಅನಂತರಾಮಯ್ಯನವರು	ಡಿಟೋ ನೇರಳೆ ...	3 ,,
49	ಜಿ. ಸಿದ್ದಲಿಂಗಶೆಟ್ಟಿಯವರು ...	ಐ. ಆರ್. ಎಸ್. ಆರ್. ಆರ್. ಮಿಲ್ಸ್ ...	3 ,,
50	ಕೆ. ದೇವೇಗೌಡರು ...	ಐ. ಆರ್. ಎಸ್. ಕೆ. ಪಿ. ಮಿಲ್ಸ್ ...	3 ,,
51	ಜಿ. ಸಂಪತ್ ಅಯ್ಯಂಗಾರ್ಯರು...	ಡಿಪೋ ಕ್ಲಾರ್ಕ್, ಸರ್ಕಾರದ ಮಾರಾಟದ ಡಿಪೋ, ಚುಂಚನಕಟ್ಟೆ.	4 ವರ್ಷಗಳು

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನನ್ನ (ಸಿ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ತಿಳಿಸಲಾಗಿದೆ. ಹಾಗೆ ಎಷ್ಟು ಜನರನ್ನು ಸಸ್ಪೆಂಡ್ ಮಾಡಲಾಯಿತು ?

*ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೂರು ಜನರೆಂದು ಕಾಣುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಯಾರು ಯಾರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಬ್ಬರು ರೆವಿನ್ಯೂ ಇನ್ಸ್‌ಪೆಕ್ಟರುಗಳು ಮತ್ತು ಒಬ್ಬ ಶಿರಸ್ತೇದಾರರು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಆ ಶಿರಸ್ತೆದಾರರ ಹೆಸರೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಶ್ರೀ ಆರ್. ಮುನಿಯಪ್ಪನಾಯಕ್ ಎಂತ ಇರಬಹುದು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಸಸ್ಪೆನ್ಷನ್ ಜಾರೀಮಾಡಿದ ಮೂರು ದಿವಸಗಳೊಳಗಾಗಿಯೇ ಪುನಃ ಅವರು ಛಾರ್ಜು ತೆಗೆದುಕೊಂಡ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈಗ ಅವರು ಎಲ್ಲಿ ಕೆಲಸಮಾಡುತ್ತಿದ್ದಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರನ್ನು ಬೇರೆ ತಾಲ್ಲೂಕಿಗೆ ವರ್ಗಮಾಡಲಾಗಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಇವರಿಗೆ ವಿಧಿಸಿದ್ದ ಸಸ್ಪೆನ್ಷನ್ನನ್ನು ವಜಾ ಮಾಡಿದ್ದು ಯಾವಾಗ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಇವರನ್ನು ಬೇರೆ ತಾಲ್ಲೂಕಿಗೆ ಹೋಗಲು ವರ್ಗಾಯಿಸಿದ್ದು ವಜಾ ಆಗಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅವರ ಸಸ್ಪೆನ್ಷನ್ ವಿಚಾರ ಹೋಗಲಿ. ಅವರನ್ನು ಬೇರೆ ತಾಲ್ಲೂಕಿಗೆ ವರ್ಗಾಯಿಸಿದ್ದುದೂ ವಜಾ ಆಗಿದೆಯೇ ?

ಅಧ್ಯಕ್ಷರು.—ಅವರನ್ನು ಇತ್ತೀಚೆಗೆ ಅಲ್ಲಿಂದ ಬೇರೆ ಕಡೆ ವರ್ಗಮಾಡಿರಬಹುದು. ಅದನ್ನೆಲ್ಲಾ ಹೇಗೆ ತಿಳಿಸಲಿಕ್ಕೆ ಸಾಧ್ಯ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಹೀಗೆ ಸಸ್ಪೆಂಡ್ ಮಾಡಲಾಗಿದ್ದವರು ಒಂದು ವಾರ ಅಥವ ಮೂರು ದಿವಸಗಳ ಒಳಗೆ ಇವರು ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕೆಲಸಮಾಡುತ್ತಿದ್ದುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಚಾರ ನನಗೆ ಗೊತ್ತಿಲ್ಲ. Now my information here is that they have been transferred to different taluks.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಆ ಜನರನ್ನು ಸಸ್ಪೆಂಡ್ ಮಾಡಿ, ಎಷ್ಟು ದಿವಸ ಹಾಗೆ ಸಸ್ಪೆನ್‌ಷನ್ನಲ್ಲಿಡಲಾಗಿತ್ತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್. The information is that they have been transferred outside that area. The main contention was that they should not be kept on there.

Sri H. M. CHANNABASAPPA.—Is transferring to a different Taluk the meaning of suspension ?

The Hon'ble Sri T. MARIAPPA.—It all depends upon the circumstances. They might have been removed from that place and transferred to a different taluk.

ಶ್ರೀ ಎಚ್. ಎಂ. ಚನ್ನಬಸಪ್ಪನವರು—ಅವರ ಮೇಲೆ ನಡೆಸಲಾಗುತ್ತಿದ್ದ ವಿಚಾರಣೆ ಕ್ರಮ ಪೂರ್ತಿಯಾಗಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಬಗ್ಗೆ ಸರ್ಕಾರಕ್ಕೆ ಇನ್ನೂ ವರದಿ ಬಂದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು —ಅಪಾದನೆಗಳನ್ನು ಯಾರ್ಯಾರು ಏನೇನು ಮಾಡಿದ್ದರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಶ್ರೀ ಚನ್ನಬಸಪ್ಪನವರೊಬ್ಬರೇ ಮಾಡಿದ್ದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನಲ್ಲ ಎಂದು ಈ ಸಭೆಯವರಿಗೆ ಹೇಳಬೇಕಾಗಿದೆ. ನಾನು ಬರೆಯುವುದಕ್ಕೆ ಮುಂಚೆಯೇ ಅಪಾದಿತರಿಗೆ ಸಸ್ಪೆನ್‌ಷನ್ ಆಗಿತ್ತು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಬೇರೆ ವಿಚಾರ. ತಾವು ಕಾಗದ ಬರೆದು ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸಸ್ಪೆಂಡ್ ಮಾಡುವುದಕ್ಕೆ ಯಾರು ಕಂಪ್ಲೈಂಟ್ ಮಾಡಿದರು ? ಅವರ ಮೇಲಿದ್ದ ಅಪಾದನೆಗಳೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ನೋಟೀಸ್ ಬೇಕು. ತಾವು ಕೇಳಿರುವ ಪ್ರಶ್ನೆ ಎಷ್ಟು ದೊಡ್ಡದು, ಅದಕ್ಕೆ ಬೇಕಾದ ವಿವರಗಳನ್ನು ಒದಗಿಸಲು ಎಷ್ಟು ದೀರ್ಘಕಾಲ ಬೇಕಾಗುತ್ತದೆ ಎಂಬುದು ತಮಗೇ ಗೊತ್ತಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನಂಜನಗೂಡು ತಾಲ್ಲೂಕಿನ ಪಟ್ಟಿ ಕೊಟ್ಟಿರುವುದರಲ್ಲಿರುವ ಅಧಿಕಾರಿಗಳು ಆಯಾ ತಾರೀಖಿನಿಂದ ಆಯಾ ಇಲಾಖೆಯಲ್ಲೇ ತಾನೆ ಇರುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ನೋಟೀಸ್ ಬೇಕು. ಒಂದು ವೇಳೆ ರೆವೆನ್ಯೂ ಇನ್ಸ್ಪೆಕ್ಟರು ಅವರಲ್ಲಿ ಕೆಲವರನ್ನು ಡಿಪೋಗೆ ತೆಗೆದುಕೊಂಡಿರಬಹುದು. ಒಂದೇ ಕಡೆ ಬಹಳ ಕಾಲದಿಂದ ಇದ್ದಾರೆಂದು ಹೇಳಲು ಸಾಧ್ಯವಿಲ್ಲ. ಈಗ ಪ್ರಶ್ನೆಯಲ್ಲಿ ತಾವು ಕೇಳಿದ್ದ ಸಮಾಚಾರ ಮಾತ್ರ ಒದಗಿಸಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆಹಾರದ ಇಲಾಖೆಯಲ್ಲಿ ಎಷ್ಟು ವರ್ಷದಿಂದ ಆ ತಾಲ್ಲೂಕಿನಲ್ಲಿದ್ದಾರೆಂದು ನಾನು ಕೇಳಿರುವುದು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಕೊಟ್ಟಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು —ಒಂದನೆಯ ನಂಬರು ತಖ್ತೆಯಲ್ಲಿ ಅವರು ಯಾವ ಹುದ್ದೆಯಲ್ಲಿದ್ದರೆಂಬುದನ್ನು ಹೇಳಿದೆ. ಅಲ್ಲಿ ನಮೂದಿಸಿರುವ ತಾರೀಖಿನಿಂದ ಅದೇ ಹುದ್ದೆಯಲ್ಲಿತಾನೆ ಅವರಿರುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಹೇಳುವುದು ಕಷ್ಟ, ವಿಚಾರಮಾಡಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನಂಜನಗೂಡು ತಾಲ್ಲೂಕಿನಲ್ಲಿ (17)ನೇ ನಂಬರಿನವರು ಎಂಟು ವರ್ಷದಿಂದ ಅಂದರೆ 1943ರರಿಂದ ಒಂದೇ ಊರಿನಲ್ಲಿರುವುದಕ್ಕೆ ವಿಶೇಷ ಕಾರಣವೇನು ?

(Interruption).

*__The Hon'ble Sri T. MARIAPPA.__—My Hon'ble friend says the information furnished is incorrect. I will verify. It may perhaps be an error. My information is that the date is 7th June 1943. If it is incorrect, I will have it verified.

Sri H. M. CHANNABASAPPA.—I am not saying that it is incorrect. I am only speaking on facts furnished by the Government. What are the special qualifications for retaining him for these eight long years ?

The Hon'ble Sri T. MARIAPPA.—In this taluk he is working since 1943. He might be working in various capacities and even then if he is exceptionally good, he might have been retained.

Sri H. M. CHANNABASAPPA.—I do not want a hypothetical answer. If the Hon'ble Minister says 'yes', I agree and if he says 'No' also, I take it I have no other alternative. Please look into item No. 4, Kaliah—he is there for six long years. Item No. 7 Kemparamiah six long years! Item No. 13 H. B. Bore-Gowda—seven long years. What are the qualifications of these gentlemen for being retained in those places for six and seven years at a stretch?

The Hon'ble Sri T. MARIAPPA.—In fact H. B. Bore Gowda is a local candidate. He is retained there for 7 long years. Perhaps there is nothing adverse against him.

Sri H. M. CHANNABASAPPA—So shall I take it that that is a very good qualification ?

The Hon'ble Sri T. MARIAPPA.—Sir, ordinarily unless there is something adverse, these people might have been retained as revenue inspectors, sheristedars and so on.

Sri H. M. CHANNABASAPPA.—Is it the policy of the Government that wherever there are local candidates they should be retained for seven years?

The Hon'ble Sri T. MARIAPPA—The policy is that after three years they should be transferred.

Sri H. M. CHANNABASAPPA.—How many complaints were there against these gentlemen, Kaliah, Bore Gowda and Kemparamiah?

The Hon'ble Sri T. MARIAPPA.—I want notice.

Sri H. M. CHANNABASAPPA.—Have there been complaints at all?

The Hon'ble Sri T. MARIAPPA.—Notice. I cannot presume. There may be no complaints at all. Therefore I want notice to enquire whether there are any complaints against these individuals.

Sri H. M. CHANNABASAPPA.—I beg to appeal to the Chair, Sir. The Hon'ble Minister pleads notice even for questions which have been given due notice of. I expected him to be in possession of all details by now.

Mr. SPEAKER.—The Hon'ble Minister cannot be expected to have the entire history of these people with him. There are as many as 51 persons in the list.

Sri H. M. CHANNABASAPPA.—When do you propose to complete the investigation against the food sheristedars who have been suspended?

The Hon'ble Sri T. MARIAPPA.—As early as possible.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಅಪಾದನೆಮಾಡಿರುವುದನ್ನು ಪರಿಶೀಲನೆ ನಡೆ ಸುತ್ತಿರುವ ಅಧಿಕಾರಿಗಳು ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೈಸೂರಿನ ಜಿಲ್ಲಾಧಿಕಾರಿಗಳು.

ಶ್ರೀ ಎಂ. ಗೋವಿಂದರೆಡ್ಡಿಯವರು.—(a) ಪ್ರಶ್ನೆಗೆ ಉತ್ತರವಾಗಿ ಕೊಟ್ಟಿರುವ ಪಟ್ಟಿಯಲ್ಲಿ ನಮೂದಾಗಿ ರುವ ಎಲ್ಲಾ ಅಧಿಕಾರಿಗಳ ಮೇಲೂ ಆಪಾದನೆಯಿ ದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೂರು ಜನರ ಮೇಲೆ ಮಾತ್ರ ಆಪಾದನೆಯಿದೆ. ಅದನ್ನು ವಿಚಾರಣೆ ಮಾಡುತ್ತಿದ್ದೇವೆ. ಬಾಕಿ ಅಧಿಕಾರಿಗಳ ಮೇಲಿರುವುದು ಗೊತ್ತಿಲ್ಲ.

Sri H. M. CHANNABASAPPA.—One more question with your permission, Sir. Are they suspended on my allegation?

The Hon'ble Sri T. MARIAPPA.—They are suspended under different allegations.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ-ಸಿಮ್ಸ ಪಂಗಡ).—ಒಂದನೆಯ ನಂಬರು ತಖ್ತೆಯಲ್ಲಿ ನಂಜನಗೂಡು ತಾಲ್ಲೂಕಿನಲ್ಲಿ (3)ನೇ ನಂಬರು ಶ್ರೀ ಎಚ್. ಎಸ್. ರಾಮಸ್ವಾಮಿಯವರು 21-3-1949 ನೆಯ ತಾರೀಖಿನಿಂದ ಕೆಲಸವನ್ನು ಕೇಂದ್ರ ಡಿಪೋನಲ್ಲಿ ಮಾಡುತ್ತಿದ್ದಾರೆಂದು ಹೇಳಿದೆ. ಅದನ್ನು (17)ನೇ ನಂಬರು ಶ್ರೀ ಮಾದಯ್ಯನವರು ಕೆಲಸಮಾಡುತ್ತಿದ್ದ ತಾರೀಖು 7-6-1943ರರೊಡನೆ ಹೋಲಿಸಿದರೆ ಶ್ರೀ ಮಾದಯ್ಯನವರಿಗೆ ತೋರಿಸಿರುವ ತಾರೀಖು ಸರಿಯಲ್ಲ ವೆಂಬುದು ತಮಗೆ ಗೊತ್ತಾಗುವುದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನನ್ನ ರಿಕಾರ್ಡಿನಲ್ಲಿ 7-6-1943 ಎಂದಿದೆ, ಅದು ಸರಿಯಲ್ಲ ವೆಂದು ಹೇಳಿದರೆ ವಿಚಾರ ಮಾಡುತ್ತೇವೆ.

ಶ್ರೀ ಎಂ. ಮಾದಯ್ಯನವರು.—ರಾಮಸ್ವಾಮಿಯವ ರನ್ನು 14-5-1951ರಲ್ಲಿ ಒಂದು ಡಿಪೋದಲ್ಲಿ ರಿಲೀವ್ ಮಾಡುವುದಕ್ಕೆ ಮಾದಯ್ಯನವರನ್ನು ಫೋರ್ಸ್ ಮಾಡಿರು ವುದು ಗೊತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಹೋದ ಅಧಿವೇಶನದಲ್ಲಿ ಈ ಪ್ರಶ್ನೆಗೆ ಉತ್ತರ ಒದಗಿಸಲಾ ಗಿತ್ತು. ಈಚೆಗೆ ಸಮಾಚಾರ ತಿಳಿಯದು.

ಶ್ರೀ ಎಂ. ಮಾದಯ್ಯನವರು.—ರಾಮಸ್ವಾಮಿಯ ವರನ್ನು ಗುಂಡಲುಪೇಟೆ ಡಿಪೋಗೆ ವರ್ಗಮಾಡಿರುವುದು ಗೊತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಿಚಾರ ಮಾಡಬೇಕು.

ಶ್ರೀ ಎಂ. ಮಾದಯ್ಯನವರು.—ಅವರು ಒಂದು ವರ್ಷ ಆಹಾರದ ಇಲಾಖೆಯಲ್ಲಿದ್ದರು. ಮಾದಯ್ಯನ ವರು 1943ರಿಂದ ಕೊಳ್ಳುವ ಡಿಪೋ ಕ್ಲಾರ್ಕ್ ಆಗಿದ್ದಾ ರೆಂಬುದು ಸರಿಯಲ್ಲ. ಅವರೂ ಸುಮಾರು ಒಂದು ವರ್ಷ ಆಹಾರ ಇಲಾಖೆಯಲ್ಲಿದ್ದ ಮೇಲೆ 14-5-1951 ರಲ್ಲಿ ಕೇಂದ್ರ ಡಿಪೋಗೆ ಹಾಕಿದ್ದಾರೆ. ಅದಕ್ಕೆ ಹಿಂದೆ ಎಕ್ಸೈಜು ಕ್ಲಾರ್ಕ್ ಆಗಿ ಬೇರೆ ಇಲಾಖೆಯಲ್ಲಿದ್ದರು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇರಬಹುದು.

Sri H. M. CHANNABASAPPA.—Is the Hon'ble Member questioning the correctness of the answers furnished by the Government?

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ನಂಜನಗೂಡಿನ ತಾಲ್ಲೂಕಿನಲ್ಲಿ ಪ್ರೊಕ್ಯೂರ್ ಮೆಂಟ್ ಮಾಡುವಾಗ ಹಳ್ಳಿಗಳಲ್ಲಿ ಕಿರುಕುಳ ಕೊಟ್ಟಿರು ವುದು ಗೊತ್ತೆ?

The Hon'ble Sri T. MARIAPPA.—That does not arise out of this question. The main question relates purely to food officials, food sheristedars, food inspectors, special revenue inspectors and food depot clerks.

ಶ್ರೀ ಡಿ. ಎಂ. ಸಿದ್ದಯ್ಯನವರು.—ಕೃಷ್ಣರಾಜನಗ ರದ ಕೆಲವು ಆಫೀಸರುಗಳ ಮೇಲೆ allegations ಇವೆ ಎಂದು ಹೇಳಿದ್ದೀರಿ. ಅದೇ ರೀತಿ ಇಲ್ಲೂ ಕೆಲವರ ಮೇಲೆ allegations ಇಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಂಜನಗೂಡಿನ ತಾಲ್ಲೂಕಿನಲ್ಲಿ ಆಫೀಸರುಗಳನ್ನು ವರ್ಗಾಯಿಸಿ ಎಂದರೆ ಫುಡ್ ಡಿಪೋದಿಂದ, ಸೆಂಟ್ರಲ್ ಡಿಪೋಗೆ, ಸೆಂಟ್ರಲ್ ಡಿಪೋದಿಂದ ಫುಡ್ ಡಿಪೋಗೆ ವರ್ಗಾಯಿಸಿರುವುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಗೊತ್ತಿಲ್ಲ. ಸ್ಪಷ್ಟವಾಗಿ ಹೇಳಿದರೆ ಮಾನ್ಯ ರವಿನ್ಯೂ ಮಂತ್ರಿಗಳು ಇದ್ದಾರೆ ತಿಳಿಸುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಆಫೀಸರುಗಳ ಮೇಲೆ ಆಕ್ಷೇಪಣೆ ಬಂದರೆ ಅಲ್ಲಲ್ಲೇ ವರ್ಗಾಯಿಸು ವುದಕ್ಕೆ ಬದಲಾಗಿ ದೂರ ಪ್ರದೇಶಗಳಿಗೆ ವರ್ಗಾಯಿ ಸುವ ಪದ್ಧತಿ ಇಟ್ಟಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಕ್ಷೇಪಣೆ ಬಂದರೆ ಮಾಡುವುದಿಲ್ಲ. ಅದು ನಿಜ ಅಂತ ಗೊತ್ತಾದರೆ ಮಾಡಬಹುದು.

ಶ್ರೀ ಎಂ. ಎಲ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಅನೇಕ ಅಧಿಕಾರಿಗಳು ಒಂದೇ ಕಡೆ 6–7 ವರ್ಷದಿಂದ ಇದ್ದಾರೆ. ಅಂಥವರನ್ನು ಬೇರೆ ಕಡೆಗೆ ವರ್ಗಾಯಿಸಿ ಸಾಧ್ಯವಾದ ಮಟ್ಟಿಗೂ 3 ವರ್ಷಕ್ಕೆ ಒಂದು ಸಾರಿ ಬದಲಾಯಿಸುತ್ತಿರುವುದು ಒಳ್ಳೆಯ ದಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—6–7 ವರ್ಷ ದಿಂದ ಇರುವವರು ಇದ್ದರೆ ವರ್ಗ ಮಾಡುತ್ತೇವೆ. ಆದರೆ 15 ದಿನ ಒಂದು ತಿಂಗಳಿನಿಂದ ಇರುವವರೂ ಇದ್ದಾರೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಕಡ್ಡಾಯವಾಗಿ ಈ ಮೂರು ವರ್ಷದ ರೂಲ್ಸು ಜಾರಿಗೆ ತರುವುದು ಉತ್ತಮವಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಪ್ಪಿಕೊಳ್ಳುತ್ತೇನೆ. ಈಗ 7–8 ವರ್ಷದಿಂದ ಇರುವವರನ್ನು ಜಾಗ್ರತೆ ವರ್ಗಮಾಡುತ್ತೇವೆ.

Mr. SPEAKER.—Question No. 177. Sri Kadidal Manjappa. The Hon'ble Member is not present. This question will be treated as unstarred. Next question No. 198.

Steps taken to push through the Grow More Food Scheme.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—

*ಪ್ರಶ್ನೆ 198.—ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಹೆಚ್ಚು ಆಹಾರ ಬೆಳೆಯುವ ಯೋಜನೆಯನ್ನು ಮುಂದುವರಿಸುವುದಕ್ಕೆ ಸರ್ಕಾರದವರು ಕೈಕೊಂಡಿರ ತಕ್ಕ ಕಾರ್ಯಕ್ರಮಗಳೇನು ;

(b) ಪ್ರತಿಯೊಂದು ಬಾಬಿಗೂ ಈ ವರೆಗೆ ವೆಚ್ಚ ಮಾಡಿರುವ ಮೊಬಲಗೆಷ್ಟು ;

(c) ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದುದರಿಂದ ಎಷ್ಟು ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯಲಾಗಿದೆ ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) ಸಂಸ್ಥಾನವು ಆಹಾರದ ವಿಷಯದಲ್ಲಿ ಸ್ವಪರಿಪೂರ್ಣವಾಗಿರುವಂತೆ ಮಾಡುವ ಉದ್ದೇಶದಿಂದ, ಇಂಡಿಯಾ ಸರ್ಕಾರದವರ ಅನುಮೋದನವನ್ನು ಪಡೆದಿರುವ ಮೂರು ವರ್ಷಗಳ ಒಂದು ಯೋಜನೆಯನ್ನು ತಯಾರಿಸಲಾಗಿದೆ. ಆ ಯೋಜನೆಯಲ್ಲಿ ಅಡಕವಾಗಿರತಕ್ಕ ಕಾರ್ಯಕ್ರಮಗಳನ್ನೆಲ್ಲಾ ಆಹಾರದ ಉತ್ಪನ್ನದ ಇಲಾಖೆಯವರು ಜಾರಿಗೆ ತರುತ್ತಿದ್ದಾರೆ.

(b) ಇದರೊಡನೆ ಕೊಟ್ಟಿರತಕ್ಕ ತಖ್ತೆಯನ್ನು ದಯೆಯಿಟ್ಟು ನೋಡಿ. (ದಯೆಯಿಟ್ಟು ಇದರಡಿ ಮುದ್ರಿತವಾಗಿರುವ ಪರಿಶಿಷ್ಟವನ್ನು ನೋಡಿ).

ಈ ಮೊಬಲಗುಗಳು ಆಹಾರ ಉತ್ಪನ್ನದ ಇಲಾಖೆಯವರಿಂದ ವೆಚ್ಚ ಮಾಡಲ್ಪಟ್ಟ ಮೊಬಲಗುಗಳು, ಇತರ ಇಲಾಖೆಗಳಿಗೆ ಎಂದರೆ, ಪಬ್ಲಿಕ್‌ವರ್ಕ್ಸ್, ರೆವೆನ್ಯೂ, ಎಲೆಕ್ಟ್ರಿಕಲ್, ವ್ಯವಸಾಯ ಮೊದಲಾದ ಇಲಾಖೆಗಳಿಗೆ–ಸಂಬಂಧಪಟ್ಟ ವಿವರಗಳು ಸಿದ್ಧವಾಗಿ ದೊರೆಯುವಂತಿಲ್ಲ.

(c) 1949–50ನೆಯ ಸಾಲಿನಲ್ಲಿ 43,400ಟನ್ನುಗಳಷ್ಟು ಆಹಾರ ಧಾನ್ಯಗಳು. 1950–51ನೆಯ ಸಾಲಿನ ಲೆಕ್ಕಗಳು ಇನ್ನೂ ದೊರೆಯುವಂತಿಲ್ಲ.

ವೆಚ್ಚದ ತಪಶೀಲುಗಳು.

	ಯೋಜನೆಯ ಹೆಸರು	1949–50 (1–7–49ರಿಂದ 31–3–50ರ ವರೆಗೆ)	1950–51 (1–4–50ರಿಂದ 31–12–50ರ ವರೆಗೆ)
1.	ನೀರಾವರಿ ಬಾವಿಗಳಿಗಾಗಿ ಸಬ್ಸಿಡಿ (ಸಹಾಯ ದ್ರವ್ಯವನ್ನು ಕೊಡುವುದು)	6,10,972	3,15,845
2.	ಉತ್ತಮ ತರಹೆಯ ಬೀಜದ ಬತ್ತವನ್ನು ಅಧಿಕ ಪ್ರಮಾಣದಲ್ಲಿ ಬೆಳೆದು ಹಂಚುವುದು.	1,42,165	44,257
3.	ಎಲೆ ಗೊಬ್ಬರವನ್ನೂ ಮತ್ತು ಬಿತ್ತನೆ ಬೀಜಗಳನ್ನೂ ಅಧಿಕ ಪ್ರಮಾಣದಲ್ಲಿ ತಯಾರಿಸಿ ಹಂಚುವುದು.	1,23,000	440
4.	ನಗರದ ಕಶ್ಮಲದಿಂದ "ಕಾಂಪೋಸ್ಟ್" ಗೊಬ್ಬರವನ್ನು ತಯಾರಿಸಿ ಹಂಚುವುದು.	48,774	45,880
5.	ಡೆಪ್ಯುಟಿ ಡೈರೆಕ್ಟರವರ ಸಿಬ್ಬಂದಿ ವೆಚ್ಚ ...	25,414	26,165
6.	"ಸ್ಟ್ಯಾಟಿಸ್ಟಿಷಿಯನ್"ರವರ ಸಿಬ್ಬಂದಿ ವೆಚ್ಚ ...	24,000	25,912
7.	ಬೆಳೆಗಳಿಗೆ ತಗಲುವ ಈತಿಬಾಧೆಗಳ ಮತ್ತು ರೋಗರುಜಿನಗಳ ವಿಷಯದಲ್ಲಿ ಕೈಕೊಳ್ಳಬೇಕಾದ ಮುಂಜಾಗರೂಕತೆಯ ಏರ್ಪಾಟುಗಳು.	7,91,800	25,373
8.	ನೀರಾವರಿ ಯೋಜನೆಗಳು	22,50,154	45,50,319
9.	ನೀರಾವರಿ 'ಪಂಪು'ಗಳನ್ನು ಕೊಂಡುಕೊಳ್ಳುವುದು ...	...	9,91,532

ಸಂಸ್ಥಾನಕ್ಕೇ ಪ್ರತ್ಯೇಕವಾಗಿ ಅನ್ವಯಿಸುವುದಾಗಿರುವ ಯೋಜನೆಗಳು.

ಮೇಲ್ವಿಚಾರಣೆ	13,533	49,211
" ಟ್ರ್ಯಾಕ್ಟರ್ " ಏರ್ಪಾಡು	8,98,496	5,75,650
"ಟ್ರಾನ್ಸ್‌ಪೋರ್ಟ್" ವೆಚ್ಚಗಳು ಮತ್ತು ಸಾದಿಲ್ವಾರು ...	(ವಿವರಗಳು ದೊರೆಯುವಂತಿಲ್ಲ)	2,17,967
23 (h) ಬಿತ್ತನೆ ಬೀಜಗಳನ್ನೂ ಮತ್ತು ಗೊಬ್ಬರವನ್ನೂ ಕೊಂಡುಕೊಳ್ಳುವುದಕ್ಕಾಗಿ ಮುಂಗಡಗಳು.	53,95,209	28,06,808
ಮಾರಾಟದಿಂದ ಬಂದ ಮೊಬಲಗುಗಳ ಸಂಬಂಧದಲ್ಲಿ ಕಳೆಯಬೇಕಾದ ಮೊತ್ತ	22,76,000	32,84,837
ನಿವ್ವಳ ...	31,19,200	4,78,029
ವ್ಯವಸಾಯದ ಹತ್ಯಾರುಗಳಿಗಾಗಿ ಕಬ್ಬಿಣ ಮತ್ತು ಉಕ್ಕನ್ನು ಒದಗಿಸಿದುದು.	ಕೆಲಸ ನಡೆಯುವುದಕ್ಕೆ ಯಾವಾಗಲೂ ಒದಗುವುದಾಗಿರುವ 16,30,000ರೂಪಾಯಿಗಳ ಮುಂಗಡದ ಮೊಬಲಗಿದೆ.	
ಬಾಡಿಗೆಗಳು ಮತ್ತು ನಿರಖು ವೆಚ್ಚಗಳು	...	69,084
ಒಟ್ಟು ..	73,34,889	70,00,071
		—4,78,029
ರೂ. ಗಳು		65,22,042

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಈ ಯೋಜನೆಯಿಂದ 43,440ಟನ್ ಆಹಾರ ಧಾನ್ಯ ಹೆಚ್ಚಾಗಿ ಬೆಳೆಯಲಾಯಿತು ಎಂದು ನಮೂದಿಸಿದ್ದೀರಿ, ಅದನ್ನು ಯಾವ ರೀತಿ ಲೆಕ್ಕಾಚಾರ ಮಾಡಿದ್ದೀರಿ; ಹೆಚ್ಚು ಉತ್ಪತ್ತಿ ಆಯಿತು ಎಂಬುದನ್ನು ಹೇಗೆ ನಿರ್ಧರಿಸಿದ್ದೀರಿ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ?

*ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಷ್ಟು ಎಕರೆ ಹೊಸದಾಗಿ ಸಾಗುವಳಿಗೆ ಬಂತು ಎಂಬುದನ್ನೆಲ್ಲಾ ನೋಡಿಕೊಂಡು ಎಕರೆಗೆ ½ ಟನ್ನಂತೆ ಗೊತ್ತು ಮಾಡಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ಈಗ ಹೆಚ್ಚು ಕಂಪೋಸ್ಟ್ ಗೊಬ್ಬರ ಮಾಡಿಸುವುದರಿಂದ ಹೆಚ್ಚಾಗಿ ಬೆಳೆಯುತ್ತೇವೆ ಎಂದು ಹೇಳುವುದಾದರೆ, ಆ ಬಾಬಿನಿಂದ ಎಷ್ಟು ಬಂತು, ನೀರಾವರಿಯಿಂದ ಎಷ್ಟು ಬಂತು ಎಂಬುದನ್ನು ನಿರ್ಧರಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೆಲ್ಲಾ ವಿವರ ಆಯಿತು. ಹೇಳುವುದಕ್ಕಾಗುವುದಿಲ್ಲ. ನಿಜವಾಗಿಯೂ ಕಂಪೋಸ್ಟ್ ಹಾಕಿದರೆ ಶೇಕಡ 10ಭಾಗ ಜಾಸ್ತಿ ಆಗಬಹುದು ಎಂದು ಅಂದಾಜು ಮಾಡಿದ್ದೇವೆ. ಇಷ್ಟು ಬಂದಿರುವುದು cumulative effect of all the improvements effected ಎಂದು ಹೇಳಬಹುದು. ಪ್ರತ್ಯೇಕವಾಗಿ ಒಂದೊಂದನ್ನು ಹೇಳುವುದು ಕಷ್ಟ.

ಶ್ರೀ ಟಿ. ಮಾದಯ್ಯಗೌಡರು.—ಈ ಯೋಜನೆಗಳು ಇನ್ನೂ ಎಷ್ಟು ವರ್ಷ ಜಾರಿಯಲ್ಲಿರುತ್ತವೆ?

ಅಧ್ಯಕ್ಷರು.—ಮೂರು ವರ್ಷ ಅಂತ ಹೇಳಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಯಾವ ತಾರೀಖಿನವರೆಗೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1952ನೇ ಮಾರ್ಚಿ ವರೆಗೆ.

ಶ್ರೀ ಟಿ. ಮಾದಯ್ಯಗೌಡರು.—ಅಷ್ಟರೊಳಗೆ ಈಗ ಹಾಕಿರತಕ್ಕ ಯೋಜನೆಗಳೆಲ್ಲಾ ಪರಿಸಮಾಪ್ತಿ ಆಗದಿದ್ದರೆ ಇವುಗಳನ್ನೂ ಮುಂದುವರಿಸುತ್ತೀರಾ ಅಥವಾ ಹಾಗೆಯೇ ನಿಲ್ಲಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—5ವರ್ಷದ ಯೋಜನೆ ಬೇರೆ ಇದೆ. 1951–52ರಲ್ಲಿ ಇವುಗಳು ಜಿ. ಎಂ. ಎಫ್. ಯೋಜನೆಯೊಳಗೆ merge ಆಗುವ ಸಂಭವ ಇದೆ. ಆದ್ದರಿಂದ ಅದನ್ನು intact ಆಗಿಟ್ಟು ಅದರೊಳಗೆ ಬಾಕಿ ಯೋಜನೆಗಳನ್ನು ಸೇರಿಸಬೇಕಾಗಬಹುದು.

ಶ್ರೀ ಟಿ. ಮಾದಯ್ಯಗೌಡರು.—1952ರ ಒಳಗೆ ಈ ಯೋಜನೆಗಳು ಪರಿಸಮಾಪ್ತಿಯಾಗದಿದ್ದರೆ ಇವಕ್ಕೆ ಅಲಾಟ್ ಮಾಡಿರುವ ಹಣ ಲ್ಯಾಪ್ಸ್ ಆಗುತ್ತದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. 5 ವರ್ಷದ ಯೋಜನೆಗೆ ಸೇರಿಕೊಳ್ಳುತ್ತದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—(b) ಪ್ರಶ್ನೆಗೆ ಉತ್ತರವಾಗಿ ಹಣ ಖರ್ಚಾಗಿರುವುದು ಎಷ್ಟು ಎಂಬುದನ್ನು ತಿಳಿಸಿದ್ದೀರಿ. ಅದರಲ್ಲಿ ಕೇಂದ್ರ ಸರ್ಕಾರದವರು ಎಷ್ಟು ಕೊಟ್ಟಿದ್ದಾರೆ, ನಮ್ಮ ಸರ್ಕಾರದ್ದು ಎಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಸದಸ್ಯರ ಕೈಯಲ್ಲೇ ಪುಸ್ತಕ ಇದೆ. ಅದನ್ನು ನೋಡಿದರೆ ಗೊತ್ತಾಗುತ್ತದೆ. ಅವರೂ ಕೊಟ್ಟಿದ್ದಾರೆ, ನಾವೂ ಹಾಕಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಯಾವ ಪ್ರಮಾಣದಲ್ಲಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಒಂದೊಂದು ಯೋಜನೆಯಲ್ಲೂ ವ್ಯತ್ಯಾಸವಾಗುತ್ತದೆ. ಕೇಂದ್ರದವರು ಗ್ರಾಂಟು ಮತ್ತು ಸಾಲ ಎರಡನ್ನೂ ಕೊಟ್ಟಿದ್ದಾರೆ. ಈಗ ನೀರಾವರಿ ಪಂಪುಗಳನ್ನು ತೆಗೆದುಕೊಂಡರೆ 500 ರೂಪಾಯಿ ಸಬ್‌ಸಿಡಿಯಲ್ಲಿ 250ರೂಪಾಯಿ ಅವರು ಕೊಡುತ್ತಾರೆ, 250 ರೂಪಾಯಿ ನಾವು ಕೊಡುತ್ತೇವೆ. ಹೀಗೆಯೇ improvements to river channelsಗೆ ಅವರು ಶೇಕಡ 50 ಭಾಗ ಕೊಡುತ್ತಾರೆ. ನಾವು ಶೇಕಡ 50 ಭಾಗ ಕೊಡುತ್ತೇವೆ. Restoration of minor tanksಗೆ ರೈತರ ಕಾಂಟ್ರಿಬ್ಯೂಷನ್ ಕಳೆದು ಉಳಿದ ಭಾಗದಲ್ಲಿ ಶೇಕಡ 50 ಅವರು ಕೊಡುತ್ತಾರೆ. ಶೇಕಡ 50 ನಾವು ಕೊಡುತ್ತೇವೆ. ಹೀಗೆ ಐಟಂವಾರು ಬದಲಾವಣೆಯಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಇನ್ನೂ ಹೆಚ್ಚು ಹಣ ಖರ್ಚು ಮಾಡಿ ಕೆರೆಗಳನ್ನು ದುರಸ್ತು ಮಾಡ ಬಹುದಾಗಿತ್ತಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡುತ್ತಾ ಇದ್ದೇವೆಯಲ್ಲಾ !

ಶ್ರೀ ಬಿ. ಹುಚ್ಚೇಗೌಡರು.—ಹೆಚ್ಚು ಕಾಣುತ್ತಾ ಇಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಷ್ಟು ಮಾಡಿ ದರೂ ಇದೆ. ಇದು growing State.

ಶ್ರೀ ಬಿ. ಹುಚ್ಚೇಗೌಡರು.—ನೀರಾವರಿ ಬಾಬುಗಳಿಗೆ 1949-50ರಲ್ಲಿ 6ಲಕ್ಷ ರೂಪಾಯಿ ಇದ್ದದ್ದು 1950-51 ರಲ್ಲಿ 3ಲಕ್ಷಕ್ಕೆ ಇಳಿದಿದೆ. ಅದಕ್ಕೆ ಇನ್ನೂ ಹೆಚ್ಚಿಗೆ ಪ್ರೋ ತ್ಸಾಹ ಏಕೆ ಕೊಡಕೂಡದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಣ ಇದ್ದರೆ 1,000 ರೂಪಾಯಿ ವರೆಗೂ ಕೊಡುತ್ತೇವೆ. ಅದು ತಮಗೆ ಗೊತ್ತೇ ಇದೆ.

ಶ್ರೀ ಬಿ. ಹುಚ್ಚೇಗೌಡರು.—5,000ರೂಪಾಯಿ ಖರ್ಚಾಗುವ ಕಡೆ ನೀವು 500 ರೂಪಾಯಿ ಕೊಟ್ಟರೆ ಬಾವಿ ತೆಗೆಯಲು ಯಾರೂ ಮುಂದೆ ಬರುವುದಿಲ್ಲ... ..

ಅಧ್ಯಕ್ಷರು.—ನೀವು ಒಂದು ಸ್ಟೇಟ್‌ಮೆಂಟ್ ಮಾಡುತ್ತಾ ಇದ್ದೀರಿ.

Sri B. HUTCHE GOWDA.—I am only making the question clear. ಹಿಂದಿ ನಂತೆಯೇ 1,000 ರೂಪಾಯಿ ಸಬ್‌ಸಿಡಿ ಕೊಡುವುದ ಕ್ಕಾಗುವುದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೇಂದ್ರ ಸರ್ಕಾ ರದವರು ಖಚಿತವಾಗಿ ಹೇಳಿದ್ದಾರೆ. 1,000 ರೂಪಾಯಿ ಕೊಡುವುದಕ್ಕಾಗುವುದಿಲ್ಲ. 500 ರೂಪಾಯಿ ಸಬ್‌ಸಿಡಿ ಕೊಟ್ಟರೆ 500 ರೂಪಾಯಿ ಸಾಲ ಕೊಡಬಹುದು.

ಶ್ರೀ ಬಿ. ಹುಚ್ಚೇಗೌಡರು.—ಬಾವಿಗೆ ಖರ್ಚಾಗು ವಷ್ಟು ಹಣವನ್ನು ಪೂರ್ತಿಯಾಗಿ ಬಡ್ಡಿಯಿಲ್ಲದೆ ಸಾಲ ಕೊಡುವುದಕ್ಕಾಗುದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ 10 ಸಾವಿರ ರೂಪಾಯಿ ಕೊಟ್ಟರೂ ತೆಗೆದುಕೊಳ್ಳುವವ ರಿದ್ದಾರೆ. ಆದರೆ ಅದು ಸಾಧ್ಯವಿಲ್ಲ. ತಕಾವಿ ಲೋನು, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನು ಇವೆಲ್ಲಾ ಇವೆ. ಹಣ ಸಾಲದಿದ್ದರೆ ಈ ಮೂಲಕ ತೆಗೆದುಕೊಳ್ಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ಇದಕ್ಕಾಗಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನು ಸಿಕ್ಕುವುದಿಲ್ಲ. ಏಕೆಂದರೆ ಅದರಲ್ಲಿ ಲೋಕಲ್ ಆಫೀಸರುಗಳ ಜವಾಬ್ದಾರಿ ಬರು ತ್ತದೆ. ಒಟ್ಟಿನಲ್ಲಿ ಒಂದೊಂದು ಬಾವಿಗೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಸರ್ಕಾರದವರೇ ಅಂದಾಜು ಮಾಡಿಸಿ ಅದನ್ನು ಕೊಡುವುದಕ್ಕೆ ಸಾಧ್ಯವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರದ ವರು ಅಂದಾಜು ಮಾಡಿ ಅಷ್ಟು ಹಣ ಕೊಡಬೇಕೆಂದರೆ ಸ್ವಲ್ಪ ಕಷ್ಟ. ರೈತರೇ ಸ್ವಂತವಾಗಿ ಮಾಡಿಸಿರುವ ನಿದರ್ಶನ ಇದೆ. ನಮ್ಮ ಹಣಕಾಸಿನ ಪರಿಮಿತಿ ಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಒಂದು ಭಾಗ ಹಣ ಕೊಡು ತ್ತಾರೆ, ಅದು ಇಡೀ ಇಂಡಿಯಾ ದೇಶಕ್ಕೆ ಅನ್ವಯಿಸು ವುದಾದ್ದರಿಂದ ಅದಕ್ಕನುಗುಣವಾಗಿ ನಾವು ಕೊಡ ಬೇಕಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—23 (L) Advance for seeds and manure ಎಂಬ ಬಾಬಿನಲ್ಲಿ less receipts by sale ಎಂದು 32 ಲಕ್ಷ ರೂಪಾಯಿ ಕಳೆದಿದೆ, ಅದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಗೊಬ್ಬರ ಮತ್ತು ಬೀಜಕ್ಕೆ ಅಡ್ವಾನ್ಸ್ ಕೊಟ್ಟಿರುತ್ತೇವೆ. ಆ ಮೇಲೆ ಅದನ್ನು ಮಾರುತ್ತೇವೆ, ಅದರಿಂದ ಬಂದ ಹಣ ವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—(ಸಿ) ಪ್ರಶ್ನೆಗೆ ಉತ್ತರವಾಗಿ ಅಂಕಿ ಅಂಶ ಗಳನ್ನು ಕೊಟ್ಟಿದ್ದೀರಿ. 1950-51ರಲ್ಲಿ ಎಷ್ಟು ಬೆಳೆ ದಿದ್ದೀರಿ ಸ್ವಾಮಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Figures are not yet available ಎಂದು ಅಲ್ಲೇ ತಿಳಿಸಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈಗ 1951—52 ಆಯಿತು. ಅಂಕಿ ಅಂಶ ಸಿದ್ಧವಾಗಿರಬೇಕಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಿದ್ಧವಾಗಿರ ಬೇಕು. I want notice.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮೂರು ವರ್ಷ ದಲ್ಲಿ ಸ್ವಯಂ ಪರಿಪೂರ್ಣವಾಗಬಹುದು ಎಂದು ಹೇಳಿ ದ್ದೀರಿ. ಈಗ ಎಷ್ಟುಮಟ್ಟಿಗೆ ಅಭಿವೃದ್ಧಿಯಾಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ವಯಂ ಪರಿಪೂರ್ಣವಾಗಬೇಕೆಂಬ ನಿರೀಕ್ಷಣೆ ಇದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಯಾವ ಮಟ್ಟದಲ್ಲಿ ಅಭಿವೃದ್ಧಿಗೆ ಬಂದಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮಗೆ ಗೊತ್ತಿರುವ ಹಾಗೆ ಎಷ್ಟೋ ಕೆಲಸ ಕಾರ್ಯಗಳು ಇವೆ. In fact we have stepped up production and that is the reason why we have less of trouble also.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇನ್ನೊಂದು ವರ್ಷದಲ್ಲಿ ಸ್ವಯಂ ಪರಿಪೂರ್ಣವಾಗಬಹುದೆಂಬ ನಂಬಿಕೆಯಿದೆಯೇ ?

The Hon'ble Sri T. MARIAPPA.—Seasonal conditions being normal. There are other various allied factors and that is the reason why we are also pressing on the attention of the Government of India the need for continuing the scheme.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇನ್ನೊಂದು ವರ್ಷದಲ್ಲಿ ಸ್ವಯಂ ಪರಿಪೂರ್ಣವಾಗದಿದ್ದರೆ ಬೇರೆ ಇನ್ನೊಂದು ಯೋಜನೆಯನ್ನು ಮಾಡಬೇಕಾಗುತ್ತ ದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—5 ವರ್ಷದ ಯೋಜನೆ ಇದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಏಕೆ ಗೊಬ್ಬರವನ್ನೂ ಮತ್ತು ಬಿತ್ತನೆ ಬೀಜ ಗಳನ್ನೂ ಅಧಿಕ ಪ್ರಮಾಣದಲ್ಲಿ ತಯಾರಿಸಿ ಹಂಚುವ ಬಾಬಿಗೆ ಏಕೆ 440 ರೂಪಾಯಿ ಮಾತ್ರ ಖರ್ಚಾಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು ಹಸರು ಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಅರ್ಧ ಬೆಲೆಗೆ ಕೊಡುತ್ತಿದ್ದೆವು. ಈಚೆಗೆ ಇದು ರೈತರಲ್ಲೇ ಹೆಚ್ಚು ಪ್ರಚಾರವಾಗಿ ಇಲ್ಲೇ ಬೆಳೆಯುತ್ತಾರೆ. ಅದ ಕಾರಣ ನಿಮ್ಮ ದೇಶದಲ್ಲೇ ಬೆಳೆಯುವುದಕ್ಕೆ ಇಷ್ಟು ರಿಯಾಯಿತಿ ಕೊಡುವುದು ಬೇಡವೆಂದು ಇಂಡಿಯಾ ಸರ್ಕಾರದವರು ಹೇಳಿದರು. ಆದಕಾರಣ ಈಗ ಇವನ್ನು ಅಸಲು ಬೆಲೆಗೇ ಕೊಡುತ್ತೇವೆ. ಇದರಿಂದ ಖರ್ಚು ಕಡಿಮೆಯಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಆ ವರ್ಷ ಕೇವಲ 440 ರೂಪಾಯಿಗೆ ತೆಗೆದುಕೊಂಡಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ, ಅಸಲು ಬೆಲೆಗೆ ಕೊಟ್ಟಿದ್ದೇವೆ. ಅದರಿಂದ ನಮಗೆ ನಷ್ಟವಾಗಿಲ್ಲ. ಸಬ್‌ಸಿಡೈಸ್ ಮಾಡಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಉತ್ತಮ ತರಹೆಯ ಬೀಜದ ಬತ್ತವನ್ನು ಅಧಿಕ ಪ್ರಮಾಣದಲ್ಲಿ ಬೆಳೆದು ಹಂಚುವುದು ಎಂಬ ಬಾಬಿನಲ್ಲಿ ವೆಚ್ಚ 1,42,165 ರೂಪಾಯಿನಿಂದ 44,257 ರೂಪಾಯಿಗೆ ಇಳಿದಿದೆ, ಏಕೆ ಇದು ಹೀಗೆ ಕಡಿಮೆಯಾಯಿತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಡಿಮ್ಯಾಂಡಿದ್ದುದು ಅಷ್ಟೇ ಎಂದು ಕಾಣುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸುವುದಕ್ಕೆ 45,880 ರೂಪಾಯಿ ಖರ್ಚಾಗಿದೆಯೆಂದು ತಿಳಿಸಿದ, ಎಷ್ಟು ಟನ್ ಉತ್ಪತ್ತಿಯಾಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವಿಚಾರದಲ್ಲಿ ನಮ್ಮ ಯೋಜನೆಯನ್ನು ಸ್ವಲ್ಪ ಬದಲಾವಣೆ ಮಾಡಿದ್ದೇವೆ. ಮೊದಲು ಒಂದೊಂದು ಗೊಬ್ಬರದ ಗುಂಡಿಗೆ ಎರಡು ರೂಪಾಯಿನಂತೆ ಜನರಿಗೆ ಕೊಡುತ್ತಿದ್ದೆವು. ಈಗ ಒಂದು ಗ್ರಾಮಕ್ಕೆ ಒಟ್ಟಿಗೆ ಹಣ ಕೊಡುತ್ತೇವೆ. 100 ಗುಂಡಿಗಳನ್ನು ತೆಗೆದರೆ 200 ರೂಪಾಯಿ ಗ್ರಾಮಕ್ಕೆ ಕೊಡುತ್ತೇವೆ. ಹೀಗೆ ಮಾಡಿದ ಮೇಲೆ ಜನರಿಂದ ಬಿಲ್ಲುಗಳು ಬರುವುದು ಕಡಿಮೆಯಾಯಿತು, ಖರ್ಚು ಕಡಿಮೆಯಾಯಿತು.

ಶ್ರೀ ಎಸ್. ರಂಗರಾಮಯ್ಯನವರು.—ಮುನಿಸಿಪಾಲಿಟಿಗಳಲ್ಲಿ ಮಾಡುವುದಕ್ಕೆ ಸಬ್‌ಸಿಡಿ ಕೊಡುವುದೇಕೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಗರ ಪ್ರದೇಶಗಳಲ್ಲಿ ಇದರಿಂದ ಲಾಭ ಪಡೆಯುತ್ತಾರೆ. ಸಬ್‌ಸಿಡೈಸ್ ಮಾಡುವುದನ್ನು ಮಾತ್ರ ಇಲ್ಲಿ ತೋರಿಸಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ನೀರಾವರಿ ಪಂಪುಗಳೆಂದರೆ ಅದರಲ್ಲಿ ವಿದ್ಯುಚ್ಛಕ್ತಿ ಪಂಪುಗಳೂ ಸೇರಿವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಿದ್ಯುಚ್ಛಕ್ತಿ ಪಂಪುಗಳು, ಡೀಸೆಲ್ ಆಯಿಲ್ ಪಂಪುಗಳು ಎಲ್ಲವೂ ಸೇರುತ್ತವೆ.

ಶ್ರೀ ಎಸ್. ರಂಗರಾಮಯ್ಯನವರು.—ಪಂಪುಗಳನ್ನು ಯಾವ ಕಂಪೆನಿಯಿಂದ ಕೊಂಡುಕೊಳ್ಳುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಬ್ರಿಟಿಷ್ ಕಂಪೆನಿಗಳಿಂದ, ಕಿರ್ಲೋಸ್ಕರ ಕಂಪೆನಿ ಮುಂತಾದ ಕಡೆಗಳಿಂದ ತರಿಸುತ್ತಿದ್ದೆವು, ಕೊಟೇಷನ್ ಕರೆದು ಯಾವುದು ಕಡಿಮೆ ಬೆಲೆಯೋ ಅದನ್ನು ತರಿಸುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಕೊಟ್ಟಿರುವುದರಲ್ಲಿ ಕೆಲವು ಪಂಪುಗಳು ಕೆಟ್ಟುಹೋಗಿ ತೊಂದರೆ ಕೊಡುತ್ತಿವೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದರೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಕೆಟ್ಟು ಹೋಗಿರುವುದನ್ನು ಸರಿಮಾಡಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ತೊಂದರೆಯೇ ನಮಗೆ ಬೇಡವೆಂದು ರೈತರೇ ಹೋಗಿ ಕೊಂಡು ಕೊಂಡು ಬಂದು certify ಮಾಡಿದರೆ ಹಣ ಕೊಡುತ್ತೇವೆ. ಈ ಬದಲಾವಣೆ ಮಾಡಿದ್ದೇವೆ. We have washed our hands off now.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಮಾಡಿ ಎಷ್ಟು ದಿವಸವಾಯಿತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಮೂರು ತಿಂಗಳಾಯಿತು. ರೈತರೇ ತಾವು instal ಮಾಡಿದ್ದೇವೆಂದು ಹೇಳಿ ಸರ್ಟಿಫಿಕೇಟು ಕೊಟ್ಟರೆ ಹಣವನ್ನು ಕೊಡುತ್ತೇವೆ.

Mr. SPEAKER.—Question time is over.

UNSTARRED QUESTIONS.

(to which answers were laid on the Table).

(A) Starred Question treated as unstarred.

Rents of Buildings leased for use of Government.

*Q.—177. **Sri Kadidal MANJAPPA** (Shimoga District—General).—

Will the Government be pleased to state :—

the amount of rent that was paid during the year 1949-50 in respect of building taken on lease for the use of Government ?

A.—**The Hon'ble Sri T. MARIAPPA** (Home Minister).—Rs. 5,179.

(B) Unstarred Questions.

Particulars of Home Guards Organisation.

Q.—12. **Sri S. R. GURU** (Bangalore District—General).—

Will the Government be pleased to state :—

(*a*) (i) the object of starting the Home Guards in the State, (ii) whether the object was achieved ;

(*b*) the total number of people that were enrolled in the force when it was started;

(*c*) whether it is true that it has been wound up in some places; if so, the places in which it is being continued (talukwar figures to be given);

(SRI S. R. GURU).

(*d*) the annul expenditure on this force since it was started;

(*e*) the taluks in which the force carried on the duties expected of it that they were rewarded for it (the duties so carried on to be specified talukwar);

(*f*) whether they intend to continue the scheme in future also?

A.—**The Hon'ble Sri T. MARIAPPA** (Home Minister).—

(*a*) (i) The object of the Home Guards organisation is to provide an additional force auxiliary to the Police for guarding and protecting the civil population and their property in times of emergency, and to assist the police in collecting and counteracting false rumours and in controlling the commission of offences affecting public safety in normal times.

(ii) Yes, partly.

(*b*) Four thousand four hundred and fifty members.

(*c*) Yes, only in Anavatti (Shimoga District).

To show the places where the organisation is being continued. A copy of Statement 'A' is appended below:—

(*d*)

1948-49	1949-50	1950-51
Rs.	Rs.	Rs.
1,51,700-3-10	40,531-0-0	3,351-11-0

(*e*) To show the places, the occasions and the dates on which the Home Guards were detailed for duty, a copy of Statement 'B' appended below.

Duty Allowance to Home Guards who are drafted for duties during special occasions is paid. The latter portion of this question is not clear.

(*f*) The question of continuance or otherwise of the organisation is under examination.

STATEMENT A.

PLACES WHERE THE ORGANISATION IS BEING CONTINUED

		Members.
1.	Bangalore City ...	457
2.	Civil Station ...	123
3.	Mysore City ...	290
4.	Kolar Gold Fields ...	111
5.	Mysore District ...	307
	Hunsur ...	48
	Chamarajanagar ...	36
	T.-Narasipur ...	45
	Gundlupet ...	35
	Nanjangud ...	19
	Krishnarajanagar ...	32
	Heggadadevenakote ...	48
	Periyapatna ...	44
	Total ...	307
6.	Shimoga District—	
	Shimoga ...	45
	Harnahalli ...	19
	Bhadravati ...	53
	Shiralakoppa ...	49
	Shikaripur ...	43
	Sorab ...	23
	Honnali ...	47
	Chennagiri ...	31
	Sagar ...	41
	Hosanagar ...	33
	Thirthahalli ...	41
	Total ...	425
7.	Hassan District—	
	Hassan ...	92
	Arsikere ...	40
	Channarayapatna ...	25
	Arkalgud ...	49
	Saklespur ...	18
	Belur ...	38
	Hole-Narasipur ...	46
	Total ...	308
8.	Kolar District—	
	Kolar ...	42
	Malur ...	28
	Mulbagal ...	50
	Srinivasapur ...	29
	Chintamani ...	34
	Sidlaghatta ...	14
	Chickballapur ...	30
	Goribidnur ...	26
	Bagepalli ...	24
	Total ...	277
9.	Chitaldrug District—	
	Chitaldrug ...	42
	Challakere ...	10
	Molakalmuru ...	10
	Hosadurga ...	24
	Holalkere ...	19
	Davangere ...	62
	Jagalur ...	20
	Harihar ...	30
	Total ...	217
10.	Tumkur District—	
	Tumkur ...	58
	Chiknaikanhalli ...	48
	Turuvekere ...	26
	Pavagada ...	26
	Kunigal ...	50
	Koratagere ...	31
	Madhugiri ...	50
	Gubbi ...	48
	Tiptur ...	47
	Total ...	384
11.	Chikmagalur District—	
	Chikmagalur ...	19
	Kadur ...	19
	Mudigere ...	16
	Tarikere ...	24
	Total ...	78
12.	Mandya District—	
	Mandya ...	71
	Malavalli ...	50
	Maddur ...	9
	Krishnarajpet ...	19
	Nagamangala ...	78
	Srirangapatna ...	1
	Total ...	228

13. Bangalore District—	Members.
Dodballapur	39
Nelamangala	...
Ramanagaram	14
Anekal	24
Devanahalli	2
Kankanhalli	41
Magadi	31
Hosakote	27
Channapatna	...
Total ...	178
Grand Total ...	3,383

One hundred and eighty members of the following places in Bangalore District have been removed from the organisation as per District Magistrate and District Commander.'s Order No. J-I. P.R. 986—50-51, dated 24th January 1951 and 31st January 1951, as they were continued absentees to the parade.—

	Members.
Channapatna ...	40
Nelamangala ...	50
Ramanagaram ...	34
Anekal ...	23
Devanahalli ...	33
Total ...	180

STATEMENT B.

Place	Date of Special Duty	Occasion	No. of persons	Amount paid
				Rs. a. p.
Bangalore City ...	27—12—1948	Visit of Hon'ble the Prime Minister of India.	327	163 8 0
	25—2—1949	Visit of the Deputy Prime Minister of India.	203	101 8 0
	6—3—1949	Inauguration of the Rural Development Mysore.	209	104 8 0
Mandya District—Nagamangala.	19—11—1948	Visit of His Highness the Maharaja of Mysore.	21	21 0 0
	17—3—1949	Visit of the Hon'ble the Home Minister ...	20	10 0 0
	15—8—1949	Independence Day Celebrations	27	13 8 0
	24—12—1949	Finance Minister's Visit	20	20 0 0
Mysore City ..	19—8—1949	Visit of His Excellency the Governor-General of India.	168	168 0 0
	28—12—1948	Visit of Hon'ble the Prime Minister of India.	137	137 0 0
	24—2—1949	Visit of the Deputy Prime Minister of India.	98	98 0 0
	2—11—1949	Opening of U. N. E. S. C. O.	17	17 0 0
	3—11—1949	Convoation	21	21 0 0
	19—12—1949	Visit of His Excellency the Governor-General of India.	45	45 0 0
	26—1—1950	Republic Day celebration	78	78 0 0
Kolar City ...	May 1949	Night Town Patrol Duty	20	20 0 0
	13 and 14—4—1949	Karaga Festival	36	36 0 0
Mulbagal ...	8, 10, 11 and 12—5—1949	Urus Celebrations	46	46 0 0
Kunigal ...	29—7—1949	Visit of His Highness the Maharaja of Mysore.	20	20 0 0
Tiptur ...	8—10—1949	Procession of Sathya Ganapathi	14	14 0 0
	17—10—1942	Visit of Hon'ble the Home Minister ...	44	44 0 0

Food Cases charge-sheetd and withdrawn.

Q.—14. Sri M. L. NANJARAJA URS (Mysore District—General).—

Will the Government be pleased to state:—

(*a*) the number of food cases in which charge-sheets were framed in 1949-50 and 1950-51;

(*b*) the number of cases withdrawn after the charge-sheets were framed—districtwar including Mysore City and Bangalore City;

(*c*) the names of lawyers who had appeared in each case?

A.—The Hon'ble Sri T. MARIAPPA (Home Minister)....

(*a*) 1949-50 1950-51
2976 3668

(*b*) 237 328

Districts—	1949-50	1950-51
1 Bangalore ...	45	96
2 Kolar ...	24	18
3 Mandya ...	79	17
4 Mysore ...	20	44
5 Hassan ...	14	108
6 Chikmagalur ...	43	7
7 Shimoga ...	3	3
8 Chitaldrug ...	1	10
9 Tumkur ...	8	25
Total ...	237	328

(*c*) Information not readily available.

Petrol Pumps Sanctioned.

Q.—16. Sri M. L. NANJARAJA URS (Mysore District—General).—

Will the Government be pleased to state.—

(a) the number of petrol bunks in the Cities of Bangalore, Mysore, Davangere and Kolar Gold Fields before 24th October 1947;

(b) the number of petrol bunks sanctioned after 24th October 1947 up to 1st March 1951 in each place;

(c) the names of persons to whom petrol bunks have been sanctioned in each place after 24th October 1947 up to 1st March 1951?

A.—The Hon'ble Sri T. MARIAPPA (Home Minister).—

(a) The number of petrol pumps as on 24th October 1947 was as follows:—

Bangalore (including Mysore, Davangere, K.G.F., Civil Station)			
24	9	2	3

(b) The number of petrol pumps sanctioned after 24th October 1947 up to 1st March 1951 is as follows:—

Bangalore	*Mysore*	*Davangere*	*K.G.F.*
7*	5	Nil	Nil

*(This is exclusive of 15 licenses issued in lieu of the licenses granted by the Hon'ble Resident in Mysore for the pumps already in existence in the Civil Station area).

(c) It would not be possible to give the names of all the individual agents of the petroleum premises since the licenses were issued in the name of oil companies. A list of the licenses (with numbers) and the companies to whom they were issued is appended below.—

List of fresh Petrol Pump Licenses issued after 24th October 1947 in Mysore State.

Place 1	*Licencee* 2	*Date of issue* 3
Bangalore Civil Station.—Trinity Church Road ...	Burmah-Shell, Madras ...	28—9—1948
Bangalore (City).—In the premises of Bangalore Transport Co., Ltd., Wilson Road ...	Do ...	15—10—1948
Bangalore City.—Provincial Armed Reserve Police Ground	S.V.O.C., Madras ...	21—10—1948
Robertsonpet, K.G.F.—near the Bus Stand ...	Do ...	29—11—1948
Bangalore City.—Sirur Park, Malleswaram ...	Do ...	16—12—1948
Shimoga.—Bangalore-Honnavar Road ...	S.V.O.C., Bombay ...	30—1—1949
Mysore City.—Junction of Thambu Chetti and Irwin Roads	S.V.O.C., Madras ...	24—3—1949
Krishnarajapuram.—Indian Telephone Factory ...	Burmah-Shell, Madras ...	24—3—1949
Bangalore City.—Jayachamarajendra Road ...	Caltex, Madras ...	30—8—1949
Mysore City.—Narasimharaja Mohalla Extension ...	Burmah-Shell, Ooty ...	19—9—1949
Mysore City.—South West Corner of Municipal Office	Caltex, Madras ...	14—2—1950
Bangalore City.—In the premises of Mysore Government Transport Services, Lalbagh Road ...	S.V.O.C., Madras ...	25—5—1950
Mysore City.—In the entrance to the Chamundi Curing Works, Vani Vilas Mohalla ...	Burmah-Shell, Ooty ...	30—5—1950
Bangalore City.—Lalbagh Circle West ...	Burmah-Shell, Madras ...	23—8—1950
Dodballapur.—In the Bus stand ...	Do ...	26—12—1950
Kolar.—In the St. Mary's Church Compound ...	Caltex, Madras ...	16—1—1951
Mysore City.—In the Compound of the Co-operators' Home Krishnaraja Mohalla	Burmah-Shell, Ooty ...	22—2—1951
Bhadravati.—Shimoga-Bangalore Road ...	Burmah-Shell, Bombay ...	5—3—1951

Renovation of the Temple at Siddeswara Hills.

Q.—26. Sri D. M. SIDDIAH (Mysore District—General).—

Will the Government be pleased to state:—

whether it has come to their notice that at Siddeswara Hills, Nanjangud Taluk, the temple compound has fallen and there is dirt and other things around the temple?

A.—The Hon'ble Sri H. SIDDAIYA (Minister for Revenue and Excise).—

Yes. The question of renovation of the temple and necessary repairs to the road leading to the Hills is under examination by the Deputy Commissioner, Mysore District.

Request for Food Debate in the Session.

Sri L. SIDDAPPA (Shimoga District—General).—Sir, before we proceed further, I understand that on account of pressure of time during the previous session of the House no date was fixed for a debate on the food situation. I want to know if it is possible to fix a date for the food debate during the course of this session.

The Hon'ble Sri K. T. BHASHYAM (Minister for Law and Labour).—I shall be able to answer my friend during the course of the day after consulting the Hon'ble Chief Minister.

Sri A. BHEEMAPPA NAIK (Chitaldrug District—General).—Has there been any move for it, or is it going to be arranged *suo moto*?

The Hon'ble Sri K. T. BHASHYAM.—Sri L. Siddappa is just making a move. We shall comply with it as far as we can.

Draft Rules of Procedure in the Legislative Assembly

Mr SPEAKER (The Hon'ble Sri V. Venkatappa).—The Hon'ble Sri K. T. Bhashyam will now move for the consideration of the Draft Rules of Procedure as reported by the Special Committee.

The Hon'ble Sri K. T. BHASHYAM (Minister for Law and Labour).—Sir, I beg to move—

"That the Draft Rules of Procedure, as reported by the Special Committee on Rules of Procedure, be taken into consideration."

Will the Government be pleased to state :—

(a) whether a list of irrigation projects under the Grow More Food Scheme has been prepared for deriving the full benefits of the waters of the Shimsha which flows through Gubbi, Turuvekere and Kunigal Taluks of Tumkur District;

(b) the number of projects that has been prepared;

(c) of these, how many have been put into execution;

(d) the expenditure that would be incurred per acre on account of these irrigation projects;

(e) (i) apart from the projects now prepared, how many feasible and profitable projects are there that could be taken up;

(ii) of these, the number in respect of which estimates have been prepared;

(f) whether the necessary staff has been provided for taking up all these works?

A:—The Hon'ble Sri T. MARIAPPA (Home Minister).—

(a) Yes.

(b) Two.

(c) One.

(d) The expenditure ranges from Rs. 500 to 1,000 per acre.

(e) (i) Investigations have to be conducted to examine. Projects that are feasible.

(ii) One.

(f) Yes.

RESOLUTIONS

Mr. SPEAKER (The Hon'ble Sri V. Venkatappa).—Discussion on the Resolutions will be resumed now. Resolution No. 13. Sri Govinda Das.

Sri GOVINDA DAS (Hassan District—Depressed Class).—I am not moving the resolution.

Mr. SPEAKER.—Next resolution. No. 14. Sri M. Govinda Reddy.

Sri M. GOVINDA REDDY (Chitaldrug District—General).—I am not moving the resolution.

Mr. SPEAKER.—Resolution No. 15 Sri T. Madiah Gowda.

Improving the condition of Rural Primary Schools.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).— ಸ್ವಾಮಿ, ನನ್ನ ನಿರ್ಣಯವು ಈ ರೀತಿಯಾಗಿದೆ.—

"This Assembly is of the opinion that immediate steps be taken to improve the condition of rural primary schools by providing suitable school building with sufficient space for gardening and playing, equipping fully with school materials, staffing only with trained teachers and improving the inspection work."

ಸ್ವಾಮಿ, ವಿದ್ಯಾಭ್ಯಾಸದ ಪ್ರಗತಿ ಮೈಸೂರು ದೇಶದಲ್ಲಿ ಬಹಳ ತ್ವರಿತವಾಗಿ ನಡೆಯುತ್ತಿದೆಯೆಂದು ನಾವು ಹೆಮ್ಮೆ ಪಡುತ್ತಿದ್ದೇವೆ. ಅಲ್ಲದೆ, ದೇಶದ ಆದಾಯದಲ್ಲಿ ವಿಶೇಷ ಭಾಗವನ್ನು ವಿದ್ಯಾಭ್ಯಾಸಕ್ಕಾಗಿ ಕೊಡುತ್ತಿದ್ದೇವೆಂಬುದೂ ಕೂಡ ಸ್ಪಷ್ಟವಾಗಿಯೇನೋ ಇದೆ. ಆದರೆ ಗ್ರಾಮಾಂತರಗಳಲ್ಲಿರತಕ್ಕ ಶಾಲೆಗಳಲ್ಲಿ ಯಾವ ರೀತಿ ವಿದ್ಯಾಭ್ಯಾಸ ನಡೆಯುತ್ತಿದೆ, ಅದು ಸುಸೂತ್ರವಾಗಿದೆಯೇ, ಪ್ರಯೋಜನಕರವಾಗಿದೆಯೇ, ನಮ್ಮ ದೇಶಕ್ಕೆ ಪ್ರಗತಿದಾಯಕವಾಗಿದೆಯೇ ಎಂಬುದನ್ನು ನೋಡಿದರೆ ನಾನಾದರೋ ವಿಷಾದ ಪಡಬೇಕಾಗಿದೆ.

ಈಗಂತೂ ಗ್ರಾಮಾಂತರಗಳ ಪ್ರಾಥಮಿಕ ಶಾಲೆಗಳು ಉತ್ತಮ ಸ್ಥಿತಿಯಲ್ಲಿಲ್ಲ. ಅದಕ್ಕೆ ಕಾರಣಗಳನ್ನು ನಿನ್ನೆಯೇ ನಾನು ಸೂಚಿಸಿದ್ದೇನೆ. ಮೊದಲನೆಯದಾಗಿ ಸರ್ವೇಸಾಧಾರಣವಾಗಿ ಯಾವುದರ ಕಟ್ಟಡಗಳೂ ಸರಿಯಾಗಿಲ್ಲ. ಸರ್ಕಾರದ ಆಡಳಿತಕ್ಕೊಳಪಟ್ಟು ಸರ್ಕಾರದಿಂದಲೇ ಕಟ್ಟಲ್ಪಟ್ಟಿರತಕ್ಕ ಸ್ಕೂಲು ಕಟ್ಟಡಗಳೇ ಆಗಲಿ ಗ್ರಾಮಸ್ಥರು ಧರ್ಮಾರ್ಥವಾಗಿ ಬಿಟ್ಟುಕೊಟ್ಟಿರತಕ್ಕ ಸ್ಕೂಲು ಕಟ್ಟಡಗಳ ಸ್ಥಿತಿಯೇ ಆಗಲಿ ಹೇಗಿದೆಯೆಂಬುದು ಜನಜನಿತವಾಗಿದೆ. ಎಷ್ಟು ವರ್ಷಗಳಾದರೂ ರಿಪೇರಿಯೆನ್ನುವುದನ್ನೇ ಕಂಡಿಲ್ಲ. ಗ್ರಾಮಸ್ಥರು ಕಟ್ಟಡ ಕೊಡುತ್ತೇವೆ, ಸ್ಕೂಲು ಕೊಡಿ ಎಂದು ಹೇಳಿ ಸ್ವಂತವಾಗಿ ಕಟ್ಟಡಗಳನ್ನು ಕಟ್ಟಿಸಿಕೊಟ್ಟು ಸ್ಕೂಲು ಪ್ರಾರಂಭ ಮಾಡಿದರೆ, ಇಲಾಖೆಯವರು 'ಅದು ಸರ್ಕಾರಿ ಸ್ಕೂಲಲ್ಲ; ನಾವು ನೋಡಿಕೊಳ್ಳುವುದಕ್ಕಾಗುವುದಿಲ್ಲ' ಎಂದು ಹೇಳುತ್ತಾರೆ. ಇತ್ತ ಕಡೆ ಧರ್ಮಾರ್ಥವಾಗಿ ಕೊಟ್ಟವರು ಅದರ ರಿಪೇರಿ ಬಗ್ಗೆ ಇನ್ನೇನೂ ಕೊಡುವುದಿಲ್ಲ. ಹೀಗಾಗಿ ವರ್ಷಾಂತರಗಳಾದರೂ ರಿಪೇರಿಯನ್ನು ಕಾಣದೆ ಅವುಗಳನ್ನು ಸ್ಕೂಲು ಕಟ್ಟಡಗಳೆಂದು ಹೇಳುವುದಕ್ಕೂ ಕೂಡ ಆಗದ ಹಾಗಾಗಿದೆ.

ಅನೇಕ ಪಾಠಶಾಲೆಗಳಲ್ಲಿ ಹೆಂಚುಗಳೆಲ್ಲಾ ಹಾರಿ ಹೋಗಿವೆ. ಗೋಡೆ ಬಿರುಕು ಬಿಟ್ಟಿದೆ. ಕಿಟಕಿಗಳೆಲ್ಲಾ ಹಾಳಾಗಿ ಹೋಗಿವೆ; ಬಾಗಿಲುಗಳಿಗೆ ಚಿಲಕ ನಾಗ

---

* Speeches asterisked indicate that they have not been revised by the Hon'ble Members concerned.

ವಾಸವೇ ಇಲ್ಲ, ಇರುವುವುಗಳಿಗೆ ಬೀಗಗಳಿಲ್ಲ. ಹೀಗೆಲ್ಲಾ ಅವ್ಯವಸ್ಥೆಯಾಗಿರುತ್ತೆ. ಅನೇಕ ವರ್ಷಗಳಾದರೂ ಗೋಡೆಗೆ ಸುಣ್ಣ ಬಣ್ಣಗಳಿಲ್ಲ. ಮಕ್ಕಳು ಕುಳಿತುಕೊಳ್ಳುವ ಜಾಗವಂತೂ ತಗ್ಗುದಿಬ್ಬಗಳಿಂದ ಕೂಡಿರುತ್ತೆ. ಒಂದು ಮಟ್ಟವಾದ ನೆಲ ಕೂಡ ಇರುವುದಿಲ್ಲ. ಓದುವುದಕ್ಕೆ ಹೋದ ಹುಡುಗರ ತಲೆ ಮೇಲೆ ಹೆಂಚು ಇತ್ಯಾದಿಗಳು ಬಿದ್ದು ತಲೆಗೆ ಅಪಾಯ ಉಂಟಾಗಬಹುದಾದಂಥ ಸನ್ನಿವೇಶಗಳು ಬಹಳವಾಗಿವೆ. ಹೀಗೆ ಸ್ಥಿತಿಗತಿಗಳಿರತಕ್ಕದ್ದನ್ನು ನೋಡಿದರೆ ಇನ್ನು ಮುಂದಕ್ಕೆ ನಮ್ಮ ಮಕ್ಕಳ ವಿದ್ಯಾಭಿವೃದ್ಧಿ ಹೇಗಾದೀತೆಂಬುದನ್ನು ಹೇಳುವುದಕ್ಕೇ ಆಗುವುದಿಲ್ಲ. ಹೀಗೆ ಪರಿಸ್ಥಿತಿ ಉಂಟಾಗಲು ಕಾರಣವೇನೆಂಬುದೇ ನನಗಂತೂ ಅರ್ಥವಾಗುತ್ತಿಲ್ಲ. ಅಂತೂ ನಮ್ಮ ಸ್ಕೂಲುಗಳು ಇಷ್ಟು ಶೋಚನೀಯವಾದ ಪರಿಸ್ಥಿತಿಯಲ್ಲಿರುತ್ತವೆ.

ಇನ್ನು ಸಲಕರಣೆಗಳ ವಿಚಾರವಂತೂ ಹೇಳತೀರದಾಗಿದೆ. ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸರಿಯಾಗಿ ಪಠ್ಯ ಪುಸ್ತಕಗಳೇ ಇರುವುದಿಲ್ಲ. ಬೋರ್ಡ್‌ಗಳಿಲ್ಲ, ಭೂಪಟಗಳಿಲ್ಲ. ಇರತಕ್ಕವುಗಳಾದರೋ ಬಹಳ ಜೀರ್ಣವಾಗಿ ಹೋಗಿ ಕೈಲಿ ಹಿಡಿಯಲಕ್ಕೆ ಬರುವಂಥ ಸ್ಥಿತಿಯಲ್ಲಿರುವುದಿಲ್ಲ. ಮಣೆಕಟ್ಟುಗಳಿರುತ್ತಿದ್ದವು. ಈಗಿನ ಪಾಠಶಾಲೆಗಳಿಗಂತೂ ಈ ಮಣೆಕಟ್ಟುಗಳ ವಿಚಾರವೇ ತಿಳಿಯದಾಗಿದೆ. ಬೆಂಚು ವಗೈರೆ ಸಲಕರಣೆಗಳನ್ನು ಇತ್ತೀಚೆಗೆ ಅನೇಕ ಪಾಠಶಾಲೆಗಳಿಗೆ ಕೊಡುತ್ತಲೇ ಇಲ್ಲ. ನಾವೆಲ್ಲರೂ ಹಿಂದೆ ಪಾಠಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಪ್ರತಿಯೊಂದು ಶಾಲೆಗೂ ಒಂದೊಂದು ಗಡಿಯಾರವನ್ನು ಕೊಡುತ್ತಿದ್ದರು. ಹಾಗೆ ಗಡಿಯಾರ ಸರಬರಾಯಿ ಮಾಡಲು, ಶಕ್ತಿ ಇಲ್ಲದಿದ್ದರೆ ಮರಳು ಗಡಿಯಾರಗಳನ್ನಾದರೂ ಕೊಡಬಹುದಾಗಿತ್ತು. ಅದನ್ನೂ ಸಹ ಮಾಡಿಲ್ಲ. ಹೀಗಾಗಿ ಪಾಠಶಾಲೆಗೆ ಉಪಾಧ್ಯಾಯರು ಎಷ್ಟು ಹೊತ್ತಿಗೆ ಬೇಕಾದರೂ ಬರಬಹುದು. ಎಷ್ಟು ಹೊತ್ತಿಗೆ ಬೇಕಾದರೂ ಹೋಗಬಹುದು. ಅವರಿಗೆ ಕುಳಿತುಕೊಳ್ಳಲು ಒಂದು ಸರಿಯಾದ ಕುರ್ಚಿ ಸಹ ಇಲ್ಲ. ಇರತಕ್ಕ ಕುರ್ಚಿಗಳಿಗೆ 3 ಕಾಲು ವಿನಃ ನಾಲ್ಕು ಕಾಲುಗಳು ಸಹ ಇರುವುದಿಲ್ಲ. ಒಂದು ವೇಳೆ ಕಾಲುಗಳೆಲ್ಲಾ ಇದ್ದರೆ ಹಿಂದೆ ಒರಗಿಕೊಳ್ಳತಕ್ಕ ಭಾಗವೇ ಇರುವುದಿಲ್ಲ. ಮೇಜುಗಳನ್ನಂತೂ ಅವರು ಅರಿಯರು. ಹೀಗೆಲ್ಲಾ ನಮ್ಮ ಹಳ್ಳಿ ಪಾಠಶಾಲೆಗಳು ದುಸ್ಥಿತಿಯಲ್ಲಿವೆ.

ಇನ್ನು ಉಪಾಧ್ಯಾಯರ ವಿಚಾರ. ಇವರುಗಳಾದರೂ ಸರಿಯಾಗಿದ್ದಾರೆಯೇ ಎಂದರೆ ಅದೂ ಕೂಡ ಇಲ್ಲ. ಹೋಗಲಿ ಮಕ್ಕಳಿಗೆ ಜಗುಲಿಯ ಮೇಲೋ ಮರದ ಕೆಳಗೋ ಎಲ್ಲಾದರೂ ಪಾಠ ಹೇಳಲಿ. ಹೇಳತಕ್ಕವರಾದರೂ ಒಳ್ಳೆಯ ನುರಿತ ಜನರಾಗಿದ್ದರೆ ಅಲ್ಲಿಗೂ ಒಂದು ಸಮಾಧಾನವಿರುತ್ತಿತ್ತು. ಆದರೆ ಅಂಥಾ ಸಮಾಧಾನ ಸಹ ಇಂದು ಇರಲಿಕ್ಕೆ ಅವಕಾಶವಿಲ್ಲ. ಮುಕ್ಕಾಲುಮೂರು ವೀಸೆ ಪಾಲು ನಮ್ಮ ಹಳ್ಳಿಗಾಡಿಗೆ ಬರತಕ್ಕ ಉಪಾಧ್ಯಾಯರಿಗೆ ಸರಿಯಾದ ತರಪೇತೇ ಇಲ್ಲ. ನುರಿತ ಉಪಾಧ್ಯಾಯರುಗಳಿಲ್ಲದಿರುವಾಗ ಮಕ್ಕಳು ಹೇಗೆ ವಿದ್ಯಾವಂತರಾಗುತ್ತಾರೆ! 14-15 ವರ್ಷದ ಹುಡುಗರು ಲೋವರ್‌ಸೆಂಕಡರಿ ಪರೀಕ್ಷೆಯನ್ನು ಪಾಸ್ ಮಾಡಿ ಒಂದು ಅರ್ಜಿ ಹಾಕಿಕೊಂಡ ಕೂಡಲೇ ಅವರಿಗೆ ಈ ಉಪಾಧ್ಯಾಯರ ವೃತ್ತಿಯನ್ನು ಕೊಟ್ಟುಬಿಡುತ್ತಾರೆ. ಆದರೆ ಹಾಗೆ ನೌಕರಿ ಕೊಡುವಾಗ ಅವರಿಗೆ ವಯಸ್ಸೇನು, ಆರೋಗ್ಯವಾಗಿದ್ದಾರೆಯೇ, ಇಲ್ಲವೇ, ಪಾಠ ಹೇಳತಕ್ಕ ಶಕ್ತಿ ಅವರಿಗೆ ಇದೆಯೇ, ಇಲ್ಲವೇ ಎಂಬುದೊಂದನ್ನೂ ನೋಡದೆ ನೌಕರಿಯನ್ನು ಕೊಟ್ಟುಬಿಡುತ್ತಾರೆ. ಇಂಥಾ ನಾತರಪೇತಾದ ಉಪಾಧ್ಯಾಯರುಗಳು ಮಕ್ಕಳಿಗೆ ಪಾಠ ಮಾಡಲು ಹೇಗಾದೀತು? ಈಗ ಕೆಲವು ಉಪಾಧ್ಯಾಯರುಗಳು 3 ವರ್ಷ ಕಾಲ ಟ್ರೈನಿಂಗ್ ಹೊಂದಬೇಕೆಂದು ಒಂದು ಯೋಜನೆ ಮಾಡಿದ್ದಾರೆ. ಆದರೆ ಅದಕ್ಕೂ ಸಹ ಒಂದು ನಿರ್ದಿಷ್ಟವಾದ ರೀತಿಯಲ್ಲಿ ಒಂದು ಏರ್ಪಾಡನ್ನು ಮಾಡಿಲ್ಲ. ಹೀಗೆ ಕೆಲವು ಉಪಾಧ್ಯಾಯರುಗಳನ್ನು ಈ ಟ್ರೈನಿಂಗ್ ಪಡೆಯಲು ಚುನಾಯಿಸಿ ಕಳುಸಿಕೊಡುತ್ತಿದ್ದಾರೆ. ಹಾಗೆ ಟ್ರೈನಿಂಗಿಗೆ ಚುನಾಯಿಸತಕ್ಕವರಲ್ಲಿ ಕೆಲವರು ಮೈಬಗ್ಗಿಸಿ, ಶ್ರದ್ಧೆಯಿಂದ ಓದದೆ ಉದ್ದಿಶ್ಯವಾಗೇ ಮೊದಲನೆಯ ವರ್ಷದಲ್ಲೇ ಬೇಕೆಂತ ಫೈಲಾಗಿಬಿಡುತ್ತಾರೆ. ಅದಕ್ಕೆ ಕಾರಣ ಅವರಿಗೆ ತಕ್ಕಷ್ಟು ಉತ್ತೇಜನವಿಲ್ಲದಿರುವುದು ಮತ್ತು ಹೀಗೆ ಹಿಟ್ಟಿನ ಖರ್ಚುವೆಚ್ಚಗಳನಿಟ್ಟುಕೊಂಡು ಸ್ಥಳದಲ್ಲಿ ಕಷ್ಟಪಟ್ಟು ವ್ಯಾಸಂಗ ಮಾಡುವುದೇತಕ್ಕೆ ಎಂಬುದಾಗಿ ಭಾವಿಸಿ, ಅವರು ಕೆಲಸ ಮಾಡುತ್ತಿದ್ದ ಸ್ಥಳವನ್ನು ಬಿಡಲು ಇಷ್ಟವಿಲ್ಲದೆ, ನಾನಾ ಕಾರಣಗಳಿಂದ ಉದ್ದಿಶ್ಯವಾಗಿ ಫೈಲ್ ಆಗಿಬಿಟ್ಟು ಹಿಂದಕ್ಕೆ ಬರುತ್ತಿದ್ದಾರೆ. ಟ್ರೈಂಡ್ ಉಪಾಧ್ಯಾಯರಿಗೂ ಮತ್ತು ಟ್ರೈನಿಂಗ್ ಆಗದಿರತಕ್ಕ ಉಪಾಧ್ಯಾಯರಿಗೂ ಸಂಬಳದಲ್ಲಿ ಬಹುಶಃ 2-3 ರೂಪಾಯಿಗಳ ವ್ಯತ್ಯಾಸವಿದ್ದರೂ ಇರಬಹುದು. ಹೀಗೆ ಇವರನ್ನು ಬಲೋದ್ಬಂಧನದಿಂದ ಚುನಾಯಿಸಿ ಕಳುಹಿಸಿದರೆ ಅವರು ಹುಕ್ಕುಂಗೆ ವಿರೋಧವಾಗಿ ಹೋಗುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕೆ ದಾರಿಯಿಲ್ಲದೆ ಇರುವುದರಿಂದ, ಅಲ್ಲಿಗೆ ಹೋಗಿ ತಾವಾಗಿಯೇ ಉದ್ದಿಶ್ಯದಿಂದ ಫೈಲ್ ಆಗಿ ವಾಪ್ಸು ಬರುತ್ತಿದ್ದಾರೆ. ಇಂಥ ನುರಿಯದೇ ಇರತಕ್ಕ ಉಪಾಧ್ಯಾಯರುಗಳ ಕೈಕೆಳಗೆ ನಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಎಂದು ಹೇಗೆ ಒಪ್ಪಿಸಬೇಕೋ ನನಗಂತೂ ಅರ್ಥವಾಗುತ್ತಿಲ್ಲ. ಮಕ್ಕಳಿಗೆ ಚಿಕ್ಕವಯಸ್ಸೇ ಬುದ್ಧಿಸ್ಫುಟಗೊಳಿಸತಕ್ಕ ಕಾಲವಾಗಿರುತ್ತೆ. ಆಗ ಕಲಿತಂಥ ವಿದ್ಯಾಬುದ್ಧಿಗಳು ಅವರ ಜೀವಮಾನದ ಕಡೆಯತನಕ ನಿಲ್ಲತಕ್ಕವುಗಳಾಗಿರುತ್ತವೆಂದು ತಜ್ಞರು ಹೇಳುತ್ತಾರೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇಂಥಾ ಎಳೆಯ ಮಕ್ಕಳಿಗೆ ಪಾಠ ಹೇಳಲು ಪದವೀಧರರನ್ನೇ ನೇಮಕ ಮಾಡುತ್ತಿದ್ದಾರೆ, ಅಲ್ಲದೆ ಅವರಿಗೆ ಸಂಬಳ ಕೂಡ ಜಾಸ್ತಿ ಇರುತ್ತೆ. ಏತಕ್ಕೆಂದರೆ ಚಿಕ್ಕ ಮಕ್ಕಳಿಗೆ ಪಾಠ ಹೇಳುವುದು ಬಹಳ ಕಷ್ಟತರವಾದ ಬದುಕು. ಆದರೆ ನಮ್ಮ ಉಪಾಧ್ಯಾಯರುಗಳಿಗೆ ಅದೂ ಇಲ್ಲ, ಇದೂ ಇಲ್ಲ. ಎರಡೂಕಡಿಮೆ. ಇವರನ್ನು ಸ್ವಲ್ಪ ಉತ್ತಮಸ್ಥಿತಿಗೆ ತರಲು ಸಂಬಳ ಮತ್ತು ಭತ್ಯ ಇತ್ಯಾದಿಗಳನ್ನು ಉಪಾಧ್ಯಾಯರುಗಳಿಗೆ ಸ್ವಲ್ಪ ಹೆಚ್ಚು ಮಾಡಿಕೊಡಿ ಎಂದರೆ ಸರ್ಕಾರದವರು ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಇನ್ನು ಶೇಕಡ 99ರಷ್ಟು ಪಾಠ ಶಾಲೆಗಳಲ್ಲಿ, ಹಳ್ಳಿಗಾಡಿನಲ್ಲೆಲ್ಲಾ ಒಂದೊಂದು ಪಾಠಶಾಲೆಗೂ ಒಬ್ಬ ಉಪಾಧ್ಯಾಯರಿರುತ್ತಾರೆಯೇ ಶಿವಾಯಿ ಎರಡು ಜನಗಳಿರುವಂಥ ಪಾಠ ಶಾಲೆಗಳೇ ಇರುವುದಿಲ್ಲ. ಹೀಗೆ ಒಬ್ಬ ಉಪಾಧ್ಯಾಯರಿದ್ದುಕೊಂಡು ಹೇಗೆ 3-4 ತರಗತಿಗಳಿಗೂ ಪಾಠ ಹೇಳುತ್ತಾರೋ ಅದು ನನಗಂತೂ ಅರ್ಥವಾಗುತ್ತಿಲ್ಲ. ಪ್ರತಿಯೊಂದು ತರಗತಿಯಲ್ಲೂ 30-40 ಜನಗಳಿಗೆ ಮೇಲ್ಪಟ್ಟು ವಿದ್ಯಾರ್ಥಿಗಳಿರುತ್ತಾರೆ. ಇವರೆಲ್ಲರಿಗೂ ಏಕಕಾಲದಲ್ಲೇ, ಹೇಗೆ ಪಾಠ ಪ್ರವಚನಗಳನ್ನು ನಡೆಸುತ್ತಾರೋ ಅದು ಬಹಳ ವಿಚಿತ್ರವಾದ ವಿಚಾರವಾಗಿದೆ. ಡಾ|| ಸಿ. ಆರ್. ರೆಡ್ಡಿಯವರ ವರದಿಯಲ್ಲೂ ಸಹ ನಾನು ಹೇಳಿದ ಹಾಗೆ ಒಂದೊಂದು ತರಗತಿಯಲ್ಲೂ 30 ಜನರಿಗೆ ಕಮ್ಮಿ ಇರುವುದಲ್ಲವೆಂದು ತಿಳಿಸಿದ್ದ ಹಾಗೆ ಜ್ಞಾಪಕವಿದೆ.

(ಶ್ರೀ ಟಿ. ಮಾದಯ್ಯಗೌಡರು.)

ಹೀಗೆ ಇಷ್ಟೊಂದು ಬಾಲಕರುಗಳಿಗೆ ಪಾಠ ಹೇಳಲು ಒಬ್ಬ ಮನುಷ್ಯನಿಂದ ಖಂಡಿತ ಸಾಧ್ಯವಿಲ್ಲ ಹೇಳಿದರೂ ಆತ ಮನುಷ್ಯನಾಗಿರಲು ಸಾಧ್ಯವೂ ಇಲ್ಲ. ಇದು ಖಂಡಿತ. ಈಗ ನಾನು ವರ್ಣನೆಮಾಡಿದಂಥ ಪಾಠಶಾಲೆಗಳು ಸಿಟಿ ಪ್ರದೇಶಗಳಲ್ಲಿದ್ದರೆ, ನಗರವಾಸಿಗಳು ನಿಜವಾಗಿಯೂ ತಮ್ಮ ಮಕ್ಕಳನ್ನು ಅಲ್ಲಿಗೆ ವಿದ್ಯಾಭ್ಯಾಸ ಮಾಡಲು ಕಳುಹಿಸಿಕೊಡುತ್ತಿದ್ದರೇ ಎಂಬುದನ್ನು ಆಲೋಚಿಸಿ ನೋಡಿದರೆ ಇವರು ಖಂಡಿತ ಕಳುಹಿಸುತ್ತಿರಲಿಲ್ಲವೆಂದೇ ಹೇಳಬಹುದು. ಆದರೆ ಸಿಟಿ ನಿವಾಸಿಗಳ ಬಗ್ಗೆ ಅಸೂಯೆ ಪಡುತ್ತಾರೆಂದು ಯಾರೂ ಭಾವಿಸ ಬಾರದು. ನಗರ ವಾಸಿಗಳಲ್ಲೆಲ್ಲಾ ನುರಿತ ಉಪಾಧ್ಯಾಯರುಗಳನ್ನೇ ಹಾಕುತ್ತಿದ್ದು ಹಳ್ಳಿಗಾಡಿಗೆಲ್ಲ ನಾತರಹೇತಾದವರನ್ನು ಹಾಕುತ್ತಿದ್ದಾರೆಂಬುದಕ್ಕೆ ನಾನು ಇದನ್ನು ಹೇಳಬೇಕಾಗಿ ಬಂತು.

ಅನೇಕ ಗ್ರಾಮಗಳಲ್ಲಿ ಉಪಾಧ್ಯಾಯರಿಗೆ ಮನೆಗಳೇ ಇಲ್ಲದಿರುವ ಸಂದರ್ಭಗಳೂ ಇವೆ, ಅಲ್ಲದೆ ಸ್ಕೂಲಿರುವ ಸ್ಥಳಕ್ಕೆ 10-15 ಮೈಲಿಗಳ ದೂರದಿಂದ ಉಪಾಧ್ಯಾಯರು ಬರುತ್ತಾರೆ. ಅವರು ಇನ್ಸ್ಪೆಕ್ಟರ ಅನುಮತಿ ಪಡೆದೋ ಅಥವಾ ಪಡೆಯದೆಯೋ ಬೇರೆ ಗ್ರಾಮಗಳಲ್ಲಿದ್ದು ಅಲ್ಲಿಂದ ಬಂದು ಸ್ಕೂಲುಗಳಲ್ಲಿ ಪಾಠ ಮಾಡುವ ಸಂದರ್ಭಗಳೂ ಇವೆ. ನಾನು ಅಂಥವರನ್ನು ನೋಡಿದ್ದೇನೆ. ಕಾನಕಾನಹಳ್ಳಿಯಿಂದ ಸಾತನೂರಿಗೆ ಹೋಗಿ ಕೆಲವರು ಪಾಠ ಹೇಳುತ್ತಿದ್ದಾರೆ. ಬೆಳಿಗ್ಗೆ ಅಷ್ಟು ದೂರ ಸೈಕಲ್‌ಮೇಲೆ ಅವರು ಹೋಗುವಾಗ್ಯೇ ಸುಸ್ತಾಗಿ ಹೋಗಿರುತ್ತಾರೆ. ಅಂಥಾದ್ದರಲ್ಲಿ ಅವರು ಎಷ್ಟುಮಟ್ಟಿಗೆ ಪಾಠ ಮಾಡಿಯಾರು ಎಂಬುದನ್ನು ವರ್ಣನೆ ಮಾಡಬೇಕಾದ ಅಗತ್ಯವಿಲ್ಲ. ಸಾಲದ್ದಕ್ಕೆ ಉಪಾಧ್ಯಾಯರು ಮಾಡುವ ಕೆಲಸವನ್ನು ನೋಡಲು ತಕ್ಕಷ್ಟು ತನಿಖೆಯಿಲ್ಲ ಎಂಬುದು ನನ್ನ ಭಾವನೆ. ಈಗ ಇನ್ಸ್ಪೆಕ್ಟರುಗಳನ್ನೇನೋ ಗೊತ್ತುಮಾಡಿದ್ದಾರೆ. ಸರ್ವೇಸಾಧಾರಣವಾಗಿ ನೂರು ಸ್ಕೂಲುಗಳಿಗೆ ಒಬ್ಬ ಇನ್ಸ್ಪೆಕ್ಟರು ಇರುತ್ತಾರೆ. ಹಾಗಿದ್ದರೆ ವರ್ಷಕ್ಕೊಂದು ಸಲವಾದರೂ ಪ್ರತಿ ಸ್ಕೂಲಿಗೂ ಹೋಗಿ ಸರಿಯಾಗಿ ಪರೀಕ್ಷೆ ಮಾಡುವುದು ಕಷ್ಟವಾಗುತ್ತದೆ. ಸಾಧಾರಣವಾಗಿ ಎಲ್ಲಾ ಸ್ಕೂಲುಗಳಿಗೂ ಹೋಗಿ ಪರೀಕ್ಷೆ ಮಾಡುವುದಿಲ್ಲ. ಒಂದು ಸ್ಕೂಲಿಗೆ ಹೋಗಿ ಎಲ್ಲಾ ವಿಷಯಗಳನ್ನೂ ಪರೀಕ್ಷೆ ಮಾಡುವುದಕ್ಕೆ ಒಂದು ದಿವಸದಲ್ಲಿ ಆಗುವುದಿಲ್ಲ. ಸಾಲದ್ದಕ್ಕೆ ರಜ, ಬೇರೆ ಮೀಟಿಂಗು, ಪತ್ರ ವ್ಯವಹಾರ, ಆಫೀಸು ಕೆಲಸ ಮುಂತಾದ್ದೆಲ್ಲಾ ಇರುತ್ತದೆ. ಹೀಗಿರುವಾಗ ಒಂದು ವರ್ಷದಲ್ಲಿ ಒಮ್ಮೆಯಾದರೂ ಎಲ್ಲಾ ಸ್ಕೂಲುಗಳಿಗೆ ಹೋಗಿ ತನಿಖೆ ಮಾಡಲು ಅವಕಾಶವಿರುವುದಿಲ್ಲ. ಹೀಗಿರುವುದರಿಂದ ಉಪಾಧ್ಯಾಯರು ಎಷ್ಟು ಮಟ್ಟಿಗೆ ಶ್ರದ್ಧೆ ವಹಿಸಿ ಕೆಲಸ ಮಾಡಿಯಾರು ? ಎಲ್ಲಾ ಉಪಾಧ್ಯಾಯರ ಮೇಲೂ ನಾನು ಅಪಾದನೆ ಮಾಡುತ್ತಿಲ್ಲ. ಸರಿಯಾಗಿ ಕೆಲಸ ಮಾಡುವವರೂ ಇದ್ದಾರೆ. ಅನೇಕ ಉಪಾಧ್ಯಾಯರು ಸ್ಕೂಲುಗಳಿಗೆ ಹೋಗಿ ಸ್ಕೂಲು ನಡೆಸುವುದಿಲ್ಲ. ಯಾವ ಗ್ರಾಮದಲ್ಲಿ ಸ್ಕೂಲಿದೆಯೋ ಅಲ್ಲಿ ಉಪಾಧ್ಯಾಯರಿಗೆ ಬೆಂಬಲಕೊಡುವವರು ಒಬ್ಬರಾದರೂ ಇದ್ದೇ ಇರುತ್ತಾರೆ ಅಂಥವರ ಕೈಗೆ ಯಾವಾಗಲೂ ಒಂದು ರಜಾ ಚೀಟಿ ಕೊಟ್ಟೇ ಇರುತ್ತಾರೆ. ಅದು ಏಕಾಏಕಿ ಪತ್ತೆಯಾಗುವುದಿಲ್ಲ. ಯಾರಾದರೂ ತನಿಖೆ ಮಾಡಲು ಬಂದು ಕೇಳಿದರೆ ಆಗ ಆ ಚೀಟಿಯನ್ನು ಕೊಡುವಂತೆ ಹೇಳಿರುತ್ತಾರೆ. ಕೇಳಿದಾಗ ಈಗತಾನೆ ಹೋದರು ಎಂದು ಹೇಳುವಂತೆ ತಿಳಿಸಿರುತ್ತಾರೆ. ಹೀಗಾಗಿ 10-15 ದಿವಸಗಳು ಸ್ಕೂಲುಬಾಗಿಲೇ ತೆಗೆದಿರುವುದಿಲ್ಲ. ಅಂಥ ಸ್ಕೂಲುಗಳನ್ನು ಗ್ರಾಮಾಂತರಗಳಲ್ಲಿ ನಾನು ನೋಡಿದ್ದೇನೆ. ಇದಕ್ಕೆಲ್ಲಾ ಕಾರಣ ತನಿಖೆ ಸರಿಯಾಗಿ ನಡೆಯುತ್ತಿಲ್ಲ. ಇನ್ಸ್ಪೆಕ್ಟರಿಗೆ ವರ್ಷಕ್ಕೆ ಒಂದು ಸಲವಾದರೂ ಹೋಗಿ ನೋಡುವುದಕ್ಕೆ ವ್ಯವಧಾನವಿಲ್ಲದಿರುವಾಗ ಅನಿರೀಕ್ಷಿತವಾಗಿ ಭೇಟಿ ಕೊಡುವುದಕ್ಕೆ ಎಲ್ಲಿಂದ ಸಾಧ್ಯವಾದೀತು ? ಅನೇಕ ಕಡೆ ಸ್ಕೂಲುಗಳ ಅವ್ಯವಸ್ಥೆ ಗೊತ್ತಿದ್ದರೂ ಅದನ್ನು ಸರಿಪಡಿಸುವುದಕ್ಕೆ ವ್ಯವಧಾನವಿರುವುದಿಲ್ಲ, ಕೆಲವು ಸಂದರ್ಭಗಳಲ್ಲಿ ಮನಸ್ಸು ಬರುವುದಿಲ್ಲ.

ಹಿಂದೆ ಸುಮಾರು 15-20 ವರ್ಷಗಳ ಕೆಳಗೆ ಪ್ರತಿಯೊಂದು ಸ್ಕೂಲಿನ ಉಪಾಧ್ಯಾಯರೂ ನೋಟ್ಸ್ ಆಫ್ ಲೆಸನ್ಸ್ ಬರೆಯಬೇಕೆಂಬ ಕಡ್ಡಾಯವಿತ್ತು. ಉಪಾಧ್ಯಾಯರು ಒಂದು ನೋಟ್ ಬುಕ್ಕಿಟ್ಟು ಅದರಲ್ಲಿ ಯಾವ್ಯಾವದಿನ ಯಾವ್ಯಾವ ಪಾಠ ಮಾಡುತ್ತಾರೋ ಅದರ ನೋಟ್ಸ್ ಬರೆದು ಅದರಂತೆ ಪಾಠ ಹೇಳಬೇಕಾಗಿತ್ತು. ಈಗ ಅವೆಲ್ಲಾ ತಪ್ಪಿಹೋಗಿದೆ. ಇನ್ಸ್ಪೆಕ್ಟರು ಹೋಗಿ ಅದನ್ನು ಚೆಕ್‌ಮಾಡಿ ನೋಡುವುದಕ್ಕೆ ಅವಕಾಶವಿಲ್ಲ. ಹಾಗೆ ಮಾಡಲು ಯಾರೂ ಒತ್ತಾಯಪಡಿಸುತ್ತಿಲ್ಲ. ಇದು ರೇಂಜ್ ಇನ್ಸ್ಪೆಕ್ಟರ ವಿಚಾರವಾಯಿತು. ಆಮೇಲೆ ಜಿಲ್ಲಾ ಇನ್ಸ್ಪೆಕ್ಟರನ್ನು ಬೇರೆ ನೇಮಕಮಾಡಿದ್ದಾರೆ. ಆತನು ಸರ್ವೇಸಾಧಾರಣವಾಗಿ ಒಂದು ಜಿಲ್ಲೆಯಲ್ಲಿರುವ ಸಾವಿರ ಪ್ರೈಮರಿ ಸ್ಕೂಲುಗಳನ್ನು ಗ್ರಾಮಾಂತರಗಳಲ್ಲಿ ನೋಡಬೇಕು. ಅದು ಸಾಧ್ಯವಿಲ್ಲ. ಸಾಮಾನ್ಯವಾಗಿ ನಾಲ್ಕೈದು ವರ್ಷಗಳಾದರೂ ಗ್ರಾಮಾಂತರಗಳ ಸ್ಕೂಲುಗಳಿಗೆ ಹೋಗಿ ಪರೀಕ್ಷಾರ್ಥವಾಗಿ ನೋಡಲು ದೊಡ್ಡಮನಸ್ಸು ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಹಾಗೆ ಭೇಟಿಕೊಟ್ಟು ಅಲ್ಲಿನ ಸ್ಥಿತಿಗತಿಗಳನ್ನು ಅವರು ನೋಡಬಾರದೆಂದೇನೂ ಇಲ್ಲ, ಜಿಲ್ಲಾ ಇನ್ಸ್ಪೆಕ್ಟರು ಹಳ್ಳಿ ಸ್ಕೂಲುಗಳಿಗೆ ಹೋಗಬಾರದೆಂದಿಲ್ಲ. ಹಳ್ಳಿಗಳಿಗೆ ಹೋಗಲು ಅವರಿಗೆ ಸೌಕರ್ಯವಿಲ್ಲ. ಸಾಲದ್ದಕ್ಕೆ ಅವರು ಇನ್ನೂ ಮಿಡ್ಲ್‌ಸ್ಕೂಲು, ಹೈಸ್ಕೂಲುಗಳನ್ನು ಬೇರೆ ನೋಡಬೇಕು. ಆಫೀಸು ಕೆಲಸ, ಪತ್ರವ್ಯವಹಾರ ಇದೆಲ್ಲಾ ಮಾಡಬೇಕು. ಹೀಗೆ ವ್ಯವಧಾನವಿಲ್ಲದೆ ಗ್ರಾಮಾಂತರದ ಸ್ಕೂಲುಗಳ ಕಡೆ ಸರಿಯಾದ ಗಮನಕೊಡುವುದಿಲ್ಲ. ಹೈಸ್ಕೂಲು, ಮಿಡ್ಲ್ ಸ್ಕೂಲುಗಳನ್ನು ನೋಡದಿದ್ದರೆ ಆಕ್ಷೇಪಣೆ ಬರುತ್ತದೆ. ಗ್ರಾಮಾಂತರಗಳಲ್ಲಿ ಆಕ್ಷೇಪಣೆ ಅಷ್ಟಾಗಿಲ್ಲ, ಮಾಡಿದರೂ ಮಾಡಲಿ ಎಂದು ಹೋಗುವುದಿಲ್ಲ. ಹೀಗೆ ಇನ್ಸ್ಪೆಕ್ಟರುಗಳು ಕೂಡ ತಕ್ಕಷ್ಟು ನಿಗಾ ಕೊಡುತ್ತಿಲ್ಲ, ಅದಕ್ಕೆ ಸರಿಯಾದ ವ್ಯವಸ್ಥೆಯೂ ಇಲ್ಲ. ಅವರು ಸರಿಯಾಗಿ ನಿಗಾ ತೆಗೆದುಕೊಳ್ಳಬೇಕು. ದಕ್ಷತೆಯಿಂದ ಸ್ಕೂಲು ಮೇಲ್ವಿಚಾರಣೆ ನೋಡಬೇಕು, ಸರಿಯಾಗಿ ಇಲ್ಲದಿದ್ದರೆ ಸರಿಪಡಿಸಬೇಕು ಎಂಬುದು ಈಗಿನ ಕಾಲದಲ್ಲಿ ಬಹಳಮಟ್ಟಿಗೆ ಕಡಮೆಯಾಗಿದೆ.

ಸ್ಕೂಲು ಕಟ್ಟಡದ ವಿಚಾರ ಹೇಳುವಾಗ ಒಂದು ಮಾತು ಮರೆತೆ, ಪ್ರತಿಯೊಂದು ಸ್ಕೂಲಿಗೂ ಕೈತೋಟವಿರಬೇಕು, ಚಿಕ ಮಕ್ಕಳು ಬರೀ ಓದಿದರ ಸಾಲದು, ಕೆಲವು ಗಂಟೆಗಳ ಕಾಲ ಕೈಕೆಲಸ ಮಾಡಬೇಕೆಂದು ವಿದ್ಯಾ ಇಲಾಖೆಯಲ್ಲಿ ಒಂದು ಸರ್ಕ್ಯುಲರ್ ಇರಬೇಕು. ಬಹುಶಃ ಬೇಸಿಕ್ ಸ್ಕೂಲು ಮಾಡಬೇಕು ಎಂದೇನು ನಾವು ಅಭಿಪ್ರಾಯಪಡುತ್ತಿದ್ದೇವೆಯೋ ಅದಕ್ಕನುಗುಣವಾಗಿ ತೋಟ ಮಾಡುವುದಕ್ಕೆ ಅವಕಾಶವಿರಬೇಕು. ಅನೇಕ ಸ್ಕೂಲುಗಳಲ್ಲಿ ಸಾಧಾರಣವಾಗಿ ಆ ಅವಕಾಶವಿಲ್ಲದೇ ಇಲ್ಲ. ತೋಟಮಾಡುವ ವಿಧಾನವನ್ನು ಉಪಾಧ್ಯಾಯರು ಹೇಳಬಹುದು. ಆದರೆ ಆ ರೀತಿ ಮಾಡತ್ತಿಲ್ಲ ಮಾಡುವುದಕ್ಕೆ ಕೆಲವು ಕಡೆ ಸ್ಥಳವಿಲ್ಲ. ಸರ್ವ-

ಸಾಧಾರಣವಾಗಿ ಪಟ್ಟಣಗಳಲ್ಲಿ ಮಕ್ಕಳಿಗೆ ಸ್ಕೂಲಿನಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗವಿಲ್ಲ, ಓಡಾಡುವುದಕ್ಕೆ ಜಾಗವಿಲ್ಲ, ಮಲಮೂತ್ರಾದಿಗಳಿಗೆ ಜಾಗವಿಲ್ಲ ಎಂದು ಎಷ್ಟೋ ಗಲಾಟೆ ಹುಡುಗರು ಮಾಡುತ್ತಾರೆ. ಗ್ರಾಮಾಂತರಗಳಲ್ಲಿ ಹುಡುಗರು ಹೊರಗಡೆ ಹೋಗಿ ಬರುವುದಕ್ಕೆ ಅವಕಾಶವಿಲ್ಲ. ಸ್ಕೂಲು ಪಕ್ಕದಲ್ಲೇ ಎಲ್ಲಾ ಮಾಡಿರುತ್ತಾರೆ. ಇದು ಬಹಳ ಶೋಚನೀಯ ಸ್ಥಿತಿ, ಯಾವ ಸ್ಕೂಲಿನಲ್ಲಿ ನೋಡಿದರೂ ಬೇಸಿಗೆ ಕಾಲದಲ್ಲಿ ಮಕ್ಕಳು ಕುಡಿಯುವುದಕ್ಕೆ ಒಂದು ಮಡಕೆಯಷ್ಟು ನೀರು ಇಟ್ಟಿರುವುದಿಲ್ಲ. ಆಟದ ಬಯಲಂತೂ ಗ್ರಾಮಾಂತರಗಳಲ್ಲಿ ಇಲ್ಲವೇ ಇಲ್ಲ, ಎಲ್ಲೋ ಒಂದೆರಡು ಕಡೆ ಏನಾದರೂ ಇರಬಹುದು. ಹೀಗೆ ಗ್ರಾಮಾಂತರಗಳ ಸ್ಥಿತಿ ಶೋಚನೀಯವಾಗಿದೆ. ಇಂಥ ಸ್ಕೂಲುಗಳಿಗೆ ಮಕ್ಕಳನ್ನು ಕಳುಹಿಸಿ ಶಿಕ್ಷಣ ಕೊಡುವುದಕ್ಕೆ ಬದಲು ಸುಖವಾಗಿ ಹುಡುಗರು ಮನೆಯಲ್ಲೇ ಇದ್ದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಅನೇಕ ಸಂದರ್ಭಗಳಲ್ಲಿ ನಾನು ಈ ಸಲಹೆಗಳನ್ನು ಮಾಡಿದ್ದೇನೆ. ಸರಿಯಾದ ವ್ಯವಸ್ಥೆ ಮಾಡದಿದ್ದರೆ ತಪ್ಪುದಾರಿಗೆ ಹೋಗಿ ಮನುಷ್ಯತ್ವ ಹೋಗಿಬಿಡುತ್ತದೆ. ದೇಶದಲ್ಲಿ ಸ್ಕೂಲುಗಳನ್ನೇನೋ ಜಾಸ್ತಿಮಾಡಿದರಿ. ಆದರೆ ಸ್ಕೂಲುಗಳ ಸ್ಥಿತಿಯನ್ನು ಉತ್ತಮಪಡಿಸಿದ ಹೊರತು ತಕ್ಕಷ್ಟು ಪ್ರಯೋಜನ ಲಭಿಸುವುದಿಲ್ಲ ಎಂದು ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಸೂಚನೆಮಾಡಿದೆ. ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟು ದೇಶದ ಹಿತದೃಷ್ಟಿಯಿದ್ದರೆ ತಕ್ಷಣ ತಕ್ಕ ಏರ್ಪಾಡುಮಾಡಬೇಕು. ಸ್ಕೂಲುಕಟ್ಟಡವನ್ನು ಸರಿಯಾದ ರೀತಿಯಲ್ಲಿ ನಿರ್ಮಿಸಬೇಕು. ನೂರಾರು ಮಕ್ಕಳನ್ನು ಚಿಕ್ಕಕೊಠಡಿಯಲ್ಲಿ ತುಂಬುವ ದೌರ್ಭಾಗ್ಯ ಸ್ಥಿತಿ ಇರಬಾರದು. ಪ್ರತಿಯೊಂದು ಸ್ಕೂಲಿನಲ್ಲೂ ತೋಟ, ಆಟಪಾಟಗಳಿಗೆ ಬಯಲು ತಕ್ಕಹಾಗೆ ಇರುವಂತೆ ಏರ್ಪಾಡುಮಾಡಬೇಕು. ಸಣ್ಣಮಕ್ಕಳು ಹೋಗುವ ಸ್ಕೂಲುಗಳನ್ನು ಉಪೇಕ್ಷೆಮಾಡಬಾರದು. ಹಾಗೆಯೇ ಆದಷ್ಟುಮಟ್ಟಿಗೆ ಶಿಕ್ಷಣ ಹೊಂದಿರುವ ಉಪಾಧ್ಯಾಯರನ್ನೇ ನೇಮಕಮಾಡಬೇಕು. ಅದನ್ನು ಹೇಗೆ ಮಾಡುತ್ತಾರೋ ಗೊತ್ತಿಲ್ಲ. ಸಾಕಾದಷ್ಟು ಶಿಕ್ಷಣ ಶಾಲೆಗಳಿಲ್ಲ. ಸುಮಾರು 16 ಸಾವಿರ ಉಪಾಧ್ಯಾಯರಿದ್ದಾರೆ. ಅದರಲ್ಲಿ 12 ಸಾವಿರಕ್ಕೆ ಕಡಮೆಯಿಲ್ಲದಷ್ಟು ಮಂದಿ ಶಿಕ್ಷಣವಿಲ್ಲದಿರುವವರೇ ಇದ್ದಾರೆ. ದೇಶದಲ್ಲಿ ಒತ್ತಾಯ ಶಿಕ್ಷಣವನ್ನು ಜಾರಿಗೆ ತರಬೇಕಾದರೆ ಈಗಿನಿಂದಲೇ ಸಾಕಷ್ಟುಮಂದಿ ಉಪಾಧ್ಯಾಯರಿಗೆ ತಕ್ಕ ಶಿಕ್ಷಣ ಕೊಡಲು ಸರಿಯಾದ ವ್ಯವಸ್ಥೆ ಮಾಡಬೇಕು. ಹಾಗೆ ಜಾರಿಗೆ ತರುವಾಗ ವರ್ಷಕ್ಕೆ ಸುಮಾರು ಎರಡು ಸಾವಿರ ಉಪಾಧ್ಯಾಯರನ್ನು ತೆಗೆದುಕೊಳ್ಳಬಹುದು. ಈಗ ಶಿಕ್ಷಣವಿಲ್ಲದಿರುವ ಸುಮಾರು 12 ಸಾವಿರ ಜನ ಉಪಾಧ್ಯಾಯರಿಗೆ ಶಿಕ್ಷಣ ಕೊಡುವುದಕ್ಕೆ ಆರು ನಾರ್ಮಲ್ ಸ್ಕೂಲುಗಳಿವೆ. ಒಂದೊಂದು ವರ್ಷದಲ್ಲಿ ಅಲ್ಲಿ ಸುಮಾರು 230 ಜನರಿಗೆ ಶಿಕ್ಷಣಕೊಡಬಹುದು. ಈಚೆಗೆ ಉತ್ತನಹಳ್ಳಿಯಲ್ಲಿ ಒಂದು ವರ್ಷದಲ್ಲಿ ಸುಮಾರು 300 ಜನರು ಶಿಕ್ಷಣ ಪಡೆಯುವಂತೆ ಮಾಡಿದ್ದಾರೆಂದು ಗೊತ್ತಾಗಿದೆ. ನಾರ್ಮಲ್ ಸ್ಕೂಲುಗಳಲ್ಲಿ ಮೂರು ವರ್ಷದ ಶಿಕ್ಷಣವಿದೆ. ಬೇಸಿಕ್ ಸ್ಕೂಲು ಬೇರೆ ಇದೆ. ಈ ಎಲ್ಲಾ ಕ್ಷೇತ್ರಗಳಲ್ಲೂ ಸೇರಿ ವರ್ಷಕ್ಕೆ ಸುಮಾರು 600 ಮಂದಿ ಶಿಕ್ಷಣ ಪಡೆಯುತ್ತಾರೆ. ಹಾಗೆ ಮಾಡಿದರೆ ಕನಿಷ್ಠಪಕ್ಷ ಮುಕ್ಕಾಲು ಜನರಾದರೂ ಶಿಕ್ಷಣ ಹೊಂದಿದವರಾಗಿರುತ್ತಾರೆಂದು ನಿರೀಕ್ಷಿಸುವುದಕ್ಕೆ ಅವಕಾಶವಿಲ್ಲ. ಕನಿಷ್ಠಪಕ್ಷ ಒಂದೊಂದು ಜಿಲ್ಲೆಯಲ್ಲೂ ನೂರಾರು ಜನ ಉಪಾಧ್ಯಾಯರಿಗೆ ಶಿಕ್ಷಣ ಕೊಡುವುದಕ್ಕಾದರೂ ಶಾಲೆಗಳಿರಬೇಕು.

ಪಾಶ್ಚಿಮಾತ್ಯದೇಶಗಳಲ್ಲಿ ಒಂದುಸಲ ತರಪೇತು ಮಾಡಿ ಅಲ್ಲಿಗೆ ಶಿಕ್ಷಣ ಮುಗಿಯಿತು ಎಂದು ತೃಪ್ತರಾಗುವುದಿಲ್ಲ. ತರಪೇತಾದ ಉಪಾಧ್ಯಾಯರಿಗೆ ಆಗಾಗ್ಯೆ ರಿಫ್ರೆಷರ್ ಕೋರ್ಸ್ ಎಂಬುದಾಗಿ ಏರ್ಪಾಡು ಮಾಡುತ್ತಾರೆ, ಹೊಸವಿಷಯಗಳನ್ನು ಹೇಳುತ್ತಾರೆ. ಹಿಂದೆ ಕಲಿತದ್ದನ್ನು ಜ್ಞಾಪಕಕ್ಕೆ ತರುತ್ತಾರೆ. ಆದರೆ ನಮ್ಮಲ್ಲಿ ಆ ಏರ್ಪಾಡು ಇಲ್ಲ. ತರಪೇತಾದ ಉಪಾಧ್ಯಾಯರು ಎಂದು ಯಾರಿಗೆ ಅನ್ನುತ್ತೇವೆ? ಟ್ರೈನಿಂಗ್ ಸ್ಕೂಲ್‌ನಲ್ಲಿ actual ಆಗಿ ಪಾಸ್ ಆದವರೇ ಅಲ್ಲದೆ, ಮೂರು ವರ್ಷ ಅಲ್ಲಿದ್ದು ಫೈಲ್ ಆದರೂ ಕೂಡ ಅವರಿಗೆ ಟ್ರೈನಿಂಗ್ ಆಯಿತು ಎಂದು ಭಾವಿಸುತ್ತೇವೆ. ಟ್ರೈನಿಂಗ್‌ಗೆ ಹೋಗಿರತಕ್ಕವರು ಪರೀಕ್ಷೆಯಲ್ಲಿ ಪಾಸ್ ಆಗದಿದ್ದರೆ ಸರಿಯಾಗಿ ಮುತುವರ್ಜಿ ವಹಿಸಲಿಲ್ಲ ಎಂದು ಅವರನ್ನು ಮನೆಗೆ ಕಳುಹಿಸುವುದಿಲ್ಲ. ಇಟ್ಟುಕೊಂಡೇ ಇರುತ್ತೇವೆ. ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸ್ ಮಾಡಿರುವ ಒಬ್ಬ ಉಪಾಧ್ಯಾಯ ಟ್ರೈನಿಂಗ್‌ಗೆ ಹೋಗಿ ಪಾಸ್ ಆಗದಿದ್ದರೂ ಅವನನ್ನು ಇಟ್ಟುಕೊಂಡಿರುತ್ತೇವೆ, ಟ್ರೈನಿಂಗ್ ಕೋರ್ಸ್ ಆಯಿತು ಎಂದು ಹೇಳುತ್ತೇವೆ. ಟ್ರೈನಿಂಗ್ ಕೋರ್ಸ್ ಮುಗಿಯಿತು ಎಂದು ಹೇಳಿ ಅಂತಹವನ ಕೈಗೆ ನಮ್ಮ ಚಿಕ್ಕಮಕ್ಕಳನ್ನು ಕೊಡುವುದು ನನಗೆ ಅಷ್ಟು ಹಿತವೆನ್ನಿಸುವುದಿಲ್ಲ. ಹೀಗೆ ಯಾವ ಬಾಬಿನಲ್ಲಿ ನೋಡಿದರೂ ಕೂಡ ಸ್ಕೂಲು ಕಟ್ಟಡ, ಉಪಾಧ್ಯಾಯರು, ಬೇಕಾದ ಸಲಕರಣೆ ಒಂದು ತಕ್ಕ ವ್ಯವಸ್ಥೆ, ಇಷ್ಟರ ಮೇಲೆ ಇರಬೇಕಾದ ಒಂದು ದಕ್ಷತೆ ಅಥವಾ ಒಂದು ವಿಚಾರಣೆ ಇವ್ಯಾವುದರಲ್ಲೂ ಒಂದು ತಕ್ಕ ವ್ಯವಸ್ಥೆ ಇಲ್ಲದ ಮೇಲೆ ನನಗಾದರೂ ಅನ್ನಿಸುತ್ತದೆ ಸರ್ಕಾರದವರು ಇವೆಲ್ಲವನ್ನೂ ಚೆನ್ನಾಗಿ ಪರಿಪೂರ್ಣ ಮಾಡುವವರೆಗೂ ಪ್ರೈಮರಿ ವಿದ್ಯಾಭ್ಯಾಸವನ್ನು ಮುಂದುವರಿಸುವುದು ಬೇಡ. ಇರತಕ್ಕ ಸ್ಕೂಲುಗಳನ್ನು ಸುವ್ಯವಸ್ಥಿತವಾಗಿ ಮಾಡದ ಮೇಲೆ ಅಂಥ ಸ್ಕೂಲುಗಳು ಏಕೆ? ಕೇವಲ ಸ್ಕೂಲುಗಳಿಗೆ ನಮ್ಮ ಹುಡುಗರು ಹೋದರೆ ಸಾಕು ಅಂತ ಅಲ್ಲ, ಹೋದ ಮೇಲೆ ಸುಶಿಕ್ಷಿತರಾಗಬೇಕು. ಅದಕ್ಕೆ ಚಿಕ್ಕ ವಯಸ್ಸಿನಲ್ಲಿ ಈ ಒಂದು ವ್ಯವಸ್ಥೆಯನ್ನು ಮಾಡಲು ನಮ್ಮ ಸರ್ಕಾರದವರು ಹಳೇ ಕಾಲದ ಸರ್ಕಾರವಾಗಿದ್ದರೆ ನಾನು ಅಷ್ಟು ಹೇಳಬೇಕಾಗಿರಲಿಲ್ಲ—ಪ್ರಜೆಗಳ ಯೋಗಕ್ಷೇಮಚಿಂತನೆ ಮತ್ತು ಭಾವೀಪ್ರಜೆಗಳ ಪುರೋಭಿವೃದ್ಧಿ ಇವುಗಳಲ್ಲಿ ಸಂಪೂರ್ಣ ಆಸಕ್ತಿ ವಹಿಸಿರತಕ್ಕ ಈಗಿನ ಸರ್ಕಾರದವರು, ಪ್ರತಿಯೊಂದು ಅಂಶವನ್ನು ತಕ್ಷಣ ಕೂಲಂಕಷವಾಗಿ ವಿಚಾರಮಾಡಿ ಯಾವ್ಯಾವ ರೀತಿಯಲ್ಲಿ ಏರ್ಪಾಡುಮಾಡಬೇಕೋ ಆ ರೀತಿ ಮಾಡಬೇಕು. ನಾನಾದರೂ ಈ ಸಂದರ್ಭದಲ್ಲಿ ಒಂದು ಮಾತು ಹೇಳಿದರೆ ಅದನ್ನು ತಪ್ಪಾಗಿ ಭಾವಿಸಬಾರದು. ನಮ್ಮ ವಿದ್ಯಾಭ್ಯಾಸದ ವ್ಯವಸ್ಥೆ ಚಿಕ್ಕದರಿಂದ ದೊಡ್ಡದಕ್ಕೆ ಹೋಗಬೇಕು; ಬುಡದಿಂದ ತುದಿಗೆ ಹೋಗಬೇಕೇ ವಿನಾ ಯೂನಿವರ್ಸಿಟಿಗೆ ಕೋಟ್ಯಾಂತರ ರೂಪಾಯಿಕೊಡುತ್ತೇವೆ, ಆದಾದ ಮೇಲೆ ಹೈಸ್ಕೂಲು ಮಿಡ್ಲ್‌ಸ್ಕೂಲು, ಪ್ರೈಮರಿ ಸ್ಕೂಲುಗಳಿಗೆ ಕೊಡುತ್ತೇವೆ ಎಂದರೆ ನಾನು ಒಪ್ಪುವುದಿಲ್ಲ. ಗ್ರಾಮಾಂತರಗಳಲ್ಲಿರಕ್ಕ ಪ್ರಾಥಮಿಕ ಶಾಲೆಗಳನ್ನು ಅಚ್ಚುಕಟ್ಟಾಗಿ ಮಾಡಿ ಆಮೇಲೆ ಸೊಗಸಾದ ಮಿಡ್ಲ್‌ಸ್ಕೂಲು ಮಾಡಿ, ಅದಕ್ಕೆ ತಕ್ಕಂತೆ ಹೈಸ್ಕೂಲುಗಳು, ಹೈಸ್ಕೂಲುಗಳೆಷ್ಟಿವೆಯೋ ಅದಕ್ಕೆ ಸರಿಯಾಗಿ ಕಾಲೇಜುಗಳು ಹೀಗೆ ಮಾಡಿಕೊಂಡು ಹೋದರೆ ಅದು ನ್ಯಾಯವಾದ ಮಾರ್ಗ, ಇಲ್ಲದಿದ್ದರೆ ಅದು ಎಡವಟ್ಟಿನ ಮಾರ್ಗವಾಗುತ್ತದೆ. ಹಾಗೆ ಆಗಬಾರದು. ಇದುವರೆಗೂ ಆ ಮಾರ್ಗವನ್ನು ಅನುಸರಿಸಿದ್ದೇವೆ. ಇನ್ನು ಮುಂದಾದರೂ ನ್ಯಾಯ

(ಶ್ರೀ ಟಿ. ಮಾದಯ್ಯಗೌಡರು.)

ವಾದ ಮಾರ್ಗವನ್ನನುಸರಿಸಿ ಮೊಟ್ಟಮೊದಲು ಗ್ರಾಮಾಂತರ ಪಾಠಶಾಲೆಗಳ ವಿಚಾರಕ್ಕೆ ಹೆಚ್ಚು ನಿಗ ಕೊಡಬೇಕು. ಏಕೆಂದರೆ ಪಟ್ಟಣಗಳಲ್ಲಿ ಮತ್ತು ಸುಸಂಘಟಿತರು ವಿದ್ಯಾವಂತರು ಆಗಿರತಕ್ಕವರಿರುವ ಸ್ಥಳಗಳಲ್ಲಿ ಅವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಏನಾದರೂ ಏರ್ಪಾಡು ಮಾಡುತ್ತಾರೆ, ಶ್ರಮಿಸುತ್ತಾರೆ, ಸರಿಯಾದ ರೀತಿಯಲ್ಲಿ ನೋಡಿಕೊಳ್ಳುತ್ತಾರೆ, ಸುಮ್ಮನಿರುವುದಿಲ್ಲ. ಗ್ರಾಮಾಂತರಗಳಲ್ಲಿ ಸ್ಥಿತಿ ಹಾಗಿರುವುದಿಲ್ಲ. ಅದಕ್ಕೋಸ್ಕರವೇ ಸರ್ಕಾರದವರು ಗ್ರಾಮಾಂತರ ಪಾಠಶಾಲೆಗಳ ವಿಚಾರದಲ್ಲಿ ಹೆಚ್ಚು ನಿಗಾ ಕೊಡಬೇಕು. ಹೆಚ್ಚು ದಕ್ಷತೆಯಿಂದ ನಡೆಯುವಂತೆ ಏರ್ಪಾಡು ಆಗಬೇಕು, ಅದರಲ್ಲೂ ಕೂಡ Single teacher school ಗಳನ್ನು ತಪ್ಪಿಸಿ, ಕಟ್ಟಡ, ಸಲಕರಣೆಗಳ ಏರ್ಪಾಡುಮಾಡಿ, ತರಪೇತಾದ ಉಪಾಧ್ಯಾಯರುಗಳನ್ನು ಕೊಟ್ಟು ತಕ್ಕ ವ್ಯವಸ್ಥೆ ಆದಷ್ಟು ಜಾಗ್ರತೆಮಾಡಿ ನೀವೆಲ್ಲರೂ ದೇಶದ ಮೆಚ್ಚಿಗೆಗೆ ಪಾತ್ರರಾಗುವುದಲ್ಲದೆ, ದೇಶದ ಜನರ ಕೃತಜ್ಞತೆಗೆ ಪಾತ್ರರಾಗುತ್ತೀರಿ ಎಂದು ನಂಬಿ ನಮ್ಮ ಮುಂದಿರುವ ಈ ನಿರ್ಣಯವನ್ನು ಸಭೆ ಅಂಗೀಕಾರ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Resolution moved:

"That this Assembly is of the opinion that immediate steps be taken to improve the condition of rural primary schools by providing suitable school buildings with sufficient space for gardening and playing, equipping fully with school materials, staffing only with trained teachers and improving the inspection work".

*ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ.)—ಸ್ವಾಮಿ, ಶ್ರೀಮಾನ್ ಮಾದಯ್ಯಗೌಡರು ತಂದಿರತಕ್ಕ ಈ ನಿರ್ಣಯವನ್ನು ಅನುಮೋದಿಸುತ್ತಾ ಈ ವಿಷಯದಲ್ಲಿ ಒಂದೆರಡು ಮಾತುಗಳನ್ನಾಡಬೇಕೆಂದಿದ್ದೇನೆ. ವಿದ್ಯಾಭ್ಯಾಸಕ್ಕೆ ತಳಹದಿ ಪ್ರಾಥಮಿಕ ವಿದ್ಯಾಭ್ಯಾಸ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ಎಂದು ಹಿರಿಯರು ಹೇಳಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಚಿಕ್ಕತನದಲ್ಲಿ ಮಕ್ಕಳನ್ನು ಎಷ್ಟುಮಟ್ಟಿಗೆ ತಿದ್ದಿ ಪರಿಪಾಲಿಸುತ್ತೇವೆಯೋ ಅಷ್ಟುಮಟ್ಟಿಗೆ ಅವರು ಬೆಳೆದು ಸತ್ಪ್ರಜೆಗಳಾಗಲು ಲಾಯಕ್ಕಾಗುತ್ತಾರೆ ಎಂಬುದನ್ನು ಎಲ್ಲರೂ ಹೇಳುತ್ತಾ ಇದ್ದಾರೆ. ಯಾರಲ್ಲೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯ ಕಂಡುಬರುವುದಿಲ್ಲ. ಆದರೂ ಪ್ರಾಥಮಿಕ ವಿದ್ಯಾಭ್ಯಾಸದ ವಿಷಯದಲ್ಲಿ ಎಷ್ಟು ಉದಾಸೀನ, ತಿರಸ್ಕಾರ ಮನೋಭಾವ ಇದೆ ಎಂದರೆ, ಅಷ್ಟು ಇನ್ನೆಲ್ಲೂ ಇಲ್ಲವೆಂದು ಕಂಡುಬರುತ್ತದೆ. ಉದಾಹರಣೆಗೆ ಹೇಳುತ್ತೇನೆ, ಪ್ರಾಥಮಿಕ ಪಾಠಶಾಲೆಯ ಉಪಾಧ್ಯಾಯರು ಎಂದರೆ, ಅವರು ಹಾಕುವ ಬಟ್ಟೆ ಅವರು ಮಾಡುತ್ತಿರುವ ಜೀವನ ಇವನ್ನು ನೋಡಿದರೆ, ಜೀವ ಸಹಿತ ಇರುವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಪ್ರತಿಫಲ ದೊರೆಯುತ್ತಾ ಇದೆ. ಒಳ್ಳೆಯ ಬಟ್ಟೆ ಹಾಕಿಕೊಳ್ಳುವುದಕ್ಕಾಗಲೀ ಅಥವಾ ಇನ್ನೂ ಹೆಚ್ಚು ಜ್ಞಾನಾಭಿವೃದ್ಧಿಪಡಿಸಿಕೊಳ್ಳುವುದಕ್ಕಾಗಲೀ, ಶಿಕ್ಷಣದ ವಿಷಯದಲ್ಲಿ ಪರಿಣತರು ಬರೆದ ಗ್ರಂಥಗಳನ್ನು ಓದುವುದಕ್ಕಾಗಲಿ, ಅವರಿಗೆ ಆಗುವುದಿಲ್ಲ, ಇದು ಒಂದು ಮುಖ್ಯವಾದ ಸಂಗತಿ. ಸುಕೋಮಲವಾದ ಮಗುವಿನ ಮುಂದೆ ಆರ್ಥಿಕ ದುಸ್ಥಿತಿಯಿಂದ ತೊಂದರೆ ಪಡುತ್ತಾ ಇರತಕ್ಕ ಮನುಷ್ಯನನ್ನು ಕರೆದುಕೊಂಡು ಹೋಗಿ ನಿಲ್ಲಿಸಿದರೆ ಆ ಮನುಷ್ಯ ಎಷ್ಟುಮಟ್ಟಿಗೆ ಆ ಮಕ್ಕಳ ಮನೋಭಾವ ಅರಿತುಕೊಂಡು, ಅವರ ಮನೋಭಾವ ಯಾವ ರೀತಿ ಇದೆ, ಅವರ ಯೋಗ್ಯತೆ ಏನು ಎಂಬುದನ್ನು ತಿಳಿದುಕೊಳ್ಳಬಲ್ಲ ಎಂಬ ಅಂಶವನ್ನು ನಾವು ಸ್ಪಷ್ಟವಾಗಿ ಊಹಿಸಿಕೊಳ್ಳಬಹುದು. ಸರ್ಕಾರದವರು ಶಿಕ್ಷಣಕ್ಕಾಗಿ ಬಹಳ ಹಣವನ್ನು ಖರ್ಚು ಮಾಡುತ್ತಾ ಇದ್ದಾರೆ. ಅದರಲ್ಲೂ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ಏನಿದೆಯೋ ಅದು ಎಲ್ಲರಿಗೂ ಬಹಳ ಅಚ್ಚುಕಟ್ಟಾಗಿ, ಚೆನ್ನಾಗಿ ಲಭ್ಯವಾಗುವಂತೆ ಮಾಡುವುದು ಸರ್ಕಾರದ ಮೂಲ ಕರ್ತವ್ಯ, ತದನಂತರ ಹೈಸ್ಕೂಲು ಮತ್ತು ಕಾಲೇಜು. ಯಾವ ಮುಂದುವರಿದ ರಾಷ್ಟ್ರದಲ್ಲಿ ನೋಡಿದರೂ ಸಹ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡುತ್ತಾ ಇರುವುದು ಕಂಡು ಬರುತ್ತಿದೆ. ನಮ್ಮ ದೇಶದಲ್ಲಿ ಹಾಗಿಲ್ಲ. ಇನ್ನೊಂದು ವಿಷಯ, ಈ ಚಿಕ್ಕಮಕ್ಕಳಿಗೆ ಪಾಠ ಹೇಳುವುದಕ್ಕೂ, ಹೈಸ್ಕೂಲು, ಕಾಲೇಜು ವಿದ್ಯಾರ್ಥಿಗಳಿಗೆ ಪಾಠ ಹೇಳುವುದಕ್ಕೂ ಬಹಳ ವ್ಯತ್ಯಾಸವಿದೆ. ಚಿಕ್ಕಮಕ್ಕಳಿಗೆ ಪಾಠ ಹೇಳುವುದು ಕಷ್ಟ, ಇದಕ್ಕೆ ನುರಿತ ಶಿಕ್ಷಿತರಾದ ಉಪಾಧ್ಯಾಯರು ಅತ್ಯಗತ್ಯ. ಅದರಲ್ಲೂ ಅವರು ಸುಶಿಕ್ಷಿತರು, ಸುಸಂಸ್ಕೃತರೂ ಆಗಿರಬೇಕು. ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳಿದರೆ ಹರಿಜನಬಂಧುಗಳು ಕೋಪಮಾಡಿಕೊಳ್ಳಬಾರದು, ಹರಿಜನರು ಲೋಯರ್ ಸೆಕೆಂಡರಿ ಪಾಸ್ ಆಗಿ ಕೆಲಸ ಕೇಳುತ್ತಾರೆ ಎಂದು ಖಂಡಿತವಾಗಿಯೂ ಪ್ರಾಥಮಿಕ ಶಾಲೆಗಳಿಗೆ ನಿಯಮಿಸಬಾರದು ಎಂದು ನನ್ನ ಖಚಿತ ಅಭಿಪ್ರಾಯ. ಆದಕ್ಕೆ ಕಾರಣ ಇಷ್ಟೆ. ಅವರು ಇನ್ನೂ ಬಹಳ ಮುಂದೆಬರಬೇಕು, ಈಗತಾನೆ ಅವರು ಮುಂದೆ ಹೆಜ್ಜೆ ಹಾಕುತ್ತಾ ಇದ್ದಾರೆ. ಸರ್ಕಾರದಲ್ಲಿ ಬೇಕಾದರೆ ದೊಡ್ಡ ದೊಡ್ಡ ನೌಕರಿ ಕೊಡಬಹುದು. ಅವರ ಮಕ್ಕಳೂ ಸಹ ಸುಸಂಸ್ಕೃತರಾಗಬೇಕು. ಅವರು ಅನೇಕ ವಿಷಯ ಕಲಿಯಬೇಕಾಗಿದೆ. ಇದು ನನ್ನ ಸ್ಪಷ್ಟ ಅಭಿಪ್ರಾಯ. ಆದ್ದರಿಂದ ಈ ಕೆಲಸವನ್ನು ಸುಲಭವಾಗಿ ಕೊಟ್ಟುಬಿಡಬಹುದು ಎಂದು ಹೇಳಿ ಅವರನ್ನು ಪ್ರಾಥಮಿಕ ವಿದ್ಯಾಭ್ಯಾಸದ ಶಾಲೆಗಳಲ್ಲಿ ಹೆಚ್ಚು ಹೆಚ್ಚಾಗಿ ನಿಯಮಿಸುವುದು ಸರಿಯಲ್ಲವೆಂದು ನಾನು ಪ್ರತ್ಯಕ್ಷವಾಗಿ ಪರೀಕ್ಷಿಸಿ ತಿಳಿದುಕೊಂಡಿದ್ದೇನೆ. ಬೇರೆಯವರ ವಿಷಯವನ್ನು ಹೇಳುತ್ತೇನೆ. ಯಾರು ಸುಸಂಸ್ಕೃತರೋ, ಪಾಠ ಹೇಳುವುದಕ್ಕೆ ಲಾಯಕ್ಕಾಗಿದ್ದಾರೋ, ಅವರನ್ನು ನೇಮಿಸಿ. ಏಕೆಂದರೆ ಪಾಠ ಹೇಳುವುದೂ ಕೂಡ ಸಂಗೀತದಂತೆ ಒಂದು ಕಲೆ. ಇದಕ್ಕೂ ಒಂದು ಚಾತುರ್ಯ, ಬುದ್ಧಿವಂತಿಕೆ ಬಹಳ ಅಗತ್ಯ. ಆದ್ದರಿಂದ ಸರ್ಕಾರದವರು ಈ ವಿಷಯದಲ್ಲಿ ಹೆಚ್ಚು ಗಮನ ಕೊಡುವುದು ಅತ್ಯಾವಶ್ಯಕ. ಇಷ್ಟು ಹೇಳಿ ಶ್ರೀಮಾನ್ ಮಾದಯ್ಯಗೌಡರು ತಂದಿರತಕ್ಕ ಈ ನಿರ್ಣಯವನ್ನು ಅನುಮೋದಿಸುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಮಾದಯ್ಯಗೌಡರು ಈ ನಿರ್ಣಯದ ಮೇಲೆ ಭಾಷಣ ಮಾಡುತ್ತಾ ಕೆಲವು ಬಹಳ ಸ್ವಾರಸ್ಯವಾದ ಅಂಶಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಇದರಲ್ಲಿ ಪ್ರೈಮರಿ ಸ್ಕೂಲುಗಳ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದರಲ್ಲಿ ಅವರಲ್ಲಿ ಅಂಕಿ ಅಂಶಗಳಿಲ್ಲದೆ, ಒಂದೆರಡು ಕಡೆ ಅವರು ನೋಡಿರತಕ್ಕ ಅನುಭವದ ಮೇಲೆ ಊಹಾಪೋಹದ ಮೇಲೆ ಉತ್ಪ್ರೇಕ್ಷೆಮಾಡಿ ಕೆಲವು ಅಂಶಗಳನ್ನು ಹೇಳಿದ್ದಾರೆ. ಅವರು ಹೇಳಿದಂತೆ ಸ್ಕೂಲುಗಳಲ್ಲಿ ವಿದ್ಯಾಭ್ಯಾಸವನ್ನು ನಷ್ಟ ಮಾಡುತ್ತಿಲ್ಲ. ಕಿಟಕಿಗಳಿಲ್ಲದೆ, ಬಾಗಿಲುಗಳಿಲ್ಲದೆ ಗೆದ್ದಲು ತಿಂದುಹೋಗಿವೆ. ಪೆನ್ಸಿಲ್ ಮತ್ತು ಪುಸ್ತಕಗಳಿಲ್ಲದೆ ಸ್ಕೂಲುಗಳು ನಡೆಯುತ್ತಿವೆ, ಎಂದು ಮೈಸೂರು ದೇಶದ ಎಲ್ಲ ಕಡೆಗೂ ಅನ್ವಯಿಸುವ ರೀತಿಯಲ್ಲಿ ಅವರು ಹೇಳಿದರು. ಇದನ್ನು

ಒಪ್ಪುವುದಕ್ಕಾಗುವುದಿಲ್ಲ. ಎಲ್ಲೋ ಕೆಲವು ಕಡೆ ಹಾಗಿದ್ದರೂ ಇರಬಹುದು.

ಶ್ರೀ ಟಿ. ಮಾದಯ್ಯಗೌಡರು.—ಕೆಲವು ಸ್ಕೂಲುಗಳು ಹಾಗಿರಬಹುದೆಂದು ಹೇಳಿದೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೆಲವು ಕಡೆ ಹಾಗಿರಬಹುದು. ಕೆಲವು ಕಡೆ ಸಾಕಷ್ಟು ಸಮರ್ಪಕವಾಗಿ ನಡೆಯದೇಯಿರಬಹುದು. ಆದರೆ ಅವರು ಹೇಳಿದಷ್ಟು ಕೆಟ್ಟಿಲ್ಲವೆಂದು ನನ್ನ ಭಾವನೆ. ಉಪಾಧ್ಯಾಯರ ಟ್ರೈನಿಂಗ್ ವಿಚಾರವನ್ನು ಹೇಳಿದರು; ಅದರಲ್ಲಿ ವಾಸ್ತವಾಂಶವಿದೆ. ಸುಮಾರು 17 ಸಾವಿರ ಉಪಾಧ್ಯಾಯರಲ್ಲಿ 4617 ಜನರು ಟ್ರೈನಿಂಗ್ ಪೂರೈಸಿದ್ದಾರೆ. ಇನ್ನೂ 13728 ಜನ ಉಪಾಧ್ಯಾಯರು ಟ್ರೈನಿಂಗ್ ಆಗಬೇಕಾದವರು ನಮ್ಮ ದೇಶದಲ್ಲಿದ್ದಾರೆ. ಇವರು ಹತ್ತು ಸಾವಿರ ಪ್ರೈಮರಿ ಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ. ಅವರಿಗೆ ಇನ್ನೂ ಟ್ರೈನಿಂಗ್ ಆಗಬೇಕಾಗಿದೆ. ಈಗ ಪ್ರತಿವರ್ಷವೂ 500 ಜನರಿಗೆ ವಿದ್ಯಾನಗರದಲ್ಲಿಯೂ (ಉತ್ತನಹಳ್ಳಿಯಲ್ಲಿ) ಇತರ ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿಯೂ ಶಿಕ್ಷಣವನ್ನು ಕೊಡುತ್ತಿದ್ದಾರೆ. ಇನ್ನೂ ಹೆಚ್ಚು ಜನರನ್ನು ಶಿಕ್ಷಣ ಕೊಟ್ಟು ಕಳುಹಿಸುವುದು ಒಳ್ಳೆಯದೆಂದು ಹೇಳಿದರು. ಸರ್ಕಾರದವರ ಅಭಿಪ್ರಾಯವೂ ಹಾಗೆಯೇ ಇದೆ. ಆದರೆ ಹೀಗೆ ಟ್ರೈನಿಂಗ್ ಕೊಡುವಕಾಲದಲ್ಲಿ ಎಷ್ಟುಹಣ ಖರ್ಚಾಗುತ್ತದೆಂಬುದನ್ನು ನೋಡಬೇಕು. ಈ ಟ್ರೈನಿಂಗ್‌ಗೆ 500 ಜನರನ್ನು ಚುನಾಯಿಸಿದರೆ ಅವರ ಸ್ಥಳಗಳಲ್ಲಿ ಕೆಲಸ ಮಾಡಲು ಟ್ರೈನಿಂಗ್ ಸಬ್‌ಸ್ಟಿಟ್ಯೂಟ್ಸ್ ನೇಮಕಮಾಡಬೇಕಾಗುತ್ತದೆ. ಇವರಿಗೆ ಸಂಬಳ ಕೊಡುವುದಲ್ಲದೆ ಟ್ರೈನಿಂಗಿಗೆ ಹೋಗುವವರಿಗೂ ಸ್ವಲ್ಪ ಅಲೋಯನ್ಸ್ ಕೊಡಬೇಕಾಗುತ್ತದೆ. ಹುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡರು.—500 ಜನರನ್ನು ಏಕೆ ಖಾಯಮಾಗಿ ರೀಲಿವಿಂಗ್ ಸ್ಪೇರ್ಷಲ್‌ಮಾಸ್ಟರುಗಳಂತೆ ನೇಮಕ ಮಾಡಬಾರದು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇದಕ್ಕಾಗಿ ಈಗ ಪ್ರತಿವರ್ಷವೂ ಬಹಳ ಹಣ ವೆಚ್ಚವಾಗುತ್ತಿದೆ. ನಮ್ಮ ದೇಶದಲ್ಲಿರುವ ಹೈಸ್ಕೂಲು, ಮಿಡ್ಲ್ ಸ್ಕೂಲು ಮತ್ತು ಪ್ರೈಮರಿ ಸ್ಕೂಲುಗಳನ್ನು ಗಣನೆಗೆ ತೆಗೆದುಕೊಂಡರೆ, ಒಂದು ಕೋಟಿ 25 ಲಕ್ಷ ರೂಪಾಯಿವರೆಗೆ ಬರೀ ಪ್ರೈಮರಿ ವಿದ್ಯಾಭ್ಯಾಸಕ್ಕೇ ಖರ್ಚಾಗುತ್ತಿದೆ. ಬಾಕಿ ಹೈಸ್ಕೂಲು ಮಿಡ್ಲ್ ಸ್ಕೂಲುಗಳಿಗೆ ಇಷ್ಟು ಖರ್ಚಾಗುತ್ತಿಲ್ಲ. ಎಲ್ಲ ವಿಧದಿಂದಲೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡುವುದು ಕಡಿಮೆ ಎಂದರೆ, ಪ್ರತಿ ವರ್ಷವೂ 500 ಜನ ಉಪಾಧ್ಯಾಯರನ್ನು ಟ್ರೈನ್ ಮಾಡುತ್ತಿದ್ದಾರೆ; ಇದಕ್ಕೆ ಹೆಚ್ಚು ಖರ್ಚಾಗುತ್ತಿದೆಯೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ರೇಂಜ್ ಇನ್ಸ್‌ಪೆಕ್ಟರುಗಳ ವಿಚಾರ ಹೇಳಿದರು. ಯಾವ ರೇಂಜಿನಲ್ಲೂ ಇನ್ಸ್‌ಪೆಕ್ಟರುಗಳು ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ಅವರು ಹೇಳಿದರು. ಅನೇಕ ಕಡೆ ಸರಿಯಾಗಿ ಕೆಲಸಮಾಡುತ್ತಿದ್ದಾರೆ. ಮನುಷ್ಯಸ್ವಭಾವ ಗೊತ್ತೇಇದೆ, ಎಲ್ಲೋ ಕೆಲವು ಕಡೆ ಸಾಕಷ್ಟು ಕೆಲಸ ಮಾಡದೆಯಿರಬಹುದು. ಎಲ್ಲರೂ ತೃಪ್ತಿಕರವಾಗಿ ಕೆಲಸಮಾಡುತ್ತಾರೆಂದು ನಾವು ನಂಬಿದ್ದರೂ ಅಷ್ಟು ಮಟ್ಟಿಗೆ ನಡೆಯುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ; ಅನೇಕ ಸದಸ್ಯರ ಅನುಭವಕ್ಕೆ ಬಂದಿರಬಹುದು. ಡಿಸ್ಟ್ರಿಕ್ಟ್ ಎಜ್ಯುಕೇಷನಲ್ ಆಫೀಸರಿಂದ ರೇಂಜ್ ಇನ್ಸ್‌ಪೆಕ್ಟರುಗಳವರೆಗೆ ಸಾಧ್ಯವಾದ ಮಟ್ಟಿಗೂ ಆಗಾಗ ಎಲ್ಲ ಸ್ಕೂಲುಗಳಿಗೂ ಹೋಗಿ ಇನ್ಸ್‌ಪೆಕ್ಟ್ ಮಾಡಿ ಕೆಲಸ ಮಾಡುತ್ತಾರೆಂದು ವರದಿ ಬರುತ್ತಿದೆ. ಯಾವುದಾದರೂ ಕಡೆ ಸರಿಯಾಗಿ ಕೆಲಸ ಮಾಡದೇಯಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ತಕ್ಕ ಕಾರ್ಯಕ್ರಮ ಕೈಕೊಳ್ಳಲು ಸಿದ್ಧವಾಗಿದ್ದೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಟಿ. ಮಾದಯ್ಯಗೌಡರು.—ರೇಂಜ್ ಇನ್ಸ್‌ಪೆಕ್ಟರುಗಳು ಕೆಲಸ ಮಾಡುತ್ತಿಲ್ಲವೆಂದು ನಾನು ಹೇಳಲಿಲ್ಲ. ಒಬ್ಬೊಬ್ಬರಿಗೆ ನೂರು ಇನ್ನೂರು ಸ್ಕೂಲುಗಳನ್ನು ಕೊಟ್ಟಿರುವುದರಿಂದ ವರ್ಷಕ್ಕೊಂದು ಸಾರಿಯಾದರೂ ಪ್ರತಿ ಸ್ಕೂಲಿಗೂ ಹೋಗಿ ಇನ್ಸ್‌ಪೆಕ್ಟ್ ಮಾಡುವುದಕ್ಕೆ ವ್ಯವಧಾನವಿಲ್ಲ. ಒಬ್ಬೊಬ್ಬರಿಗೆ ಮೂವತ್ತು ಅಥವಾ ನಲವತ್ತು ಸ್ಕೂಲುಗಳನ್ನು ಕೊಟ್ಟು ಹೆಚ್ಚು ರೇಂಜ್ ಇನ್ಸ್‌ಪೆಕ್ಟರುಗಳನ್ನು ನೇಮಕ ಮಾಡಬೇಕೆಂದು ನಾನು ಹೇಳಿದ್ದು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೆಚ್ಚು ರೇಂಜ್ ಇನ್ಸ್‌ಪೆಕ್ಟರುಗಳನ್ನು ನೇಮಕ ಮಾಡಬೇಕೆಂದು ಹೇಳುವುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಇರುವವರು ಸರಿಯಾಗಿ ನಿರ್ವಂಚನೆಯಿಂದ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

ಇನ್ನು ಕೆಲವು ಕಡೆ ಸ್ಕೂಲು ಕಟ್ಟಡಗಳು ಬಿದ್ದುಹೋಗಿವೆ, ಮತ್ತೆ ಕೆಲವು ಕಡೆ ಅರ್ಧ ಕಟ್ಟಡವಾಗಿ ನಿಂತುಹೋಗಿವೆ, ಇನ್ನು ಕೆಲವು ಕಡೆ ಹಣ ಕೊಟ್ಟು ಕಟ್ಟಬೇಕೆಂದು ಹೇಳುತ್ತಿದ್ದರೂ ಕಟ್ಟಿಲ್ಲವೆಂದು ಹೇಳಿದರು. ಇನ್ನೂ ಬೇಕಾದಷ್ಟು ಸ್ಕೂಲುಗಳನ್ನು ಕಟ್ಟಬೇಕೆಂಬುದು ನಿಜ; ಕೆಲವು ಅರ್ಧ ಕೆಲಸವಾಗಿ ನಿಂತುಹೋಗಿರುವುದೂ ನಿಜ. ಈ ಮಾತನ್ನು ಒಪ್ಪಬಹುದು. ಅದರೆ ಕಟ್ಟಡ ಬಿದ್ದುಹೋಗಿರುವ ಕಡೆ ಅಲ್ಲೇ ಸ್ಕೂಲು ಮಾಡುವುದಿಲ್ಲ, ಬೇರೆ ಬಾಡಿಗೆ ಕಟ್ಟಡ ಮಾಡಿಕೊಂಡಿದ್ದಾರೆ. ಬಿದ್ದುಹೋಗಿದ್ದರೂ ಅಲ್ಲೇ ಸ್ಕೂಲು ಮಾಡುತ್ತಿದ್ದಾರೆಂದು ಎಲ್ಲಿಂದಲೂ ನಮಗೆ ವರದಿಬಂದಿಲ್ಲ, ಹಾಗೇನಾದರೂ ಕಟ್ಟಡ ಬಿದ್ದು ಹೋಗಿದ್ದರೆ ತಕ್ಷಣ ಬೇರೆ ಏರ್ಪಾಡು ಮಾಡುತ್ತಾರೆ. ಅನೇಕ ಕಡೆ ಸ್ಕೂಲು ಕಟ್ಟಡಗಳಿಗೆ ರಿಪೇರಿ ಆಗಬೇಕಾಗಿದೆ. ಇದಕ್ಕೆ ಹೆಚ್ಚು ಹಣಬೇಕಾಗಿದೆ. ಪ್ರೈಮರಿ ಸ್ಕೂಲುಗಳ ರಿಪೇರಿಗಾಗಿ 1948–49ನೆಯ ಸಾಲಿನಲ್ಲಿ 85 ಸಾವಿರ ರೂಪಾಯಿಗಳನ್ನೂ 1949–50ರಲ್ಲಿ 85 ಸಾವಿರ ರೂಪಾಯಿಗಳನ್ನೂ 1950-51ರಲ್ಲಿ 85ಸಾವಿರ ರೂಪಾಯಿಗಳನ್ನೂ ಒದಗಿಸಲಾಗಿತ್ತು. 1951–52ನೆಯ ಸಾಲಿಗೆ 1,65,500 ರೂಪಾಯಿಗಳನ್ನು ಒದಗಿಸಲಾಗಿದೆ. ಹೀಗೆ ವರ್ಷವರ್ಷವೂ ಇಷ್ಟು ಹಣವನ್ನು ರಿಪೇರಿಗಾಗಿ ಖರ್ಚು ಮಾಡುತ್ತಿದ್ದೇವೆ. ಹೊಸದಾಗಿ ಕಟ್ಟಡಗಳನ್ನು ಕಟ್ಟಿಸಲು 1948-49ರಲ್ಲಿ 10 ಲಕ್ಷ ರೂಪಾಯಿಗಳು, 1949-50ರಲ್ಲಿ 7 ಲಕ್ಷದ 22 ಸಾವಿರ ರೂಪಾಯಿಗಳು, 1950–51ರಲ್ಲಿ 3ಲಕ್ಷ ಮತ್ತು 1951–52ರಲ್ಲಿ 3 ಲಕ್ಷ ರೂಪಾಯಿಗಳು, ಹೀಗೆ ಒದಗಿಸಿದೆ. ವಿದ್ಯಾಭ್ಯಾಸಕ್ಕಾಗಿ ನಾವು ಖರ್ಚು ಮಾಡುತ್ತಿರುವುದು, ಮೈಸೂರು ದೇಶದ ಒಟ್ಟು ಉತ್ಪತ್ತಿಯಲ್ಲಿ ಎಷ್ಟು ದೊಡ್ಡ ಭಾಗವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇಷ್ಟು ಖರ್ಚನ್ನು ಇಡೀ ಇಂಡಿಯಾ ದೇಶದಲ್ಲಿ ಇನ್ನೆಲ್ಲೂ ಮಾಡುತ್ತಿಲ್ಲವೆಂಬುದೂ ಅವರಿಗೇ ಗೊತ್ತಿದೆ. ಆದರೂ ಇನ್ನೂ ಹೆಚ್ಚು ಮಾಡಬೇಕೆಂದು ನಮ್ಮ ಆಶೆ. ಅವಕಾಶವಾದ ಹಾಗೆಲ್ಲ ಒಳ್ಳೆಯ ಸ್ಕೂಲು ಕಟ್ಟಡಗಳನ್ನು ಕೊಟ್ಟು, ಸ್ಕೂಲು ಕಟ್ಟಡಗಳ ರಿಪೇರಿ ಮಾಡಿಸಿ ಹೆಚ್ಚು ಹೆಚ್ಚು ಕಟ್ಟಡಗಳನ್ನು ಕಟ್ಟಿಸಿ ಅನುಕೂಲಮಾಡಬೇಕೆಂಬುದು ಸರ್ಕಾರದವರ ಆಸೆ. ಆದರೆ ಎಲ್ಲವೂ ಒಂದೇ ಕಾಲದಲ್ಲಿ ತೃಪ್ತಿಯಾಗುವಷ್ಟು

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.)

ಮಟ್ಟಿಗೆ ಆಗುತ್ತದೆಂಬ ಧೈರ್ಯ ನನಗಿಲ್ಲ. ಅಂತಹ ಹಣಕಾಸಿನ ಪರಿಸ್ಥಿತಿ ಈಗ ದೇಶದಲ್ಲಿಲ್ಲ. ಕೆಲವು ಕಡೆ ಕಟ್ಟಡಗಳು ಅರ್ಧಾಂತಕವಾಗಿವೆ ಎಂದು ಮಾನ್ಯ ಸದಸ್ಯರು ಹೇಳಿದರು. ಅಲ್ಲದೆ ಡೊನೇಷನ್ ಕೊಟ್ಟಿರುವ ಕಟ್ಟಡಗಳು ಆಗಿಲ್ಲವೆಂದು ಹೇಳಿದರು. ಈ ವಿಷಯವಾಗಿ ಈ ಸಾಯಿ ಬಡ್ಜೆಟ್ ಅಧಿವೇಶನದಲ್ಲಿ ಮೊದಲೇ ಹೇಳಿದ್ದೇನೆ. ಈ ಸಾರಿ ಅರ್ಧದಲ್ಲಿ ನಿಂತಿರುವ ಕಟ್ಟಡಗಳನ್ನು ಪೂರೈಸಲು ಏರ್ಪಾಡು ಮಾಡುತ್ತೇವೆ. ಡೊನೇಷನ್ ಕೊಟ್ಟಿರುವ ಕಟ್ಟಡಗಳನ್ನು ಕಟ್ಟಿಸಬೇಕೆಂದು ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಲಾಗಿದೆ. ಈ ಎರಡಕ್ಕೂ ಹೆಚ್ಚು ಗಮನ ಕೊಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿರುವ ಉತ್ತಮವಾದ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕೈಲಾದ ಮಟ್ಟಿಗೂ ಉತ್ತಮಪಡಿಸುವುದಕ್ಕೆ ಪ್ರಯತ್ನಮಾಡುತ್ತೇವೆ. ಆದುದರಿಂದ ಈ ಠರಾವನ್ನು ವಾಪಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಟಿ. ಮಾದಯ್ಯಗೌಡರು.—ಸ್ಕೂಲುಗಳಿಗೆ ಕೈತೋಟ ಮತ್ತು ಮೈದಾನಗಳನ್ನು ಮಾಡಿಸುವ ವಿಚಾರ ಹೇಳಲಿಲ್ಲ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು —ಈ ವಿಚಾರದಲ್ಲಿ ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂಬುದನ್ನು ಮನಗಂಡು ಈಗಾಗಲೇ ಈ ವಿಚಾರವನ್ನು ಪರೀಕ್ಷೆ ಮಾಡುತ್ತಿದ್ದಾರೆ. ಯಾವ ಯಾವ ಊರಿನಲ್ಲಿ ಕೈತೋಟ ಮಾಡಿಸಬಹುದು, ಎಷ್ಟೆಷ್ಟು ಹಣ ಬೇಕಾಗುತ್ತದೆ ಎಂಬ ವಿಚಾರ ಪರಿಶೀಲನೆಯಲ್ಲಿದೆ.

ಶ್ರೀ ಟಿ. ಮಾದಯ್ಯಗೌಡರು.—ದಕ್ಷತೆಯಿಂದ ಸ್ಕೂಲುಗಳು ನಡೆಯುವಂತೆ ಏರ್ಪಾಡು ಮಾಡುತ್ತಾರೆಂದು ನಂಬಿ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The resolution was, by leave of the House, withdrawn.

The House adjourned for Lunch at Thirty Minutes past Three of the Clock and reassembled at Ten Minutes past Four of the Clock, Mr. Speaker (The Hon'ble Sri V. Venkatappa) in the Chair.

RESOLUTION No. 16.

Instruction in Kannada Medium in Primary & Middle Schools.

*Sri B. BORANNA GOWDA (Hassan District-General).—Sir, I beg to move:

"That this Assembly is of the opinion that instruction should be given only through the Kannada medium in the Primary and Middle Schools of the State."

ಈ ರೀತಿಯಾಗಿ ನನ್ನ ನಿರ್ಣಯವಿದೆ. ಇದಕ್ಕೆ ಕೆಲವು ಕಾರಣಗಳನ್ನು ನಾನೀಗ ಕೊಡಬೇಕಾಗಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಪಾಠಗಳನ್ನು ಕನ್ನಡದಲ್ಲೇ ಬೋಧಿಸುವಂತೆ ಮಾಡಬೇಕೆಂಬುದೇ ನನ್ನ ನಿರ್ಣಯದ ಮುಖ್ಯ ಗುರಿ. ಬಾಲಕರುಗಳಿಗೆ ಮಾತೃ ಭಾಷೆಯಾವುದಿದೆಯೋ ಅದರಲ್ಲೇ ಅವರಿಗೆ ಶಿಕ್ಷಣ ಕೊಡಬೇಕೆಂದು ನಮ್ಮ ರಾಜ್ಯಾಂಗ ವಿಧಿಯಲ್ಲೂ ಕೂಡ ಹೇಳಲಾಗಿದೆ. ಕೆಲಕೆಲವು ಮಾಧ್ಯಮಿಕ ಶಾಲೆಗಳಲ್ಲಿ ಬೋಧನಾಕ್ರಮವನ್ನು ತೆಲುಗಿನಲ್ಲೂ, ಕೆಲವು ಉರ್ದು ಭಾಷೆಯಲ್ಲೂ ಮತ್ತೆ ಕೆಲವುಗಳಲ್ಲಿ ತಮಿಳು ಭಾಷೆಯಲ್ಲೂ ಕೊಡಲಾಗುತ್ತಿದೆ. ಆದರೆ ನಮ್ಮದು ಕನ್ನಡ ನಾಡು. ಆದಾಗ್ಯೂ ಇಲ್ಲಿರತಕ್ಕ ಸೆಕೆಂಡರಿ ಸ್ಕೂಲುಗಳಲ್ಲಿಯೂ ಮತ್ತು ಕಾಲೇಜುಗಳಲ್ಲಿಯೂ ಆಂಗ್ಲೇಯ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿಯೂ, ದೇಶಭಾಷೆಯಾದ ಕನ್ನಡವನ್ನು ಎರಡನೇ ದರ್ಜೆಯ ಭಾಷೆಯನ್ನಾಗಿಯೂ ಪರಿಗಣಿಸಿರತಕ್ಕದ್ದು ಖಂಡಿತ ಸರಿಯಾದದ್ದಲ್ಲ. ನಮ್ಮ ವಿದ್ಯಾ ಇಲಾಖೆಯಲ್ಲಿ ತಿಳಿದಂಥ ಜ್ಞಾನಿಗಳೂ, ವಿದ್ಯಾವಂತರೂ ಬಹಳವಾಗಿದ್ದಾರೆ. ಅವರಿಂದ ಪಠ್ಯ ಪುಸ್ತಕ ಇಂಥಾದ್ದನ್ನೆಲ್ಲಾ ತಯಾರು ಮಾಡಿಸಿ, ಅವರು ಕನ್ನಡ ಭಾಷೆಯಲ್ಲೇ ಅಲ್ಲಿ ಪಾಠ ಮಾಡುವಂತೆ ಹೇಳಿದರೆ ಮಾಡತಕ್ಕಂಥ ದಕ್ಷರು ನಮ್ಮ ವಿದ್ಯಾ ಇಲಾಖೆಯಲ್ಲಿದ್ದಾರೆ. ಆದರೆ ಕನ್ನಡವನ್ನು ಐಚ್ಛಿಕ ಭಾಷೆಯನ್ನಾಗಿ ಮಾಡಿದೆ. ಇದನ್ನು ಪ್ರಾಧಾನ್ಯ ಭಾಷೆಯಾಗಿ ಮಾಡಿ ಇನ್ನುಳಿದವುಗಳನ್ನು ಐಚ್ಛಿಕ ಭಾಷೆಯಾಗಿ ಮೇಲು ದರ್ಜೆ ಶಾಲೆಗಳಲ್ಲಿ ಮಾಡಬಹುದು. ಆದರೆ ಅಲ್ಲಿಯ ತನಕ ಮುಟ್ಟುವುದರೊಳಗಾಗಿಯೇ ಪ್ರತಿಯೊಬ್ಬ ಹುಡುಗನಿಗೂ ಈ ಪ್ರಾಥಮಿಕ ಮತ್ತು ಮಾಧ್ಯಮಿ ಶಾಲೆಗಳಲ್ಲಿ ಬರಿ ಕನ್ನಡ ಒಂದರಲ್ಲೇ ಅಭ್ಯಾಸಕ್ರಮವನ್ನು ನಡೆಸುವಂತೆ ಮಾಡಬೇಕೇ ಶಿವಾಯಿ, ಇಂಗ್ಲೀಷ್ ಇತ್ಯಾದಿ ಇತರ ಭಾಷೆಗಳನ್ನು ಇಡತಕ್ಕದ್ದು ಸರಿಯಾದದ್ದಲ್ಲ. ಹೈಸ್ಕೂಲು ನಂತರ ನಡೆಸಬಹುದಾದ ವಿದ್ಯಾಭ್ಯಾಸಕ್ಕೆ ಈ ಐಚ್ಛಿಕ ಭಾಷೆಗಳನ್ನು ನಡೆಸಲು ಅವಕಾಶ ಕೊಟ್ಟರೂ ಕೊಡಬಹುದು. ಅಂತೂ ಮಾತೃ ಭಾಷೆಯಾದ ಕನ್ನಡಕ್ಕೇ ಎಲ್ಲಾ ಶಾಲೆ ಕಾಲೇಜುಗಳಲ್ಲೂ ಪ್ರಥಮ ಸ್ಥಾನ ಕೊಡಬೇಕೆಂಬುದೇ ನನ್ನ ನಿರ್ಣಯದ ಮುಖ್ಯ ಗುರಿ. ಕೆಲವು ಕಡೆ ಒಂದೊಂದು ಪಾಠಶಾಲೆಯಲ್ಲಿ ಒಂದೊಂದು ಭಾಷೆಯನ್ನು ಅಂದರೆ ಕೆಲವು ತೆಲುಗಿನಲ್ಲೂ, ಕೆಲವು ಉರ್ದು ಭಾಷೆಯಲ್ಲೂ ಮತ್ತೆ ಕೆಲವುಗಳಲ್ಲಿ ತಮಿಳು ಭಾಷೆಯಲ್ಲೂ ಪಾಠಗಳನ್ನು ನಡೆಸುವುದು ಸರಿಯಲ್ಲ. ಇದನ್ನೆಲ್ಲಾ ತಪ್ಪಿಸಿ, ಪ್ರತಿಯೊಂದು ಕಡೆಯೂ ಪಾಠಗಳನ್ನು ಕನ್ನಡದಲ್ಲೇ ಹೇಳುವಂತೆ ಮಾಡಿದರೆ ಒಂದೊಂದು ಊರಿಗೂ ಈ ತೆರನಾಗಿ ಒಂದೊಂದು ಉರ್ದು ಸ್ಕೂಲು, ಒಂದೊಂದು ತೆಲುಗಿನ ಸ್ಕೂಲು, ಹೀಗೆ ಒಂದೇ ಊರಿನಲ್ಲಿ ನಾಲ್ಕೈದು ಸ್ಕೂಲುಗಳನ್ನು ಕೊಡತಕ್ಕ ಕಷ್ಟ ಸಹ ತಪ್ಪಿಹೋಗುತ್ತದೆ. ಆಗ ಉಳಿಯತಕ್ಕ ಉಪಾಧ್ಯಾಯರನ್ನು ಎಲ್ಲೆಲ್ಲಿ ಪಾಠಶಾಲೆಗಳಿಲ್ಲವೋ ಅಲ್ಲಿಗೆ ಕಳುಹಿಸಿ, ಅಲ್ಲಿ ಪಾಠಶಾಲೆಗಳನ್ನೇರ್ಪಡಿಸಲು ಅನುಕೂಲವಾಗುತ್ತೆ. ಈ ದೃಷ್ಟಿಯಿಂದಲೂ ಮತ್ತು ಕನ್ನಡವೇ ನಮ್ಮ ನಾಡಿನ ಪ್ರಥಮ ಭಾಷೆಯಾಗಿರಬೇಕೆಂಬ ದೃಷ್ಟಿಯಿಂದಲೂ ನಾನು ಈ ನಿರ್ಣಯವನ್ನು ತಂದಿದ್ದೇನೆ. ಈ ನಿರ್ಣಯಕ್ಕೆ ಸಭೆಯವರೆಲ್ಲರೂ ಬೆಂಬಲನೀಡಬೇಕೆಂದು ಹೇಳಿ ನಾನು ಇದನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved :

"That this Assembly is of the opinion that instruction should be given only through the Kannada medium in the Primary and Middle Schools of the State."

Sri M. GOVINDA REDDY (Chitaldrug District–General).—I seek some information from the Hon'ble Mover. Does he mean to say that vernacular schools like Telugu primary schools and Middle schools, Urdu primary schools and middle schools should not exist and Kannada schools alone should remain ?

Sri B. N. BORANNA GOWDA—That is the idea.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).— ಸ್ವಾಮಿ, ಶ್ರೀಮಾನ್ ಬೋರಣ್ಣಗೌಡರು ತಂದಿರತಕ್ಕ ನಿರ್ಣಯವನ್ನು ಈಗ ಅದು ಇರತಕ್ಕ ರೀತಿಯಲ್ಲೇ ಒಪ್ಪಿಕೊಳ್ಳಬೇಕೆಂದರೆ ಅದು ಆಗತಕ್ಕ ಮಾತಲ್ಲ. ಹಾಗೆ ನಾವು ಈ ನಿರ್ಣಯವನ್ನು ಒಪ್ಪಿಕೊಂಡರೆ ಬಹಳ ತೊಂದರೆಗಳಾಗಬಹುದು. ಈಗಾಗಲೇ ಶ್ರೀ ಎಂ. ಗೋವಿಂದರೆಡ್ಡಿಯವರು ತಿಳಿಸಿದಂತೆ ಕೆಲವು ಕಡೆ ಹುಡುಗರಿಗೆ ಉರ್ದು ವಿನಾ ಕನ್ನಡದಲ್ಲಿ ಪಾಠ ಹೇಳಿದರೆ ಅವರಿಗೆ ಅದು ಅರ್ಥವೇ ಆಗುವುದಿಲ್ಲ. ಅದೇ ರೀತಿ ಇನ್ನು ಕೆಲವು ಕಡೆ ಉದಾಹರಣೆಗೆ ಕೆ. ಜಿ. ಎಫ್. ಇತ್ಯಾದಿ ಕಡೆಗಳಲ್ಲಿ ತಮಿಳು ವಿನಾ ಮತ್ತೆ ಯಾವ ಭಾಷೆಯಲ್ಲಿ ಅಲ್ಲಿನ ಮಕ್ಕಳಿಗೆ ಪಾಠ ಹೇಳಿದರೂ ಅದು ಗೊತ್ತೇ ಆಗುವುದಿಲ್ಲ. ಹೀಗೆ ಅನೇಕ ಕಡೆ ತೆಲುಗು, ಮಹಾರಾಷ್ಟ್ರ ಇತ್ಯಾದಿ ಸ್ಕೂಲುಗಳಿದ್ದು ಆ ಹುಡುಗರಿಗೆ ಅವರವರ ಮಾತೃ ಭಾಷೆಯಲ್ಲಿ ಪಾಠ ಹೇಳಿದರೆ ಅದು ಅವರಿಗೆ ಚೆನ್ನಾಗಿ ಅರ್ಥವಾಗುತ್ತದೆಯೇ ವಿನಾ ಹೀಗೆ ಕನ್ನಡ ಒಂದರಲ್ಲೇ ಈ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಕೊಡಬೇಕೆಂದರೆ ಅದು ಸಾಧ್ಯವಿಲ್ಲದ ವಿಚಾರ. ಸಣ್ಣ ಸಣ್ಣ ಬಾಲಕರುಗಳಿಗೆ ಯಾವಾಗಲೂ ಅವರವರ ಮಾತೃಭಾಷೆಯಲ್ಲೇ ಅವರಿಗೆ ಪಾಠ ಹೇಳಬೇಕೆಂದು ಮಾಡಿರತಕ್ಕದ್ದು ಬಹಳ ಪ್ರಾಮುಖ್ಯವಾದ ವಿಚಾರ. ಹೀಗೆ 5 ವರ್ಷದ ಮೇಲ್ಪಟ್ಟ 10 ವರ್ಷದ ವಯಸ್ಸಿನೊಳಗಿರತಕ್ಕ ಬಾಲಕರುಗಳಿಗೆಲ್ಲಾ ಅವರ ಮಾತೃ ಭಾಷೆಯಲ್ಲೇ ಪಾಠ ಹೇಳಬೇಕೆಂಬ ಅಂಶ ನಮ್ಮ ರಾಜ್ಯಾಂಗದಲ್ಲಿಯೂ ಸಹ ತಿಳಿಸಲಾಗಿದೆ. ಅನ್ಯ ಭಾಷೆಯನ್ನಾಡತಕ್ಕ ಯಾವ ಜನರೇ ಆಗಲೀ ಅವರು ಯಾವ ದೇಶದಲ್ಲೇ ಇರಲಿ ಅವರಿಗೆ ಪ್ರಾಥಮಿಕ ಶಾಲೆಗಳಲ್ಲಿ ಪಾಠಗಳನ್ನು ಅವರವರ ಮಾತೃಭಾಷೆಯಲ್ಲೇ ಹೇಳಬೇಕೆಂಬ ನಿಯಮವಿದೆ. ನಮ್ಮದು ಕನ್ನಡ ರಾಜ್ಯವೇನೋ ಹೌದು. ಆದರೆ ಇಲ್ಲಿ ಇಂಗ್ಲೀಷಿಗಿರತಕ್ಕ ಪ್ರಾಧಾನ್ಯತೆಯನ್ನು ತಪ್ಪಿಸಿ, ಅದನ್ನು ಕನ್ನಡಕ್ಕೆ ಕೊಡಬೇಕೆಂದು ಕೇಳಿದ್ದರೆ ಅದಕ್ಕೆ ನಾವೆಲ್ಲರೂ ಒಪ್ಪಿಗೆ ಕೊಡಬಹುದಾಗಿತ್ತು. ಹಾಗೆ ಕನ್ನಡಕ್ಕೆ ಪ್ರಥಮ ಸ್ಥಾನ ಕೊಡಬೇಕೆಂಬುದಕ್ಕೆ ಯಾರದೂ ವಿರೋಧವಿಲ್ಲ. ಇಷ್ಟೇ ಅಲ್ಲದೆ ಮುಂದಕ್ಕೆ ಹೈಸ್ಕೂಲು ಮತ್ತು ಕಾಲೇಜುಗಳಲ್ಲೆಲ್ಲಾ ಪಾಠ ಪ್ರವಚನಗಳನ್ನು ಕನ್ನಡದಲ್ಲೇ ಮಾಡಬೇಕೆಂದು ವಿಧಾಯಕ ಮಾಡುವುದಕ್ಕೂ ಸಹ ನಮ್ಮ ಅಡ್ಡಿಯಿಲ್ಲ. ಹಾಗಿಲ್ಲದೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲೆಲ್ಲಾ ಬರಿ ಕನ್ನಡ ಒಂದರಲ್ಲೇ ಪಾಠ ಹೇಳುವಂತೆ ಮಾಡಬೇಕೆಂದರೆ ಅದರಿಂದ ತುಂಬಾ ತೊಂದರೆಗಳಾಗುತ್ತವೆ. ಉದಾಹರಣೆಗೆ ಹೇಳಬೇಕೆಂದರೆ ಮುಳುಬಾಗಿಲು, ಚಿಂತಾಮಣಿ ಮತ್ತು ಬಾಗೇಪಲ್ಲಿ ಇತ್ಯಾದಿ ಸ್ಥಳಗಳಲ್ಲಿರತಕ್ಕ ಬಾಲಕರುಗಳಿಗೆ ಕನ್ನಡ ಅರ್ಥವೇ ಆಗುವುದಿಲ್ಲ. ನಾವು ಕನ್ನಡದಲ್ಲಿ ಏನೇ ಭಾಷಣ ಮಾಡಿದರೂ ಅದು ಅವರಿಗೆ ಗೊತ್ತೇ ಆಗುವುದಿಲ್ಲ. ಇದನ್ನೆಲ್ಲಾ ನಾವು ಎಲೆಕ್ಷನ್ ಕಾಲದಲ್ಲಿ ನೋಡಿ ಅನುಭವಿಸಿದ್ದೇವೆ. ಒಂದಾವರ್ತಿ ನಾನು ರಾಯಚೂರಿಗೆ ಹೋಗಿದ್ದಾಗ ಅಲ್ಲಿನವರು ಪುರಂದರದಾಸರ ಕೀರ್ತನೆಗಳನ್ನೆಲ್ಲಾ ಉರ್ದು ಭಾಷೆಯಲ್ಲಿ ಬರೆದುಕೊಂಡು ಭಜನೆ ಮಾಡುತ್ತಿದ್ದುದು ಕಂಡು ಬಂತು. 1930ರಲ್ಲಿ ಅಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ನಡೆಸಿದ ಸಂದರ್ಭದಲ್ಲಿ ನಾವೆಲ್ಲರೂ ಅಲ್ಲಿಗೆ ಹೋಗಿದ್ದಾಗ್ಯೆ ಅವರು ಆ ರೀತಿ ಉರ್ದು ಭಾಷೆಯಲ್ಲಿ ದೇವರನಾಮಗಳನ್ನೆಲ್ಲಾ ಬರೆದು ಕೊಂಡು ಹೇಳುತ್ತಿದ್ದುದು ಕಂಡು ಬಂತು. ಈಗ ಅದೇ ರೀತಿ ಬಾಗೇಪಲ್ಲಿ ಇತ್ಯಾದಿ ಕಡೆಗಳಲ್ಲಿರತಕ್ಕ ಬಾಲಕರು ತೆಲುಗಿನಲ್ಲಿ ಅಕ್ಷರಗಳನ್ನು ಬರೆದುಕೊಂಡು ಕನ್ನಡವನ್ನು ಕಲಿಯಬೇಕಾಗುತ್ತದೆ. ಹೀಗೆ ಮಾಡಿದರೆ ಎಳೆಯ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ಬಹುಸಂಖ್ಯಾತರಾಗಿರುವವರು ಮಾಡತಕ್ಕ ಇಂಥಾ ಒತ್ತಾಯಕ್ಕೆ ಯಾರೂ ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ಈ ರೀತಿಯಾಗಿ ತಂದಿರತಕ್ಕ ನಿರ್ಣಯವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲವಾಗಿದೆ. ಪ್ರೈಮರಿ ಸ್ಟೇಜಿನಲ್ಲಿ ಕನ್ನಡ ಮಾಧ್ಯಮವನ್ನು ಒತ್ತಾಯ ಮಾಡಿದರೆ ಅಲ್ಪಸಂಖ್ಯಾತರಿಗೆ ಬಹಳ ತೊಂದರೆ. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಬಹಳ ಜನ ತಮಿಳು ಭಾಷೆಯನ್ನಾಡುತ್ತಾರೆ. ಅಂಥವರಿಗೆ ಈ ನಿರ್ಣಯವನ್ನು ಒಪ್ಪಿದರೆ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ಇದನ್ನು ಒತ್ತಾಯ ಮಾಡಬಾರದೆಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).— ಸ್ವಾಮಿ, ಶ್ರೀ ಬೋರಣ್ಣಗೌಡರು ತಂದಿರುವ ನಿರ್ಣಯವನ್ನು ಅನುಮೋದಿಸುತ್ತೇನೆ. ಇದು ಒಪ್ಪತಕ್ಕದ್ದೇ. ಈಗತಾನೆ ಶ್ರೀ ಸಂಪಂಗಿರಾಮಯ್ಯನವರು ಹೇಳಿದರು, ಮಾತೃ ಭಾಷೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ ಎಂದು. ಆದರೆ ಮಾತೃಭಾಷೆ ತಪ್ಪಿಸಬೇಕೆಂದು ಇದರಿಂದ ಅರ್ಥವಾಗುವುದಿಲ್ಲ. ಕನ್ನಡಕ್ಕೆ ಪ್ರಾಮುಖ್ಯತೆ ಕೊಡಬೇಕೆಂದು ಹೇಳಿದೆ. ಮಾತೃ ಭಾಷೆಯನ್ನು ಬೇಕಾದರೆ ಸೆಕೆಂಡ್ ಲ್ಯಾಂಗ್ವೇಜ್ ಆಗಿ ಇಟ್ಟುಕೊಳ್ಳಬಹುದು.

ಅಧ್ಯಕ್ಷರು.—ಪ್ರೈಮರಿ ಸ್ಕೂಲುಗಳಲ್ಲಿ ಮಾತೃ ಭಾಷೆಯನ್ನು ಹೇಗೆ ಸೆಕೆಂಡ್ ಲ್ಯಾಂಗ್ವೇಜ್ ಆಗಿ ಮಾಡುವುದು ?

ಶ್ರೀ ಬಿ. ಹುಚ್ಚೇಗೌಡರು.—ಪ್ರೈಮರಿ ಸ್ಕೂಲಿಗೆ ಸೇರಬೇಕಾದರೆ ಆರು ವರ್ಷಗಳ ವಯಸ್ಸಾಗಿರಬೇಕೆಂದು ನಿಷ್ಕರ್ಷೆ ಮಾಡಿದ್ದಾರೆ. ಮುಕ್ಕಾಲು ಪಾಲು ಜನರಿಗೆ ಕನ್ನಡ ಬಂದೇ ಬರುತ್ತದೆ.

ಅಧ್ಯಕ್ಷರು.—ಬಾರದೇ ಇರುವವರ ಮಾತು ಅವರು ಹೇಳಿರುವುದು !

ಶ್ರೀ ಬಿ. ಹುಚ್ಚೇಗೌಡರು.— ಮುಖ್ಯವಾಗಿ ಕನ್ನಡ ಎಲ್ಲರಿಗೂ ಬಂದೇ ಬರಬೇಕೆಂಬುದು ಇದರ ಉದ್ದೇಶ.

ಅಧ್ಯಕ್ಷರು.—ಅದಕ್ಕೆ ಆಕ್ಷೇಪಣೆಯಿಲ್ಲ. ಮಿಡ್ಲ್ ಸ್ಕೂಲು ಆದಮೇಲೆ ತೆಗೆದುಕೊಳ್ಳಿ ಎಂದು ಅವರು ಹೇಳುವುದು.

ಶ್ರೀ ಬಿ. ಹುಚ್ಚೇಗೌಡರು.—ಇದುವರೆಗೆ ಇಂಗ್ಲೀಷಿಗೆ ಪ್ರಾಶಸ್ತ್ಯ ಕೊಡುತ್ತಿದ್ದಂತೆ ಇನ್ನು ಮೇಲೆ ಕನ್ನಡಕ್ಕೆ ಹೆಚ್ಚು ಮನ್ನಣೆ ಕೊಡಬೇಕು. ಈಗ ಮಿಡ್ಲ್ ಸ್ಕೂಲಿನಲ್ಲಿ ಉರ್ದು ತೆಗೆದುಕೊಂಡು ಮತ್ತೆ ಕನ್ನಡ ತೆಗೆದು

(ಶ್ರೀ ಬಿ. ಹುಚ್ಚೇಗೌಡರು.)

ಕೊಂಡು ಅನೇಕರು ತೇರ್ಗಡೆ ಹೊಂದಿ ಹೈಸ್ಕೂಲಿಗೆ ಬರುತ್ತಾರೆ. ಹೈಸ್ಕೂಲಿನಲ್ಲಿ ಉರ್ದು ಓದಿದವರು ಕನ್ನಡ ಒಪ್ಪದೆ ಇಂಗ್ಲೀಷ್ ಮೀಡಿಯಂ ಕೇಳುತ್ತಾರೆ. ಅವರಿಗೋಸ್ಕರ ಇಂಗ್ಲೀಷ್ ಮೀಡಿಯಂ ಇಡಬೇಕಾಗುತ್ತದೆ. ಈ ತರಹ ತೊಂದರೆಯಿದೆ; ಆದ್ದರಿಂದ ಕನ್ನಡಕ್ಕೆ ಪ್ರಾಮುಖ್ಯತೆ ಕೊಡಬೇಕು. ಮಾತೃಭಾಷೆಯು ಬೇರೆ ಆಗಿರುವವರಿಗೆ ಅವರ ಭಾಷೆ ಕಲಿತುಕೊಳ್ಳುವುದಕ್ಕೆ ಅಡ್ಡಿಯೇನೂ ಇಲ್ಲ. ಈಗ ನಿರ್ಣಯದಲ್ಲಿ ಹೇಳಿರುವ ರೀತಿ ಪ್ರೈಮರಿ ಸ್ಕೂಲುಗಳಲ್ಲಿ ಪ್ರಯತ್ನ ಮಾಡಬಹುದು. ಅಂತೂ ಕನ್ನಡಕ್ಕೆ ಪ್ರಥಮ ಸ್ಥಾನ ಕೊಡಬೇಕು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಅಧ್ಯಕ್ಷರೇ, ಈಗ ತಾನೆ ಶ್ರೀ ಸಂಪಂಗಿರಾಮಯ್ಯನವರು ಹೇಳಿದ ಹಾಗೆ ಈ ನಿರ್ಣಯವನ್ನು ಒಪ್ಪುವುದಕ್ಕಾಗುವುದಿಲ್ಲ. ಇದರ ಪ್ರಕಾರ ಪ್ರೈಮರಿ ಸ್ಕೂಲಿನಲ್ಲಿ ಕನ್ನಡ ಮಾಧ್ಯಮವಿರಬೇಕೆಂದು ಹೇಳುತ್ತಾರೆ. ಸಾಮಾನ್ಯವಾಗಿ ರಾಜ್ಯಾಂಗದಲ್ಲೂ ಸಹ ಅವರವರ ಮಾತೃಭಾಷೆಯನ್ನು ಕನಿಷ್ಠ ಪಕ್ಷ ಪ್ರೈಮರಿ ಸ್ಕೂಲುಗಳಲ್ಲಾದರೂ ಕಲಿತುಕೊಳ್ಳಬಹುದು ಎಂದು ಅದಕ್ಕೆ ಪ್ರಾಶಸ್ತ್ಯಕೊಟ್ಟು ಅವಕಾಶ ಮಾಡಿದ್ದಾರೆ. ಮಾತೃಭಾಷೆಯಲ್ಲೇ ಈಗ ಪ್ರೈಮರಿ ಸ್ಕೂಲುಗಳಲ್ಲಿ ಬೋಧಿಸುತ್ತಿದ್ದಾರೆ. ಮಿಡ್ಲ್ ಸ್ಕೂಲು ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಎಲ್ಲಾ ಕನ್ನಡದಲ್ಲೇ ಆಗಬೇಕೆಂದು ಹೇಳಿದರೆ ಅನೇಕ ಗ್ರಂಥಗಳು ತರ್ಜುಮೆಯಾಗಬೇಕು, ತೊಂದರೆಯಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಪ್ರೈಮರಿ ಸ್ಕೂಲುಗಳಲ್ಲಿ ಮಾತೃಭಾಷೆಯನ್ನು ಕಲಿಯುವುದಕ್ಕೆ ಅವಕಾಶವಿಲ್ಲದಿದ್ದರೆ, ಕನ್ನಡ ಮಾಧ್ಯಮವನ್ನು ಮಾತ್ರ ಜಾರಿಗೆ ತಂದರೆ ಫಂಡಮೆಂಟಲ್ ರೈಟ್ಸ್ ಪ್ರಶ್ನೆ ಬರುತ್ತದೆ. ಈ ರೀತಿ ತೊಂದರೆಯಿದೆ. ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಮಿಡ್ಲ್ ಸ್ಕೂಲು ವಿಚಾರದಲ್ಲಿ ಬೇರೊಂದು ನಿರ್ಣಯವಿದೆ, ಅದು ಬಂದ ಸಂದರ್ಭದಲ್ಲಿ ಅದರ ವಿಚಾರ ಹೇಳುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕು.

Sri B. BORANNA GOWDA.—I seek the leave of the House to withdraw the resolution.

The resolution was, by leave of the House, withdrawn.

RESOLUTION No. 17.

Constitution of a Committee to suggest measures for speedy upliftment of Depressed classes.

ಶ್ರೀ ಎಂ. ಸಿ. ವೆಂಕಟೇಶ್ವರವರು (ಮಂಡ್ಯ ಜಿಲ್ಲೆ ನಿಮ್ನ ಪಂಗಡ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ.—

"That this Assembly is of the opinion that a committee be constituted to sugest measures and schemes for the speedy amelioration or the upliftment of the Depres d classes in the State."

ಸ್ವಾಮಿ, ದೇಶದಲ್ಲಿ ಹರಿಜನರ ಪ್ರಗತಿಯಾದ ಹೊರತು ದೇಶಪ್ರಗತಿಯಾಗಲಾರದು ಎಂಬ ತತ್ವವನ್ನು ಎಲ್ಲಾ ಒಪ್ಪಿದ್ದಾರೆಂದು ನಾನು ನಂಬಿದ್ದೇನೆ. ಇದಕ್ಕಾಗಿ ಸರ್ಕಾರದವರು, ಕಾಂಗ್ರೆಸ್ ಸಂಸ್ಥೆಯವರು, ಹರಿಜನ ಸೇವಾ ಸಂಘದವರು ಮತ್ತು ಇತರ ಖಾಸಗಿ ಮನುಷ್ಯರು ಹತ್ತಾರು ವರ್ಷಗಳಿಂದ ನೂರಾರು ರೀತಿಯಲ್ಲಿ ನಮ್ಮ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡಿದ್ದಾರೆ. ಆದರೆ ಈ ಅಭಿವೃದ್ಧಿ ಕಾರ್ಯಗಳು ನಡೆದು ಅಭಿವೃದ್ಧಿಯು ಯಾವ ಮಟ್ಟಕ್ಕೆ ಬಂದಿದೆ, ಎಷ್ಟು ಆಗಬೇಕಾಗಿತ್ತು, ಇನ್ನೆಷ್ಟು ವರ್ಷಗಳಲ್ಲಿ ಸರಿಯಾದ ಮಟ್ಟಕ್ಕೆ ಬರಬಹುದು ಎಂಬ ಒಂದು ಸರಿಯಾದ ಯೋಜನೆಯನ್ನು ಇಟ್ಟುಕೊಂಡಿಲ್ಲವೆಂದು ನನಗೆ ಕಂಡುಬರುತ್ತದೆ. ಭಾರತ ರಾಜ್ಯಾಂಗದಲ್ಲಿ ಇನ್ನು ಹತ್ತು ವರ್ಷಗಳ ಅವಧಿಯಲ್ಲಿ ನಮ್ಮ ಆಗುಹೋಗುಗಳು ಬಗೆಹರಿಯಬೇಕೆಂದು ಒಂದು ನಿರ್ದಿಷ್ಟವಾದ ಕಾನೂನನ್ನು ಸಹ ಮಾಡಿದ್ದಾರೆ. ಈಗಾಗಲೇ ಈ ಕಾನೂನು ಜಾರಿಗೆ ಬಂದು ಒಂದು ವರ್ಷ ಕಳೆದುಹೋಗಿದೆ. ಇನ್ನು ಒಂಬತ್ತು ವರ್ಷಗಳಲ್ಲಿ ಸಂಸ್ಥಾನಾದ್ಯಂತ ನಮ್ಮ ಆಗುಹೋಗುಗಳು ಯಾವ ರೀತಿಯಿವೆ, ವಿದ್ಯಾಭ್ಯಾಸ ಕ್ರಮದಲ್ಲೇ ಆಗಲಿ ಅಥವ ಸಾಮಾಜಿಕ ದೃಷ್ಟಿಯಲ್ಲೇ ಆಗಲಿ ಅಥವ ಕೈಗಾರಿಕಾ ಅಭಿವೃದ್ಧಿಯಲ್ಲಾಗಲಿ, ಇನ್ನೂ ಇತರ ವಿಷಯಗಳಲ್ಲಾಗಲಿ ನಮ್ಮ ಅಭಿವೃದ್ಧಿ ಎಷ್ಟು ಆಗಿದೆ, ಎಷ್ಟು ಉಳಿದಿದೆ, ಇನ್ನೆಷ್ಟು ಆಗಬೇಕು ಎಂಬುದನ್ನು ಸರ್ಕಾರದವರೇ ಆಗಲಿ ಅಥವಾ ಇತರರೇ ಆಗಲಿ ಚೆನ್ನಾಗಿ ಪರಿಶೀಲಿಸಿಲ್ಲವೆಂದು ನನಗೆ ಕಂಡುಬರುತ್ತದೆ. ಈಗ 23-24 ವರ್ಷಗಳ ಲಾಗಾಯ್ತಿನಿಂದ ವಿದ್ಯಾಭ್ಯಾಸ ಕ್ರಮವು ಜಾರಿಯಲ್ಲಿದೆ. ಆದರೆ ನಮ್ಮ ಪ್ರಜಾಸಂಖ್ಯೆಯಲ್ಲಿ ಎಂದರೆ 17½ ಲಕ್ಷ ಮಂದಿ ಹರಿಜನರಲ್ಲಿ ಈಗ ಎಷ್ಟು ಮಂದಿ ವಿದ್ಯಾವಂತರಾಗಿದ್ದಾರೆ, ಇನ್ನು 8-9 ವರ್ಷಗಳಲ್ಲಿ ಎಷ್ಟು ಮಂದಿ ಆಗಬಹುದು, ಅದಕ್ಕೆ ಯಾವ ರೀತಿ ಯೋಜನೆ ಇಟ್ಟುಕೊಳ್ಳಬೇಕು ಎಂಬುದಕ್ಕೆ ಸರ್ಕಾರದಲ್ಲಿ ಯಾವ ನಿಯಮವೂ ಇಲ್ಲವೆಂದು ನನಗೆ ಕಂಡುಬರುತ್ತದೆ.

ಹರಿಜನರ ವಿದ್ಯಾಭಿವೃದ್ಧಿ ಕಡಿಮೆಯಾಗಿದೆ, ಆದ್ದರಿಂದ ನಮಗೆ ಗ್ರಾಂಟ್ ಜಾಸ್ತಿಮಾಡಿಸಿಕೊಡಿ ಎಂದರೆ 200 ರೂಪಾಯಿ ಜಾಸ್ತಿಮಾಡುವುದು ಅಥವಾ ಮನೆ ಕಟ್ಟಿಕೊಳ್ಳುವ ಯೋಜನೆಗೆ 2 ಲಕ್ಷ ರೂಪಾಯಿ ಜಾಸ್ತಿ ಕೊಡುವುದು ಈ ರೀತಿ ಅವರ ಅಭಿವೃದ್ಧಿಯ ಕಡೆಗೆ ನೋಡಿಕೊಂಡು ಬಂದಿದ್ದಾರೆಯೇ ವಿನಹ ನಿರ್ದಿಷ್ಟವಾಗಿ ಒಂದು ಯೋಜನೆಯನ್ನಿಟ್ಟುಕೊಂಡು ಯಾವ ಯಾವ ಕೆಲಸಮಾಡಬೇಕು, ಅವರನ್ನು ಯಾವ ಮಟ್ಟಕ್ಕೆ ತರಬೇಕು ಅವರ ನ್ಯೂನತೆಗಳೇನು ಎಂಬ ದೃಷ್ಟಿಯಿಂದ ಯೋಚನೆಮಾಡಿಲ್ಲ ಎಂದು ಹೇಳಿ ನಾನು ವಿಷಾದದಿಂದ ಹೇಳಬೇಕಾಗಿದೆ. ಈಗ ಕೈಗಾರಿಕೆಯ ವಿಷಯದಲ್ಲಿ ನೋಡಿದರೆ ಚರ್ಮದ ಕೈಗಾರಿಕೆ ಬಹಳ ಲಾಭದಾಯಕವಾದ ಕೈಗಾರಿಕೆಯಾಗಿದೆ. ಇದನ್ನು ಹರಿಜನರೇ ಹೆಚ್ಚು ಆಚರಣೆಯಲ್ಲಿ ತಂದಿದ್ದಾರೆ. ಈ ಕೈಗಾರಿಕೆಯನ್ನು ಇವರು ನೂರಾರು ವರ್ಷಗಳಿಂದ ಮಾಡುತ್ತಾ ಇದ್ದಾರೆ. ಆದರೂ ಇವರ ಕೈಗಾರಿಕಾಭಿವೃದ್ಧಿಯು ಬಹಳ ಹಿಂದುಳಿದಿವೆ. ಕಾರಣ ಬಂಡವಾಳ ಸಾಲದು. ಇದರ ಅಭಿವೃದ್ಧಿಗಾಗಿ ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಎಷ್ಟೋ ಜನ ಕೂಲಿಗಾರರುಇದ್ದಾರೆ. ಅವರಿಗೆಲ್ಲಾ ಬಂಡವಾಳ ಯಾವ ರೀತಿ ಒದಗಿಸಬೇಕೆಂಬ ಯೋಜನೆ ಹಾಕಿಲ್ಲವೆಂದು ಕಾಣುತ್ತದೆ. ಮೊನ್ನೆ ದಿನ ಶ್ರೀಮಾನ್ ಗೋವಿಂದದಾಸ್‌ರವರು ಹರಿಜನರಿಗೆ ಪ್ರತ್ಯೇಕವಾದ

ಇಂಡಸ್ಟ್ರಿಯಲ್ ಗ್ರಾಂಟ್ ಇಟ್ಟಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಪ್ರತ್ಯೇಕ ಇಟ್ಟಿಲ್ಲ, ಎಂದು ಹೇಳಿದರು. ಇದು ಒಟ್ಟೊಟ್ಟಿಗೆ ಗೋವಿಂದ ಎನ್ನುವ ಹಾಗೆ ಕಾಣುತ್ತದೆ. ಈ ಗ್ರಾಂಟಿನ ಪೈಕಿ ಹರಿಜನರಲ್ಲಿ ಎಷ್ಟು ಜನರಿಗೆ ಗ್ರಾಂಟು ಸಿಕ್ಕಿದೆ, ಎಷ್ಟು ಮಂದಿಗೆ ಸಿಕ್ಕಿಲ್ಲ ಎಂಬುದು ಗೊತ್ತಾಗುವುದಿಲ್ಲ. ಅಂದ ಮೇಲೆ ಹರಿಜನರ ಕೈಗಾರಿಕಾ ಅಭಿವೃದ್ಧಿಕಾರ್ಯದಲ್ಲಿ ನಿರ್ದಿಷ್ಟವಾದ ಯೋಜನೆ ಇಟ್ಟುಕೊಂಡಿಲ್ಲವೆಂದು ಕಾಣುತ್ತದೆ. ಹೀಗೆಯೇ ಸಿವಿಲ್ ಡಿಸ್‌ಎಬಿಲಿಟೀಸ್ ಆಕ್ಟ್ ಮತ್ತು ಇತರ ಕಾನೂನುಗಳನ್ನು ಜಾರಿಗೆ ತಂದಿದ್ದೀರಿ. ಆದರೆ ಇವು ಎಷ್ಟರಮಟ್ಟಿಗೆ ಆಚರಣೆಯಲ್ಲಿವೆ? ಅಥವಾ ಆಚರಣೆಯಲ್ಲಿಲ್ಲದಿದ್ದರೆ ಸರ್ಕಾರದವರು ಯಾವ ಕ್ರಮ ಕೈಕೊಂಡು ಆಚರಣೆಗೆ ತರಬೇಕೆಂಬ ಯೋಜನೆ ಹಾಕಿಕೊಂಡಿದ್ದಾರೆ ಎಂಬುದು ಕಂಡು ಬರುವುದಿಲ್ಲ. ಕಾನೂನುಗಳೇನೋ ಪುಸ್ತಕದ ತುಂಬಾ ಇವೆ. ಹಳ್ಳಿಗಾಡಿನಲ್ಲಿರತಕ್ಕ ಹರಿಜನರಿಗೆ ಅದರಿಂದ ಸ್ವಲ್ಪವೂ ಪ್ರಯೋಜನವಾಗುತ್ತಿಲ್ಲ. ಅದಕ್ಕೆ ಸರ್ಕಾರದವರು ಹೆಚ್ಚು ನಿಗಾ ಕೊಡಬೇಕು. ಆದ್ದರಿಂದ ಯಾವ ರೀತಿ ಮಾಡಿದರೆ ಕಾನೂನು ಫಲಪ್ರದವಾಗುತ್ತದೆ ಎಂಬ ಬಗ್ಗೆ ಸಲಹೆ ಕೊಡಲು ಒಂದು ಸಮಿತಿ ರಚನೆ ಅಗತ್ಯ ಎಂದು ನನಗೆ ಕಾಣುತ್ತದೆ.

ಸರ್ಕಾರದವರು ಮನೆ ಕಟ್ಟಿಕೊಳ್ಳುವುದಕ್ಕೆ ದುಡ್ಡು ಕೊಡುತ್ತಾ ಇದ್ದಾರೆ. ಆದರೆ ಕೇವಲ ನಿರ್ಗತಿಕರಿಗೆ ಇದರಿಂದ ಸಹಾಯವಾಗುತ್ತಿಲ್ಲ. ಒಬ್ಬ ನಿರ್ಗತಿಕ, ಕೂಲಿಗಾರನ ಸಂಸಾರ ಗಂಡ ಹೆಂಡತಿ-ನಾಲ್ಕೈದು ಮಕ್ಕಳು ಇರತಕ್ಕವನು 200 ರೂಪಾಯಿ ಗೋಡೆಹಾಕಿ, 200 ರೂಪಾಯಿ ಮರತೆಗೆದುಕೊಂಡು ಮನೆ ಕಟ್ಟಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ತಾವು ಕೊಡುವ 200-300 ರೂಪಾಯಿನಿಂದ ಕೇವಲ ಗಳ, ಕಿಟಕಿ, ಬಾಗಿಲು, ಹೆಂಚು ಮಾತ್ರ ಸಂದಾಯವಾಗುತ್ತದೆ. ಕೇವಲ ಕೂಲಿಯೇ ಸಿಕ್ಕದೆ ನಿತ್ಯ-ಜೀವನಕ್ಕೆ ತೊಂದರೆ ಪಡುವ ಹರಿಜನರು 400 ರೂಪಾಯಿ ಹೊಂಚಿ ಯಾವ ರೀತಿ ಮನೆ ಕಟ್ಟಿಕೊಳ್ಳುತ್ತಾರೆಯೋ ನನಗೆ ಗೊತ್ತಿಲ್ಲ. ನಾಲ್ಕಾರು ಜನ ದುಡಿಯುವವರಿದ್ದರೆ ಅಂಥವನು ಕಟ್ಟಿಕೊಳ್ಳಬಹುದೇ ಹೊರತು ನಿರ್ಗತಿಕ, ಬಡವ ಕಟ್ಟಿಕೊಳ್ಳುವಂತಿಲ್ಲ. ಅಂಥವನ ಜೀವನದ ಮಟ್ಟ ಉತ್ತಮಗೊಳ್ಳಲಿಕ್ಕೆ ಏನುಮಾಡಬೇಕು ಯಾವ ಕಾರ್ಯಕ್ರಮ ಕೈಗೊಳ್ಳಬೇಕೆಂಬ ಯೋಜನೆ ಸರ್ಕಾರದವರು ಇಟ್ಟುಕೊಂಡಿಲ್ಲವೆಂದು ಕಾಣುತ್ತದೆ. ನೆನ್ನೆ ದಿನ ನಾನು ಹಾಕಿದ ಒಂದು ಪ್ರಶ್ನೆಗೆ 4,000 ಮನೆಗಳಾಗಿವೆ, ಸುಮಾರು 2 ಲಕ್ಷ ಮನೆಗಳು ಆಗುವುದರಲ್ಲಿವೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು. ಈ ರೀತಿ ಅವರು ಹಾಕಿಕೊಂಡಿರುವ ಯೋಜನೆಯನ್ನು ಪರಿಶೀಲಿಸಿದಲ್ಲಿ ಇನ್ನು 50 ವರ್ಷಗಳಾದರೂ ಪೂರ್ತಿಯಾಗುವಂತಿಲ್ಲ. ಮೈಸೂರು ಸರ್ಕಾರದವರ ಯೋಜನೆಯಂತೆ ಇನ್ನೂ 50 ವರ್ಷ ಅವರಿಗೆ ವಿಶೇಷ ರಿಯಾಯಿತಿ ಕೊಡಲು ರಾಜ್ಯಾಂಗದಲ್ಲಿ ತಿದ್ದುಪಡಿ ತನ್ನಿ ಎಂದು ಕೇಳುವುದಕ್ಕಾಗುತ್ತದೆಯೆ? ಆದ್ದರಿಂದ ಈಗ ರಾಜ್ಯಾಂಗದಲ್ಲಿ ನಿಗದಿಮಾಡಿರುವ 10 ವರ್ಷದಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಂಡು ಅವರನ್ನು ಉನ್ನತ ಮಟ್ಟಕ್ಕೆ ತರಲು ಪ್ರಯತ್ನಪಡಬೇಕೆಂದು ನನ್ನ ಪ್ರಾರ್ಥನೆ ಹರಿಜನರಿಗೆ ಒಂದೊಂದು ಡಿಸ್ಟ್ರಿಕ್ಟ್‌ನಲ್ಲಿ ಒಂದೊಂದು ರೀತಿಯಲ್ಲಿ ತೊಂದರೆ ಇದೆ. ಆದ್ದರಿಂದ ಪ್ರತಿಯೊಂದು ಡಿಸ್ಟ್ರಿಕ್ಟ್‌ನಿಂದಲೂ ಹೆಚ್ಚು ಅನುಭವವುಳ್ಳ ಒಬ್ಬೊಬ್ಬರನ್ನು ತೆಗೆದುಕೊಂಡು ಒಂದು ಸಮಿತಿ ರಚನೆಮಾಡಿ ಅವರ ಸಲಹೆ ಪಡೆದು ಅದನ್ನು ಕಾರ್ಯಗತಮಾಡಬೇಕೆಂದು ನನ್ನ ಸಲಹೆ. ಈಗ ಹೆಚ್ಚು ಆಹಾರ ಬೆಳೆಯುವ ಯೋಜನೆ ಇದೆ. ಇದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ಅವರ ಸಲಹೆ ತೆಗೆದುಕೊಂಡು ಮೂರು ಅಥವಾ ಐದು ವರ್ಷದ ಯೋಜನೆ ಹಾಕಿಕೊಂಡು ಅಷ್ಟರೊಳಗೆ ಆಹಾರದಲ್ಲಿ ಸ್ವಯಂಪರಿಪೂರ್ಣತೆಯಾಗಬೇಕೆಂದು ಮಾಡಿದ್ದೀರಿ. ವಿದ್ಯಾಭ್ಯಾಸಕ್ಕೂ ಕೂಡ ಅದೇ ರೀತಿ ಮಾಡಿದ್ದೀರಿ. ಹರಿಜನರ ವಿಷಯ ಅತಿ ಮುಖ್ಯವಾದದ್ದು, ಅವರ ಪ್ರಗತಿ ಆದ ಹೊರತು ದೇಶದ ಪ್ರಗತಿ ಆಗುವುದಿಲ್ಲವೆಂದು ಹೇಳುತ್ತಾ ಇದ್ದೀರಿ. ಹೀಗಿದ್ದರೂ ಇದಕ್ಕೆ ಏಕೆ ತಾತ್ಸಾರ! ಏಕೆ ಕಾಲಹರಣಮಾಡುತ್ತಾ ಇದ್ದೀರಿ? ಎಂಬುದನ್ನು ನಾನು ತುಂಬಾ ವ್ಯಸನದಿಂದ ಕೇಳಬೇಕಾಗಿದೆ. ಇದೂ ಅಲ್ಲದೆ ಈಗ ತಾವು ಹಳ್ಳಿಗಾಡುಗಳಲ್ಲಿ ರಾಜ್ಯಾಂಗದ ರೀತ್ಯಾ ನಮಗೆ ಮೂಲಭೂತವಾದ ಹಕ್ಕುಗಳು, ಸಿವಿಲ್ ಡಿಸ್‌ಎಬಿಲಿಟೀಸ್ ಆಕ್ಟ್ ಮತ್ತು ಇನ್ನಿತರ ಕಾನೂನುಗಳನ್ನು ಜಾರಿಗೆ ತಂದಿದ್ದೀರಿ. ಆದರೆ ಅವುಗಳು ಆಚರಣೆಯಲ್ಲಿಲ್ಲ. ಸರ್ಕಾರದವರು ನಮಗೆ ಸಹಾಯಮಾಡಿ, ಸಮಾಜದ ಅನರ್ಹತೆ ಹೋಗುವಂತೆ ಮಾಡಬೇಕು. ಇಲ್ಲದಿದ್ದರೆ ಪ್ರಜೆಗಳೇ ತಿಳಿದುಕೊಂಡು, ಅವರೂ ಸಹ ಮಾನವವರ್ಗಕ್ಕೆ ಸೇರಿದವರು, ಅವರನ್ನೂ ಮಾನವಮಟ್ಟದಲ್ಲಿ ಮನಗಾಣಬೇಕು ಎಂದು ತಿಳಿದುಸಹಕರಿಸಬೇಕು ಇವೆರಡೂ ಇಲ್ಲದಿದ್ದರೆ ಏನು ಮಾಡಬೇಕು ಎಂಬುದನ್ನು ಸರ್ಕಾರದವರು ಯೋಚನೆಮಾಡಬೇಕಾಗಿದೆ. ಇದೆಲ್ಲಕ್ಕೂ ನಾನು ಒಂದು ಸಲಹೆ ಕೊಡುವುದಾದರೆ ಇಷ್ಟುಮಾತ್ರ ಹೇಳಬಲ್ಲೆ. ಇದರ ಅತಿ ಮುಖ್ಯವಾದ ಜವಾಬ್ದಾರಿ ಪೋಲೀಸ್ ಇಲಾಖೆಯ ಮೇಲೆ ಬಿದ್ದಿದೆ. ಪೋಲೀಸ್ ಇಲಾಖೆಯವರು ಎಷ್ಟು ಮುತುವರ್ಜಿ ವಹಿಸುತ್ತಾರೋ ಅಷ್ಟೂ ಇವರ ಪ್ರಗತಿಯಾಗುತ್ತದೆ ಎಂದು ಹೇಳುತ್ತೇನೆ. ಹಳ್ಳಿಗಾಡುಗಳಲ್ಲಿ ಸಿವಿಲ್ ಡಿಸ್‌ಎಬಿಲಿಟಿ ಇನ್ನೂ ಇವೆ, ಇದು ಬಹಳ ಶೋಚನೀಯವಾದ ವಿಚಾರ. ನಾನು ಹೇಳುವುದು ಈಗಿನ ಪ್ರಜಾ ಸರ್ಕಾರದಲ್ಲಿ ಪೋಲೀಸ್‌ನವರ ಕರ್ತವ್ಯವೇನು; ಸಿವಿಲ್ ಡಿಸ್‌ಎಬಿಲಿಟೀಸ್ ಆಕ್ಟ್‌ನ್ನು ಜಾರಿಗೆ ತರುವಾಗ ಪೋಲೀಸ್‌ನವರು ಸವರ್ಣೀಯರಿಗೂ ಹರಿಜನರಿಗೂ ಸಮಾಜದ ನ್ಯೂನತೆಗಳ ವಿಷಯದಲ್ಲಿ ತಿಕ್ಕಾಟ ಬಂದಾಗ ಯಾವ ರೀತಿ ನಡೆದುಕೊಳ್ಳಬೇಕು ಎಂಬ ಬಗ್ಗೆ ಪೋಲೀಸ್ ಟ್ರೈನಿಂಗ್ ಸ್ಕೂಲ್‌ನಲ್ಲಿ ವಿಶೇಷ ತರಪೇತು ಕೊಟ್ಟರೆ ಉತ್ತಮವಾದೀತು. ಹರಿಜನರ ಆಗುಹೋಗುಗಳು ಜಾಗ್ರತೆ ಬಗೆಹರಿದೀತು ಎಂದು ಅನ್ನಿಸುತ್ತದೆ. ಇನ್ನೂ ಹೇಳುವುದಾದರೆ ಕೈಗಾರಿಕೆಯ ವಿಚಾರದಲ್ಲಿ ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ ಎಂದು ಹೇಳುತ್ತೀರಿ. ಆದರೆ ಅವೆಲ್ಲಾ ಕಾರ್ಯರೂಪದಲ್ಲಿ ಎಷ್ಟರಮಟ್ಟಿಗೆ ಆಚರಣೆಯಲ್ಲಿವೆ, ಅವುಗಳಿಂದ ಎಷ್ಟರಮಟ್ಟಿಗೆ ಅನುಕೂಲವಾಗಿದೆ ಎಂದು ನೋಡಿದರೆ ಈಗ ದೊಡ್ಡಸಿದ್ದವ್ವನಹಳ್ಳಿಯಲ್ಲಿ ಮತ್ತು ಮಳವಳ್ಳಿಯಲ್ಲಿ ಚರ್ಮ ಹದಮಾಡುವ ಕೇಂದ್ರ ಇದೆ. ಅಲ್ಲಿ ದಿನಕ್ಕೆ 5 ಪೌಂಡ್ ಚರ್ಮ ಹದ ಆಗುತ್ತಿಲ್ಲ ಎಂದ ಮೇಲೆ ಹರಿಜನರಕೈಗಾರಿಕೆ ಎಷ್ಟುಮಟ್ಟಿಗೆ ಎಂಬುದು ವ್ಯಕ್ತಪಡುತ್ತದೆ. ಚರ್ಮದ ಕೈಗಾರಿಕೆಯನ್ನು ಹರಿಜನರೇ ಆಚರಣೆಯಲ್ಲಿಟ್ಟುಕೊಂಡಿದ್ದಾರೆ. ಸರ್ಕಾರದವರು ಇತರ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಬಂಡವಾಳ ಕೊಡುತ್ತಾರೆಯೇ ವಿನಃ ಇಂತಹ ಸಣ್ಣಪುಟ್ಟ ಗ್ರಾಮಾಂತರ ಕೈಗಾರಿಕೆಗಳಿಗೆ ಯಾವ ರೀತಿ ಸಹಾಯಮಾಡಬೇಕೆಂಬದು ಇಲ್ಲ. ನಾವೆಲ್ಲರೂ ಒಂದೇ, ಒಬ್ಬರನ್ನೊಬ್ಬರು ಸರಿಸಮಾನವಾಗಿ ಕಾಣ

(ಶ್ರೀ ಎಂ. ಸಿ. ವೆಂಕಟೇಶ್ವರರವರು.)

ಬೇಕು ಎಂಬುದಾಗಿ ವಿಶಾಲಭಾವನೆಯಿಂದ ತಾವು ಕಾನೂನು ಮಾಡಿದರೆ ಸಾಲದು, ಅದು ಆಚರಣೆಯಲ್ಲಿ ಬರಬೇಕು, ಬರುವಂತೆ ಮಾಡಬೇಕು. ಹಾಗಿಲ್ಲದಿದ್ದರೆ ನಮಗೆ 10 ಮಂತ್ರಿಗಳಸ್ಥಾನಕೊಟ್ಟರೂ ಪ್ರಯೋಜನವಿಲ್ಲ; ಪುಸ್ತಕದ ತುಂಬಾ ಕಾನೂನು ಇದ್ದರೂ ಪ್ರಯೋಜನವಿಲ್ಲ. ಆದ್ದರಿಂದ ಇವೆಲ್ಲವನ್ನೂ ಕೂಲಂಕಷವಾಗಿ ಆಲೋಚನೆಮಾಡಿ ಸಂಸ್ಥಾನಾದ್ಯಂತ ವಿದ್ಯಾಭ್ಯಾಸ, ಆರ್ಥಿಕ, ಸಾಮಾಜಿಕ, ಇನ್ನಿತರ ಕೈಗಾರಿಕಾ ಕೂಲಿಗಾರರು, ವ್ಯವಸಾಯದ ಕೂಲಿಗಾರರು ಎಷ್ಟೆಷ್ಟು ಜನ ಇದ್ದಾರೆ; ಜಮೀನಿಲ್ಲದೇ ಇರುವವರು ಎಷ್ಟುಜನ ಎಂಬುದನ್ನೆಲ್ಲಾ ನೋಡಿ ಅವರಿಗಿರತಕ್ಕ ಕಷ್ಟಗಳನ್ನು ಬಗೆಹರಿಸಬೇಕು. ಇದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ಮಾಡಿ ಅವರಿಂದ ಒಂದು ವರದಿಯನ್ನು ತೆಗೆದುಕೊಂಡು ಅದನ್ನು ಕಾರ್ಯರೂಪದಲ್ಲಿ ತರಲು ಅವಕಾಶ ಕೊಡುತ್ತೀರಿ ಎಂದು ಹೇಳಿ ನಂಬಿದ್ದೇನೆ. ಮೇಲಾಗಿ ಈ ನಿರ್ಣಯವನ್ನು ಈ ಸಭೆಯವರು ಅನುಮೋದಿಸಬೇಕೆಂದು ಪ್ರಾರ್ಥಿಸಿ ಇದನ್ನು ಸಭೆಯ ಮುಂದೆ ಮಂಡಿಸುತ್ತೇನೆ.

—Mr. SPEAKER.—Resolution moved.—

"That this Assembly is of the opinion that a committee be constituted to suggest measures and schemes for the speedy amelioration or the upliftment of the Depressed classes in the State".

*ಶ್ರೀ ಎ. ಭೀಮಪ್ಪನಾಯಕರು, (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಶ್ರೀ ವೆಂಕಟೇಶ್ವರರವರು ತಂದಿರತಕ್ಕ ಈ ನಿರ್ಣಯವನ್ನು ಸಂಪೂರ್ಣವಾಗಿ ಸ್ವಾಗತಿಸಿ ಅನುಮೋದಿಸುತ್ತೇನೆ. ಮೈಸೂರು ಸರ್ಕಾರದವರು ಹರಿಜನರು ಮತ್ತು ಹಿಂದುಳಿದ ಜನಾಂಗಗಳಿಗೆ ಮಾಡಿರುವ ಸಹಾಯವನ್ನು ಯಾರೂ ಮರೆಯಲಾರರು. ಇವರಿಗೆ ಬಹಳ ಸಹಾಯ ಮಾಡಿದ್ದಾರೆ. ಆದ್ದರಿಂದ ಮೈಸೂರು ದೇಶದ ಹರಿಜನರೂ ಹಿಂದುಳಿದ ಜನಾಂಗದವರೂ ಅಭಿವೃದ್ಧಿಗೆ ಬಂದಿದ್ದಾರೆ. ಇದನ್ನು ಅವರೂ ಒಪ್ಪುತ್ತಾರೆ. ಅವರು ಈಗ ಹೇಳುತ್ತಿರುವುದು, ರಾಜ್ಯಾಂಗದ ಪ್ರಕಾರ ನಮಗೆ ವಿಶೇಷ ರಿಯಾಯಿತಿಗಳನ್ನು ಕೊಡುವುದು ಹತ್ತು ವರ್ಷಕಾಲ; ಈಗಾಗಲೇ ಒಂದು ವರ್ಷವಾಗಿ ಹೋಗಿದೆ. ಇನ್ನು ಉಳಿದಿರುವುದು ಒಂಭತ್ತು ವರ್ಷ. 9 ವರ್ಷವಾದ ಮೇಲೆ ನಮಗೆ ಯಾವ ರೀತಿಯ ಅನುಕೂಲತೆಗಳೂ ಇತರರಿಗಿಂತ ಹೆಚ್ಚಾಗಿ ಕೊಡಬೇಕೆಂದು ಕೇಳಲು ಅವಕಾಶವಿಲ್ಲ; ಅಷ್ಟರೊಳಗೆ ನಾವು ಇತರರಿಗೆ ಸಮನಾಗಿ, ನಮ್ಮ ರಟ್ಟೆಯ ಬಲ ಬಾಕಿಯವರಷ್ಟೇ ಆಗಬೇಕಾದರೆ ಈಗ ನಡೆಯುತ್ತಿರುವಷ್ಟು ಕೆಲಸ ಸಾಲದು; ಆದಕಾರಣ ನಿರ್ದಿಷ್ಟವಾದ ಯೋಜನೆಯ ಮೇರೆಗೆ ನಡೆಸಿದರೆ ಸಾಧ್ಯವಾಗುತ್ತದೆ; ನಮ್ಮ ಸಮಾಜ, ನೈತಿಕ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೆಲ್ಲಾ ಇತರರ ಮಟ್ಟಕ್ಕೆ ಬರಬೇಕಾದರೆ ಯಾವ ರೀತಿ ತಳಹದಿ ಹಾಕಬೇಕು, ಯಾವ ರೀತಿಯ ಯೋಜನೆಯನ್ನು ಹಾಕಿಕೊಂಡರೆ ಸರಿಯಾಗುತ್ತದೆಂಬುದನ್ನು ಯೋಚಿಸಿ ನಿರ್ದಿಷ್ಟವಾದ ಯೋಜನೆಮಾಡಬೇಕು, ಒಂದು ನಿರ್ದಿಷ್ಟ ಕಾಲಾವಧಿ ಇಡಬೇಕು ಎಂದು, ಇದಕ್ಕೆ ಸರ್ಕಾರದಿಂದ ಸರ್ವಮುಖವಾದ ಪ್ರಯತ್ನ ನಡೆಯಬೇಕು, ಅಲ್ಲದೆ ಸಾರ್ವಜನಿಕರ ಬೆಂಬಲ ಬೇಕಾಗುತ್ತದೆ, ಹಾಗಾದರೆ ಮಾತ್ರ ಇವರೂ ಇತರರ ಮಟ್ಟಕ್ಕೆ ಏರಿ ಇತರರಿಗೆ ಸಮಾನವಾಗುತ್ತಾರೆ; ಎಲ್ಲಿಯವರೆಗೆ ಹಿಂದುಳಿದ ಜನಾಂಗದವರು ಕೆಲವರಿರುತ್ತಾರೋ, ಎಲ್ಲಿಯವರೆಗೆ ತಕ್ಕಡಿ ತಲೆಕೆಳಗಾಗಿರುತ್ತದೆಯೋ ಅಲ್ಲಿಯವರೆಗೆ ದೇಶ ಅಭಿವೃದ್ಧಿಯಾಗದೆಯೆಂದು ಹೇಳುವುದಕ್ಕಾಗುವುದಿಲ್ಲ; ಕೇವಲ ಕೆಳಮಟ್ಟದಲ್ಲಿರುವವರನ್ನು, ಹಿಂದುಳಿದವರನ್ನು ನೋಡಿ ಅದರಿಂದ ಒಂದು ದೇಶದ ಕೀಳು ಮೇಲನ್ನು ನೋಡುತ್ತಾರೆ, ಯಾವ ಜನಾಂಗವನ್ನೂ ನಿಕೃಷ್ಟಸ್ಥಿತಿಯಲ್ಲಿರಲು ಬಿಡುವುದು ಸರಿಯಲ್ಲ. ಇದಕ್ಕಾಗಿ ಒಂದು ಯೋಜನೆಯನ್ನು ಮಾಡಿ ನಿಪುಣರ ಸಮಿತಿಯನ್ನು ಮಾಡಬೇಕು, ಅವರು ಈ ಜನಾಂಗದವರ ಕುಂದು ಕೊರತೆಗಳೇನೆಂಬುದನ್ನು ನೋಡಿ ಇವರು ಮೇಲ್ಮಟ್ಟಕ್ಕೆ ಬರುವುದಕ್ಕೆ ಏನು ಮಾಡಬೇಕು ಎಂಬುದನ್ನು ಗೊತ್ತುಮಾಡಬೇಕು. ಇದಕ್ಕೆ ಒಂದು ನಿರ್ದಿಷ್ಟವಾದ ಯೋಜನೆ ಮಾಡಿ ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ, ಮೈಸೂರು ಸರ್ಕಾರದ ಸಹಾಯ ಎಷ್ಟು ಬೇಕು, ಕೇಂದ್ರ ಸರ್ಕಾರದ ಸಹಾಯ ಎಷ್ಟು ಬೇಕು ಗಾಂಧಿ ನಿಧಿ, ಥಕ್ಕರ್ ಬಾಬಾ ನಿಧಿ ಮುಂತಾದ ಸಾರ್ವಜನಿಕ ನಿಧಿಯಿಂದ ಎಷ್ಟು ಸಹಾಯ ಪಡೆಯಬಹುದು, ಕಾನೂನು ಬಲ ಎಷ್ಟು ಬೇಕು, ಈಗಿರುವುದು ಸಾಕೆ ಅಥವಾ ಬೇರೆ ಬೇಕೆ ಎಂಬ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು, ಈಗ ಈ ರೀತಿಯ ನಿರ್ದಿಷ್ಟವಾದ ಕಾರ್ಯಕ್ರಮವಿಲ್ಲ ಎಂಬುದು ಅವರ ವಾದವೇ ಹೊರತು ಮೈಸೂರು ಸರ್ಕಾರ ಏನೂ ಮಾಡಿಲ್ಲವೆಂದು ಅವರು ಹೇಳಲಿಲ್ಲ. ಯಾವಾಗಲೂ ಹರಿಜನರಿಗೆ ಮೈಸೂರು ಸರ್ಕಾರದವರು ಮಾಡಿರುವ ಉಪಕಾರಕ್ಕಾಗಿ ಕೃತಜ್ಞತೆಯಿಂದ ವಂದನೆಗಳನ್ನರ್ಪಿಸಿದ್ದಾರೆ. ನಾನಾದರೂ ಹೇಳುವುದೇನೆಂದರೆ, ಇವರ ಅಭಿವೃದ್ಧಿಗಾಗಿ ಒಂದು ನಿರ್ದಿಷ್ಟವಾದ ಯೋಜನೆಯಿಲ್ಲ. ಹರಿಜನರಿಗೆ ಭೂಮಿಯನ್ನು ಕೊಡುವುದು ತಮ್ಮ ಕರ್ತವ್ಯವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಒಂದು ಭೂಮಿಗಾಗಿ ನೂರಾರು ಅರ್ಜಿಗಳು ಬಂದಾಗ, ಇಂತಹ 100 ಸಂದರ್ಭಗಳ ಪೈಕಿ 90ರಲ್ಲಿ ಇದು ಫಲವತ್ತಾದ ಭೂಮಿ, ಇದನ್ನು ಕೊಡುವುದು ಬೇಡ, ಹರಾಜು ಹಾಕಬೇಕೆಂದು ತೀರ್ಮಾನವಾಗುತ್ತದೆ. ಫಲವತ್ತಾದ ಭೂಮಿಯನ್ನು ಅವರಿಗೆ ಕೊಡಬಾರದೆಂಬ ನೀತಿಯೆ! ಅಲ್ಲದೆ ಅವರಿಗೆ ಸಾಕಷ್ಟು ಆರ್ಥಿಕ ಬಲವಿಲ್ಲದೆ ಭೂಮಿಯ ವ್ಯವಸಾಯ ಮಾಡುವುದು ಅಸಾಧ್ಯ. ಇವಕ್ಕೆಲ್ಲ ಸರ್ಕಾರದವರು ಏನು ಮಾಡಬೇಕೆಂಬುದನ್ನೆಲ್ಲಾ ಕೂಲಂಕಷವಾಗಿ ಯೋಚನೆ ಮಾಡಬೇಕಾಗುತ್ತದೆ. ಇದನ್ನೆಲ್ಲ ಕೂಲಂಕಷವಾಗಿ ವಿಮಾರ್ಶೆಮಾಡುವುದಕ್ಕಾಗಿ ತಜ್ಞರ ಅಥವ ನಿಪುಣರ ಸಮಿತಿ ಅತ್ಯಗತ್ಯ. ಸರ್ಕಾರದವರು ಈಗ ಮಾಡುತ್ತಿರುವಂತೆ ಈ ವಿಷಯದ ಪೂರ್ಣಚಿತ್ರ ಇದರ ರೂಪು ರೇಖೆಗಳು ಹೇಗಿರುತ್ತವೆಂದು ಹೇಳಲಾರರು. ಇಂತಿಂಥಾ ಕ್ಷೇತ್ರಗಳಲ್ಲಿ ಇಷ್ಟಿಷ್ಟು ಮಾಡಿದರೆ ಇಷ್ಟು ವರ್ಷಗಳಲ್ಲಿ ಹರಿಜನರು ಇತರರ ಮಟ್ಟಕ್ಕೆ ಬರುತ್ತಾರೆ ಎಂಬುದನ್ನು ಹೇಳುವುದಕ್ಕೆ ಸರ್ಕಾರದವರಿಗೆ ಸಾಧ್ಯವಿಲ್ಲ. ಆದುದರಿಂದ ಇದು ಸಾಧುವಾದ ಬೇಡಿಕೆ. ದಯವಿಟ್ಟು ಸರ್ಕಾರದವರು ಇದನ್ನು ಒಪ್ಪಿ ಒಂದು ಸಮಿತಿಯನ್ನು ನೇಮಕ ಮಾಡಿ, ಅದಕ್ಕೆ ಈ ವಿಚಾರವನ್ನೊಪ್ಪಿಸಿ ಅವರು ಸರಿಯಾಗಿ ಪರಿಶೀಲನೆಮಾಡಿ ಈ ಜನರು ಬಾಕಿಯವರ ಮಟ್ಟಕ್ಕೆ ಬರಬೇಕಾದರೆ ಎಷ್ಟು ದಿವಸ ಬೇಕಾಗುತ್ತದೆ, ಎಷ್ಟು ಹಣ ಬೇಕಾಗುತ್ತದೆ, ಈ ಕಾರ್ಯ ಯಾವ ರೀತಿ ನಡೆಯಬೇಕು ಎಂಬುದನ್ನೆಲ್ಲಾ ತೀರ್ಮಾನ ಮಾಡುವುದರಿಂದ ದೇಶದಲ್ಲಿ ಅತ್ಯಂತ ಕೆಳಮಟ್ಟದಲ್ಲಿರುವ ಜನರನ್ನು ಮೇಲಕ್ಕೇರಿಸಿದಂತಾಗುತ್ತದೆಂದು

ನನ್ನ ಅಭಿಪ್ರಾಯ. ದಯೆಯಿಟ್ಟು ಸರ್ಕಾರದವರು ಒಪ್ಪಿಕೊಂಡು ಇಂತಹ ಒಂದು ಸಮಿತಿಯನ್ನು ನೇಮಿಸುವ ಭರವಸೆಯನ್ನು ಕೊಟ್ಟು ಈ ಬಗ್ಗೆ ಕೂಡಲೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಡಿ. ಗೋವಿಂದದಾಸ್ ರವರು (ಹಾಸನ ಜಿಲ್ಲೆ ನಿಮ್ನ ವಂಗಡ).—ಅಧ್ಯಕ್ಷರೆ, ಈ ನಿರ್ಣಯವನ್ನು ನಾನೇ ತರಬೇಕೆಂಬ ಆಸೆ ನನಗಿತ್ತು. ಆದರೂ ಈ ಸದವಕಾಶ ಶ್ರೀ ವೆಂಕಟೇಶ್ವರರವರಿಗೆ ಸಿಕ್ಕಿದ್ದಕ್ಕಾಗಿ ಸಂತೋಷ ಪಡಬೇಕಾಗಿದೆ. ಇದು ಕಾರ್ಯರೂಪಕ್ಕೆ ಬಂದರೆ ಆ ಸಂತೋಷದಲ್ಲಿ ನಾನೂ ಪಾಲುದಾರನಾಗುತ್ತೇನೆಂದು ನನ್ನ ಅಭಿಪ್ರಾಯ. ಹರಿಜನರಿಗೆ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆಂದು ಶ್ರೀ ಭೀಮಪ್ಪನಾಯಕರು ಹೇಳಿದರು. ಹೌದು. ಹಿಂದಿನ ಮತ್ತು ಇಂದಿನ ಸರ್ಕಾರದವರು ಹರಿಜನರ ಅಭಿವೃದ್ಧಿಯಾದರೆ ದೇಶಕ್ಕೆ ಒಳ್ಳೆಯದೆಂದು ಭಾವಿಸಿದ್ದಾರೆ. ಪ್ರಜೆಗಳೂ ಸಹ ಸರ್ಕಾರದೊಡನೆ, 'to serve the Harijans is to serve the Nation' ಎಂಬುದನ್ನರಿತು ಕೈಲಾದ ಮಟ್ಟಿಗೂ ಸೇವೆಯನ್ನು ಸಲ್ಲಿಸುತ್ತಿದ್ದಾರೆಂದು ಈ ಸಭೆಯಲ್ಲಿ ಸಂತೋಷದಿಂದ ಹೇಳುತ್ತೇನೆ. ಹಿಂದೆ ತಾಲ್ಲೂಕು ಡಿಪ್ರೆಸ್ಡ್ ಕ್ಲಾಸ್ ಸಮಿತಿ, ಡಿಸ್ಟ್ರಿಕ್ಟ್ ಡಿಪ್ರೆಸ್ಡ್ ಕ್ಲಾಸ್ ಸಮಿತಿ ಮತ್ತು ಸೆಂಟ್ರಲ್ ಡಿಪ್ರೆಸ್ಡ್ ಕ್ಲಾಸ್ ಸಮಿತಿ ಎಂದು ಏರ್ಪಡಿಸಿದ್ದರು. ನನ್ನ ಅಭಿಪ್ರಾಯದಲ್ಲಿ ಆಗ ಸ್ವಲ್ಪ ಚುರುಕಾಗಿ ಬೇಗ ಬೇಗ ಹರಿಜನರ ಕೆಲಸಕಾರ್ಯಗಳು ಆಗುತ್ತಿದ್ದವು. ಆದರೆ ಇತ್ತೀಚೆಗೆ ಸ್ವಲ್ಪ ಕಡಿಮೆಯಾಗುತ್ತಿದೆಯೆಂದು ನನಗೆ ತಿಳಿದು ಬಂದಿದೆ. ಹರಿಜನರಿಗೆ ಜಮೀನುಗಳನ್ನು ಕೊಡುವ ವಿಚಾರದಲ್ಲಿ ಶ್ರೀ ಭೀಮಪ್ಪನಾಯಕರು ಅಪ್ಪಣೆ ಕೊಡಿಸಿದ್ದಾರೆ. ಒಂದು ವಿಷಯವನ್ನು ನಾನು ವಿಷಾದದಿಂದ ಹೇಳಬೇಕಾಗಿದೆ. 1928ನೆಯ ಇಸವಿಯಿಂದೀಚೆಗೆ ಹರಿಜನರಿಗೆ 78 ಸಾವಿರ ಎಕರೆ ಜಮೀನು ಸಿಕ್ಕಿದೆ ಎಂದು ರೆವಿನ್ಯೂ ಸಚಿವರು ಅಪ್ಪಣೆ ಕೊಡಿಸಿದರು. ಇದಕ್ಕಾಗಿ ನಿಜವಾಗಿಯೂ ಸರ್ಕಾರದವರನ್ನು ವಂದಿಸಬೇಕು. ಆದರೆ ಇದರ ಪೈಕಿ ಫಲವತ್ತಾದ ಮತ್ತು ಉಪಯುಕ್ತವಾದ ಜಮೀನು ಎಷ್ಟೆಂದರೆ ಕೇವಲ ಸೇಕಡ ಎರಡರಷ್ಟು ಮಾತ್ರವೆಂದು ವಿಷಾದದಿಂದ ಹೇಳಬೇಕಾಗಿದೆ. ಮಿಕ್ಕ ಜಮೀನಿನಿಂದ ಆ ಜನರು ನಿಜವಾಗಿ ಯಾವ ಉಪಯೋಗವನ್ನೂ ಪಡೆಯುತ್ತಿಲ್ಲ. ಶ್ರೀ ಭೀಮಪ್ಪನಾಯಕರು ಹೇಳಿದ ಹಾಗೆ ಒಳ್ಳೆಯ ಜಮೀನು ಎಲ್ಲಿರುತ್ತದೆಯೋ ಅಲ್ಲಿ ನಮ್ಮ ದುರದೃಷ್ಟದಿಂದಲೋ ಏನೋ, ಅಂತಹ ಜಮೀನು ಹರಾಜಿಗೆ ನಿಂತು ಸರ್ಕಾರದ ಖಜಾನೆಗೆ ಹಣ ತುಂಬಿದ ವಿಚಾರವನ್ನು ನಾನು ಅರಿತಿದ್ದೇನೆ. ಬಡವರಾದ ಈ ಹರಿಜನರು ಜಮೀನನ್ನು ಕಷ್ಟಪಟ್ಟು ಮಾಡಿದರೂ ಅದರಿಂದ ಫಲವನ್ನು ಹೊಂದದೆ ಕೊಟ್ಟಿರತಕ್ಕ ಆ ಜಮೀನುಗಳನ್ನು ಪಾಳು ಬಿಟ್ಟು ವಾಪಸು ಸರ್ಕಾರಕ್ಕೆ ಬಿಡುತ್ತಿರುವುದು ಅನೇಕ ಸ್ಥಳಗಳಲ್ಲಿ ತಿಳಿದು ಬಂದಿದೆ. ಈ ಕಾರಣಗಳಿಂದ ಸರ್ಕಾರದವರು ಒಂದು ತಜ್ಞರ ಸಮಿತಿಯನ್ನು ನೇಮಕಮಾಡಬೇಕೆಂದು ಬಹಳ ದಿವಸಗಳಿಂದ ನಾವು ಒತ್ತಾಯಪಡಿಸುತ್ತಿದ್ದೇವೆ. ಈ ರೀತಿಯ ಒಂದು ಸಮಿತಿಯನ್ನು ನೇಮಕಮಾಡಬೇಕೆಂಬುದು ಸರ್ಕಾರದವರು ಅಭಿಪ್ರಾಯದಲ್ಲಿಯೂ ಇದೆಯೆಂದು ತಿಳಿದುಬಂದಿದೆ. ಆದರೂ ಇದುವರೆಗೂ ಏಕೆ ಮಾಡಲಿಲ್ಲ, ಇದಕ್ಕೆ ಕಾರಣವೇನೆಂದು ನಾನು ಕೇಳಬೇಕೆಂದಿದ್ದೆ. ಈಗಲಾದರೂ ಸರ್ಕಾರದವರು ದಯೆಯಿಟ್ಟು ಬೇಗ ಒಂದು ಸಮಿತಿಯನ್ನೇರ್ಪಡಿಸಿ ಎಂಟು ವರ್ಷದ ಒಂದು ನಿರ್ದಿಷ್ಟವಾದ ಯೋಜನೆಯನ್ನು ಮಾಡಿ ಬೇಗ ಹರಿಜನಾಭಿವೃದ್ಧಿಯಾಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನಲ್ಲದೆ ಇದನ್ನು ನಾನು ಅನುಮೋದಿಸುತ್ತೇವೆ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಅಧ್ಯಕ್ಷರೇ, ಶ್ರೀ ವೆಂಕಟೇಶ್ವರರವರು ಕಳುಹಿಸಿರತಕ್ಕ ನಿರ್ಣಯದ ಉದ್ದೇಶ ಇಷ್ಟೇ ಎಂದು ಕಾಣುತ್ತದೆ; ಏನೆಂದರೆ, ಹರಿಜನರ ಏಳಿಗೆಗಾಗಿ ಸರ್ಕಾರದವರು ಮಾಡಬೇಕಾದ ಪ್ರಯತ್ನಗಳನ್ನೆಲ್ಲಾ ಮಾಡುತ್ತಿದ್ದಾರೆ; ಆದರೆ ಈ ಬಗ್ಗೆ ಅವರದು ನಿರ್ದಿಷ್ಟವಾದ ಯಾವ ಯೋಜನೆಯೂ ಇಲ್ಲ. ಅದನ್ನು ಮಾಡುವುದು ಅಗತ್ಯವೆಂಬುದನ್ನು ಒತ್ತಾಯಪಡಿಸುವ ಉದ್ದೇಶದಿಂದ ಶ್ರೀ ವೆಂಕಟೇಶ್ವರರವರು ಇದನ್ನು ತಂದಿರುವಂತೆ ಕಾಣುತ್ತದೆ. ಅದು ನಿಜವೇ. ಏಕೆಂದರೆ ಭಾರತ ರಾಜ್ಯಾಂಗದಲ್ಲಿ ಹರಿಜನರ ಏಳಿಗೆಗಾಗಿ ಸಾಕಾದಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ಇದಕ್ಕಾಗಿ ರಿಯಾಯಿತಿಗಳೇನನ್ನು ಅವರಿಗೆ ಕೊಡಬೇಕಾಗಿದೆಯೋ ಅದು 10 ವರ್ಷಗಳವರೆಗೆ ಮಾತ್ರ. ಹೀಗಿರುವಲ್ಲಿ ಈಗಾಗಲೇ ಕೆಲವು ಕಾಲ ಕಳೆದಿದೆ. ಇನ್ನುಳಿದ ವರ್ಷಗಳಲ್ಲಿ ಅವರು ಇತರೇ ಜನಾಂಗಗಳವರ ಮಟ್ಟಕ್ಕೆ ಬರುವುದಕ್ಕೆ ಏನೇನು ಅನುಕೂಲತೆಗಳನ್ನು ಮಾಡಬೇಕೋ ಅವುಗಳನ್ನೆಲ್ಲಾ ಮಾಡಬೇಕಾಗಿದೆ. ಈ ಅವಧಿ ಕಳೆದ ಮೇಲೆ ಅವರಿಗೇನೂ ಈ ರಿಯಾಯಿತಿಗಳು ಸಿಕ್ಕುವುದಿಲ್ಲ. ಆದ್ದರಿಂದ ಸರ್ಕಾರದವರು ಅವರ ಏಳಿಗೆಗಾಗಿ ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದಾರೆ ಆದರೂ ಒಂದು ಯೋಜನೆಯೆಂಬುದಿಲ್ಲ, ಈ ರೀತಿ ಮಾಡಿ, ಇನ್ನುಳಿದಿರುವ 9 ವರ್ಷಗಳಲ್ಲಿ ಅವರನ್ನು ಇತರರ ಮಟ್ಟಕ್ಕೆ ತರಲು ಒಂದು ಯೋಜನೆಯನ್ನು ಏರ್ಪಾಡು ಮಾಡಿದರೆ ಅವರ ಉದ್ದೇಶ ಸಫಲವಾಗುತ್ತಿದೆಯೋ ಏನೋ ಎನ್ನಿಸುತ್ತದೆ. ನನಗೆ ತೋರುವ ಮಟ್ಟಿಗೆ ಈ ವಿಷಯದಲ್ಲಿ ಸರ್ಕಾರದವರಿಗೂ ನಮಗೂ ಏನೂ ಭಿನ್ನಾಭಿಪ್ರಾಯವಿರಲಾರದು. ಆದ್ದರಿಂದ ಇದಕ್ಕಾಗಿ ಒಂದು ಯೋಜನೆ ಮಾಡಿ. ಜಮೀನು ಹಂಚಿಕೆಯ ವಿಚಾರವಾಗಿ ನೋಡುವುದಾದರೆ, ಈಗಲದ ಅವರಿಗೆ ಬೇಕಾದಷ್ಟು ಜಮೀನುಗಳನ್ನು ಹಂಚಿಕೆ ಮಾಡುತ್ತಿದ್ದಾರೆ. ಆದರೆ ಹರಾಜು ಹಾಕುವ ಪದ್ಧತಿಯನ್ನು ನಿಲ್ಲಿಸಿ ಹರಿಜನರಿಗೆ ಖುಷ್ ಖರೀದಿಗೆ ಕೊಡುವಂತೆ ಮಾಡಿ ಮೊದಲನೆಯ Preference ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿಯಾಗಿ ವಿದ್ಯಾಭ್ಯಾಸದ ಬಗ್ಗೆ ಅವರಿಗೆ ಮೊದಲು ಎಷ್ಟು ಸ್ಕಾಲರ್‌ಷಿಪ್ಪುಗಳನ್ನು ಕೊಡುತ್ತಿದ್ದರೋ ಈಗ ಅಷ್ಟು ಕೊಡುತ್ತಿರುವಂತೆ ಕಾಣುವುದಿಲ್ಲ. ಮೊದಲು ಸಾಮಾನ್ಯವಾಗಿ ಓದುವುದಕ್ಕೆ ಬರುತ್ತಿದ್ದ ಪ್ರತಿಯೊಬ್ಬನಿಗೂ ಒಂದೊಂದು ಸ್ಕಾಲರ್‌ಷಿಪ್ ಸಿಕ್ಕುತ್ತಿತ್ತು. ಈಗ ಅಷ್ಟು ಮಟ್ಟಿಗೆ ಸಿಕ್ಕುತ್ತಿಲ್ಲ. ಕಾರಣ, ಮೊದಲು ಇದಕ್ಕಾಗಿ ಎಷ್ಟು ಹಣ ಕೊಟ್ಟಿತ್ತೋ ಈಗಲೂ ಅಷ್ಟೇ ಇದೆ. ಈಗಾಗಲೇ ಅವರು ಮುಂದುವರಿದಿದ್ದಾರೆ ಎಂದು ಹೇಳುವ ಹಾಗಿಲ್ಲ; ಆದ್ದರಿಂದ ಇದಕ್ಕಾಗಿ ಕೊಟ್ಟಿರತಕ್ಕ ಹಣವನ್ನು ಇನ್ನೂ ಜಾಸ್ತಿಮಾಡಬೇಕು.

ಆ ಮೇಲೆ ಹಾಸ್ಟಲ್ ಅನುಕೂಲತೆಗಳನ್ನು ನೋಡುವುದಾದರೆ, ಈಗ ಅವರಿಗೆ ಬೆಂಗಳೂರು ಮೈಸೂರುಗಳನ್ನು ಬಿಟ್ಟರೆ ಮಿಕ್ಕ ಎಲ್ಲಾ ಕಡೆಗಳಲ್ಲೂ ಈ ಅನುಕೂಲತೆಗಳಿಲ್ಲ. ಆದ್ದರಿಂದ ಇತರ ಕಡೆಗಳಲ್ಲೂ ಅವರಿಗೆ ಈ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಸಹಾಯ ಮಾಡಿದರೆ ಅವರೂ ಮಿಕ್ಕ ಜನಾಂಗದವರ

(ಶ್ರೀ ಜಿ. ವೀರಪ್ಪನವರು)

ಮಟ್ಟಕ್ಕೆ ಬರುತ್ತಾರೆ. ಇಲ್ಲದಿದ್ದರೆ ಖಂಡಿತ ಸಾಧ್ಯವಾಗುವುದಿಲ್ಲ.

ಆದ್ದರಿಂದ ನಾನು ವಿನಯ ಪೂರ್ವಕವಾಗಿ ಸರ್ಕಾರದವರನ್ನು ಕೇಳಿಕೊಳ್ಳುವುದಿಷ್ಟೆ. ಈ ಬಗ್ಗೆ ನಿಗದಿಯಾದ ಒಂದು ಯೋಜನೆಯನ್ನು ಹಾಕುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಿ ಅವರು ಒಂದು ತಿಂಗಳಿನೊಳಗೆ ತಮ್ಮ ವರದಿಯನ್ನು ಕೊಡುವಂತೆ ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ನಿಮ್ನ ಪಂಗಡ).—ಮಾನ್ಯ ಅಧ್ಯಕ್ಷ ಮಹಾಶಯರೇ, ಶ್ರೀ ವೆಂಕಟೇಶ್ವರ್‌ರವರು ತಂದಿರತಕ್ಕ ನಿರ್ಣಯವನ್ನು ಬಹಳ ಆದರದಿಂದ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಲು ನಿಂತಿರುತ್ತೇನೆ. ಭಾರತ ರಾಜ್ಯಾಂಗದ ಪ್ರಕಾರ ನಮ್ಮ ಜನಗಳ ಅಭಿವೃದ್ಧಿಗೆ ಹತ್ತು ವರ್ಷಗಳ ಅವಧಿಯನ್ನು ಗೊತ್ತುಮಾಡಿದ್ದಾರೆ, ಅದರಲ್ಲಾಗಲೇ ಒಂದು ವರ್ಷ ಕಳೆದುಹೋಯಿತು. ಈ ಹತ್ತು ವರ್ಷಗಳೊಳಗಾಗಿ ಈ ಜನಾಂಗದವರು ಆರ್ಥಿಕಮಟ್ಟದಲ್ಲಿ, ಸಾಮಾಜಿಕ ಮಟ್ಟದಲ್ಲಿ ಮತ್ತು ರಾಜಕೀಯಮಟ್ಟದಲ್ಲಿ ಇತರರ ಸರಿಸಮಾನತೆಗೆ ಬರಬೇಕು. ರಾಜಕೀಯದಲ್ಲೇನೋ ಈ ಹತ್ತು ವರ್ಷಗಳವರೆಗೆ ನಮಗಾಗಿ ಶೇಕಡಾವಾರು ಒಂದಿಷ್ಟು ಸ್ಥಾನಮಾನಗಳನ್ನು ಮೀಸಲಾಗಿಟ್ಟಿದ್ದಾರೆ. ಆದ್ದರಿಂದ ರಾಜಕೀಯದಲ್ಲಿ ನಾವು ಅಷ್ಟಾಗಿ ಕಷ್ಟಪಡಬೇಕಾಗಿಲ್ಲವೆನ್ನಬಹುದು. ಆದರೂ ಯಾವ ಜನಾಂಗವೇ ಆಗಲಿ ರಾಜಕೀಯದಲ್ಲಿ ಇತರರ ಮಟ್ಟಕ್ಕೆ ಬರಬೇಕಾದರೆ ಆ ಜನರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದಕ್ಕೆ ಬರಬೇಕಾದ್ದು ಅಗತ್ಯ. ಹಾಗೆ ಬಂದರೇನೇ ಆ ಜನರು ರಾಜಕೀಯದಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅವರು ರಾಜಕೀಯದಲ್ಲಿ ಮುನ್ನುಗ್ಗಿ ದೇಶಸೇವೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ನಮ್ಮ ಸರ್ಕಾರದವರೇನೋ ಈಗ್ಗೆ ಬಹಳ ಹಿಂದಿನಿಂದಲೂ ಅನೂಚಾನವಾಗಿ ಹರಿಜನರಿಗೆ ಸಹಾಯ ಮಾಡುತ್ತಿದ್ದಾರೆ. ಆದರೆ ಸಾಕಾದಷ್ಟು ಮಾಡುತ್ತಿಲ್ಲವೆಂದು ನಾನು ಹೇಳಬೇಕಾಗಿದೆ. ಇದು ದೇಶದಲ್ಲಿ ಎರಡನೆಯ ದೊಡ್ಡ ಜನಾಂಗ. ಈಗಿನ ಸೆನ್ಸಸ್ ಪ್ರಕಾರ 16–17 ಲಕ್ಷದಷ್ಟು ಈ ಜನರಿದ್ದಾರೆ. ಇಷ್ಟು ದೊಡ್ಡ ಜನಾಂಗವನ್ನು ಮುಂದಕ್ಕೆ ತರಬೇಕಾದರೆ ಏನೇನು ಅಭಿವೃದ್ಧಿಕಾರ್ಯಗಳನ್ನು ಕೈಕೊಳ್ಳಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕಾದ್ದು ಅವರ ಮುಖ್ಯಕರ್ತವ್ಯವೆಂದು ಹೇಳುತ್ತೇನೆ. ಏಕೆಂದರೆ ದೇಶದಲ್ಲಿ ನಮಗೊಂದು ಮಂತ್ರಿಸ್ಥಾನ ಕೊಟ್ಟಾಕ್ಷಣ ನಾವು ಸಂತೋಷಪಡುವುದಕ್ಕಾಗುವುದಿಲ್ಲ. ನಮ್ಮಲ್ಲಿ ಬಹುಭಾಗದ ಜನರು ಬಹಳ ಹೀನಸ್ಥಿತಿಯಲ್ಲಿದ್ದಾರೆ. ಪ್ರಜಾಪ್ರಭುತ್ವ ಬಂದರೂ ಇನ್ನೂ ಹಳ್ಳಿಗಾಡಿನಲ್ಲಿ ನೀವೇನೋ ನಮ್ಮವರ ಸ್ಥಿತಿ ಬದಲಾವಣೆಯಾಗಿಲ್ಲ. ಆದ್ದರಿಂದ ಅವರು ಸ್ವಲ್ಪಸ್ವಲ್ಪವಾದರೂ ಕ್ರಮೇಣ ಮುಂದುವರಿಯುವಂತಾದರೂ ಮಾಡಬೇಕೆಂದು ಹೇಳುತ್ತೇನೆ. ನಮ್ಮವರಿಗೆಂದು ಅನೇಕ ಕಾನೂನುಗಳನ್ನು ಮಾಡಿಬಿಟ್ಟಿದ್ದೀರಿ. ಸಾಮಾಜಿಕ ಅನರ್ಹತೆಗಳ ಕಾನೂನು,—ಗೋವಧಾನಿರೋಧಿಕ— ಕಾನೂನು, ಪ್ರಾಣಿಬಲಿ ನಿರೋಧಕಕಾನೂನು—ಇವೆಲ್ಲಾ ಮಾಡಿದ್ದೀರಿ. ಆದರೆ ಯಾವ ಯಾವ ಅಧಿಕಾರಿಗಳಿಗೆ ಈ ಕಾನೂನುಗಳನ್ನು ಜಾರಿಗೆ ತರುವುದಕ್ಕೆ ಜವಾಬ್ದಾರಿ ವಹಿಸಿದ್ದೀರೋ ಅವರಿಗೆ ಇವುಗಳನ್ನು ಎಲ್ಲಿ ಹೇಗೆ ಜಾರಿಗೆ ತರಬೇಕೆಂಬುದೇ ಗೊತ್ತಿರುವಂತೆ ಕಾಣುವುದಿಲ್ಲ. ನನಗೆ ತಿಳಿದಮಟ್ಟಿಗೆ ಈ ಕಾನೂನು ನಡೆಯುತ್ತಿಲ್ಲವೆಂದು ಹೇಳಬಹುದು. ಸರ್ಕಾರದವರೇನೋ ಅವಸರ ಅವಸರವಾಗಿ ಈ ಎಲ್ಲಾ ಮಸೂದೆಗಳನ್ನು ತಂದು ಕಾನೂನು ಮಾಡಿಬಿಟ್ಟರು. ಆದರೆ ಹಾಗೆ ಮಾಡಿದ್ದಕ್ಕೆ ಸರಿಯಾಗಿ ಅವುಗಳನ್ನು ಜಾರಿಗೆತರುವುದಕ್ಕೆ ಸೂಕ್ತ ಏರ್ಪಾಡುಮಾಡಲಿಲ್ಲ. ಈಗಲಾದರೂ ಅವುಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಈಚೆಗೆ ನಮ್ಮ ಪ್ರಜಾಪ್ರಭುತ್ವ ಸರ್ಕಾರದವರು ಬಂದಮೇಲೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಬ್ಬ ಶೇಕದಾರರನ್ನೂ, ಡಿಸ್ಟ್ರಿಕ್ಟಿನಲ್ಲಿ ಡಿಸ್ಟ್ರಿಕ್ಟ್ ಸ್ಪೆಷಲ್ ಆಫೀಸರನ್ನೂ ನಮ್ಮ ಏಳಿಗೆಗೆಂದು ನೇಮಿಸಿದ್ದಾರೆ. ಸುಮಾರು 200 ರೂಪಾಯಿಗಳ ಸಂಬಳವೂ ಅವರಿಗೆ ಸಲ್ಲುತ್ತಿದೆ. ಆದರೆ ಅವರನ್ನು ಯಾವ ಉದ್ದೇಶದಿಂದ ನೇಮಿಸಿದ್ದೀರೋ ಆ ಉದ್ದೇಶ ಖಂಡಿತ ನಡೆಯುತ್ತಿಲ್ಲವೆನ್ನಬೇಕು. ಸುಮ್ಮನೆ ಅವರಿಗೆ ಸಂಬಳ ಕೊಡುತ್ತಿದೆಯೇ ಹೊರತು ಅವರಿಂದ ಕೆಲಸ ತೆಗೆದುಕೊಳ್ಳುತ್ತಿಲ್ಲ. ಬಹುಶಃ ಇಷ್ಟು ಮಾಡುತ್ತಿರಬಹುದು: ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಬಡ್ಜೆಟ್ಟಿನಲ್ಲಿ ಒಂದಿಷ್ಟು ಹಣವಿಟ್ಟಿರುವುದನ್ನು ಆ ಜನಗಳಿಗೆ ಹಂಚಿ ಮನೆಗಳನ್ನು ಕಟ್ಟಿಸಿಕೊಡುವುದನ್ನು ನೋಡುತ್ತಿದ್ದಾರೆಯೇ ಹೊರತು, ಅವರು ಯಾರಿಗೂ ಒಂದು ಎಕರೆ ಜಮೀನನ್ನು ಕೊಡುವುದಕ್ಕೂ ಅಧಿಕಾರವಿಲ್ಲ. ಯಥಾಪ್ರಕಾರ ಮಾಮೂಲು ಶೇಕ್‌ದಾರರಿಗೆ ಅರ್ಜಿಯನ್ನು ಕೊಟ್ಟರೇ ಹೊರತು ಇವರಿಗೆ ಕೊಟ್ಟರೆ ಏನೂ ಸಿಕ್ಕುವುದಿಲ್ಲ. ಯಾವ ತಾಲ್ಲೂಕಿನಲ್ಲೇ ಆಗಲಿ, ಡಿಸ್ಟ್ರಿಕ್ಟಿನಲ್ಲೇ ಆಗಲಿ ಈ ಸ್ಪೆಷಲ್ ಆಫೀಸರು ಯಾರಿಗೂ ಜಮೀನನ್ನು ಕೊಟ್ಟಹಾಗಿಲ್ಲ. ಹರಿಜನರ ಮನೆಗಳಿಗೆ ಒಂದಷ್ಟು ಹಣ ಕೊಟ್ಟು ಅವರು ಕಟ್ಟಿದರೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದೇ ಹೊರತು ಬೇರೆಯೇನೂ ಇಲ್ಲ. ಇನ್ನೂ, ಇತರೇ ಖಾಸಗೀ ಜನಗಳೇ ಮುಂದೆ ಬಂದು ಬೇಕಾದಷ್ಟು ಸಹಾಯಮಾಡುತ್ತಿದ್ದಾರೆ ಎನ್ನಬಹುದು. ಇವರುಗಳನ್ನು ನೀವು ಮೊದಲು ನೇಮಿಸಿದುದರ ಉದ್ದೇಶ, ಜಮೀನು ದರಖಾಸ್ತು ವಿಲೇವಾರಿ ಮುಂತಾದುವುಗಳಲ್ಲಿ ನಿಮ್ನತರಗತಿಯವರ ಹಿತರಕ್ಷಣೆಯನ್ನು ಚೆನ್ನಾಗಿ ನೋಡಿಕೊಳ್ಳಬಹುದೆಂದು ಮಾಡಿತ್ತು. ಆ ರೀತಿ ಯೋಚನೆಮಾಡಿ ಅವರನ್ನು ನೇಮಿಸಿದರೂ, ಈಚೆಗೆ ತಾವು ಮಾಡಿರುವ ಹಲವಾರು ಸರ್ಕಾರಿ ಹುಕುಮುಗಳಿಂದ ಈ ಡಿಪ್ರೆಸ್ಡ್ ಕ್ಲಾಸ್ ಸ್ಪೆಷಲ್ ಆಫೀಸರುಗಳು ಜಮೀನು ದರಖಾಸ್ತುಗಳ ವಿಷಯದಲ್ಲಿ ಯಾವ ಅರ್ಜಿಯನ್ನೂ ಇತ್ಯರ್ಥಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಆದ್ದರಿಂದ ಸರ್ಕಾರದವರು ಯಾವದೊಂದು ಕೆಲಸಮಾಡಬೇಕಾದರೂ ನಿರ್ದಿಷ್ಟವಾದ ಒಂದು ನೀತಿ, ಅಭಿಪ್ರಾಯ ಇಟ್ಟುಕೊಂಡು ಹೋಗಬೇಕು. ಉದಾಹರಣೆಗೆ ಅದೇ, ಮದ್ರಾಸಿನಲ್ಲಿ ನೋಡಿ. ಡಿಪ್ರೆಸ್ಡ್ ಕ್ಲಾಸ್‌ನವರು ಇಡೀ ಮೈಸೂರು ದೇಶದ ಜನಾಂಗದಲ್ಲಿ ಅರ್ಧದಷ್ಟಿದ್ದಾರೆ. ಸ್ಥಳೀಯ ಸಂಸ್ಥೆಗಳ ಮಂತ್ರಿಗಳೇ ನಿಮ್ನ ತರಗತಿಗಳವರ ಮಂತ್ರಿಗಳೂ ಆಗಿ ನಿಮ್ನ ತರಗತಿಗಳ ಅಭಿವೃದ್ಧಿ ಕಾರ್ಯವೂ ಅವರ ಪೋರ್ಟ್‌ಫೋಲಿಯೋವಿಗೇ ಸೇರಿದೆ. ಇಷ್ಟಾದರೂ ಹರಿಜನರ ಕಷ್ಟಸುಖಗಳೇನು, ಹತ್ತು ವರ್ಷಗಳಲ್ಲಿ ಅವರನ್ನು ಅಭಿವೃದ್ಧಿಗೆ ತರಬೇಕಾದರೆ ಏನು ಯೋಜನೆಯನ್ನು ಹಾಕಿಕೊಳ್ಳಬೇಕು, ಅವ

ರಿಗೆ ಏನೇನು ತೊಂದರೆಗಳಿವೆ, ಎಷ್ಟು ಕಾಲದಲ್ಲಿ ಅವರನ್ನು ಇತರೆಯವರ ಮಟ್ಟಕ್ಕೆ ತರುವುದಕ್ಕೆ ಸಾಧ್ಯವೆಂಬುದನ್ನು ಯೋಚಿಸುವುದಕ್ಕೆ ಏನಾದರೂ ಯೋಜನೆಯಿದೆಯೆ ? ಇಲ್ಲ. ಈಗ ಹತ್ತು-ಇಪ್ಪತ್ತು ವರ್ಷಗಳಿಂದ ಕೋಟ್ಯಾಂತರ ರೂಪಾಯಿಗಳನ್ನಾಗಲೇ ಖರ್ಚು ಹಾಕುತ್ತಾ ಇದ್ದೀರಿ. ಆದರೆ ಏನಾಗಿದೆ ? ಎಷ್ಟು ಮಟ್ಟಿಗೆ ನಿಮ್ಮ ಉದ್ದೇಶ ಸಫಲವಾಗಿದೆಯೆಂದು ನಿಮಗೆ ಹೇಳುವುದಕ್ಕಾಗಿದೆಯೇ ? ಹಾಗೆ ಮಾಡಬೇಕಂದರೆ, ಒಂದು ಸಮಿತಿಮಾಡಿ ನಿಪುಣರನ್ನು ಸೇರಿಸಿ ಒಂದು ಕಾರ್ಯಪಟ್ಟಿಯನ್ನು ತಯಾರಿಸುವ ಏರ್ಪಾಡು ಮಾಡಿ. ಒಂದು ಕೆರೆ ಕಟ್ಟಿಸಬೇಕೆಂದರೆ ಮೊದಲೇ ಎಷ್ಟು ದುಡ್ಡು ಖರ್ಚುಮಾಡಿದರೆ ಎಷ್ಟು ವರ್ಷಗಳಲ್ಲಿ ಎಷ್ಟು ಎಕರೆಗಳನ್ನು ಸಾಗುವಳಿಗೆ ತಂದು ಎಷ್ಟು ಫಸಲು ಮಾಡುವುದಕ್ಕಾಗುತ್ತದೆಂದು ಅಂದಾಜುಮಾಡಿಕೊಂಡು ಒಂದು ಕಾರ್ಯನೀತಿಯನ್ನು ಅನುಸರಿಸುತ್ತೀರೋ ಅದೇ ರೀತಿ ಇದಕ್ಕೂ ಒಂದು ಕಾರ್ಯನೀತಿಯಿರಬೇಡವೆ ? ಡಿಪ್ರೆಸ್ಡ್ ಕ್ಲಾಸಿನವರ ಅಭಿವೃದ್ಧಿಗಾಗಿ ಸಬ್‌ಡಿವಿಜನ್ ಆಫೀಸರ ದರ್ಜೆಯ ಒಬ್ಬ ರೀಜನಲ್ ಆಫೀಸರನ್ನು ಈ ಊರಿನಲ್ಲಿ ನೇಮಿಸಿದ್ದೀರಿ. ಮಂತ್ರಿಗಳು ಇಲ್ಲೇ ಪಕ್ಕದಲ್ಲೇ ಇದ್ದು ಡಿಪ್ರೆಸ್ಡ್ ಕ್ಲಾಸಿನವರಿಗೆ ಸಂಬಂಧಪಟ್ಟಿದ್ದನ್ನೆಲ್ಲಾ ನೋಡಿಕೊಳ್ಳುತ್ತೇವೆಂದಿದ್ದರು. ಆ ರೀಜನಲ್ ಆಫೀಸರಿಗೆ ಚಾಮರಾಜಪೇಟೆಯಲ್ಲಿ ಎಲ್ಲೋ ಒಂದು ಕಡೆ ಒಂದು ಆಫೀಸೆಂದು ಮಾಡಿಬಿಟ್ಟು ಅವರಿಗೆ ಒಬ್ಬ ಗುಮಾಸ್ತನಾಗಲಿ, ಜವಾನನಾಗಲೀ ಯಾವ ಸಹಾಯವನ್ನೂ ಕೊಡದೆಯಿದ್ದರೆ ಅವರೇನು ಮಾಡಿಯಾರು ? ಮೈಸೂರಿನಲ್ಲಿ ಒಂದು ಡಿವಿಜನಲ್ ಆಫೀಸು, ಬೆಂಗಳೂರಿನಲ್ಲಿ ಒಂದು ಡಿವಿಜನಲ್ ಆಫೀಸು ಎಂದು ಮಾಡಿದ್ದೀರಿ ; ಅದಕ್ಕೆ ಆಫೀಸರು ಯಾರು, ಆಫೀಸು ಎಲ್ಲಿದೆ ಎಂಬುವೇ ಗೊತ್ತಿಲ್ಲ ! ಅಲ್ಲಿಗೊಬ್ಬ ಕ್ಲಾರ್ಕ್ ಆಗಲಿ ಇಲ್ಲ. ಹೀಗಾದರೆ ನಿಮ್ಮ ತರಗತಿಯವರಿಗೆ ಏನು ಸಹಾಯ ಮಾಡಿದಹಾಗಾಯಿತು ? ಆದ್ದರಿಂದ ಸರ್ಕಾರದವರು ದೊಡ್ಡಮನಸ್ಸುಮಾಡಿ ದೇಶದ ಪ್ರಜಾಸಂಖ್ಯೆಯಲ್ಲಿ 1/5 ಭಾಗದಷ್ಟಿರುವ ಈ ಜನಾಂಗದವರು ಇತರೇಯವರ ಮಟ್ಟಕ್ಕೆ ಬರುವಂತೆ ಯಾವುದಾದರೂ ಒಂದು ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ನಿಮ್ಮ ಉದ್ದೇಶವನ್ನು ಸಫಲಗೊಳಿಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಸ್ವಾಮಿ, ಈ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕಾಗಿ ನಮ್ಮ ದೇಶದ ಉತ್ಪತ್ತಿಯಲ್ಲಿ ನಾಲ್ಕರಲ್ಲೊಂದು ಪಾಲು ಖರ್ಚಾಗುತ್ತಿದೆ. ಅಷ್ಟಾಗಿದ್ದರೂ ಮೊದಲಿನಂತೆ ನಮ್ಮ ಹರಿಜನ ವಿದ್ಯಾರ್ಥಿಗಳಿಗೆ ಕೇವಲ 12—15 ರೂಪಾಯಿಗಳ ವಿದ್ಯಾರ್ಥಿ ವೇತನವನ್ನೇ ಈಗಲೂ ಕೊಡುತ್ತಿದ್ದಾರೆ. ಇದು ಈಗ ಸಾಲದು. ಅಲ್ಲದೆ ಮೊದಲು ಈ ಬಾಬಿಗೆ ಎಷ್ಟು ಹಣವನ್ನು ಒದಗಿಸುತ್ತಿದ್ದರೋ ಈಗಲೂ ಅಷ್ಟೇ ಹಣವನ್ನು ಒದಗಿಸುತ್ತಿದ್ದಾರೆ. ಆದರೆ ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆ ವರ್ಷ ವರ್ಷ ಹೆಚ್ಚಾಗುತ್ತಿದೆ. ಈಗಿನ ಕಾಲಸ್ಥಿತಿಗೆ ತಕ್ಕಹಾಗೆ ಈ ವಿದ್ಯಾರ್ಥಿವೇತನಗಳನ್ನು ಜಾಸ್ತಿಮಾಡಿಕೊಡಬೇಕು. ಅಲ್ಲದೆ 'ಲಾ' ಕಾಲೇಜಿನಲ್ಲಿ ವ್ಯಾಸಂಗಮಾಡತಕ್ಕ ಹರಿಜನ ವಿಧ್ಯಾರ್ಥಿಗಳಿಗೆ ಅಲ್ಲಿಯೂ ಸಹ ವಿದ್ಯಾರ್ಥಿವೇತನ ಕೊಡುವಂತೆ ಏರ್ಪಾಡನ್ನು ಮಾಡಬೇಕು.

ಅಧ್ಯಕ್ಷರು.—ತಾವು ಒಂದು ಸಮಿತಿಮಾಡಬೇಕೆಂದು ಹೇಳುತ್ತಾ, ಈಗ ಆ ಸಮಿತಿಯವರು ಏನುಮಾಡಬೇಕೋ ಅದನ್ನೆಲ್ಲಾ ತಾವೇ ಹೇಳುತ್ತಿದ್ದೀರಿ.

ಶ್ರೀ ಟಿ. ಹನುಮಯ್ಯನವರು.—ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ಖರ್ಚಾಗುತ್ತಿರುವುದರಿಂದ, ಅಲ್ಲಿ ವ್ಯಾಸಂಗಮಾಡಲಿಕ್ಕೆ ಬರುವ ಹರಿಜನ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಸ್ಕಾಲರ್‌ಷಿಪ್‌ಗಳನ್ನು ಕೊಟ್ಟು ಅವರು ಅಧಿಕ ಸಂಖ್ಯೆಯಲ್ಲಿ ವಿದ್ಯಾವಂತರಾಗಲಿಕ್ಕೆ ಪ್ರೋತ್ಸಾಹ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಸರ್ಕಾರದವರು ಇತ್ತೀಚೆಗೆ ದೇಶದಲ್ಲಿ ಅಲ್ಲಲ್ಲೇ ಪಾನನಿರೋಧವನ್ನೇನೋ ಜಾರಿಗೆತಂದಿದ್ದಾರೆ. ಹಾಗೆ ಜರಿಗೆತಂದಿರತಕ್ಕ ಸ್ಥಳಗಳಲ್ಲಿರತಕ್ಕ ಈಚಲು ವನಗಳನ್ನು ಮಾತ್ರ ನಮ್ಮ ಜನರಿಗೆ ವ್ಯವಸಾಯಕ್ಕೆ ಬಿಡಿಸಿಕೊಡಬೇಕೆಂದು ಕೇಳಿದ್ದೆವು. ಇಲ್ಲಿಗೆ 2—3 ವರ್ಷಗಳಾದರೂ ಆಗಿಲ್ಲ. ಹೀಗೆ ಪಾನನಿರೋಧವನ್ನು ಜಾರಿಗೆ ತಂದಿದ್ದರೂ, ಹಾಗೆ ಜಾರಿಯಲ್ಲಿರುವ ಕೆಲವು ಕಡೆ ಅಂದರೆ ದಾವಣಗೆರೆಯಲ್ಲಿ ಅದೇ ಹೆಂಡವನ್ನು ಈಗ ಆ ಹೆಸರಿನಿಂದ ಕರೆಯದೆ 'ನೀರಾ' ಎಂಬ ಬೇರೆ ಹೆಸರನ್ನು ಅದಕ್ಕೆ ಇಟ್ಟು ಅದನ್ನು ಅಲ್ಲಿ ಮಾರಾಟಮಾಡಬಹುದೆಂದು ಸರ್ಕಾರಿ ಹುಕುಂ ಹೊರಡಿಸಿದ್ದಾರೆ. ಇದು ಯಾವ ನ್ಯಾಯ ! ಹಿಂದೆ ಹೆಂಡ ಕುಡಿದಿದ್ದವರಿಗೆ ಈ ನೀರಾ ಹೇಗಿರುತ್ತೆಂಬ ಮನೋಭಾವನೆ ಉಂಟಾಗಿ ಮತ್ತೆ ಅವರೆಲ್ಲರೂ ಈ ದುರಭ್ಯಾಸಕ್ಕೆ ಬೀಳಲು ಮಾರ್ಗಮಾಡಿಕೊಟ್ಟಂತೆ ಆಗಿದೆ. ಸರ್ಕಾರದವರು ಹೀಗೆಮಾಡುವ ಮುನ್ನ ಆ ಬಗ್ಗೆ ಈ ಮಾನ್ಯ ಸಭೆಯ ಅಭಿಪ್ರಾಯವೇನೆಂಬುದನ್ನಾದರೂ ಕೇಳಿದ್ದಾರೆಯೇ ಎಂದರೆ ಅದೂ ಸಹ ಇಲ್ಲ. ಈಗಾಗಲೇ ಹರಿಜನರು ಈ ಅಭ್ಯಾಸಕ್ಕೆ ಬಿದ್ದು ಬಹಳ ಹಣವನ್ನು ಕಳೆದುಕೊಂಡಿದ್ದಾರೆ.

ಅಧ್ಯಕ್ಷರು.—ತಾವು ಪ್ರಸ್ತಾಪಿಸುತ್ತಿರುವ ಪಾನನಿರೋಧ ವಿಚಾರ ಈಗ ಸಭೆಯ ಮುಂದಿರತಕ್ಕ ವಿಚಾರಕ್ಕೂ ಸಂಬಂಧಿಸಿಲ್ಲ.

ಶ್ರೀ ಟಿ. ಹನುಮಯ್ಯನವರು.—ಹಾಗೆ ದಾವಣಗೆರೆಯಲ್ಲಿ ಮಾರಾಟಮಾಡುತ್ತಿರುವ 'ನೀರಾ' ವ್ಯಾಪಾರವನ್ನು ಕೂಡಲೇ ನಿಲ್ಲಿಸುವಂತೆ ಮಾಡಬೇಕು. ಈಗ ಸಂಬಂಧಪಟ್ಟ ಮಾನ್ಯ ಮಂತ್ರಿಗಳಿಲ್ಲದಿರುವುದು ನನ್ನ ತಪ್ಪಲ್ಲ. ನಾನು ಹೇಳಬೇಕಾದ್ದನ್ನು ಹೇಳುತ್ತಿದ್ದೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು).—ಯಾರು ಇಲ್ಲವೆಂದು ಹೇಳಿದಿರಿ ! ಸಂಬಂಧಪಟ್ಟ ಮಂತ್ರಿಗಳಿದ್ದಾರಲ್ಲಾ.

ಶ್ರೀ ಟಿ. ಹನುಮಯ್ಯನವರು.—ಈ ಹೆಂಡದ ಮಾರಾಟ ತಪ್ಪಿಸಿ, ಆ ಈಚಲು ವನಗಳನ್ನೆಲ್ಲಾ ನಮಗೇ ವ್ಯವಸಾಯಕ್ಕೆ ಕೊಡುವಂತೆ ಮಾಡಬೇಕು. ಈ ವಿಚಾರವನ್ನು ನಾನು ಮೊದಲಿನಿಂದಲೂ ಕೇಳುತ್ತಲೇ ಬಂದಿದ್ದೇನೆ. ಆದರೆ ಶ್ರೀ ಭೀಮಪ್ಪನಾಯಕರು ತಿಳಿಸಿದಂತೆ ಆ ಜಮೀನೆಲ್ಲವೂ ಕೇವಲ ದೊಡ್ಡದೊಡ್ಡ ರೈತರಿಗೆ ಮಾತ್ರ ಸಿಕ್ಕುತ್ತಿದೆಯೇ ವಿನಾಃ ನಮಗೆ ಮಾತ್ರ ದೊರೆಯುತ್ತಿಲ್ಲ.

ಅಧ್ಯಕ್ಷರು.—ಇದೆಲ್ಲವೂ ನೀವು ಹೇಳತಕ್ಕ ಸಮಿತಿಯವರು ಮಾಡಬೇಕಾಗಿರತಕ್ಕ ಕೆಲಸ. ಅದನ್ನೆಲ್ಲಾ ನೀವೀಗ ಹೇಳಿದರೆ ಆ ಸಮಿತಿ ನೇಮಕಕ್ಕೆ ಅಗತ್ಯವೆಲ್ಲಿದೆ!

ಶ್ರೀ ಟಿ. ಹನುಮಯ್ಯನವರು.—ಈ ವಿಷಯಗಳನ್ನೆಲ್ಲಾ ಅನುಕೂಲಪಡಿಸಿಕೊಡಲು ಸರ್ಕಾರದವರು ಒಂದು ತಜ್ಞರ ಮತ್ತು ನಿಪುಣರಾದವರ ಸಮಿತಿ ಮಾಡಿ ತನ್ಮೂಲಕ ಹರಿಜನರನ್ನು ಉದ್ಧಾರ ಮಾಡುವಂತೆ ಅನುಕೂಲಮಾಡಿಕೊಡಲು ಇಂಥಾ ಒಂದು ಸಮಿತಿ ಅಗತ್ಯವಾಗಿರುದರಿಂದ ಇದಕ್ಕೆ ಮಾನ್ಯ ಸದಸ್ಯರುಗಳೂ ಮತ್ತು ಸರ್ಕಾರದವರೂ ಒಪ್ಪಿಕೊಳ್ಳಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ ನಿಮ್ನ ಪಂಗಡ).—ಸ್ವಾಮಿ, ಈ ನಿರ್ಣಯವನ್ನು ನಾನು ಅನುಮೋದಿಸುತ್ತ, ಹೆಚ್ಚು ವಿಷಯಗಳನ್ನೇನೂ ಹೇಳದೆ ಕೇವಲ ಒಂದೆರಡು ವಿಷಯಗಳನ್ನು ಮಾತ್ರ ತಿಳಿಸಬೇಕೆಂದಿದ್ದೇನೆ. ಈಗ ನಾನು ಹೇಳತಕ್ಕದ್ದೇನೆಂದರೆ,—I want to make out a case.—ಇಂಥಾ ಒಂದು ವಿಷಯದಲ್ಲಿ ಸರ್ಕಾರದವರು ನಾಲ್ಕಾರು ವರ್ಷಗಳಿಂದಲೂ 'ವಿಷಯದಲ್ಲಿ ಸದಸ್ಯರು ತರುತ್ತಿರುವ ನಾನಾ ರೂಪವಾದ ಬೇಡಿಕೆಗಳಿಗೆ, ಆಲೋಚನೆ ಮಾಡಲಾಗುತ್ತದೆ, ಪರಿಶೀಲನೆ ಮಾಡಲಾಗುತ್ತದೆ' ಎಂದು ಉತ್ತರ ಹೇಳುತ್ತ ಬಂದಿದ್ದಾರೆಯೇ ಹೊರತು ಒಂದನ್ನಾದರೂ ಕಾರ್ಯತಃ ಮಾಡಿ ತೋರಿಸಿಲ್ಲ. ಈಗ ಬಂದಿರತಕ್ಕ ನಿರ್ಣಯದಲ್ಲಾದರೋ ಈ ಹರಿಜನರ ಏಳಿಗೆಯ ಬಗ್ಗೆ ಮತ್ತು ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸತಕ್ಕ ಬಗ್ಗೆ ಮತ್ತು ಅವರ ಪುರೋಭಿವೃದ್ಧಿಯನ್ನುಂಟುಮಾಡತಕ್ಕ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನೂ ಮತ್ತು ಯೋಜನೆಗಳನ್ನೂ ತಯಾರಿಸತಕ್ಕ ಬಗ್ಗೆ ಸಲಹೆ ನೀಡತಕ್ಕ ಒಂದು ಸಮಿತಿಯನ್ನು ಬಹು ಬೇಗ ರಚನೆ ಮಾಡಬೇಕೆಂಬುದಾಗಿ ಕೇಳಿಕೊಂಡಿದ್ದಾರೆ. ಆದರೆ ಇಂಥಾ ಒಂದು ಸಮಿತಿಯ ನೇಮಕ ಅತ್ಯಗತ್ಯವಾಗಿರುತ್ತೆಂಬ ವಿಚಾರ ಇಲಾಖೆಯವರಿಗೂ ಮತ್ತು ಸರ್ಕಾರದವರಿಗೂ ಬಹಳ ಚೆನ್ನಾಗಿಯೇ ಮನವರಿಕೆಯಾಗಿದೆ. ಹಾಗೆ ಆಗಿದ್ದರೂ ಸಹ ಏಕೋ ಅವರು ಇದನ್ನು ಮಾಡಲು ಇನ್ನೂ ಮನಸ್ಸನ್ನು ಮಾಡಿರುವುದಿಲ್ಲ. ಆದರೆ ಅದಕ್ಕೆ ಕಾರಣವೇನೋ ನನಗೆ ತಿಳಿಯದಾಗಿದೆ. ಈ ಹಿಂದೆ ಸರ್ಕಾರದವರು ತಾವಾಗಿಯೇ ಹೊರಡಿಸಿರತಕ್ಕ ಆಜ್ಞೆಗಳಲ್ಲಿ, ಅಂದರೆ ರೂರಲ್ ಡೆವಲಪ್‌ಮೆಂಟ್ ಯೋಜನೆಯನ್ನು ಜಾರಿಗೆ ತರತಕ್ಕ ಕಾಲದಲ್ಲಿ, ಇಂಥಾ ಒಂದು ಸಮಿತಿಯ ನೇಮಕ ಅಗತ್ಯವಾಗಿದೆಯೆಂದು ಒಪ್ಪಿಕೊಂಡಿದ್ದಾರೆ. ಆದರೆ ಹಾಗೆ ತಿಳಿಸಿ ಇಲ್ಲಿಗೆ 2-3 ವರ್ಷಗಳ ಮೇಲಾಯಿತು. ಆದಾಗ್ಯೂ ಇನ್ನೂ ಅಂಥಾ ಸಮಿತಿಯನ್ನು ನೇಮಕಮಾಡಿಲ್ಲ. ಅದಕ್ಕೆ ಕಾರಣ, ಅವರಿಗೆ ಮನಸ್ಸಿಲ್ಲದಿರುವುದೇ ಆಗಿದೆ. ಅವರು ಹಾಗೆ ಮನಸ್ಸು ಮಾಡಿದ್ದರೆ ಎಂದೋ ಸಾಧ್ಯವಾಗುತ್ತಿತ್ತು. ಆ ಬಗ್ಗೆ ಹೀಗೆ ಕೆಲಸ ಮಾಡಬೇಕೆಂಬ ಮನಸ್ಸು ಸರ್ಕಾರದವರಿಗೆ ಇಲ್ಲವೆಂಬುದನ್ನು ಸೂಚಿಸಲು ಈ ಒಂದು ಉದಾಹರಣೆಯನ್ನು ಕೊಟ್ಟೆ. ಹಾಗೆ ಅದನ್ನು ಸ್ಥಾಪಿಸಲು ಯಾವುದಾದರೂ ಸರಿಯಾದ ಕಾರಣಕ್ಕಾಗಿ ನಿಧಾನವಾಗಿದೆಯೆಂದು ತಿಳಿಸಿದ್ದರೆ ಅದನ್ನಾದರೂ ನಾನು ಒಪ್ಪುತ್ತಿದ್ದೆನು. ಆದರೆ ಅಂಥಾ ಕಾರಣಗಳೂ ಸಹ ಇದ್ದಂತೆ ಕಾಣುತ್ತಿಲ್ಲ. ಅಂದಮೇಲೆ ಮುಖ್ಯವಾಗಿ ಅವರಿಗೆ ಮಾಡಬೇಕೆಂಬ ಇರಾದೆಯಿಲ್ಲವೆಂದೇ ಭಾವಿಸಬೇಕಾಗುತ್ತದೆ. ಹೀಗೇನಾದರೂ ಒಂದೊಂದು ಕಾಲದಲ್ಲಿ ಒತ್ತಾಯಮಾಡಿದರೆ ಆಗಿನ ಸನ್ನಿವೇಶಕ್ಕೆ ತಕ್ಕಂತೆ ಸರ್ಕಾರದವರು ಇದನ್ನು ಶೀಘ್ರದಲ್ಲೇ ಆಲೋಚನೆಮಾಡಿ, ಒಂದು ತೀರ್ಮಾನಕ್ಕೆ ಬರಬೇಕೆಂದಿದ್ದಾರೆ, ಎಂಬಿತ್ಯಾದಿ ಜವಾಬುಗಳನ್ನು ಹೇಳುತ್ತಾರೆ. 1942ನೆಯ ಇಸವಿಯಿಂದಲೂ ಸಹ ಇಂತಹ ಭರವಸೆಗಳನ್ನು ಕೊಡುತ್ತಲೇ ಬಂದಿದ್ದಾಗ್ಯೂ ಇದುವರೆಗಾದರೂ ಯಾವುದನ್ನೂ ಮಾಡಿಲ್ಲ. ಹಿಂದೆ ಸೆಂಟ್ರಲ್ ಡಿಪ್ರೆಸ್ಡ್ ಕ್ಲಾಸ್ ಸಮಿತಿ ಇದ್ದಾಗಿನಿಂದಲೂ ಸಹ ಇದೇ ರೀತಿ ಹೇಳುತ್ತಾ ಬಂದಿದ್ದಾರೆ. ಇಲ್ಲಿಯವರೆಗೆ ನನಗೆ ಈ ಸಾರ್ವಜನಿಕ ರಂಗದಲ್ಲಿ ಬಂದಿರತಕ್ಕ ಅನುಭವದ ಪ್ರಕಾರ ಅಧಿಕಾರದಲ್ಲಿರತಕ್ಕವರು, ಅಂದರೆ ಸರ್ಕಾರದವರು; ಇಲ್ಲಿಯತನಕ ಈ ಹರಿಜನರ ಅಭಿವೃದ್ಧಿಗಾಗಿ ಏನೇನು ಯೋಜನೆಗಳನ್ನು ತಯಾರಿಸಿದ್ದಾರೋ, ಅವೆಲ್ಲವೂ ಕೇವಲ ಕಾಗದದ ಯೋಜನೆ ಮತ್ತು ಆಜ್ಞೆಗಳಾಗಿವೆಯೇ ಹೊರತು, ಅವರು ಮನಸ್ಸುಮಾಡಿ ಒಂದನ್ನಾದರೂ ನಡೆಸಿ, ಅದರ ಫಲ ದೊರೆಯುವಂತೆ ಮಾಡಿಲ್ಲ. ಅದಕ್ಕೆಲ್ಲಾ ಕಾರಣ ಅವರಿಗೆ ಇದನ್ನು ಮಾಡಬೇಕೆಂಬ ಮನಸ್ಸಿಲ್ಲದಿರತಕ್ಕದ್ದೇ ಆಗಿದೆ.

ಅಧ್ಯಕ್ಷರು.—ಹಾಗೆ ಸರ್ಕಾರದವರು ಮನಸ್ಸು ಮಾಡಿದರೆ ಎಲ್ಲಾ ಕೆಲಸಗಳನ್ನೂ ಮಾಡಬಹುದು ಎಂದು ಹೇಳುತ್ತಿದ್ದೀರಿ. ಹಾಗೆ ಅವರಿಗೆ ಅಂಥಾ ಮನಸ್ಸೇ ಇಲ್ಲವೆಂದು ತಾವು ಭಾವಿಸಿರುವಾಗ ಇನ್ನು ಈ ಒಂದು ಸಮಿತಿಯ ನೇಮಕದ ಆಗತ್ಯವಾದರೂ ಏತಕ್ಕೆಬೇಕು ?

ಶ್ರೀ ಎಂ. ಮಾದಯ್ಯನವರು.—ಆದರೆ ಹಾಗೆ ಮಾಡದೆ ಇರುವುದಕ್ಕೆ ಮತ್ತು ಅವರಿಗೆ ಮನಸ್ಸು ಏತಕ್ಕೆ ಬರುತ್ತಿಲ್ಲ ಎಂಬುದಕ್ಕೆ ಕಾರಣಗಳೇನಿವೆಯೋ ಅವಂತೂ ನನಗೆ ಒಂದೂ ಕಾಣುತ್ತಿಲ್ಲ. ಈ ಅಂಶವನ್ನು ಮುಖ್ಯವಾಗಿ ಅವರ ಗಮನಕ್ಕೆ ತರಬೇಕಾಗಿರುತ್ತೆ. ಅಂತೂ ಇಲ್ಲಿಯತನಕ ಹಿಂದಿನಿಂದ ಏನೇನು ಹೇಳಿದ್ದರೋ ಆ ಬಗ್ಗೆ ಯಾವ ಒಂದು ಸಮಿತಿಯನ್ನೂ ಮಾಡಿರುವುದಿಲ್ಲ; ಮತ್ತು ಹಿಂದೆ ಇದ್ದ ಸಮಿತಿಯು ಕೊಟ್ಟ ಸಲಹೆಗಳನ್ನೂ ಸಹ ಇವರು ನೆರವೇರಿಸಿ ಕೊಟ್ಟಿಲ್ಲ. ಆ ಸಮಿತಿಯ ಸಲಹೆಗಳಿಗನುಗುಣವಾಗಿ ಯಾವುದೊಂದು ಕೆಲಸ ಸಹ ನಡೆದಿರುವುದಿಲ್ಲ.

ಇದರ ಅಗತ್ಯವನ್ನು ರಾಜ್ಯಾಂಗ ಜಾರಿಗೆ ಬಂದ ಮೇಲೆ ಅನೇಕ ಸಲ ಹೇಳಿದೆ, ಹೇಳಿಹೇಳಿ ಸಾಕಾಗಿದೆ. ಇದನ್ನೆಲ್ಲಾ ಯೋಚನೆಮಾಡಿ ನಮ್ಮ ರೀತಿ ನೀತಿ ಹೇಗಿರಬೇಕು ಎಂಬುದಕ್ಕೆ ಒಂದು ತಜ್ಞರ ಸಮಿತಿಯೇರ್ಪಡಿಸಿ ಪರಿಶೀಲಿಸಬೇಕು ಎಂದು ಅನೇಕವೇಳೆ ಒತ್ತಾಯ ಮಾಡಿದ್ದರೂ ಸಹ ಅದನ್ನು ಮಾಡಿರುವುದಿಲ್ಲ. ಅದಕ್ಕೆ ಕಾರಣವೇನೋ ತಿಳಿಯದು. ಈಗತಾನೆ ಜಿಲ್ಲಾ ಬೋರ್ಡಿನ ಮಸೂದೆಯನ್ನು ಅಂಗೀಕಾರ ಮಾಡುವುದರಲ್ಲಿದ್ದೇವೆ. ಅದಕ್ಕೆ ಚುನಾವಣೆಯಾದ ಮೇಲೆ ಒಂದು ಅಡ್ವೈಜರಿ ಸಮಿತಿಯಾಗುತ್ತದೆ. ಈ ಸಂದರ್ಭದಲ್ಲಿ ಕೇವಲ ಕೆಲವು ಯೋಜನೆಗಳನ್ನು ತಯಾರುಮಾಡಿ ಅವನ್ನು ಕಾರ್ಯರೂಪಕ್ಕೆ ತರಲು ಒಂದು ಸಮಿತಿಯಾಗಬೇಕೆ ಅಥವಾ ಖಾಯಂ ಆಗಿ ಒಂದು ಸಮಿತಿಯಾಗಬೇಕೆ ಎಂಬ ಪ್ರಶ್ನೆಯಿದೆ. ಸಮಿತಿ ಮಾಡಬೇಕಾದ್ದು ಅಗತ್ಯವೆಂದು ಸರ್ಕಾರದವರೂ ಮತ್ತು ಇತರರೂ ಒಪ್ಪಿದ್ದಾರೆಂಬುದು ವ್ಯಕ್ತವಾಗಿದೆ. ಆದರೆ ನಿರ್ಣಯದ ಪ್ರಕಾರ ಪ್ರವೀಣರ ಒಂದು ಸಮಿತಿಯಾಗಬೇಕೆ ಅಥವ ಆಜ್ಞೆಯಾಗಿರುವಂತೆ ಒಂದು ಪಾಲಿಸಿ ಸಮಿತಿ ಮಾಡಿದರೆ ಸಾಕೆ ಎಂಬುದನ್ನು ವಿಚಾರ ಮಾಡಬೇಕು. ಹಂಗಾಮಿ ಸಮಿತಿ ಅಗತ್ಯವಿಲ್ಲ. ಆಗಲೇ ಆಜ್ಞೆಮಾಡಿರುವ ಸಮಿತಿ ಮಾಡಿದರೆ ಸಾಕು. ನಿರ್ಣಯದ ಸೂಚಕರ ಮನಸ್ಸಿನಲ್ಲಿರುವುದು ಸಾಮಾನ್ಯವಾಗಿ ಒಂದು ಸಮಿತಿ ಮಾಡುವಾಗ ಪ್ರವೀಣರಿರುವುದರಿಂದ ಅವರು ಸೂಕ್ತವಾದ ಸಲಹೆಗಳನ್ನು ಏನು ಮಾಡಬೇಕೆಂಬುದಕ್ಕೆ ಕೊಡುತ್ತಿರುತ್ತಾರೆ ಎಂದು. ಖಾಯಮಾಗಿ ಸ್ಟ್ಯಾಂಡಿಂಗ್ ಪಾಲಿಸಿ ಸಮಿತಿಯಾಗಬೇಕೆಂಬುದು ಅವರ ಉದ್ದೇಶ. ಒಂದುವೇಳೆ ಹಾಗೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರೆ ಬೇಕಾದರೆ ಒಂದು ಹಂಗಾಮಿ ಸಮಿತಿ ಮಾಡಿ ಎಂದು ಹೇಳಬಹುದಾಗಿತ್ತು. ಸರ್ಕಾರದವರು ಪಾಲಿಸಿ ಸಮಿತಿ ಮಾಡುವುದಿಲ್ಲವೆಂದು ಹೇಳಿದರೆ ಒಂದು ಪ್ರವೀಣರ ಸಮಿತಿಯನ್ನು ಮಾಡಿ ಮೂರು ನಾಲ್ಕು ತಿಂಗಳಲ್ಲಿ ಯೋಜನೆ ಕಾರ್ಯರೂಪಕ್ಕೆ ತರುವುದಾದರೆ ಹಾಗೆ ಮಾಡುವುದು ಅಗತ್ಯ. ಆಜ್ಞೆಮಾಡಿರುವ ಪ್ರಕಾರ ಪ್ರವೀಣರ ಸಮಿತಿ ಮಾಡುವುದಾದರೆ

ಬೇರೆ ಸಮಿತಿ ಅಗತ್ಯವಿಲ್ಲ. ಒಟ್ಟಿನಲ್ಲಿ ಪಾಲಿಸಿ ಸಮಿತಿ ನೇಮಕ ಮಾಡುವುದು ಅತ್ಯಗತ್ಯ. ಸಮಿತಿಯಲ್ಲಿ ಏನೇನು ಮಾಡಬೇಕು ಎಂಬುದನ್ನು ಶ್ರೀ ವೆಂಕಟೇಶ್ ರವರು ಹೇಳಿದ್ದಾರೆ. ಪಾಲಿಸಿ ಸಮಿತಿಯಲ್ಲದಿದ್ದರೆ ಅವರು ಸೂಚಿಸಿರುವ ಪ್ರಕಾರ ರಚಿಸುವ ಸಮಿತಿಯೇ ಯಾವ್ಯಾವ ಯೋಜನೆ ಎಷ್ಟು ಮುಂದುವರೆಯುತ್ತಿದೆ ಯೆಂಬುದನ್ನು ಪರಿಶೀಲಿಸಿ ಅಭಿಪ್ರಾಯ ಸೂಚಿಸುತ್ತಿರುತ್ತದೆ. ಈಗಾಗಲೇ ಒಂದು ಸಮಿತಿಯನ್ನು ಮಾಡುತ್ತೇವೆಂದು ಸರ್ಕಾರದವರು ಹೇಳಿರುವುದರಿಂದ ನಾನು ಇಷ್ಟು ತಿಳಿಸಬೇಕಾಯಿತು. ಅದರ ಆವಶ್ಯಕತೆ ವಿಚಾರದಲ್ಲಿ ಹೆಚ್ಚಾಗಿ ಹೇಳಬೇಕಾಗಿಲ್ಲ. ಶ್ರೀ ಹನುಮಯ್ಯನವರು ಆಫೀಸರುಗಳ ವಿಚಾರವಾಗಿ ಎಲ್ಲಾ ಹೇಳಿದ್ದಾರೆ. ಅದನ್ನು ನೋಡಿದರೆ ಅಧಿಕಾರ ವರ್ಗದವರಿಗೆ ಸಾಕಾದಷ್ಟು ಅಧಿಕಾರ ಕೊಟ್ಟಿಲ್ಲ. ಸ್ಪೆಷಲ್ ಆಫೀಸರಿಗೆ ದರಖಾಸ್ತು ಇತ್ಯರ್ಥ ಮಾಡುವುದು ಮುಂತಾದ ವಿಚಾರಗಳಲ್ಲಿ ತಕ್ಕಷ್ಟು ಅಧಿಕಾರಬೇಕು. ಅವರು ತಮ್ಮ ಅಭಿಪ್ರಾಯ ಸೂಚಿಸಲು ಅವಕಾಶವಿರಬೇಕು. ಸಿಬ್ಬಂದಿಯೂ ಸಾಕಾದಷ್ಟುಬೇಕು. ಅವರಿಂದ ಸಾಕಾದಷ್ಟು ಕೆಲಸ ಮಾಡಿಸಿಕೊಳ್ಳಬಹುದು. ಕೆಲಸ ಸರಿಯಾಗಿ ಮಾಡದಿದ್ದರೆ ಅದಕ್ಕೆ ಕ್ರಮ ತೆಗೆದುಕೊಂಡು ಸರಿಪಡಿಸಬಹುದು. ಇಷ್ಟು ನನ್ನ ಅಭಿಪ್ರಾಯವನ್ನು ಸೂಚಿಸಿರುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಈ ನಿರ್ಣಯವನ್ನು ಸ್ವಾಗತಿಸುತ್ತೇನೆ ಮತ್ತು ಪುಷ್ಟೀಕರಿಸುತ್ತೇನೆ ಮತ್ತು ಸಕಾಲದಲ್ಲಿ ತಂದಿರುವುದರಿಂದ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತೇನೆ. ಮೈಸೂರಿನವರು ಪ್ರಾಯಶಃ ಇಡೀ ಹಿಂದೂಸ್ಥಾನದಲ್ಲಿ ಹರಿಜನರನ್ನು ಉದ್ಧಾರ ಮಾಡುವುದರಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದ್ದಾರೆ. ಗಾಂಧೀಜಿಯವರು ನಮ್ಮ ಕಾಂಗ್ರೆಸ್ಸಿಗೆ ಈ ಮಾರ್ಗವನ್ನು ಸೂಚಿಸುವುದಕ್ಕೆ ಮೊದಲೇ ಮೈಸೂರು ಸರ್ಕಾರದವರು ಇದಕ್ಕೆ ಪ್ರವೇಶಮಾಡಿ ಇಡೀ ಹಿಂದೂಸ್ಥಾನಕ್ಕೇ ಮೇಲುಪಂಕ್ತಿಯನ್ನು ತೋರಿಸಿದ್ದರು. ಆದರೆ ಯಾವ ರೀತಿ ಎಲ್ಲಿಯವರೆಗೆ ತೆಗೆದುಕೊಂಡು ಹೋಗಬಹುದು ಎಂಬುದು ಒಂದು ವಿಚಾರ. ಈಗ ಭಾರತ ರಾಜ್ಯಾಂಗದಲ್ಲಿ ಒಂದು ಗುರಿಯಿದೆ. ಇನ್ನು ಹತ್ತು ವರ್ಷಗಳಾದ ಮೇಲೆ ಅವರಿಗೆ ಪ್ರತ್ಯೇಕವಾಗಿ ಯಾವ ರಕ್ಷಣೆಯೂ ಕೂಡದು, ಇತರ ಕೋಮುಗಳಿಗೆ ಏನು ರಕ್ಷಣೆಯಿದೆಯೋ ಅದೇ ಅವರಿಗೂ ಇರಬೇಕು ಎಂದು ಸೂಚಿಸಿದ್ದಾರೆ. ಅದರ ಪ್ರಕಾರ ಆರ್ಥಿಕ, ವಿದ್ಯಾಭ್ಯಾಸ, ಸಾಮಾಜಿಕ ಮುಂತಾದುವುಗಳಲ್ಲಿ ಆ ಕಾಲಾವಧಿಯೊಳಗಾಗಿ ಇತರ ಕೋಮುಗಳ ಮಟ್ಟಕ್ಕೆ ಬರುತ್ತಾರೆ, ಅವರ ಸರಿಸಮಾನರಾಗುತ್ತಾರೆ ಎಂಬ ನಿರೀಕ್ಷೆಯಿಂದ ಆ ಒಂದು ಗುರಿಯನ್ನು ಇಟ್ಟಿದ್ದಾರೆ.

ಶ್ರೀ ಎಂ. ಮಾದಯ್ಯನವರು.—ಅಂಥಾದ್ದು ರಾಜ್ಯಾಂಗದಲ್ಲಿಲ್ಲ. ಹತ್ತು ವರ್ಷಗಳಾದ ಮೇಲೆ ಬೇಡ ಎಂದು ಹೇಳಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹತ್ತು ವರ್ಷಗಳ ಅವಧಿ ಇಟ್ಟಿರುವುದರಿಂದ ಆ ಅರ್ಥ ಬರುತ್ತದೆ. ತೀವ್ರವಾಗಿ ಯೋಚನೆಮಾಡಿ ಆ ಗುರಿ ಮುಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂಬ ಸೂಚನೆಯಿದೆ. ವಿದ್ಯಾಭ್ಯಾಸದ ವಿಚಾರ ತೆಗೆದುಕೊಂಡರೆ 1941ನೆಯ ಇಸವಿ ಸೆನ್ಸಸ್ ಪ್ರಕಾರ ನೋಡಿದರೆ—1951ನೆಯ ಇಸವಿ ಸೆನ್ಸಸ್ ಅಂಕಿ ಅಂಶಗಳು ಇನ್ನೂ ಪ್ರಕಟವಾಗಿಲ್ಲ—ಸಂಸ್ಥಾನದಮಳೆ ಒಟ್ಟು ಸಂಸ್ಥಾನದ ಎವರೇಜ್ 12 ಚಿಲ್ಲರೆ ಇದ್ದುದು ಈಗ ಶೇಕಡ 20 ಆಗಿದೆ. 1941ನೆಯ ಇಸವಿ ಸೆನ್ಸಸ್ ಪ್ರಕಾರ ಹರಿಜನರಲ್ಲಿ ಶೇಕಡ ಮೂರರಂತೆ ಇದ್ದರು. ಅಂದವೇಳೆ ಹರಿಜನರ ಉದ್ಧಾರ ಮಾಡಿದ್ದರೂ ಹಿಂದೆ ಶೇಕಡ ಮೂರರಂತೆ ಇತ್ತು ಎಂದು ಗೊತ್ತಾಗುತ್ತದೆ. ಈಗ ಸಾಧಾರಣವಾಗಿ ಸೇಕಡ 5-6 ಆಗಿರಬಹುದು. 1961ರ ಹೊತ್ತಿಗೆ ಸೇಕಡ 20ರಷ್ಟು ಆಗುವುದಕ್ಕೆ ಏನುಮಾಡಬೇಕೆಂಬುದನ್ನು ಈಗಲೇ ಯೋಚನೆ ಮಾಡಬೇಕು. ಇಲ್ಲದಿದ್ದರೆ ಹಿಂದಿನಂತೆ ಮಾಡುವುದರಿಂದ ಗುರಿಯನ್ನು ಮುಟ್ಟುವುದಕ್ಕಾಗುವುದಿಲ್ಲ. ಆದ್ದರಿಂದ ನಿರ್ಣಯದಲ್ಲಿ ಕೇಳಿರುವಂತೆ ಸಮಿತಿಯನ್ನು ಮಾಡುವುದು ಬಹಳ ಆವಶ್ಯಕವಾಗಿದೆ ಎಂದು ಹೇಳಲು ನಿರ್ದಿಷ್ಟವಾದ ಒಂದು ಉದಾಹರಣೆಯನ್ನು ಕೊಟ್ಟೆ.

ಎರಡನೆಯದಾಗಿ ಯಾವ್ಯಾವ ಕಾರ್ಯಕ್ರಮಗಳಿವೆ ಮತ್ತು ಯಾವ್ಯಾವ ಯೋಜನೆ ಪ್ರಕಾರ ಕೆಲಸವಾಗುತ್ತಿದೆ, ಅದರಿಂದ ಪರಿಣಾಮವೇನಾಗುತ್ತಿದೆ ಎಂಬುದನ್ನು ಆ ಸಮಿತಿಯು ನೋಡಬೇಕು. ಅಂದರೆ ಹರಿಜನರ ಉದ್ಧಾರ ಕಾರ್ಯದಲ್ಲಿ ಮಾಡಿರುವ ಯೋಜನೆಯು ಇದುವರೆಗೆ ಸ್ವಾವಲಂಬಿಯಾಗಿದೆಯೆ ಅಥವಾ ಇನ್ನೇನಾದರೂ ಸರ್ಕಾರದವರು ಮಾಡಬೇಕೆ ಎಂಬುದನ್ನು ಪರೀಕ್ಷೆ ಮಾಡಬೇಕು. ಅಲ್ಲದೆ ಯಾವರೀತಿ ಬೆಳವಣಿಗೆಯಾಗಬೇಕೆಂದರೆ ಹತ್ತು ವರ್ಷದಲ್ಲಿ ಒಂದು ಸಂಪೂರ್ಣ ವ್ಯವಸ್ಥೆಯಾಗಬೇಕು. ಹೆಚ್ಚು ವಿಶ್ವಾಸಗಳಿಸಿ ಐಕ್ಯತೆ ಸಾಧಿಸುವ ರೀತಿ ಯೋಜನೆಯಾಗಬೇಕು. ಹಾಗೆ ಈ ತತ್ವವನ್ನು ಯೋಚನೆಮಾಡಿ ಗುರಿ ಮುಟ್ಟುವುದಕ್ಕೆ ಹೊಸದಾಗಿ ಒಂದು ಕಾರ್ಯಕ್ರಮ ಹಾಕಿ ಬಹಳ ತೀವ್ರತೆಯಿಂದ ಮತ್ತು ಶ್ರದ್ಧೆಯಿಂದ ಪ್ರಯತ್ನ ಮಾಡಬೇಕು. ಅದಕ್ಕೆ ಈ ಸಮಿತಿಯನ್ನು ರಚಿಸುವುದು ಸಕಾಲವಾಗಿದೆ ಮತ್ತು ಅಗತ್ಯವಾಗಿದೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಧ್ಯಕ್ಷರೇ, ಶ್ರೀಮಾನ್ ವೆಂಕಟೇಶ್‌ರವರು ತಮ್ಮ ಠರಾವಿನ ಮೇಲೆ ಭಾಷಣಮಾಡುತ್ತಾ ಅನೇಕ ಅಂಶಗಳನ್ನು ತಿಳಿಸಿದ್ದಾರೆ. ಇದರಲ್ಲಿ ಅವರು ಯಾವ ಸಮಿತಿ ಮಾಡಿ, ಆ ಸಮಿತಿಯವರು ಮುಂದೆ ಯಾವ ಒಂದು ಯೋಜನೆಯನ್ನು ತಯಾರುಮಾಡಬೇಕೆಂದು ಉದ್ದೇಶಪಟ್ಟಿದ್ದಾರೋ, ಅದೆಲ್ಲವನ್ನೂ ಬಹುಮಟ್ಟಿಗೆ ಈಗಲೇ ಚರ್ಚೆ ಮಾಡಿದ್ದಾರೆ, ಸಮಿತಿಯಲ್ಲಿ ಚರ್ಚೆಮಾಡಬೇಕಾದ ವಿಷಯಗಳು ಈಗಲೇ ಗೊತ್ತಾದ ಹಾಗೆ ಆಯಿತು.

ಇನ್ನು ಸರ್ಕಾರದವರು ತಮ್ಮ ಕೆಲವು ಕರ್ತವ್ಯಗಳನ್ನು ಸರಿಯಾಗಿ ನಿಭಾಯಿಸಿಲ್ಲ. ಅನೇಕ ಸಂದರ್ಭದಲ್ಲಿ ಕಾಲಹರಣ ಮಾಡುತ್ತಾ ಇದ್ದಾರೆ ಎನ್ನತಕ್ಕ ಒಂದು ರೀತಿಯಲ್ಲಿ ಸರ್ಕಾರದವರನ್ನು ದೂಷಣೆಮಾಡುವ ಹಾಗೆ ಭಾಷಣಮಾಡಿದರು. ಆ ರೀತಿ ಅವರು ಹೇಳಬಾರದಾಗಿತ್ತು ಎಂದು ನನಗಾದರೂ ಅನ್ನಿಸುತ್ತದೆ. ಹರಿಜನರ ವಿಷಯದಲ್ಲಿ ಸರ್ಕಾರದವರಾಗಲೀ, ಈ ಸಭೆಯವರಾಗಲೀ, ಮೈಸೂರುದೇಶದಲ್ಲಿರತಕ್ಕ ಸವರ್ಣ ಹಿಂದೂಗಳಾಗಲೀ ಕಾಲಹರಣಮಾಡತಕ್ಕ ಮನೋಭಾವ ಉಳ್ಳವರಾಗಿಲ್ಲವೆಂದು ನನಗೆ ಅನ್ನಿಸುತ್ತದೆ. ಅನೇಕ ತೊಂದರೆಗಳಿವೆ, ಅನೇಕ ಕಾರ್ಯಗಳು ಆಗಬೇಕಾಗಿದೆ ಎಂದು ಹೇಳಬಹುದೇ ವಿನಹ ಯಾರೂ ಕಾಲಹರಣ ಮಾಡುತ್ತಾ ಇಲ್ಲ. ಸರ್ಕಾರದವರು ಇಂಥಾ ಸಮಿತಿ ಇಲ್ಲದಿದ್ದರೂ ಸಹ ಅವರ ಕರ್ತವ್ಯವನ್ನು ನಿರ್ವಹಿಸಿ ಇಂಡಿಯಾದೇಶದ ಇತರ ಭಾಗಗಳಿಗಿಂತಲೂ ಮುಂದೆ ಹೋಗಿ ಹರಿಜನರ ಅಭಿವೃದ್ಧಿ ಕಾರ್ಯಗಳನ್ನಿಟ್ಟುಕೊಂಡಿದ್ದಾರೆ ಎಂದು ಧೈರ್ಯವಾಗಿ ಹೇಳಬಹುದು. ಈಗ ನಿರ್ದಿಷ್ಟವಾದ ಒಂದು ಯೋಜನೆಯನ್ನಿಟ್ಟುಕೊಳ್ಳದೆ ಕೆಲಸಮಾಡುತ್ತಾ ಇದ್ದೀರಿ

(ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.)

ಎಂದು ಅನೇಕ ಮಾನ್ಯ ಸದಸ್ಯರು ತಿಳಿಸಿದರು; ನಾನು ಹೇಳುವುದಾದರೂ ಇಷ್ಟೆ, ಒಂದು ದೊಡ್ಡ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ನಮ್ಮ ದೇಶದಲ್ಲಿ ಡಿಪ್ರೆಸ್ಡ್ ಕ್ಲಾಸ್‌ನವರಿಗೆ Commissioner for Depr ssed classes ಎಂಬುದಾಗಿ ಒಬ್ಬರು ಆಫೀಸರು ಇದ್ದಾರೆ. ರೂರಲ್ ಡೆವಲಪ್‌ಮೆಂಟ್ ಕಮೀಷನರೇ ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಕಮೀಷನರಾಗಿದ್ದಾರೆ. ಅವರ ಜೊತೆಗೆ ಅಸಿಸ್ಟೆಂಟ್ ಕಮೀಷನರ ಗ್ರೇಡಿನ ಇಬ್ಬರು ರೀಜನಲ್ ಆಫೀಸರುಗಳು ನಾಲ್ಕು ನಾಲ್ಕು ಜಿಲ್ಲೆಗೆ ಒಬ್ಬರಂತೆ ಇದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಹೆಚ್ಚುಗಟ್ಟಲೆ ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನು ಇಟ್ಟಿದ್ದಾರೆ. ರೀಜನಲ್ ಆಫೀಸರು ಇಬ್ಬರು ಮತ್ತು ಡಿಪ್ರೆಸ್ಡ್ ಕ್ಲಾಸ್ ಕಮೀಷನರು ಇವರೆಲ್ಲಾ ಸೇರಿ ಬಹಳ ಕೂಲಂಕಷವಾಗಿ ಯೋಚನೆಮಾಡಿ ಒಂದು ದೊಡ್ಡ ಯೋಜನೆಯನ್ನು ಮೈಸೂರು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಜಮೀನುಗಳನ್ನು ಯಾವ ರೀತಿ ಕೊಡಬೇಕು. ಮನೆ ಕಟ್ಟಿಕೊಳ್ಳುವ ಯೋಜನೆಯನ್ನು ಯಾವ ರೀತಿ ಮಾಡಬೇಕು. ಜಮೀನುಗಳನ್ನು ಕೊಡುವಾಗ ಎಷ್ಟು ಭಾಗ ರಿಸರ್ವ್ ಮಾಡಿ, ಎಷ್ಟು ಭಾಗ ಡಿಪ್ರೆಸ್ಡ್ ಕ್ಲಾಸ್ ಅಧಿಕಾರಿಗಳು ಮಂಜೂರುಮಾಡಲು ಅಧಿಕಾರವಿರಬೇಕು, ಕೈಗಾರಿಕೆಗೆ ಯಾವ ರೀತಿ ಸಹಾಯ ಒದಗಿಸಬೇಕು, ವ್ಯವಸಾಯದ ಬಾಬಿಗೆ ಏನು ಸಹಾಯ ಮಾಡಬೇಕು ಎಂಬುದಾಗಿ ಪ್ರತಿಯೊಂದು ಬಾಬಿನಲ್ಲೂ ಒಂದು ಯೋಜನೆ ತಯಾರುಮಾಡಿ ಕಳುಹಿಸಿಕೊಟ್ಟಿದ್ದಾರೆ. ಇವೆಲ್ಲವೂ ಡಿಪ್ರೆಸ್ಡ್ ಕ್ಲಾಸ್ ಅಧಿಕಾರಿಗಳ ಕೈಕೆಳಗೆ ಆಗಬೇಕೆಂಬ ಯೋಜನೆ ಇದೆ. ಆ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆ. ಇದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಆದ್ದರಿಂದ ಅವರು ಆ ರೀತಿ ಕೇಳಬೇಕಾದ್ದು ವಾಸ್ತವವಾಗಿದೆ. ಆ ಯೋಜನೆಗೆ ಸರ್ಕಾರದವರು ಇದುವರೆಗೂ ಮಂಜೂರಾತಿ ಕೊಟ್ಟು ಒಂದು ಸರ್ಕಾರದ ಆರ್ಡರ್ ಹೊರಡಿಸಲಿಕ್ಕೆ ಆಗಿಲ್ಲ, ಕಾರಣ ಅದಕ್ಕೆ ನಾನಾ ತೊಂದರೆಗಳಿವೆ. ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡಲು ಡಿಪ್ರೆಸ್ಡ್ ಕ್ಲಾಸ್ ಕಮೀಷನರಿಗೆ ವಿಶೇಷ ಅಧಿಕಾರ ಕೊಡಬೇಕೆಂಬ ಯೋಜನೆ ಇರುವುದರಿಂದ ಅನೇಕ ಗೊಂದಲಗಳು, ತೊಂದರೆಗಳು ಇವೆ. ಆಡಳಿತ ದೃಷ್ಟಿಯಿಂದ ತೊಂದರೆ ಬರತಕ್ಕ ಸೂಕ್ಷ್ಮ ಕಂಡುಬಂತು, ಅದನ್ನು ಪರಿಶೀಲನೆ ಮಾಡುತ್ತಾ ಇರುವುದರಿಂದ ಸರ್ಕಾರಿ ಆರ್ಡರನ್ನು ಹೊರಡಿಸಲಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸೂಚಿಸಿರುವಂಥ ಒಂದು ಯೋಜನೆ ಆಗಲೇ ಇದ್ದೇ ಇದೆ ಎಂದು ಉತ್ತರ ಕೊಡಬೇಕಾಗಿದೆ. ಆದರೆ ಆ ಯೋಜನೆ ಇನ್ನೂ ಪೂರ್ತಿಯಾಗಿಲ್ಲ, ಸರ್ಕಾರದವರು ಒಪ್ಪಿಗೆ ಕೊಟ್ಟಿಲ್ಲ. ಅಂದಮಾತ್ರಕ್ಕೇ ಹರಿಜನರಿಗೆ ಮಾಡಬೇಕಾದ ಸಹಾಯವಾಗಲಿ, ಅವರಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳಾಗಲೀ ಯಾವುದನ್ನೂ ಸರ್ಕಾರದವರು ನಿಲ್ಲಿಸಿಲ್ಲ. ಅನೇಕ ಸದಸ್ಯರಿಗೆ ಗೊತ್ತಿರುವಂತೆ ಸರ್ಕಾರದವರು ಅನೇಕ ಕರ್ತವ್ಯಗಳನ್ನು ಸಾಧ್ಯವಾದಷ್ಟು ಮಾಡುತ್ತಾ ಇದ್ದಾರೆ. ಯೋಜನೆ ಇಲ್ಲವೆಂದು ಕೆಲಸವೂ ನಿಂತಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಹಾಗಿದ್ದರೆ ಇಂಥ ಒಂದು ಸಮಿತಿಯ ಅವಶ್ಯಕತೆ ಇಲ್ಲ, ಆ ಯೋಜನೆ ಅಂಗೀಕಾರವಾದರೆ 10 ವರ್ಷದಲ್ಲಿ ಇವರು ಬಾಕಿಯವರ ಮಟ್ಟಕ್ಕೆ ಬರುತ್ತಾರೆ ಎಂಬ ಭರವಸೆ ಇದೆಯೇ ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ನಾನು ಸಮಿತಿ ಬೇಕಾಗಿಲ್ಲ ಎಂತಲೂ ಹೇಳಲಿಲ್ಲ, ಬೇಕು ಎಂತಲೂ ಹೇಳಲಿಲ್ಲ. ಒಂದು ವೇಳೆ ಸಮಿತಿ ರಚನೆಮಾಡಿದರೆ ಅವರೂ ಸಹ ಈಗಾಗಲೇ ಆಗಿರುವ ಯೋಜನೆಯ ಸಹಾಯಕ್ಕೆ ಬರುತ್ತಾರೆ. ಈಗ ಇಂಡಿಯಾ ಸರ್ಕಾರದ ಪ್ಲಾನಿಂಗ್ ಕಮೀಷನರು 5 ವರ್ಷದ ಒಂದು ಯೋಜನೆಯನ್ನು ಹಾಕಿದ್ದಾರೆ. ಅದರಲ್ಲಿ ನಾವು ಮೈಸೂರು ದೇಶದಲ್ಲಿ ಮಾಡಬೇಕಾಗಿರುವ ಯೋಜನೆಯನ್ನೂ ಅವರ ಮುಂದೆ ಇಟ್ಟು ಅವರ ಒಪ್ಪಿಗೆಯನ್ನು ತೆಗೆದುಕೊಂಡಿದ್ದೇವೆ. 5 ವರ್ಷದಲ್ಲಿ ಒಂದು ಕೋಟಿ ರೂಪಾಯಿ ಹೌಸಿಂಗ್ ಸ್ಕೀಂಗೆ ವೆಚ್ಚಮಾಡಬೇಕೆಂಬ ಯೋಜನೆಯನ್ನು ಹಾಕಿ ಪ್ಲಾನಿಂಗ್ ಕಮೀಷನರವರ ಮುಂದೆ ಇಟ್ಟು ಅದಕ್ಕೆ ಅವರ ಮಂಜೂರಾತಿ ದೊರೆತಿದೆ. 5 ವರ್ಷದಲ್ಲಿ 1 ಕೋಟಿ ರೂಪಾಯಿಗಳ ವೆಚ್ಚದಿಂದ ನಿಮ್ಮ ವರ್ಗದವರು ಮನೆ ಕಟ್ಟಿಕೊಳ್ಳಬೇಕೆಂದು ತೀರ್ಮಾನವಾಗಿದೆ. ಇದರ ಜೊತೆಗೆ ಯಾವ ಯಾವ ಇನ್ನೂ ಹೆಚ್ಚಿನ ಸಲಹೆಗಳನ್ನು ಆ ಸಮಿತಿಯವರು ಕೊಡಬೇಕೆಂಬುದನ್ನು ಮಾನ್ಯ ಸದಸ್ಯರು ತಿಳಿಸಿಯೇ ಇದ್ದಾರೆ. ಇಷ್ಟೇ ಅಲ್ಲದೆ ಈ ಸಂದರ್ಭದಲ್ಲಿ ಎಲ್ಲಾ ಇಲಾಖೆಗಳ ಮೇಲೂ ಟೀಕೆ ಟಿಪ್ಪಣಿಗಳು ಬಂದವು. ಶ್ರೀಮಾನ್ ಹನುಮಯ್ಯನವರು ಯೂನಿವರ್ಸಿಟಿಯಲ್ಲಿ ಸ್ಕಾಲರ್‌ಷಿಪ್ ಕೊಡತಕ್ಕ ಹಣ ಅಷ್ಟೇ ಇದೆ, ಆದರೆ ಹುಡುಗರ ಸಂಖ್ಯೆ ಜಾಸ್ತಿಯಾಗಿದೆ ಎಂದು ಹೇಳಿದರು. ಇದಕ್ಕೆಲ್ಲಾ ಈಗ ಉತ್ತರ ಹೇಳಬೇಕಾಗಿಲ್ಲ ಏಕೆಂದರೆ ಕಾಲಾವಕಾಶವಿಲ್ಲ. ಆದರೆ ಸರ್ಕಾರದವರು ಮಾಡತಕ್ಕ ಒಂದು ಕರ್ತವ್ಯದಲ್ಲಿ ಟೀಕೆ ಬಂದ ಮೇಲೆ ನಿರ್ಣಯಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವಾಗ ಹೇಳದೇ ಇದ್ದರೆ ವಿಧಿ ಇಲ್ಲ. ಯೂನಿವರ್ಸಿಟಿ ಸ್ಕಾಲರ್‌ಷಿಪ್ ಎಷ್ಟು ಹುಡುಗರಿಗೆ ಕೊಡುತ್ತಾ ಇತ್ತೋ ಅದನ್ನು ಜಾಸ್ತಿ ಮಾಡಬೇಕೆಂದು ಸದಸ್ಯರು ಕೇಳಿದ್ದರ ಮೇಲೆ ಮೊದಲಿದ್ದದ್ದಕ್ಕಿಂತ ಜಾಸ್ತಿ ಮಾಡಿದರು. ಹಿಂದಿನ ವರ್ಷ ಕೆಲವು ಹುಡುಗರಿಗೆ ಸ್ಕಾಲರ್‌ಷಿಪ್ ಕೊಡಲು ಹಣ ಖೋತಾ ಬಿದ್ದು, ಅದು ಸರ್ಕಾರದವರ ಗಮನಕ್ಕೆ ಬಂದ ಮೇಲೆ ಹೆಚ್ಚು ಹಣ ಕೊಟ್ಟರು. ಯೂನಿವರ್ಸಿಟಿಯಲ್ಲಿ ಓದತಕ್ಕ ಪ್ರತಿಯೊಬ್ಬ ಹುಡುಗನಿಗೂ ವೇತನ ಕೊಡಲಾಗಿದೆ. ಆದ್ದರಿಂದ ಜಾಸ್ತಿಯಾಗಿಲ್ಲ ಎಂದು ಹೇಳಿದರೆ ಒಪ್ಪುವುದಕ್ಕಾಗುವುದಿಲ್ಲ. ಶ್ರೀಮಾನ್ ಹನುಮಯ್ಯನವರ ಆಕ್ಷೇಪಣೆಗೆ ಅವಕಾಶವಿಲ್ಲ ಎಂದು ಹೇಳುತ್ತೇನೆ.

Sri A. BHEEMAPPA NAIK.—Let me tell the Hon'ble Minister that I am a member of the University Committee. Many have not been given.

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಯೂನಿವರ್ಸಿಟಿಯವರು ಎಷ್ಟು ಹುಡುಗರಿಗೆ ಸ್ಕಾಲರ್‌ಷಿಪ್ ಸಿಕ್ಕಿಲ್ಲ ಎಂದು ಹೇಳಿದ್ದರೋ ಅಷ್ಟಕ್ಕೆ ಲೆಕ್ಕಾಚಾರ ಮಾಡಿ ಪೂರ್ತಿಯಾಗಿ ಮಂಜೂರುಮಾಡಿದೆ.

Sri L. SIDDAPPA.—Even, Sri T. Hanumiah if I remember correct, did not speak about the number of scholarships. He wanted the rate to be raised.

The Hon'ble Sri R. CHENNIGARAMIAH.—The rate has been raised only last year.

ನಿಮ್ಮ ಪಂಗಡದವರ ರೆವಿನ್ಯೂ ಇನ್ಸ್‌ಪೆಕ್ಟರಿಗೂ ಸ್ಪೆಷಲ್ ಆಫೀಸರುಗಳಿಗೂ, ರೀಜನಲ್ ಆಫೀಸರುಗಳಿಗೂ ಅಧಿಕಾರವಿಲ್ಲವೆಂದು ಶ್ರೀಮಾನ್ ಹನುಮಯ್ಯನವರು ಹೇಳಿದರು. ನಿಮ್ಮ ಪಂಗಡದವರು ಜಮೀನಿಗೆ ಅರ್ಜಿ ಹಾಕಿದರೆ ಅದನ್ನು ರೆವಿನ್ಯೂ ಇನ್ಸ್‌ಪೆಕ್ಟರಿಗೆ ಕಳು

ಹಿಸಿ ಅವರು ಮಹಜರು ಮಾಡಿಸಬೇಕೆಂಬುದಾಗಿ ಸರ್ಕಾರಿ ಆಜ್ಞೆಯಲ್ಲಿದೆ. ಇದರ ಮೇಲೆ ಜಮೀನನ್ನು ಕೊಡಬೇಕೆಂದು ನಿಯಮವಿದೆ. ಕೆಲವು ಕಡೆ ಈ ರೀತಿ ಜಾರಿಯಲ್ಲಿಲ್ಲವೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ.

ಶ್ರೀ ಟಿ. ಹನುಮಯ್ಯನವರು.—ಸರ್ಕಾರದ ಆಜ್ಞೆ ಇದ್ದಮೇಲೆ ಒಂದೊಂದುಕಡೆ ಒಂದೊಂದು ರೀತಿಯಲ್ಲೇಕೆ ನಡೆಯಬೇಕು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಾಮಾನ್ಯವಾಗಿ ನಿಮ್ಮ ವರ್ಗದವರ ರೆವಿನ್ಯೂ ಇನ್ಸ್‌ಪೆಕ್ಟರಿಗೆ ಅಂತಹ ಅರ್ಜಿಗಳನ್ನು ಕಳುಹಿಸುತ್ತಾರೆ. ಅವರು ರಿಕಾರ್ಡುಗಳನ್ನು ಮಾಡಿ ಕೊನೆಗೆ ಅಮಲ್ದಾರರವರಿಗೆ ಕಳುಹಿಸುತ್ತಾರೆ. ಅನೇಕ ಕಡೆ ಇದೇ ಪದ್ಧತಿ ಇದೆ. ಎಲ್ಲೋ ಕೆಲವು ಕಡೆ ಹಾಗಿಲ್ಲದಿದ್ದರೆ, ಅದನ್ನು ತನಿಖೆಮಾಡಿ ಅವಶ್ಯಕವೆಂದು ಕಂಡುಬಂದರೆ ಇನ್ನೂ ಹೆಚ್ಚಿನ ಅಧಿಕಾರವನ್ನು ಡಿಪ್ರೆಸ್ಡ್ ಕ್ಲಾಸ್ ರೆವಿನ್ಯೂ ಇನ್ಸ್‌ಪೆಕ್ಟರಿಗೆ ಕೊಡುತ್ತೇವೆ. ಒಂದು ವಿಷಯವನ್ನು ಮಾನ್ಯ ಸದಸ್ಯರು ಗಮನದಲ್ಲಿಡಬೇಕು. ರೆವಿನ್ಯೂ ಇನ್ಸ್‌ಪೆಕ್ಟರು ಮಹಜರುಮಾಡಿ 'ರಿಕಾರ್ಡ್ ಬಿಲ್ಡ್ ಅಪ್' ಮಾಡಬೇಕಾದರೆ ಅನೇಕ ತೊಂದರೆಗಳಿರುತ್ತವೆ. ಒಂದುಕಡೆ ಜಮೀನಿದ್ದರೆ ಆದಕ್ಕೆ ಆದಿಕರ್ಣಾಟಕರೂ ಅರ್ಜಿಹಾಕುತ್ತಾರೆ, ಇತರ ಇನ್ನೂ ಕೆಲವು ಜನರೂ ಅರ್ಜಿಹಾಕುತ್ತಾರೆ. ನಿಮ್ಮ ವರ್ಗದವರು ಹಾಕಿದ ಅರ್ಜಿ ನಿಮ್ಮ ವರ್ಗದವರ ರೆವಿನ್ಯೂ ಇನ್ಸ್‌ಪೆಕ್ಟರಿಗೆ ಹೋಗುತ್ತದೆ. ಬೇರೆಯವರು ಹಾಕಿದ ಅರ್ಜಿ ಬೇರೆ ರೆವಿನ್ಯೂ ಇನ್ಸ್‌ಪೆಕ್ಟರಿಗೆ ಹೋಗುತ್ತದೆ. ಅವರು ಬೇರೆ ಬೇರೆ ರೀತಿಯ ವರದಿ ಕಳುಹಿಸಿದರೆ ಅದನ್ನು ತೀರ್ಮಾನಮಾಡುವುದು ಕಷ್ಟವಾಗುತ್ತದೆ. ನಿಮ್ಮ ವರ್ಗದ ರೆವಿನ್ಯೂ ಇನ್ಸ್‌ಪೆಕ್ಟರು ಮಹಜರು ಮಾಡುವ ಕಾಲದಲ್ಲಿ ಪಟೇಲ ಶ್ಯಾನುಭೋಗರುಗಳು ಕೆಲವು ಕಡೆಗಳಲ್ಲಿ ಸಹಕರಿಸುತ್ತಿಲ್ಲವೆಂಬುದು ಗಮನಕ್ಕೆ ಬಂದಿದೆ. ಹೀಗೆ ಕೆಲವು ತೊಂದರೆಗಳಿವೆ. ಇವುಗಳನ್ನು ನಿವಾರಣೆ ಮಾಡಬೇಕೆಂದು ಸರ್ಕಾರದವರ ಇಷ್ಟ, ಸಾರ್ವಜನಿಕರೂ ಸಹಕಾರ ಮಾಡಬೇಕು. ಇದರಲ್ಲಿ ಸೂಚಿಸಿರುವಂತೆ ಕಾರ್ಯ ರೂಪಕ್ಕೆ ತರುವುದರಲ್ಲಿ ತೊಂದರೆಯಿದೆ. ಸ್ಪೆಷಲ್ ಆಫೀಸರುಗಳಿಗೇ ಅಧಿಕಾರ ಕೊಡಬೇಕೆಂದು ಹೇಳಿದರು. ಸವರ್ಣ ಹಿಂದುಗಳ ಅರ್ಜಿಗಳೂ ಇರುತ್ತವೆ, ಆದಿಕರ್ಣಾಟಕರ ಅರ್ಜಿಗಳೂ ಇರುತ್ತವೆ. ಇಂತಹ ಸಂದರ್ಭದಲ್ಲಿ ಸ್ಪೆಷಲ್ ಅಧಿಕಾರಿಗಳಿಗೇ ಅಧಿಕಾರ ಕೊಟ್ಟರೆ ತೊಂದರೆ ಬರುತ್ತದೆ. ಒಂದು ಕಡೆ ಅಮಲ್ದಾರರು, ಡೆಪ್ಯುಟಿ ಕಮೀಷನರು ಇನ್ನೊಂದು ಕಡೆ ಸ್ಪೆಷಲ್ ಆಫೀಸರು ಬೇರೆ ಬೇರೆಯಾಗಿ ಮಾಡಿ ಅವರು ಮಾಡಿದ್ದನ್ನು ಇವರು ವಜಾ ಮಾಡುವುದು, ಇವರು ಮಾಡಿದ್ದನ್ನು ಅವರು ವಜಾ ಮಾಡುವುದು ಹೀಗಾದರೆ ಬಹಳ ಕಷ್ಟವಾಗುತ್ತದೆ. ಈ ಕಾರಣಕ್ಕಾಗಿ ಅವರಿಗೆ ಅಧಿಕಾರಕೊಟ್ಟಿಲ್ಲವೇ ವಿನಾ ಅವರನ್ನು ಕಂಬಗಳ ಹಾಗೆ ಸುಮ್ಮನೆ ಕೂರಿಸಬೇಕು, ಪೇಪರ್ ಕೊಟ್ಟು ಏನೂ ಕೆಲಸವಿಲ್ಲದೆ ಕೂರಿಸಬೇಕು ಎಂದು ಸರ್ಕಾರದ ಇಷ್ಟವಲ್ಲ. ನಾನು ಹೇಳಿದಂತೆ ತೊಂದರೆಗಳಿವೆ. ಅವರಿಗೆ ಬೇರೆ ಬೇರೆ ಕೆಲಸಗಳಿವೆ. ನಿಮ್ಮ ವರ್ಗದವರ ಮನೆಗಳನ್ನು ಕಟ್ಟಿಸುವ ವಿಚಾರದಲ್ಲಿ, ವಿದ್ಯಾಭ್ಯಾಸದ ವಿಚಾರದಲ್ಲಿ, ಜಮೀನಿಗೆ ಅರ್ಜಿಹಾಕಬೇಕಾದರೆ ಜಮೀನುಗಳು ಇಂತಿಂಥಾ ಕಡೆಗಳಲ್ಲಿವೆ ಎಂದು ತಿಳಿಸುವ ವಿಚಾರದಲ್ಲಿ ಅವರು ಕೆಲಸ ಮಾಡುತ್ತಾರೆ....................

ಶ್ರೀ ಎಂ. ಸಿ. ವೆಂಕಟೇಶ ರವರು.—ಹಾಗಾದರೆ ಅವರು ಪ್ರಾಪಗ್ಯಾಂಡಿಸ್ಟ್‌ನಂತೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು, ಅವರು ಪ್ರಚಾರ ಕಾರ್ಯವನ್ನೂ ಮಾಡಬೇಕು. ಅವರಿಗೆ ಕೆಲಸವಿಲ್ಲವೆಂದು ಹೇಳಿದರೆ ಒಪ್ಪುವುದಕ್ಕಾಗುವುದಿಲ್ಲ, ಅವರಿಗೆ ಈಗ ಇರತಕ್ಕ ಕೆಲಸವನ್ನೇ ಸರಿಯಾಗಿ ಮಾಡಿದರೆ ಸಾಕಾಗಿದೆ. ನಿಮ್ಮ ವರ್ಗದ ಜನರಲ್ಲಿ ಅನೇಕರಿಗೆ ಜಮೀನಿಗೆ ಅರ್ಜಿಹಾಕುವುದಕ್ಕೂ ಗೊತ್ತಿರುವುದಿಲ್ಲ, ಸ್ಕೂಲುಗಳಿಗೆ ಮಕ್ಕಳನ್ನು ಕಳುಹಿಸುವುದೂ ಗೊತ್ತಿರುವುದಿಲ್ಲ. ಇವುಗಳನ್ನು ಅವರಿಗೆ ತಿಳಿಸಬೇಕು. ಅವರಿಗೆ ಸಂಬಂಧಪಟ್ಟ ರಿಕಾರ್ಡುಗಳು ರೆವಿನ್ಯೂ ಆಫೀಸುಗಳಲ್ಲಿ ನಿಂತು ಹೋಗಿರುತ್ತವೆ; ಅಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟ ಕಛೇರಿಗಳಿಗೆ ಹೋಗಿ ಆಯಾ ಅಧಿಕಾರಿಗಳಿಗೆ ತಿಳಿಸಿ ಬೇಗ ತೀರ್ಮಾನವಾಗುವಂತೆ ಮಾಡಬಹುದು. ಜಮೀನು ಅಕ್ವೈರ್ ಮಾಡುವುದಕ್ಕೆ ಸಂಬಂಧಪಟ್ಟ ರಿಕಾರ್ಡುಗಳ ವಿಚಾರದಲ್ಲಿ ತಡವಾದರೆ ಲ್ಯಾಂಡ್ ಅಕ್ವಿಜಿಷನ್ ಆಫೀಸರಿಗೂ ಡೆಪ್ಯುಟಿ ಕಮೀಷನರಿಗೂ ತಿಳಿಸಿ ಬೇಗ ಕೆಲಸವಾಗುವಂತೆ ಮಾಡಬಹುದು. ಈ ರೀತಿ ಎಷ್ಟೋ ಕಡೆ ಆಗುತ್ತಿದೆ. ಒಂದು ಉದಾಹರಣೆ ಹೇಳುತ್ತೇನೆ. ಚಾಮರಾಜನಗರದಲ್ಲಿ ಒಂದು ಊರಿನಲ್ಲಿ ಒಂದು ಜಮೀನಿನ ವಿಚಾರದಲ್ಲಿ ಸಬ್ ಡಿವಿಜನ್ ಆಫೀಸರು, ಡೆಪ್ಯುಟಿ ಕಮೀಷನರು ಒಂದು ರೀತಿ ವರದಿಯನ್ನು ಕಳುಹಿಸಿದ್ದರು. ರೀಜನಲ್ ಆಫೀಸರು ಹೋಗಿ ಮಹಜರು ಮಾಡಿ ಸಕಾರಣಗಳನ್ನು ಕೊಟ್ಟು ವರದಿ ಕಳುಹಿಸಿದರು. ಸರ್ಕಾರದವರು ರೀಜನಲ್ ಆಫೀಸರ ವರದಿಯ ಪ್ರಕಾರ ಆ ಜಮೀನನ್ನು ಮಂಜೂರು ಮಾಡಿದರು. ಹೀಗೆ ಕೆಲವು ಸಂದರ್ಭಗಳಲ್ಲಿ ನಡೆಯುತ್ತದೆ. ಈ ವಿಶೇಷ ಅಧಿಕಾರಿಗಳಿಗೆ ಏನೂ ಕೆಲಸವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ, ಅವರಿಗೆ ಅಧಿಕಾರವನ್ನು ಕೊಟ್ಟರೆ ಒಳ್ಳೆಯದೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಹಾಗೆ ಕೊಡಲು ಅನೇಕ ತೊಂದರೆಗಳಿವೆ. ಸಮಿತಿಯವರು ಬೇಕಾದರೆ ಪರಿಶೀಲನೆ ಮಾಡಿ ರೆವಿನ್ಯೂ ಇಲಾಖೆಯ ಅಧಿಕಾರಿಗಳಿಗೂ ನಿಮ್ಮ ವರ್ಗದವರ ಅಧಿಕಾರಿಗಳಿಗೂ ಯಾವ ಗೊಂದಲಕ್ಕೂ ಅವಕಾಶವಿಲ್ಲದಂತೆ ಇರುವ ಯೋಜನೆ ಅಥವ ಏರ್ಪಾಡನ್ನು ಸಲಹೆ ಮಾಡಿದರೆ ಖಂಡಿತವಾಗಿ ಸರ್ಕಾರದವರು ಅದನ್ನು ಯೋಚನೆ ಮಾಡುತ್ತಾರೆಂದು ಧೈರ್ಯವಾಗಿ ಹೇಳಬಲ್ಲೆ. ಮಾನ್ಯ ಸದಸ್ಯರು ಅವರಿಗಿರುವ ತೊಂದರೆಗಳನ್ನು ಹೇಳಿದ್ದಾರೆ, ಅದು ಅವರ ಕರ್ತವ್ಯ; ಹಾಗೆಯೇ ನಮ್ಮ ತೊಂದರೆಗಳನ್ನು ಅವರ ಮುಂದಿಡುವುದು ನಮ್ಮ ಕರ್ತವ್ಯ. ಒಟ್ಟಿನಲ್ಲಿ ಅವರು ಒಂದು ಸಮಿತಿ ಆಗಬೇಕೆಂದು ಕೇಳುತ್ತಾರೆ. ಶ್ರೀಮಾನ್ ಮಾದಯ್ಯನವರು ಒಂದು ಖಾಯಂ ಸಮಿತಿಯೇ ಇದ್ದರೆ ಒಳ್ಳೆಯದು ಹಂಗಾಮಿಯಾದ ಸಮಿತಿ ಮೂರು ತಿಂಗಳ ಮಟ್ಟಿಗೆ ಇದ್ದರೆ ಪ್ರಯೋಜನವಿಲ್ಲವೆಂದು ಸಲಹೆ ಕೊಟ್ಟಿದ್ದಾರೆ. ನಮಗಾದರೂ ಈ ಸಮಿತಿಯನ್ನು ಮಾಡುವುದರಲ್ಲಿ ತೊಂದರೆಯಿಲ್ಲ. ಸರ್ಕಾರಿ ಆಜ್ಞೆಯಾಗಿದ್ದರೂ ಇದುವರೆಗೂ ಮಾಡಲಿಲ್ಲವೆಂದು ಹೇಳಿದರು, ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಒಂದು ಸಮಿತಿ, ನಿಮ್ಮ ವರ್ಗದವರಿಗೇ ಸಂಬಂಧಪಟ್ಟ ಹಾಗೆ ಒಂದು ಸಮಿತಿಯನ್ನು ಮಾಡಬೇಕಾಗಿತ್ತು. ಗ್ರಾಮ ಅಭಿವೃದ್ಧಿ ಯೋಜನೆ ಹಂಗಾಮಿಯಾದುದರಿಂದ ಯಾವಾಗ ಅದು ಬದಲಾವಣೆಯಾಗುತ್ತದೆ ಎಷ್ಟು ಮಟ್ಟಿಗೆ ಅದು ಹೊಸ ಕಾನೂನು ಬಂದರೆ ಬದಲಾವಣೆಯಾಗುತ್ತದೆಂಬುದು ತಿಳಿಯದೆ ಇದುವರೆಗೆ ಯಾವುದನ್ನೂ ಮಾಡಲಿಲ್ಲ. ಹೀಗೆ ಮಾಡದಿದ್ದ ಮಾತ್ರಕ್ಕೇ ಯಾವ ಕೆಲಸವೂ ಆಗದೆ ನಿಂತಿಲ್ಲ.

ಶ್ರೀ ಎಂ. ಮಾದಯ್ಯನವರು.—ಹಿಂದಿದ್ದ ಅಡ್ವೈಸರಿ ಸಮಿತಿಯನ್ನೇಕೆ ರದ್ದು ಮಾಡಿದಿರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಶ್ರೀವಾರ್ ಮಾದಯ್ಯನವರೇ ಬೇಕಾದಷ್ಟು advice ಮಾಡುತ್ತಿದ್ದಾರೆ. ಆ ಕಮಿಟಿಯಿಲ್ಲದ್ದರಿಂದ ಯಾವ ಕೆಲಸವೂ ನಿಂತಿಲ್ಲ. (ನಗು !)

ಶ್ರೀ ಎಚ್. ಸಿದ್ಧವೀರಪ್ಪನವರು.—ಶ್ರೀವಾರ್ ಮಾದಯ್ಯನವರು ಕೊಡುವ advice ಸಾಲದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬೇಕಾದಷ್ಟು, ಅಜೀರ್ಣವಾಗುವಷ್ಟು ಕೊಡುತ್ತಾರೆ. ಅದನ್ನು ಜೀರ್ಣಿಸಿಕೊಂಡರೇ ಸಾಕಾಗಿದೆ! (ನಗು !)

ಒಟ್ಟಿನಲ್ಲಿ ಸರ್ಕಾರದವರು ಆದಷ್ಟು ಬೇಗ ಸಮಿತಿಯನ್ನು ಮಾಡುತ್ತಾರೆಂದು ಭರವಸೆ ಕೊಡುತ್ತೇನೆ. ಸೂಚಕರು ದಯೆಯಿಟ್ಟು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

Sri M. C. VENKATESHAN.—I seek the leave of the House to withdraw the Resolution.

The resolution was, by leave of the House, withdrawn.

RESOLUTION No. 18.

Kannada to be the medium of instruction in all High Schools.

*Sri K. PUTTASWAMY (Mandya District—General).—Sir, I beg to move :

"That this Assembly is of the opinion that Kannada should be the medium of instruction in all the High Schools exception being shown to such students who have been taught in languages other than Kannada in Middle Schools for a period of five years."

ಈ ನಿರ್ಣಯವನ್ನು ಮಂಡಿಸುವಾಗ ಹೆಚ್ಚು ವಾದ ಅನಾವಶ್ಯಕವೆಂದು ಭಾವಿಸುತ್ತೇನೆ. 1931ನೆಯ ಇಸವಿಯಲ್ಲಿಯೇ, ಸರ್ಕಾರ ಈ ನೀತಿಯನ್ನು ಒಪ್ಪಿಕೊಂಡು ಇದನ್ನು ಜಾರಿಗೆ ತಂದಿದೆ. 1937ನೆಯ ಇಸವಿಯ ಹೊತ್ತಿಗೆ ಇದನ್ನು ಸಂಪೂರ್ಣವಾಗಿ ಜಾರಿಗೆ ತರಲಾಗಿದೆ. ಕನ್ನಡಿಗರಲ್ಲದವರು, ಕನ್ನಡವನ್ನು ಮಿಡ್ಲ್ ಸ್ಕೂಲಿನಲ್ಲಿ ಅಧ್ಯಯನ ಮಾಡದೇ ಇರುವವರು ಇರುವ ಕಡೆಗಳಿಗೆ ಮಾತ್ರ ಇಂಥವರಿಗಾಗಿ ಪ್ರತಿಯೊಂದು ದರ್ಜೆಯಲ್ಲಿಯೂ ಇಂಗ್ಲಿಷಿನ ಒಂದೊಂದು ತರಗತಿಯನ್ನು ಇಡಲು ಸರ್ಕಾರ ಅನುಮತಿಯನ್ನು ಕೊಟ್ಟಿದೆ. ಕೆಲವು ಕಾಲದ ಮೇಲೆ ಆ ಪ್ರಗತಿದಾಯಕವಾದ ನೀತಿಯನ್ನು ಬದಲಾಯಿಸಿ ಒಂದು ತರಗತಿಗೆ ಬದಲು ಎರಡು ತರಗತಿಗಳನ್ನಿಟ್ಟುಕೊಳ್ಳಬಹುದೆಂದು ಸರ್ಕಾರದವರು ಅನುಮತಿ ಕೊಟ್ಟಿದ್ದರಿಂದ ಬರಬರುತ್ತಾ ಇಂಗ್ಲೀಷನ್ನು ಬೋಧಕ ಭಾಷೆಯನ್ನಾಗಿಟ್ಟುಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತಾ ಬಂದಿವೆಯಲ್ಲದೆ ಕನ್ನಡವೇ ಬೋಧಕ ಭಾಷೆಯಾಗಿರುವ ತರಗತಿಗಳಿಗೆ ವಿದ್ಯಾರ್ಥಿಗಳು ಸೇರಲು ಬಹಳ ಹಿಂಜರಿಯುತ್ತಿದ್ದಾರೆ. ಹೀಗೆ ಅನೇಕ ಪಾಠಶಾಲೆಗಳಲ್ಲಿ, ಕನ್ನಡ ಬೋಧಕಭಾಷೆಯಾಗಿ ಮಾಡಬೇಕೆಂದಿರುವ ಶಾಲೆಗಳಲ್ಲಿ ವಿದ್ಯಾರ್ಥಿಗಳೇ ಇಲ್ಲದೆ ಆ ಶಾಲೆಗಳನ್ನು ಮುಚ್ಚುವ ಗತಿ ಈಗ ಬಂದಿದೆ. 1945 ರಲ್ಲಿ ಸರ್ಕಾರದವರು ಈ ಅನುಮತಿಯನ್ನು ಕೊಟ್ಟಾಗ 1947 ರಲ್ಲಿ ಪುನಃ ಈ ವಿಚಾರವನ್ನು ಪರಿಶೀಲನೆ ಮಾಡಬೇಕೆಂದು ತಮ್ಮ ಆಜ್ಞೆಯಲ್ಲಿ ಹೇಳಿದ್ದಾರೆ. 1947ನೆಯ ಇಸವಿಯಿಂದ ಇದುವರೆಗೂ ಈ ವಿಚಾರವನ್ನು ಪರಿಶೀಲನೆ ಮಾಡಿ ತೀರ್ಮಾನಕ್ಕೆ ಬಂದಿಲ್ಲ. ನಮ್ಮ ದೇಶ ಸ್ವತಂತ್ರವಾದ ಮೇಲೆ, ಜವಾಬ್ದಾರಿ ಸರ್ಕಾರ ನಮ್ಮ ದೇಶದಲ್ಲಿ ಸ್ಥಾಪನೆಯಾದ ಮೇಲೆ ಈ ವಿಷಯದಲ್ಲಿ ಸರ್ಕಾರದವರು ಧೈರ್ಯವಾಗಿ ನೀತಿಯನ್ನು ಮುಂದು ರಿಸುತ್ತಾರೆಂಬ ಭಾವನೆಯಿತ್ತು. ಆದರೆ ಮೂರು ವರ್ಷಗಳಾದರೂ ಈ ಮಾರ್ಗದಲ್ಲಿ ಒಂದು ಹೆಜ್ಜೆಯನ್ನೂ ಮುಂದೆ ಇಟ್ಟಿಲ್ಲದೇಯಿರುವುದನ್ನು ನೋಡಿ ಬಹಳ ವ್ಯಸನವಾಗುತ್ತದೆ. ನನಗೆ ತಿಳಿದ ಹಾಗೆ ಸುಮಾರು ಎರಡು ವರ್ಷಗಳಿಂದ ಅನೇಕ ಮಾನ್ಯರು ಸರ್ಕಾರದಲ್ಲಿ ಈ ವಿಚಾರವನ್ನು ನಿವೇದಿಸುತ್ತಿದ್ದಾರೆ, ಆದರೂ ಸರ್ಕಾರದವರು ಇನ್ನೂ ಮನಸ್ಸು ಮಾಡಿಲ್ಲ. ಶಿಕ್ಷಣದಲ್ಲಿ ತಜ್ಞರಾಗಿರುವ ಅನೇಕ ಪಂಡಿತರು ಮತ್ತು ಸರ್ಕಾರ ನೇಮಿಸಿರುವ ಅನೇಕ ಸಮಿತಿಗಳೂ ಇಂಡಿಯಾ ಸರ್ಕಾರ ನೇಮಿಸಿದ್ದ ಕೇಂದ್ರ ವಿದ್ಯಾ ಸಲಹಾ ಸಮಿತಿಯವರೂ ಎಲ್ಲರೂ ಸಹ ಹೈಸ್ಕೂಲುಗಳಲ್ಲಿ ಎಲ್ಲ ದರ್ಜೆಯಲ್ಲಿಯೂ ಮಾತೃ ಭಾಷೆ ಅಥವ ಪ್ರಾಂತೀಯ ಭಾಷೆಯಲ್ಲೇ ಶಿಕ್ಷಣ ಮಕ್ಕಳಿಗೆ ದೊರೆಯಬೇಕು, ಇಂಗ್ಲಿಷ್ ಭಾಷೆ ಬೋಧಕ ಭಾಷೆಯಾಗಿರುವುದರಿಂದ ಹೆಚ್ಚು ಕಾಲವ್ಯಯವಾಗುತ್ತದೆ, ಇಂಗ್ಲಿಷ್ ಭಾಷೆಯ ಮೂಲಕ ಸುಮಾರು 15 ವರ್ಷ ವಿದ್ಯಾಭ್ಯಾಸ ಮಾಡಬೇಕಾಗಿರುವುದನ್ನು ಮಾತೃ ಭಾಷೆಯನ್ನು ಬೋಧಕಭಾಷೆಯಾಗಿ ಮಾಡಿದರೆ 10 ವರ್ಷಗಳಲ್ಲೇ ಮಕ್ಕಳು ಮುಗಿಸಬಲ್ಲರು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಅಭಿಪ್ರಾಯ ಸರ್ಕಾರದವರ ಮುಂದೆ ಪದೇಪದೇ ಪ್ರತಿವರ್ಷವೂ ಬರುತ್ತಿದ್ದರೂ ಸಹ ಅದೇಕೆ ಹಿಂಜರಿಯುತ್ತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ. ಇದರ ವಿಷಯವಾಗಿ ಮಹಾತ್ಮಾ ಗಾಂಧೀಜೀಯವರೇ ಒಂದೆಡೆ ಹೇಳಿರುವುದು ಬಹಳ ಗಮನಾರ್ಹವಾಗಿದೆ. ನಮ್ಮ ದೇಶದಲ್ಲಿ ಇಂಗ್ಲೀಷ್ ಭಾಷೆ ಬೋಧಕ ಭಾಷೆಯಾಗಿ ಇಟ್ಟುಕೊಂಡು ಆಡಳಿತ ನಡೆಸುತ್ತಿರುವವರೆಗೂ ನಮ್ಮವರು ಯಾವುದಕ್ಕೂ ಧೈರ್ಯವಾದ ನೀತಿಯನ್ನು ಹಾಕಿಕೊಂಡು ಮುಂದುವರಿಯುವುದಕ್ಕೆ ನಮಗೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದರು. ಈ ವಿಚಾರದಲ್ಲಿ ತಜ್ಞರನ್ನೂ, ಪಂಡಿತರುಗಳನ್ನೂ ಕೇಳಿಕೊಂಡೇ ಮಾಡುತ್ತೇವೆನ್ನುವುದಾದರೆ ನೀವೆಂದಿಗೂ ಮುಂದುವರಿಯುವುದಿಲ್ಲವೆಂದು ನನಗಂತೂ ಖಚಿತವಾಗಿ ಕಾಣುತ್ತದೆ. ಇದನ್ನೇಸಿದ್ದರೂ ಸರ್ಕಾರದವರೂ ರಾಜಕೀಯದಲ್ಲಿ ನುರಿತಿರುವವರೂ, ಹತ್ತಾರು ವರ್ಷಗಳಮೇಲೆ ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಹೇಗಿರಬೇಕೆಂಬುದನ್ನು ಆಲೋಚನೆ ಮಾಡುವ ಶಕ್ತಿ ಇರುವವರೂ ಸೇರಿ ಮಾಡಬೇಕೇವಿನಾ, ಎಂದಿನಂತೆ ವಿದ್ಯಾಪರಿಣತರನ್ನು ಕೇಳಿ ಮಾಡುತ್ತೇವೆನ್ನುವುದಾದರೆ ಅವರೆಂದಿಗೂ ಅವಕಾಶಕೊಡುವುದಿಲ್ಲ. ಕನ್ನಡ ಮಾಧ್ಯಮದ ವಿಷಯದಲ್ಲಿ ಭಾಷಾಭಿಮಾನಿಗಳಾದ ಅಧ್ಯಾಪಕರುಗಳನೇಕರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಕನ್ನಡ ಮಾಧ್ಯಮದಲ್ಲಿ ತರಪೇತಾದ ವಿದ್ಯಾರ್ಥಿಗಳು ಇನ್ನೂ ಹೆಚ್ಚಿಗೆ ಜಯಪ್ರದವಾಗಿ ವಿದ್ಯಾಭ್ಯಾಸವನ್ನು ಪಡೆದಿದ್ದಾರೆಂಬುದನ್ನೂ ಅಂಕಿ ಅಂಶಗಳಿಂದ ತೋರಿಸಿದ್ದಾರೆ. ಇಷ್ಟಾದರೂ ಸರ್ಕಾರದವರು ಬಹಳ ಆಲಸ್ಯ ಮನೋಭಾವನೆಯನ್ನು ತೋರಿಸುತ್ತಿದ್ದಾರೆ. ಈಗಲಾದರೂ ಸಹ—ಇನ್ನೇನು ಜೂನ್ 7ನೆಯ ತಾರೀಖಿನಿಂದ ಹೈಸ್ಕೂಲು ತರಗತಿಗಳು ಬೇಸಿಗೆ ರಜಾ ಕಳೆದು ಪಾಠ ಪ್ರವಚನಗಳನ್ನು ಷುರುಮಾಡು

ತ್ತವೆ—ಅಷ್ಟರಲ್ಲೇ ಎಲ್ಲಾ ಸ್ಕೂಲುಗಳಿಗೂ ಕನ್ನಡ ಮಾಧ್ಯಮದಲ್ಲಿ ಪಾಠಗಳನ್ನು ಹೇಳಿಕೊಡುವಂತೆ ಹುಕ್ಕುಂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಉರ್ದು ಮಾಧ್ಯಮ, ತೆಲುಗು ಮಾಧ್ಯಮ ಅಥವ ತಮಿಳು ಮಾಧ್ಯಮದಲ್ಲಿ ಮಿಡ್ಲ್ ಸ್ಕೂಲುಗಳಲ್ಲಿ ಓದಿದವರ ಅನುಕೂಲಕ್ಕಾಗಿ ಮಾತ್ರ ಇನ್ನು ಕೆಲವು ವರ್ಷಗಳ ಕಾಲ ಹೈಸ್ಕೂಲಿನಲ್ಲಿ ಇಂಗ್ಲಿಷ್ ಮಾಧ್ಯಮವನ್ನಿಟ್ಟುಕೊಳ್ಳಲಿ. ಈ ರಿಯಾಯಿತಿಯೂ ಕೂಡ ಅವರಿಗೆ ಇನ್ನು 5 ವರ್ಷಗಳವರೆಗೆ ಮಾತ್ರ ಇರಬೇಕೆಂದು ನಾನು ಸೂಚಿಸಿದ್ದೇನೆ. ಐದು ವರ್ಷಗಳಾದಮೇಲೆ ಹೈಸ್ಕೂಲಿಗೆ ಬರುವ ಎಲ್ಲಾ ವಿದ್ಯಾರ್ಥಿಗಳಿಗೂ ಸಹ ಕನ್ನಡವನ್ನು ಬೋಧಕ ಭಾಷೆಯಾಗಿ ಮಾಡಬೇಕೆಂದರೆ ಇವರುಗಳು ಆ ವಿದ್ಯಾಭ್ಯಾಸವನ್ನು ಪಡೆಯಲು ಸಾಧ್ಯವಾಗುವಂತೆ ಮಿಡ್ಲ್ ಮತ್ತು ಪ್ರೈಮರಿ ಸ್ಕೂಲುಗಳಲ್ಲೇ ಎಲ್ಲೆಲ್ಲಿ ಉಚಿತವೋ ಅಲ್ಲೆಲ್ಲಾ ಕನ್ನಡವನ್ನು ಕಲಿಸಲು ತಕ್ಕ ಏರ್ಪಾಡನ್ನು ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

Mr. SPEAKER.—Resolution moved:

"That th s Assembly is of the opinion that Kannada should be the medium of instruction in all the High Schools exception being shown to such s udents who have been taught in languages other than Kannada in Middle School for a period of five years."

*ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಈ ನಿರ್ಣಯವನ್ನು ನಾನು ಬಹಳ ಸಂತೋಷದಿಂದ ಅನುಮೋದಿಸುತ್ತೇನೆ..............

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದಕ್ಕೇ ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಾರಂಭಿಸಿದ್ದು ಎಂದು ಕಾಣುತ್ತೆ!

ಶ್ರೀ ಕೆ. ಸುಬ್ಬರಾಯರು.—ಇದೇ ರೀತಿಯ ಠರಾವನ್ನು ಇನ್ನೂ ಮೂರು ಜನರು ಕಳುಹಿಸಿದ್ದಾರೆ; ಅವುಗಳನ್ನೆಲ್ಲಾ ಒಟ್ಟಿಗೆ ತೆಗೆದುಕೊಂಡರೆ ಒಳ್ಳೆಯದಲ್ಲವೇ?

ಕೆಲವು ಸದಸ್ಯರು.—ಇದಕ್ಕೂ ಅವಕ್ಕೂ ವ್ಯತ್ಯಾಸವಿದೆ!

ಶ್ರೀ ಎಂ. ಗೋವಿಂದರೆಡ್ಡಿಯವರು.—ಸ್ವಾಮಿ, ಈ ನಿರ್ಣಯವನ್ನು ಅಂಗೀಕಾರಮಾಡಲು ಹಲವಾರು ಕಾರಣಗಳಿವೆ. ನಿರ್ಣಯದ ಸೂಚಕರು ಮಾತನಾಡಬೇಕಾದರೆ ಅವನ್ನು ವಿಪುಲವಾಗಿ ಹೇಳಿ ಇದನ್ನು ಸಮರ್ಥನೆ ಮಾಡಿದ್ದಾರೆ. ಇದು ಅಂಗೀಕಾರ ಯೋಗ್ಯವೆಂಬುದಕ್ಕೆ ಒಂದು ಬಲವಾದ ಕಾರಣವೇನೆಂದರೆ, ಶಿಕ್ಷಣ ಪರಿಣತರೆಲ್ಲ ಅಭಿಪ್ರಾಯಪಟ್ಟಿರುವ ಹಾಗೆ ಮಗುವಿಗೆ ವಿದ್ಯಾಭ್ಯಾಸ ಮಾಡಲು ಬಹಳ ಸುಲಭವಾದ ಭಾಷೆಯೆಂದರೆ ಅದು ಮಾತೃಭಾಷೆ, ಇಲ್ಲವೇ, ಅದಕ್ಕೆ ಹೆಚ್ಚಿನ ಪರಿಚಿತವಾದ ಭಾಷೆ.

ಮಾತೃಭಾಷೆ ಅಥವಾ ಮಗುವಿಗೆ ಹೆಚ್ಚಿನ ಪರಿಚಿತ ಭಾಷೆಯಲ್ಲಿ ವಿದ್ಯಾಭ್ಯಾಸವಾಗುವುದರ ಪ್ರಗತಿಗಿಂತ ಪರಭಾಷೆಯಲ್ಲಿ ಬೋಧನವಾದರೆ ಅದಕ್ಕೆ ಬಹಳ ಅನಾನುಕೂಲಗಳಾಗುತ್ತದೆಂಬುದನ್ನು ಸಾಕಾದಷ್ಟು ನಿದರ್ಶನಗಳನ್ನು ಕೊಟ್ಟು ನನ್ನ ಮಿತ್ರರಾದ ಶ್ರೀವರ್ಮ ಪುಟ್ಟಸ್ವಾಮಿಯವರು ಆಗಲೇ ವಿವರಿಸಿದ್ದಾರೆ. ಇದು ನಿರ್ವಿವಾದವಾದ ತತ್ವ, ಆ ತತ್ವವನ್ನು ವಿರೋಧಿಸಬಲ್ಲವರು ವಿದ್ಯಾ ಶಿಕ್ಷಣ ರಂಗದಲ್ಲಿ ಯಾರೂ ಇಲ್ಲವೆಂದು ಹೇಳಬಲ್ಲೆ.

ಶ್ರೀ ಎಲ್. ಸಿದ್ದಪ್ಪನವರು.—ಇದರ ಮೇಲೆ ಮಾತನಾಡತಕ್ಕ ಮಾನ್ಯ ಸದಸ್ಯರು, ನಾನು ಒಂದು ವಿಷಯವನ್ನು ಸಭೆಯ ಅವಗಾಹನೆಗೆ ತರುವುದಕ್ಕೆ ಅವಕಾಶ ಕೊಡಬೇಕು. ಹೈಸ್ಕೂಲು ತರಗತಿಗಳಲ್ಲಿ ಕನ್ನಡ ಮಾಧ್ಯಮವೇ ಇರಬೇಕೆಂಬುದು ಸರಿಯೇ; ಅದು ನ್ಯಾಯವಾದುದೇ. ಆದರೆ ಹೈಸ್ಕೂಲಿನಲ್ಲಿ ಕನ್ನಡದಲ್ಲಿ ಅಭ್ಯಾಸ ಮಾಡಿದವರು ವಿಶ್ವವಿದ್ಯಾನಿಲಯಕ್ಕೆ ಹೋದಾಗ ಅಲ್ಲಿ ಕನ್ನಡದ ಮೂಲಕ ಪಾಠ ಹೇಳಿಕೊಡುವವರು ಇಲ್ಲದೆ ಹೋದರೆ, ಆ ಹುಡುಗರಿಗೆ ಅನ್ಯಾಯ ಮಾಡಿದಹಾಗಾಗುತ್ತದೆಯಲ್ಲವೇ? ಅದನ್ನೂ ತಾವು ಯೋಚನೆ ಮಾಡಬೇಕು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ಶಿಕ್ಷಣ ಕ್ರಮದಲ್ಲಿ ಅದನ್ನೂ ಒಪ್ಪಿಕೊಂಡೇ ಇದ್ದಾರೆ. ಶ್ರೀ ಸಿದ್ದಪ್ಪನವರು ಹೇಳಿದ ಹಾಗೆ ಒಂದು ವೇಳೆ ಹೈಸ್ಕೂಲಿನಲ್ಲಿ ಕಡ್ಡಾಯವಾಗಿ ಕನ್ನಡವನ್ನು ಮಾಧ್ಯಮಿಕವಾಗಿ ವಿಧಾಯಕಮಾಡಿದರೆ, ಮುಂದೆ ಅವರು ವಿಶ್ವವಿದ್ಯಾನಿಲಯಕ್ಕೆ ಹೋದಾಗ ಅಲ್ಲಿ ಕನ್ನಡ ಮಾಧ್ಯಮವಿಲ್ಲದೆ ಹೋದರೆ ಅನಾನುಕೂಲವಾಗುತ್ತದೆ, ಆದ್ದರಿಂದ ಆ ರಂಗದಲ್ಲೂ ಕನ್ನಡವೇ ಇರಬೇಕೆಂಬುದು ಸಹಜ. ಅದು ನಿರ್ವಿವಾದವಾದ ಅಂಶ.

ಅಲ್ಲದೆ, ಇದರಲ್ಲಿ ನಾವು ಗಮನದಲ್ಲಿಡಬೇಕಾದ ಇನ್ನೊಂದು ಅಂಶವೇನೆಂದರೆ ಮಗು ಓದುತ್ತಾ ಓದುತ್ತಾ ಮೇಲಿನ ತರಗತಿಗಳಿಗೆ ಬಂದ ಮೇಲೆ ಒಂದು ಭಾಷೆಗಿಂತ ಹೆಚ್ಚಿಗೆ ಭಾಷೆಗಳನ್ನು ಕಲಿಯತಕ್ಕ ಶಕ್ತಿ ಹೊಂದಿರುತ್ತದೆ. ಆದ್ದರಿಂದ ಹೈಸ್ಕೂಲಿನಲ್ಲಿ ಉನ್ನತ ಮಟ್ಟದಲ್ಲಿ ಯಾವ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೋ ಅದೇ ಭಾಷೆಯಲ್ಲಿಯೇ ಮುಂದೆ ವಿಶ್ವವಿದ್ಯಾನಿಲಯದಲ್ಲಿಯೂ ಅದೇ ಭಾಷೆಯಲ್ಲಿ ಮುಂದುವರಿಸಿಕೊಂಡು ಹೋಗಲೇಬೇಕೆಂಬುದೇನೂ ಇಲ್ಲ. ಆ ಭಾಷೆಯನ್ನು ಬಿಟ್ಟು ಇನ್ನಾವುದಾದರೂ ಪರದೇಶ ಭಾಷೆಗಳಲ್ಲಿ—ಅದು ಇಂಗ್ಲೀಷ್, ಫ್ರೆಂಚ್, ಜರ್ಮನ್ ಯಾವುದೇ ಆಗಿರಬಹುದು—ಆ ಭಾಷೆಗಳಲ್ಲಿ ಕಲಿಯುವುದಕ್ಕೂ ಅವಕಾಶವಿರುತ್ತದೆ. ಆ ಭಾಷೆಗಳಲ್ಲಿ ಬೇಕಾದರೂ ಶಿಕ್ಷಣ ಹೊಂದಬಹುದು, ಮಾತೃಭಾಷೆಯಲ್ಲಾದರೂ ಶಿಕ್ಷಣ ಹೊಂದಬಹುದು. ಐಚ್ಛಿಕವಾಗಿ ಅವನು ಯಾವುದರಲ್ಲಿ ಕಲಿಯುವುದಕ್ಕೆ ಬೇಕಾದರೂ ಅವಕಾಶವಿರಬಹುದು. ಆದ್ದರಿಂದ ಹೈಸ್ಕೂಲಿನಲ್ಲಿ ಕನ್ನಡದಲ್ಲಿ ಶಿಕ್ಷಣಕ್ರಮವನ್ನು ವಿಧಾಯಕ ಮಾಡುವುದರಿಂದ ತೊಂದರೆಯೇನಿಲ್ಲ.

ಈ ವಿಷಯದಲ್ಲಿ ಮುಖ್ಯವಾಗಿ ಒಂದಂಶವನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕು. ಪ್ರಪಂಚದಲ್ಲಿ ಯಾವುದೇ ದೇಶವು ಪ್ರಗತಿಗೆ ಬರಬೇಕಾದರೂ, ಅದು ಆ ದೇಶದ ವಿದ್ಯಾವಂತರನ್ನು ಅನುಸರಿಸಿರುತ್ತದೆ, ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಿ, ಆ ವಿದ್ಯಾವಂತರಿಂದ ಜನರಿಗೆ ಉಪಯೋಗಗಳು ಲಭಿಸಬೇಕಾದರೆ, ಏಕೆಂದರೆ—ಜನೋಪಯುಕ್ತ ಕಾರ್ಯಗಳನ್ನು ಮಾಡಿ ದೇಶದ ಪ್ರಯೋಜನವನ್ನು ಸಾಧಿಸಬೇಕೆಂಬುವರೂ ಅನೇಕರಿದ್ದಾರೆ—ಹಾಗೆ ಸಾರ್ವಜನಿಕರಲ್ಲಿ ದುಡಿಯಬೇಕಾದರೆ ಅದು ವಿದ್ಯಾವಂತರಿಂದಲೇ ಸಾಧ್ಯ. ದೇಶದ ಪ್ರಗತಿಗೆ ಅವರೇ ಕಾರಣರು. ಆದ್ದರಿಂದ ಒಂದು ದೇಶ ಪ್ರಗತಿಗೆ ಬರಬೇಕೆಂದರೆ ಅಲ್ಲಿನ ವಿದ್ಯಾವಂತರಿಗೆ ದೇಶದ ಜನತೆಯಮೇಲೆ ಅಭಿಮಾನವಿರಬೇಕು. ಆ ಅಭಿಮಾನ ಬರಬೇಕಾದರೆ ಅವರಿಗೆ ಆ ಜನತೆಯ ಭಾಷೆಯಲ್ಲೇ ವಿದ್ಯಾಭ್ಯಾಸವಾಗಿರಬೇಕು. ಭಾಷೆ ಅವರದೇ ಆಗಿದ್ದರೇನೇ ಅವರಿಗೆ ಅಭಿಮಾನ ಬರುತ್ತದೆ. ಆದ್ದರಿಂದಲೇ ಪರಕೀಯರಿಲ್ಲಿ ಬಂದು ಪರಭಾಷೆಯನ್ನು ನಮ್ಮ ಮೇಲೆ ಹಾಕಿ ಎಷ್ಟು ವಿದ್ಯಾಭ್ಯಾಸ ಮಾಡಿಸಿದರೂ ನಮ್ಮ ಪ್ರಗತಿಯನ್ನು ಸಾಧಿಸಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿ, ನಮಗೆ ಸ್ವಾತಂತ್ರ್ಯಬರಬೇಕು, ನಮ್ಮ ಸರ್ಕಾರ

(ಶ್ರೀ ಎಂ. ಗೋವಿಂದರೆಡ್ಡಿಯವರು.)

ಸ್ಥಾಪನೆಯಾಗಬೇಕು ಎಂದು ಹಾರೈಸುತ್ತಿದ್ದೆವು. ಆದ್ದರಿಂದ ಮೈಸೂರು ಸಂಸ್ಥಾನದಲ್ಲೇ ಆಗಲಿ, ಯಾವ ದೇಶದಲ್ಲೇ ಆಗಲಿ ಅಲ್ಲಿನ ಜನತೆಗೆ ಆಯಾ ಪ್ರಾದೇಶಿಕ ಭಾಷೆಯಲ್ಲೇ ವಿದ್ಯಾಭ್ಯಾಸವಾಗಬೇಕು. ಅವರು ತಮ್ಮ ಭಾಷೆಯಲ್ಲೇ ಪರಿಣತರಾಗಬೇಕು. ಅವರ ಭಾಷೆಯಲ್ಲೇ ಹೆಚ್ಚುಹೆಚ್ಚು ವಿದ್ಯಾವಂತರು ತಯಾರಾಗಬೇಕು. ಆ ದೃಷ್ಟಿಯಿಂದ ನಮ್ಮ ದೇಶದ ವಿದ್ಯಾವಂತರೆಲ್ಲರೂ ಕನ್ನಡದಲ್ಲಿಯೇ ತಯಾರಾಗಬೇಕು. ಮಾತೃಭಾಷೆ ಯಾವುದೇ ಇರಲಿ ದೇಶದಲ್ಲಿ ಸಾರ್ವಜನಿಕ ರಂಗದಲ್ಲಿ ಇಳಿದು ಜನತಾಸೇವೆ ಮಾಡಬೇಕೆಂದರೆ ಕನ್ನಡವನ್ನು ಕಲಿಯಲೇ ಬೇಕು.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಕೋರ್ಟಿನ ಭಾಷೆ ಏನಿರಬೇಕು?

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದೂ ಕನ್ನಡವೇ ಆಗಬೇಕು ! ರಾಷ್ಟ್ರಭಾಷೆ ಕನ್ನಡವೇ ಆಗಬೇಕು. ಹೀಗೆ ಇದೆಲ್ಲವೂ ಕನ್ನಡದಲ್ಲಿಯೇ ಆಗಬೇಕೆಂಬುದಕ್ಕೆ ಕೆಲವು ಕಷ್ಟಗಳೂ ಇವೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಹೀಗೆ ಪ್ರತಿಯೊಬ್ಬರಿಗೂ ಕನ್ನಡದಲ್ಲೇ ಪಾಠ ಹೇಳಬೇಕೆಂದರೆ ಅದರಿಂದಲೂ ಸಹ ಬಹಳ ತೊಂದರೆಯಾಗಬಹುದು. ಆದ್ದರಿಂದಲೇ ಅವರು ಕೆಲವು ವರ್ಷಗಳ ಕಾಲಾವಧಿಯನ್ನು ಸಹ ಸೂಚಿಸಿದ್ದಾರೆ. ಆದರೆ ಈಗ ಏಕ್‌ದಂ ಹೈಸ್ಕೂಲುಗಳಲ್ಲಿ ಮತ್ತು ಕಾಲೇಜುಗಳಲ್ಲಿ ಇಂಗ್ಲೀಷಿಗೆ ಪ್ರಾಧಾನ್ಯ ಕೊಟ್ಟದ್ದು, ಅದನ್ನು ತಕ್ಷಣ ಕನ್ನಡಕ್ಕೆ ಪರಿವರ್ತನೆಮಾಡಿ ಬೋಧಿಸಬೇಕೆಂದರೆ ಅಲ್ಲಿರತಕ್ಕ ಉಪಾಧ್ಯಾಯರಿಗೂ ಬಹಳ ತೊಂದರೆಯಾಗಬಹುದು ಎಂಬ ಇತ್ಯಾದಿ ಕೆಲವು ಕಾರಣಗಳನ್ನು ಸರ್ಕಾರದವರು ನಮ್ಮ ಮುಂದಿಡಬಹುದು. ಅದನ್ನು ಸಹ ನಾವು ಒಪ್ಪಿಕೊಳ್ಳಬೇಕಾಗಿದೆ. ಸದ್ಯಕ್ಕೆ ಪ್ರತಿಯೊಂದು ಪಾಠವನ್ನೂ ಕನ್ನಡದಲ್ಲಿ ಬೋಧಿಸತಕ್ಕಂಥ ಉಪಾಧ್ಯಾಯರುಗಳು ದೊರೆಯುವುದೂ ಮತ್ತು ಕನ್ನಡದಲ್ಲೇ ಎಲ್ಲಾ ಪಠ್ಯ ಪುಸ್ತಕಗಳು ಇರುವಂತೆ ಮಾಡುವುದೂ ಕೊಂಚ ಕಷ್ಟವಿರಬಹುದು. ಈ ಎರಡು ವಿನಃ ಮತ್ತೇನೂ ಕಷ್ಟಗಳಿದ್ದಂತೆ ಕಾಣುತ್ತಿಲ್ಲ. ಈಗಾಗಲೇ ಹೈಸ್ಕೂಲುಗಳಲ್ಲಿ ಎಲ್ಲೆಲ್ಲಿ ಒಂದಕ್ಕಿಂತ ಹೆಚ್ಚಾಗಿ ಸೆಕ್ಷನ್‌ಗಳಿರತಕ್ಕ ತರಗತಿಗಳಿವೆಯೋ ಅಲ್ಲೆಲ್ಲ ಒಂದು ಸೆಕ್ಷನ್ ಇಂಗ್ಲೀಷ್‌ಗೆ ಬಿಟ್ಟು, ಇನ್ನುಳಿದ ಸೆಕ್ಷನ್‌ಗಳಿಗೆಲ್ಲಾ ಕನ್ನಡದಲ್ಲೇ ಪಾಠ ಹೇಳುವಂತೆ ಏರ್ಪಾಡುಗಳನ್ನು ಮಾಡಿದ್ದಾರೆ. ಸರ್ಕಾರದವರು ಹೀಗೊಂದು ಅನುಮಾನದ ಮೇಲೆ ಹೆಜ್ಜೆ ಹಾಕುತ್ತಾ ಹೋಗದೆ ಸ್ವಲ್ಪ ಧೈರ್ಯಮಾಡಿ, ಒಂದು ದೃಢ ನಂಬಿಕೆಯ ಮೇಲೆ ಇದನ್ನು ಮುಂದುವರಿಸಬೇಕಾಗಿದೆ. ಹೈದರಾಬಾದಿನಲ್ಲಿ ನೋಡಿ. ಅಲ್ಲಿ ಪ್ರತಿಯೊಂದು ಪಾಠವನ್ನೂ ಉರ್ದುವಿನಲ್ಲೇ ಹೇಳುತ್ತಿದ್ದಾರೆ. ಮೊದಮೊದಲು ಈ ಸೈನ್ಸ್ ಇತ್ಯಾದಿಗಳ ಪಾಠವನ್ನು ಕನ್ನಡದಲ್ಲಿ ಬೋಧಿಸಲು ಸ್ವಲ್ಪ ತೊಂದರೆಯಾಗಬಹುದು. ಆದರೆ ಹೈದ್ರಾಬಾದಿನಲ್ಲಿ ಈ ಸೈನ್ಸ್, ನ್ಯಾಯಶಾಸ್ತ್ರ ಇತ್ಯಾದಿಗಳನ್ನೆಲ್ಲಾ ಉರ್ದು ಭಾಷೆಯಲ್ಲೇ ಬೋಧಿಸುತ್ತಿದ್ದಾರೆ. ಅದೇ ರೀತಿ ಜಪಾನ್ ದೇಶದಲ್ಲೂ ಕೂಡ ಇದೆ. ಇಂಥಾ ಒಂದು ದೇಶಾಭಿಮಾನದ ಮೇಲೆ ಇದು ಹೋಗತಕ್ಕ ವಿಚಾರ. ಜಪಾನ್ ದೇಶದಲ್ಲಿ ಪ್ರತಿಯೊಂದು ವ್ಯವಹಾರವೂ ಜಪಾನಿ ಭಾಷೆಯಲ್ಲೇ ನಡೆಯುತ್ತಿದೆ. ಅಲ್ಲಿರತಕ್ಕ ದೊಡ್ಡ ವಿದ್ಯಾವಂತರಾದರೂ, ನಮ್ಮಲ್ಲಿರತಕ್ಕ ಒಬ್ಬ ಎಸ್. ಎಸ್. ಎಲ್. ಸಿ. ಹುಡುಗನಿಗೆ ಸಮನಾಗಿ ಇಂಗ್ಲೀಷಿನಲ್ಲಿ ಮಾತನಾಡಲಿಕ್ಕೆ ಬರುವುದಿಲ್ಲ. ಅಂದರೆ ಅಲ್ಲಿ ಇಂಗ್ಲೀಷ್ ಭಾಷೆಯ ಪ್ರಚಾರ ಅಷ್ಟು ಕಮ್ಮಿ ಇದೆ. ಈ ಎಲ್ಲ ಕಾರಣಗಳಿಂದ ಸರ್ಕಾರದವರು ಈ ನಿರ್ಣಯದಲ್ಲಿ ಸೂಚಿಸಿರುವಂತೆ ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಪ್ರಾಥಮಿಕ ಶಾಲೆಗಳಲ್ಲಿ ಎಲ್ಲೆಲ್ಲಿ ಉರ್ದು, ತಮಿಳು, ತೆಲುಗು, ಇತ್ಯಾದಿ ಭಾಷೆಗಳಲ್ಲಿ ಪಾಠಗಳನ್ನು ಬೋಧಿಸುತ್ತಿರಲಾಗಿದೆಯೋ ಅಂಥವರ ವಿಚಾರದಲ್ಲಿ ಏಕ್‌ದಂ ಕನ್ನಡ ಮಾಧ್ಯಮವನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಅದಕ್ಕಾಗಿಯೇ ಅದನ್ನು ಕ್ರಮಕ್ರಮೇಣ ಮಾಡಿ 5 ವರ್ಷಗಳ ಕಾಲಾವಧಿಯಲ್ಲಿ ಎಲ್ಲಾ ಹೈಸ್ಕೂಲುಗಳಲ್ಲೂ ಸಂಪೂರ್ಣವಾಗಿ ಕನ್ನಡ ಭಾಷೆಯಲ್ಲೇ ಪಾಠಪ್ರವಚನಗಳನ್ನು ನಡೆಸಬಹುದೆಂದು ಸೂಚಿಸಿದ್ದಾರೆ. ಹಾಗೆ ಈಗ ಆ ರೀತಿ ನಾನಾ ಭಾಷೆಗಳಲ್ಲಿ ಎಲ್ಲೆಲ್ಲಿ ಪಾಠಗಳು ನಡೆಯುತ್ತಿವೆಯೋ ಅವರುಗಳು ಹೈಸ್ಕೂಲಿಗೆ ಬರಲು ಇನ್ನು 5 ವರ್ಷಕಾಲ ಬೇಕಾಗುತ್ತೆ. ಅಷ್ಟರತನಕವೂ ಅವರಿಗೆ ಈ ವಿನಾಯಿತಿ ತೋರಿಸಿ ಮುಂದೆ ಎಲ್ಲರಿಗೂ ಕನ್ನಡದಲ್ಲೇ ಪಾಠಗಳನ್ನು ನಡೆಸುವಂತೆ ಮಾಡಬಹುದು. ಆದ್ದರಿಂದ ಸರ್ಕಾರದವರು ಇದನ್ನು ಒಪ್ಪಿಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

*ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಶ್ರೀ ಕೆ. ಪುಟ್ಟಸ್ವಾಮಿಯವರು ತಂದಿರತಕ್ಕ ನಿರ್ಣಯವನ್ನು ಅನುಮೋದಿಸುತ್ತ ನಾನು ನಾಲ್ಕಾರು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಹೀಗೆ ಹೈಸ್ಕೂಲುಗಳಲ್ಲಿ ಪಾಠಪ್ರವಚನಗಳನ್ನೆಲ್ಲಾ ಕನ್ನಡ ಮಾಧ್ಯಮದಲ್ಲೇ ಮಾಡಬೇಕೆಂದು ಹೇಳುತ್ತಿರುವುದು ಹೊಸದೇನೂ ಅಲ್ಲ. ಹಿಂದೆ 1932 ನೆಯ ಇಸವಿಯಲ್ಲೇ ಇದು ಪ್ರಾರಂಭವಾಯಿತು. ಹಿಂದೆ ಶ್ರೀಮಾನ್ ಎಚ್. ಎಸ್. ಸುಬ್ಬರಾಯರ ಕಾಲದಲ್ಲೇ ನಮ್ಮ ದೇಶದ ಹೈಸ್ಕೂಲುಗಳಲ್ಲಿ ಪಾಠಪ್ರವಚನಗಳನ್ನೆಲ್ಲಾ ಕನ್ನಡದಲ್ಲೇ ಬೋಧಿಸುವಂತೆ ಮಾಡಬೇಕೆಂದು ತಿಳಿಸಿದ್ದರು. ಹೀಗೆ ಹಿಂದಿನಿಂದಲೂ ಹೇಳುತ್ತಲೇ ಬಂದಿರುವ ವಿಷಯವನ್ನು ಮುಂದುವರಿಸಿದ ನಾವು ಹಿಂದಕ್ಕೇ ಹೋಗುತ್ತಿರುವುದು ಸರ್ವಥಾ ಸರಿಯಾದ್ದಲ್ಲ. ಜವಾಬ್ದಾರಿ ಸರ್ಕಾರ ಬಂದು ಇಲ್ಲಿಗಾಗಲೇ 3—4 ವರ್ಷಗಳಾಯಿತು. ಈ ರೀತಿಯ ವಿದ್ಯಾಭ್ಯಾಸ ಕ್ರಮವು ಜಾರಿಗೆ ಎಂದೋ ಬರಬೇಕಾಗಿತ್ತು. ಆದರೆ ಹಾಗೆ ಅದು ಇನ್ನೂ ಜಾರಿಗೆ ಬಾರದಿರುವುದು ನಮ್ಮ ದುರ್ದೈವ. ಈಗ ಹಾಲಿ ಚರ್ಚೆಗೆ ಬಂದಿರತಕ್ಕ ವಿಷಯ ಇನ್ನು 5 ವರ್ಷಗಳ ಕಾಲದೊಳಗಾಗಿ ಪ್ರತಿಯೊಂದು ಹೈಸ್ಕೂಲಿನಲ್ಲೂ ಎಲ್ಲ ಪಾಠ ಪ್ರವಚನಗಳನ್ನೂ ಕನ್ನಡದಲ್ಲೇ ಬೋಧಿಸುವಂತೆ ಮಾಡಬೇಕೆಂಬುದು. ಈ ಹಿಂದೆಯೇ ಇದು ಆಗಬೇಕಾಗಿತ್ತು. ಆದರೆ ಆಗ ತೀರ್ಮಾನಿಸಿದ್ದ ಪ್ರಕಾರ ಒಂದು ಪರಿಣತರ ಸಮಿತಿಯನ್ನು ಏರ್ಪಾಡ ಮಾಡಿ ಅವರ ಸಲಹೆ ಮೇರೆಗೆ ಮುಂದುವರಿಯಬೇಕೆಂದು ನಿರ್ಧರಿಸಲಾಗಿತ್ತು. ಆದರೆ ಅಂಥಾ ಸಮಿತಿಯನ್ನೂ ಮಾಡಲಿಲ್ಲ. ಅದಕ್ಕಾಗಿಯೇ ಇದು ಇನ್ನೂ ಹಣಗಾಟದಲ್ಲೇ ನಿಂತುಹೋಗಿದೆ. ಹಿಂದೆಲ್ಲಾ ಅನುಕೂಲಗಳನ್ನು ದೇಶಕ್ಕೆ ಉಂಟುಮಾಡಬೇಕೆಂದು ಅನೇಕರು ಸ್ವಾತಂತ್ರ್ಯಕ್ಕೆ ದುಡಿದು ನಾನಾ ಮುಖದಲ್ಲಿ ತೊಂದರೆಗಳಿಗೀಡಾಗಿದ್ದಾರೆ. ಅಂಥವರಿಗೆ ಈಗ ನಾವು ಈ ಉಪಕಾರ ಮಾಡಲೇಬೇಕಾಗಿದೆ. ಪ್ರಜಾಸರ್ಕಾರ ಸ್ಥಾಪನೆಯಾದಮೇಲೂ ಇದನ್ನು ಇನ್ನೂ ಮಾಡದೆ ಇರುವುದಕ್ಕೆ ಏನು ಕಾರಣವೋ ಗೊತ್ತಾಗುತ್ತಿಲ್ಲ. ಸರ್ಕಾರದವರಿಗೆ ಇದರ ಬಗ್ಗೆ ಅಂಥ ಹೆದರಿಕೆ ಏನೂ ಇರಬೇಕಾದ್ದಿಲ್ಲ. ಅವರು ಧೈರ್ಯಮಾಡಿ ಮಾಡಿದರೆ

ಅದೇ ಆಗುತ್ತೆ. ಈ ಕನ್ನಡ ಮಾಧ್ಯಮವನ್ನು ಆದಷ್ಟು ಜಾಗ್ರತೆ ಜಾರಿಗೆ ತಂದು ಅನುಕೂಲಪಡಿಸಿಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುತ್ತೇನೆ. ಹಿಂದೇನು ಒಂದು ಆಜ್ಞೆಯನ್ನು ಸರ್ಕಾರದವರು ಹೊರಡಿಸಿದ್ದರೋ ಅದಕ್ಕೆ ವಿರೋಧವಾಗಿ ಪಾಠಶಾಲೆಗಳಲ್ಲಿ ಕನ್ನಡ ಭಾಷೆಯನ್ನೇ ಕೈಬಿಟ್ಟಿದ್ದಾಗ್ಯೂ ಅವುಗಳ ವಿಚಾರದಲ್ಲಿ ಯಾವ ಕ್ರಮವನ್ನೂ ಕೈಗೊಳ್ಳದೆ ಬಿಟ್ಟುಬಿಟ್ಟಿದ್ದಾರೆ. ಅದೂ ಹೋಗಲಿ. ಈಗ ತಂದಿರತಕ್ಕ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಂಡು ಅದರಂತೆ ಕೂಡಲೆ ಜಾರಿಗೆ ತರಬೇಕೆಂದು ಪ್ರಾರ್ಥಿಸಿ ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ.

*ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ನಿರ್ಣಯದ ಬಗ್ಗೆ ನಾನು ಕೆಲವು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಇದು ಕನ್ನಡ ನಾಡಾಗಿದ್ದರೂ ಇಲ್ಲಿ ಕನ್ನಡ ಭಾಷೆಗೆ ಸಲ್ಲತಕ್ಕ ಗೌರವವನ್ನೂ ಇಂಗ್ಲೀಷಿಗೆ ಕೊಟ್ಟು ಪಾಠಗಳನ್ನೆಲ್ಲಾ ಆ ಭಾಷೆಯಲ್ಲೇ ಬೋಧಿಸುತ್ತಿದ್ದಾರೆ. ಇದು ಒಂದು ದೊಡ್ಡ ಕ್ರಿಯಾಲೋಪವೆಂದೇ ಹೇಳಬೇಕಾಗಿದೆ. ಅದಕ್ಕಾದರೂ ಕಾರಣವಿಷ್ಟೆ. ಎಲ್ಲೆಲ್ಲಿ ಇವರು ಇಂಗ್ಲೀಷ್ ಮಾಧ್ಯಮದಲ್ಲಿ ಪಾಠ ಹೇಳಬೇಕೆಂದು ಒಂದು ಅವಕಾಶ ಕಲ್ಪಿಸಿಕೊಟ್ಟಿದ್ದಾರೋ ಅಲ್ಲೆಲ್ಲಾ ಬಹಳಮಟ್ಟಿಗೆ ಹುಡುಗರು ಆ ಇಂಗ್ಲೀಷ್ ಮಾಧ್ಯಮಕ್ಕೇ ನುಗ್ಗುತ್ತಿದ್ದಾರೆ. ಆ ಒಂದು ದೃಷ್ಟಿಯಿಂದ ನಾನು ಸೂಚಿಸಬೇಕಾಗಿರುವುದೇನೆಂದರೆ ಹೈಸ್ಕೂಲುಗಳಲ್ಲಿ ಇಂಗ್ಲೀಷ್ ಮಾಧ್ಯಮವನ್ನೇ ತೆಗೆದುಹಾಕಿದ ವಿನಾ ಇದು ಸರಿಹೋಗುವಂತಿಲ್ಲ. ಹಾಗೆ ಮಾಡದಿದ್ದರೆ ಈ ಕನ್ನಡ ಭಾಷೆ ಮುಂದಕ್ಕೆ ಬರಲು ಮಾರ್ಗವೇ ಇರುವುದಿಲ್ಲ. ಈಗ ಎಲ್ಲೆಲ್ಲಿ ಇಂಗ್ಲೀಷ್ ಸೆಕ್ಷನ್‌ಗಳನ್ನು ತೆರೆಯಲಾಗಿದೆಯೋ, ಅಲ್ಲಿಗೇ ಈ ಹುಡುಗರನ್ನೆಲ್ಲಾ ಅದು ಸೆಳೆದುಕೊಳ್ಳುತ್ತದೆ. ಆದರೆ ಈಗಾಗಲೇ ನಮ್ಮ ವಿಶ್ವವಿದ್ಯಾನಿಲಯಗಳ ರಜಾ ಮುಗಿದು, ಅವುಗಳೆಲ್ಲಾ ಸದ್ಯದಲ್ಲೇ ಪುನಃ ಪ್ರಾರಂಭವಾಗುವುದರಲ್ಲಿವೆ. ತಾವೇನು ಹಿಂದಿನಿಂದ ಒಂದು ತೊಡರನ್ನು ತಂದು ಹಾಕಿದ್ದೀರೋ ಅದನ್ನು ತಪ್ಪಿಸಲು ಇದು ಸಕಾಲವಾಗಿದೆ. ಆದಕಾರಣ ಸರ್ಕಾರದವರು ಧೈರ್ಯಮಾಡಿ, ಇದರ ಬಗ್ಗೆ ಹೆಚ್ಚಿನ ಸಹಾನುಭೂತಿ ತೋರಿಸಿ ಇಂಟರ್ ಕಾಲೇಜುಗಳಲ್ಲಿ ಮೊದಲು ಕನ್ನಡ ಮಾಧ್ಯಮಕ್ಕೆ ಅವಕಾಶ ಮಾಡಿಕೊಟ್ಟು ತದನಂತರ ಡಿಗ್ರಿ ಕೋರ್ಸಿಗೆ ಮುಂದುವರಿಸಬೇಕಾಗಿದೆ. ಈ ಕಾರ್ಯವನ್ನು ತಾವು ದೇಶದ ಹಿತದೃಷ್ಟಿಯಿಂದ ಧೈರ್ಯಮಾಡಿ ಮಾಡಬೇಕಾಗಿದೆಯೆಂದು ಬಿನ್ನೈಸುತ್ತೇನೆ. ತಾವು ಕೈಕಟ್ಟಿ ಕುಳಿತರೆ ಏನು ಮಾಡುವುದಕ್ಕಾಗುತ್ತದೆ? ತಾವು ಎಲ್ಲಾ ಪಾಠ ಪ್ರವಚನಗಳನ್ನೂ ಕನ್ನಡದಲ್ಲೇ ಮಾಡುವುದಲ್ಲದೆ ಪ್ರತಿಯೊಂದು ಕೋರ್ಟಿನ ವ್ಯವಹಾರ ಸಹ ಕನ್ನಡದಲ್ಲೇ ನಡೆಯುವಂತೆ ಮಾಡಬಹುದು. ಅದರಿಂದ ಏನೂ ತೊಂದರೆಯಾಗುವುದಿಲ್ಲ. ಪ್ರತಿಯೊಂದು ಪಾಠವನ್ನೂ ಕನ್ನಡದಲ್ಲೇ ಹೈಸ್ಕೂಲು ತರಗತಿಗಳಿಂದ ಪ್ರಾರಂಭ ಮಾಡಿದರೆ ಮುಂದೆ ಎಲ್ಲಿಬೇಕಾದರೂ ವ್ಯವಹಾರವನ್ನು ಕನ್ನಡ ಭಾಷೆಯಲ್ಲೇ ಮಾಡಲು ಸಾಧ್ಯವಿದೆ. ಅದರಿಂದ ಯಾವ ಅನಾನುಕೂಲವೂ ಆಗುವುದಿಲ್ಲ. ಮತ್ತೂ ಆದರಿಂದ ದೇಶದಲ್ಲಿರತಕ್ಕ ಬಹುಸಂಖ್ಯಾತ ಜನರಿಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಕಾನೂನು ಪರಿಶ್ರಮವಿಲ್ಲದೆ ಜನರೂ ಸಹ ಕಾನೂನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಆದರೆ ಇಂದು ನಡೆಯುತ್ತಿರುವ ಇಂಗ್ಲೀಷ್ ವ್ಯವಹಾರದಲ್ಲಿ ಅಧಿಕಸಂಖ್ಯಾತ ಜನರಿಗೆ ಅದರ ಪರಿಜ್ಞಾನವಿಲ್ಲದಿರುವುದರಿಂದ, ಅನೇಕ ಲಾಯರುಗಳು ಇಂದು ಇಂಗ್ಲೀಷಿನಲ್ಲಿ ಅವರು ಏನು ಹೇಳುತ್ತಿದ್ದಾರೆಂಬುದರ ಅರ್ಥ ಗೊತ್ತಾಗದೆ ಬಹಳ ತೊಂದರೆಗೀಡಾಗಿದ್ದಾರೆ. ಹೀಗಾಗಿ ಅನೇಕ ಲಾಯರುಗಳು ಎಷ್ಟೋ ಸುಳ್ಳನ್ನು ಹೀಗೆ ಪರಿಶ್ರಮವಿಲ್ಲದ ಭಾಷೆಯಲ್ಲಿ ವ್ಯವಹಾರಮಾಡುತ್ತ ಅನೇಕ ಕೇಸುಗಳನ್ನು ಗೆದ್ದಿರತಕ್ಕ ಸನ್ನಿವೇಶಗಳು ಅನೇಕವಾಗಿವೆ.

The Hon'ble Sri H. C. DASAPPA.—I rise to a point of order. The Hon'ble Member need not cast reflections on the whole profession of Lawyers. Whether he may be a lawyer or not, he should not cast such reflections.

ಶ್ರೀ ಡಿ. ಎಂ. ಸಿದ್ದಯ್ಯನವರು.—ಕನ್ನಡದಲ್ಲೇ ಕೋರ್ಟು ಕೆಲಸ ನಡೆಯುವುದಕ್ಕೆ ಪ್ರಾರಂಭವಾದರೆ ಜನರಿಗೆ ಹೆಚ್ಚು ಅನುಕೂಲ ದೊರಕಿ ಸಹಕಾರಿಯಾಗುತ್ತದೆಂಬುದು ನನ್ನ ಅಭಿಪ್ರಾಯ. ಈ ದೃಷ್ಟಿಯಿಂದ ಕೋರ್ಟು ಕಛೇರಿಗಳಲ್ಲಿ ಕನ್ನಡ ಭಾಷೆಯನ್ನೇ ಉಪಯೋಗಿಸಿದರೆ ಏನೂ ತೊಂದರೆಯಾಗುವುದಿಲ್ಲ. ಈಗ ಕನ್ನಡವನ್ನೇ ಮುಖ್ಯವಾಗಿ ಬೋಧಕಭಾಷೆ ಮಾಡಿದರೆ ಆ ಮೇಲೆ ಎಲ್ಲಕ್ಕೂ ಅನುಕೂಲವಾಗುತ್ತದೆ. ಸರ್ಕಾರದವರು ಈ ವಿಷಯವನ್ನು ಮನಗಂಡು ಕನ್ನಡಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು ಎಂದು ಸೂಚಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಈಗ ಹೈಸ್ಕೂಲುಗಳಲ್ಲಿ ಕನ್ನಡ ಬೋಧಕಭಾಷೆಯಾದರೆ ಕಾಲೇಜಿನಲ್ಲಿ ಹುಡುಗರಿಗೆ ತೊಂದರೆ ಎಂಬ ವಾದ ಬಂದಿದೆ. ಆದರೆ ಈಗ ಹೈಸ್ಕೂಲುಗಳಲ್ಲಿ ಕನ್ನಡದಲ್ಲೇ ಕಲಿತವರಿಗೆ ಕಾಲೇಜಿನಲ್ಲಿ ಇಂಗ್ಲೀಷೇ ಬೋಧಕಭಾಷೆಯಾಗಿರುವಾಗಲೂ ಸಹ ಯಾವ ತೊಂದರೆಯೂ ಆಗಿಲ್ಲವೆಂದು ಬಲ್ಲವರು ಹೇಳಿದ್ದಾರೆ. ನಾನು ಹೇಳಿರುವುದು ಈಗ ಕಡ್ಡಾಯವೆಂದಲ್ಲ. ಹೈಸ್ಕೂಲುಗಳಲ್ಲಿ ಕಡ್ಡಾಯವಾಗಿ ಸಾರ್ವತ್ರಿಕವಾಗಿ ಕನ್ನಡ ಬೋಧಕಭಾಷೆಯಾಗಬೇಕಾದರೆ ಇನ್ನೂ ಸುಮಾರು 4–5 ವರ್ಷಗಳು ಬೇಕಾಗುತ್ತದೆ. ಉರ್ದು, ತೆಲುಗು ಮತ್ತು ತಮಿಳು ಭಾಷೆಯನ್ನು ಅಭ್ಯಾಸಮಾಡಿದ ವಿದ್ಯಾರ್ಥಿಗಳು ಕನ್ನಡ ಕಲಿಯುವುದಕ್ಕೆ ಐದು ವರ್ಷಗಳು ಬೇಕು. 5 ವರ್ಷಗಳ ಕಾಲದಲ್ಲಿ ಎಲ್ಲಾ ವಿಷಯವನ್ನೂ ಕನ್ನಡದಲ್ಲೇ ಬೋಧನೆಮಾಡುವುದಕ್ಕೆ ಅವಕಾಶವಾಗುತ್ತದೆ. ಈ ವಿಷಯವು ಸಾಧ್ಯವಾಗುತ್ತದೆ, ಆದ್ದರಿಂದ ಈ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಂಡು ಜಾರಿಗೆ ತರಬೇಕೆಂದು ಕೋರುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಅಧ್ಯಕ್ಷರೇ, ಈ ವಿಷಯದಲ್ಲಿ ಸಮರ್ಪಕವಾದ ಉತ್ತರಕೊಡುವುದು ಕಷ್ಟ. ಹಿಂದಿನ ಸಭೆಯಲ್ಲಿ ಇದೇ ವಿಷಯದಲ್ಲಿ ಚರ್ಚೆಯಾಯಿತು. ಈಗಲೂ ಮೂರು ನಾಲ್ಕು ಠರಾವುಗಳು ಈ ವಿಷಯದಲ್ಲಿ ಬಂದಿವೆ. ಇದೊಂದು ಕಷ್ಟಕರವಾದ ಸಮಸ್ಯೆ, ಆದರೂ ನಮ್ಮ ದೇಶವು ಕನ್ನಡ ನಾಡಾದ್ದರಿಂದ ಇದು ಅತಿ ಮುಖ್ಯವಾದ ಸಮಸ್ಯೆ. ನಮ್ಮ ದೇಶದಲ್ಲಿ ಬರೀ ಕನ್ನಡವೇ ಎಲ್ಲರ ಮಾತೃಭಾಷೆಯಾಗಿಲ್ಲ. ತೆಲುಗಿದೆ, ತಮಿಳಿದೆ, ಉರ್ದು ಇದೆ, ಕನ್ನಡ ಇದೆ. ಬಹು ಭಾಗ ಕನ್ನಡ ಮಾತನಾಡುವ ಜನರೇ ಇದ್ದಾರೆ. ನಮ್ಮ ದೇಶಕ್ಕೆ ಕನ್ನಡನಾಡು ಎಂಬ ಬಿರುದು ಬಂದಿದೆ. ಆದುದರಿಂದ ಕನ್ನಡ ಭಾಷೆಯಲ್ಲೇ ಎಲ್ಲಾ ತರಗತಿಗಳಲ್ಲೂ ಬೋಧನೆಮಾಡುವುದು ಬಹಳ

(ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.)

ಮುಖ್ಯವಾದ ಸಮಸ್ಯೆ. ಆದರೆ ಇದನ್ನು ಏಕ್‌ದಂ ಷುರುಮಾಡಿ ಮಿಡ್ಲ್ ಸ್ಕೂಲು, ಹೈಸ್ಕೂಲು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಭಾಷೆಯಲ್ಲೇ ಬೋಧನೆಮಾಡಲು ಪ್ರಯತ್ನಮಾಡುವುದಕ್ಕೆ ಏನು ತೊಂದರೆಯಿದೆ ಎಂಬುದು ಸ್ವಲ್ಪ ಕೂಲಂಕಷವಾಗಿ ಯೋಚನೆ ಮಾಡಬೇಕಾದ ಅಂಶ. ಈಗಾಗಲೇ ಇರುವ ಪದ್ಧತಿ ಪ್ರಕಾರ ನಿನ್ನೆ ತಾನೆ ಹೇಳಿದ ಹಾಗೆ ಈಗ ಎಲ್ಲೆಲ್ಲಿ ಒಂದೊಂದು ಸೆಕ್ಷನ್ ಇದೆಯೋ ಅಲ್ಲಿ ಇಂಗ್ಲೀಷ್ ಮಿಡಿಯಂ ಇದೆ, ಎರಡು ಸೆಕ್ಷನ್‌ಗಳಿರುವ ಕಡೆ ಕನ್ನಡ, ಇಂಗ್ಲೀಷ್ ಮೀಡಿಯಂ ಎರಡೂ ಇವೆ. ಈಗ ವಿದ್ಯಾ ಇಲಾಖೆ ಡೈರೆಕ್ಟರಿಂದ ಬಂದಿರುವ ವರದಿ ಪ್ರಕಾರ ಕನ್ನಡ ಮೀಡಿಯಂ ಇದ್ದರೂ ಸಹ, ಕನ್ನಡ ಮೀಡಿಯಂ ಸೆಕ್ಷನ್‌ನಲ್ಲಿ ಸೀಟು ಇದ್ದರೂ ಕೂಡ ಅನೇಕ ಕನ್ನಡ ಬರುವ ಹುಡುಗರು ಇಂಗ್ಲೀಷ್ ಮೀಡಿಯಂ ಬೇಕೆಂದು ಕೇಳುತ್ತಿದ್ದಾರೆ. ಅದಕ್ಕೆ ಅರ್ಜಿ ಹಾಕುತ್ತಿದ್ದಾರೆ. ಆದರೆ ಆ ರೀತಿ ಮಾಡುವುದು ಸರಿಯೆ, ಅಲ್ಲವೆ ಎಂಬುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಕನ್ನಡ ಭಾಷೆಯನ್ನು ಕಲಿಯುತ್ತಿದ್ದಾರೆ. ಅದು ಮಾತೃಭಾಷೆಯಾಗಿದೆ. ಈ ದಿವಸ ಇಡೀ ಇಂಡಿಯಾ ದೇಶದಲ್ಲಿ ಇಂಗ್ಲೀಷ್ ಭಾಷೆಯಲ್ಲೇ ಎಲ್ಲಾ ವ್ಯವಹಾರಗಳೂ ನಡೆಯುತ್ತಿರುವುದರಿಂದ ಇಂಗ್ಲೀಷಿನಲ್ಲೇ ಬೋಧನೆಯಾಗಬೇಕು ಎಂಬ ಅಭಿಲಾಷೆ ಎಲ್ಲರಿಗೂ ಬಂದಿದೆ. ಅದನ್ನು ಕಡಮೆಮಾಡಬೇಕೆಂಬ ತತ್ವವೇನೋ ಒಳ್ಳೆಯದು. ಆದರೆ ಇಂಗ್ಲೀಷ್ ಭಾಷೆ ಕಲಿಯಬೇಕೆಂಬ ಆಸೆ ಅನೇಕರಿಗಿದೆ. ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಸೂಚಿಸಿರುವ ತತ್ವವೇನೋ ಸರಿಯಾಗಿದೆ. ಈಗ ಇಂಗ್ಲೀಷ್ ಪ್ರಥಮ ಭಾಷೆಯಾಗಿದೆ. ಅದನ್ನು ತಪ್ಪಿಸಬೇಕು, ಎಲ್ಲಾ ಕನ್ನಡದಲ್ಲೇ ಹೈಸ್ಕೂಲುಗಳಲ್ಲಿ ಆಗಬೇಕು ಎಂದು ಹೇಳುತ್ತಿದ್ದಾರೆ. ಆದರೆ ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಕನ್ನಡದಲ್ಲೇ ಬೋಧಿಸುವುದಕ್ಕೆ ಅನೇಕ ತೊಂದರೆಗಳಿವೆ. ಹೈದರಾಬಾದಿನಲ್ಲಿ ಈ ವಿಚಾರದಲ್ಲಿ ಒಂದು ಸಮಿತಿ ಮಾಡಿದ್ದರು. ಅವರಿಂದ ವರದಿ ಬಂದ ನಂತರ ಪ್ರವೀಣರಿಂದ ಇತರ ಭಾಷೆಯಿಂದ ತರ್ಜುಮೆಮಾಡಿಸಿ ಈ ದಿವಸ ಅಲ್ಲಿನ ಕೋರ್ಟು ಮತ್ತು ಎಲ್ಲಾ ಆಫೀಸುಗಳ ರಿಕಾರ್ಡುಗಳು ಉರ್ದುವಿನಲ್ಲಿ ನಡೆಯುತ್ತಿವೆಯೆಂದು ಹೇಳುತ್ತಿದ್ದಾರೆ. ಇಲ್ಲಿ ಆ ತರಹವಾದ ಯೋಜನೆಮಾಡಿ ಪರಿಶೀಲಿಸಿ ಎಲ್ಲಾ ತರಗತಿಗಳಲ್ಲೂ ಕನ್ನಡ ಮಾಧ್ಯಮವಿಟ್ಟು ಕೆಲಸಮಾಡಬೇಕೆಂದು ಒಂದು ಪ್ರವೀಣರ ಸಮಿತಿಮಾಡಿ ತೀರ್ಮಾನ ಮಾಡಿಲ್ಲ. ಆದರೂ ಒಂದು ಸಮಸ್ಯೆಯಿದೆ. ಈಗ ತಕ್ಷಣವೇ ಎಲ್ಲಾ ತರಗತಿಗಳಲ್ಲೂ ಕನ್ನಡ ಮಾಧ್ಯಮ ಜಾರಿಗೆ ತರಲು ತೊಂದರೆಯಿದೆ. ಕನ್ನಡದಲ್ಲೇ ಬೋಧನೆ ಮಾಡುವುದಕ್ಕೆ ಉಪಾಧ್ಯಾಯರು ಸಿಕ್ಕುತ್ತಾರೆಯೆ ಎಂಬುದನ್ನು ನೋಡಬೇಕು. ಈ ನಿರ್ಣಯದ ಪ್ರಕಾರ ಐದು ವರ್ಷಗಳಾದ ಮೇಲೆ ಉರ್ದು, ತೆಲುಗು, ತಮಿಳು ಮುಂತಾದ ಮಾತೃಭಾಷೆಯುಳ್ಳವರೂ ಕನ್ನಡ ಕಲಿಯಬೇಕಾಗುತ್ತದೆ. ಹಾಗೆ ಮಾಡಿ 5 ವರ್ಷಗಳ ಮೇಲೆ ತಪ್ಪಿಸುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡಬೇಕು. ನಿರ್ಬಂಧಮಾಡಿ ಬಾಕಿ ಭಾಷೆಗಳನ್ನು ಏಕ್‌ದಂ ನಿಲ್ಲಿಸುವುದಕ್ಕೆ ಸಾಧ್ಯವೇ, ಪ್ರೈಮರಿ ಸ್ಕೂಲುಗಳಲ್ಲಿ ಮಾತೃಭಾಷೆ ಕಲಿತ ಮೇಲೆ ಹೈಸ್ಕೂಲ್ಲು ಕನ್ನಡ ಮಾಧ್ಯಮ ಇಟ್ಟರೆ ಹೇಗೆ, ಏನು ತೊಂದರೆ ಬರುತ್ತದೆ, ಯಾರಿಂದ ಏನು ಆಕ್ಷೇಪಣೆ ಬರುತ್ತದೆ, ಬೇರೆ ಮಾತೃಭಾಷೆಯಿರುವವರಿಗೆ ತೊಂದರೆಯೇನು ಎಂಬುದನ್ನೆಲ್ಲಾ ಪರಿಶೀಲಿಸಬೇಕು. ಈ ಕಾರಣದಿಂದ ಒಂದು ಸಮಿತಿಯನ್ನುಮಾಡಿ ಸಾಕಾದಷ್ಟು ಅನುಭವವಿರುವ ಪ್ರವೀಣರನ್ನು ಅಲ್ಲಿಗೆ ಹಾಕಿ ಎಲ್ಲಾ ಅಂಶಗಳನ್ನೂ ಪರಿಶೀಲಿಸಿ ಒಂದು ಯೋಜನೆಯನ್ನು ಅವರು ಸರ್ಕಾರಕ್ಕೆ ಒಪ್ಪಿಸಿದರೆ ಸುಲಭವಾಗಿ ತೀರ್ಮಾನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ರೀತಿ ಒಂದು ಸಮಿತಿಯನ್ನು ಮಾಡುತ್ತೇವೆ. ದಯವಿಟ್ಟು ಶ್ರೀ ಪುಟ್ಟಸ್ವಾಮಿಯವರು ಈ ನಿರ್ಣಯವನ್ನು ಸದ್ಯಕ್ಕೆ ವಾಪಸ್ಸು ತೆಗೆದುಕೊಳ್ಳಬೇಕು.

Sri K. PUTTASWAMY.—On the assuranco of the Hon'ble Minister, I seek the leave of the House to withdraw the resolution.

The resolution was, by leave of the House, withdrawn.

Sri M. GOVINDA REDDY (Chitaldrug District-General).—There is a meeting of the Secondary Education Board to-morrow morning. I will have to attend that meeting. I would like to suggest to the Chair that if it is not in-convenient we may meet to-morrow in the regular hours.

Mr. SPEAKER.—It was settled yesterday that we should meet on Saturday at Eight in the morning.

The House will now adjourn and meet at 8 a.m. to-morrow.

The Assembly adjourned at Eleven Minutes past Six of the Clock to meet again at Eight of the Clock on Saturday 2nd June 1951.

WD 3189—GPB—500—10-8-51

LEGISLATIVE ASSEMBLY.

TWENTY-FIFTH DAY.

Saturday, 2nd June 1951.

The Assembly met in the Assembly Hall, Old Public Offices, Bangalore, at Eight Minutes past Eight of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS

(to which oral answers were given)

MR. SPEAKER (The Hon'ble Sri V. Venkatappa).—Questions. Question No. 26. The Hon'ble Member Sri S. Kariappa is not present. The question will be treated as unstarred.

Question No. 157. Sri K. R. Madhava Rao.

Dispute between Mysore Paper Mills, Bhadravati and Bhadravati Municipality re: Water Supply.

**Q.*—157 SRI K. R. MADHAVA RAO (Shimoga District—General).—Will the Government be pleased to state:—

(*a*) whether the Mysore Paper Mills, Ltd., Bhadravati, are supplying water to the Bhadravati Municipality;

(*b*) the terms and conditions of supply;

(*c*) whether there has been a dispute regarding the water supply between the Mills and the Municipality; if so, the points of dispute;

(*d*) whether the water of Bhadra river is contaminated due to the lead of waste water of Paper Mills into the river;

(*e*) whether the Municipality is claiming compensation for this;

(*f*) the steps taken by Government to settle the dispute?

A.—The Hon'ble Sri R. CHENNIGARAMIAH (Minister for Local Self-Government).—

(*a*) No.

(*b*) and (*c*) Do not arise.

(*d*) The Municipality maintains that the water is contaminated by the effluents, whereas the Mysore Iron and Steel Works maintains that as the effluents are let into the Bhadra river mostly during the monsoons there is no appreciable contamination. The Director of Public Health will be requested to examine this question and report.

(*e*) Yes.

(*f*) The matter is under examination.

MR SPEAKER.—*Question* No. 85.

Revising the rates of discount to Stamp Vendors.

**Q.*—85. SRI K. SAMPANGI RAMIAH (Kolar District—General).—Will the Government be pleased to state:—

(*a*) the number of stamp vendors in the State;

(*b*) the total remuneration paid to them;

(*c*) the rates of discount allowed to them on the several kinds of stamps;

(*d*) the rates of discount allowed in the State of Madras;

(*e*) whether they will consider the question of revising the rates of discount in this State also to the advantage of the vendors?

A.—The Hon'ble Sri H. SIDDAIYA (Minister for Revenue and Excise).—

(*a*) 816.

(*b*) Rs. 62,646-3-4 for 9 months during the year 1949-50.

(The Hon'ble Sri H. SIDDAIYA)

(c) *General Stamps.*—Two per cent at District and Taluk Headquarters up to Rs. 50 denomination.

One and a half per cent at District and Taluk Headquarters above Rs. 50 denomination.

Four per cent at other places.

Court Fee Stamps.—One and a half per cent at all places.

(d) Information is not readily available.

(e) Not possible.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಸ್ಟ್ಯಾಂಪು ವೆಂಡರುಗಳ ಸರಾಸರಿ ವರಮಾನವೆಷ್ಟು?

*The Hon'ble Sri H. SIDDAIYA.—It varies from place to place.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಸುಮಾರು ಸರಾಸರಿ ವರಮಾನವೆಷ್ಟಿರಬಹುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸುಮಾರು 25 ಅಥವ 30 ರೂಪಾಯಿವರೆಗಿರಬಹುದು.

ಶ್ರೀ ಕೆ. ಸಂಪಂಗಿರಾಮಯ್ಯನವರು.— ಇಷ್ಟರಲ್ಲಿ ಈಗಿನ ಕಾಲದಲ್ಲಿ ಅವರ ಜೀವನ ನಡೆಯುತ್ತದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರು ಸಂಬಳವನ್ನು ಗೊತ್ತುಮಾಡಿ ಎಂದು ಒತ್ತಾಯಮಾಡಿದರು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಸರ್ಕಾರದವರು ಅದನ್ನು ಮಾಡಿದರೆ ಅಥವ ಆಲೋಚನೆಯಲ್ಲಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಲೋಚನೆಯಲ್ಲಿದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಈ ರೀತಿಯಾಗಿ ಅವರಿಗೆ ಉತ್ಪತ್ತಿ ಬಹಳ ಕಡಿಮೆಯಿರುವುದರಿಂದ ಸ್ಟ್ಯಾಂಪ್ ಮೇಲೆ ವಿಧಾಯಕ ಮಾಡಿರುವ ಕೋಡಿಯನ್ನು ಹೆಚ್ಚುಮಾಡುವ ವಿಚಾರವನ್ನು ಯೋಚನೆ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಯೋಚನೆ ಮಾಡಲಾಗುತ್ತದೆ.

Disposal of petitions or appeals without hearing the petitioners or their pleaders.

*ಪ್ರಶ್ನೆ 92.—ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಅರ್ಜಿದಾರರುಗಳು ಅಥವಾ ಅವರ ಕಡೆಯ ಲಾಯರುಗಳು ವಾದಿಸಿ ಹೇಳಿಕೊಳ್ಳಲು ತಾರೀಖನ್ನು ಗೊತ್ತುಮಾಡಿದೆಯೇ, ಕಳೆದ ಎರಡು ವರ್ಷಗಳ ಅವಧಿಯಲ್ಲಿ, ರೆವೆನ್ಯೂ ಕಮಿಷನರವರು, ಇತ್ಯರ್ಥಮಾಡಿರತಕ್ಕ ಅಪೀಲುಗಳ ಅಥವಾ ಇತರ ಅರ್ಜಿಗಳ ಸಂಖ್ಯೆ ಎಷ್ಟು;

(b) ಮೇಲೆ ಹೇಳಿದ ರೀತಿಯಲ್ಲೇ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸಂಸ್ಥಾನದಲ್ಲಿರುವ ನಾನಾ ಡೆಪ್ಯುಟಿ ಕಮಿಷನರುಗಳು ಇತ್ಯರ್ಥಮಾಡಿರತಕ್ಕ ಅಪೀಲುಗಳ ಅಥವಾ ಇತರ ಅರ್ಜಿಗಳ ಸಂಖ್ಯೆ ಎಷ್ಟು ?

(ವಿವರಗಳನ್ನು ಡಿಸ್ಟ್ರಿಕ್ಟುವಾರಾಗಿ ಒದಗಿಸಬೇಕೆಂದು ಪ್ರಾರ್ಥನೆ.)

ಉತ್ತರ.—(a) ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಯ ಸಚಿವರು).—

(a) ಸಾಲು		ಸಂಖ್ಯೆ
1948—49	...	78
1949—50	...	108

(b)		
ಮೈಸೂರು	...	ಯಾವುವೂ ಇಲ್ಲ.
ಮಂಡ್ಯ	...	
ಬೆಂಗಳೂರು	...	
ಕೋಲಾರ	...	
ತುಮಕೂರು	...	
ಚಿತ್ರದುರ್ಗ	...	
ಶಿವಮೊಗ್ಗ	...	
ಚಿಕ್ಕಮಗಳೂರು	...	
ಹಾಸನ	...	

ಶ್ರೀ ಕೆ. ಸಂಪಂಗಿರಾಮಯ್ಯನವರು.—ಈ ರೀತಿಯಾಗಿ ಯಾರಾದರೂ ಒಂದು ಅರ್ಜಿ ಹಾಕಿಕೊಂಡರೆ ಅವರ ಅಹವಾಲನ್ನು ವಿಚಾರಿಸದೆಯೇ ಹೊಡೆದು ಹಾಕುವುದು ನ್ಯಾಯವೇ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ವಾದ ವಿವಾದಗಳನ್ನು ಕೇಳುತ್ತಾರೆ. ಹಾಗೆ ಕೇಳಿಯೇ ಇತ್ಯರ್ಥ ಮಾಡುವುದು ನ್ಯಾಯ. ಹೆಚ್ಚು ಕಡಿಮೆ ಎಲ್ಲಾ ಕೇಸುಗಳನ್ನೂ ಹಾಗೆಯೇ ತೀರ್ಮಾನ ಮಾಡುತ್ತಾರೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಎಲ್ಲಾ ಕೇಸುಗಳನ್ನೂ ಸರಿಯಾಗಿ ಅವಕಾಶ ಕೊಟ್ಟು ಕೇಳಿ ಇತ್ಯರ್ಥ ಮಾಡಬೇಕಲ್ಲವೇ ?

The Hon'ble Sri H. SIDDAIYA.—In respect of bad cases which are hopelessly bad on the face of them what is the good of hearing the parties ? It is left to the discretion of the Revenue Commissioner.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಕೊನೆಪಕ್ಷ ಒಂದು ಹಿಯರಿಂಗ್ ಆದರೂ ಕೊಟ್ಟು ತೀರ್ಮಾನ ಮಾಡುವುದು ಒಳ್ಳೆಯದಲ್ಲವೇ ?

The Hon'ble Sri H. SIDDAIYA.—Not absolutely necessary in all cases.

Sri M. GOVINDA REDDY (Chitaldrug District—General).—Are cases disposed of without hearing the parties even when they are represented by their lawyers ?

The Hon'ble Sri H. SIDDAIYA.—Generally the hearing date will be given and the parties are informed.

Mr. SPEAKER.—Next question. Sri K. Puttaswamy. The Hon'ble Member

is not present. Question No. 100 will be treated as unstarred.

Next question. Sri M. C. Venkateshan.

Mutation Records pending in each Taluk.

*ಪ್ರಶ್ನೆ 139.—ಶ್ರೀ ಎಂ. ಸಿ. ವೆಂಕಟೇಶ್ವರವರು (ಮಂಡ್ಯ ಡಿಸ್ಟ್ರಿಕ್ಟು—ನಿಮ್ನ ತರಗತಿಗಳವರ ಪರ ವಾಗಿ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಈಗ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇತ್ಯರ್ಥವಾಗದೆ ಉಳಿದಿರುವ ಹಕ್ಕು ವರ್ಗಾವಣೆ ರಿಕಾರ್ಡುಗಳ (ಎಂದರೆ "ಮ್ಯುಟೇಷನ್ ರಿಕಾರ್ಡು"ಗಳ) ಸಂಖ್ಯೆಯೆಷ್ಟು;

(b) 1950–51ನೆಯ ಸಾಲಿನಲ್ಲಿ ಹಕ್ಕು ವರ್ಗಾವಣೆಗಾಗಿ ಬಂದ ಸಂದರ್ಭಗಳ ಸಂಖ್ಯೆಯೆಷ್ಟು;

(c) 195 –51ನೆಯ ಸಾಲಿನಲ್ಲಿ ಇತ್ಯರ್ಥವಾದ ಹಕ್ಕು ವರ್ಗಾವಣೆ ಸಂದರ್ಭಗಳ ಸಂಖ್ಯೆಯೆಷ್ಟು?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಯ ಸಚಿವರು).—

(a) ಪರಿಶಿಷ್ಟದಲ್ಲಿ ಕೊಟ್ಟಿರುವ ತಖ್ತೆಯ 6ನೆಯ ಕಲಮನ್ನು ದಯೆಯಿಟ್ಟು ನೋಡಿ. (ಪರಿಶಿಷ್ಟವನ್ನು ದಯೆಯಿಟ್ಟು ನೋಡಿ.)

(b) ಪರಿಶಿಷ್ಟದಲ್ಲಿ ಕೊಟ್ಟಿರುವ ತಖ್ತೆಯ 3ನೆಯ ಕಲಮನ್ನು ದಯೆಯಿಟ್ಟು ನೋಡಿ. (ಪರಿಶಿಷ್ಟವನ್ನು ದಯೆಯಿಟ್ಟು ನೋಡಿ.)

(c) ಪರಿಶಿಷ್ಟದಲ್ಲಿ ಕೊಟ್ಟಿರುವ ತಖ್ತೆಯ 5ನೆಯ ಕಲಮನ್ನು ದಯೆಯಿಟ್ಟು ನೋಡಿ. (ಪರಿಶಿಷ್ಟವನ್ನು ದಯೆಯಿಟ್ಟು ನೋಡಿ.)

1950–51ನೆಯ ಸಾಲಿನಲ್ಲಿ 1950ನೆಯ ಇಸವಿ ಡಿಸೆಂಬರ್ ಆಖೈರಿನವರೆಗೆ, ಬಂದ ಇತ್ಯರ್ಥವಾದ ಮತ್ತು ಇತ್ಯರ್ಥವಾಗದೆ ಉಳಿದಿರುವ ಹಕ್ಕು ವರ್ಗಾವಣೆ ಸಂದರ್ಭಗಳನ್ನು ತೋರಿಸುವ ತಖ್ತೆ.

	ತಾಲ್ಲೂಕುಗಳ ಹೆಸರು	1-7-1950 ರಲ್ಲಿ ಇತ್ಯರ್ಥವಾಗದೆ ಉಳಿದಿರುವ ಹಕ್ಕು ವರ್ಗಾವಣೆ ಸಂದರ್ಭಗಳ ಸಂಖ್ಯೆ	1950–51ನೆಯ ಸಾಲಿನಲ್ಲಿ 1950ನೆಯ ಇಸವಿ ಡಿಸೆಂಬರ್ ಆಖೈರಿನವರೆಗೆ ಬಂದ ಹಕ್ಕು ವರ್ಗಾವಣೆ ಸಂದರ್ಭಗಳ ಸಂಖ್ಯೆ	ಒಟ್ಟು	1950–51ನೆಯ ಸಾಲಿನಲ್ಲಿ 1950ನೆಯ ಇಸವಿ ಡಿಸೆಂಬರ್ ಆಖೈರಿನವರೆಗೆ ಇತ್ಯರ್ಥವಾದ ಹಕ್ಕು ವರ್ಗಾವಣೆ ಸಂದರ್ಭಗಳ ಸಂಖ್ಯೆ	1-1-1951 ರಲ್ಲಿ ಇತ್ಯರ್ಥವಾಗದೆ ಉಳಿದಿರುವ ಹಕ್ಕು ವರ್ಗಾವಣೆ ಸಂದರ್ಭಗಳ ಸಂಖ್ಯೆ
	1	2	3	4	5	6
1	ಬೆಂಗಳೂರು ನಾರ್ತ್	2,441	1,408	3,849	602	3,247
2	ಡಿಟ್ಟೋ ...	83	2,233	2,316	18	2,298
3	ರಾಮನಗರಂ ...	7,110	711	7,821	320	7,501
4	ಮಾಗಡಿ ...	1,419	1,564	2,983	464	2,519
5	ಚೆನ್ನಪಟ್ಟಣ ...	4,153	2,452	6,605	4,067	2,538
6	ಕಾನಕಾನಹಳ್ಳಿ ...	162	1,849	2,011	1,519	492
7	ದೊಡ್ಡಬಳ್ಳಾಪುರ ...	704	1,012	1,716	1,387	329
8	ದೇವನಹಳ್ಳಿ ...	1,162	944	2,106	815	1,291
9	ನೆಲಮಂಗಲ ...	3,317	834	4,151	94	4,057
10	ಆನೇಕಲ್ ...	343	1,161	1,504	913	591
11	ಹೊಸಕೋಟೆ ..	600	1,241	1,841	1,512	329
	ಒಟ್ಟು ...	21,494	15,409	36,903	11,711	25,192
12	ಕೋಲಾರ ...	275	6,394	6,669	1,190	5,479
13	ಬಂಗಾರಪೇಟೆ ...	288	1,098	1,386	887	499
14	ಮಾಲೂರು ...	780	758	1,538	534	1,004
15	ಮುಳುಬಾಗಿಲು ...	394	916	1,310	1,192	118
16	ಶ್ರೀನಿವಾಸಪುರ ...	432	849	1,281	773	508
17	ಚಿಂತಾಮಣಿ ...	909	952	1,861	866	995
18	ಶಿಡ್ಲಘಟ್ಟ ...	288	875	1,163	1,054	109
19	ಚಿಕ್ಕಬಳ್ಳಾಪುರ ...	4,642	700	5,342	1,135	4,207
20	ಗೋರಿಬಿದನೂರು ...	61	473	534	468	66
21	ಬಾಗೇಪಲ್ಲಿ ...	720	354	1,074	214	860
22	ಗುಡಿಬಂಡೆ ...	158	180	338	268	70
	ಒಟ್ಟು ...	8,947	13,549	22,496	8,581	13,915

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—

ತಾಲ್ಲೂಕುಗಳ ಹೆಸರು	1-7-1950 ರಲ್ಲಿ ಇತ್ಯರ್ಥವಾಗದೆ ಉಳಿದಿದ್ದ ಚಕ್ಕುಬಂದಿ ದರಖಾಸ್ತುಗಳ ಸಂಖ್ಯೆ	1950-51ನೆಯ ಸಾಲಿನಲ್ಲಿ 1950ನೆಯ ಇಸವಿ ಡಿಸೆಂಬರ್ ಅಖೈರುವರೆಗೆ ಬಂದ ಚಕ್ಕುಬಂದಿ ದರಖಾಸ್ತುಗಳ ಸಂಖ್ಯೆ	ಒಟ್ಟು	1950-51 ನೆಯ ಸಾಲಿನಲ್ಲಿ 1950 ನೆಯ ಇಸವಿ ಡಿಸೆಂಬರ್ ಅಖೈರುವರೆಗೆ ಇತ್ಯರ್ಥವಾದ ಚಕ್ಕುಬಂದಿ ದರಖಾಸ್ತುಗಳ ಸಂಖ್ಯೆ	1-1-1951 ರಲ್ಲಿ ಇತ್ಯರ್ಥವಾಗದೆ ಉಳಿದಿದ್ದ ಚಕ್ಕುಬಂದಿ ದರಖಾಸ್ತುಗಳ ಸಂಖ್ಯೆ
1	2	3	4	5	6
23 ಮೈಸೂರು ...	498	1,356	1,854	1,137	717
24 ಕೃಷ್ಣರಾಜನಗರ ...	8,764	1,577	10,341	1,899	8,442
25 ಹುಣಸೂರು ...	200	582	782	582	200
26 ಹೆಗ್ಗಡದೇವನಕೋಟೆ	1,077	810	1,887	915	972
27 ಪೆರಿಯಾಪಟ್ಟಣ ...	650	478	1,128	969	159
28 ನಂಜನಗೂಡು ...	1,183	2,875	4,058	3,056	1,002
29 ಚಾಮರಾಜನಗರ ...	518	4,832	5,350	5,030	320
30 ಗುಂಡ್ಲುಪೇಟೆ ...	241	1,081	1,322	1,040	282
31 ತಿರುಮಕೂಡ್ಲು ನರಸೀಪುರ ...	1,031	2,320	3,351	2,583	768
ಒಟ್ಟು ...	14,162	15,911	30,073	17,211	12,862
32 ಹಾಸನ ...	1,312	1,644	2,956	1,984	972
33 ಅರಸೀಕೆರೆ ...	1,760	1,569	3,329	1,573	1,756
34 ಚೆನ್ನರಾಯಪಟ್ಟಣ...	1,816	2,674	4,490	2,779	1,711
35 ಹೊಳೇನರಸೀಪುರ ...	877	920	1,797	1,154	643
36 ಅರಕಲಗೂಡು ...	677	931	1,608	863	745
37 ಮಂಜರಾಬಾದು ...	462	590	1,052	838	214
38 ಬೇಲೂರು ...	170	733	903	721	182
39 ಆಲೂರು ...	25	390	415	361	54
ಒಟ್ಟು ...	7,099	9,451	16,551	10,273	6,277
40 ಶಿವಮೊಗ್ಗ ...	238	362	600	407	193
41 ಭದ್ರಾವತಿ ...	232	292	524	436	88
42 ಚನ್ನಗಿರಿ ...	72	665	737	667	70
43 ಹೊನ್ನಾಳಿ ...	79	379	458	390	68
44 ಷಿಕಾರಿಪುರ ...	12	525	537	522	15
45 ಸೊರಬ ...	22	249	271	248	23
46 ಸಾಗರ ...	36	420	456	440	16
47 ಹೊಸನಗರ ...	23	240	263	183	80
48 ತೀರ್ಥಹಳ್ಳಿ ...	86	459	545	473	72
ಒಟ್ಟು ..	800	3,591	4,391	3,766	625
49 ಚಿಕ್ಕಮಗಳೂರು ...	1,794	590	2,384	646	1,738
50 ಕಡೂರು ...	86	1,655	1,741	1,561	180
51 ತರೀಕೆರೆ ...	528	683	1,211	547	664
52 ಕೊಪ್ಪ ...	57	102	159	76	83
53 ಮೂಡಿಗೆರೆ ...	82	315	397	374	24
54 ನರಸಿಂಹರಾಜಪುರ ...	19	60	79	65	14
ಒಟ್ಟು ...	2,566	3,405	5,971	3,269	2,702

ತಾಲ್ಲೂಕುಗಳ ಹೆಸರು	1-7-1950 ರಲ್ಲಿ ಇತ್ಯರ್ಥ ವಾಗದೆ ಉಳಿದಿದ್ದ ಹಕ್ಕು ಬದಲಾವಣೆ ಸಂದರ್ಭ ಗಳ ಸಂಖ್ಯೆ	1950–51ನೇ ಸಾಲಿನಲ್ಲಿ 1950ನೇ ಇಸವಿ ಡಿಸೆಂಬರ್ ಆಖೈರುವರೆಗೆ ಬಂದ ಹಕ್ಕು ಬದಲಾವಣೆ ಸಂದರ್ಭಗಳ ಸಂಖ್ಯೆ	ಒಟ್ಟು	1950–51ನೇ ಸಾಲಿನಲ್ಲಿ 1950ನೇ ಇಸವಿ ಡಿಸೆಂಬರ್ ಆಖೈರುವರೆಗೆ ಇತ್ಯರ್ಥ ವಾದ ಹಕ್ಕು ಬದಲಾವಣೆ ಸಂದರ್ಭಗಳ ಸಂಖ್ಯೆ	1-1-1951 ರಲ್ಲಿ ಇತ್ಯರ್ಥ ವಾಗದೆ ಉಳಿದಿದ್ದ ಹಕ್ಕು ಬದಲಾವಣೆ ಸಂದರ್ಭಗಳ ಸಂಖ್ಯೆ
1	2	3	4	5	6
55 ಮಂಡ್ಯ ...	1,947	2,990	4,937	4,047	890
56 ಮದ್ದೂರು ...	4,912	2,354	7,266	3,677	3,589
57 ಮಳವಳ್ಳಿ ...	4,248	629	4,877	1,820	3,057
58 ಶ್ರೀರಂಗಪಟ್ಟಣ ...	284	602	886	200	686
59 ಪಾಂಡವಪುರ ...	1,064	744	1,808	604	1,204
60 ನಾಗಮಂಗಲ ...	364	1,773	2,137	1,674	463
61 ಕೃಷ್ಣರಾಜಪುರ ...	4,656	2,098	6,754	4,584	2,170
ಒಟ್ಟು ...	17,475	11,190	28,665	16,606	12,059
62 ಚಿತ್ರದುರ್ಗ ...	282	828	1,110	824	286
63 ಚಳ್ಳಕೆರೆ ...	63	732	795	741	54
64 ಹಿರಿಯೂರು ...	58	627	685	568	117
65 ಮೊಳಕಾಲ್ಮೂರು ...	67	214	281	179	102
66 ದಾವಣಗೆರೆ ...	110	452	562	413	149
67 ಹೊಳಲ್ಕೆರೆ ...	71	444	513	413	102
68 ಹೊಸದುರ್ಗ ...	520	609	1,129	746	383
69 ಜಗಳೂರು ...	145	392	537	405	132
70 ಹರಿಹರ ...	146	274	420	292	128
ಒಟ್ಟು ...	1,462	4,572	6,034	4,581	1,453
71 ತುಮಕೂರು ...	1,706	1,852	3,558	1,200	2,358
72 ಕುಣಿಗಲು ...	15,803	887	16,690	2,813	13,877
73 ತುರುವೇಕೆರೆ ...	2,292	1,367	3,659	1,207	2,452
74 ಗುಬ್ಬಿ ...	932	1,544	2,476	1,761	715
75 ಚಿಕ್ಕನಾಯಕನಹಳ್ಳಿ ...	696	1,246	1,942	1,573	369
76 ತಿಪಟೂರು ...	6,795	1,409	8,204	1,674	6,530
77 ಮಧುಗಿರಿ ...	2,313	939	3,252	950	2,302
78 ಸೀರ್ಯ ...	356	810	1,166	914	252
79 ಪಾವಗಡ ...	216	221	437	180	257
80 ಕೊರಟಗೆರೆ ...	2,493	580	3,073	645	2,428
ಒಟ್ಟು ...	33,602	10,855	44,457	12,917	31,540
ಡಿಸ್ಟ್ರಿಕ್ಟು.					
1 ಬೆಂಗಳೂರು ...	21,494	15,409	36,903	11,711	25,192
2 ಕೋಲಾರ ...	8,947	13,549	22,496	8,581	13,915
3 ಮೈಸೂರು ...	14,162	15,911	30,073	17,211	12,862
4 ಹಾಸನ ...	1,799	9,451	16,550	10,273	6,277
5 ಶಿವಮೊಗ್ಗ ...	800	3,591	4,391	3,766	625
6 ಚಿಕ್ಕಮಗಳೂರು ...	2,566	3,405	5,971	3,269	2,702
7 ಮಂಡ್ಯ ...	17,475	11,190	28,665	16,606	12,059
8 ಚಿತ್ರದುರ್ಗ ...	1,462	4,572	6,034	4,581	1,453
9 ತುಮಕೂರು ...	33,602	10,855	44,457	12,917	31,540
ಒಟ್ಟು ...	1,07,607	87,933	1,95,540	88,915	1,06,625

ಶ್ರೀ ಎಂ. ಸಿ. ವೆಂಕಟೇಶ್ವರವರು.—ಮ್ಯುಟೇಷನ್ ರಿಕಾರ್ಡುಗಳು ಹೀಗೆ ವರ್ಷೇ ವರ್ಷೇ ಮುಲ್ಕಿ ಬಿದ್ದಿರುವುದಕ್ಕೇನು ಕಾರಣ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಇತ್ಯರ್ಥ ಮಾಡುವುದು ಸ್ವಲ್ಪ ಕಾಂಪ್ಲಿಕೇಟೆಡ್ ಅದ ವಿಧಾನ. ಆದ್ದರಿಂದ ಕೊಂಚ ಹೆಚ್ಚಿಗೆ ಕಾಲ ಹಿಡಿಯುವುದು ಸ್ವಾಭಾವಿಕ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಕಾಂಪ್ಲಿಕೇಟೆಡ್ ಅಂದರೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಲ್ಲವನ್ನೂ ವಿಚಾರಮಾಡಬೇಕು. ಅಂಥಾದ್ದರಲ್ಲೂ ಹಿಂದಿನ ವರ್ಷದ ಲೆಕ್ಕಕ್ಕೆ ಹೋಲಿಸಿದರೆ ಈ ಸಾರಿ ಹೆಚ್ಚಾಗಿಯೇ ವಿಲೆವಾರಿಯಾಗಿದೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಪ್ರತಿ ತಾಲ್ಲೂಕಿನಲ್ಲಿಯೂ ಸಾವಿರಗಟ್ಟಲೆ ರಿಕಾರ್ಡುಗಳು ಉಳಿದು ಹೋಗಿರುವುದರಿಂದ ಇದಕ್ಕಾಗಿ ಒಬ್ಬ ಸ್ಪೆಷಲ್ ಶಿರಸ್ತೆದಾರರನ್ನು ನೇಮಿಸಬೇಕಾದ ಸಂದರ್ಭ ಬಂದಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಕಡೆ ಹಾಗೆ ನೇಮಿಸಿದೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಒಂದೊಂದು ತಾಲ್ಲೂಕಿನಲ್ಲೂ 30,000-40,000 ಕೇಸುಗಳು ಉಳಿದಿರುವುದು ನಿಮಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಷ್ಟರ ಮಟ್ಟಿಗೆ ಉಳಿದಿದೆಯೆಂದು ನಾನು ಒಪ್ಪಲಾರೆ.

ಶ್ರೀ ಎಂ. ಸಿ ವೆಂಕಟೇಶ್ವರವರು.—ಪ್ರತಿ ವರ್ಷವೂ 2,000 ಅರ್ಜಿಗಳು ಮುಲ್ಕಿ ಬೀಳುತ್ತವೆಂದು ಗೊತ್ತಾಗುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲೇ ಹೇಳಿದೆ.

ಶ್ರೀ ಎಂ ಸಿ. ವೆಂಕಟೇಶ್ವರವರು.—ಆದ್ದರಿಂದ ಈಗಿನ ಮ್ಯುಟೇಷನ್ ವಿಧಾನವನ್ನೇ ಬದಲಾಯಿಸುವುದು ಅವಶ್ಯಕವಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದನ್ನು ಸುಧಾರಣೆ ಮಾಡುವುದಕ್ಕೇನಾದರೂ ಅವಕಾಶವಿದೆಯೇ ಎಂಬ ವಿಷಯದಲ್ಲಿ ಈ ಇಲಾಖಾ ಆಫೀಸರ ಅಭಿಪ್ರಾಯವನ್ನು ಕೇಳಿದ್ದೇವೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಇಲ್ಲಿ ಪಟ್ಟಿಯಲ್ಲಿ ಕೊಟ್ಟಿರುವ ಪ್ರಕಾರ 8,764 ಕೇಸುಗಳು ಇತ್ಯರ್ಥವಾಗದೆ ಉಳಿದಿವೆಯೆಂದು ಹೇಳಿದ್ದೀರಿ. ಇವುಗಳಿಗೆಲ್ಲಾ ಮ್ಯುಟೇಷನ್ ಫೀಸನ್ನು ಕಟ್ಟಿಸಿಕೊಂಡಿದ್ದರೂ ಇಷ್ಟೊಂದು ಪೆಂಡಿಂಗ್ ಆಗಿರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆದಷ್ಟು ಮಟ್ಟಿಗೆ ಇತ್ಯರ್ಥವಾಗುತ್ತಿವೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು —ಬೇಗ ಇತ್ಯರ್ಥಪಡಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ಸಂಬಂಧಪಟ್ಟ ಆಫೀಸರಿದ್ದಾರೆ. ಅವರು ವಿಚಾರಣೆ ಮಾಡಿ ಬೇಗ ಇತ್ಯರ್ಥ ಮಾಡುತ್ತಾರೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಮ್ಯುಟೇಷನ್ ಫೀಸು ಕೊಟ್ಟು 5-6 ವರ್ಷಗಳಾದರೂ ಇನ್ನೂ ಏನೂ ಕಾರ್ಯಕ್ರಮ ಕೈಕೊಳ್ಳದಿರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಾರ್ಯಕ್ರಮ ತೆಗೆದುಕೊಂಡಿದೆ. ನಿಧಾನವಾಗಿದೆಯೆಂದು ನಿಮ್ಮ ಅಭಿಪ್ರಾಯ. ಬೇಗ ಮಾಡುತ್ತೇವೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಇನ್ನೆಷ್ಟು ದಿವಸದಲ್ಲಿ ಮಾಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಷ್ಟು ದಿವಸಗಳೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಹಾಗಾದರೆ 10 ವರ್ಷವಾಗುತ್ತದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಷ್ಟು ದಿವಸ ಆಗುವುದಿಲ್ಲ. ಇನ್ನು ಮುಂದೆ ಬೇಗ ಆಗುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮ್ಯುಟೇಷನ ಒಂದು ಕೇಸಿಗೆ ಒಂದು ದಿವಸ ವೆಂದಿಟ್ಟುಕೊಂಡು ಪ್ರತಿ ತಿಂಗಳಿನಲ್ಲೂ ಹಿಯರಿಂಗ್ ಇಟ್ಟುಕೊಂಡು ಬೇಗ ಫೈಸಲು ಮಾಡುವುದಕ್ಕಾಗುತ್ತದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಲ್ಲಿ ಕೆಲವು ಅಧಿಕಾರಿಗಳು ಇನ್ನೂ ಹೊಸಬರಾಗಿರುವುದರಿಂದ ಹೀಗೆ ತಡವಾಗುತ್ತಿದೆ. ಈಗ ಕೆಲಸ ತೃಪ್ತಿಕರವಾಗಿದೆಯೆಂದು ನಾನೂ ಹೇಳುವುದಿಲ್ಲ. ಆದಷ್ಟು ಬೇಗನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ರೆವಿನ್ಯೂ ಇನ್‌ಸ್ಪೆಕ್ಟರು ಕಳುಹಿಸಿ ಕೊಡುವುದರಲ್ಲಿ ಸುಸ್ತಿಯಾಗುತ್ತಿದೆಯೇ ಅಥವಾ ಅಮಲ್ದಾರರು ಹುಕ್ಕುಂ ಮಾಡುವುದರಲ್ಲಿ ಸುಸ್ತಿಯಾಗುತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡೂ ಕಾರಣಗಳಿಂದ ಎಂದು ಹೇಳಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಆದ್ದರಿಂದ ಪ್ರತಿ ಜಮಾಬಂದಿಯ ಸಂದರ್ಭದಲ್ಲೂ ಎಷ್ಟು ಮ್ಯುಟೇಷನ್ ಕೇಸುಗಳನ್ನು ಇತ್ಯರ್ಥಮಾಡಿದೆಯೆಂಬುದನ್ನು ತನಿಖೆ ಮಾಡಬೇಕೆಂದು ಆರ್ಡರ್ ಕಳುಹಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಳುಹಿಸುತ್ತೇವೆ.

Sri M. GOVINDA REDDY (Chitaldrug District—General).—Are returns of disposal of mutation cases being received from time to time?

The Hon'ble Sri H. SIDDAIYA.—We are calling for quarterly reports.

Sri M. GOVINDA REDDY.—The question of delay in the disposal of the cases is not new and it is there since decades. Is it not?

The Hon'ble Sri H. SIDDAIYA.—Yes.

Sri M. GOVINDA REDDY.—Have not the Government realised that there is therefore inherent defect in this matter and that they must take some steps to revise their attitude?

The Hon'ble Sri H. SIDDAIYA.—That is necessary and in fact the Government have asked the concerned officer

to suggest methods so that disposals would be as quick as possible.

Sri M. GOVINDA REDDY.—Will it not be better to have a separate officer for disposing of mutation cases?

The Hon'ble Sri H. SIDDAIYA.—That will be considered.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ರಿಕಾರ್ಡ್ ಆಫ್ ರೈಟ್ಸ್ ಜಾರಿಯಲ್ಲಿರುವ ಕಡೆಗಳಲ್ಲಿ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಿಂದ, ವಿವರಗಳು ಬಂದಕೂಡಲೆ ಮ್ಯುಟೇಷನ್ನಿನ ಪ್ರತಿಯನ್ನು ಕಳುಹಿಸುತ್ತಾರಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಳುಹಿಸುತ್ತಾರೆ; ಆದರೆ ಇದು ಸ್ವಲ್ಪ ನಿಧಾನವಾಗುತ್ತದೆ. ಇದಕ್ಕೆ ಕಾರಣವೇನೆಂಬದನ್ನು ಹೇಳಿದ್ದೇನೆ. ಆದಷ್ಟು ಬೇಗ ಇದನ್ನು ಸರಿಪಡಿಸುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈಗ ತಡವಾಗುತ್ತಿರುವುದಕ್ಕೆ ಕಾರಣ, ಸರ್ವೇಯರುಗಳು ರೆವಿನ್ಯೂ ಅಧಿಕಾರಿಗಳ ಕೆಳಗೆ ಕೆಲಸಮಾಡುತ್ತಿರುವುದೂ ಒಂದು ಕಾರಣವಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಒಂದು ಕಾರಣವೆಂದು ಒಪ್ಪಿಕೊಳ್ಳಬೇಕು.

ಶ್ರೀ ಬಿ. ಹುಚ್ಚೇಗೌಡರು.—ಆದ್ದರಿಂದ ಅವರನ್ನು ರೆವಿನ್ಯೂ ಅಧಿಕಾರಿಗಳ ಕೈಕೆಳಗಿನಿಂದ ತಪ್ಪಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್‌ಸ್ಪೆಕ್ಷನ್‌ಗೆ ಹೋದ ಸಂದರ್ಭದಲ್ಲಿ ಇದು ನನ್ನ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಆಫೀಸರುಗಳೊಡನೆ ಯೋಚನೆ ಮಾಡಿ ಏನು ಮಾಡಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಟ್ರೈನಿಂಗಿಗೇನಾದರೂ ಕೆಲವರನ್ನು ಕಳುಹಿಸಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವರನ್ನು ಕಳುಹಿಸಿದೆ. ಈ ಟ್ರೈನಿಂಗ್ ಆಗುತ್ತಿದೆ.

ಶ್ರೀ ಬಿ. ಹುಚ್ಚೇಗೌಡರು.—ಇಷ್ಟು ಜನರಿಗೆ ಟ್ರೈನಿಂಗ್ ಕೊಟ್ಟರೆ ಸಾಕಾಗುತ್ತದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಲದು. ಅಂತೂ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ)—ಈ ಮ್ಯುಟೇಷನ್ ಕೇಸುಗಳನ್ನು ಇಷ್ಟೇ ದಿವಸದಲ್ಲಿ ಫೈಸಲುಮಾಡಬೇಕೆಂದು ಕಾಲ ನಿಗದಿಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಿಗದಿಮಾಡಿಲ್ಲ. ಮೂರುತಿಂಗಳುಗಳೊಳಗೆ ಮುಗಿಸಬೇಕೆಂದು ಹೇಳಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹಾಗೆ ಮಾಡದಿರುವುದರಿಂದ ಈ ರೀತಿ ನಿಧಾನಕ್ಕೆ ಕಾರಣವಾಗಿದೆಯೆಂಬುದನ್ನು ಒಪ್ಪುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದೊಂದೇ ಕಾರಣವಲ್ಲ. ಅನೇಕ ಕಾರಣಗಳಿಂದ ನಿಧಾನ ಆಗುತ್ತಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹೀಗೆ ಒಂದು ಕಾಲಾವಧಿ ಗೊತ್ತುಮಾಡುವುದು ಒಳ್ಳೆಯದಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬೇಗ ಬೇಗ ಮಾಡುವ ವಿಧಾನವನ್ನು ಕಂಡುಹಿಡಿದರೆ ಹೀಗೆ ಕಾಲಾವಧಿ ನಿಗದಿಮಾಡುವುದು ಅನಾವಶ್ಯಕ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಬೇಗ ಮಾಡುವ ವಿಧಾನವನ್ನು ಕಂಡುಹಿಡಿಯಬೇಕಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಯೋಚನೆ ಮಾಡುತ್ತೇವೆ.

Mr. SPEAKER.—Question No. 57. Sri B. Hutche Gowda.

Cases pending with the Anti-Corruption and Efficiency Audit Officer.

*ಪ್ರಶ್ನೆ 57.—ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಡಿಸ್ಟ್ರಿಕ್ಟು ಸಾರ್ವತ್ರಿಕ ಚುನಾವಣೆ ಸ್ಥಾನ).—
ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) (i) "ಆಂಟಿ-ಕರಪ್‌ಷನ್ ಮತ್ತು ಎಫಿಷಿಯನ್ಸಿ ಆಡಿಟ್" ಆಫೀಸರಲ್ಲಿ ಇತ್ಯರ್ಥವಾಗಬೇಕಾಗಿರುವ ಕಟ್ಟುಗಳು ('ಫೈಲುಗಳು') ಎಷ್ಟು ಉಳಿದಿವೆ ;

(ii) ಆ ಪೈಕಿ ಎಷ್ಟು ಕಟ್ಟುಗಳು ಸಂಬಂಧಪಟ್ಟ ಸಚಿವರ ಪರ್ಯಾಲೋಚನೆಗೆ ಒಪ್ಪಿಸಲ್ಪಟ್ಟಿವೆ;

(iii) ಸಚಿವ ಸಂಪುಟದ (ಎಂದರೆ ಕ್ಯಾಬಿನೆಟ್ಟಿನ) ಪರ್ಯಾಲೋಚನೆಗೆ ಎಷ್ಟು ಕಟ್ಟುಗಳು ಒಪ್ಪಿಸಲ್ಪಟ್ಟಿವೆ ;

(b) ಈ ಕಟ್ಟುಗಳ ಸಂಬಂಧದಲ್ಲಿ ದೂರುಗಳು ಬಂದಿದ್ದುದು ಯಾವ ಯಾವ ತಾರೀಖುಗಳಲ್ಲಿ ಮತ್ತು ಮೇಲಿನ (a) (i) ನೆಯ ಬಾಬಿನ ಸಂಬಂಧದಲ್ಲಿ ಪರಿಶೀಲನೆಯು ಯಾವ ಯಾವ ತಾರೀಖುಗಳಲ್ಲಿ ಪೂರ್ತಿಗೊಂಡಿರುತ್ತದೆ ;

(c) ಅಂಥ ಕಟ್ಟುಗಳು ಯಾವ ಯಾವ ತಾರೀಖಿನಲ್ಲಿ ಬಂದಿವ ಮತ್ತು ಮೇಲಿನ (a) (ii) ಮತ್ತು (iii) ನೆಯ ಬಾಬುಗಳ ಸಂಬಂಧದಲ್ಲಿ ಯಾವ ತಾರೀಖಿನ ದಿನ ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆ ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸು ಮತ್ತು ಕೈಗಾರಿಕಾ ಸಚಿವರು).—

(a) (i) ಪರಿಶೀಲನೆಯು ನಡೆದ ತರುವಾಯ ಆಂಟಿ-ಕರಪ್‌ಷನ್ ಮತ್ತು ಎಫಿಷಿಯನ್ಸಿ ಆಡಿಟ್ ಆಫೀಸರವರ, (ii) ಸಂಬಂಧಪಟ್ಟ ಸಚಿವರ ಮತ್ತು iii) ಸಚಿವ ಸಂಪುಟದ (ಎಂದರೆ ಕ್ಯಾಬಿನೆಟ್ಟಿನ) ಪರ್ಯಾಲೋಚನೆಯಲ್ಲಿದ್ದು ಇನ್ನೂ ವ್ಯವಸ್ಥೆಯಾಗಿಲ್ಲದ ಸಂದರ್ಭಗಳ ಸಂಖ್ಯೆಗಳು ಈ ಕೆಳಗೆ ಕಂಡಂತೆ ಇರುತ್ತವೆ:

(i) ಐವತ್ತೊಂದು.

(ii) ಯಾವುದೂ ಉಳಿದಿಲ್ಲ.

(iii) ಎರಡು.

(b) ವಿವರಗಳನ್ನು ಇದರಡಿ ಮುದ್ರಿತವಾಗಿರುವ ಪರಿಶಿಷ್ಟದಲ್ಲಿ ಕೊಡಲಾಗಿದೆ. (ಪರಿಶಿಷ್ಟವನ್ನು ದಯೆಯಿಟ್ಟು ನೋಡಿ).

(c) 4-12-1950ನೆಯ ತಾರೀಖು ಮತ್ತು 18-1-1951ನೆಯ ತಾರೀಖು.

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು).—

	ಮೊಕದ್ದಮೆಯ ನಂಬರು	ತಲಪಿದ ತಾರೀಖು	ಪ್ರಾರಂಭದ ವಿಚಾರಣೆಯು ಪೂರ್ತಿಯಾದ ತಾರೀಖು
1.	ಎ.ಸಿ. 29/47–49	21–2–1948	30–1–1950
2.	,, 75 ,,	23–1–1948	19–1–1951
3.	,, 97/48–49	3–11–1948	31–10–1951
4.	,, 106 ,,	22–10–1948	30–6–1950
5.	,, 123 ,,	5–12–1948	29–10–1950
6.	,, 147 ,,	16–12–1948	29–6–1950
7.	,, 371 ,,	27–4–1949	9–3–1951
8.	,, 400 ,,	18–6–1949	14–3–1951
9.	,, 12/49–50	12–7–1949	31–12–1949
10.	,, 173 ,,	5–10–1949	17–5–1950
11.	,, 191 ,,	7–10–1949	13–9–1950
12.	,, 207 ,,	26–10–1949	22–6–1950
13.	,, 214 ,,	26–10–1949	30–6–1950
14.	,, 228 ,,	28–10–1949	25–9–1950
15.	,, 326 ,,	18–5–1950	30–6–1950
16.	,, 365 ,,	18–5–1950	30–9–1950
17.	,, 370 ,,	18–5–1 50	22–2–1951
18.	,, 389 ,,	16–5–1950	16–1–1951
19.	,, 421 ,,	18–5–1950	25–11–1950
20.	,, 426 ,,	1–3–1950	30–9–1950
21.	,, 439 ,,	5–1–1950	12–2–1951
22.	,, 448 ,,	ಡಿಟ್ಟೋ	29–12–1950
23.	,, 491 ,,	ಡಿಟ್ಟೋ	17–5–1950
24.	,, 538 ,,	12–12–1949	14–10–1950
25.	,, 565 ,,	5–11–1949	17–2–1951
26.	,, 655 ,,	17–12–1949	8–8–1950
27.	,, 658 ,,	30–12–1949	16–10–1950
28.	,, 662 ,,	6–1–1950	24–5–1950
29.	,, 693 ,,	25–1–1950	13–10–1950
30.	,, 766 ,,	14–2–1950	30–11–1950
31.	,, 799 ,,	15–3–1950	9–2–1950
32.	,, 10/50–51	28–3–1950	11–8–1950
33.	,, 39 ,,	2–5–1950	30–6–1950
34.	,, 40 ,,	24–5–1950	28–11–1951
35.	,, 67 ,,	4–5–1950	13–2–1951
36.	,, 75 ,,	ಡಿಟ್ಟೋ	18–8–1950
37.	,, 93 ,,	19–4–1950	10–8–1950
38.	,, 137 ,,	25–5–1950	21–8–1950
39.	,, 143 ,,	21–6–1950	25–9–1950
40.	,, 144 ,,	22–7–1950	19–2–1951
41.	,, 214 ,,	9–6–1950	7–10–1950
42.	,, 231 ,,	10–7–1950	11–1–1951
43.	,, 265 ,,	18–8–1950	13–2–1951
44.	,, 372 ,,	22–9–1950	21–10–1950
45.	,, 374 ,,	16–10–1950	9–3–1951
46.	,, 375 ,,	ಡಿಟ್ಟೋ	ಡಿಟ್ಟೋ
47.	,, 413 ,,	21–8–1950	1–11–1950
48.	,, 460 ,,	13–11–1950	9–3–1950
49.	,, 526 ,,	8–12–1950	12–2–1951
50.	,, 652 ,,	13–1–1951	29–1–1951
51.	,, 729 ,,	2–3–1951	9–3–1951

ಶ್ರೀ ಬಿ. ಹುಚ್ಚೇಗೌಡರು.—(b) ಗೆ ಕೊಟ್ಟಿರುವ ಪರಿಶಿಷ್ಟದಲ್ಲಿ ಮೊದಲನೆಯ ಕೇಸಿನ ಸಂದರ್ಭದಲ್ಲಿ ಅದು ತಲಪಿದ ತಾರೀಖಿಗೂ ಪ್ರಾರಂಭದ ವಿಚಾರಣೆಯು ಪೂರ್ತಿಯಾದ ತಾರೀಖಿಗೂ ಎರಡು ವರ್ಷ ಎಂದು ಹೇಳಿದೆ. ಎರಡನೆಯ ಕೇಸಿನಲ್ಲಿ ಮೂರು ವರ್ಷ ಎಂದು ಹೇಳಿದೆ. ಇಷ್ಟು ನಿಧಾನಕ್ಕೆ ಕಾರಣವೇನು? ಇದೇ ದಕ್ಷತೆಯೇ!!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು—.ಅದು ಅಭಿಪ್ರಾಯ.

ಶ್ರೀ ಬಿ. ಹುಚ್ಚೇಗೌಡರು.—ಮೂರು ವರ್ಷಗಳು ಹೀಗೆ ನಿಧಾನವಾಗುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಾಕ್ಷಿಗಳನ್ನು ವಿಚಾರಣೆ ಮಾಡಬೇಕು, ತನಿಖೆ ನಡೆಸಬೇಕು. ಹೀಗೆ ನಾನಾ ಕಾರಣಗಳು ಇದ್ದೇ ಇರುತ್ತವೆ.

Sri B. HUTCHE GOWDA.—What are those reasons?

The Hon'ble Sri H. C. DASAPPA.—One reason is that investigation takes some time. Because we have to collect material.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ನಿಧಾನವಾಗಲು ಕಾರಣವೇನು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಂಥಾ ಕಾರಣದಿಂದಲೇ ನಿಧಾನವಾಗುತ್ತೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಜನರಲ್ ಆಗಿ ದೂರುಗಳು ಬರುತ್ತವೆ. ಅಂಥಾ ಸಾಮಾನ್ಯ ದೂರುಗಳ ವಿಚಾರದಲ್ಲೇನೂ ನಿಧಾನವಾಗುವುದಿಲ್ಲ. ಕೆಲವು ಅರ್ಜಿಗಳಲ್ಲಿ ಸಂಚಾರಣಭತ್ಯ ಇತ್ಯಾದಿಗಳನ್ನು ಅಕ್ರಮವಾಗಿ ಪಡೆದುಕೊಂಡಿದ್ದರೆಂಬುದಾಗಿ ಒಂದು ಫಿರ್ಯಾದು ಬಂದರೆ ಅಂಥಾದ್ದನ್ನು ತಕ್ಷಣ ವಿಚಾರ ಮಾಡಿ ಫೈನಲ್ ಮಾಡಲು ಸಾಧ್ಯವಾಗುವುದಿಲ್ಲ. 5 years' 10 years' records have got to be hunted out. ಆಗ ಒಂದರ ವಿಚಾರಣೆಯಲ್ಲಿ ಮತ್ತೊಂದು ಕೇಸು ಹೊರಪಡುವಂಥ ಸಂದರ್ಭಗಳು ಬರುತ್ತವೆ. ಆದ್ದರಿಂದ ಕೆಲವು ಸಂದರ್ಭಗಳಲ್ಲಿ ನಿಧಾನವಾಗೇ ಆಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ಅನೇಕ ವರ್ಷಗಟ್ಟಲೆ ಕಳೆದು ಹೋದನಂತರ ವಿಚಾರಣೆ ಮಾಡಿದರೆ ಆಗ ನಿಜತ್ವ ಹೊರಪಡಿಸಲು ತೊಂದರೆಯಾಗುವುದಿಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ. ಸತ್ಯಾಂಶವನ್ನು ಇನ್ನೂ ಚೆನ್ನಾಗಿ ಹೊರಪಡಿಸಲು ಅವಕಾಶವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ಉದಾಹರಣೆಗೆ 30-1-50 ರಲ್ಲಿ ದಾಖಲಾದ ಕೇಸಿನ ತೀರ್ಮಾನವನ್ನು 19-1-51 ರ ತನಕಲೂ ಇತ್ಯರ್ಥಪಡಿಸಲಿಲ್ಲವೆಂದು ಹೇಳಿದರೆ ಅದು ತೀರಾ ನಿಧಾನ ಮಾಡಿದ್ದಾರೆಂದು ಅರ್ಥವಾಗುತ್ತಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೆ ನಿಧಾನ ಮಾಡಿದ್ದಾರೆಂದು ಹೇಳುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ತಾವು ಅಂಥಾ ನಿರ್ದಿಷ್ಟವಾದ ಸನ್ನಿವೇಶಗಳಿದ್ದರೆ ತಿಳಿಸಿ. ಆಗ ನೋಡೋಣ. ಯಾವಾಗ್ಯೂ ಹಾಗೆ ನಿಧಾನವಾಗುತ್ತಿಲ್ಲ. ಅನಿವಾರ್ಯವೆಂದು ಕಂಡು ಬಂದಾಗಲೇ ಹಾಗೆ ತಡವಾಗಬಹುದು.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ 50ನೆಯ ಇಸವಿ ಕೇಸುಗಳೆಲ್ಲಾ ಇತ್ಯರ್ಥವಾಗಿವೆಯೇ?

ಅಧ್ಯಕ್ಷರು.—ಆಗಿವೆಯೆಂದು ತಿಳಿಸಿದ್ದಾರಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಫೈನಲ್ ಆರ್ಡರ್ಸ್ ಆಗಿದೆಯೇ ಎಂದು ನಾನು ಕೇಳುತ್ತಿರುವುದು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನು ನೋಡಬೇಕು. ಈಗ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ಫೈನಲ್ ಆರ್ಡರ್ ಆಗುವುದಕ್ಕೂ ನಿಧಾನವಾಗಬೇಕೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೆಲವು ಸಂದರ್ಭಗಳಲ್ಲಿ ನಿಧಾನವಾಗೇ ಆಗುತ್ತದೆಂಬುದನ್ನು ಮೊದಲೇ ಒಪ್ಪಿಕೊಂಡಿದ್ದೇನೆ. ಅದಕ್ಕೆ ಕಾರಣವಿಷ್ಟೆ—ಕೆಲವು ಗೆಜೆಟೆಡ್ ನೌಕರರುಗಳ ವಿಷಯದಲ್ಲಿ ಏನಾಗಿದೆಯೆಂದರೆ—from the date of the constitution of the Public Service Commission, it has got to be referred to the Public Service Commission for opinion.

ಶ್ರೀ ಬಿ. ಹುಚ್ಚೇಗೌಡರು.—ನಾನು ಕೇಳುತ್ತಿರುವ ವಿಚಾರ ಅದಲ್ಲ. ನನ್ನ (ಸಿ) ಪ್ರಶ್ನೆಗೆ ಉತ್ತರವಾಗಿ ಯಾವ ತಾರೀಖಿನಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆಯೆಂದು ಕೇಳಿರುವುದಕ್ಕೆ, ದಾಖಲಾದ ತಾರೀಖನ್ನು ಮಾತ್ರ ಕೊಟ್ಟಿದೆ, ಬಾಕಿ ವಿಚಾರವೇನಾಯಿತು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೊಟ್ಟಿದೆಯಲ್ಲ.

ಶ್ರೀ ಬಿ. ಹುಚ್ಚೇಗೌಡರು.—ತಾವು ತಿಳಿಸಿರುವುದು ಅದಲ್ಲ. ಕಂಪ್ಲೆಂಟ್ ಅರ್ಜಿಗಳನ್ನು ಹಿಡಿದ ತಾರೀಖನ್ನು ಮಾತ್ರ ತಿಳಿಸಿದ್ದೀರಿ. ಫೈಲ್ ಬಗ್ಗೆ ಏನು ಮಾಡಿದ್ದೀರೆಂಬುದನ್ನು ಮತ್ತು ಆ ತಾರೀಖುಗಳ್ಯಾವುವೆಂಬುದನ್ನು ತಿಳಿಸಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—(ಬಿ) ಭಾಗದಲ್ಲಿ ನೋಡಿ ತಿಳಿಸಲಾಗಿದೆ.

ಅಧ್ಯಕ್ಷರು.—In reply to (c) the dates of receipt of such files and action taken thereon with regard to items (a) (ii) and (iii) have been given

ಶ್ರೀ ಬಿ. ಹುಚ್ಚೇಗೌಡರು.—ಇಂಥಾ ಕೇಸುಗಳ ವಿಲೇವಾರಿ ಇಲಾಖಾ ಮೊಖ್ತೇಸರರುಗಳಿಂದ ನಿಧಾನವಾಗುತ್ತದೆಂಬ ಭಾವನೆಯಿಂದ ತಾನೆ ಈ ಲಂಚ ನಿರೋಧ ಸಮಿತಿಯನ್ನು ನೇಮಕಮಾಡಿದ್ದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈ ಲಂಚವೆಂಬುದನ್ನು ಎಲ್ಲಿಯೂ ಇರದಂತೆ ನಿರ್ಮೂಲ ಮಾಡಬೇಕೆಂಬ ಒಂದೇ ಉದ್ದೇಶದಿಂದಲೇ ಇದನ್ನು ಇಟ್ಟಿರುವುದು.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ನಿಧಾನವಾಗುತ್ತಿರುವುದನ್ನು ಇನ್ನು ಮುಂದಕ್ಕಾದರೂ ತಪ್ಪಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಿಧಾನವಾಗುತ್ತದೆಯೆಂಬುದನ್ನು ಒಪ್ಪಿಕೊಳ್ಳುವದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ 3 ವರ್ಷಗಳಾದರೂ ಇತ್ಯರ್ಥವಾಗದಿದ್ದರೆ ನಿಧಾನ ಮಾಡಿದಂತೆ ಆಗಲಿಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಕಾರಣಗಳನ್ನು ಆಗಲೇ ತಿಳಿಸಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಹೀಗೆ ಸಂಭವಿಸತಕ್ಕ ಕೇಸುಗಳ ಪೈಕಿ ಈ ಆಂಟಿ-ಕರಪ್ಷನ್ ಅಧಿಕಾರಿಗಳೇ ವಿಚಾರಣೆ ಮಾಡಿ ಪೂರ್ಣವಾಗಿ ತೀರ್ಮಾನ ಮಾಡಿ ಬಿಡುತ್ತಾರೋ ಅಥವಾ ಅವುಗಳ ವಿಚಾರಣೆ ನಡೆಸಿ, ಮುಂದೆ ಅವುಗಳ ಬಗ್ಗೆ ತಮ್ಮ ಶಿಫಾರ್ಸಿನೊಂದಿಗೆ ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸುತ್ತಾರೋ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಗೆಜೆಟೆಡ್ ಅಧಿಕಾರಿಗಳ ಬಗ್ಗೆ ಕ್ಯಾಬಿನೆಟ್ಟಿಗೆ ಕಳುಹಿಸಿಕೊಡತ್ತಾರೆ. ನಾನ್ ಗೆಜೆಟೆಡ್ ಅಧಿಕಾರಿಗಳ ವಿಷಯದಲ್ಲಿ ಸಂಬಂಧಪಟ್ಟ ಆಯಾ ಮಂತ್ರಿಗಳೇ ತೀರ್ಮಾನ ಮಾಡುತ್ತಾರೆ. ಆ ಬಗ್ಗೆ ಅವರು ಮಾನ್ಯ ಮುಖ್ಯ ಮಂತ್ರಿಗಳ ಅಭಿಪ್ರಾಯವನ್ನೂ ಪಡೆದು ಮಾಡಬೇಕಾಗುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಸಂಬಂಧದಲ್ಲಿ ಅಧಿಕಾರಿಗಳನ್ನು ಸಸ್ಪೆಂಡ್ ಮಾಡತಕ್ಕವರು ಈ ಲಂಚನಿರೋಧ ಸಮಿತಿ ಅಧ್ಯಕ್ಷರೋ ಅಥವಾ ಸಂಬಂಧಪಟ್ಟ ಮಂತ್ರಿಗಳೋ?

The Hon'ble Sri H. C. DASAPPA.—Even suspension goes to the Cabinet some times. Probably it is open to the Minister also to do it.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಈ ಆಂಟಿ-ಕರಪ್ಷನ್ ಅಧಿಕಾರಿಗಳಿಗೇನು ಅಧಿಕಾರ ಕೊಟ್ಟಿದ್ದೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಕಂಪ್ಲೈಂಟ್ ದಾಖಲಾದ ಕೂಡಲೇ ಅವರನ್ನು ಸಸ್ಪೆಂಡಿನಲ್ಲಿ ಇಟ್ಟು ವರ್ಷಾನುಗಟ್ಟಲೆ ಅವರ ಕೇಸನ್ನು ಇತ್ಯರ್ಥ ಮಾಡದೆ ಇರತಕ್ಕದ್ದು ತುಂಬಾ ಅನ್ಯಾಯವಾಗುವುದಿಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕಾರಣವಿಲ್ಲದೆ ವಿನಾ ಕಾರಣಕ್ಕಾಗಿ ಹಾಗೆ ಮಾಡಿದ್ದರೆ ಅನ್ಯಾಯವಾಗುತ್ತೆ. ಹಾಗೇನೂ ನಿಧಾನವನ್ನು ಸಹ ಈಗ ಮಾಡುತ್ತಿಲ್ಲವಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಸಾವಕಾಶ ಮಾಡದಂತೆ ಜಾಗ್ರತೆಯಾಗಿ ಕೇಸುಗಳನ್ನು ಫೈಸಲ್ ಮಾಡುವಂತೆ ಒಂದು ಆರ್ಡರನ್ನು ಹೊರಡಿಸಲು ಆಲೋಚನೆ ಮಾಡುವಿರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಲ್ಲೆಲ್ಲಿ ಸಸ್ಪೆನ್ಷನ್ ಮಾಡಲಾಗಿದೆಯೋ ಅಲ್ಲೆಲ್ಲಾ ಸಾಧಾರಣವಾಗಿ ಕೇಸುಗಳನ್ನು ಅತಿ ಜಾಗ್ರತೆಯಾಗಿಯೇ ಫೈಸಲ್ ಮಾಡಬೇಕೆಂಬುದಾಗಿದೆ. ಅದೇ ರೀತಿ ಮಾಡುತ್ತಲೂ ಇದ್ದಾರೆ. ಆದರೆ ರಜಾಕೊಟ್ಟಿರುವ ಸಂದರ್ಭಗಳಲ್ಲಿ ಕೊಂಚ ನಿಧಾನವಾಗಿದ್ದರೂ ಆಗಿರಬಹುದು. ಆದರೆ ಜಾಗ್ರತೆಯಾಗಿ ಇತ್ಯರ್ಥ ಮಾಡಬೇಕೆಂಬುದರ ಬಗ್ಗೆ ಸರ್ಕಾರದವರಿಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಅಂಥಾ ಸಸ್ಪೆನ್ಷನ್ ಕೇಸುಗಳನ್ನು ಒಂದು ತಿಂಗಳ ಅವಧಿಯಲ್ಲೇ ಮುಗಿಸುವಂತೆ ಒಂದು ಹುಕ್ಕುಂ ಮಾಡಲಾದೀತೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೆ ಒಂದು ತಿಂಗಳೆಂದು ನಿರ್ದಿಷ್ಟ ಮಾಡಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಆದಷ್ಟು ಜಾಗ್ರತೆ ಮುಗಿಸುವಂತೆ ಏರ್ಪಾಡು ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಗಲಿ.

Sri M. GOVINDA REDDY (Chitaldrug District—General).—Among the cases of which the preliminary enquiry is completed, have any been referred to the High Court for opinion?

The Hon'ble Sri H. C. DASAPPA.—None referred to the High Court as such.

Sri M. GOVINDA REDDY.—Have any of the cases in which enquiry has been instituted, referred to the High Court for their opinion?

The Hon'ble Sri H. C. DASAPPA.—As I have said, no case has been referred to the High Court as such. It may be to a High Court Judge.

Sri M. GOVINDA REDDY.—How many cases were referred to the High Court Judge?

The Hon'ble Sri H. C. DASAPPA.—One, as I remember.

Sri M. GOVINDA REDDY.—Has the opinion of the High Court Judge been obtained in the matter?

The Hon'ble Sri H. C. DASAPPA.—Yes.

Sri M. GOVINDA REDDY.—How long is it since the opinion was obtained?

The Hon'ble Sri H. C. DASAPPA.—I cannot exactly say it. It is some months since opinion has been given.

Sri M. GOVINDA REDDY.—Have the Government agreed to the opinion of that Judge?

Mr. SPEAKER.—That does not arise.

Sri M. GOVINDA REDDY.—With regard to the question of delay has the Director of Anti-Corruption represented to Government about any difficulty in the matter of expediting the enquiries?

The Hon'ble Sri H. C. DASAPPA.—I think the only difficulty he has said is want of adequate staff.

Sri M. GOVINDA REDDY.—What steps have the Government taken to give adequate staff?

The Hon'ble Sri H. C. DASAPPA.—Government are trying their best to reconcile these two demands of the people, the necessity of increasing the efficiency by giving adequate staff on the one hand and effecting reterenchment on the other.

Sri M. GOVINDA REDDY.—Have the Government taken action in all cases in which preliminary enquiry has been completed?

The Hon'ble Sri H. C. DASAPPA.—Yes. In most of the cases action has been taken.

Sri M. GOVINDA REDDY.—Has there been any complaint against the Director of Archæology?

The Hon'ble Sri H. C. DASAPPA.—Yes. There seems to be some complaint.

Sri M. GOVINDA REDDY.—Is the preliminary enquiry completed in that case?

The Hon'ble Sri H. C. DASAPPA.—The preliminary enquiry has recently been concluded.

Sri M. GOVINDA REDDY.—Is it a fact that the officer has been given leave and that leave is being extended from month to month?

The Hon'ble Sri H. C. DASAPPA.—May be.

Sri M. GOVINDA REDDY.—Is not Government work suffering on account of the fact that there is no permanent officer in his place?

The Hon'ble Sri H. C. DASAPPA.—Government work is not suffering. Work is going on.

Sri M. GOVINDA REDDY.—When the preliminary enquiry has been completed, it is not advisable for the Government to take quick action against that officer and appoint a substitute in his place?

The Hon'ble Sri H. C. DASAPPA.—That is a proposition with which Government are in entire agreement.

ಶ್ರೀ ಎಚ್. ಸಿದ್ಧವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಪ್ರಿಲಿಮಿನರಿ enquiry ಸ್ಟೇಜ್ ಆದಮೇಲೆ ಫೈನಲ್ enquiry ಮತ್ತೇನಾದರೂ ಉಂಟೆ?

The Hon'ble Sri H. C. DASAPPA.—After the preliminary enquiry, generally the Mysore Service Regulation contemplates what is known as the departmental enquiry.

Sri H. SIDDAVEERAPPA.—ಪ್ರಿಲಿಮಿನರಿ enquiry ಆದಮೇಲೆ ಡಿಪಾರ್ಟ್‌ಮೆಂಟಲ್ enquiry ಯಾರು ಮಾಡುವುದು?

The Hon'ble Sri H. C. DASAPPA.—It is left to the Government to arrange for it whether by the departmental head or by a judge of the High Court or anything like that. It is left to the Government to appoint the particular person to hold the departmental enquiry.

Sri H. SIDDAVEERAPPA.—So if there is any difference between the preliminary enquiry and the final enquiry, shall I take it that it is the report of the final enquiry that will have to prevail?

The Hon'ble Sri H. C. DASAPPA.—There is no such cut and dry rule. Government will be the final authority to decide as to which to accept. Generally the final enquiry report prevails.

Sri H. SIDDAVEERAPPA.—May I know the object of the final enquiry? Does it mean to say that the Government are not satisfied with the finding of the Anti-Corruption Officer? I want to know what exactly is the scope and object of the final enquiry in the matter?

The Hon'ble Sri H. C. DASAPPA.—In the preliminary enquiry, the party affected, official or officer, does not get all the charges framed against him and will not have an opportunity to cross-examine all the witnesses and of leading his own evidence and so on. In the preliminary enquiry what happens is, the Anti-Corruption Officer conducts the enquiry of his own. In the case of the departmental enquiry, the party affected has a right to crosss-examine witnesses and sometimes be represented by even an advocate if he so chooses. So the two things are altogether different.

Sri H. SIDDAVEERAPPA.—Has the party affected no right to represent before the Anti-Corruption Officer?

The Hon'ble Sri H. C. DASAPPA.—That is left to the Anti-Corruption Officer. It is not a matter of right.

Sri H. SIDDAVEERAPPA.—After the constitution of the Public Service Commission, is it contemplated that every case dealt with by the Anti-Corruption Officer has to be referred to the Public Service Commission?

The Hon'ble Sri H. C. DASAPPA.—The Rules are still in the making. But generally that is a matter with which we may agree, that all important cases may have to be referred to the Public Service Commission.

Sri H. SIDDAVEERAPPA.—Is it all Important cases' or 'all cases'?

The Hon'ble Sri H. C. DASAPPA.—As I said, the Rules are in the offing, We are not exactly sure of the extent,

(THE HON'BLE SRI H. C. DASAPPA)

scope and nature of the class of officers, gazetted and non-gazetted and so on. Supposing it is the case of disciplinary action being taken against a peon. It would be really funny to refer a case of that kind to the Public Service Commission.

Sri H. SIDDAVEERAPPA.—Has the party affected any right to request the Government that his case may be referred to the Public Service Commission?

The Hon'ble Sri H. C. DASAPPA.—Those are, as I said, details and the Rules are yet to be framed.

Sri H. SIDDAVEERAPPA.—May I know whether any cases have been referred to the Public Service Commission after its constitution?

The Hon'ble Sri H. C. DASAPPA.—Some cases have been referred.

Sri H. SIDDAVEERAPPA.—May I know how many cases?

The Hon'ble Sri H. C. DASAPPA.—Just a few.

Sri H. SIDDAVEERAPPA.—May I have the privilege of knowing the names?

The Hon'ble Sri H. C. DASAPPA.—I am sorry, I am not in a position to disclose them now.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—51 ಫೈಲುಗಳು ಪೆಂಡಿಗ್ ಆಗಿವೆಯೆಂದು ಹೇಳಿದ್ದೀರಿ. ಅದರಲ್ಲಿ ಗೆಜೆಟೆಡ್ ರ್‍ಯಾಂಕಿನದೆಷ್ಟು, ನಾನ್ ಗೆಜೆಟೆಡ್ ರ್‍ಯಾಂಕಿನದೆಷ್ಟು?

The Hon'ble Sri H. C. DASAPPA.—Notice. There is no such question. We have not so split it up.

ಶ್ರೀ ಡಿ. ಎಂ. ಸಿದ್ದಯ್ಯನವರು.—ಆಂಟಿ ಕರಪ್ಷನ್ ಆಫೀಸರು ಸಣ್ಣ ಸಣ್ಣ ಕೇಸುಗಳನ್ನು ಮಾತ್ರ ಹಿಡಿಯುತ್ತಿದ್ದಾರೆ, ದೊಡ್ಡ ದೊಡ್ಡ ಕೇಸುಗಳನ್ನು ಹಿಡಿಯುವುದಕ್ಕೆ ಅವರಿಂದಾಗುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ದೊಡ್ಡ ದೊಡ್ಡ ಕೇಸುಗಳನ್ನು ಹಿಡಿಯುವುದಕ್ಕೆ ಆಂಟಿ-ಕರಪ್ಷನ್ ಆಫೀಸರು ಹೆದರುತ್ತಿದ್ದಾರೆಂಬುದು ಗೊತ್ತೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲವೇ ಇಲ್ಲ. ನಿರ್ಭಯವಾಗಿ ಕೆಲಸಮಾಡುತ್ತಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಅವರು ಆ ತರಹ ಕೇಸುಗಳಿದ್ದರೂ ಪ್ರಭಾವಶಾಲಿಗಳ ದೆಸೆಯಿಂದ ಅವುಗಳನ್ನು ಹಿಡಿಯದಿರುವುದೂ, ಪ್ರಭಾವಬೀರಿ ಇತರರು ಅಡ್ಡಿಪಡಿಸುತ್ತಿರುವುದೂ ತಮ್ಮ ಗಮನಕ್ಕೆ ಬಂದಿದೆಯೇ?

The Hon'ble Sri H. C. DASAPPA.—That is an insinuation which I repudiate very vehemently. There is no such thing as 'prabhavasali' bringing influence on any one, least of all the Anti-Corruption Officer.

ಶ್ರೀ ಡಿ. ಎಂ. ಸಿದ್ದಯ್ಯನವರು.—ಆಂಟಿ. ಕರಪ್ಷನ್ ಆಫೀಸರನ್ನು ನೇಮಕಮಾಡಿದ ಮೇಲೆ ಲಂಚ ರುಷುವತ್ತು ಜಾಸ್ತಿಯಾಗುತ್ತಿದೆಯೋ ಅಥವಾ ಕಡಮೆಯಾಗುತ್ತಿದೆಯೋ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕಡಮೆಯಾಗುತ್ತಿದೆಯೆಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಅವರಿಗೆ ಸಾಕಾದಷ್ಟು ಆಫೀಸ್ ಸಿಬ್ಬಂದಿಯಿಲ್ಲದೆ ಅವರ ಕೆಲಸ ಕಾರ್ಯಕ್ಕೆ ತೊಂದರೆಯಾಗಿರುವುದು ಗೊತ್ತೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಆಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಿರ್ಭಯವಾಗಿ ಕೆಲಸಮಾಡುವುದಕ್ಕೆ ಅವರಿಗೆ ಹೆಚ್ಚು ಅಧಿಕಾರ ವಹಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅಧಿಕಾರದ ವಿಚಾರದಲ್ಲಿ ತೊಂದರೆ ಬಂದಿಲ್ಲ, ಸಿಬ್ಬಂದಿ ವಿಚಾರದಲ್ಲಿ ಮಾತ್ರ ಸ್ವಲ್ಪ ತೊಂದರೆಯಿರುವುದು.

ಶ್ರೀ ಬಿ. ಎನ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಪ್ರಿಲಿಮಿನರಿ ಎನ್‌ಕ್ವೈರಿ ನಡೆಯುವಾಗ ಲೋಕಲ್ ಆಫೀಸರೇ ಅಥವಾ ಸರ್ಕಾರದವರೇ ಸಸ್ಪೆನ್ಷನ್ನಲ್ಲಿಡುವುದು?

The Hon'ble Sri H. C. DASAPPA.—I have already answered that.

Sri B. N. BORANNA GOWDA.—May I know whether a Deputy Commissioner can place a peon in the Taluk Office under suspension and take disciplinary action against him?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಎಂ. ಎಸ್. ಆರ್. ನಲ್ಲಿ ವಿಶದವಾಗಿದೆ, ಯಾವ್ಯಾವ ಅಧಿಕಾರಿಗೆ ಎಷ್ಟೆಷ್ಟು ಅಧಿಕಾರವಿದೆಯೋ ಅದರ ಪ್ರಕಾರ ಚಲಾಯಿಸುತ್ತಾರೆ. ಜಿಲ್ಲಾಧಿಕಾರಿಗಳು, ಇಲಾಖಾ ಮುಖ್ಯಾಧಿಕಾರಿಗಳು ಮತ್ತು ಸರ್ಕಾರದವರು ಇಷ್ಟು ಅಧಿಕಾರ ಪಡೆದಿದ್ದಾರೆಂಬುದು ಅದರಲ್ಲಿ ಹೇಳಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಪ್ರಿಲಿಮಿನರಿ ಎನ್‌ಕ್ವೈರಿ ಮಾಡುವಾಗ $1-1\frac{1}{2}$ ವರ್ಷ ಆಸಾಮಿ ಕೈಗೆ ಸಿಕ್ಕದಿದ್ದರೆ ಏನು ಮಾಡುತ್ತೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬಾಕಿ ಕೇಸುಗಳ ವಿಚಾರದಲ್ಲಿ ಪೋಲೀಸಿನವರು ಏನು ಮಾಡುತ್ತಿದ್ದಾರೋ ಅದೇ ತರಹ ಮಾಡುವುದು.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈ ರೀತಿ ಮಾಡುವುದರಿಂದ ನಿಧಾನಕ್ಕೆ ಕಾರಣವಾಗುವುದಿಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಗಬಹುದು.

ಶ್ರೀ ಬಿ. ಎನ್. ಬೋರಣ್ಣಗೌಡರು.—ಆಪಾದನೆಗೆ ಗುರಿಯಾಗಿರುವ ಸರ್ಕಾರಿ ಅಧಿಕಾರಿಯು ಸ್ಥಳಬಿಟ್ಟು ಹೊರಟುಹೋದರೆ ಸರ್ಕಾರಿ ಕೆಲಸಕ್ಕೆ ತೊಂದರೆಯಾಗುವುದಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆತನ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು. ಅವನನ್ನು ನಿವೃತ್ತಿಮಾಡಿ ಬೇರೆಯವರನ್ನು ನೇಮಿಸಿಕೊಳ್ಳಬಹುದು.

ಶ್ರೀ ಬಿ. ಎನ್. ಬೋರಣ್ಣಗೌಡರು.—ಒಂದು ವರ್ಷವಾದರೂ ಸಿಕ್ಕದಿರುವವರ ಮೇಲೆ ಏನುಕ್ರಮ ಕೈಕೊಂಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾರು ಎಂದು ಹೇಳಿದರೆ ವಿಚಾರಮಾಡಿ ಹೇಳಬಹುದು.

Janab MOHAMED HANIEF (Bangalore—Muslim).—On what principle are the decisions of the Anti-Corruption Officer submitted to the Public Service Commission ?

The Hon'ble Sri H. C. DASAPPA.—As I said, a preliminary enquiry by the Anti-Corruption Officer is more or less uni-lateral. He conducts the investigation just like for instance a police officer, there being no question of framing charges and allowing cross-examination of witnesses and all that. Therefore the rest of the work has got to be done by either departmental enquiry or somebody else. And then the opinion of the Public Service Commission has got to be taken subsequently.

Janab MOHAMED HANIEF.—Is it the work of the Public Service Commision both to appoint and to dismiss officers ?

The Hon'ble Sri H. C. DASAPPA.—They have no powers to dismiss. They can only give their views to the Government.

Janab MOHAMED HANIEF.—Can they recommend dismissal ?

The Hon'ble Sri H. C. DASAPPA.—Yes.

Janab MAHOMED HANIEF.—So the final authority will be the Government?

The Hon'ble Sri H. C. DASAPPA.—Yes.

Criteria in selecting officers of Government to serve as lent officers in State-aided joint-stock concerns.

* ಪ್ರಶ್ನೆ 41.—ಶ್ರೀ ಎಚ್. ಸಿದ್ದನಂಜಪ್ಪನವರು (ಹಾಸನ ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಸರ್ಕಾರಿ ದ್ರವ್ಯಸಹಾಯ ಘೋಷಿತವಾದ ಜಾಯಿಂಟ್ ಸ್ಟಾಕ್ ಕಂಪೆನಿಗಳಲ್ಲಿ ಸೆಕ್ರೆಟೆರಿಗಳ ಹುದ್ದೆಗಳಲ್ಲಿ ಅಥವಾ ಅವಕ್ಕೆ ಸಮಾನವಾದ ಹುದ್ದೆಗಳಲ್ಲಿ ಆಫೀಸರುಗಳಾಗಿ ಕೆಲಸಮಾಡಲ. ಸರ್ಕಾರಿ ಆಫೀಸರುಗಳನ್ನು ಆರಿಸುವುದರಲ್ಲಿ ಯಾವ ನಿಯಮವನ್ನು ಅನುಸರಿಸಲಾಗಿದೆ ;

(b) ವಾಡಿಕೆಯಾಗಿ ಯಾವ ದರ್ಜೆಯಿಂದ ಆ ಆಫೀಸರುಗಳನ್ನು ಚುನಾಯಿಸಲಾಗುತ್ತದೆ ;

(c) ಅಂಥ ಹುದ್ದೆಗಳಿಗೆ ನಾನ್ ಗೆಜೆಟೆಡ್ ದರ್ಜೆಯ ಆಫೀಸರುಗಳನ್ನು ಚುನಾಯಿಸಿರುವ ಸಂದರ್ಭಗಳೇನಾದರೂ ಇವೆಯೇ ; (ಅಂಥ ಸಂದರ್ಭಗಳಿರುವ ಪಕ್ಷದಲ್ಲಿ ಕಳೆದ 15 ವರ್ಷಗಳಿಂದಲೂ ಅಂಥ ಸಂದರ್ಭಗಳಿಗೆ ಸಂಬಂಧಪಟ್ಟ ವಿವರಗಳನ್ನು ಒದಗಿಸಬೇಕೆಂದು ಪ್ರಾರ್ಥನೆ.) ;

(d) ಅಂಥ ಆಫೀಸರು ಪುನಃ ಸರ್ಕಾರಿ ನೌಕರಿಗೆ ವಾಪಸು ಬಂದಾಗ ಅವರ ವಿಚಾರವನ್ನು ಯಾವ ರೀತಿ ಪರಿಗಣಿಸಲಾಗುತ್ತದೆ ;

(e) ಸರ್ಕಾರಿ ನೌಕರಿಯಲ್ಲಿ ಅವರ ಸ್ಥಾನಮಾನಗಳನ್ನು ಗೊತ್ತುಮಾಡುವುದರಲ್ಲಿ ಅವರು ಆ ಕಂಪನಿಯಲ್ಲಿದ್ದುಕೊಂಡು ಕೆಲಸ ನಡೆಯಿಸಿದ ಕಾಲವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆಯೇ ;

(f) ಅಂಥ ಸಂದರ್ಭಗಳಲ್ಲಿ ಸರ್ಕಾರದವರು ಯಾವುದಾದರೂ ನಿರ್ದಿಷ್ಟವಾದ ಕಾರ್ಯನೀತಿಯನ್ನು ನಿಯಮವನ್ನು ಅಥವಾ ಪದ್ಧತಿಯನ್ನು ಅನುಸರಿಸುತ್ತಿದ್ದಾರೆಯೇ, ಹಾಗೆ ಅನುಸರಿಸುತ್ತಿರುವ ಪಕ್ಷದಲ್ಲಿ, ಆ ಕಾರ್ಯನೀತಿ, ನಿಯಮ ಅಥವಾ ಪದ್ಧತಿ ಯಾವುದು ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕೆ ಶಾಖೆಯ ಸಚಿವರು).—

(a) ಅಂಥ ಕೆಲಸಗಳಿಗಾಗಿ ಆ ಆಫೀಸರುಗಳಿಗೆ ಆ ಫಲಾನಾ ಹುದ್ದೆಯಲ್ಲಿದ್ದುಕೊಂಡು ಕೆಲಸಮಾಡುವುದಕ್ಕಿರುವ ಅಭಿರುಚಿ, ಅವರ ಅರ್ಹತೆಗಳು, ಸಂಬಳ ಮುಂತಾದ ಅಂಶಗಳನ್ನು ನೋಡಿಕೊಂಡು ಕಂಪೆನಿಗಳವರು ಅಯಾ ಕೆಲಸಗಳಿಗೆ ತಕ್ಕಂಥ ಆಫೀಸರುಗಳನ್ನು ಆರಿಸುತ್ತಾರೆ.

(b) ಆಯಾ ಕೆಲಸಕ್ಕೆ ಸರಿಹೋಗತಕ್ಕಂಥಾ ಯಾವ ದರ್ಜೆಯಿಂದಲಾದರೂ ಆಫೀಸರುಗಳನ್ನು ಆರಿಸಬಹುದು.

(c) ಇವೆ. ವಿವರಗಳನ್ನೊಳಗೊಂಡ ತಖ್ತೆಯನ್ನು ಇದರಡಿ ಮುದ್ರಿತವಾಗಿರುವ ಪರಿಶಿಷ್ಟದಲ್ಲಿ ಕೊಡಲಾಗಿದೆ. (ಪರಿಶಿಷ್ಟವನ್ನು ದಯೆಯಿಟ್ಟು ನೋಡಿ).

(d) ಅವರು ಕಂಪೆನಿಯ ಹುದ್ದೆಯಲ್ಲಿದ್ದುಕೊಂಡು ಕೆಲಸಮಾಡುವುದಕ್ಕೆ ಕಳುಹಿಸಲ್ಪಡದೆ ಇದ್ದಿದ್ದರೆ ಯಾವ ಹುದ್ದೆಯಲ್ಲಿರುತ್ತಿದ್ದರೋ ಆ ಹುದ್ದೆಗೆ ವಾಪಸು ಬರುವರು.

(e) ಅವರು ಕಂಪೆನಿಯ ಹುದ್ದೆಯಿಂದ ವಾಪಸು ಬಂದಮೇಲೆ ಸರ್ಕಾರಿ ನೌಕರಿಯಲ್ಲಿ ಅವರ ಸ್ಥಾನವನ್ನು ಗೊತ್ತುಮಾಡುವುದರಲ್ಲಿ ಅವರನ್ನು ಕಂಪೆನಿಯಲ್ಲಿ ಕೆಲಸ ಮಾಡಲು ಕಳುಹಿಸಿದ್ದ ವಿಚಾರವನ್ನು ಯಾವ ರೀತಿಯಲ್ಲಿಯೂ ಪ್ರಾಮುಖ್ಯವಾಗಿ ಭಾವಿಸುವುದಿಲ್ಲ.

(f) ಯಾವ ಆಫೀಸರುಗಳನ್ನು ಅಥವಾ ನೌಕರರನ್ನು ತಮ್ಮ ಕಂಪೆನಿಯ ಹುದ್ದೆಗಳಲ್ಲಿದ್ದುಕೊಂಡು ಕೆಲಸಮಾಡುವುದಕ್ಕೆ ಕಳುಹಿಸಿಕೊಡಬೇಕೆಂದು ಕಂಪೆನಿಗಳವರು ಕೇಳುತ್ತಾರೆಯೋ ಅಂಥ ಆಫೀಸರುಗಳನ್ನು ಅಥವಾ ನೌಕರರನ್ನು ಆ ರೀತಿ ಕಳುಹಿಸಿಕೊಡಲು ಸರ್ಕಾರದವರಿಗೆ ಸಾಧ್ಯವಿರುವ ಪಕ್ಷದಲ್ಲಿ ಅವರನ್ನು ಸರ್ಕಾರದವರು ಅ ರೀತಿ ಕಳುಹಿಸಿಕೊಡುತ್ತಾರೆ.

ಸರ್ಕಾರಿ ದ್ರವ್ಯಸಹಾಯ ಘೋಷಿತವಾದ ಜಾಯಿಂಟ್ ಸ್ಟಾಕ್ ಕಂಪೆನಿಗಳಲ್ಲಿ ಸೆಕ್ರೆಟರಿ ಹುದ್ದೆಗಳಲ್ಲಿ ಅಥವ ಅವಕ್ಕೆ ಸಮಾನವಾದ ಹುದ್ದೆಗಳಲ್ಲಿದ್ದುಕೊಂಡು ಕೆಲಸಮಾಡಲು ಕಳೆದ 15 ವರ್ಷಗಳಿಂದಲೂ

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು)

ಕಳುಹಿಸಲ್ಪಟ್ಟಿರುವ ಸರ್ಕಾರದ ನಾನ್–ಗೆಜೆಟೆಡ್ ಆಫೀಸರುಗಳ ಹೆಸರುಗಳನ್ನು ತೋರಿಸುವ ಪಟ್ಟಿ.

I. ಮೈಸೂರು ಟುಬ್ಯಾಕೊ ಕಂಪೆನಿ ಲಿಮಿಟೆಟ್ ಮತ್ತು ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್ ಎಂಬ ಹೊಗೆಸೊಪ್ಪಿನ ಕಂಪೆನಿ ಮತ್ತು ಕಾಫಿಯನ್ನು ಹದ ಮಾಡತಕ್ಕ ಕಾರ್ಖಾನೆ.

(1) ಶ್ರೀ ಟಿ. ವಿ. ಶ್ರೀರಂಗಾಚಾರ್ಯರು;
(2) ,, ವಿ. ಎಸ್. ಅರುಣಾಚಲಂ ಅವರು;
(3) ,, ಸಿ. ಎ. ಮಂಜಯ್ಯನವರು;
(4) ,, ಸಿ. ಆರ್. ಕೃಷ್ಣರಾಯರು;
(5) ,, ಕೆ. ನಟರಾಜನ್‌ರವರು;
(6) ,, ಎಂ. ಕಾಶೀನಾಥ್‌ರವರು;

II. ಮೈಸೂರು ಪೇಪರ್‌ಮಿಲ್ಸ್ ಲಿಮಿಟೆಡ್ ಎಂಬ ಕಾಗದದ ಕಾರ್ಖಾನೆ.

(1) ಶ್ರೀ ಡಿ. ರಾಜಾರಾಯರು;
(2) ,, ಹೆಚ್. ಆರ್. ವೇದಾಂತ ಐಯಂಗಾರ್ಯರು.

III. ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲೆಬಾರೆಟರಿ ಲಿಮಿಟೆಡ್, ಬೆಂಗಳೂರು ಎಂಬ ಪ್ರಯೋಗಶಾಲೆ.

(1) ಶ್ರೀ ಎಸ್. ಗೋಪಾಲಸ್ವಾಮಿಯವರು.

IV. ದಿ ಮೈಸೂರ್ ಲ್ಯಾಕ್ ಅಂಡ್ ಪೇಂಟ್ ವರ್ಕ್ಸ್ ಲಿಮಿಟೆಡ್, ಮೈಸೂರ್ ಎಂಬ ಅರಗಿನ ಮತ್ತು ಬಣ್ಣದ ಕಾರ್ಖಾನೆ.

(1) ಶ್ರೀ ವಿ. ಎಸ್. ಅರುಣಾಚಲಂ ಅವರು.

V. ದಿ ಮೈಸೂರ್ ಕ್ರೋಂ ಟ್ಯಾನಿಂಗ್ ಕಂಪೆನಿ ಲಿಮಿಟೆಡ್ ಎಂಬ ಕ್ರೋಂ ಚರ್ಮವನ್ನು ಹದಮಾಡುವ ಕಂಪೆನಿ.

(1) ಶ್ರೀ ಟಿ. ವಿ. ಶ್ರೀರಂಗಾಚಾರ್ಯರು;
(2) ,, ವಿ. ರಂಗಸ್ವಾಮಿಯವರು.

ಶ್ರೀ ಎಚ್. ಸಿದ್ದನಂಜಪ್ಪನವರು.—ಈ ಆಫೀಸರುಗಳನ್ನು ಸೆಲೆಕ್ಟ್ ಮಾಡುವವರು ಯಾರು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸ್ಟೇಟ್ ಏಡೆಡ್ ಜಾಯಿಂಟ್‌ಸ್ಟಾಕ್ ಕನ್ಸರ್ನ್. ಅವರು ಅವರಿಗೆ ಯಾರು ಬೇಕು ಎಂಬ ಬಗ್ಗೆ ನಮಗೆ ಸಲಹೆ ಕೊಡುತ್ತಾರೆ. ಅವರು ಯಾವ ಗ್ರೇಡಿನವರು ಬೇಕೆಂದು ಕೇಳುತ್ತಾರೋ ಅವರನ್ನು ಕೊಡುತ್ತೇವೆ. ಅದನ್ನು ಅವರಿಗೇ ಬಿಟ್ಟಿದ್ದೇವೆ. ಸರ್ಕಾರದವರೇ ಬೇಕಾದರೂ ಅವರಿಗೆ ಸೂಚನೆ ಕೊಡಬಹುದು, ಸರ್ವೇ ಸಾಧಾರಣವಾಗಿ ಅವರೇ ನಾಲ್ಕಾರು ಹೆಸರು ಕೊಡುತ್ತಾರೆ, ಅದರ ಪೈಕಿ ಸಂಬಂಧಪಟ್ಟವರನ್ನು ಕೇಳಿ ಯಾರನ್ನು spare ಮಾಡಬಹುದೋ ಅವರನ್ನು ಮಾಡುತ್ತೇವೆ.

ಶ್ರೀ ಎಚ್. ಸಿದ್ದನಂಜಪ್ಪನವರು.— ಆಯಾಯಾ ಕನ್ಸರ್ನಿಗೆ ಅಂತಹವರ ಅವಶ್ಯಕತೆ ಇದೆಯೇ, ಇಲ್ಲವೇ ಎಂಬುದನ್ನು ಹೇಳತಕ್ಕವರು ಯಾರು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ಯಾರನ್ನು ಕೋರುತ್ತಾರೆಯೋ ಅಂಥವರನ್ನು ಕೊಡುತ್ತೇವೆ ಅಷ್ಟೆ. ಆಯಾಯ ಕನ್‌ಸರ್ನ್‌ನವರೇ ಅವರ ಯೋಗ್ಯತೆಯ ವಿಚಾರ ತೀರ್ಮಾನ ಮಾಡಬೇಕು.

ಶ್ರೀ ಎಚ್. ಸಿದ್ದನಂಜಪ್ಪನವರು.—ಅಂಥವರನ್ನು ಯಿರವಲಾಗಿ ಕೊಡುವುದಕ್ಕೆ ಆಖೈರು ತೀರ್ಮಾನ ಸರ್ಕಾರದವರದು ತಾನೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸ್ಪೇರ್ ಮಾಡುವುದು, ಬಿಡುವುದು ಸರ್ಕಾರದವರಿಗೆ ಸೇರಿದ್ದು.

ಶ್ರೀ ಎಚ್. ಸಿದ್ದನಂಜಪ್ಪನವರು.— ಗೆಜೆಟೆಡ್ ಅಥವ ನಾನ್‌ಗೆಜೆಟೆಡ್ ಆಫೀಸರುಗಳನ್ನು ಅವರು ತೆಗೆದುಕೊಳ್ಳ ಬಹುದಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ಯಾರನ್ನಾದರೂ ಕೋರಬಹುದು.

ಶ್ರೀ ಎಚ್. ಸಿದ್ದನಂಜಪ್ಪನವರು. —ಆರೀತಿ ಕಳುಹಿಸತಕ್ಕ ಆಫೀಸರುಗಳನ್ನು ಆಯಾಯಾ ಕನ್ಸರ್ನ್‌ನವರು ಇಟ್ಟುಕೊಂಡಿರತಕ್ಕ ಕಾಲದಲ್ಲಿ ಅವರ ಹಿತಕ್ಕೆ ಯಾವ ವಿಧದಲ್ಲೂ ಧಕ್ಕೆ ಬಾರದಂತೆ ನೋಡಿಕೊಳ್ಳತಕ್ಕ ಜವಾಬ್ದಾರಿ ಸರ್ಕಾರದವರು ವಹಿಸಿಕೊಂಡಿರುತ್ತಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾರಿಗೆ ಧಕ್ಕೆ ಬರುವುದು? ಯಾರ ವಿಚಾರದಲ್ಲಿ?

ಶ್ರೀ ಎಚ್. ಸಿದ್ದನಂಜಪ್ಪನವರು.—ಕಂಪೆನಿಗಳಲ್ಲಿ ಆ ಆಫೀಸರುಗಳು ಕೆಲಸಮಾಡುವಾಗ ಅವರ ಹಿತಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುವಹಾಗೆ ಸರ್ಕಾರದವರು ಅವರ ಹಿತರಕ್ಷಣೆ ಮಾಡುತ್ತಾರೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆರೀತಿ ಸ್ಪೆಷಲ್ ಆಗಿ ಹಿತರಕ್ಷಣೆ ಮಾಡಬೇಕಾದ ಅವಶ್ಯಕತೆ ಕಂಡು ಬಂದಿಲ್ಲ. ಅಂಥಾ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಕಾಣುತ್ತದೆ. I do not know what my friend has got at the back of his mind.

ಶ್ರೀ ಎಚ್. ಸಿದ್ದನಂಜಪ್ಪನವರು.—ಹಾಗಾದರೆ ಆ ಕಂಪೆನಿಯವರು ಇವರ ಮೇಲೆ ಮನಸ್ವಿಯಾಗಿ ವರ್ತಿಸಬಹುದೇ?

The Hon'ble Sri H C. DASAPPA.—At any moment we can recall those officers. In fact it is in the interests of the concerns to treat these officers well.

ಶ್ರೀ ಎಚ್. ಸಿದ್ದನಂಜಪ್ಪನವರು.—ಅವರು ವಾಪಸು ಸರ್ಕಾರಿ ನೌಕರಿಗೆ ಬಂದ ಮೇಲೆ, ಗೈರು ಹಾಜರಾಗಿದ್ದ ಕಾಲದಲ್ಲಿ ಪ್ರಮೋಷನ್, ಇನ್‌ಕ್ರಿಮೆಂಟ್ ಏನು ಸಿಕ್ಕುತ್ತಾ ಇತ್ತೋ ಅದೆಲ್ಲವನ್ನೂ ಸೇರಿಸಿ ಕೊಡಲಾಗುತ್ತದೆಯೇ?

ಅಧ್ಯಕ್ಷರು.—ಉತ್ತರ ಕೊಟ್ಟಿದ್ದಾರೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೇನೂ ತೊಂದರೆ ಆಗುವುದಿಲ್ಲ. ಸಾಧಾರಣವಾಗಿ ಯಾವ ಇನ್‌ಕ್ರಿಮೆಂಟು, ಪ್ರಮೋಷನ್ ಬರಬೇಕಾಗಿತ್ತೊ ಅವೆಲ್ಲವೂ ಸಲ್ಲುತ್ತವೆ.

Mr. SPEAKER.—Next question No. 168.

Sri B. HUTCHE GOWDA (Tumkur District—General).—Mr. Speaker, I may be permitted to put question No. 168 on behalf of Janab Mohamed Imam. He has authorized me to do so.

Mr. SPEAKER.–The Hon'ble Member Janab Imam has not asked me to give permission to the Hon'ble Member to put his question.

ಶ್ರೀ ಬಿ. ಹುಚ್ಚೇಗೌಡರು.—ಹೋದಸಲವೇ ಅವಕಾಶ ಕೊಡಬೇಕೆಂದು ಅವರು ಕೇಳಿದ್ದಾರೆ.

Mr. SPEAKER.—Yes, the Hon'ble Member may put the question.

Sharing of the Public Debt by the Government of India.

*ಪ್ರಶ್ನೆ 168.—ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ) [On behalf of ಮುಷೀರ್ ಉಲ್ ಮುಲ್ಕ್ ಜಿ. ಮಹಮದ್ ಇಮಾಂರವರು (ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಮುಸಲ್ಮಾನ ಪಂಗಡದವರ ಚುನಾವಣೆಯ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಮೈಸೂರು ಸರ್ಕಾರಕ್ಕಿರತಕ್ಕ ಒಟ್ಟು ಸಾಲವೆಷ್ಟು;

(b) ಈ ಪೈಕಿ ಇಂಡಿಯಾ ಸರ್ಕಾರಕ್ಕೆ ವರ್ಗಾಯಿಸಲ್ಪಡಬೇಕಾದ ಮೊಬಲಗೆಷ್ಟು,

(c) ಇಂಡಿಯಾ ಸರ್ಕಾರದವರು ನಮ್ಮ ರೈಲ್ವೆಯನ್ನೂ ಮತ್ತು ಇತರ ಆಸ್ತಿಗಳನ್ನೂ ತೆಗೆದುಕೊಂಡುದರ ಫಲವಾಗಿ ಅವರು ನಮ್ಮ ಸಾಲದ ಒಂದು ಭಾಗವನ್ನು ವಹಿಸಿಕೊಳ್ಳಲು ಒಪ್ಪಿರುವರೆ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕೆಯ ಸಚಿವರು).—

(a) 1950ನೆಯ ಇಸವಿ ಏಪ್ರಿಲ್ 1ನೆಯ ತಾರೀಖಿನ ದಿನ ಇದ್ದ ಪ್ರಕಾರ ಮೈಸೂರು ಸಂಸ್ಥಾನದ ಒಟ್ಟು ಸಾಲವು 16·20 ಕೋಟಿ ರೂಪಾಯಿಗಳು. ಇದರಲ್ಲಿ ಸಾಲ ತೀರ್ವೆನಿಧಿಯ ಮೊಬಲಗು 4·13 ಕೋಟಿ ರೂಪಾಯಿಗಳಾಗುತ್ತದೆ. ಅಲ್ಲದೆ ಜೀವವಿಮೆಯ ನಿಧಿಗಳು (ಇನ್ಷ್ಯೂರೆನ್ಸ್ ಫಂಡ್ಸ್), ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು, ಲೋಕಲ್ ಫಂಡ್ ಮೊಬಲಗುಗಳು ಮುಂತಾದ ಮೊತ್ತಗಳು—ಇವೇ ಮುಂತಾದ ಇತರ ದೇಣಿಗಳೂ ಇವೆ, ಆದರೆ ಈ ಮೊಬಲಗುಗಳಿಗೆ ಪ್ರತಿಯಾಗಿ ಸಾಲಗಳು ಮತ್ತು ಮುಂಗಡಗಳು, ಆಹಾರ ಧಾನ್ಯಗಳ ದಾಸ್ತಾನು, ನಗದು ಶಿಲ್ಕು ಮತ್ತು ಸೆಕ್ಯೂರಿಟಿ ಪತ್ರಗಳು—ಇವುಗಳ ರೂಪದ ಚಾಲ್ತಿ ಲೇಣಿಗಳೂ ಇವೆ.

(b) ಇದು ಇನ್ನೂ ತೀರ್ಮಾನವಾಗಿಲ್ಲ.

(c) ಹೌದು. ಒಪ್ಪಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—(ಬಿ) ಪ್ರಶ್ನೆಗೆ ಉತ್ತರವಾಗಿ ಇನ್ನೂ ಇತ್ಯರ್ಥವಾಗಿಲ್ಲ ಎಂದು ಹೇಳಿದ್ದೀರಿ. ಈಗ ನಿಮ್ಮ ಲೆಕ್ಕದ ಪ್ರಕಾರ ಎಷ್ಟು ಆಸ್ತಿ ಅವರಿಗೆ ಸೇರಿದೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ರೈಲ್ವೆ, ಟೆಲಿಫೋನ್, ಮಿಲಿಟೆರಿ ಬಿಲ್ಡಿಂಗ್ಸ್ ಇಂಥಾವೆಲ್ಲಾ ಅವರಿಗೆ ಸೇರಿದೆ.

ಶ್ರೀ ಬಿ. ಹುಚ್ಚೇಗೌಡರು.—ಅದು ಎಷ್ಟಾಗಬಹುದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್. ಸುಮಾರು 7-8 ಕೋಟಿ ರೂಪಾಯಿ ಆಗಬಹುದು.

ಶ್ರೀ ಬಿ. ಹುಚ್ಚೇಗೌಡರು.—ಇಂಡಿಯಾ ಸರ್ಕಾರಕ್ಕೆ ವರ್ಗಾಯಿಸಿ ಆಗಲೇ ಒಂದು ವರ್ಷ ಆಗುತ್ತಾ ಬಂತು, ಇನ್ನೂ ಆದರ ಮೊತ್ತವೆಷ್ಟು ಎಂಬ ಲೆಕ್ಕ ಗೊತ್ತಿಲ್ಲವೇ?

The Hon'ble Sri H. C. DASAPPA.—For these details I want notice.

ಶ್ರೀ ಬಿ. ಹುಚ್ಚೇಗೌಡರು.—ಒಟ್ಟು ಮೊಬಲಗು ಎಷ್ಟು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—6 ಕೋಟಿ ಚಿಲ್ಲರೆ ರೂಪಾಯಿ ಬಡ್ಜೆಟ್‌ನಲ್ಲೇ ತೋರಿಸಿದೆ. ಅದೇ ಮುಖ್ಯವಾದದ್ದು, ಇನ್ನಾವುದೂ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಟೆಲಿಫೋನು, ಅಕಾಶವಾಣಿ ಇವೆಲ್ಲಾ ಇದೆಯಲ್ಲವೇ?

The Hon'ble Sri H. C. DASAPPA.—Telephone, Akashavani, Railways and some Military Buildings.

ಶ್ರೀ ಬಿ. ಹುಚ್ಚೇಗೌಡರು.—ಒಟ್ಟು ಪಬ್ಲಿಕ್ ಡೆಟ್ 16 ಕೋಟಿ 20 ಲಕ್ಷ ರೂಪಾಯಿ ಇದೆ. ಇದರಲ್ಲಿ ಅವರಿಗೆ ಎಷ್ಟು ಹೋಗಬಹುದು, ನಮಗೆ ಎಷ್ಟು ಉಳಿಯಬಹುದು ಎಂಬು ನನ್ನ ಪ್ರಶ್ನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈಗ ಸೆಟ್ಲ್‌ಮೆಂಟ್ ಆಗಬೇಕು. ನೆಗೋಸಿಯೇಷನ್ ಆಗುತ್ತಾ ಇದೆ.

ಶ್ರೀ ಬಿ. ಹುಚ್ಚೇಗೌಡರು.—ಸೆಟ್ಲ್‌ಮೆಂಟ್ ವಿಚಾರ ಅಲ್ಲ. ನಿಮ್ಮ ಲೆಕ್ಕದ ಪ್ರಕಾರ ಎಷ್ಟಾಗುತ್ತದೆ ಎಂದು ತಿಳಿಸುತ್ತೀರಾ, ನಿಮ್ಮ ಆಸ್ತಿ ಎಷ್ಟು ಅಂತ ಲೆಕ್ಕ ಇಲ್ಲವೇ?

The Hon'ble Sri H. C. DASAPPA.—I would just like to have some further notice of those details. I have not got all the details worked up. If the Hon'ble Member wants, I shall supply the information confidentially. This is the position. The matter is still under negotiation and I am afraid I cannot publish those figures, but if the Hon'ble Member wants the details, I have no objection to furnish the same to him confidentially.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಆ ಆಸ್ತಿಯನ್ನು ಬುಕ್ ವ್ಯಾಲ್ಯು ಮೇಲೆ ತೆಗೆದುಕೊಳ್ಳುತ್ತೀರಾ ಅಥವಾ ಫೇಸ್ ವ್ಯಾಲ್ಯು ಮೇಲೆ ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಿಂದೆ ಮಾನ್ಯ ಸಿದ್ದಪ್ಪನವರು ಆ ಪ್ರಶ್ನೆ ಹಾಕಿದ್ದರು. ಅದಕ್ಕೆ ಉತ್ತರ ಕೊಟ್ಟಿದೆ. Financial integration ಪ್ರಕಾರ ಬುಕ್ ವ್ಯಾಲ್ಯು ಮೇಲೆ ತೆಗೆದುಕೊಂಡಿದೆ. That has been decided.

ಶ್ರೀ ಬಿ. ಹುಚ್ಚೇಗೌಡರು.—ಬುಕ್ ವ್ಯಾಲ್ಯು ಮೇಲೆ ತೆಗೆದುಕೊಂಡರೆ ಬಹಳ ತೊಂದರೆಯಾಗುವುದಿಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತೊಂದರೆ ಆಗುತ್ತದೆ ಎಂದು ಹೇಳಬಹುದು. ಅದರ ಅಡ್ವಾಂಟೇಜೂ ಇದೆ, ಡಿಸ್‌-ಅಡ್ವಾಂಟೇಜೂ ಇದೆ.

Sri B. HUTCHE GOWDA.—What are the advantages?

The Hon'ble Sri H. C. DASAPPA.—It is a question of agreement between us.

ಶ್ರೀ ಬಿ. ಹುಚ್ಚೇಗೌಡರು.—ನೀರಾವರಿ ಕೆಲಸಗಳಿಗಾಗಿ ಇನ್‌ವೆಸ್ಟ್ ಮಾಡಿದ್ದರೆ ಒಂದಕ್ಕೆ ಹತ್ತರಷ್ಟು ಅಸೆಟ್ಸು ಉಳಿಯುತ್ತಿರಲಿಲ್ಲವೇ?

The Hon'ble Sri H. C. DASAPPA.—I do not know whether there is any confusion. ಪಬ್ಲಿಕ್ ಡೆಟ್ ಹಂಚಿಕೊಳ್ಳುವುದು in proportion to the productive assets that have gone over to the Centre and the productive assets that have remained over. ಇದೇ ಮೂಲ ತತ್ವ. ಪ್ರೊಡಕ್ಟಿವ್ ಅಸೆಟ್ಸು ಸೆಂಟರ್‌ಗೆ ಹೋಗುವುದು, ಅವರು ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ ಉಳಿದಿರುವಷ್ಟು ಸಾಲ ದಾವಾಷಾ ಪ್ರಕಾರ ಅವರು ತೆಗೆದುಕೊಳ್ಳುತ್ತಾರೆ. ಹಾಗೆ ತೆಗೆದುಕೊಳ್ಳುವಾಗ ಪ್ರೊಡಕ್ಟಿವ್ ಅಸೆಟ್ಸ್‌ನಂತೆ ಬುಕ್ ವ್ಯಾಲ್ಯು ಮಾಡುತ್ತಾರೆ. ತಾವು ಹೇಳುವ ಪ್ರಕಾರ ಮಾರ್ಕೆಟ್ ವ್ಯಾಲ್ಯು ಮಾಡಿದರೆ ರೈಲ್ವೆ, ಆಕಾಶವಾಣಿ. ಟೆಲಿಫೋನ್ ಇವು ಬಿಟ್ಟು ಕೃಷ್ಣರಾಜಸಾಗರ, ಸೋಪ್ ಫ್ಯಾಕ್ಟರಿ, ಸಿಲ್ಕ್ ಫ್ಯಾಕ್ಟರಿ ಇವೆಲ್ಲದರ ಮಾರ್ಕೆಟ್ ವ್ಯಾಲ್ಯು ಹಾಕಿದರೆ ಎಷ್ಟಾಗುತ್ತದೆ? ಈಗ. Our book value for Shivasamudram and Shimsha is nothing. Therefore, it will lead to complications. We have proceeded on the basis that we should take the book value for calculating the ratio.

ಶ್ರೀ ಬಿ. ಹುಚ್ಚೇಗೌಡರು.—ಭದ್ರಾವತಿ ಮತ್ತು ಕೃಷ್ಣರಾಜಸಾಗರಕ್ಕೆ ಇವತ್ತಿನ ಬೆಲೆ ಮಾರ್ಕೆಟ್ ರೇಟ್ ಹಾಕಿದರೆ ಇಂಡಿಯಾ ಸರ್ಕಾರದವರಿಂದ ನಮಗೆ ಬರತಕ್ಕ ಲಾಭವೇನು ?

ಮಾನ್ಯ ಶ್ರೀ ಎಚ್. ಸಿ ದಾಸಪ್ಪನವರು.—ಲಾಭದ ಪ್ರಶ್ನೆ ಅಲ್ಲ. ಪ್ರೊಡಕ್ಟಿವ್ ಅಸೆಟ್ಸ್‌ನ ತತ್ವ ಏನು? ಅದನ್ನು ಡಿಟರ್‌ಮಿನ್ ಮಾಡುವುದು ಹೇಗೆ? ಪಬ್ಲಿಕ್ ಡೆಟ್ ಹಂಚಿಕೊಳ್ಳತಕ್ಕ ತತ್ವ ಏನು? ನಮ್ಮಲ್ಲಿದ್ದ ಪ್ರೊಡಕ್ಟಿವ್ ಅಸೆಟ್ಸನ್ನು ನಾವು ಊರ್ಜಿತ ಮಾಡಿದ್ದೇವೆ, ಹೆಚ್ಚು ಮಾಡಿದ್ದೇವೆ. ಹಾಗೆಯೇ ರೈಲ್ವೆ ಅಭಿವೃದ್ಧಿ ಮಾಡುವುದಕ್ಕೆ ಸಾಲ ತೆಗೆದುಕೊಂಡಿದ್ದೇವೆ. ಈಗ ಹಂಚಿಕೊಳ್ಳಬೇಕು ; ಯಾವ ವಿಧಾನದಲ್ಲಿ ಹಂಚಿಕೊಳ್ಳುವುದು ? ಇಬ್ಬರೂ ಬುಕ್ ವ್ಯಾಲ್ಯು ತೆಗೆದುಕೊಳ್ಳಬೇಕು; ಇಲ್ಲದಿದ್ದರೆ ಇಬ್ಬರೂ ಮಾರ್ಕೆಟ್ ವ್ಯಾಲ್ಯು ತೆಗೆದುಕೊಳ್ಳಬೇಕು.

We have found that the proper thing would be to go by the book value. They have also thought of it and we have also agreed.

ಶ್ರೀ ಬಿ. ಹುಚ್ಚೇಗೌಡರು.—ಎರಡಕ್ಕೂ ಮಾರ್ಕೆಟ್ ವ್ಯಾಲ್ಯು ಹಾಕಿದರೆ ಯಾರಿಗೆ advantage ಎಂದು ಯೋಚನೆ ಮಾಡಿದ್ದೀರಿ ?

The Hon'ble Sri H. C. DASAPPA.—That is hypothetical. We have not agreed to calculate.

ಶ್ರೀ ಬಿ. ಹುಚ್ಚೇಗೌಡರು.—ಈಗ 16 ಕೋಟಿ ರೂಪಾಯಿ ಸಾಲ ಒಪ್ಪಿಕೊಳ್ಳಬೇಕಾಯಿತಲ್ಲವೇ !

The Hon'ble Sri H. C. DASAPPA.—I can tell the Hon'ble Member that that will not help us and it is too late in the day to think of it.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಮೈಸೂರು ಸರ್ಕಾರಕ್ಕೂ ಕೇಂದ್ರ ಸರ್ಕಾರಕ್ಕೂ ಆ ಒಪ್ಪಂದ conclude ಆಗಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಗುವ ಸ್ಥಿತಿಗೆ ಬಂದಿದ್ದೇವೆ.

ಶ್ರೀ ಎಲ್. ಸಿದ್ದಪ್ಪನವರು.—ಇದುವರೆಗೂ ಆಗಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇನ್ನೂ ದಸ್ಕತ್ತು ಬಿದ್ದಿಲ್ಲ.

ಶ್ರೀ ಎಲ್. ಸಿದ್ದಪ್ಪನವರು,—ಹಿಂದೆ 1950ನೆಯ ಬಡ್ಜೆಟ್ ಅಧಿವೇಶನದಲ್ಲಿ ನಾನು ಕೇಳಿದ ಪ್ರಶ್ನೆಗೆ ಈ ಒಪ್ಪಂದವಾಗಿದೆ ಎಂದು ಹೇಳಲಿಲ್ಲವೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೋದ ಬಡ್ಜೆಟ್ ಅಧಿವೇಶನದ ಹೊತ್ತಿಗೇ Financial agreement ಆಗಿದೆ, ಆದರೆ allocation of public debt ಇನ್ನೂ ಆಗಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ಈ ವಿಚಾರದಲ್ಲಿ ಕಳೆದ 1950ನೆಯ ಇಸವಿಯ ಬಡ್ಜೆಟ್ ಅಧಿವೇಶನದಲ್ಲಿ ನಾನು ಒಂದು ನಿರ್ಣಯವನ್ನು ಈ ಸಭೆಯ ಮುಂದೆ ತಂದಿದ್ದೆ. ಅದಕ್ಕೆ ಸರ್ಕಾರದವರು "ಈಗಾಗಲೇ ಒಪ್ಪಂದ ಮುಗಿದಿರುವುದರಿಂದ ಈ ನಿರ್ಣಯವನ್ನು ಚರ್ಚೆ ಮಾಡುವುದು ಸರಿಯಲ್ಲ" ಎಂದು object ಮಾಡಲಿಲ್ಲವೆ ?

The Hon'ble Sri H. C. DASAPPA.—I am sorry that my memory is not so strong and powerful. But even if that has been stated............

Sri L. SIDDAPPA.—It is not a mere statement. A definite stand was taken by Government and the Hon'ble Speaker was also pleased to give a ruling and I was precluded from moving that resolution.

The Hon'ble Sri H. C. DASAPPA.—My Hon'ble friend may wait till I conclude my sentence. Even if that is a fact, as I said, it is a thing flowing consequential on the Federal Financial agreement.

Sri L. SIDDAPPA.—My question is whether the agreement regarding financial integration has been concluded between the Mysore Government and the Government of India?

The Hon'ble Sri H. C. DASAPPA.—Yes.

Sri L. SIDDAPPA.—Then why is it that the Government took objection to the moving of a resolution on that point saying that the final agreement has been concluded and I am therefore precluded from raising the issue by article 278 of the Constitution?

The Hon'ble Sri H. C. DASAPPA.—I am sorry that unless he puts a separato question on that it will be very risky for us to answer a question by sheer memory.

Sri L. SIDDAPPA.—He may refer to the proceedings of the Budget Session.

The Hon'ble Sri H. C. DASAPPA.—The Hon'ble Member may put a separate question.

ಶ್ರೀ . ಎಲ್. ಸಿದ್ದಪ್ಪನವರು.—ಹಾಗಾದರೆ ಆ ಒಪ್ಪಂದ ಮುಗಿದಿದೆಯೆ?

The Hon'ble Sri H. C. DASAPPA.—The Federal Financial agreement has been concluded.

ಶ್ರೀ ಎಲ್. ಸಿದ್ದಪ್ಪನವರು.—ಹಾಗಿದ್ದರೆ allocation of public debts ಮೈಸೂರು ಸರ್ಕಾರಕ್ಕೆ ಇಷ್ಟು, ಕೇಂದ್ರ ಸರ್ಕಾರಕ್ಕೆ ಇಷ್ಟು ಎಂದು ಅದರಲ್ಲಿ ಗೊತ್ತು ಮಾಡಿಲ್ಲವೆ ?

The Hon'ble Sri H. C. DASAPPA.—The principles to be followed are there embodied. But the actual implementation, the working out of the figures, is a thing to flow from the agreement.

ಶ್ರೀ ಎಲ್. ಸಿದ್ದಪ್ಪನವರು. —ಹಾಗಿದ್ದರೆ ನಾವು ಇಷ್ಟು ತೆಗೆದುಕೊಳ್ಳಬೇಕು, ಅವರು ಇಷ್ಟು ತೆಗೆದುಕೊಳ್ಳಬೇಕು ಎಂಬುದೇನೂ ಅದರಲ್ಲಿ ನಿಗದಿಯಾಗಿಲ್ಲವೆ ?

The Hon'ble Sri H. C. DASAPPA.—Not actual figures.

ಶ್ರೀ ಎಲ್. ಸಿದ್ದಪ್ಪನವರು.— ಹಾಗಿದ್ದರೆ ಈ Financial agreement ನ ಸಂಬಂಧದಲ್ಲಿ ಎಷ್ಟು ಒಪ್ಪಂದಗಳಿವೆ ?

The Hon'ble Sri H. C. DASAPPA.—There are a number of things that they have got to take up in composite Departments like Income-tax, etc. Then there is the Audit Department and there are so many things which flow from these things. These are necessary and my hon'ble friend knows all these things. A number of questions is bound to crop up in the course of the implementation of the agreement.

ಶ್ರೀ ಎಲ್. ಸಿದ್ದಪ್ಪನವರು.—ನಾನು ಈ ಸಭೆಯ ಮುಂದೆ 1950 ನೆಯ ಇಸವಿ ಬಡ್ಜೆಟ್ ಅಧಿವೇಶನದಲ್ಲಿ ತಂದಿದ್ದ ನಿರ್ಣಯದಲ್ಲಿ allocation of public debts ವಿಚಾರ ಇರಲಿಲ್ಲವೆ ?

The Hon'ble Sri H. C. DASAPPA.—I have already said that the member should give a separate notice about it. It is not possible to remember all details.

Sri M. GOVINDA REDDY (Chitaldrug District—General).—Was this matter not taken up in Delhi during the recent visit of the Finance Minister?

The Hon'ble Sri H. C. DASAPPA.—I had gone there specifically for this.

Sri L. SIDDAPPA.—I have not finished my questions, Sir, Allocation of public debts ವಿಚಾರ ಇನ್ನೂ ತೀರ್ಮಾನವಾಗಿಲ್ಲವೆಂದು ಹೇಳಿದಿರಿ, ಹಾಗಿದ್ದರೆ ಈಗಲೂ ನಾನು ಆ ನಿರ್ಣಯವನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯಮಾಡಿ ನಾನು ಸೂಚಿಸಿರುವ ರೀತಿಯಲ್ಲಿ public debts allocate ಮಾಡುವುದಕ್ಕೆ ಪ್ರಯತ್ನಪಡುತ್ತೀರಾ ?

The Hon'ble Sri H. C. DASAPPA.—If that point which the Hon'ble Member has in view has not already been pressed, I have no objection to consider it.

Sri L. SIDDAPPA.—When I wanted to move that resolution during the last Budget Session, this is what happened. I shall read out the relevant portion from the Proceedings of the Budget Session, April 1950. It is in page 718 of the proceedings.

"ಶ್ರೀ ಎಲ್. ಸಿದ್ದಪ್ಪನವರು.—ಅಧ್ಯಕ್ಷರೆ, ನನ್ನ ನಿರ್ಣಯ ಈ ರೀತಿ ಇದೆ :

"This Assembly is of opinion that immediate steps should be taken by the Government of Mysore to get a modification of the agreement entered into by them with the Dominion Government in connection with the financial integration of the State with the Central Government so as to allocate the liability for the public debt of the State between the State Government and the Central Government not on the basis of the book value of the Provincial and Federal assets but on the basis of the value of the assets calculated on the returns the respective assets yield in a basic year, *viz.*, 1948-49.

"Sri M. GOVINDA REDDY (Chitaldrug District—General).—I rise to a point of order. In this regard this House has discussed the subject and has approved of the agreement entered into between the Dominion Government and the State Government...........

Mr. SPEAKER.—The Hon'ble Member has not yet moved it.

Sri L. SIDDAPPA.—These are only by way of prefatory remarks.

Sri M. GOVINDA REDDY.—The point of order is that the Hon'ble Member cannot move the resolution before the House.

Sri L. SIDDAPPA.—Long after I moved the resolution which is before the House he has raised this point.

Sri M. GOVINDA REDDY. This resolution contemplates revising an agreement entered into between the Federal Government and the State Government which this House has approved just yesterday. When we approved the Budget we had approved the agreement entered into between the Federal Government and the State Government. Now if this resolution is passed the agreement which we approved just two days back must be revised.

Mr. SPEAKER.—When did the House approve of the agreement?

Sri M. GOVINDA REDDY.—When the Budget was passed we had approved of the agreement that was entered into with regard to financial integration.

Mr. SPEAKER.—The whole agreement was not placed before the House.

Sri M. GOVINDA REDDY.—I agree that the whole agreement was not placed before the House. But impliedly we have approved of the agreement with regard to Financial Integration. Where is the need for revising it now? If we should revise it, will it reflect well on the House?

Sri H. SIDDAVEERAPPA (Chitaldrug District—General).—May I submit another point?

Sri L. SIDDAPPA.—Is he speaking on another point or on the points raised by the Hon'ble Member Sri M. Govinda Reddy?

o o o

Sri L. SIDDAPPA.—Regarding the point of order raised by the Hon'ble Member Sri Govinda Reddy and supported by the Hon'ble Member Sri Siddaveerappa I wish to submit only this..........

Sri A. BHEEMAPPA NAIK.—There are others who wish to speak on the point of order, and he may reply afterwards.

Sri L. SIDDAPPA.—If there are still others who wish to speak on the point of order I have no objection to reply afterwards.

o o o

